START

ROLL NO: 170

MICROFILMED BY

KARNATAKA STATE

ARCHIVES

1983

"ವಿಜಯ"

ದಿನ ಪತ್ರಿಕೆ

1922 ರಿಂದ 1935

ಕಡತದ ಸಂಖ್ಯೆ

ಎಜರ್‌ಎಸ್ 75 ಎಪಿಪಿ82

[illegible] ಬರುವಂಥ ಭಾಷಣಗಳನ್ನು ಮಾಡಿ, ಕಾಂಗ್ರೆ[illegible]ದರಿಂದ [illegible] ದಿಂದಿನ ಭಾಷಣ ಇದ್ದಂಥ ಶಿಕ್ಷೆಗೊಳ್ಪಡಿಸಿದ್ದಾರೆ.

ಶಿಕ್ಷೆಗಳು

೧ ಶ್ರೀನಿವಾಸ ಬಿ. ನಾಕ. ೩ ತಿಂಗಳ ಸಾದಾ
೨ ಬಾಬುರಾವ ಗಣಿ. ,, ೧೦೦ರೂ ದಂಡ
ಮೂರು ಜನರಿಗೆ ,, ೫೦ ರೂ ದಂಡ
ಗುರುನಾಥ ವಾಮನಾಚಾರ್ಯ ಪ[illegible] ಪ್ರಾಯ ಎಂಟು ೧೫ ವರ್ಷ ವಯಸ್ಸಿನ [illegible] ಹುಡುಗನಿಗೆ ೬ ತಿಂಗಳ ಮತ್ತು ೨೦೦ ರೂ ದಂಡ
ಬ[illegible] ಬಾ. ಮುತಾಲೀಕ. (ಮುಕ್ಕೇರಿ) ೬ ತಿಂಗಳ ಸಶ್ರಮ ಮತ್ತು ೨೦೦ ದಂಡ
[illegible]ಯಲ್ಲಿ ಶ್ರೀಮತಿ ಸುಬ್ರಹ್ಮಣ್ಯಂ ರವರು ಉಪ್ಪು ಮಾರಿದರು.

ಧಾರವಾಡ–

ದಿನಾಲು ಉಪ್ಪಿನ ಪಟ್ಣಗಳನ್ನು ಬಿಲ್ಲಿಗೊಂಡರಂತೆ ಮಾರುವದು ನಡೆದಿವೆ. ೪೦೦–೫೦೦ ಪಟ್ಣಗಳು ಸಹಜವಾಗಿ ಮಾರುತ್ತವೆಂದು ಸ್ವಯಂಸೇವಕರು ಹೇಳುತ್ತಾರೆ. ಒಬ್ಬ ವಕೀಲರು ಒಂದು ಪಟ್ಣಕ್ಕೆ ಮೂರು ರೂಪಾಯಿ ಕೊಟ್ಟರೆಂದು ಕೇಳುತ್ತೇವೆ.

ವಿಜಾಪೂರದ ವಯೋವೃದ್ಧ ವಕೀಲರಾದ ರಾ|| ಸಾಹೇಬ ರಘುವೇಂದ್ರರಾವ [illegible] ದೈವಾಧೀನರಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಜಾಹೀರ ನೋಟೀಸು

—(೮)—

ಶಿವಗೇರಿ ಕೋಮು ಹಣಮಂತಗೌಡಾ ಪಾಟೀಲ ಸಾ|| ಹುರಳೀಕೊಪ್ಪಿ ಇತಗೆ–

ಕೆಳಗೆ ಸಹೀ ಮಾಡಿದ ಹಣಮಂತಗೌಡಾ ಬಿನ್ ವೀರನಗೌಡಾ ಪಾಟೀಲ ಸಾ|| ಹುರಳೀಕೊಪ್ಪಿ ತಾಲಿವಸ್ತಿ, ಸವಣೂರ ಈತನು ನಿನಗೆ ಈ ನೋಟೀಸಿನಿಂದ ತಿಳಿಸಿ, ನೋಟೀಸು ಕೊಡುವದೇನಂದರೆ–

ನೀನು ನನ್ನ ಮದಿವೆಯ ಹೆಂಡತಿಯಾಗಬೇಕು. ನಿನ್ನ ನಡಾವಳಿ ಬರೋಬರಿಯಾಗಿ ಕಂಡು ಬರದ್ದರಿಂದ, ನಾನು ನಿನ್ನನ್ನು ಬಿಟ್ಟು ಬಿಟ್ಟಿರುತ್ತೇನೆ ಈ ಮಾತಿಗೆ, ಒಂದು ವರ್ಷವಾಯಿತು ಆಗಿನಿಂದ ನೀ[illegible] ನನ್ನ [illegible] ನನಗ ಅಂದಿನಿಂದ ನೋ[illegible] ಕೊಟ್ಟಿರುತ್ತೇನೆಂದು [illegible] ನಿನ್ನ [illegible] ಒಂದಿರುತ್ತೇನೆ ನೀನು ಈ[illegible] ಗರ್ಭಿಣಿಯಾಗಿದ್ದರೆ ಅಥವಾ ಮುಂದೆ [illegible] ಜನನ ರಜಿಸ್ಟರದಲ್ಲಿ ಜನಕ ತಂದೆ ಎಂದು ಆಗ ಹುಟ್ಟುವ ಕೂಸಿಗೆ ನನ್ನ ಹೆಸರು ಹಚ್ಚಕೂಡದು ಮತ್ತು ಆ ಸಂತತಿಯು ವಾರಸಾ ಹಕ್ಕು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಅದು ಸ್ವರಕ್ಷಾಯದೇ ಶಿರ ಜನನದಲ್ಲಾಗುವದು ಅಂತಾ ಕೊಟ್ಟ ನೋಟೀಸು ಪತ್ರದ ನೋಟೀಸು ತಿಳಿಯುವದು

ತಾ|| ೨೭-೪-೧೯೩೦

H V Patil
Hurlikuppi

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಆಣೆ ಡಬಲ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

[illegible] ಬಿಳಿ, ಅಥವಾ [illegible] ಬಣ್ಣದ ಹಳಿಯ ಕುಸುಮ [illegible] ಈ ಔಷಧದಿಂದ ಬೇಗನೆ [illegible] ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿ [illegible] ಅನುಭವ!! ಬೆಲೆ ಎರಡೇ [illegible] ರೋಗಗಳನ್ನು ಮನಿ ಆರ್ಡರದಿಂದಾ [illegible] ಮುಂಗಡ ಕಳಿಸತಕ್ಕದ್ದು.

ವಿಳಾಸ — [illegible] ದೀಕ್ಷಿತ
C/ [illegible] ಧಾರವಾಡ

[illegible] ಬರೆದು ಕೇಳಿರಿ.

ಧಾರವಾಡದಲ್ಲಿ
ಮೋಟಾರ ನಡಿಸುವದನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಯಾಲು ಜನರ ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಏಪ್ರಿಲ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವವು. ಆದದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು [illegible] ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾ ಜಾಧವ ಬಾಳಾಚಾರ್ಯ ಹುನಗುಂದ

ವರ್ಷ ೧೧) ಧಾರವಾಡ ಶನಿವಾರ ತಾರೀಖು ೨೭ ನೇ ಎಪ್ರಿಲ ೧೯೩೦ (ಸಂಖ್ಯೆ ೯೭

(Incorporated in S. S.) (Registered in England)

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLAN

GENTS WANTED ON L'EEFAL TEEMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆದುಕೊಳ್ಳಿ.

ಧಾರವಾಡ ಅರ್ಬನ ಕೋ ಆಪರೇಟಿವ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೨ ರ ಕೋಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚೆಂದಿಗೆಯು ಎಂಟು ಲಕ್ಷದ ಮೇಲುಂಟು. ಚಾಲ ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್.

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಚೈತ್ರ ವದ್ಯ ೧೩

ಆ ವಿಜಯಂ ಶ್ರೀಶಪಿನು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ೩
ದ " ವಿಜಯಂ " ಶ್ರೀಕರರುಣ ।
ನಾ ವಿಹಿತಂಗಳ ವಿವರಿಸಿನಲಿವುದು ಸಾಜಂ॥೧

ವೌಲಾನಾ ಮಹಮ್ಮದಲ್ಲಿಯವರ
ಆತ್ಮ ಶೋಧನ ಹೇಳಿಸಿಕೊಳ್ಳುವಿಕೆ.

———(೦)———

ನಡು ರಾತ್ರಿಯಲ್ಲಿ ಗಣದ್ದ ಸಿದ್ದೆ ಹತ್ತಿದಾಗ ಸಂಪು ಸಂಚಿನ ಮುಸಲತ್ತು ಮಾಡುತ್ತಿದ್ದರೆಂದು ಆರೋಪ ಹೊತ್ತು, ಎರಡು ವರ್ಷ ತುರುಂಗವಾಸಿಯಾಗಿದ್ದ ಅಲ್ಲೀ ಬಂಧುಗಳು ಈಗ ಬ್ರಿಟಿಶ ಅಧಿಕಾರಿಗಳ ಕೃಪೆಗೆ ಪಾತ್ರರಾಗಿದ್ದಾರೆ. ಇವರು ಈಗ ಮಹಾತ್ಮರನ್ನು ಬೇಕಾದಷ್ಟು ಬೈಯತೊಡಗುವರು. ಆವರು ಹಿಂದೂ ರಾಜ್ಯ ಸ್ಥಾಪನವಾಡಿ, ಮುಸಲಮಾನರನ್ನು ತುಳಿಗೊಳ್ಳುತ್ತಾರೆಂದು ವ್ಯಾಖ್ಯಾನ ಕೊಡುವರು. ಈ ಸತ್ಯಾಗ್ರಹ ಚಳವಳಿಯಲ್ಲಿ ಮುಸಲಮಾನರು ಸೇರಬಾರದೆಂದು ಖಾಸಗಿ ಸಭೆ ಕೂಡಿಸಿ, ವ್ಯಾಖ್ಯಾನ ಕೊಡುವರು. ವೌಲಾನಾ ಸಾಹೇಬರ ಈ ಭೇದನೀತಿಯು ಆಳರಸರಿಗೆ "ರೋಗಿ ಬಯಸಿದ್ದು, ವೈದ್ಯ ಹೇಳಿದ್ದು ಒಂದೇ" ಎಂಬಂತಾಗಿರುತ್ತದೆ. ವೌಲಾನಾಸಾಹೇಬರು ಈ ಪರಿಯಾಗಿ ಕಾಂಗ್ರೆಸವನ್ನು ಹಳಿದ ಬಳಿಕ, ಆಳರಸರು ಇವರನ್ನು ತಮ್ಮ ಕಡೆಯಲ್ಲಿ ಹಾಕಿಕೊಳ್ಳುವದೇನು ಆಶ್ಚರ್ಯ! ಅಂತೇ ಗವರ್ನರಸಾಹೇಬರು ಇವರ ಮೇಲೆ ಪ್ರಸನ್ನರಾಗಿ ಇವರಿಗೆ ದರ್ಶನಲಾಭ ಕೊಟ್ಟರು. ಈ ಸಂಧಿಯಲ್ಲಿ ಇವರು ಬಹುವಾಗಿ ಉಬ್ಬಿ ತಮಗೆ ರಾಜ್ಯದ ಕೀಲಿಕೈ ಸಿಕ್ಕಷ್ಟು ಆನಂದದಿಂದ ವಿರಾಯಿಗೆ ಹೋಗುವಂತೆ ಆತ್ಮಸ್ತುತಿ ಮಾಡಿಕೊಂಡಿದ್ದಾರೆ. ಆದರೆ ಈ ಸ್ತುತಿಯಲ್ಲಿ ಬ್ರಿಟಿಶರ ವಿಷಯಕವಾದ ಅವಿಶ್ವಾಸವನ್ನು ಕಾಣಿಸಿದ್ದಾರೆ. ಅಲ್ಲಿ ತಮ್ಮಂತವರು ಸಿಂಹಾಸನದ ಸ್ವರಾಜ್ಯ ದೊರೆಯದಿದ್ದರೆ. ಬಂದ ಸ್ಥಾನಕ್ಕೆ ಬಂದು, ಕಾಯದೆಭಂಗ ಮಾಡುವರು. ಅದ ಕಟ್ಟಿಕೊಳ್ಳುವಂಥ ದ್ರೋಹಕ್ಕೆ ಇವರ ದೃಷ್ಟಿಯಿಂದ ಹಲವು ಮಾರ್ಗಗಳಿರುವವು. ವೌಲಾನಾಸಾಹೇಬರು ಅದೂರದರ್ಶಿಗಳೇ ಸರಿ. ಈಗ ಬಂದಂಥ ಬಂಗಾರದಂಥ ಹೊತ್ತು ಕಳಕೊಂಡು ತಮ್ಮದೊಂದು ಸ್ವತಂತ್ರ ಸತ್ಯಾಗ್ರಹ ಹೂಡುವದು ಕೇವಲ ಹುಚ್ಚುತನವಾಗುತ್ತದೆ. ೨೩ ಕೋಟಿ ಹಿಂದೂ ಜನರು ತಮ್ಮನ್ನು ಕೂಡಿಕೊಳ್ಳದಿದ್ದರೆ ಏಳು ಕೋಟಿ ಮುಸಲಮಾನರು ಮಾಡುವದೇನು? ಇವರ ನಿಜವಾದ ದೈನ್ಯಾವಸ್ಥೆಯು ಮಳೆಯ ನೀರನ್ನು ಬಿಟ್ಟು ಮಂಜಿನ ನೀರಿಗೆ ಕಯ್ಯೊಡ್ಡುವಂತಾಗಿರುತ್ತದೆ.

———

ಮಹಾತ್ಮರ ಬಂಧುವಾತ್ಸಲ್ಯ—

ವೌಲಾನಾ ಒಂದುಗಳು ಮಹಾತ್ಮರ ಕೂಡ ಪಿತೃವಾತ್ಸಲ್ಯದಿಂದ ನಡಕೊಳ್ಳುತ್ತಿದ್ದರು. ಹಿಂದಿನ ಅಸಹಕಾರದಲ್ಲಿ ಲಾರ್ಡ ರೀಡಿಂಗಸಾಹೇಬರು ಮಹಾತ್ಮರ ಕೂಡ ಒಡಂಬಡಿಕೆಗೆ ಒಂದಾಗ ಮೊದಲು ಅಲ್ಲೀ ಬಂಧುಗಳನ್ನು ಬಂಧಮುಕ್ತ ಮಾಡಿರಿ ಅನಂತರ ಸಂಭಾಷಣೆ ಎಂದು ಉತ್ತರ ಕೊಟ್ಟದ್ದನ್ನು ಇವರು ಮರೆತಿರಲಿಕ್ಕಿಲ್ಲ. ಲಾರ್ಡ ರೀಡಿಂಗಸಾಹೇಬರು ಇವರನ್ನು ಬಿಡದಿದ್ದರೆ ರಾಜಿ ಸಂಧಾನ ಯೋಗ್ಯ. ಈ ವಿಷಯವಾಗಿ ಜನರು ಮಹಾತ್ಮರಿಗೆ ಬಿನ್ನವಿಕೆಗಳನ್ನು ಮಾಡುತ್ತಿದ್ದರೂ ತಮ್ಮಲ್ಲಿ ಇಷ್ಟು ಪ್ರೀತಿ ಮತ್ತು ವಿಶ್ವಾಸವುಳ್ಳಂಥ ಮಹಾತ್ಮರನ್ನು ಈಗ ನಡುನೀರಿನಲ್ಲಿ ಕೈಬಿಟ್ಟಂತೆ ಮಾಡಿ, ಆಳರಸರ ದರ್ಶನೋತ್ಸುಕರಾದ ಇವರು ತಿಳಿಗೇಡಿತನವಾಗುತ್ತದೆಂದು ಯಾರೆಂಬರು ಹೇಳಬಹುದು.

———

ಮಹಾತ್ಮರು ಸ್ವತಃ ಶಿಂದಿಯ ಗಿಡ ಕಡಿದರು.

—(೦)—

ಮಹಾತ್ಮರು ಬೋರೋಲಿ ಎಂಬ ಗ್ರಾಮಕ್ಕೆ ಹೋಗಿ, ಸ್ವತಃ ಕೊಡ್ಲಿಯಿಂದ ಒಂದು ತಾಡಿನ ಗಿಡವನ್ನು ಕಡಿದರು. ಅಲ್ಲಿಯ ಜಮೀನದಾರರು ತಂತಮ್ಮ ಹೊಲಗಳ ಗಿಡಗಳನ್ನು ಬೇಡಿ ಸಹಿತ ಕಡಿದು ಹಾಕಲು ಮಹಾತ್ಮರಿಗೆ ಅನಿರ್ಬಂಧ ಮಾಡಿದ್ದಾರೆ. ಪಿಕ್ಕಲದಾಸನೆಂಬೊರ್ವ ಸತ್ಯಾಗ್ರಹಿಯು ತಾಡಿನ ಗಿಡ ಕಡಿಯುತ್ತಿದ್ದಾಗ, ಮೈಮೇಲೆ ಗಿಡಬಿದ್ದು ಮಡಿದನು. ಆತನ ಮರಣಕ್ಕಾಗಿ ನವಸಾರಿಯವರು ಹರತಾಳ ಮಾಡಿ, ದುಃಖ ಪ್ರದರ್ಶನ ಮಾಡಿದರು. ನಿನ್ನ ಮಗನು ಸತ್ಯಾಗ್ರಹ ಸಂಗ್ರಾಮದಲ್ಲಿ ಸತ್ತು, ನೇರ ಸ್ವರ್ಗ ಹೊಂದಿದ್ದು ನಿನ್ನ ಪುಣ್ಯವೇ ಎಂದು ಮಹಾತ್ಮರು ಆತನ ತಾಯಿಗೆ ಪತ್ರ ಬರೆದು, ಆಕೆಯ ಸಮಾಧಾನ ಮಾಡಿದ್ದಾರೆ.

———

ಸುಳ್ಳು ಸಾಕ್ಷಿ ಹೇಳಿದ್ದಕ್ಕೆ ಪಶ್ಚಾತ್ತಾಪ
ಮತ್ತು ಖಾದಿಯ ಧಾರಣ.

—()(೦)()—

ಬೆಳಗಾವಿಯಲ್ಲಿ ಶ್ರೀ. ದಾತಾರರ ವಿರುದ್ಧ ಒಬ್ಬ ಬೇಡರವನು ಸುಳ್ಳು ಸಾಕ್ಷೀ ಹೇಳಿದನು. ಈ ತನ್ನ ಸಾಕ್ಷಿಯಿಂದ ಶ್ರೀ. ದಾತಾರರು ತುರಂಗಕ್ಕೆ ಹೋದ ಬಗ್ಗೆ ಆತನು ಪಶ್ಚಾತ್ತಾಪಗೊಂಡು, ಮೈ ತುಂಬ ಖಾದೀ ಧಾರಣೆಮಾಡಿ, ಅಲ್ಲಿ ಕೂಡಿದ್ದ ಒಂದು ಕಾಯದೆಭಂಗದ ಸಭೆಗೆ ಬಂದು, ತನ್ನ ತಪ್ಪು ಒಪ್ಪಿ, ಈ ಅಪರಾಧವನ್ನು ದೈವದವರು ಕ್ಷಮಿಸಬೇಕೆಂದು ಕೈಜೋಡಿಸಿ ಬೇಡಿಕೊಂಡನು. ಪೋಲೀಸರಿಗೆ ಇನ್ನಂತರ ಸಾಕ್ಷಿಗಳು ಬೇಕಾಗುತ್ತವೆ. ಆಗ ಅವರ ಬಲಿಯಲ್ಲಿ ಬೀಳದಂತೆ ಸಾಕ್ಷಿದಾರರಾಗತಕ್ಕವರು ಈ ಜೇಡನಿಂದ ಬುದ್ಧಿಗಲಿಯುವರೆಂದು ತಿಳಿಯುತ್ತೇವೆ.

———

ಮಿ. ಹಸನ ಇಮಾಮರು
ಸತ್ಯಾಗ್ರಹಿಯಾದರು

———(೦)———

ಪಾಟಣಾದ ಪ್ರಸಿದ್ಧ ವಕೀಲರಾದ ಮಿ. ಹಸನ ಇಮಾಮರವರು ಪೋಲೀಸರು ನಡೆಸಿದ ಅತ್ಯಾಚಾರಗಳನ್ನು ನೋಡಿ, ಸಹಿಸಲಾರದೆ, ತಾವೂ ಸತ್ಯಾಗ್ರಹದ ದೀಕ್ಷೆ ತಕ್ಕೊಂಡರು. ಅಷ್ಟೇ ಅಲ್ಲದೆ, ತಮ್ಮ ಕುಟುಂಬದವರಾದರೂ ವಿಲಾಯತಿಯ ಬಟ್ಟೆ ಕೊಳ್ಳಬಾರದೆಂದು ಶಪಥ ಮಾಡಿದ್ದಾರೆ. ಇದಕ್ಕೆ ಮನೆಯವರು ಸಂಪೂರ್ಣ ಅನುಮೋದನ ಕೊಟ್ಟಿದ್ದಾರೆ. ಮಿ. ಇಮಾಮಸಾಹೇಬರು ಪಂಡಿತ ಮಾಲವೀಯರವರನ್ನು ತಮ್ಮ ಮನೆಗೆ ಕರೆದುಕೊಂಡು ಬಿಹಾರ ಕೂಡ ಬಿಹಾರ ಪ್ರಾಂತದ ತುಂಬ ವಿಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕುವ ಚಳವಳಿಯನ್ನೆಬ್ಬಿಸುವರು.

———

ವ್ಯಾಂಜೆಸ್ಟರದ ಗೊಂಬೆಯ ದಹನ.

ಲಖನೌದಲ್ಲಿ ಉಪ್ಪಿನ ಸತ್ಯಾಗ್ರಹ, ವಿಲಾಯತಿಯ ಅರಿವೆಯ ಮೇಲೂ ಸಂಕ್ರಾಂತಿ ಬಂದಿದೆ. ಕಾಂಗ್ರೆಸ ಕಮೀಟಿಯವರು ವ್ಯಾಂಜೆಸ್ಟರದ ಅರಿವೆ ಎಂಬ ಹೆಸರಿನದೊಂದು ಗೊಂಬೆ ಮಾಡಿ, ಅದನ್ನು ಊರ ತುಂಬ ಮೆರೆಸಿದರು. ಮೆರವಣಿಗೆಯಲ್ಲಿ ಅನೇಕ ಪರದೇಶಿ ಅರಿವೆ ಟೊಪ್ಪಿಗೆಗಳನ್ನು ಕಲೆ ಹಾಕಿದರು. ಮೆರವಣಿಗೆಯು ಸಭಾಸ್ಥಾನಕ್ಕೆ ಬಂದಬಳಿಕ, ಎಲ್ಲ ಅರಿವೆಗಳನ್ನು ಒಟ್ಟಿ, ಅದರ ಮೇಲೆ ಗೊಂಬೆ ಇಟ್ಟು, ಕಲ್ಲೆಣ್ಣೆ ಸುರುವಿ, ಬೆಂಕಿ ಹಚ್ಚಿ, ಸಾಂಗ ದಹನ ಮಾಡಿದರು.

———

ಉಪ್ಪಿನ ಕಾಯಿದೆಭಂಗ ಗದ್ದಲ.

—()—(೦)—()—

ವಿಲಾಯತಿಯ ಅರಿವೆಯ ಪಿಕೇಟಿಂಗ ಮುಂದಾಯಿತು.

—:(೦):—

ಕರಾಚಿಯಲ್ಲಿ ಸೋಟಿಯ ಕುಂಬ ಎಲ್ಲಿ ಬೇಕಾದಲ್ಲಿ ನಾಲ್ಕಾಣೆಗೆ ಒಂದು ಮಣ ಮತ್ತು ಬಿಲ್ಲಿಗೆ ಶೇರಿನಂತೆ ಉಪ್ಪು ಮಾರುತ್ತಿರುವದರಿಂದ, ಅಲ್ಲಿ ಉಪ್ಪಿನ ಕಾಯಿದೆಭಂಗ ಮಾಡುವ ಅವಶ್ಯಕತೆಯು ಉಳಿಯಲಿಲ್ಲ. ಆದ್ದರಿಂದ ನಾಗರಿಕರು ಉಪ್ಪಿನ ಉಸಾಬರಿ ಬಿಟ್ಟು, ವಿಲಾಯತಿಯ ಬಟ್ಟೆಯ ಅಂಗಡಿಗಳ ಮುಂದೆ ಪಿಕೇಟಿಂಗವನ್ನು ಪ್ರಾರಂಭಿಸತಕ್ಕವರಿದ್ದಾರೆ.

ಕಡೆಗೆ ಮಹಾದೇವ ದೇಸಾಯರನ್ನು ಹಿಡಿದರು.

—(೦)—

ಹಿಡಿದರು; ಹಿಡಿಯಲಿಲ್ಲವೆನ್ನುತ್ತಾ, ಸರಕಾರದವರು ಕೊನೆಯಲ್ಲಿ ಮಹಾದೇವ ದೇಸಾಯರನ್ನು ಹಿಡಿದರು. ಇವರು ಮಹಾತ್ಮರ ಮುಖ್ಯ ಸೇನಾಪತಿಯೆಂತಿರುವರು. ಕಾಯಿದೆಭಂಗದ ಉಪ್ಪನ್ನು ತಕ್ಕೊಂಡು ಅಹಮದಾಬಾದಿನ ಬಂಗಲೆಯಲ್ಲಿ ಒಂದಾಗ ಪೋಲೀಸರು ಇವರನ್ನು ಹಿಡಿದರು. ಈ ದಬ್ಬಾಳಿಕೆಯ ದೆಸೆಯಿಂದ ಅಹಮದಾಬಾದ ಪಟ್ಟಣವು ಇಂದು ಹರತಾಳ ಮಾಡುವದು.

ಪೇಶಾವರದ ವಿಶೇಷ ಸುದ್ದಿಗಳು.

—)(೦)(೦)(—

ಪೇಶಾವರದಲ್ಲಿ ಪೋಲೀಸರು ತಂದ ಯುದ್ಧದ ಬಂಡಿಗಳನ್ನು ಜನರ ಮೇಲೆ ನಿರ್ದಯದಿಂದ ಬಿಟ್ಟು ಜನರನ್ನು ಹಿಂಸಿಸುತ್ತಿದ್ದರಿಂದ, ಜನರು ರೇಗಿ ಬಂಡಿಗಳಿಗೆ ಕಲ್ಲೆಣ್ಣೆ ಸುರುವಿ, ಅವನ್ನು ಸುಟ್ಟರು. ಮತ್ತು ಗುಂಡು ಹಾರಲಿಕ್ಕೆ ಕಾರಣವಾಯಿತು.

ಸರಕಾರೀ ಕೆಲಸದಲ್ಲಿದ್ದವರ ಹೊರತು ಯಾವ ಯುರೋಪಿಯನ್ನನೂ ಪಟ್ಟಣದಲ್ಲಿ ಬರಕೂಡದೆಂದು ಡಂಗುರ ಸಾರಿದ್ದಾರೆ.

ಕರಾಚಿಯಲ್ಲಿಯೂ ಹತ್ತಿಯ ಮೆರವಣಿಗೆ.

——(೦)——

ಕರಾಚಿಯಲ್ಲಿಯೂ ಮುಂಬಯಿಯಂತೆ ಹತ್ತಿಗಳ ಮೆರವಣಿಗೆ ತೆಗೆದರು. ಇವುಗಳಿಗೆ ಸ್ವದೇಶೀ ಅರಿವೆಯನ್ನು ಹೊದಿಸಿ, ಊರತುಂಬ ಸ್ವದೇಶೀ ಅರಿವೆ ಕೊಡಿ ಹಾಕಿ, ಅವುಗಳ ದಸ್ತಿಯನ್ನು ಬಿಟ್ಟು ಸತ್ಯಾಗ್ರಹದ ಜುಲೂಸದಲ್ಲಿ ಅವಕ್ಕೆ ಊರೀ ಹಚ್ಚಿದರು.

ರಾಜ್ಯಕರ್ತರೇ ನಮ್ಮನ್ನು ಹಿಡಿಯಲಿಕ್ಕೆ ಬನ್ನಿರಿ.

—(೦)—

ನಾವು ಠಾಣೆ ಜಿಲ್ಹೆಗೆ ಸೇರಿದ ಅರನಾರಾದಲ್ಲಿ ಶುಕ್ರವಾರ ದಿವಸ ಕಾಯಿದೆಭಂಗ ಮಾಡಿ, ಉಪ್ಪು ಮಾಡುತ್ತೇವೆ. ಮಾರುತ್ತೇವೆ. ಆಗ ನಮ್ಮನ್ನು ಹಿಡಿಯಲಿಕ್ಕೆ ಅಗತ್ಯವಾಗಿ ಬನ್ನಿರೆಂದು ಪುಣೆಯ ಮರಾಠಾ ಪತ್ರದ ಸಂಪಾದಕರಾದ ಶ್ರೀ. ಡಿ. ವ್ಹಿ. ಗೋಖಲೆಯವರು ಮುಂದಾಗಿ ಸರಕಾರೀ ಉದ್ಯೋಗಸ್ಥರಿಗೆ ಆಮಂತ್ರಣ ಹೇಳಿಕಳಿಸಿದ್ದಾರೆ.

ಇದೇ ಅರನಾರಾದಲ್ಲಿ ಪೋಲೀಸರಿಗೆ ಬಂದ ಸಂಕಟ.

—(೦)—

ಅರನಾಳವು ಠಾಣಾ ಜಿಲ್ಹೆಯ ಅಂಕೋಲೆಯಾಗಿದೆ. ಅಲ್ಲಿ ಒಂದೇಸವನೇ [illegible] ಗಳನ್ನು ಹಿಡಿಯಲು ಪೋಲೀಸರು [illegible] ಊರೊಳಗೆ [illegible] ನ ಕೇಡದಲ್ಲಿ [illegible] ಸಾಹೇಬ [illegible] ಕರಂತೆ ಮಲಗಲಿಕ್ಕೆ ಮಂಚ ಬೇಡಿದರು. ಒಬ್ಬನೂ ಮಂಚ ಕೊಡಲಿಲ್ಲ. ಅವರೆಲ್ಲರು [illegible] ಸಿಕೊಂಡು ಆಕಾಶ ಹೊತ್ತುಕೊಂಡು ದಿನ ಕಳೆಯುತ್ತಾರೆ.

ಸ್ತ್ರೀಯರು ಪೋಲೀಸರ ಹುಕುಮು ಮುರಿದರು.

—(೦)—

ಕಲಕತ್ತೆಯಲ್ಲಿ ಸಾರ್ವಜನಿಕ ಸಭೆ ಮಾಡಬಾರದೆಂದು ಪೋಲೀಸರು ಸಭಾಬಂದಿ ಕಾಯಿದೆ ಮಾಡಿದ್ದಾರೆ. ಅಲ್ಲಿಯ ಸ್ತ್ರೀಯರು ಈ ಕಾಯಿದೆಯನ್ನು ಮಣ್ಣುಗೂಡಿಸಿದರು. ಹತ್ತು ಹದಿನೈದು ಬ. ಸ್ತ್ರೀಯರು ಸಾರ್ವಜನಿಕ ಉದ್ಯಾನಗಳಿಗೆ ಹೋಗಿ ಹದಿನೈದು ನಿಮಿಷಗಳ ತನಕ ಭಾಷಣ ಮಾಡಿ, ಮೆರವಣಿಗೆ ತೆಗೆದು ಕಾಂಗ್ರೆಸ ಆಫೀಸಿಗೆ ಬಂದರು.

ಅಂಕೋಲೆಯ ಮಾಮಲೇದಾರರಿಗೆ ವರ್ಗ.

——(೦)——

ಈಗ ಅಂಕೋಲೆಯಲ್ಲಿದ್ದ ಮಾಮಲೇದಾರ ಮಿ. ಸಭಾಹಿತ ಇವರಿಗೆ ಯಲ್ಲಾಪೂರಕ್ಕೆ ವರ್ಗ ಮಾಡಿ, ಇವರ ಸ್ಥಳದಲ್ಲಿ ಯಲ್ಲಾಪೂರದ ಮಿ. ಸುಲ್ಪೂರ ಇವರನ್ನು ವರ್ಗ ಮಾಡುತ್ತಾರೆ.

ಕೋಲಾಬ ಪ್ರಾಂತದಲ್ಲಿ ದಂಗೆಯಾಗಿರುತ್ತದೆಂಬ ವರ್ತಮಾನ ಕೇಳಿ, ಅಲ್ಲಿಗೆ ಸೈನ್ಯ ಕಳಿಸಿದ್ದಾರೆ

ಅಸೆಂಬ್ಲಿಯ ಅಧ್ಯಕ್ಷರ ರಾಜೀನಾಮೆ.

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ. ವಿಠ್ಠಲಭಾಯಿ ಪಟೇಲರವರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ರಾಜೀನಾಮೆಯ ಕಾರಣಗಳನ್ನು ಗುಪ್ತವಿಟ್ಟಿದ್ದಾರೆ. ಕೆಲವು ದಿವಸಗಳಲ್ಲಿ ಇದನ್ನು ಬೈಲಿಗೆ ತರುವರು. ಇವರು ಈಗ ಸಂಪೂರ್ಣ ಸ್ವತಂತ್ರರಾಗಿದ್ದು, ಗುಜರಾಥಕ್ಕೆ ಬಂದು, ತಮ್ಮ ತಮ್ಮನ ಕೆಲಸವನ್ನು ಮುಂದೆ ಸಾಗಿಸುವರೆಂದು ಹೇಳಬೇಕಾಗಿಲ್ಲ.

ಯರವಡೆಗೆ ತಂದರು.

—(೦)—

ಸರದಾರ ಪಟೇಲ ಮತ್ತು ಬೇರೆ ೨೭ ಜನ ರಾಜಕೀಯ ಕೈದಿಗಳನ್ನು ಸಾಬರಮತಿಯಿಂದ ಸ್ಪೇಶಲ ಟ್ರೇನಿನಿಂದ ಯರವಡೆಗೆ ತಂದರು.

ರತ್ನಾಗಿರಿಯಲ್ಲಿ ಸಂಪು!

—(೦)—

ಪೋಲೀಸರಿಗೇನೂ ಕೊಡತಕ್ಕದ್ದಿಲ್ಲ!

—(೦)—

ರತ್ನಾಗಿರಿಯ ಅಂಗಡಿಕಾರರು ಒಂದು ಕಮೀಟಿ ಮಾಡಿ ಪೋಲೀಸರಿಗೆ ದುಡ್ಡು ಕೊಟ್ಟರೂ ಯಾವ ಪದಾರ್ಥವನ್ನು ಕೊಡತಕ್ಕದ್ದಿಲ್ಲೆಂದು ಕಟ್ಟು ಮಾಡಿದ್ದಾರೆ. ಯಾವನಾದರೂ ಈ ಕಟ್ಟಳೆಯ ವಿರುದ್ಧ ನಡೆದರೆ ಆತನಿಗೆ ೫೧ ರೂಪಾಯಿ ದಂಡ ಹಾಕುವರು. ಅಕ್ಕಿ, ಬೇಳೆ, ಉಪ್ಪು, ಮೆಣಸಿನಕಾಯಿ, ದೀಪದ ಪೆಟ್ಟಿಗೆ, ಬೀಡಿ ಸಹ ಎಷ್ಟು ಅಲ್ಪವಿದ್ದರೂ ಕೊಡತಕ್ಕದ್ದಿಲ್ಲ.

ಪೇಶಾವರದ ಕಾಂಗ್ರೆಸ ಕಮೀಟಿಯ ಮುಖಂಡರೆಲ್ಲ ಮುಸಲಮಾನರಾಗಿದ್ದಾರೆ. ಇವರಲ್ಲಿ ಕೆಲವರು ಖಿಲಾಫತದ ಮೆಂಬರ, ಸೆಕ್ರೆಟರಿ ಮತ್ತು ಅಧ್ಯಕ್ಷರಾಗಿದ್ದಾರೆ. ಕೆಲವು ಹೆಸರುಗಳು.

೧ ಸಯ್ಯದ ಲಾಲ ಬಾದಶಹಾ ೨ ಅಬ್ದುಲ ರಹೀಮ ದಾವೂದಿ ೩ ಅಲಿಗುಲಖಾನ ೪ ಖಾನ ಮೀರ ಹಲಾಯಿ ೫ ರಹೀಮಬಕ್ಷ ಗಜನಾವಿ ೬ ಅಲ್ಲಾಬಕ್ಷ ಬಾರಕಿ ೭ ಪೈಜಖಾನ ೮ ಅಬ್ದುರ ರಹೀಮಾನ ರಿಯಾ ೯ ಅಬ್ದುರೆಹಮಾನ ಕಪೂರ ಈತನೊಬ್ಬನೇ ಹಿಂದೂ ಇರುವನು.

ಅಲ್ಲಿ ಪೋಲೀಸರು ಹಿಡಿದ ಕಾಂಗ್ರೆಸದ ಮುಂಡಾಳುಗಳು ತುರುಂಗದಲ್ಲಿ ಕೈದಿಗಳಿಗೆ ದಂಗೆ ಮಾಡಲು ಉ

ಮವಾಳರು ರಾವ್ರಂದ ಟೇಬಲಕ್ಕೆ ಆ... ಲಬಾಗ್ಯ ತಮ್ಮದೊಂದು ಸರ್ಕ ಪ್ಸ್ಯಗಳ ಕಮೀ ಟಿ ಕಳತಿಸಿದ್ದರು. ... ಈ ... ಪಿ ... ಇಲ್ಲದ್ದಾಗಿತ್ತು. ಈಗ ಅದನ್ನು ವೇ ತಿಂಗಳ ... ನೆಯ ... ದಿವಸ ಮುಂಬಯಿಯಲ್ಲಿ ನೆರೆಯ ಸಜೇಕೆಂದು ಗೊತ್ತು ಮಾಡಿದ್ದಾರೆ,

ದಿ ಧಾರವಾಡ ... ... ಆಪರೇಟಿವ್ ಬ್ಯಾಂಕ ... ...

(೦)—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ... ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಏಳು ಲಕ್ಷದ ಮೇಲುಂಟು. ಚಕ ಹುಂಡಿ ವೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಠಾಕೀಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ವೆಂಕ್ಟರಾವ ಬಿ. ಜಕಾತಿ

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

—(೦)—

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ; ವಸ್ತ್ರ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ಠಿಕ್ಕ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ವಿಚಾರಕ್ಕೆ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

... ... ಎಷ್ಟು ... ಹಳೆಯ ಕುಸುಮ ... ಇವ್ಯಾಸವನ್ನು. ಈ ಔಷಧದಿಂದ ದೇಸೆಯು ... ಗುಣವಾಗುವದು. ಇದಲ್ಲ ಕೇವಲ ವನಸ್ಪತಿ ... ವರ್ಷಗಳ ಅನುಭವ!! ಬೆಲೆ ಎರಡು ... ರೂಪಾಯಿಗಳನ್ನು ಮನಿ ಆರ್ಡರದಿಂದಾ ... ಮುಂಗಡ ಕಳಿಸತಕ್ಕದ್ದು.

... ... ಬಾಯಿ ದೀಕ್ಷಿತ

ಮ/ಂ ವೆಸ್ಟ ಬ್ಯಾಂಕ ಧಾರವಾಡ

... ... ಯಾವ ವರ್ತಮಾನಪತ್ರದ ... ... ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಿಗೆ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಎಪ್ರಿಲ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ ಕಾರಣ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

ಮುನಸಿಫಕೋರ್ಟಿನಪಕ್ಕದ, ಧಾರವಾಡ

ನೋಟೀಸಿನ ದರಗಳು

—— (೦) ——

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೆಜರ ವಿಜಯ ಧಾರವಾಡ.

ಸ್ವಯಂವರ

—(೦)—

ಎ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧] ಧಾರವಾಡ ಸೋಮವಾರ ತಾರೀಖು ೨೮ ನೇ ಎಪ್ರಿಲ ೧೯೩೦ (ಸಂಚಿಕೆ ೯೮



ನಮ್ಮ ಧ್ವಜವು

ಇದು ತಪೋನಿಧಿ ಗಾಂಧಿ ಕಲ್ಪಿಸಿದ ಧ್ವಜವು।
ಇದು ಭರತಸಂತತಿಯ ಸರ್ವಸ್ವವು ॥ ಪಲ್ಲ ॥

ಇದು ನಮ್ಮ ಸಾತ್ವಿಕಾಧ್ಯಾತ್ಮಶಕ್ತಿ ಧ್ವಜವು।
ಇದು ನಮ್ಮ ತಾಯ್ನಾಡ ಸೌಭಾಗ್ಯವು॥
ಇದು ನಮ್ಮ ನಾಡ ಪುಣ್ಯಪ್ರಕರ್ಷಧ್ವಜವು।
ಇದು ನಮ್ಮ ತಾಯ್ನಾಡ ಚೈತನ್ಯವು ॥೧॥

ಇದರ ದರ್ಶನವೆಮಗೆ ಪರಮಪುಣ್ಯಪ್ರದವು।
ಇದರಿಂದೆ ತೇಜಸ್ಸಿನುತ್ಕರ್ಷವು॥
ಇದರ ನೆರಳೊಳ್ ನಮ್ಮ ಸ್ವಾತಂತ್ರ್ಯಮಂದಿರವು।
ಇದರಿಂದೆಯೇ ವಿಶ್ವದಭ್ಯುದಯವು॥ ೨॥

ಇದರ ರಕ್ಷಣದಿಂದೆ ನಮ್ಮ ಸಂರಕ್ಷಣವು।
ಇದರ ಮಾನವು ನಮ್ಮ ಸನ್ಮಾನವು॥
ಇದರ ಪಾವನಕೀರ್ತಿ ಸಕಲ ಭುವನವ್ಯಾಪಿ।
ಇದು ಜಗಕೆ ಮಂಗಲವು ನಮ್ಮ ಧ್ವಜವು॥ ೩॥

ಪ್ರಮೋದ ಚೈತ್ರ ವದ್ಯ ಏಕಾದಶಿ.
ಗುರುವಾರ ೨೪-೪-೩೦

—ಸಾ. ರಾ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ಚೈತ್ರ ವದ್ಯ ೧೦

ಆ ವಿಜಯಂ ಶ್ರೀಶಪ್ರಿಯ
ಶ್ರೀ ವಲ್ಲಭವೆನಿಸಿ ನಲಿಸಿರೆ ಸುಹಿತಚರಿತೆಗಳಿಂ ।
ದೀ "ವಿಜಯಂ" ಶ್ರೀಕರಧುರ ।
ನಾ ಹಿತಂಗಳ ವಿವರಿಸಲಿಪ್ಪುದು ಸಾಜಂ ॥

ಕಲಕತ್ತೆಯ ತುರಂಗದಲ್ಲಾದ ಗೊಂದಲ

ಗುಪ್ತ ಮತ್ತು ಬೋಸರ ಚಿಂತಾಜನಕ ಸ್ಥಿತಿಯು.

—(೧)—

ಕಲಕತ್ತೆಯ ತುರಂಗಕ್ಕೆ ಅಲಿಪೂರದ ತುರಂಗವೆನ್ನುತ್ತಾರೆ. ಈ ತುರಂಗದಲ್ಲಿ ಬ್ರಾಂಬು ಗೂಡ, ಹಾರಿಸನ ಎಂಬ ಆರೋಪಿಗಳಿದ್ದಾರೆ. ಇವರ ವಿಚಾರಣೆಯು ನಡೆದಿದೆ. ಯಾವ ಕಾರಣದಿಂದಲೋ ಜೇಲಿನ ಅಧಿಕಾರಿಗಳು, ಪಠಾಣ ವಾರ್ಡರ-ಜೇಲ ಪೋಲೀಸ ಮೊದಲಾದವರನ್ನು ಕರಕೊಂಡು ಹೋಗಿ ಇವರನ್ನು ಒಹುವಾಗಿ ಥಳಿಸಿದರು. ನಿರಾಶ್ರಿತ ಮತ್ತು ನಿರಪರಾಧಿಯಾದಂಥ ಈ ದುರ್ದೈವಿ ಆರೋಪಿಗಳನ್ನು ಳಿಸಿಕೊಳ್ಳಲು- ಶ್ರೀ. ಸುಭಾಷಚಂದ್ರರು ಛತ್ತಿನ ಮೇಲಿಂದಿಳಿದು ಬರುತ್ತಿದ್ದಾಗ, ಜೋಲಿಹೋಗಿ, ಕೆಳಗೆ ಬಿದ್ದು, ಬವಳಿ ಬಂದು, ಎಚ್ಚರದಪ್ಪಿದರು. ಶ್ರೀ. ಸೇನಗುಪ್ತರಿಗೆ ಅತ್ಯಂತ ಸಂತಾಪವಾಗಿ ಅವರ ಮೆಯ್ಯು ಭಯಂಕರವಾಗಿ ಕಾದು, ರಕ್ತವಾಹಿನಿಯು ನಿಂತು ಹೋಯಿತು. ಈ ಎರಡೂ ಸುದ್ದಿಗಳು ಕಲಕತ್ತೆಯ ತುಂಬ ವಿದ್ಯುದ್ವೇಗದಿಂದ ಹಬ್ಬಿ, ಸಾವಿರಾರು ಜನರು ನಿಜಸ್ಥಿತಿಯನ್ನು ತಿಳಕೊಳ್ಳಲು ತುರಂಗಕ್ಕೆ ಬಂದರು. ಶ್ರೀ ಸೇನಗುಪ್ತರ ಪತ್ನಿಯವರೂ ಬಂದರು. ಜೇಲಿನ ಅಧಿಕಾರಿಗಳು ಆ ಮಹಾನುಭಾವಳಿಗೆ ತನ್ನ ಗಂಡನ ಭೆಟ್ಟಿ ಸಹ ಮಾಡಗೊಡಲಿಲ್ಲ. ಆರಂಭಕ್ಕೆ ಶ್ರೀ ಗುಪ್ತರು ಸತ್ತರೇ ಎಂದು ವರ್ತಮಾನವಾಯಿತು. ಅನಿವಾರ್ಯವಾಗಿ ಸರಕಾರದವರು ಒಂದು ಪತ್ರಿಕೆಯನ್ನು ಪ್ರಕಟಿಸಿ, ಇವರಿಬ್ಬರೂ ನೆಟ್ಟಗಿದ್ದಾರೆ. ಬಾಂಬಿನ ಆರೋಪಿಗಳ ಮೇಲೆ ಎಷ್ಟು ಸಿಟ್ಟಿದ್ದರೂ ಬಲಾತ್ಕಾರ ಮಾಡಬೇಕಾಯಿತೆಂದು, ಅತ್ಯಂತ ಸಮರ್ಥನೆ ಮಾಡಿಕೊಂಡಿದ್ದಾರೆ. ಅವಶ್ಯವಿದ್ದಷ್ಟು ಎಂಬುದು ಅಧಿಕಾರಿಗಳ ದೃಷ್ಟಿಯಿಂದಲೇ ಅಲ್ಲವೇ ? ಅದು ಮಿತಿ ಮೀರಿ ನಡೆಯುವ ದಂಗೆಯಾಗಿ ಪರಿಣಮಿಸುವದು ಜೇಲು ನಡಾವಳಿಯಾಗುವ ತನಕ ಎಂದು ಅರ್ಥ ಮಾಡಲು ಯಾವ ಅಡ್ಡಿಯಿಲ್ಲವುಂಟು ? ಮೊದಲಿನ ಅಸಹಕಾರದಲ್ಲಿ ಭಯಂಕರ ದಂಗೆಯಾಗಿ ಇದೇ ತುರಂಗಕ್ಕೆ ಬೆಂಕಿ ಹತ್ತಿ ಹೋಯಿತು. ಅಂಥ ಅನಾಹುತವು ಈಗಾಗಬಾರದೆಂದು ಸರಕಾರದ ಅಂತಃಕರಣದಲ್ಲಿದ್ದರೆ- ಸಂಪೂರ್ಣವಾಗಿ ಗುಲಾಮರಾಗಿರುವ ಜನರನ್ನು ಸಹಾನುಭೂತಿಯಿಂದ ನಡಿಸಿಕೊಳ್ಳತಕ್ಕದ್ದು. ಆ ಸಹಾನುಭೂತಿಯು ದೆಸೆಯಿಂದಲೇ ? ಸರಕಾರದ ಕೃತ್ಯವು ತಮಗೆ ಅಸಮ್ಮತವಾದ್ದರಿಂದಲೋ ? ಜೇಲ ಸುಪರಿಂಟೆಂಡೆಂಟರಾದ ದತ್ತಸಾಹೇಬರು ರಾಜೀನಾಮೆ ಕೊಟ್ಟಿರುತ್ತಾರೆ. ತಮಗೆ ಈ ರೀತಿಯಾಗಿ ಕಲಹ ಕಳಕೊಳ್ಳುವದು ಒಟ್ಟಾಗಬಾರದೆಂದು ಬೇರೆ ತುರಂಗಗಳ ಅಧಿಕಾರಿಗಳು ಬುದ್ಧಿವಂತರಾಗುವರೆಂದು ಆಶಿಸುತ್ತೇವೆ.

ಶ್ರೀ. ಪಟೇಲರ ರಾಜೀನಾಮೆಯಿಂದಾಗುವ ಬ್ರಹ್ಮಗೊಂದಲ.

ಊರವರದೆಲ್ಲ ಒಂದು ದಾರಿ- ಉಳಕವ್ವನದೊಂದು ಬೇರೆ.

—(೨)—

ಶ್ರೀ. ವಿಠ್ಠಲಭಾಯಿ ಪಟೇಲರವರು ಅಸೆಂಬ್ಲಿಯ ಅಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟದ್ದು ಸಾಮಾನ್ಯ ಸಂಗತಿಯಾಗಲಿಲ್ಲ. ಅಮೇರಿಕೆಯ ಕಾಂಗ್ರೆಸದ ಅಧ್ಯಕ್ಷರು ರಾಜೀನಾಮೆ ಕೊಡುವಷ್ಟು ಮಹತ್ವದ ಸಂಗತಿಯು. ಇವರು ರಾಜೀನಾಮೆಯ ಕಾರಣವನ್ನು ಗುಪ್ತವಾಗಿಟ್ಟಿದ್ದರೂ, ಅದರಲ್ಲಿ ಸರಕಾರದ ಆಡಳಿತೆಯ ದೋಷ ಮತ್ತು ಅನ್ಯಾಯಗಳೇ ತುಂಬಿರುತ್ತವೆಂದು ಸಹಜವಾಗಿ ಊಹಿಸಬಹುದು. ಶ್ರೀ. ಪಟೇಲರು ಸರಕಾರಕ್ಕೆ ಕೊಡುವಂಥ ಸರ್ಟಿಫಿಕೇಟ ಹೌದು, ಗವ್ಹರ್ನರ-ಗವ್ಹರ್ನರರು ಉಪ್ಪಿನ ಕರಕ್ಕೆ ಸಹ ಸರ್ಟಿಫಿಕೇಟು ಕೊಟ್ಟು, ತಮ್ಮದೇ ಮೇಲ್ಮೆ ಮಾಡುತ್ತಾರೆ. ಈಗ ದಶಮುಖ ರಾವಣನಿಗೆ ಶತಮುಖ ರಾವಣನು ಗಂಟು ಬಿದ್ದಂತಾಯಿತು.

ಶ್ರೀ. ಪಟೇಲರ ರಾಜೀನಾಮೆಯು ಜಗತ್ತಿನ ತುಂಬ ಕೋಲಾಹಲವನ್ನು ಮಾಡದಿರಲಾರದು. ಈ ಗೊಂದಲದಲ್ಲಿ ಇವರ ಸ್ಥಳವನ್ನು ಆಕ್ರಮಿಸುವಂಥವನು ಸ್ವಾರ್ಥ ನೋಡಿದರೂ-ಲೋಕಸಿಂದೆಗೆ ನಿಃಸಂಶಯವಾಗಿ ಗುರಿಯಾಗುವನು. ಸ್ವಾಭಿಮಾನಿಯಾದ ಯಾವ ಹಿಂದೂ ಗೃಹಸ್ಥನು ಉಮೇದವಾರನಾಗಲಾರನು. ಅಳಿದ ಊರೊಳಗೆ ಉಳಿದವನೇ ಗೌಡನೆಂದು ಯಾವನೊಬ್ಬ ಅಹಿಂದೂ ಮುಂದೆ ಬರುವನು. ತನಗೆ ಈ ಪದದಲ್ಲಿ ಪಟೇಲರಷ್ಟು ಸಮರ್ಥತೆಯಿಂದ ಕೂಡ್ರುವಷ್ಟು ಪ್ರಶಸ್ತಿಯುಂಟೇ ಎಂದು ತಿಳಕೊಳ್ಳುವದು ಅವಶ್ಯಕವು.

ಸಾಯಮನ್ನ ರಿಪೋರ್ಟು ಹೊರಬಿದ್ದ ಬಳಿಕ ಸಿಮ್ಲಾದಲ್ಲಿ ಅಸೆಂಬ್ಲಿಯನ್ನು ಕೂಡಿಸುವ ವಿಚಾರವುಂಟು. ಆಗ ಅಧ್ಯಕ್ಷರ ಚುನಾವಣೆಯು ಕೂಡ. ಕಾಯದೆಭಂಗದಲ್ಲಿ ಫೌಜದಾರೀ ಮತ್ತು ಪೋಲಿಸ ಅಧಿಕಾರಿಗಳು ನಡೆಸಿದ ವೇಗಗಳ ಬಗ್ಗೆ ವಾದವಿವಾದವೂ ನಡೆಯುವದು. ಈ ವಿಷಯವಾಗಿ ಈಗಾಗಲೇ ಕೆಲ ಮೆಂಬರರು ಸೂಚನೆ ನೋಟೀಸು ಮತ್ತು ಠರಾವುಗಳನ್ನು ಕಳಿಸಿದ್ದಾರೆ. ಎಷ್ಟೇ ವಾದವಿವಾದವಾದರೂ ಪರಿಣಾಮವು ಪೊಳ್ಳೆಯಲ್ಲಿ ಹಳೇ ತೂತೆಂತಾಗುತ್ತದೆ. ... ಬರೆದ ... ಗಿಂತ ಕಡೆಯ ಪುಟದಲ್ಲಿ ... ಬರೆದದ್ದು ಮಹತ್ವದ್ದಾಗುತ್ತದೆ. ಅದೇ ಪ್ರಕಾರ ಈ ವಾದವಿವಾದವಾಗುವದು. ಆದ್ದರಿಂದ ಕೈಲಾಸಗಡವಂತೆ ಅದಕ್ಕೆ ಅಂಟಿಕೊಂಡಿರುವ ಅಧ್ಯಕ್ಷರು ರಾಜೀನಾಮೆ ಕೊಟ್ಟು, ಲೋಕಪಕ್ಷವನ್ನು ಸೇರಿದರೆ ದೇಶದ ನಿಜವಾದ ಹಿತವಾಯಿತೆಂತಾಗುತ್ತದೆ. ರಾಜೀನಾಮೆ ಕೊಡದಿದ್ದರೆ- ಊರವರದೆಲ್ಲ ಒಂದು ದಾರಿ- ಉಳಕವ್ವನದೊಂದು ಬೇರೆ ಎಂಬಂತಾಗುತ್ತದೆ.

ಪೋಲಿಸನ

ಮಯಾದೆಗೇಡಿತನವೋ ? ನೀಚತನವೋ ?

—(೦)—

ಅಮೃತಸರದಲ್ಲಿ ಸತ್ಯಾಗ್ರಹಿಗಳು ಸಭೆ ಮಾಡಿದಾಗ- ಸ್ವಯಂಸೇವಿಕೆಯರು ನಿಂತ ಸ್ಥಳದ ಹತ್ತಿರ ಕಾವಲುಗಾರನಾಗಿದ್ದ ಒಬ್ಬ ಸಿಪಾಯಿಯು ಇವರ ಮುಂದೆ ಚಣ್ಣ ಕಳೆದು ಬತ್ತಲೇ ನಿಂತನು. ಸ್ವಯಂಸೇವಿಕೆಯರು ಜಗತ್ತಿನಲ್ಲಿ ಅತ್ಯಂತ ನೀಚ ಮತ್ತು ಮರ್ಯಾದೆಗೆಡಿರುವಂಥ ಈ ಪಾಪಿಯ ಕೃತ್ಯ ನೋಡಿ, ಮೋರೆಗೆ ಸೆರಗು ಹಾಕಿದರಲ್ಲದೆ, ಆತನಿಗೆ ಒಂದು ದುಷ್ಟ ಶಬ್ದವನ್ನಾಡಲಿಲ್ಲ. ಇದರ ನಾಚಿಕೆಯು ಆ ಪೋಲೀಸನಿಗಲ್ಲ. ಸುಧಾರಿಸಿದ ಸರಕಾರವೆಂಬದಕ್ಕಿರಬೇಕು. ಜಗತ್ತಿನಲ್ಲಿ ಎಂಥ ಕಾಡು ಸರಕಾರವಾದರೂ, ಸ್ತ್ರೀಯರು ಲಜ್ಜೆಗೊಳ್ಳುವಂಥ ಹೀನ ಕೃತ್ಯ ಮಾಡಗೊಡಲಾರದು. ಪೋಲಿಸನ ಕೃತ್ಯವು ವರ್ತಮಾನಪತ್ರಗಳಲ್ಲಿ ಬಂದರೂ ಸಂಚಾರ ಸರಕಾರವು ಆತನಿಗೆ ಶಿಕ್ಷೆ ವಿಧಿಸಿದ್ದದ್ದು ಕೇಳುತನವೇ ಸರಿ.

ಗಂಡನ ಬದಲಾಗಿ ಹೆಂಡತಿಯು ಸಂಪಾದಿಕೆಯಾಗಳು.

—(೦)—

ಕಚ್ಛ ಸುದರ್ಶನ ಪತ್ರದ ಸಂಪಾದಕರಾದ ಶ್ರೀ. ಪರಮಾನಂದ ತುರಂಗ ಕಂಡದ್ದರಿಂದ, ಇವರ ಪತ್ನಿಯಾದ ವಿಜಯಾದೇವಿಯು ತಾನೇ ಸಂಪಾದಿಕೆ ಎಂದು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಡಿಕ್ಲೇರೇಶನ ಮಾಡಿದಳು.

ಬ್ಯಾಡಗಿ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ.

—:(೦):—

ಹೋದ ಶುಕ್ರವಾರ ದಿವಸ ಬ್ಯಾಡಗಿಯ ನಿವಾಸಿಗಳು ಈಗಿನ ಕಾಯದೆಭಂಗಕ್ಕೆ ಅನುಕೂಲ ಮತ್ತು ಸರಕಾರ ಕೃತ್ಯದ ನಿಷೇಧ ಈ ಎರಡು ಉದ್ದೇಶಗಳಿಂದ ಹರತಾಳ ಮಾಡಿದರು. ಬ್ಯಾಡಗಿಯ ವ್ಯಾಪಾರದ ಮೆಣಸಿನಕಾಯಿಯು ದಿನಾಲು ಲಕ್ಷಾವಧಿ ರೂಪಾಯಿಗಳ ವ್ಯವಹಾರ ನಡೆಯುವದು. ಮೇಲಾಗಿ ವೀರಶೈವ ವ್ಯಾಪಾರಸ್ಥರ ಗಂಡುಮೆಟ್ಟಿನ ಸ್ಥಳ. ಅಲ್ಲಿ ಬಲವಾದ ಎರಡು ಪಂಗಡಗಳುಂಟು. ಮ್ಯುನಿಸಿಪಾಲಿಟಿಯು ಗಣಮಂಡಲ. ಇಂಥ ಪರಿಸ್ಥಿತಿಯಲ್ಲಿ ಪ್ರಕೃತದ ಆಂದೋಲನದಲ್ಲಿ ತಾವು ಹಿಂದುಳಿಯಬಾರದೆಂದು ಎಲ್ಲರೂ ಒಂದಾಗಿ ಹರತಾಳ ಮಾಡಿದರು. ಆಗಿನ ಒಗ್ಗಟ್ಟು ಅಭೂತಪೂರ್ವವಾಗಿ ಜನರ ಉತ್ಸಾಹವು ಅಪೂರ್ವವಾಗಿತ್ತು. ಎಲ್ಲಕ್ಕೂ ಮಹತ್ವದ ಸಂಗತಿಯೆಂದರೆ- ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿದ್ದಿರುತ್ತದೆ. ಬ್ಯಾಡಗಿಯ ನಾಗರಿಕರು ಕರ್ನಾಟಕದ ಅನೇಕಾನೇಕ ಪಟ್ಟಣಗಳಿಗೆ ತಲೆ ಕೆಳಗೆ ಮಾಡುವಂತೆ ತಮ್ಮ ಒಕ್ಕಟ್ಟನ್ನು ತೋರಿಸಿದರೆಂಬದು ನಿಜವಾಗಿ ಪ್ರಶಂಸನೀಯವಾದದ್ದು.

ಅಬಕಾರೀ ಕಲೇಕ್ಟರರಿಗೆ ಕುಡಿಯಲಿಕ್ಕೆ ನೀರು ಸಿಗಲಿಲ್ಲ.

—(೦)—

ಸಂಕಟ ಬಂದಾಗ, ವೆಂಕಟರಮಣ

—()—(೦)—()—

ಗುಜರಾಥದ ಹಿರ್ವ ಅಕ್ಟಿಂಗ ಅಬಕಾರೀ ಕಲೇಕ್ಟರರಾದ ಮಿ. ಫ್ಲೀಜರಸಾಹೇಬರು ತಮ್ಮ ಪ್ರವಾಸದಲ್ಲಿ ಕುಡಿಯಲಿಕ್ಕೆ ನೀರು ಕೂಡ ಸಿಗದೆ, ಸ್ವಸ್ಥಾನಕ್ಕೆ ಗಚ್ಛಹೇಳಿಸಿದರು. ಊರಲ್ಲಿ ಎಲ್ಲಿಯೂ ನೀರು ಸಿಗದ್ದರಿಂದ, ಊರ ಹೊರಗೆ ಹೊಲಗೇರಿಗೆ ಹೋಗಿ, ಒಬ್ಬ ಹೊಲೆಯನಿಗೆ ನೀರು ಕೊಡೆಂದು ಕೇಳುವಾಗ "ಅಪ್ಪಾ ನನಗೆ ಕುಡಿಯಲಿಕ್ಕೆ ಗುಟುಕು ನೀರು ಕೊಡು, ನನ್ನ ತಲೆ-ನೀಳಿ ನೋಡು, ನನ್ನ ಮತ್ತು ನಿನ್ನ ರಕ್ತದಲ್ಲಿ ಮನುಷ್ಯನೆಂಬ ದೃಷ್ಟಿಯಿಂದ ಏನಾದರೂ ಭೇದವುಂಟೇ? ಎಂದು ದೈನ್ಯದಿಂದ ಬೇಡಿಕೊಂಡರು. ತಮಗೆ ಬಹಿಷ್ಕಾರವಿರುವ ಕಾಲದಲ್ಲಿ ಇದೇ ಸಾಹೇಬರು ತಮಗೆ ನೀರು ತಂದು ಕೊಡುವದಿಲ್ಲೆಂದು ಯಾವನಾದರೂ ಹೇಳಿದ್ದರೆ- ಈ ವೇದಾಂತದ ಬದಲಾಗಿ, ಅವನನ್ನು ಗಜಮನಿ ನಿಲ್ಲಿಸುತ್ತಿದ್ದರೆಂದು ಹೇಳಬೇಕಾಗಿಲ್ಲ. ಸಂಕಟ ಬಂದಾಗ ವೆಂಕಟರಮಣ!!!

ಭಂಗಿಯು ಸರಕಾರೀ ಅಮಲದಾರರ ಭಂಗೀ ಕೆಲಸ ಮಾಡಲಿಲ್ಲ.

—(೦)—

ಗುಜರಾಥದಲ್ಲಿ ಆನಂದ ತಾಲೂಕಿಗೆ ಸೇರಿದ ವಾಘಸಿ ಗ್ರಾಮಕ್ಕೆ ಸರಕಲ ಇನ್ಸಪೆಕ್ಟರನು ತಾಡೀ ಗಿಡಗಳ ಲಿಲಾವು ಮಾಡಲಿಕ್ಕೆ ಹೋದನು. ಅಲ್ಲಿಯ ಭಂಗಿಯು ಸರಕಾರೀ ಕಾಮದಾರರ ಕೆಲಸ ಮಾಡುವದಿಲ್ಲವೆಂದು ಸತ್ಯಾಗ್ರಹ ಮಾಡಲು ಇನ್ಸಪೆಕ್ಟರನು ಮೂಗೂ ಬಾಯಿ ಮುಚ್ಚಿಕೊಂಡು, ಲಿಲಾವು ಮಾಡದೆ, ಆ ಊರಿಗೆ ಶರಣು ಹೊಡೆದು, ಬಂದ ಹಾದಿಗೆ ಸುಂಕವಿಲ್ಲೆಂದು ಹಿಂದಿರಿಗಿ ಹೋದನು.

ತಾಡೀಗಿಡಗಳ ಮೂಲೋತ್ಪಾಟನ.

—(೦)—

ಮಹಾತ್ಮರು ಬೋದಲಿ ಗ್ರಾಮಕ್ಕೆ ಹೋದರು. ಅಲ್ಲಿ ತಾಡಿನ ಗಿಡಗಳ ಬನವೇ ಇರುವದು. ಈ ಬನವು ನಾಶವಾಗಬೇಕೆಂಬುದೇ ಮಹಾತ್ಮರ ಮನೋದಯವು. ಅಲ್ಲಿ ಇವರು ಭಾಷಣ ಮಾಡುವಾಗ-

ನಾನು ಈ ಊರಿಗೆ ಸರಕಸ, ನಾಟಕ, ಸಿನೇಮಾ ನೋಡಲಿಕ್ಕೆ ಬಂದಿಲ್ಲ. ಜನರ ವ್ಯಸನ ಕಳೆಯಲಿಕ್ಕೆ ಬಂದಿದ್ದೇನೆ. ಇಲ್ಲಿ ಮತ್ತು ಬೇರೆ ಗ್ರಾಮಗಳ ಗಿಡಗಳನ್ನು ಬೇರು ಸಹಿತ ಕಿತ್ತಿಡಬೇಕಾಗಿದೆ. ನೀವೆಲ್ಲರೂ ಇವುಗಳ ಮೂಲೋತ್ಪಾಟನ ಮಾಡಿರಿ

ಎಂಬುದಾಗಿ ಭಾಷಣ ಮಾಡಲು- ಒಬ್ಬನು ಎದ್ದು ನಿಂತು ನನ್ನ ಹೊಲದಲ್ಲಿ ೪೦೦ ಗಿಡಗಳಿವೆ. ಅವನ್ನು ಕಡಿದು ಹಾಕಲಿಕ್ಕೆ ನಾನು ಒಪ್ಪುತ್ತೇನೆಂದು ಹೇಳಿದನು.

ಸತ್ಯಾಗ್ರಹಿಗಳು ಪೋಲೀಸರ ಮೇಲೆ ಜಿದ್ದು ಗೆದ್ದರು.

—(೦)—

ಮುಂಬಯಿಯ ಸತ್ಯಾಗ್ರಹಿಗಳು ದಿನಾಲು ಸಾವಿರ ಸಂಖ್ಯೆಯಿಂದ ಸಮುದ್ರಕ್ಕೆ ಹೋಗಿ, ನೀರು ತಂದು ಬೈಲಿನಲ್ಲಿ ಉಪ್ಪು ಮಾಡಿ, ಮಾರಾಟ ಮಾಡುವರು. ಪೋಲೀಸರು ಇವರ ಉಸಾಬರಿಯನ್ನೇ ಬಿಟ್ಟರು. ಸತ್ಯಾಗ್ರಹಿಗಳು ಅಹಿಂಸೆಯುವರಾದ ಬಳಿಕ ನಾವೇಕೆ ಬಡಿಗೆ ಹೊಡೆದು ಹಿಂಸೆಯನ್ನು ಮಾಡಬೇಕು? ಸರ್ವಥಾ ಒಬ್ಬರ ಕೂದಲಿಗೆ ಧಕ್ಕೆಯಾಗಕೂಡದೆಂದು ಅಲ್ಲಿಯ ಪೋಲೀಸ ಕಮೀಶನರಸಾಹೇಬರು ತಮ್ಮ ದಂಡಿಗೆ ಕಟ್ಟಪ್ಪಣೆ ವಿಧಿಸಿದ್ದಾರೆ. ಈ ಸಾಹೇಬರ ಪ್ರಶಂಸನೀಯವಾದ ಅನುಕರಣವನ್ನು ಜಿಲ್ಲೆಯ ಪೋಲೀಸರೇಕೆ ಮಾಡಬಾರದು?

ಅಧ್ಯಕ್ಷ ಪಟೇಲರು ಕಾಯದೆಭಂಗದಲ್ಲಿ ಸೇರುವರು.

—(೦)—

ಅಧ್ಯಕ್ಷ ಪಟೇಲರ ರಾಜೀನಾಮೆಯ ಪತ್ರವು ಪ್ರಕಟವಾಗಿದೆ. ಯುರೋಪಿಯನ್ನ ಸಾಮದಾರರು ತಮ್ಮ ಅವಹೇಳನೆ ಮಾಡಿದರು. ಆಗಾಗ್ಗೆ ನನಗೆ ತಾಪ ಕೊಡುವರು. ಬ್ರಿಟಿಶ ರಾಜ್ಯ ಪದ್ಧತಿಯು ಹೊಲಸಿಟ್ಟು ಹೋಗಿದೆ. ಈ ರಾಜ್ಯ ಪದ್ಧತಿಯು ಆದಷ್ಟು ಬೇಗನೆ ನಾಶವಾದರೆ ನಿಜವಾದ ಪ್ರಜಾ ಹಿತವಾಗುವದು. ನನ್ನ ಜನರು ದೇಶಾಭಿಮಾನಿಗಳು ಜೇಲಿಗೆ ಹೋಗುತ್ತಿರುವಾಗ ನಾನು ಅಧ್ಯಕ್ಷಪದದ ಖುರ್ಚಿಯಲ್ಲಿ ಕೂಡುವದು ಯುಕ್ತವಲ್ಲ. ಆದ್ದರಿಂದ ರಾಜೀನಾಮೆ ಕೊಟ್ಟು ಸ್ವಾತಂತ್ರ್ಯ ಯುದ್ಧದಲ್ಲಿ ಸೇರುವೆನು. ಇಂದು ಸಿಮ್ಲಾದಲ್ಲಿ ನಾಗರಿಕರು ಅಧ್ಯಕ್ಷರ ಮೆರವಣಿಗೆ ತೆಗೆಯುವರು. ಪರದೇಶೀ ಬಟ್ಟೆಗೆ ಬಹಿಷ್ಕಾರ ಹಾಕಿರಿ, ಖಾದೀ ಧರಿಸಿರಿ, ಕಾಂಗ್ರೆಸದ ಆಜ್ಞೆ ಚಿಂತನ ಮಾಡಿರೆಂದು ಶ್ರೀ ಪಟೇಲರ ಸಂದೇಶವಿರುತ್ತದೆ.

ಗಂಡ ಬಿಟ್ಟರೂ ಗಜ-ಚಾರ ಬಿಡನು.

—(೦)—

ಕರಾಚಿಯಲ್ಲಿ ಅಂಗಡಿಗಳಲ್ಲಿ ನಿರ್ಭಯದಿಂದ ಕಾಯದೆಭಂಗದ ಉಪ್ಪು ಮಾರುತ್ತಿದ್ದಾರಷ್ಟೇ; ಈ ಉಪ್ಪು ಅನಾರೋಗ್ಯವಾದದ್ದಿದೆ. ಇದನ್ನು ತಿಂದವರು ಹೊಟ್ಟೆಗೆಟ್ಟು, ಆಸ್ಪತ್ರೆಗೆ ಬಂದು ಚಿಕಿತ್ಸಾ ಹೊಂದುತ್ತಿದ್ದಾರೆ. ಆದ್ದರಿಂದ ಸಮುದ್ರದ ಕೊರಕಲಗಳಲ್ಲಿ ಬಿದ್ದ ಉಪ್ಪನ್ನು ತಿನ್ನಬೇಡಿರಿ ಮಾರಬೇಡಿರಿ. ಇದರ ಮಾರಾಟ ಮಾಡುವದಾದರೆ- ಇದನ್ನು ತುಳಿಸಿಹಾಕುವೆವೆಂದು ಅಲ್ಲಿಯ ಶ್ಯಾನಿಟರಿ ಖಾತೆಯವರು ಜಾಹೀರನಾಮೆಯನ್ನು ಹಚ್ಚಿರುತ್ತಾರೆ.

ಅಲಹಾಬಾದಿನಲ್ಲಿ ಉಪ್ಪಿನ ಪ್ರಚಂಡ ಕಾರಖಾನೆ.

—(೦)—

ಪಂಡಿತ ಮೋತಿಲಾಲರು ಅಲಹಾಬಾದಿನಲ್ಲಿ ಸ್ವತಂತ್ರವಾಗಿ ಉಪ್ಪು ಮಾಡುವ ಒಂದು ಪ್ರಚಂಡ ಕಾರಖಾನೆಯನ್ನೇ ತೆಗೆಯುವರು. ಇದರ ಕೂಡ ವಿಲಾಯತಿಯ ಅರಿವೆಯ ಅಂಗಡಿ ಮತ್ತು ಗಡಂಗಗಳ ಮುಂದೆ ಪಿಕೆಟಿಂಗ ಮಾಡುವ ಏರ್ಪಾಡನ್ನೂ ಮಾಡುತ್ತಿದ್ದಾರೆ.

ಪುಣೆಯಲ್ಲಿ ಶ್ರೀ. ಭೋಪಟಕರರನ್ನು ಹಿಡಿದಿದ್ದ ವಿಚಾರಣೆಯು ತಂದು ಇರುತ್ತದೆ. ಇವರು ಪೋಲೀಸಿನಲ್ಲಿ ಕೂಡ್ರುವಾಗ ನಾನೂ ನಿಮ್ಮ ಹಿಂದೆಯೇ ಬಂದೇನೆಂದು ಶ್ರೀ ಕೇಳಕರರು ಉದ್ಗಾರ ತೆಗೆದಿದ್ದಾರೆ.

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ, ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೨೯ ನೇ ಎಪ್ರಿಲ ೧೯೩೦ (ಸಂಚಿಕೆ ೧

ಪೇಶಾವರದಲ್ಲಿ ಭಯಂಕರ ಪುಂಡಾಟಿಕೆ.

ದಂಗೆಗಾರರ ಮೇಲೆ ಗುಂಡಿನ ಸುರಿಮಳೆ.

ಒಬ್ಬ ಸೋಲ್ಜರನು ನುಚ್ಚುನುರಿಯಾದನು.

೨೦ ಜನರು ಸತ್ತರು. ೫೦ ಜನರು ಗಾಯವಾದರು.

ಪೇಶಾವರ ಪಟ್ಟಣವು ಕಾಬೂಲ ಸರಹದ್ದಿನ ಅಫ್ಘನ್ (?) ಅಲ್ಲಿಯವರು ಮಹಾತ್ಮರ ಚಳವಳಿಯ ವಿರುದ್ಧ ಇರುತ್ತಾರೆಂದು ಇಂಗ್ರೇಜಿ ಪತ್ರಗಳು ಪರ್ಯಂತರ ಹೇಳುತ್ತಾ ಬಂದವು. ಆಗಳ ಹೇಳಿಕೆಯು ಪೂರಾ ಸುಳ್ಳಾಯಿತು. ಹೋದ ಬುಧವಾರ ದಿವಸ ಪೋಲೀಸರು ಕೆಲ ಜನ ಕಾಂಗ್ರೆಸದ ಮುಖಂಡರನ್ನು ಹಿಡಿದರು. ಆಗ ಊರು ಶಾಂತವಾಗಿತ್ತು. ಮುಂದೆ ಎರಡು ತಾಸುಗಳ ನಂತರ ಪುನಃ ಕೆಲವರನ್ನು ಹಿಡಿದರು. ಆಗ ಜನಕ್ಷೋಭೆಯಾಯಿತು. ಪೋಲೀಸ ಸ್ಟೇಶನದ ಮುಂದೆ ಸಾವಿರಾರು ಜನರು ನೆರೆದರು. ಆರಂಭ ಪೋಲೀಸರು ಕಾಂಗ್ರೆಸದವರನ್ನು ಮೋಟರಗಳಲ್ಲಿ ಹಾಕಿಕೊಂಡು ಕಾಬೂಲಗೇಟವೆಂಬ ಹೆಸರಿನ ಪೋಲೀಸ ಸ್ಟೇಶನಕ್ಕೆ ಕರಕೊಂಡು ಹೊರಟರು. ಆಗ ನೆರೆದ ಜನರ ಸಂಖ್ಯೆಯು ಹತ್ತು ಸಾವಿರಕ್ಕಿಂತ ಹೆಚ್ಚಾಯಿತು. ಇವರು ಪೋಲೀಸರ ಮೋಟರಗಳ ನಾಲ್ಕೂ ಟಾಯರು ಹರಿಯಲು ಅವು ಮುಂದೆ ಸಾಗದಾದವು. ಪೋಲೀಸರು ಹೇಗೂ ಹೇಗೂ ಮಾಡಿ, ಕಾಬೂಲ ಗೇಟಿಗೆ ಹೋದರು. ಆಗ ಎದ್ದ ಗೊಂದಲವು ಪೋಲೀಸರಿಗೆ ಆಟೋಪಿಸದಂತಾಯಿತು. ದಂಗೆಯ ವರ್ತಮಾನ ಕೇಳಿ, ಕಮೀಶನರ ಮೆಟಕಾಫ ಸಾಹೇಬರು ಬಂದರು. ಅವರಿಗೆ ಜಬ್ಬಾಗಿ ಏಟು ಬಿದ್ದವು- ಅವರನ್ನು ಔಷಧಕ್ಕಾಗಿ ಆಸ್ಪತ್ರೆಗೆ ಕಳಿಸಿದರು. ಪೋಲೀಸರಿಂದ ದಂಗೆ ಶಾಂತವಾಗದೆಂದು ಕಂಡ ಬಳಿಕ, ಗ್ಯಾರಿಸನ ಸೈನ್ಯವನ್ನು ಕರಿಸಿದರು. ಅವರ ಸಹಾಯಕ್ಕಾಗಿ ಬಂದ ತೋಫಿನ ಬಂಡಿಗಳಿಗೆ ಜನರು ಬೆಂಕಿ ಹಚ್ಚಿ ಸುಟ್ಟರು. ಇವುಗಳಲ್ಲಿದ್ದ ಸೋಲ್ಜರರು ಸುಟ್ಟೇ ಹೋಗತಕ್ಕವರು; ಗ್ಯಾರಿಸನದವರು ಇವರನ್ನು ಉಳಿಸಿಕೊಂಡರು. ಅನಂತರ ಸೋಲ್ಜರರ ದಂಡೇ ಬಂದು, ಅರಳು ಹುರಿದಂತೆ ಗುಂಡು ಹಾರಿಸಿತು. ಜನರು ಸಂದಿಗಳಲ್ಲಿ ನಿಂತು, ಸೋಲ್ಜರರು ತಮ್ಮ ಮೇಲೇರಿ ಬರದಂತೆ ಯುದ್ಧವ್ಯೂಹವನ್ನು ರಚಿಸಿದ್ದರು. ಅಲ್ಲಿ ದಂಡಿನಲ್ಲಿಯ ಬಂದ ಸೋಲ್ಜರ ಮತ್ತು ಸಿಪಾಯರ ಮೇಲೆ ಕಲ್ಲು ಗುಂಡುಗಳ ಮಳೆಗರೆಸಿ ಅನೇಕರನ್ನು ಘಾಯಪಡಿಸಿದರು. ಒಬ್ಬ ಸಾರ್ಜಂಟನು ಇವರ ಕೈಗೆ ಸಿಕ್ಕನು. ಆತನನ್ನು ಕೊಡ್ಲಿಯಿಂದ ಕೊಂದು ನುಚ್ಚುನುರಿ ಮಾಡಿದರು. ಗೋಳೀಬಾರಿನಿಂದ ಜನರು ಸತ್ತು ಮತ್ತು ಗಾಯವಾಗಿ ಬೀಳುವದನ್ನು ಕಂಡು ತಂತಮ್ಮ ಮನೆಯ ದಾರೀ ಹಿಡಿದರು. ಹೋಗುವಾಗ ಪೋಸ್ಟ ಮತ್ತು ತಾರ ಆಫೀಸಗಳ ಮೇಲೆ ಹಲ್ಲೆ ಮಾಡಿ ಬಹುವಾಗಿ ಕೇಡು ಮಾಡಿದ್ದಾರೆ. ದಂಗೆಯಲ್ಲಿ ೨೦ ಜನರು ಸತ್ತರು. ೫೦ ಜನರು ಘಾಯವಾಗಿದ್ದಾರೆ.

ಸತ್ಯಾಗ್ರಹ ಮತ್ತು ಕಾನೂನುಭಂಗಕ್ಕೆ ಸಹಾಯ ಮಾಡಲು ಉತಮಾನಜೆ ಗ್ರಾಮದ ಮುಂದಾಳಿಯಾದ ಅಬ್ದುಲಗಫಾರಖಾನಸಾಹೇಬರು ಹತ್ತು ಸಾವಿರ ಸ್ವಯಂಸೇವಕರನ್ನು ಕರಕೊಂಡು ಪೇಶಾವರಕ್ಕೆ ಹೊರಟಿದ್ದರು. ಇವರು ಬಂದಿದ್ದರಂತೂ ಭಯಂಕರ ದಂಗೆಯಾಗುತ್ತಿತ್ತೆಂದು ಹೆದರಿಕೊಂಡ ಪೋಲೀಸರು ಇವರನ್ನು ಊರೊಳಗೆ ಬರಗೊಡಲಿಲ್ಲ. ದಂಗೆಯು ಮೂರು ತಾಸುಗಳಲ್ಲಿ ಶಾಂತವಾಯಿತು. ಆದರೆ ಅದರ ಉರಿಯು ಭಯಂಕರವಾಗಿರುತ್ತದೆ. ಪಟ್ಟಣವು ಸೋಲ್ಜರರ ಪಂಜರದಲ್ಲಿದೆ. ಕೂಟುಕಟ್ಟಿಗೆ ಪೋಲೀಸರ ಕಾವಲುಂಟು. ಹೊರಗಿನ ಜನರು ಬಂದು ಊರೊಳಗೆ ಕಳವು ಸುಲಿಗೆ ಲೂಟಿ ಮಾಡುವರೆಂಬ ನೆವದಿಂದ ಸರಕಾರದವರು ಹೊರಗಿನವರು ಪಟ್ಟಣದಲ್ಲಿ ಬರದಂತೆ ಹುಕುಮು ಮಾಡಿದ್ದಾರೆ.

ಪೇಶಾವರದ ವಿಶೇಷ ಸುದ್ದಿಗಳು.

ಪೇಶಾವರದಲ್ಲಿ ಪೋಲೀಸರು ತಂದ ಯುದ್ಧದ ಬಂಡಿಗಳನ್ನು ಜನರ ಮೇಲೆ ನಿರ್ದಯದಿಂದ ಬಿಟ್ಟು ಜನರನ್ನು ಹಿಂಸಿಸಹತ್ತಿದ್ದರಿಂದ, ಜನರು ರೇಗಿ ಬಂಡಿಗಳಿಗೆ ಕಲ್ಲೆಣ್ಣೆ ಸುರುವಿ, ಅವನ್ನು ಸುಟ್ಟರು ಮತ್ತು ಗುಂಡು ಹಾರಲಿಕ್ಕೆ ಕಾರಣವಾಯಿತು.

ಸರಕಾರೀ ಕೆಲಸದಲ್ಲಿದ್ದವರ ಹೊರ್ತು ಯಾವ ಯುರೋಪಿಯನ್ನನೂ ಪಟ್ಟಣದಲ್ಲಿ ಬರಕೂಡದೆಂದು ಹುಕುಂ ಸಾರಿದ್ದಾರೆ.

ಕೋಹತ ಪ್ರಾಂತದಲ್ಲಿ ದಂಗೆಯಾಗಿರುತ್ತದೆಂಬ ವರ್ತಮಾನ ಕೇಳಿ, ಅಲ್ಲಿಗೆ ಸೈನ್ಯ ಕಳಿಸಿದ್ದಾರೆ.

ಪೇಶಾವರದ ಕಾಂಗ್ರೆಸ ಕಮೀಟಿಯ ಮುಖಂಡರೆಲ್ಲ ಮುಸಲಮಾನರಾಗಿದ್ದಾರೆ. ಇವರಲ್ಲಿ ಕೆಲವರು ಖಿಲಾಫತದ ಮೆಂಬರ, ಸೇಕ್ರೆಟರಿ ಮತ್ತು ಅಧ್ಯಕ್ಷರಾಗಿದ್ದಾರೆ. ಕೆಲವು ಹೆಸರುಗಳು-

೧ ಸಯ್ಯದ ಅಲಿ ಬಾದಶಹಾ ೨ ಅಬ್ದುಲ ರಹೀಮ ಪಾಪ್ಪೂದಲ್ಲಿ ೩ ಅಲಿಗುಲಖಾನ ೪ ಖಾನ ಮೀರ ಹಲಾಯಿ ೫ ರಹೀಮಬಕ್ಷ ಗಜನಾನಿ ೬ ಅಲ್ಲಾಬಕ್ಷ ಬಾರಕಿ ೭ ಪೈರೋಜಖಾನ ೮ ಅಬ್ದುಲ ರೆಹಮಾನ ರಿಯಾ ೯ ಅ... ಇವರೆಲ್ಲರೊಳಗೆ ಕಪೂರ ಚಂದ ಖನ್ನನೊಬ್ಬನೇ ಹಿಂದೂ ಇರುವನು.

ಅಲ್ಲಿ ಪೋಲೀಸರು ಹಿಡಿದ ಕಾಂಗ್ರೆಸದ ಮೆಂಬರರು ತುರಂಗದಲ್ಲಿ ಕೈದಿಗಳಿಗೆ ದಂಗೆ ಮಾಡಲು ಉತ್ತೇಜನ ಬರುವಂಥ ಭಾಷಣಗಳನ್ನು ಮಾಡಿ ಕವಾಯತ ನಡಿಸಿವರೆಂದು ಇವರನ್ನು ದಿನ ಭಾವಾ ಇದ್ದಂಥ ಕೆಲ್ಲೆಗೆ ಕಳಿಸಿದ್ದಾರೆ.

ಬೆಣ್ಣೇಹಳ್ಳದ

ನೀರು ತಕ್ಕೊಂಡರೆ ಶಿಕ್ಷೆಯಿಲ್ಲ

ಆದರ

ಹೆಪ್ಪು ತಕ್ಕೊಂಡರೆ ಶಿಕ್ಷೆ.

— * —

ಕರ್ನಾಟಕದಲ್ಲಿ ಡೋಣಿ ಮತ್ತು ಬೆಣ್ಣೇಹಳ್ಳಗಳು ಪೂರಾ ಉಪ್ಪು ನೀರಿನವು. ಇವುಗಳ ದಂಡೆಯಲ್ಲಿ ಬೇಸಿಗೆಯಲ್ಲಿ ನೀರು ಸರಿದರೆ- ಅವುಗಳ ಮಣ್ಣು ತಾನಾಗಿ ಹೆಪ್ಪುಗೊಂಡು, ಉತ್ತಮವಾದ ಉಪ್ಪು ಆಗುತ್ತದೆ. ಈ ಬೇಸಿಗೆಯಲ್ಲಿ ಬೇಕಾದವರು ಹೋಗಿ ಮನಸಂಬಿಗೆ ಮಾಡಿಕೊಳ್ಳಬಹುದು. ಸರಕಾರದವರು ಉಪ್ಪಿನ ಕಾಯದೆ ಮಾಡುವ ಪೂರ್ವದಲ್ಲಿ ಈ ಹಳ್ಳಗಳ ದಂಡೆಗುಂಟ ವಾಸವಾಗುತ್ತಿದ್ದ ಜನರು ಇದೇ ಉಪ್ಪನ್ನು ಸಂಗ್ರಹಿಸುತ್ತಿದ್ದರು. ಬಡವರು ಊರೂರಿಗೆ ಒಯ್ದು ಮಾರುತ್ತಿದ್ದರು. ಯಾವನಾದರೂ ಮನೆಯಲ್ಲಿ ಉಪ್ಪು ಮಾಡಿದರೆ-ಇಂಥ ಉಪ್ಪನ್ನು ಮಾರಲಿಕ್ಕೆ ತಕ್ಕೊಂಡರೆ ಶಿಕ್ಷೆ ಮತ್ತು ದಂಡವೆಂದು ಸರಕಾರದವರು ಹೆದರಿಸುವ ಕಾಯದೆ ಮಾಡಿದಂದಿನಿಂದ ಜನರು ಇದನ್ನು ಮುಟ್ಟದಾದರು. ದೇವರು ಕೊಟ್ಟದ್ದನ್ನು ದೈವವು ಕಚ್ಚಿಕೊಂಡು ಹೋಯಿತೆನ್ನುವಂತಾಗಿರುತ್ತದೆ.

ಬೆಣ್ಣೇಹಳ್ಳದ ಉಪ್ಪು ಪಟಿಕದಂತೆ ಹೊಳಪುಳ್ಳದ್ದಾಗಿರುತ್ತದೆ. ಸಮುದ್ರದ ಉಪ್ಪಿನಂತೆಯೇ ಹಳಹಳಕುಳ್ಳದ್ದಾಗಿ, ರುಚಿಯು ಸರ್ವೋತ್ಕೃಷ್ಟವಾಗಿರುತ್ತದೆ. ಕೆಲವು ವರ್ಷಗಳ ಹಿಂದೆ ಇದನ್ನು ಹಿಡಿದರೆ ತಿಂದರೆ ಶಿಕ್ಷೆ ಅಥವಾ ದಂಡವಾಗುವದೆಂದು ಸ್ವಪ್ನದಲ್ಲಿ ಸಹ ಬರದಂಥ ಕಾಲದಲ್ಲಿ ವಿಜಯದ ಸಂಪಾದಕರಿಗೆ ಇದರ ರುಚಿ ನೋಡುವ ಪ್ರಸಂಗ ಬಂದಿತ್ತು. ಆಗ ಕಾಯದೆಭಂಗವಿಲ್ಲದ್ದರಿಂದ, ಇದಕ್ಕೆ ಮಹತ್ವವಿರಲಿಲ್ಲ.

ಸರಕಾರದವರು ಈ ವಾರದಲ್ಲಿ ಒಂದು ಜಾಹೀರನಾಮೆಯನ್ನು ತೆಗೆದು, ಸರಕಾರದಿಂದ ಪೂರೈಸುವ ಉಪ್ಪೇ ಮನುಷ್ಯನ ಪ್ರಕೃತಿಗೆ ಆರೋಗ್ಯವಾದದ್ದು, ಉಳಿದದ್ದು ಅನಾರೋಗ್ಯವಾದದ್ದೆಂದು ಹೇಳಿದ್ದಾರೆ. ಇಂಗ್ರೇಜಿ ಉಪ್ಪು ಬರುವತನಕ ಜನರು ಅಲ್ಲಲ್ಲಿ ಹುಟ್ಟುತ್ತಿದ್ದಂಥ ಉಪ್ಪು ತಿಂದು, ಬೇನೆ ಹಚ್ಚಿಕೊಂಡು ಸಾಯುತ್ತಿದ್ದರೆಂದು ಬರೆದಿಟ್ಟಂತೆ ಈವರೆಗೆ ಪ್ರಮಾಣಗಳಿರುವದಿಲ್ಲ. ಜೇಮೂತ, ಬಕಾಸುರ, ಭೀಮಸೇನನಂಥ ಬಲಿಷ್ಠರು ಸಮುದ್ರದ ಉಪ್ಪು ತಿಂದೇ ಇಷ್ಟು ಬಲಿಷ್ಠರಾದರೆಂದು ಹೇಳಬೇಕೇ? ರೋಗದ ಕೋಳಿಯಾದರೆಂದು ಹೇಳಬೇಕೇ?

ಗೋವೆಯಲ್ಲಿ ಉಪ್ಪಿಗೆ ಕಂದಾಯವಿಲ್ಲ. ಕಾರೇಖಾನೆಯ ಸಂಸ್ಥಾನಗಳಲ್ಲಿಲ್ಲ. ಅಂದಬಳಿಕ ಇಂಗ್ರೇಜಿ ರಾಜ್ಯದಲ್ಲಿಯೇ ಈ ಪ್ರಮೃತಕಬಾಧೆ(?) ಏಕಿರಬೇಕು? ಸರಕಾರದ ಅಭಿಪ್ರಾಯದಂತೆ ಭೂಮಾತೆಯು ತನ್ನ ಉದರದಿಂದ ಕಕ್ಕಲಾತಿಯಿಂದ ಕೊಡುವ ಉಪ್ಪಿನಲ್ಲಿ ಪಾಶ್ಚಿಮಾತ್ಯ ಶಾಸ್ತ್ರೀಯ ಶೋಧನ ಪ್ರಕಾರ ಏನಾದರೂ ಕೊರತೆ ಕಂಡು ಬಂದರೆ- ಕೆಮಿಕಲ ಅನಲಾಯಿಜರಿಂದ ಆ ಕೊರತೆಯನ್ನು ಯಾವ ಪ್ರಮಾಣದಿಂದ ಯಾವ ರಸಾಯನ ಹಾಕಿ ಆರೋಗ್ಯಕರಮಾಡಬೇಕೆಂಬುದನ್ನು ಹೇಳಿದರಾಯಿತು. ಸ್ಲೇಗಿನ ಇನೋಕ್ಯುಲೇಶನ ಮಾಡಿಸಿಕೊಳ್ಳುವದನ್ನು ಜನರ ಇಚ್ಛೆಯ ಮೇಲೆ ಬಿಟ್ಟಂತೆ ಉಪ್ಪಿನ ವಿಚಾರವನ್ನೂ ಜನರಿಗೇ ಏಕೆ ಒಪ್ಪಿಸಬಾರದು?

ಯಮನೂರ ಜಾತ್ರೆಯ ಪಾಳಿಯಲ್ಲಿ ನೋಡಿರಿ. ಲಕ್ಷಾವಧಿ ಜನರು ಬೆಣ್ಣೇಹಳ್ಳದಲ್ಲಿ ಸ್ನಾನ ಮಾಡಿ, ಮೈಬಸಂತದ(?) ರೋಗಗಳನ್ನು ಕಳೆಕೊಳ್ಳುವರು. ರಾಜಾಬಾಗಸವಾರನಿಗಳ ಈ ನೀರಿನಲ್ಲಿಯೇ ಹೆಚ್ಚು ಪ್ರಭಾವವುಂಟು. ಸ್ನಾನದಿಂದ ರೋಗ ಹೋಗುವದು ಸಾಧ್ಯವಿದ್ದರೆ- ಇದರ ಉಪ್ಪನ್ನು ನೀರಲ್ಲಿ ಹಾಕಿ, ತಮ್ಮೂರಲ್ಲಿ ಸ್ನಾನ ಮಾಡಿದರೂ ಬೇನೆ ಹೋಗಬಹುದು.

ಯಾವ ಪದಾರ್ಥವು ಅನಾಯಾಸವಾಗಿ ಸಿಗುತ್ತದೆ, ಅದರ ಮೇಲೆ ರಾಜ್ಯಕರ್ತರ ಪ್ರತಿಬಂಧವೇಕೆ ಇರಬೇಕು? ಎಲ್ಲಿಯೂ ನೀರಿನ ಬೆಸಿಗೆ(?) ದ ಕರ ತಕ್ಕೊಳ್ಳುವದಿಲ್ಲ. ಅರ್ಥ ಶಾಸ್ತ್ರದ ಪ್ರಕಾರ ಹರಿಯುವ ಅಥವಾ ಕೆರೆ ಬಾವಿಯ ನೀರಿಗೆ ಬೆಲೆಯಿಲ್ಲ. ಅದನ್ನು ಮನೆಗೆ ತಂದು ಕೊಡುವ ಪಕ್ಷದಲ್ಲಿ ಅದಕ್ಕೆ ಬೆಲೆ ಬರುತ್ತದೆ. ಬೆಣ್ಣೇಹಳ್ಳದಲ್ಲಿ ಹರಿಯುವ ನೀರಿಗೆ ಬೆಲೆಯಿಲ್ಲ. ಅಂದಬಳಿಕ ಬೇಸಿಗೆಯಲ್ಲಿ ನೀರು ಸರಿಯುತ್ತಾ, ಬತ್ತುತ್ತಾ ಹಸಿಯಾದ ನೆಲವು ಒಣಗಿ ಆಗುವ ಉಪ್ಪಿಗೇಕೆ ಶಿಕ್ಷೆ ಮತ್ತು ದಂಡವಿರಬೇಕು? ರಾ. ಬ. ಕಂಬಳಿ ಅಥವಾ ರಾ. ಬ. ಪಾಟೀಲರು ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಪ್ರಶ್ನೆ ಮಾಡುವಂಥ ವಿಷಯವು.

ಚಿತಗಾಂಗದಲ್ಲಿ ಬಂಡಾಯ ಸ್ವರೂಪದ ದಂಗೆ.

——(೦)——

ಶ್ರೀ. ಸೇನಗುಪ್ತರ ಜನ್ಮಸ್ಥಳವಾದ ಚಿತಗಾಂಗದಲ್ಲಿ ಭಯಂಕರ ದಂಗೆಯಾಯಿತು. ಸುಮಾರು ಒಂದುನೂರು ಜನರು ಹೊಸ ಮಾದರಿಯ ಶಸ್ತ್ರ ಬಂದೂಕುಗಳನ್ನು ತಕ್ಕೊಂಡು, ರಾತ್ರಿ ಹತ್ತರ ಸಮಯದಲ್ಲಿ ಒಮ್ಮಿಂದೊಮ್ಮೆ ಬಂಡಾಯ ಸ್ವರೂಪದ ದಂಗೆ ಎಬ್ಬಿಸಿದರು. ಇವರು ಪೋಲೀಸರ ಬಂದೂಕು, ಮೋಟಾರ ಲಾರಿಗಳನ್ನು ಧ್ವಂಸ ಮಾಡಿದರು. ೩೦ ಮೈಲುಗಳ ತನಕ ತಾರನ್ನು ಹರಿದರು. ರೇಲ್ವೆಯ ಹಳಿಗಳನ್ನು ಕಿತ್ತಿ, ಉಗಿಬಂಡಿ ಕೆಡವಿದರು. ಟೆಲಿಫೋನದ ತಂತಿಗಳನ್ನು ಸುಟ್ಟರು. ದಂಗೆಯಲ್ಲಿ ಇಬ್ಬರು ಯುರೋಪಿಯನ್ನರು, ಇಬ್ಬರು ಸಿಪಾಯರು, ಮತ್ತು ಇಬ್ಬರು ಮೋಟಾರ ಡ್ರೈವ್ಹರರು ಕೊಲ್ಲಲ್ಪಟ್ಟರು. ಈ ಅನಾಹುತ ಮಾಡಿದ ನಂತರ ಇವರು ಗುಪ್ತ ಸೇರಿದರು. ಕೆಳರಸರು ಬಂಡಾಯವು ಭಯಂಕರ ಸ್ವರೂಪಧಾರಣ ಮಾಡುವದೆಂದು ದಂಡು ತರಿಸಿದರು. ಯುರೋಪಿಯನ್ನ ಹೆಂಗಸರು ಮತ್ತು ಹುಡುಗರನ್ನು ಬಂದರಕ್ಕೆ ತಂದು, ಹಡಗಗಳಲ್ಲಿ ಸುರಕ್ಷಿತವಾಗಿಟ್ಟರು.

ಸುಳ್ಳು ಸಾಕ್ಷಿ ಹೇಳಿದ್ದಕ್ಕೆ ಪಶ್ಚಾತ್ತಾಪ ಮತ್ತು ಬಾದಿಯ ಘಾರಣ.

—()(೦)()—

ಬೆಳಗಾವಿಯಲ್ಲಿ ಶ್ರೀ. ದಾತಾರರ ವಿರುದ್ಧ ಒಬ್ಬ ಜೇಡರವನು ಸುಳ್ಳು ಸಾಕ್ಷೀ ಹೇಳಿದನು. ಈ ತನ್ನ ಸಾಕ್ಷಿಯಿಂದ ಶ್ರೀ ದಾತಾರರು ತುರಂಗಕ್ಕೆ ಹೋದ ಬಗ್ಗೆ ಈತನು ಪಶ್ಚಾತ್ತಾಪಗೊಂಡು, ಮೈ ತುಂಬ ಖಾದೀ ಹಾಕಿಕೊಂಡು, ಅಲ್ಲಿ ಕೂಡಿದ್ದ ಒಂದು ಕಾಯದೆಭಂಗದ ಸಭೆಗೆ ಬಂದು, ತನ್ನ ತಪ್ಪು ಒಪ್ಪಿ, ಈ ಅಪರಾಧವನ್ನು ದೈವದವರು ಕ್ಷಮಿಸಬೇಕೆಂದು ಕೈಜೋಡಿಸಿ ಬೇಡಿಕೊಂಡನು. ಪೋಲೀಸರಿಗೆ ಈನಂತರ ಸಾಕ್ಷಿಗಳು ಬೇಕಾಗುತ್ತವೆ. ಆಗ ಅವರ ಬಲಿಯಲ್ಲಿ ಬೀಳದಂತೆ ಸಾಕ್ಷಿದಾರರಾಗತಕ್ಕವರು ಈ ಜೇಡನಿಂದ ಬುದ್ಧಿ ಕಲಿಯುವರೆಂದು ತಿಳಿಯುತ್ತೇವೆ.

ಯರವಡೆಗೆ ತಂದರು.

—(೦)—

ಸರದಾರ ಪಟೇಲ ಮತ್ತು ಬೇರೆ ೮೦ ಜನ ರಾಜಕೀಯ ಕೈದಿಗಳನ್ನು ಸಾಬರಮತಿಯಿಂದ ಸ್ಪೇಶಲ ಟ್ರೇನಿನಿಂದ ಯರವಡೆಗೆ ತಂದರು.

ಅಸೆಂಬ್ಲಿಯ ಅಧ್ಯಕ್ಷರ ರಾಜೀನಾಮೆ.

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ. ವಿಠ್ಠಲಭಾಯಿ ಪಟೇಲರವರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ರಾಜೀನಾಮೆಯ ಕಾರಣಗಳನ್ನು ಗುಪ್ತವಿಟ್ಟಿದ್ದಾರೆ. ಕೆಲವು ದಿವಸಗಳಲ್ಲಿ ಪ್ರಸಿದ್ಧಿಗೆ ತರುವರು. ಇವರು ಈಗ ಸಂಪೂರ್ಣ ಸ್ವತಂತ್ರರಾಗಿದ್ದು, ಗುಜರಾಥಕ್ಕೆ ಬಂದು, ಗಾಂಧಿಯವರ ಕೆಲಸವನ್ನು ಮುಂದೆ ಸಾಗಿಸುವರೆಂದು ಹೇಳಬೇಕಾಗಿಲ್ಲ.

ಪಟೇಲರ ರಾಜೀನಾಮೆಯಿಂದಾಗುವ ಬ್ರಹ್ಮಗೊಂದಲ.

ಸರಕಾರದವರದೆಲ್ಲ ಒಂದಾದರೆ-ಅಧ್ಯಕ್ಷರದೊಂದು ಬೇರೆ.

—(೦)—

ಶ್ರೀ. ವಿಠ್ಠಲಭಾಯಿ ಪಟೇಲರವರು ಅಸೆಂಬ್ಲಿ ಅಧ್ಯಕ್ಷಪದಕ್ಕೆ ರಾಜೀನಾಮೆ ಕೊಟ್ಟದ್ದು ಸಾಮಾನ್ಯಸಂಗತಿಯಾಗಲಿಲ್ಲ. ಅಮೇರಿಕೆಯ ಅಧ್ಯಕ್ಷರು ರಾಜೀನಾಮೆ ಕೊಡುವಷ್ಟು ಮಹತ್ವದ ಸಂಗತಿಯು. ಇವರು ರಾಜೀನಾಮೆಯ ಕಾರಣವನ್ನು ಗುಪ್ತವಾಗಿಟ್ಟಿದ್ದರೂ, ಅದರಲ್ಲಿ ಸರಕಾರದ ಆಡಳಿತೆಯ ದೋಷ ಮತ್ತು ಅನ್ಯಾಯಗಳು ತುಂಬಿರುತ್ತವೆಂದು ಸಹಜವಾಗಿ ಊಹಿಸಬಹುದು. ಶ್ರೀ. ಪಟೇಲರು ಸರಕಾರಕ್ಕೆ ಕೊಡುವ ಸರ್ಟಿಫಿಕೇಟು ಸುಂದರ. ಗವರ್ನರ-ಗವರ್ನರ ಜನರಲರ ಸರ್ಟಿಫಿಕೇಟು ಈ ಸರ್ಟಿಫಿಕೇಟಿನ ತಮ್ಮದೇ ಮೇಲ್ಗೈ ಮಾಡುತ್ತಾರೆ. ಈಗ ಹೊಸದಾದ ಕಾಯಿದೆಯ ಗಂಟು ಬಿದ್ದಂತಾಯಿತು.

ಶ್ರೀ. ಪಟೇಲರ ರಾಜೀನಾಮೆಯು ಜಗತ್ತಿನ ತುಂಬ ಅಲ್ಲೋಲಕಲ್ಲೋಲ ಮಾಡದಿರದು. ಈ ಗೊಂದಲದಲ್ಲಿ ಇವರ ಸ್ಥಳವನ್ನು ಆಕ್ರಮಿಸುವಂಥವನು ಸ್ವಾರ್ಥ ನೋಡಿದ-ಒಬ್ಬಿಬ್ಬರಿಗೆ ಸಂತೋಷವಾಗಿ ಗುರಿಯಾಗುವನು. ಸ್ವಾಭಿಮಾನಿಯಾದ ಯಾವ ಹಿಂದೂ ಗೃಹಸ್ಥನು ಉಮೇದುವಾರನಾಗಲಾರನು. ಅಳಿದ ಊರಿಗೆ ಉಳಿದವನೇ ಗೌಡನೆಂದು ಯಾವನೊಬ್ಬ ಆಯ್ದು ಮುಂದೆ ಬರುವನು ಅವನಿಗೆ ಈ ಪದದಲ್ಲಿ ಪಟೇಲರಷ್ಟು ಸಮರ್ಥತೆಯಿಂದ ಕೆಲಸಮಾಡುವಷ್ಟು ಪ್ರಶಸ್ತಿ ಇರುವುದುಂಟೇ ಎಂದು ತಿಳಿಯಬೇಕಾದದ್ದು ಅವಶ್ಯವು.

ನಾಯಿಯನ್ನು ರಿಪೋರ್ಟರ ತಾರದಿನ್ನು ಬಳಿಕ ಸಮಾಲೋಚನದಲ್ಲಿ ಅಸೆಂಬ್ಲಿಯನ್ನು ಕರೆಯಿಸುವ ಪ್ರಸಂಗವುಂಟು. ಆಗ ಅಧ್ಯಕ್ಷರ ಚುನಾವಣೆಯ ಬಳಿಕ, ಕಾಯಿದೆಭಂಗದಲ್ಲಿ ಪೌಜದಾರಿ ಮತ್ತು ಪೋಲೀಸ ಅಧಿಕಾರಿಗಳು ನಡೆಸಿದ ದಂಗೆಗಳ ಬಗ್ಗೆ ವಾದವಿವಾದವೂ ನಡೆಯುವದು. ಈ ವಿಷಯವಾಗಿ ಈಗಾಗಲೇ ಕೆಲ ಮೆಂಬರರು ಸೂಚನೆ ನೋಟೀಸು ಮತ್ತು ಠರಾವುಗಳನ್ನು ಕಳಿಸಿದ್ದಾರೆ. ಎಷ್ಟೇ ವಾದವಿವಾದವಾದರೂ ಪರಿಣಾಮವು ಹೊಳೆಯಲ್ಲಿ ಹುಣಿಸೆ ತೊಳೆದಂತಾಗುತ್ತದೆ. ಅಧ್ಯಕ್ಷರು ನೂರಸಲ್ಲರು ತಾವು ಬರೆದ ಕೆಲವು ಸಂಗತಿಗಳ ಬಗ್ಗೆ ಕೂಟದಲ್ಲಿ ಗಲ್ಲಿಗೆ ಹಾಕಿಬಿಟ್ಟರೆಂದು ಬರೆದದ್ದು ನಂಬುವ ಹಾಗಿದೆ. ಅದೇ ಪ್ರಕಾರ ಈ ವಾದವಿವಾದವಾಗುವದು. ಆದ್ದರಿಂದ ಕೈಲಾಗದವರಂತೆ ಅಲ್ಲಿ ಕುಳಿತುಕೊಂಡಿರುವ ಸಭಾಸದರು ರಾಜೀನಾಮೆ ಕೊಟ್ಟು, ಲೋಕಪಕ್ಷವನ್ನು ಸೇರಿದರೆ ದೇಶದ ನಿಜವಾದ ಹಿತವಾಗುವದಂತಾಗುತ್ತದೆ. ರಾಜೀನಾಮೆ ಕೊಡದಿದ್ದರೆ ಊರವರದೆಲ್ಲ ಒಂದಾದರೆ ಅಧ್ಯಕ್ಷರದೊಂದು ಬೇರೆ ಎಂಬಂತಾಗುತ್ತದೆ.

ರಾಷ್ಟ್ರಕೇಸರಿ ಕಾಯಿದೆಭಂಗದಲ್ಲಿ ಸೇರುವದು.

—(೦)—

ಅಧ್ಯಕ್ಷ ಪಟೇಲರ ರಾಜೀನಾಮೆಯ ಪತ್ರವು ಪ್ರಕಟವಾಗಿದೆ. ಯುರೋಪಿಯನ್ನರ ಹೊರತು ಇತರರು ತಮ್ಮ ಅವಹೇಳನೆ ಮಾಡಿದರು. ಲಗುಬಗೆ ನನಗೆ ತಾವು ಕೊಡುವರು. ಬ್ರಿಟಿಶ ರಾಜ್ಯಪದ್ಧತಿಯು ಹೊಲಸಿಟ್ಟು ತೋರಿದೆ. ಈ ರಾಜ್ಯಪದ್ಧತಿಯು ಅದಷ್ಟು ಬೇಗನೆ ನಾಶವಾದರೆ ನಿಜವಾದ ಪ್ರಜಾ ಹಿತವಾಗುವದು. ನನ್ನ ಜನರು ದೇಶಾಭಿಮಾನಿಗಳು ಸುರಂಗಕ್ಕೆ ಹೋಗುತ್ತಿರುವಾಗ ನಾನು ಅಧ್ಯಕ್ಷಪದದ ಖುರ್ಚಿಯಲ್ಲಿ ಕೂಡುವದು ಯುಕ್ತವಲ್ಲ. ಆದ್ದರಿಂದ ರಾಜೀನಾಮೆ ಕೊಟ್ಟು, ಸ್ವಾತಂತ್ರ್ಯ ಯುದ್ಧದಲ್ಲಿ ಸೇರುವೆನು. ಇಂದು ನಿವಡಣದಲ್ಲಿ ನಾಗರಿಕರು ಅಧ್ಯಕ್ಷರ ಮೆರವಣಿಗೆ ತೆಗೆಯುವರು. ಪರದೇಶೀ ಬಟ್ಟೆಗೆ ಬಹಿಷ್ಕಾರ ಹಾಕಿ, ಖಾದೀ ಧರಿಸಿ, ಕಾಂಗ್ರೆಸದ ಯಶ ಚಿಂತನೆ ಮಾಡಿರೆಂದು ಶ್ರೀ. ಪಟೇಲರ ಸಂದೇಶವಿರುತ್ತದೆ.

ಮೌಲಾನಾ ಮಹಮ್ಮದಲ್ಲಿಯವರ ಅತ್ಯುಚಿತ ಹೇಳಿಕೆಯನ್ನು ಕೇಳಿರಿ.

—(೦)—

ನನು ರಾತ್ರಿಯಲ್ಲಿ ಗನದ್ದ ನಿದ್ದೆ ಹತ್ತಿದಾಗ ದಂಡು ಸಂಚಿನ ಮಸಲತ್ತು ಮಾಡುತ್ತಿದ್ದರೆಂದು ಆರೋಪ ಹೊತ್ತು, ಎರಡು ವರ್ಷ ಸುರಂಗವಾಸಿಯಾಗಿದ್ದ ಅಲ್ಲೀ ಬಂಧುಗಳು ಈಗ ಬ್ರಿಟಿಶ ಅಧಿಕಾರಿಗಳ ಕೃಪೆಗೊಳಗಾಗಿದ್ದಾರೆ. ಇವರು ಈಗ ಮಹಾತ್ಮರನ್ನು ತೀರಾ ಹಳಿಯುವರು. ಇವರು ಹಿಂದೂ ರಾಜ್ಯ ಸ್ಥಾಪನೆಮಾಡಿ, ಮುಸಲಮಾನರನ್ನು ಮೂಲೆಗೊತ್ತುತ್ತಾರೆಂದು ವ್ಯಾಖ್ಯಾನ ಕೊಡುವರು. ಈ ಸತ್ಯಾಗ್ರಹ ಚಳವಳಿಯಲ್ಲಿ ಮುಸಲಮಾನರು ಸೇರಬಾರದೆಂದು ಜಾಹೀರ ಸಭೆ ಕೂಡಿಸಿ, ವ್ಯಾಖ್ಯಾನ ಕೊಡುವರು. ಮೌಲಾನಾ ಸಾಹೇಬರ ಈ ಭೇದನೀತಿಯು ಆಳರಸರಿಗೆ "ರೋಗಿ ಬಯಸಿದ್ದೂ ವೈದ್ಯ ಹೇಳಿದ್ದೂ ಒಂದೇ" ಎಂಬಂತಾಗಿರುತ್ತದೆ. ಮೌಲಾನಾಸಾಹೇಬರು ಈ ಪರಿಯಾಗಿ ಕಾಂಗ್ರೆಸವನ್ನು ಹಳಿದು ಹಳಿದು, ಆಳರಸರ ಗುಣವನ್ನು ತಮ್ಮ ಕಿಸೆಯಲ್ಲಿ ಹಾಕಿಕೊಳ್ಳುವದೇನು ಆಶ್ಚರ್ಯ! ಅಂತೇ ಗವರ್ನರಸಾಹೇಬರು ಇವರ ಮೇಲೆ ಪ್ರಸನ್ನರಾಗಿ ಇವರಿಗೆ ದರ್ಶನಲಾಭ ಕೊಟ್ಟರು. ಈ ಸಂಧಿಯಲ್ಲಿ ಇವರು ಬಹುವಾಗಿ ಉಬ್ಬಿ ತಮಗೆ ರಾವ್ಸಾಹೇಬ ಪದವಿ ಆಮಂತ್ರಣ ಬಂದರೆ ಆನಂದದಿಂದ ಸ್ವೀಕರಿಸಿ ಹೋಗುವಂತೆ ಆತ್ಮಸ್ತುತಿ ಮಾಡಿಕೊಂಡಿದ್ದಾರೆ. ಆದರೆ ಈ ಸ್ತುತಿಯಲ್ಲಿ ಬ್ರಿಟಿಶರ ವಿಷಯವಾದ ಅವಿಶ್ವಾಸವನ್ನೂ ತೋರಿದ್ದಾರೆ. ಅಲ್ಲಿ ತಮ್ಮಂತೆ ಪರಜಾತಿಯ ಸ್ವರಾಜ್ಯ ದೊರೆಯದಿದ್ದರೆ ಹಿಂದುಸ್ಥಾನಕ್ಕೆ ಬಂದು, ತಾವೂ ಕಾಯಿದೆಭಂಗ ಮಾಡುವೆವು. ಆಗ ಹಿಂದೂ ಮುಸಲಮಾನರ ಮಧ್ಯದಲ್ಲಿ ಇವರ ದೃಷ್ಟಿಯಿಂದ ಹಲವು ಮಾರ್ಗಗಳಿರುವವು ಮೌಲಾನಾಸಾಹೇಬರು ಅದರಿಂದ ದೂರ. ಈಗ ಒಂದಂಥ ಒಂಗಾರದಂಥ ಹೊತ್ತು ಕಳೆಯದು ತಮ್ಮದೊಂದು ಸ್ವತಂತ್ರ ಸತ್ಯಾಗ್ರಹ ಹೂಡುವವು ಕೇವಲ ಹುಚ್ಚುತನವಾಗುತ್ತದೆ. ೨೫ ಕೋಟಿ ಹಿಂದೂ ಜನರು ತಮ್ಮನ್ನು ಕಾಡಿಕೊಳ್ಳದಿದ್ದರೆ ಏಳು ಕೋಟಿ ಮುಸಲಮಾನರು ಮಾಡುವದೇನು? ಇವರ ಕೈಚಳಕದ ದೈನ್ಯವನ್ನೆ ಮತ್ತೆ ನೀರನ್ನು ಬಿಟ್ಟು ಮುಂದಿನ ಪೀಳಿಗೆ ಅಯೋಗ್ಯರಂತಾಗಿರುತ್ತದೆ. ಮಹಾತ್ಮರ ಬಂಧುವಾತ್ಸಲ್ಯ—

ವೃದ್ಧರಾದ ಬಂಧುಗಳು ಮಹಾತ್ಮರ ಕಾಲದಿಂದ ಪ್ರೀತಿವಾತ್ಸಲ್ಯದಿಂದ ನಡೆಯುತ್ತಿದ್ದರು. ಹಿಂದಿನ ಅಧಿವೇಶನದಲ್ಲಿ ಲಾರ್ಡ ರೀಡಿಂಗಸಾಹೇಬರು ಮಹಾತ್ಮರ ಕಡೆ ಒಡಂಬಡಿಕೆಗೆ ಬಂದಾಗ ಮೊದಲು ಅಲ್ಲೀ ಬಂಧುಗಳನ್ನು ಬಂಧಮುಕ್ತ ಮಾಡಿರಿ ಅನಂತರ ಸಂಭಾಷಣೆ ಎಂದು ಉತ್ತರ ಕೊಟ್ಟದ್ದನ್ನು ಇವರು ಮರೆತಿರಲಿಕ್ಕಿಲ್ಲ. ಲಾರ್ಡ ರೀಡಿಂಗಸಾಹೇಬರು ಇವರನ್ನು ಬಿಡದ್ದರಿಂದ, ಅಗಿನ ರಾಜೀಸಂಧಾನ ಹೋಯಿತು. ಈ ವಿಷಯವಾಗಿ ಎಷ್ಟೋ ಜನರು ಮಹಾತ್ಮರಿಗೆ ದೂಷಣೆಗಳನ್ನು ಕೊಡುತ್ತಿದ್ದಾರೆ. ತಮ್ಮಲ್ಲಿ ಇಷ್ಟು ಪ್ರೀತಿ ಮತ್ತು ವಿಶ್ವಾಸವುಳ್ಳಂಥ ಮಹಾತ್ಮರನ್ನು ಈಗ ನಡು ನೀರಿನಲ್ಲಿ ಕೈಬಿಟ್ಟಂತೆ ಮಾಡಿ, ಜನರ ವಿರ್ಗನೋತ್ಸಾಹವಾಗುವದು ಹೀನಗೇಡಿತನವಾಗುತ್ತದೆಂದು ಯಾರೊಬ್ಬರು ಹೇಳಬಹುದು.

ಮಹಾತ್ಮರು ಸ್ವತಃ ಸೇಂದಿಯ ಗಿಡ ಕಡಿದರು.

ಮಹಾತ್ಮರು ಬೋರಸದ ಎಂಬ ಗ್ರಾಮಕ್ಕೆ ಹೋಗಿ, ಸ್ವತಃ ಕೊಡ್ಲಿಯಿಂದ ಒಂದು ತಾಡಿನ ಗಿಡವನ್ನು ಕಡಿದರು. ಅಲ್ಲಿಯ ಜಮೀನದಾರರು ತಂತಮ್ಮ ಹೊಲದ ಗಿಡಗಳನ್ನು ದೊಡ್ಡ ಸಹಾಯ ಕಡಿದು ಹಾಕಲು ಮಹಾತ್ಮರಿಗೆ ಅರ್ಪಣ ಮಾಡಿದ್ದಾರೆ. ವಿಠ್ಠಲದಾಸ ಜೆಂಬೋರ್ ಸತ್ಯಾಗ್ರಹಿಗಳು ತಾಡಿನ ಗಿಡ ಕಡಿಯುತ್ತಿದ್ದಾಗ, ಪೋಲೀಸರು ತಾವು ಗಿಡಬಿದ್ದು ಮಡಿದರು. ಈ ಗಿಡ ಮರಣಕ್ಕಾಗಿ ನವಸರಿಯವರು ಹರತಾಳ ಮಾಡಿ, ದುಃಖ ಪ್ರದರ್ಶನ ಮಾಡಿದರು. ನಿನ್ನ ಮಗನು ಸತ್ಯಾಗ್ರಹ ಸಂಗ್ರಾಮದಲ್ಲಿ ಸತ್ತು, ವೀರಸ್ವರ್ಗ ಹೊಂದಿದ್ದು ನಿನ್ನ ಪುಣ್ಯವೇ ಎಂದು ಮಹಾತ್ಮರು ಈತನ ತಾಯಿಗೆ ಪತ್ರ ಬರೆದು, ಆಕೆಯ ಸಮಾಧಾನ ಮಾಡಿದ್ದಾರೆ.

ತಾಡಿನಗಿಡಗಳ ಮೂಲೋತ್ಪಾಟನ.

ಮಹಾತ್ಮರು ಬೋರಸದ ಗ್ರಾಮಕ್ಕೆ ಹೋದರು. ಅಲ್ಲಿ ತಾಡಿನ ಗಿಡಗಳ ಬನವೇ ಇರುವದು. ಈ ಬನವು ನಾಶವಾಗಬೇಕೆಂಬುದೇ ಮಹಾತ್ಮರ ಮನೋದಯವು. ಅಲ್ಲಿ ಇವರು ಭಾಷಣ ಮಾಡುವಾಗ-

ನಾನು ಈ ಊರಿಗೆ ಸರಕಸ, ನಾಟಕ, ಸಿನೇಮಾ ನೋಡಲಿಕ್ಕೆ ಬಂದಿಲ್ಲ. ಜನರ ವ್ಯಸನ ಕಳೆಯಲಿಕ್ಕೆ ಬಂದಿದ್ದೇನೆ. ಇಲ್ಲಿ ಮತ್ತು ಬೇರೆ ಗ್ರಾಮಗಳ ಗಿಡಗಳನ್ನು ಬೇರು ಸಹಿತ ಕಿತ್ತಿಹಾಕಬೇಕಾಗಿದೆ. ನೀವೆಲ್ಲರೂ ಅವುಗಳ ಮೂಲೋತ್ಪಾಟನ ಮಾಡಿರಿ

ಎಂಬದಾಗಿ ಭಾಷಣ ಮಾಡಲು-ಒಬ್ಬನು ಎದ್ದು ನಿಂತು ನನ್ನ ಹೊಲದಲ್ಲಿ ೪೦೦ ಗಿಡಗಳಿವೆ. ಅವನ್ನು ಕಡಿದು ಹಾಕಲಿಕ್ಕೆ ನಾನು ಒಪ್ಪುತ್ತೇನೆಂದು ಹೇಳಿದನು.

ಉಪ್ಪಿನ ಕಾಯಿದೆಭಂಗ ಗೆದ್ದಿತು. ವಿಲಾಯತಿ ಅರಿವೆಯ ಪಿಕೇಟಿಂಗ ಮುಂದಾಯಿತು.

ಕರಾಚಿಯಲ್ಲಿ ಪೇಟೆಯ ತುಂಬ ಎಲ್ಲಿ ಬೇಕಾದಲ್ಲಿ ನಾಲ್ಕಾಣೆಗೆ ಒಂದು ಮಣ ಮತ್ತು ಬಿಲ್ಲಿಗೆ ಸೇರಿನಂತೆ ಉಪ್ಪು ಮಾರುತ್ತಿರುವದರಿಂದ, ಅಲ್ಲಿ ಉಪ್ಪಿನ ಕಾಯಿದೆಭಂಗ ಮಾಡುವ ಅವಶ್ಯಕತೆಯು ಉಳಿಯಲಿಲ್ಲ. ಆದ್ದರಿಂದ ಸ್ವಾಗರಿಕರು ಉಪ್ಪಿನ ಉಸಾಬರೀ ಬಿಟ್ಟು, ವಿಲಾಯತಿ ಅರಿವೆ ಅಂಗಡಿಗಳ ಮುಂದೆ ಪಿಕೆಟಿಂಗವನ್ನು ಪ್ರಾರಂಭಿಸಿಕ್ಕೆ ಎಂದಿದ್ದಾರೆ.

ಗಂಡ ಬಿಟ್ಟರೂ ಗಣಾಚಾರಿ ಬಿಡನು.

ಕರಾಚಿಯಲ್ಲಿ ಅಂಗಡಿಗಳಲ್ಲಿ ನಿರ್ಭಯದಿಂದ ಕಾಯಿದೆಭಂಗದ ಉಪ್ಪು ಮಾರುತ್ತಿದ್ದಾರಷ್ಟೇ; ಈ ಉಪ್ಪು ಅನಾರೋಗ್ಯವಾದದ್ದಿದೆ. ಇದನ್ನು ತಿಂದವರು ಹೊಟ್ಟೆಗೆಟ್ಟು, ಆಸ್ಪತ್ರಿಗೆ ಬಂದು ಚಿಕಿತ್ಸೆ ಹೊಂದುತ್ತಿದ್ದಾರೆ. ಆದ್ದರಿಂದ ಸಮುದ್ರದ ಕೊಂಡಗಳಲ್ಲಿ ಬಿದ್ದ ಉಪ್ಪನ್ನು ತಿನ್ನಬಾರದು ಮಾರಬೇಡಿರಿ ಎಂದು ಡಂಗುರ ಸಾರುತ್ತಿದ್ದಾರೆ. ಇದನ್ನು ಸುಳ್ಳುಮಾಡಬೇಕೆಂದು ಆಲ್ಲಿಯ ಕ್ಯಾನಿಟರಿ ಆಫೀಸರರು ಜಾಹೀರನಾಮೆಯನ್ನು ಹಚ್ಚಿರುತ್ತಾರೆ.

ರಾಜ್ಯಕರ್ತರೇ ನಮ್ಮನ್ನು ಹಿಡಿಯಲಿಕ್ಕೆ ಬನ್ನಿರಿ

ನಾವು ಈ ತಿಂಗಳ ೩೦ನೇ ತಾರೀಖಿನ ಶುಕ್ರವಾರ ದಿನ ಕಾಯಿದೆಭಂಗ ಮಾಡಿ, ಉಪ್ಪು ಮಾರುತ್ತೇವೆ. ಮಾಡುತ್ತೇವೆ. ಆಗ ನೀವು ನಮ್ಮನ್ನು ಹಿಡಿಯಲಿಕ್ಕೆ ಅಗತ್ಯವಾಗಿ ಬನ್ನಿರೆಂದು ಪುಣೆಯ ಮರಾಠಾ ಪತ್ರದ ಸಂಪಾದಕರಾದ ಶ್ರೀ. ಡಿ. ವಿ. ಗೋಖಲೆಯವರು ಮುಂದಾಗಿ ಸರಕಾರೀ ಉದ್ಯೋಗಸ್ಥರಿಗೆ ಆಮಂತ್ರಣ ಕಳಿಸಿದ್ದಾರೆ.

ಭೋಪಟಕರರ ದಸ್ತಗಿರಿ

ಪುಣೆಯಲ್ಲಿ ಶ್ರೀ. ಭೋಪಟಕರರನ್ನು ಹಿಡಿದದ್ದು ವಿಚಾರಣೆಯು ಇಂದು ಇರುತ್ತದೆ. ಇವರು ಕೋರ್ಟಿನಲ್ಲಿ ಕೊಡುವಾಗ ಕಾರಣ ನಿಮ್ಮ ಹಿಂದೆಯೇ ಬರುವೆನೆಂದು ಶ್ರೀ ಕೇಳಕರರು ಉದ್ಗಾರ ತೆಗೆದಿದ್ದಾರೆ.

ಇದೇ ಅರಕಾಲದಲ್ಲಿ ಪೋಲೀಸರಿಗೆ ಬಂದ ಪೀಕಲಾಟ.

ಅರಕಾಲವು ಉಪ್ಪಿನ ಜಿಲ್ಲೆಯ ಅಂಕೋಲೆ ಯಾಗಿದೆ. ಅಲ್ಲಿ ಬಂದೋಬಸ್ತಿಗೂ, ಸತ್ಯಾಗ್ರಹಿಗಳನ್ನು ಹಿಡಿಯಲೂ ಪೋಲೀಸರು ಒಂದಿದ್ದಾರೆ ಊಟಕ್ಕೆ ಒಬ್ಬನೂ ಇವರಿಗೆ ಇಳಕೊಳ್ಳಲು ಮನೆ ಕೊಡಲಿಲ್ಲ. ಫೌಜದಾರಸಾಹೇಬರು ಶ್ರೀಮಂತರಂತೆ ಮಲಗಲಿಕ್ಕೆ ಮುಂಚಬೇಡಿದರು. ಒಬ್ಬನೂ ಮಂಚ ಕೊಡಲಿಲ್ಲ. ಇವರೆಲ್ಲರೂ ಉಸುಕು ಹಾಸಿಕೊಂಡು ಆಕಾಶ ಹೊತ್ತುಕೊಂಡು ದಿನಗಳೆಯುತ್ತಾರೆ.

ರತ್ನಾಗಿರಿಯಲ್ಲಿ ಸಂಪು! ಪೋಲೀಸರಿಗೇನೂ ಕೊಡತಕ್ಕದ್ದಲ್ಲ.

ರತ್ನಾಗಿರಿಯ ಅಂಗಡಿಕಾರರು ಒಂದು ಕಮೀಟಿ ನೇಮಿಸಿ ಪೋಲೀಸರಿಗೆ ರೊಕ್ಕ ಕೊಟ್ಟರೂ ಯಾವ ಪದಾರ್ಥವನ್ನೂ ಕೊಡತಕ್ಕದ್ದಿಲ್ಲೆಂದು ಕಟ್ಟು ಮಾಡಿದ್ದಾರೆ. ಯಾವನಾದರೂ ಈ ಕಟ್ಟಳೆಯ ವಿರುದ್ಧ ನಡೆದರೆ ಅವನಿಗೆ ೫೦ ರೂಪಾಯಿ ದಂಡ ಕಟ್ಟುವರು. ಅಕ್ಕಿ, ಬೇಳೆ, ಉಪ್ಪು, ಮೆಣಸಿನಕಾಯಿ, ದೀಪದ ಕಡ್ಡಿಗೆ, ಬೀಡಿ ಸಹ ಎಷ್ಟು ಆಲ್ಪವಿರೆದರೂ ಕೊಡತಕ್ಕದ್ದಲ್ಲ.

ಅಬಕಾರೀ ಕಮೀಶ್ನರರಿಗೆ ಕುಡಿಯಲಿಕ್ಕೆ ನೀರು ಸಿಗಲಿಲ್ಲ. ಸಂಕಟ ಬಂದಾಗ, ವೆಂಕಟರಮಣ

ಗುಜರಾಥದ ಒರ್ವ ಅಕ್ಟಿಂಗ ಅಬಕಾರೀ ಕಮೀಶ್ನರರಾದ ಮಿ ಪ್ಲೇಚರಸಾಹೇಬರು ತಮ್ಮ ಪ್ರವಾಸದಲ್ಲಿ ಕುಡಿಯಲಿಕ್ಕೆ ನೀರು ಕೂಡ ಸಿಗದೆ, ಸ್ವಸ್ಥಾನಕ್ಕೆ ಗಚ್ಚಹೇಳಿಸಿದರು. ಊರಲ್ಲಿ ಎಲ್ಲಿಯೂ ನೀರು ಸಿಗದ್ದರಿಂದ, ಊರ ಹೊರಗೆ ಹೊಲಗೇರಿಗೆ ಹೋಗಿ, ಒಬ್ಬ ಹೊಲೆಯನಿಗೆ ನೀರು ಕೇಳಿದರು ಕೇಳುವಾಗ "ಅಪ್ಪಾ ನನಗೆ ಕುಡಿಯಲಿಕ್ಕೆ ಗುಟುಕು ನೀರು ಕೊಡು, ನನ್ನ ತಲೆ ಸೀಳಿ ನೋಡು, ನನ್ನ ಮತ್ತು ನಿನ್ನ ರಕ್ತದಲ್ಲಿ ಮನುಷ್ಯನೆಂಬ ದೃಷ್ಟಿಯಿಂದ ಏನಾದರೂ ಭೇದವುಂಟೇ? ಎಂದು ದೈನ್ಯದಿಂದ ಬೇಡಿಕೊಂಡರು. ತಮಗೆ ಬಹಿಷ್ಕಾರವಿರದ ಕಾಲದಲ್ಲಿ ಇದೇ ಸಾಹೇಬರು ತಮಗೆ ನೀರು ತಂದು ಕೊಡುವದಿಲ್ಲೆಂದು ಯಾರಾದರೂ ಹೇಳಿದ್ದರೆ ಈ ವೇದಾಂತದ ಬದಲಾಗಿ, ಅವನನ್ನು ಗಜವು ನಿಲ್ಲಿಸುತ್ತಿದ್ದರೆಂದು ಹೇಳಬೇಕಾಗಿಲ್ಲ. ಸಂಕಟ ಬಂದಾಗ ವೆಂಕಟರಮಣ!!!

ಆಜ್ಞೆ ಮಾಡಿದ ಪಾಪಕ್ಕಾಗಿ ಮೊಮ್ಮಗನು ಪ್ರಾಯಶ್ಚಿತ್ತ ತಕ್ಕೊಂಡನು.

ಬಾಗಲಕೋಟದಲ್ಲಿ ಶ್ರೀ ಶೇಟ ಗೋವಿಂದದಾಸರು ಹೆಸರಾದ ಶ್ರೀಮಂತರಾಗಿದ್ದಾರೆ. ಇವರು ಅಗರ್ಭ ಶ್ರೀಮಂತರಾದರೂ, ಶ್ರೀ. ಜಮುನಾಲಾಲ ಬಜಾಜರಂತೆ ಪ್ರತಿಯೊಂದು ರಾಜಕೀಯ ಚಳವಳಿಯಲ್ಲಿ ಮುಂದಾಗುವರು. ಇವರ ಅಜ್ಜ ಗೋವಿಂದದಾಸರು ಗದರದ ಬಂಡಾಯದಲ್ಲಿ ಇಂಗ್ಲಿಷ ಸರಕಾರಕ್ಕೆ ತನಕನಕವಾಗಿ ಸಹಾಯ ಮಾಡಿದರು ಇದಕ್ಕಾಗಿ ಸರಕಾರದವರು ಇವರಿಗೆ ರಾಜಾ ಎಂಬ ಪದವಿ ಕೊಟ್ಟರು. ಈ ರಾಜಾ ಶೇಟ ಗೋವಿಂದದಾಸ ಮೊಮ್ಮಕ್ಕಳಾದ ಸದ್ಯದ ರಾಜಾ ಶೇಟ ಗೋವಿಂದದಾಸರು ತಮ್ಮ ಅಜ್ಜನು ಇಂಗ್ಲಿಷ ಸರಕಾರಕ್ಕೆ ಸಹಾಯ ಮಾಡಿ, ಹಿಂದುಸ್ಥಾನವನ್ನು ಪಾರತಂತ್ರ್ಯದಲ್ಲಿ ಹಾಕಿದ್ದರ ಪಾಪದ ಸಂಪೂರ್ಣ ಪ್ರಾಯಶ್ಚಿತ್ತ ತಕ್ಕೊಳ್ಳಲು-ಪ್ರಸ್ತುತದ ಚಳವಳಿಯಲ್ಲಿ ಧುಮುಕಿದ್ದಾರೆ. ಇವರು ಉಪ್ಪು ಮಾಡುವದಿಲ್ಲ. ಶ್ರೀ ಗೋನಗನ್ನಾರಂತೆ ಸರಕಾರದವರು ಪ್ರತಿಬಂಧಿಸಿದ ಕೂಡಿದ ಪುಸ್ತಕಗಳ ಮತ್ತಾದ ಪುಟಗಳನ್ನು ಮುದ್ರಿಸಿ, ಜಾಹೀರ ಸಭೆಯಲ್ಲಿ ಓದುವರು. ಹನ್ನೆರಡು ಸಾವಿರ ಜನ ಸಭೆ ಕೂಡಿದಾಗ ಭಾರತವು ಅಂಗ್ರೇಜಿ ರಾಜ್ಯ ಮತ್ತು ದೇಶಭಕ್ತ ಎಂಬ ಪುಸ್ತಕಗಳಲ್ಲಿಯ ಪುಟಗಳನ್ನು ಓದಿದರು. ಮತ್ತು ಪ್ರತಿಯೊಂದು ವಾಕ್ಯವನ್ನು ಜನರಿಂದ ಅನಿಸಿದರು. ಇದೇ ಪ್ರಕಾರ ಸಾವಿರಾರು ಜನ ಸ್ವಯಂಸೇವಕರು ಬೀದಿ ಬೀದಿಗೆ ನಿಂತು ಇವನ್ನು ಓದಿ, ಕಾಯಿದೆಭಂಗ ಮಾಡುವ ದೊಡ್ಡ ಸಿದ್ಧತೆ ಮಾಡಿದ್ದಾರೆ.

ಚಿಕ್ಕಜಾಜೂರಲ್ಲಿ ಹರತಾಳ.

ಹಿರೆಕೇರೂರ ತಾಲೂಕ ಚಿಕ್ಕಜಾಜೂರ ಪಂಡಿತ ಜವ್ಹೇರಲಾಲರನ್ನು ಹಿಡಿದ ವರ್ತಮಾನ ತಿಳಿದ ಕೂಡಲೆ ಊರೊಳಗಿನ ಎಲ್ಲ ವ್ಯಾಪಾರ ಒಂದಾಯಿತು. ಇದು ಸಾಧಾರಣ ಗ್ರಾಮವಾದರೂ ಇಂದು ಸಂತೆಯು. ಸಂತೆಗೆ ಬಂದವರು ಗಿಡ ಹಚ್ಚಲಿಲ್ಲ. ಜನರು ಒಂದು ಕಾಸಿನ ಪದಾರ್ಥ ಕೊಳ್ಳಲಿಲ್ಲ. ಪ್ರಾಯ ಜನರು ರಾಷ್ಟ್ರೀಯ ನಿಶಾನೆ ಹಿಡಕೊಂಡು ಜಾಥಾ ಮುಖ ಹೊರಡದಿನ ಜಯಘೋಷ ಮಾಡುತ್ತಾ ಮೆರವಣಿಗೆ ಬಿಟ್ಟರು.

-:ಶಾಂತಿ ಸಂಗ್ರಾಮ:-

ಅಂಕೋಲೆಯವರ ಉಪ್ಪಿನ ಕಾಯದೆಭಂಗ.

ಹೆಣ್ಣುಮಕ್ಕಳ ಮೇಲು ಪಂಕ್ತಿ

ವಿಜಯಕ್ಕೆ ಬಂದ ಸ್ಪೇಶಲ್ ಸುದ್ದಿಯು.

ಈ ದಿವ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ನಗೆ ಎಚ್ಚರವಾಯಿತು. ಕಡಲ ಸಮುದ್ರದ ಕಡೆಯಿಂದ ಎರಡು ಬಂದೂಕಿನ ಸಪ್ಪಳ ಕೇಳಿದ ಹಾಗಾಯಿತು. ಹಾಗೆಯೇ ಇನ್ನೊಂದು ಅರ್ಧ ತಾಸು ಕಳೆದ ನಂತರ ಮೂರು ಬಾರಿಯೂ ಮತ್ತೊಂದು ತಾಸಿನ ನಂತರ ನಾಲ್ಕು ಬಾರಿಯೂ ಇನ್ನು ಕೇಳಿಸಿತು. ಈ ಬೆಳಿಗ್ಗೆ ಅಂಕೋಲೆಯ ಜನರೆಲ್ಲ ಸತ್ಯಾಗ್ರಹಕ್ಕಾಗಿ ಸಿದ್ಧರಾಗಿದ್ದಾರೆಂದು ಕೇಳಿ ಸರಕಾರದವರ ಎದೆಯು ಕ್ರಮವಿರಬೇಕೆಂದು ಊಹಿಸಿಕೊಂಡೆನು. ಆದರೆ ಅಂಕೋಲೆಯ ಜನರ ಉತ್ಸಾಹವನ್ನು ಮೂರು ನಾಲ್ಕು ದಿನಗಳಿಂದ ನೋಡುತ್ತಿದ್ದೆನಾದ್ದರಿಂದ ಇಂತಹ ಪೊಳ್ಳು ಬೆದರಿಕೆಗಳಿಗೆ ಇವರು ಹೆದರುವವರಲ್ಲವೆಂದು ಮನಸ್ಸಿನಲ್ಲಿಯೇ ಅಂದುಕೊಂಡೆನು. ಅದು ನಿಜವಾಯಿತು.

ಬೆಳಗಿನ ಕಪ್ಪು ಹರಿಯುವ ಹೊತ್ತಿಗೆ ಸರಿಯಾಗಿ ಕಿಬಿದಿಂದ ಸ್ವಯಂಸೇವಕರು ಸಿದ್ಧರಾಗಿ ಹೊರಟು ಊರ ಬೀದಿಗಳಲ್ಲಿ ಅಲ್ಲಲ್ಲಿ ನಿಂತು ಜನರೆಲ್ಲರೂ ಕ್ರಮದಿಂದಲೂ ಶಾಂತರೀತಿಯಿಂದಲೂ ಸಮುದ್ರದ ದಂಡೆಗೆ ಬರಬೇಕೆಂದು ಹೇಳುತ್ತಿದ್ದರು. ಇನ್ನು ಕೆಲವು ಕಚೇರಿಯ ಮೈದಾನದಲ್ಲಿ ಅಷ್ಟರಲ್ಲಿಯೇ ಸೇರಿದ್ದ ಸಾವಿರಾರು ಜನ ಹೆಂಗಸರು, ಗಂಡಸರು, ಹುಡುಗ, ಹುಡುಗಿಯರನ್ನು ಕರೆದುಕೊಂಡು ಸಮುದ್ರದ ಕಡೆಗೆ ಶಿಸ್ತಿನಿಂದ ಜಯಘೋಷ ಮಾಡುತ್ತ ಹೊರಟರು.

ಹಿಂದಿನವರು ಹೋಗ ಹೋಗ ಮುಂದೆ ಗುಂಪು ಬೆಳೆಯುತ್ತ ಹೋಯಿತು. ಎರಡು ಮಂದಿ ಮಾಡಿಕೊಂಡು ಎರಡು ಕಡೆಗೆ ಹೋದವರು, ತಮ್ಮ ತಮ್ಮ ಬಟ್ಟೆಗಳಲ್ಲಿಯೂ ಕೈ ವಸ್ತ್ರಗಳಲ್ಲಿಯೂ ಮಡಕೆ ಕಂಚಿಗೆಗಳಲ್ಲಿಯೂ ಸಮುದ್ರದ ನೀರನ್ನು ಉಪ್ಪಿನ ಮಣ್ಣನ್ನೂ ಇಲ್ಲವೆ ಹೆಪ್ಪುಗಟ್ಟಿದ್ದ ಹರಳುಪ್ಪನ್ನೂ ತೆಗೆದುಕೊಂಡು ಎಂಟು ಎಂಟೂವರೆ ಗಂಟೆಯಲ್ಲಿ ತಿರುಗಿ ಬಂದರು.

ಅವರು ಬರುವ ಆ ನೋಟವನ್ನು ಬಾಯಿಯಿಂದ ಶಿಸ್ತಿನಲ್ಲಿ ವರ್ಣಿಸುವದು ಬಲು ಕಷ್ಟವಾಗಿತ್ತು. ಎಲ್ಲಕ್ಕೂ ಮುಂದೆ ವಾದ್ಯ ಬಜಂತ್ರಿಗಳು, ನಂತರ ಬಾವುಟಗಳನ್ನು ಹಿಡಿದವರು, ನಂತರ ಬುಟ್ಟಿಗಳನ್ನು ತಲೆಯಮೇಲೆ ಹೊತ್ತು ಕಯ್ಯಲ್ಲಿ ಚೀಲಗಳನ್ನೂ, ಮಡಕೆ, ಕಂಚಿಗೆ, ಲೋಟಗಳನ್ನು ಹಿಡಿದು ಮೆರವಣಿಗೆ ಗಂಟುಗಳನ್ನು ಹಾಕಿದ ಮುದುಕ, ಮುದುಕಿಯರು ಮಕ್ಕಳೊತ್ತಿರ ತಾಯಂದಿರು ಸಣ್ಣ ವಯಸ್ಸಿನ ಹುಡುಗ ಹುಡುಗಿಯರು, ಯುವಕರು, ಮತ್ತು ಮಧ್ಯಮ ವಯಸ್ಕರ ದೊಡ್ಡದಾದ ಒಂದು ಗುಂಪು ಎರಡು ಪಕ್ಕಗಳಲ್ಲಿಯೂ ಕೈ ಹಿಡಿದು ಸಾಲುಗಟ್ಟಿ ಬರುತ್ತಿರುವ ಸ್ವಯಂಸೇವಕರ ಪಡೆ. ಹೀಗೆ ಶಾಂತರೀತಿಯಿಂದ, ನಗೆ ಮುಖದಿಂದ ನಡೆದು ಬರುತ್ತಿರುವ ಒಂದು ದೊಡ್ಡ ಪರಿಸೆಯೇ ಕಣ್ಣು ಮುಂದೆ ಸ್ಪಷ್ಟವಾಗಿತ್ತು.

ಅಂಕೋಲೆಯ ಜನರ ಉತ್ಸಾಹ ಮತ್ತು ಕಾಯದೆಭಂಗ ನಲುವಾಗಿ ಈ ಸಾಹಸದ ಕಾರ್ಯವನ್ನು ನೋಡಿ ನಮ್ಮ ಜನರಿಗೆ ದಾರಿ ತೋರಿಸುವ ಸರಿಯಾದ ಮುಂದಾಳುಗಳು ಮಾತ್ರ ಮುಂದಾಗಿ ಬಂದಲ್ಲಿ ಯಾವ ಕಾರ್ಯವೂ ಅಸಾಧ್ಯವಾಗಲಾರದೆಂದು ಅನಿಸಿತು. ಮೊದಲು ಬಂದ ಗುಂಪು ಭೂದೇವಿಯ ಹತ್ತಿರದ ಬಡೀಗದ್ದೆಯಲ್ಲಿಯೂ, ನಂತರ ಬಂದವರು ಕಚೇರಿಯ ಎದುರಿನ ಕಡೆಗೆ ಅಂಕೋಲೆಯ ಸತ್ಯಾಗ್ರಹಿಗಳೆಲ್ಲರೂ ಮೈದಾನದಲ್ಲಿಯೂ ಸೇರಿ ಸ್ವಲ್ಪ ಹೊತ್ತು ಮಾತನಾಡುತ್ತ ಕೂತಿದ್ದು ಜಯಘೋಷ ಮಾಡುತ್ತ ಹೊರಟರು.

ಇವತ್ತಿನ ಸಾಹಸಕಾರ್ಯದಲ್ಲಿ ಹೆಣ್ಣುಮಕ್ಕಳೇ ಮುಂದಾಳುತನವನ್ನು ವಹಿಸಿದ್ದರೆಂದು ಹೇಳದೇನೂ ಉತ್ಪ್ರೇಕ್ಷೆಯಾಗಲಾರದು. ಪರಂಪರಾಧಿಯಾಗಿದ್ದು ಅತಿಥಿಗಳಿಗೆ ನೀರನ್ನು ಕೊಟ್ಟು ತಪ್ಪಿಗಾಗಿ ಮೊನ್ನೆ ತುರಂಗಕ್ಕೆ ಕಳುಹಲ್ಪಟ್ಟ ಶ್ರೀ ಶಾಮರಾಯರ ತಂಗಿಯರಾದ ಶ್ರೀ. ಸೀತಾಬಾಯಿ ಸರಾಫರವರು ಆಡಿದ ನಾಲ್ಕು ಮಾತುಗಳು ಎಲ್ಲರಿಗೂ ಬಹು ಉತ್ಸಾಹಕರವಾಗಿತ್ತು. ಇವರು ಕೊಂಕಣಿಯಲ್ಲಿ ಹೇಳಿದ್ದೇನೆಂದರೆ:- "ಇದುವರೆಗೆ ಉಪ್ಪನ್ನು ಮಾಡಲು ನಾವೆಲ್ಲರೂ ಅಂಜುತ್ತಿದ್ದೆವು. ಈಗ ಶಾಸ್ತ್ರೀಯವಾಗಿ ಅದರ ಕಾಯಿದೆಯನ್ನು ಮುರಿದಿದ್ದೇವೆ ಇನ್ನು ಅಂಜುವ ಕಾರಣವಿಲ್ಲ. ನಮಗೆ ಬೇಕಾದ ಉಪ್ಪನ್ನು ನಾವೇ ಮಾಡಿಕೊಳ್ಳೋಣ. ನಾನು ತಂದಿರುವ ಸಮುದ್ರದ ನೀರಿನಿಂದ ಉಪ್ಪನ್ನು ಮಾಡಿ ಶಾಮರಾಯರಿಗೆ ಮಾರುತ್ತೇನೆ. ಈಗ ನಮ್ಮಣ್ಣನವರು ತುರಂಗದಲ್ಲಿದ್ದಾರೆ ನಾನಾದರೂ ಅವರ ಹಿಂದೆಯೇ ಹೋಗಲು ಸಿದ್ಧಳಿದ್ದೇನೆ."

ಇವರಲ್ಲದೆ ದೇವದಾಸಿಯ ಕುಲದ ಆನಂದೀಬಾಯಿ ಹಟ್ಟಿಕೇರಕರ್ ಎಂಬುವರೂ ಉತ್ಸಾಹಕರವಾದ ನಾಲ್ಕು ಮಾತುಗಳನ್ನಾಡಿದರು. ಮತ್ತು ಈಗಿನ ನಾಗರಿಕತೆ ವಿದ್ಯೆ ಇವುಗಳ ಗಂಧವಿಲ್ಲದ ಒಬ್ಬ ರೈತನು ಬಂದು ನಿಂತು "ಸರಕಾರದ ಉಪ್ಪನ್ನು ಇನ್ನು ಮುಂದೆ ಯಾವ ಯಾರಾದರೂ ಉಪಯೋಗಿಸಿದಲ್ಲಿ ದೇಶದ್ರೋಹಿಗಳಾಗುತ್ತೇವೆ" ಎಂದು ಹೇಳಿದ ಮಾತನ್ನು ಯಾರಾದರೂ ಮರೆಯುವ ಹಾಗಿಲ್ಲ.

ಈ ಹೊತ್ತಂತೂ ಅಂಕೋಲೆಯಲ್ಲಿ ಒಂದು ದೊಡ್ಡ ಹಬ್ಬದ ದಿನ. ಎಲ್ಲರ ಬಾಯಿಯಲ್ಲಿಯೂ ಉಪ್ಪಿನ ಮಾತೇ ಮಾತು ಆಗಿದೆ.

ಇದೀ ಕರ್ನಾಟಕ್ಕ ರಣಕ್ಷೇತ್ರವಾದ ಅಂಕೋಲೆಯಲ್ಲಿ ಹೀಗೆ ಊರ ಜನರೆಲ್ಲರೂ ಒಕ್ಕಟ್ಟಾಗಿ ಸೇರಿ ಉಪ್ಪಿನ ಕಾಯಿದೆಭಂಗ ಮಾಡಿದ್ದು ದಕ್ಷಿಣ ದೇಶಕ್ಕೆ ಮೇಲ್ಪಂಕ್ತಿಯಾಗಿದೆ. ಶಾಂತತೆ, ಧೈರ್ಯ, ಉತ್ಸಾಹ ತಿಸ್ತು, ಕ್ರಮ ಇವುಗಳ ವಿಚಾರದಲ್ಲಿ ಅಂಕೋಲೆಯು ಯಾವ ಊರಿಗೂ ಎರಡನೆಯದಾಗುವ ಹಾಗಿಲ್ಲ.

ಈ ಸುದ್ದಿಯನ್ನೆಲ್ಲ ಕೇಳಿ ನಮ್ಮ ಕನ್ನಡಿಗರು ಆನಂದ ಪಡದೆ ಇರಲಾರರು.

ಮು. ಅಂಕೋಲಾ ತಾ॥ ೨೦-೪-೩೦

ಗಾಂಧೀ ಶ್ಯಾಮಜೋಗರು ರಾಜೀನಾಮೆ ಕೊಟ್ಟರೆ- ಎಂಟೇ ದಿವಸಗಳಲ್ಲಿ ಸ್ವರಾಜ್ಯ.

——(೦)——

ಸ್ವರಾಜ್ಯವು ನಮ್ಮ ಕಣ್ಣುಂದೇ ಉಂಟು. ಆದರೆ ಅದನ್ನು ದೊರಕಿಸಲು ಸರಕಾರೀ ನೌಕರದಾರರು ಧೈರ್ಯ ಮಾಡುವದಿಲ್ಲ. ಏಕಂದರೆ- ಅವರಿಗೆ ಹೊಟ್ಟೆಯ ಚಿಂತೆಯುಂಟು. ಹಾಗೆ ಗ್ರಾಮಸ್ಥರ ಪರಿಸ್ಥಿತಿ ಇರುವದಿಲ್ಲ. ಸರಕಾರದ ಕೆಲಸವಿಲ್ಲದಿದ್ದರೂ ಉಪಜೀವನ ಸಾಗುವಷ್ಟು ಭೂಮಿಯುಂಟು. ಅದ್ದರಿಂದ ಹಿಂದುಸ್ಥಾನದ ಕುಲಕರ್ಣಿ ಇವರು ರಾಜೀನಾಮೆ ಕೊಡುವದಾದರೆ- ಎಂಟೇ ದಿವಸಗಳಲ್ಲಿ ಸ್ವರಾಜ್ಯ ಕೆಂದು ಕೊಡುವವೆಂದು ಮಹಾತ್ಮರು ಮೇಲೆ ಹೇಳಿದ ಸಭೆಯಲ್ಲಿ ಆಡಿ ತೋರಿಸಿದ್ದಾರೆ.

ಶ್ರೀ. ಕೇಳಕರ, ಭೋಪಟಕರರು ಕಾಯದೆಭಂಗ ಮಾಡದರು.

ಪೇಣದಲ್ಲಿ ಶ್ರೀ. ಕೇಳಕರ ಮತ್ತು ಪುಣೆಯಲ್ಲಿ ಶ್ರೀ. ಭೋಪಟಕರ ಮತ್ತು ಮರಾಠಾ ಪತ್ರದ ಸಂಪಾದಕರಾದ ಶ್ರೀ. ಗೋಖಲೆ ಮೊದಲಾದ ಅನೇಕರು ಕಾಯದೆಭಂಗ ಮಾಡಿದರು. ಪೇಣದಲ್ಲಿ ಶ್ರೀ ಕೇಳಕರರ ಎದುರಿನಲ್ಲಿಯೇ ಅಲ್ಲಿಯ ಮುಖಂಡರಾದ ಶ್ರೀ. ಮಹಾಜನೀಕರರನ್ನು ಹಿಡಿಕೊಂಡು ಹೋದರು.

ಹಳ್ಯಾಳದಲ್ಲಿ ದಬ್ಬಾಳಿಕೆ. !

ಬೆದರಿಗೆ ಈಗ ಬೆದರುವವರಾರು?

—()—(೦)—()—

(ನಮ್ಮ ಸುದ್ದಿಗಾರನಿಂದ)

ಬೆಳಗಾಂವಿಯ ಸತ್ಯಾಗ್ರಹಿಗಳ ಕಣವು ಹಳ್ಯಾಳಕ್ಕೆ ಬಂದ ದಿವಸ ಅವರ ಸ್ವಾಗತ ಮಾಡುವ ನಾಗರಿಕರ ಸಭೆಗೆ ಅಧ್ಯಕ್ಷರಾಗಿದ್ದ ಇಲ್ಲಿಯ ಸುಪ್ರಸಿದ್ಧ ಶ್ರೀ ಅಪ್ಪೂರಾವ ಫಡಣೀಸ ಎಂಬ ಸದ್ಗೃಹಸ್ಥರನ್ನು ಮಂಗಳವಾರ ತಾ॥ ೨೨ನೇ ದಿನ ಮಧ್ಯಾಹ್ನಕ್ಕೆ ಪೋಲೀಸರು ಹಿಡಕೊಂಡು ಹೋದರು. ಅಂಕೋಲೆಯಿಂದ ಕಲೆಕ್ಟರರ ವಾರಂಟು ಬಂದಿದ್ದನ್ನು ಅವರಿಗೆ ತೋರಿಸಿದರು. ಅವರು ಸುಮ್ಮನೇ ಪೋಲೀಸರ ಸಂಗಡ ಹೋದರು. ಇಬ್ಬರು ಸಾಕ್ಷಿದಾರರನ್ನು ಸಂಗಡ ಕರೆದುಕೊಂಡು ಹೋಗಿದ್ದಾರೆ.

ಅಪ್ಪೂರಾಯರು ಮಾಡಿದ ಅಪರಾಧವೇನು? ಅವರ ಮೇಲೆ ಆರೋಪವೇನು? ಅದಕ್ಕೆ ವಾರಂಟು ಉಂಟೋ? ಇಲ್ಲವೊ? ಯಾವುದೂ ತಿಳಿಯಲಿಕ್ಕೆ ದಾರಿಯಿಲ್ಲ. ಅಂದಿನ ಸಭೆಯಲ್ಲಿ ಅವರು ಅಧ್ಯಕ್ಷರಾಗಿ ಹೆಚ್ಚಿಗೆ ಮಾತೂ ಆಡಲಿಲ್ಲ. ಬೆಳಗಾಂವಿಯಿಂದ ಸ್ವಯಂಸೇವಕರು ಬಂದಿದ್ದಾರೆ. ಅವರು ಮುಂದೆ ಅಂಕೋಲೆಗೆ ಹೋಗತಕ್ಕವರಿದ್ದಾರೆ. ಅವರ ನಾಯಕರಾದ ಶ್ರೀ ಬಿಂದೂಸನಾಯಿಕರು ಏನೂ ಹೇಳುತ್ತಾರೋ ಅದನ್ನು ಕೇಳಿರಿ ಎಂದು ಸಭಿಕರಿಗೆ ಹೇಳಿದರು. ಕೊನೆಗೆ ಸಭಿಕರ ಪತಿಯಿಂದ ಎಲ್ಲ ಸ್ವಯಂಸೇವಕರ ಆಭಾರ ಮನ್ನಿಸಿದರು. ಒಟ್ಟಾರೆ ಅವರ ಭಾಷಣದಲ್ಲಿ ಸುಮಾರು ೩೦-೪೦ ಶಬ್ದಗಳು ಬಂದಿರಬಹುದು. ಇದರಲ್ಲಿ ಹಳ್ಯಾಳದ ಅಧಿಕಾರಿಗಳಿಗೆ ರಾಜದ್ರೋಹ ಕಂಡಿತೋ? ಕಾಯದೆಭಂಗ ಕಂಡಿತೋ? ಏನು ಕಂಡಿತೋ ದೇವರೇ ಬಲ್ಲ!

ಈಗಿನ ಚಳವಳಿಯ ಸಂಬಂಧವಾಗಿ ಹಳ್ಯಾಳದ ತರುಣರಲ್ಲಿ ಒಳ್ಳೇ ಉತ್ಸಾಹವುಂಟು. ಹಿರಿಯರೂ ತಕ್ಕಮಟ್ಟಿಗೆ ಅದಕ್ಕೆ ಪ್ರೋತ್ಸಾಹ ಕೊಡುತ್ತಾರೆ. ಇದು ಇಲ್ಲಿಯ ಅಳಿಕಾರರಿಗೆ ಸಹನವಾಗದೆ ಹುಡುಗರ ಹೆದರಿಸಿ ಹಿರಿಯರ ಹಲ್ಲಣ ಹಾರಿಸಬೇಕೆಂದು ಈ ಹಂಚಿಗೆ ತೆಗೆದಂತೆ ತೋರುತ್ತದೆ. ಸ್ವಯಂಸೇವಕರ ದಂಡು ಇಲ್ಲಿಗೆ ಬಂದ ದಿವಸ ಇರಾದೇಸಾಹೇಬರ ಮುಕ್ಕಾಮು ಇಲ್ಲೇ ಇತ್ತು. ಅವರು ಅಂದು ಏನೂ ಮಾಡಲಿಲ್ಲ. ಹಿಂದಿನಿಂದ ಈ ಮೇತಾಳವು ಅಕಸ್ಮಾತ್ತಾಗಿ ಎದ್ದಿದೆ.

ಆದರೆ ಜನರನ್ನು ಬೆದರಿಸಬೇಕೆಂಬ ಅಧಿಕಾರಿಗಳ ಅಪೇಕ್ಷೆಯು ಅಷ್ಟಿಯೇ ಕುಕ್ಕರು ಬಿದ್ದುಹೋಗಿದೆ. ಮಂಗಳವಾರ ರಾತ್ರಿ, ಮಾರ್ಕೆಟಿನಲ್ಲಿ ಪ್ರಚಂಡ ಸಭೆಯಾಯಿತು. ಧಾರವಾಡದಿಂದ ಮುದವೇಡಕರ ಕೃಷ್ಣರಾಯರು ಬಂದಿದ್ದರು. ಅವರ ವ್ಯಾಖ್ಯಾನವಾಯಿತು. ಶ್ರೀ ವಸಂತರಾವ ಧದ್ರಿ ಎಂಬ ತರುಣರು ಅಧ್ಯಕ್ಷರಾಗಿದ್ದರು. ಅರ್ಧ ಗಂಟೆಯ ಅವಕಾಶದಲ್ಲಿ ಸಾವಿರದವರೆಗೆ ಗಂಡಸರೂ ನೂರಾರು ಜನ ಹೆಂಗಸರೂ ನೆರೆದಿದ್ದರು. ಚಳವಳಿಯ ಹುರುಪು ಕುಗ್ಗದಂತೆ ಜನರಿಗೆ ಮುದವೇಡಕರರು ಒಳ್ಳೇ ಆವೇಶಯುಕ್ತವಾಗಿ ಭಾಷಣ ಮಾಡಿದರು. ಉಪಾಧ್ಯಾಯರ ಅಧಿಕಾರಿಗಳಿಗೆ ಸಹಕಾರ ಬಹಿಷ್ಕಾರದಿಂದ ಅಂಜನ ಹಾಕಿರೆಂದು ಹೇಳಿದರು.

ವ್ಯಾಖ್ಯಾನಕ್ಕೆ ಬರುವ ದೇಶಭಕ್ತರನ್ನು ಕೆಲ ತಂದ ಮೋಟಾರಿನವರ ಮೇಲೆ ಇಲ್ಲದ್ದನ್ನು ಆರೋಪ ಹೊರಿಸಿ ಬಿಟ್ಟಿ ಹಾಕುವ ಬೆದರಿಕೆಯನ್ನು ಇಲ್ಲಿಯ ಪೋಲೀಸರು ತೋರಿಸಹತ್ತಿದ್ದಾರೆ. ಅಂಥವರಿಗೂ ಬಹಿಷ್ಕಾರದ ಅಂಜನವೇ ಮದ್ದು ಆಗುವದು.

ವನಗಾವಲ ದುಃಖಗಳ ಒಗ್ಗೆ ಸಾಮೂಹಿಕ ಕಾಯದೆಭಂಗದಿಂದ ಪ್ರತಿಕಾರ ಮಾಡುವ ವಿಚಾರ ನಡೆದಿದೆ. ತಿಂಗಳೊಪ್ಪತ್ತಿನಲ್ಲಿ ಇದೇ ಕಾಲುವೆ ನಲ್ಲಿ ಸಂಘಟನ ಮಾಡಿ ಅದನ್ನು ಪ್ರಾರಂಭಿಸುವ ಆಲೋಚನೆಯನ್ನು ಇಲ್ಲಿಯ ತರುಣರು ನಡೆಸಿದ್ದಾರೆ

ದೇವೀ ಸರೋಜಿನಿಯವರು ಮುಂಬಯಿಯಲ್ಲಿರುವ ಮಾಂಡವಿ ಪೇಟೆಗೆ ಹೋಗಿ, ಹತ್ತು ಸಾವಿರ ರೂಪಾಯಿಯ ಉಪ್ಪು ಮಾರಿದ್ದಾರೆ.

ಮಹಾತ್ಮರ ಸ್ವಯಂಸೇವಕರು ಈಚಲ ಗಿಡಗಳನ್ನು ಕಡಿದು, ಹೆಂಡದ ಘಟಗಳನ್ನೇ ಕಡಿಯುವದರಲ್ಲಿ ತೊಡಗಿದ್ದಾರೆ.

ಮುಂಬಯಿಯಲ್ಲಿ

ಸ್ವಯಂಸೇವಕರು ಜಿದ್ದು ಗೆದ್ದರು.

ಸ್ವಯಂಸೇವಕರ ಜಯಜಯಕಾರ.

——(೦)——

ಮುಂಬಯಿಯಲ್ಲಿ ಪೋಲೀಸರು ಕಾಂಗ್ರೆಸ ಆಫೀಸಿಗೆ ಹೋಗಿ, ಅಲ್ಲಿಯ ಉಪ್ಪು ಮಾಡುವ ಪಾತ್ರೆ ಸಲಕರಣೆಗಳನ್ನು ಒಡೆದು, ಸುರಿದು, ಹಾಳು ಮಾಡಿದ ಸಂಗತಿಯನ್ನು ಈ ಮೊದಲು ಬರೆದಿದೆವೆ. ಪೋಲೀಸರ ಈ ಅತ್ಯಾಚಾರದ ನಂತರ ಕಾಂಗ್ರೆಸ ಕಮಿಟಿಯವರು ಗಿಡ್ಡ ಕಲ್ಲಿನ ಒಲೆಗಳನ್ನು ಮಾಡಿಸಿದರು. ಮೊದಲು ಕಾಂಗ್ರೆಸ ಕಮಿಟಿಯ ಭವ್ಯವಾದ ಕಟ್ಟಡದಲ್ಲಿಯೇ ಉಪ್ಪು ಮಾಡುತ್ತಿದ್ದರು ಆದರೆ ಈಗ ಊರ ನಡುವೆ ಇರುವ ದೊಡ್ಡ ದೊಡ್ಡ ಚೈಲುಗಳಲ್ಲಿ ಕಾಯದೆಭಂಗ ಮಾಡಲು ಹತ್ತಿದ್ದಾರೆ.

ರಾತ್ರಿಯ ಕೊನೆದು ವಾರದ ದಿವಸ ಅಲ್ಲಿ ಎರಡು ಲಕ್ಷ ಜನರು ಕಾಯದೆಭಂಗ ಮಾಡಿದ್ದನ್ನು ಈ ಮೊದಲು ಬರೆದಿದ್ದೇವೆ. ಅಂಥ ಪ್ರಚಂಡವಾದ ಇನ್ನೊಂದು ಸಭೆಯನ್ನು ಮಾಡಿ, ಪುನಃ ಕಾಯದೆಭಂಗ ಮಾಡಿದರು. ಶ್ರೀ ದೇವಿ ಸರೋಜಿನಿಯವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಸಭೆಗೆ ಕನಿಷ್ಠ ಲಕ್ಷ ಜನರು ಬಂದಿದ್ದರೆಂದು ಇಂಗ್ರೇಜಿ ವರ್ತಮಾನ ಪತ್ರಗಳು ಕೂಡ ಒಪ್ಪಿಕೊಳ್ಳುತ್ತವೆ. ನನ್ನನ್ನು ಹಿಡಿಯಿರೆಂದು ಸರಕಾರಕ್ಕೆ ಮೇಲೆ ಮೇಲೆ ಹೇಳುತ್ತಾ ಬಂದರೂ, ಹಿಡಿಯಲೊಲ್ಲರೆಂದು ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯರು ಮುಖ್ಯವಾಗಿ ಈ ಸಭೆಯಲ್ಲಿ ಭಾಷಣ ಮಾಡಿದರು. ಸಭೆಗೆ ಬಂದ ಸ್ತ್ರೀಯರ ಸಂಖ್ಯೆಯೇ ೨೫ ಸಾವಿರವಾಗಿತ್ತು. ಸಭೆಯ ವೇಳೆಯಲ್ಲಿ ಪೋಲೀಸರು ರಿವಾಲ್ವರ ಹಿಡಿಕೊಂಡು ನಿಂತಿದ್ದರು. ಸ್ವಯಂಸೇವಕರೇ ಎಲ್ಲ ವ್ಯವಸ್ಥೆ ಇಟ್ಟಿದ್ದರಿಂದ ಪೋಲೀಸರು ಬರೇ ಪ್ರೇಕ್ಷಕರೇ ಆಗಿದ್ದರು.

ಈ ಸಭೆಯಾಗುವ ದಿವಸ, ಮುಂಜಾವಿನಲ್ಲಿ ಸ್ವಯಂಸೇವಕರು ಚೋರೀಬಂದರ ಸ್ಟೇಶನದ ಎದುರಿಗಿರುವ ಒಂದು ಮೈಲು ಸುತ್ತಳತೆಯುಳ್ಳಂಥ ವಿಶಾಲವಾದ ಬೈಲಿನಲ್ಲಿ ಅಗ್ಗಿಷ್ಟಿಗೆ ಹೂಡಿ, ಸಮುದ್ರದ ನೀರು ಕಾಸಿ ಉಪ್ಪು ಮಾಡಿದರು. ಆಗ ಪೋಲೀಸರು ಬಹು ಸಂಖ್ಯಾಕರಾಗಿ ಬಂದು, ಈ ಒಲೆಗಳನ್ನು ಅದೇ ಉಪ್ಪಿನ ನೀರಿನಿಂದ ಆರಿಸಿ, ಸತ್ಯಾಗ್ರಹಿಗಳ ಆಟ ಸಾಗಗೊಡಲಿಲ್ಲ. ತರುಗಿ ಆ ವೇಳೆಗೆ ಒಂದ ಪೋಲೀಸರು ತಮ್ಮ ಆಟ ನಡೆಯಗೊಡದ್ದರಿಂದ, ಸತ್ಯಾಗ್ರಹಿಗಳು ಎದೆಗುಂದಲಿಲ್ಲ. ನೋಡೋಣವೆಂದು ಪೋಲೀಸರಿಗೆ ಜಯ ಪತ್ರ ಕೊಡಲಿಲ್ಲ. ಭೀಮನ ಬೆನ್ನು ನೆಲಕ್ಕೆ ಹತ್ತಿತೆಂದು ತಿಳಿಯಿರೆಂದು ಪೋಲೀಸರಿಗೆ ಹೇಳಿ, ಮರು ದಿವಸ ಪೋಲೀಸರನ್ನು ಸೋಲಿಸುವ ಪ್ರಚಂಡ ಸಿದ್ಧತೆ ಮಾಡಿದರು.

ಈ ಮೋಜು ನೋಡಲಿಕ್ಕೆ ಅವಶ್ಯನಿದ್ದರೆ- ಸ್ವಯಂಸೇವಕರಿಗೆ ಸಹಾಯ ಮಾಡಲು ಸಾವಿರಾರು ಜನರು ಮರು ದಿವಸ ಪ್ರಾತಃಕಾಲದಲ್ಲಿ ಅದೇ ಸ್ಥಳದಲ್ಲಿ ನೆರೆದರು ಸತ್ಯಾಗ್ರಹಿಗಳು ಸಾವಿರ ಸಂಖ್ಯೆಯಿಂದ ಜಯಘೋಷ ಮಾಡುತ್ತಾ ಅಲ್ಲಿಗೆ ಬಂದರು. ಅಗ್ಗಿಷ್ಟಿಗೆ ಹೂಡಿದರು, ಬೆಂಕಿ ಹೊತ್ತಿಸಿದರು ಮಡಿಕೆಯಲ್ಲಿ ಸಮುದ್ರದ ನೀರು ಹಾಕಿ ಕುದಿಯಲಿಕ್ಕೆ ಇಟ್ಟು ಅದರ ಸುತ್ತಲು ತಮ್ಮ ಏಳು ಸುತ್ತಿನ ಕೋಟೆ ಕಟ್ಟಿದರು. ಮುನ್ನಾ ದಿವಸ ಒಂದೇ ಸುತ್ತಿನ ಕೋಟೆ ಇತ್ತು. ಇಂದು ಒಂದರಹಿಂದೊಂದರಂತೆ ಸ್ವಯಂಸೇವಕರನ್ನು ಏಳು ಸಾಲಾಗಿ ಒಳ್ಳೇ ಹಿಡಕೊಂಡದ್ದನ್ನು ನೋಡಿ, ಪೋಲೀಸರು ಬೆಂಗಾದರು. ತಮ್ಮ ಪರಾಕ್ರಮ ತೋರಿಸಲು ಸಿದ್ಧರಾದರು. ಮೈದಾನದಲ್ಲಿ ದಡ್ಡಿಯಲ್ಲಿರುವ ಜನಗಳು ಮುಳಿಗೆ ಸಹ ಅನಗೋಳ್ಯ ವಿದಿಲ್ಲೆಂಬದನ್ನು ಬಲ್ಲವರೇ ಬಲ್ಲರು. ಪೋಲೀಸರು ಇವರ ಮೇಲೆ ಹುರಿಯಾಕೆ ಏರಿ ಹಾರಿ ಹೇರಿದರೂ, ಸ್ವಯಂಸೇವಕರು ಸತ್ಯಾಗ್ರಹದ ಶಾಂತತನದಿಂದ ಕಾದಿದರು. ಪೋಲೀಸರು ಬೇಕಾದಷ್ಟು ಜಗ್ಗಾಡಿದರೂ, ಒಬ್ಬನೂ ಒಕ್ಕಯನ್ನು ಬಿಡಲಿಲ್ಲ ತಾಸೆರಡು ತಾಸಿನ ತನಕ ಈ ಕುಸ್ತಿಯಾಯಿತು. ಪುರಾಣ ಕಾಲದೊಳಗಿನ ಬಟ್ಟೆಗಳ ಯುದ್ಧವೇ ಸರಿ. ಕೊನೆಯಲ್ಲಿ ಪೋಲೀಸರು ದಣಿದು, ಪರಾಕಾಂತರಾಗಿ ಹಿಂದಕ್ಕೆ ಸರಿದರು. ಸ್ವಯಂಸೇವಕರು ದಿಗ್ವಿಜಯ ಮಾಡಿದರು. ನೆರೆದ ಜನರು ಆಕಾಶವು ದುಮದುಮಿಸುವಂತೆ ಜಯಘೋಷ ಮಾಡಿದರು.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!
ತಮ್ಮಲ್ಲಿ ವ್ಯಾಪಾರ, ಔದ್ಯೋಗಿಕ ಪ್ರಗತಿಯನ್ನುಂಟು ಮಾಡಿ ಕಮ್ಮ [illegible]
ಸುಧಾರಿಸುವದಕ್ಕಾಗಿ, ಉಭಯ ದೇಶದ ಸುಪ್ರಸಿದ್ಧ ಕನಿವರ್ಯರ [illegible]
[illegible] ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ"
ನಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರೆಡ್ಡಿ ಕಂಪನಿ ಲಿಮಿಟೆಡ್.

[illegible] ನಾಸೀದ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಇದೇ ವರ್ಷ ಕಂಪನಿಯು [illegible] ಪ್ರಕಾರ [illegible] ವಿಸ್ತರ ಮಾಡಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯು [illegible] ದೊಡ್ಡ ದೊಡ್ಡ ಜವಿಗಾನದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಯುವದು.

ಆದರೆ ಈ ಕಂಪನಿಯು ಕೇವಲ [illegible] ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ [illegible] ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ [illegible] ಹುಟ್ಟಿಸಿ ಮತ್ತು [illegible] ತಿಳಿಸುವ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಕಾಳುಕಡಿ, [illegible], ಚವಣಿ ಬಿ[illegible] ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ [illegible] ಹತ್ತಿ, [illegible] ಹುರುಳಿ ವಗೈರೆ [illegible] ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತಿ[illegible] ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು [illegible] ಹೆಚ್ಚು [illegible] ಯೋಗ್ಯ [illegible] ಕಳುಹಿಸಿಕೊಟ್ಟು [illegible] ಈ ಸುಸಂಧಿಯನ್ನು ಸ್ವಾರ್ಥಕಪಡಿಸಿಕೊಳ್ಳಬೇಕಾಗಿ ವಿನಂತಿ. ಮತ್ತು [illegible] ಲ್ಲರೂ ತಮ್ಮ ಹಾಗೂ ತಮ್ಮ [illegible] ಹತ್ತಿ, [illegible] ವಗೈರೆ [illegible] ವನ್ನು ತರಿಸಿ ವಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ [illegible] ತಮ್ಮ ಕೊಡಬೇಕೆಂದೂ ಮತ್ತು ಶಾಪೂ [illegible] ಇಚ್ಛಿಸುತ್ತೇವೆ.

ಸದಗ — ತಮ್ಮ
ಅಂಗಡಿ ನಂ [illegible] — ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ
[illegible] — ಲಕ್ಷ್ಮಣ್ಣಾ ಗೋಳಿಯ, ಸಾಹುಕಾರ [illegible]
[illegible] ಇನಾಮತಿ ಅಸುಂಡಿ, ಗದಗ — [illegible] ಪಾಟೀಲ, ಹಾಯ್‌ಕೋರ್ಟ ವಕೀಲ
[illegible] ಕಾಲಾನಾಡ ಮ್ಯಾನೇಜರ, [illegible] — ಧಾರವಾಡ

ಸೂಚನೆ:— [illegible] ಮೇಲೆ [illegible] ದಲ್ಲಿ ಬರುವದು. [illegible] ಒಬ್ಬ [illegible] ಕಂಪನಿಯವರು [illegible] ಗದಗ ಕಾಟನ್ ಮಾರ್ಕೆಟ [illegible] ನಿಂದ ಮಾಡುವ ವ್ಯವಸ್ಥೆಯನ್ನು ಮಾಡುವರು. [illegible] ಲ್ಪಡುವದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ನಾರವಾಡ ಉದ್ದೇಶ

ಚಿಂದಿಗೆಯು ಏಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪೆಟ್ಟಿಗೆ ಇಟ್ಟುಕೊಳ್ಳುವ ಪದ್ಧತಿಯ ದರವು ಸೂಂಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ಶುದ್ಧ ೪

ಆ ವಿಜಯಂ ಶ್ರೀಕಪ್ರಿಯು
ಕೀ ಪಸುವಂತಿಯು ನಲಿಸಿರೆ ಸುಕಿತಚರಿತ್ರೆಗಳಂ ॥
ದೀ "ವಿಜಯಂ" ಶ್ರೀಕರರುಣ ।
ನಾ ವಿಹಿತಂಗಳ ವಿವರಿಸಿನಲಿವುವು ಸಾಜಂ॥

ಸಿಮಲಾದಲ್ಲಿ ಅಧ್ಯಕ್ಷ ಪಟೇಲರ ಮೆರವಣಿಗೆ

—()—( )—()—

ಅಸೆಂಬ್ಲಿಯ ಗತಿಯೇನಾಗುವದು ?

—()—(೦)—()—

ಅಧ್ಯಕ್ಷ ಪಟೇಲಸಾಹೇಬರು ಸಿಮಲಾದಿಂದ ಹೊರಡುವಾಗ ನಾಗರಿಕರು ದೊಡ್ಡ ಸಮಾರಂಭ ಮಾಡಿದರು. ಇವರ ಮೆರವಣಿಗೆ ತೆಗೆಯಬಾರದೆಂದು ಪೋಲೀಸರು ವಿಘ್ನ ತಂದರು. ಇವರ ಹುಕುಮು ಮುರಿದು, ಮೆರವಣಿಗೆ ತೆಗೆಯುವಂತೆ ಕಾಂಗ್ರೆಸ ಕಮೀಟಿಯವರು ನಿಶ್ಚಯ ಮಾಡಿದರು. ಶ್ರೀ. ಪಟೇಲರೂ ಇದಕ್ಕೆ ಸಮ್ಮತಿಸಿದರು. ಆಗ ಪೋಲೀಸರು ಅಪ್ಪಣೆ ಕೊಡುವಾಗ ಯುರೋಪಿಯನ್ನರು ವಾಸವಾಗಿರುವಂಥ ಮಾಲದಲ್ಲಿ ಮೆರವಣಿಗೆ ಒಯ್ಯಬಾರದೆಂದು ಶರ್ತು ಹಾಕಿದರು. ಆದಾಗ್ಯೂ ಅಲ್ಲಿಂದಲೇ ಮೆರವಣಿಗೆ ಹಾಯಿಸಿದರು. ಮೆರವಣಿಗೆಯಾಗಿ ಸಭೆಯಾಯಿತು. ಆಗ ಇವರು

ಈಗಿನ ಬಿಕ್ಕಟ್ಟಿನ ಪ್ರಸಂಗದಲ್ಲಿ ಎಲ್ಲ ಜನರೂ ಕಾಯಾವಾಚಾ ಮನಸಾ ಸಹಾಯ ಮಾಡಬೇಕು. ವಿಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕಬೇಕು. ಖಾದೀ ಧರಿಸಬೇಕೆಂದು

ಉಪದೇಶ ಮಾಡಿದರು. ಮೆರವಣಿಗೆಯಲ್ಲಿಯೂ ಸಭೆಯಲ್ಲಿಯೂ ಮುಂದೆ ಅಸೆಂಬ್ಲಿಯು ಏನಾಗುವದೆಂದು ಒಂದೇ ಕೂಗೆದ್ದಿತ್ತು. ಏನಾಗುವದು ? ಗೂಗೆಗಳು ಸೇರುವವೆಂದು ಪ್ರತ್ಯುತ್ತರ ಬರುತ್ತಿತ್ತು. ಈ ಸಭೆಯಲ್ಲಿ ಗೂಗೆ ಗೂಗೆ ಎಂದು ಒದರಿದ ಪ್ರಚಂಡ ಜನಸಮೂಹವು ಅಸೆಂಬ್ಲಿಗಾಗಿ ಹೋಗುವ ಮೆಂಬರರು ರೇಲ್ವೆ ಸ್ಟೇಶನದಲ್ಲಿಳಿಯುವಾಗ, ಗೂಗೆ ಗೂಗೆ ಎಂದು ಒದರಿದಿಲ್ಲವರಷ್ಟೆ. ನಾವು ದಾರ ಮಾಲವಿಯಾ ಬಿಳವಿ ಕೇಳಕರ ಮೊದಲಾದವರು ಮೊದಲೇ ಬುದ್ಧಿವಂತರಾಗಿ ಈ ದುರ್ಭಾಷಣದ ಸುರಿಮಳೆಯಿಂದ ದೂರಾದದ್ದು ನಿಜವಾಗಿ ಸಂತೋಷದ ಸಂಗತಿಯು. ಸಿಮಲಾದ ಸಮಾರಂಭವಾದ ಬಳಿಕ ಶ್ರೀ. ಪಟೇಲರು ದಿಲ್ಲಿಗೆ ಬಂದರು. ಅಲ್ಲಿಯ ಸ್ವಯಂಸೇವಕರು ಇವರ ರಥವನ್ನು ಎಳೆದು, ಇದರಲ್ಲಿದ್ದ ತಮ್ಮ ಅಪ್ರತಿಮವಾದ ಭಾವ ಭಕ್ತಿಯನ್ನು ವ್ಯಕ್ತಪಡಿಸಿದರು.

ಪ್ರೆಸ ಆಕ್ಟಿನಲ್ಲಿಯೇ ವಿಜಯದ ಜನ್ಮ.

—(೦)—

ಹಿಂದುಸ್ಥಾನ ಸರಕಾರದವರು ೨೦ ವರ್ಷಗಳ ಹಿಂದೆ ರಾಜದ್ರೋಹ ಮತ್ತು ಕ್ರಾಂತಿಕಾರಕ ಚಳವಳಿಯನ್ನು ನಿಲ್ಲಿಸುವದಕ್ಕಾಗಿ ಮುದ್ರಣ ಸ್ವಾತಂತ್ರ್ಯದ ವಿರುದ್ಧ ಮಾಡಿದ ಪ್ರೆಸ ಆಕ್ಟ ಹತ್ತು ವರ್ಷಗಳವರೆಗಿತ್ತು. ಮಾಂಟೆಗ್ಯುಸಾಹೇಬರ ಸುಧಾರಣೆಯು ಒಂದು ದ್ಯೋತಕವೆಂದು ಇದನ್ನು ೧೯೨೧ ರಲ್ಲಿ ರದ್ದು ಮಾಡಿದರು. ವಿಜಯದ ಜನ್ಮವು ೧೯೨೦ ನೇ ಜನವರಿಯ ೧೫ನೇ ತಾರೀಖಿನ ದಿವಸವಾಯಿತು. ಹೀಗೆ ವಿಜಯವು ಪ್ರೆಸ ಆಕ್ಟದ ಆಬ್ಬರದಲ್ಲಿಯೇ ಹುಟ್ಟಿತು. ಆಗಿನ ಜಿಲ್ಹಾಧಿಕಾರಿಗಳು ವಿಜಯದಿಂದ ಡಿಪಾಜಿಟ ಹಣ ಬೇಡಬೇಕಾಗಿತ್ತು. ಹಾಗೇನೂ ಬೇಡಲಿಲ್ಲ. ಆಕ್ಟು ರದ್ದಾದ ಎಂಟು ವರ್ಷಗಳ ನಂತರ, ಈಗಿನ ಆರ್ಡಿನನ್ಸವು ಅನೇಕ ಶಸ್ತ್ರಾಸ್ತ್ರ ಮತ್ತು ಸರ್ಪ ಹಿಡಕೊಂಡಂಥ ದುರ್ಗೆಯಂಥ ರೂಪಧಾರಣ ಮಾಡಿದೆ. ಆದರೂ ವಿಜಯವು ಸುರಕ್ಷಿತವಾಗಿಯುಳ್ಳದ್ದಾಗುವದೆಂಬ ನಂಬಿಗೆಯುಂಟು

ಲಾರ್ಡ ಆಯರ್ವಿನಸಾಹೇಬರು ತೆಗೆದ ಆರ್ಡಿನನ್ಸದ ಅವತಾರವು ಆರೇ ತಿಂಗಳ ಮಟ್ಟಿಗಿರುತ್ತದೆ. ಆರು ತಿಂಗಳಾದ ನಂತರ ಒಂದು ನಿಮಿಷ ಕೂಡ ಅದು ಉಳಿಯದು. ಆ ಕ್ಷಣವೇ ಅದರ ಅವತಾರ ಸಮಾಪ್ತಿಯಾಗುವದು. ಆನಂತರ ಕಾಯದೆಯನ್ನು ಮಾಡಿ, ಅದನ್ನು ಅಮಲಿನಲ್ಲಿ ತರಬೇಕಾಗುತ್ತದೆ ಆಗ ಇದು ಕಾಯದೆಯಾಗಲಾರದೆಂದೇ ಭವಿಷ್ಯ ಹೇಳಬಹುದು.

ಮೌಲಾನಾ ಮಹಮದಲ್ಲಿಯವರ ವಿರುದ್ಧ ಮುಸಲಮಾನರ ಠರಾವು.

ಮೌಲಾನಾ ಮಹಮದಲ್ಲಿಯವರು ಬ್ರಿಟಿಶ ಸರಕಾರದ ಕೂಡ ನಡೆಸಿದ ಸಹಕಾರದಲ್ಲಿ ಪೂರ್ಣ ನಂಬಿಗೆಯುಂಟೆಂಬ ಠರಾವನ್ನು ಮಾಡುವ ವಿಷಯವಾಗಿ, ಗೋರಖಪೂರದ ಮುಸಲಮಾನರು ಒಂದು ಸಭೆ ಕರೆದರು, ಅಲ್ಲಿ ಕಾಂಗ್ರೆಸ ಪಂಗಡದ ಮುಸಲಮಾನರೂ ಇದ್ದಾರೆ. ಸಭೆಯಲ್ಲಿ ಸಹಕಾರ ಮತ್ತು ಅಸಹಕಾರ ಪಕ್ಷಗಳ ಮುಖಂಡರ ಭಾಷಣಗಳಾಗಿ, ಮತ ತಕ್ಕೊಳ್ಳಲು- ಅಸಹಕಾರ ಪಕ್ಷದ್ದೇ ಜಯವಾಯಿತು. ಹೀಗೆ ಮೌಲಾನಾ ಮಹಮ್ಮದಲ್ಲಿಯವರಲ್ಲಿ ವಿಶ್ವಾಸವಿದೆಂಬವರ ಪರಾಜಯದ ಕೂಡ- ಮೌಲಾನಾಸಾಹೇಬರಲ್ಲಿಯೂ ವಿಶ್ವಾಸವಿಲ್ಲೆಂದು ನಿರ್ಣಯವಾಯಿತು.

ಕಾಂಗ್ರೆಸಕ್ಕೆ ಸರಹದ್ದಿನ ಮುಸಲಮಾನರ ಪೂರ್ಣ ಸಹಾಯ.

—(೦)—

ಹಿಂದುಸ್ಥಾನ ಮತ್ತು ಕಾಬೂಲದ ಸರಹದ್ದಿನ ಮಧ್ಯದಲ್ಲಿಯ ಒಂದು ಪಟ್ಟಿಯನ್ನು ಸ್ವತಂತ್ರನಾಡು ಮಾಡಿ ಅದಕ್ಕೆ ಫ್ರಂಟಿಯರ ಎಂಬ ಹೆಸರು ಕೊಟ್ಟಿರುತ್ತಾರೆ. ಇದಕ್ಕೆ ಅಸೆಂಬ್ಲಿ ಅಥವಾ ಕೌನ್ಸಿಲದಂಥ ದೊರೆತನವಿಲ್ಲ ಲಷ್ಕರೀ ಕಾಯದೆಯಿಂದಲೇ ಅದರ ಆಡಳಿತೆ ನಡೆಯುವದು. ತಾವು ಯಾವಾಗಲು ದಂಡಿನ ಹುಕುಮತ್ತಿನಲ್ಲಿದ್ದು, ಅವರ ಇಚ್ಛೆಯನುಸಾರ ನಡೆಯುವದು ತಾಪದಾಯಕವಾಗುತ್ತದೆಂದು ಅವರು ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಆದರೆ ಸರಕಾರವು ಹಿಂದುಸ್ಥಾನದ ಬೇರೆ ಇಲಾಖೆಗಳಿಗೆ ಕೊಟ್ಟಂಥ ಅಧಿಕಾರ ಕೊಡಬಲಿಚ್ಛಿಸುವದಿಲ್ಲ. ಸರಕಾರದವರು ಬೇಕಾದಷ್ಟು ದಬ್ಬಾಳಿಕೆ ನಡೆಸಿದರೂ, ಮಹಾತ್ಮರನ್ನು ರಾವುಂಡ ಟೇಬಲ ಪರಿಷತ್ತಿಗೆ ಕಳಿಸುವರು. ಈ ಪರಿಷತ್ತಿಗೆ ಹೋದರೆ- ಈ ಫ್ರಂಟಿಯರ ಪ್ರಾಂತಕ್ಕೆ ಇತರ ಇಲಾಖೆಗಳಂತೆ ಪ್ರಾಂತಿಕ ಸ್ವಾತಂತ್ರ್ಯ ಕೊಡಿಸಬೇಕು. ಆ ಸ್ವಾತಂತ್ರ್ಯ ದೊರೆಯುವದಕ್ಕಾಗಿ ಈಗ ಬೇಕಾದ ಸ್ವಾರ್ಥ-ತ್ಯಾಗ ಮಾಡಲಿಕ್ಕೆ ಸಿದ್ಧರಿರುತ್ತೇವೆಂದು ಮಹಾತ್ಮರಿಗೆ ತಿಳಿಸಿದ್ದಾರೆ.

ಲಾರ್ಡ ಆಯರ್ವಿನಸಾಹೇಬರಿಗೆ ಶ್ರೀ. ಪಟೇಲರ ಉತ್ತರ

——(೦)——

ಲಾರ್ಡ ಆಯರ್ವಿನಸಾಹೇಬರು ಸನ್ನಾರ್ಪಣಾಥವನ್ನು ಶ್ರೀ. ಪಟೇಲರ ಮೇಲೆ ಹೊರಿಸಿದಂಥ ಉತ್ತರ ಬರೆದಿದ್ದರಷ್ಟೇ. ಅದಕ್ಕೆ ಶ್ರೀ. ಪಟೇಲರು ಪ್ರತ್ಯುತ್ತರ ಬರೆದಿರುತ್ತಾರೆ

"ಹಿಂದುಸ್ಥಾನದ ದುಃಖ ಮತ್ತು ಹಕ್ಕು ಸ್ವಾತಂತ್ರ್ಯಗಳ ಬಗ್ಗೆ ನಾನು ವಿಲಾಯತಿಯಲ್ಲಿ ಜಾಹೀರ ಪಂಚಮ ಜಾರ್ಜರನ್ನು ಮೊದಲು ಮಾಡಿಕೊಂಡು, ಎಲ್ಲ ಮುತ್ಸದ್ದಿಗಳಿಗೂ ಹೇಳುತ್ತಾ ಬಂದಿದ್ದೇನೆ. ಸಾಯಮನ್ನ ಕಮೀಶನದ ನೇಮಣೂಕು ನನ್ನ ಭ್ರಮೆಯನ್ನು ದೂರ ಮಾಡಿತು. ಬರ್ಕನಹೇಡಸಾಹೇಬರ ಭಾಷಣವು ಇದ್ದ ... ಆಶೆಯನ್ನು ಕಳೆಯಿತು. ಲಾರ್ಡ ನಾಯಿಲೇ... ದಬ್ಬಾಳಿಕೆಗೆ ಆಶ್ರಯ ಕೊಡದೆ, ರಾಜೀನಾಮೆ ಕೊಟ್ಟು, ಸ್ವದೇಶಕ್ಕೆ ಹೋಗಿರಿ. ನೀವು ಪ್ರ...ದ ಕರ್ತವ್ಯ

ಪಲ್ಲಿ ತಪ್ಪಿದರೆ- ಹಿಂದುಸ್ಥಾನವು ಇಂಗ್ಲಂಡಕ್ಕೆ ಕೊನೆಯ ಶರಣು ಹೊಡೆಯುವದೆಂಬದನ್ನು ಖಂಡಿತವಾಗಿ ತಿಳಿಯಿರಿ"

ಎಂಬದಾಗಿ ಈ ಪತ್ರದ ತಾತ್ಪರ್ಯವಾಗಿರುತ್ತದೆ.

ವಿಲಾಯತಿಯ ಬಟ್ಟೆಗೆ ಆಳಿಗಾಲ ಬಂತು.

ಹಿಂದುಸ್ಥಾನಕ್ಕೆ ಬರುವ ಹಡಗಗಳನ್ನು ಹಿಂದಕ್ಕೆ ಕಳ್ಳುಬೇಕೆಂದೀತು?

—(೦)—

ವಿಲಾಯತಿಗೆ ದಿಲ್ಲಿ ಮತ್ತು ಮುಂಬಯಿಯ ವರ್ತಕರ ತಾರು.

—:-:*:-:—

ನೀವು ಹಿಂದುಸ್ಥಾನಕ್ಕೆ ಕಳಿಸುವ ಜವಳಿಯು ನಮಗೆ ಬೇಕಿಲ್ಲೆಂದು ಹೇಳುವೆವು. ಒಂದು ವೇಳೆ ಅವನ್ನು ನಮ್ಮ ಕೊರಳಿಗೆ ಕಟ್ಟಿದರೆ-ಅವು ಮಾರಾಟವಾಗದ್ದರಿಂದ ನಮ್ಮನ್ನು ಕೇಳದೆ, ಯಾವ ಸರಕನ್ನು ಕಳಿಸಬೇಡಿರೆಂದು ದಿಲ್ಲಿಯ ವಿಲಾಯತಿಯ ಬಟ್ಟೆಯ ವ್ಯಾಪಾರಿಗಳು ಮ್ಯಾಂಚೆಸ್ಟರಕ್ಕೆ ತಾರಿನಿಂದ ತಿಳಿಸಿದ್ದಾರೆ.

ಇದರಂತೆ ಮುಂಬಯಿ-

ಲಾರ್ಡ ಆಯರ್ವಿನ, ಭಾರತ ಮಂತ್ರಿ ಮಿ. ಬೆನ್ನ ಮತ್ತು ಮ್ಯಾಂಚೆಸ್ಟರದ ವ್ಯಾಪಾರಿ ಸಂಘದವರು ಹಿಂದೀ ಜನರ ಕೂಡ ಒಡಂಬಡಿಕೆ ಮಾಡಿಕೊಂಡು, ಅವರ ರಾಷ್ಟ್ರೀಯ ಬೇಡಿಕೆಗಳನ್ನು ಪೂರ್ಣ ಮಾಡದಿದ್ದರೆ- ಪ್ರಸಂಗವು ಬಹಳ ಕಠಿಣ ಸ್ಥಿತಿಗೆ ಹೋಗಿ, ವಿಲಾಯತಿಯ ವ್ಯಾಪಾರವೇ ನಿಂತು ಹೋಗುವದೆಂದು ಮುಂಬಯಿಯ ಜವಳಿಯವರು ಮ್ಯಾಂಚೆಸ್ಟರದ ತಮ್ಮ ದಲಾಲರಿಗೆ ತಿಳಿಸಿದ್ದಾರೆ.

ಧಾರವಾಡದಲ್ಲಿ ನಿಶಾನೆಯಿಲ್ಲದೆ ಶ್ರೀ ಶಿವಾಜಿಮಹಾರಾಜನ ಉತ್ಸವವು.

—:(೦):—

ಮೊನ್ನಿನ ದಿವಸ ಈ ಊರಲ್ಲಿ ಶ್ರೀ ಶಿವಾಜಿಮಹಾರಾಜನ ಜಯಂತ್ಯುತ್ಸವವಾಯಿತು. ವಾಸ್ತವಿಕವಾಗಿ ಸಭೆಯಲ್ಲಿ ಮಹಾರಾಜರ ಭಗವೀ ನಿಶಾನ ಹಚ್ಚಬೇಕಾಗಿತ್ತು. ಆದರೆ ಇಂಗ್ರೇಜಿ ಯೂನಿಯನ್ನ ಜಾಕ ನಿಶಾನ ಹಚ್ಚಿದ್ದರು. ಬಹು ಜನರು ಇದಕ್ಕೆ ಆಕ್ಷೇಪಣೆ ತಕ್ಕೊಳ್ಳಲು- ರಾಷ್ಟ್ರೀಯ ನಿಶಾನೆ ಏರಿಸಿದರು. ಈ ಎರಡೂ ಕೃತ್ಯಗಳು ಸಂಭವಿಸಿದ ನಂತರ- ಮುನಸಫರಾದ ಮಿ. ಸೂರ್ಯವಂಶಿಸಾಹೇಬರು ಒಂದು, ತಮಗೆ ರಾಷ್ಟ್ರೀಯ ನಿಶಾನೆ ಬೇಕಾಗಿಲ್ಲೆಂದು ರಾಷ್ಟ್ರೀಯ ನಿಶಾನ ತೆಗೆಸಿದರು. ಇವೆರಡೂ ಬೇಡಾಗಿದ್ದರೆ- ಮಹಾರಾಜರ ಭಗವೀ ನಿಶಾನೆಯನ್ನೇಕೆ ಹಚ್ಚಿಸಬಾರದಾಗಿತ್ತು ?

ಬೆಳಗಾವಿಯಲ್ಲಿ ದಬ್ಬಾಳಿಕೆಯ ಅಬ್ಬರ.

[ತಂತಿಯಿಂದ ಬಂದದ್ದು]

೧-೫-೧೯೩೦

ಅಥಣಿಯಲ್ಲಿ ಶ್ರೀ ಶಿವಪ್ಪ ಜಮಖಂಡಿ ಎಂಬ ವ್ಯಾಪಾರಸ್ಥರಿಗೆ ಎಂಟು ತಿಂಗಳ ಸಕ್ತ ಶಿಕ್ಷೆಯಾಗಿದೆ.

ನಂದಗಡದಲ್ಲಿ ಶ್ರೀಕೃಷ್ಣನಾಯಿಕರನ್ನು ಬಸಪ್ಪ ಆಗರ್ವಿ, ಪಿಷ್ಣು ಸದಾಶಿವ ಬೇದ್ರೆ ಎಂಬವರನ್ನೂ ಹಿಡಿದಿದ್ದಾರೆ.

ಇವರಲ್ಲದೆ ಹಲಸಿಗಿಯಲ್ಲಿ ಇನ್ನಿಬ್ಬರನ್ನು ಹಿಡಿದಿದ್ದಾರೆ.

ಬೈಲಹೊಂಗಲದಲ್ಲಿ ಮೂವರನ್ನು ಹಿಡಿದಿದ್ದಾರೆ

ದಂಡಿನ ಅಮಲದಾರರ ಕೂಡ ಲಾರ್ಡ ಆಯರ್ವಿನಸಾಹೇಬರ ಗುಪ್ತ ಆಲೋಚನೆ.

—(೦)

ದೇಶದ ತುಂಬ ರಾಜಕೀಯ ಭಯಂಕರ ಉಲ್ಬಣವೆದ್ದಿತು. ಪೇಶಾವರದಲ್ಲಿ ಎರಡು ಕಂಪನಿಗಳು ಕಪ್ತಾನನ ಹುಕುಮು ಮನ್ನಿಸಲಿಲ್ಲ. ಗುಜರಾಥದಲ್ಲಿ ಇಂಗ್ಲಿಷ ಅಮಲು ಅದರಹತ್ತಿದೆ. ಆದ್ದರಿಂದ ಇವೆಲ್ಲ ಸಂಗತಿಗಳ ಊಹಾಪೋಹ ಮಾಡಲು- ದಂಡಿನ ಮುಖ್ಯ ಮುಖ್ಯ ಅಮಲದಾರರ ಕೂಡ ಆಲೋಚನೆ ಮಾಡಿದರೆಂದು ಪ್ರಸಿದ್ಧವಾಗಿದೆ

ಗೋರಖಪೂರದ ಮದ್ದಿನ ಮನೆಯ ಮೇಲೆ ಹಾವಳಿ.

—(೦)—

ಸೈನಿಕರಂತೆ ವೇಷಧಾರಣ ಮಾಡಿದವರು ಗೋರಖಪೂರದ ದಂಡಿನಲ್ಲಿಯ ಮದ್ದಿನ ಮನೆಯ ಕನಕ ಮೋಟಾರದಲ್ಲಿ ಕೂತು ಹೋಗಿ, ಕೂಡಲೆ ಕಾವಲಗಾರರ ಮೇಲೆ ಗುಂಡು ಹಾರಿಸಿದರು. ಕಾವಲಗಾರರು ಗುಂಡಿನಿಂದಲೇ ಪ್ರತ್ಯುತ್ತರ ಕೊಡಲು- ದಾಳಿಗಾರರು ಮೋಟಾರದಲ್ಲಿ ಕೂತು ಪಲಾಯನ ಹೇಳಿದರು.

ನಿಜಾಮ ಹೈದರಾಬಾದಿನಲ್ಲಿ ರಾಜದ್ರೋಹಕ್ಕಾಗಿ ಪೋಲೀಸರ ತಪಾಸಣೆ.

—(:(೦):)—

ನಿಜಾಮ ಹೈದರಾಬಾದಿನಲ್ಲಿ ಕೆಲ ಜನರ ಮನೆಗಳಲ್ಲಿ ರಾಜದ್ರೋಹದ ಲೇಖಗಳಿರುತ್ತವೆಂದು ಪೋಲೀಸರು ಸಂಶಯಗೊಂಡು, ೧೫-೧೬ ಮನೆಗಳಿಗೆ ಒಂದೇ ವೇಳೆಯಲ್ಲಿ ಝಡತಿಗೆ ಹೋಗಿದ್ದರು ಹೈದರಾಬಾದಿನಲ್ಲಿ ಇದೇ ಮೊದಲನೆಯ ಝಡತಿಯು.

ಕಳ್ಳರು ಪೋಲೀಸರ ಬಂದೂಕು ಕಸಕೊಂಡರು.

—(೦)—

ಕಲಕತ್ತೆಯಲ್ಲಿ ಹಾವರಾದ ಪೋಲಿಸ ಸ್ಟೇಶನದ ಒಬ್ಬ ನಾಯಿಕ ಮತ್ತು ಒಬ್ಬ ಸಿಪಾಯಿಯು ಗಸ್ತೀ ಹೋಗಿ ತಿರಿಗಿ ಬರುತ್ತಿದ್ದಾಗ ಕಳ್ಳರು ಇವರಿಗೆ ಗಂಟು ಬಿದ್ದು, ಇವರ ಬಂದೂಕನ್ನೇ ಕಸಕೊಂಡ, ಕಾಲಿಗೆ ಬುದ್ಧೀ ಹೇಳಿದರು.

ಜಾಹೀರ ನೋಟೀಸು

—(೦)—

ಯಾವತ್ತೂ ಜನರಿಗೆ ಕಳಗೆ ಸಹಿ ಮಾಡಿದವರು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧಪಡಿಸುವದೇನಂದರೆ- ರಾ. ರಾ. ಸುಬ್ಬಣ್ಣಾಚಾರ್ಯ ನಾರಾಯಣಾಚಾರ್ಯ ಡಂಬಳ ಸಾ॥ ಮುಂಡರಗಿ ತಾಲೂಕ ಗದಗ ಇವರು ಗದಗ ತಾಲೂಕ ಹಲರ್ಪೂರ ಗ್ರಾಮದ ಇನಾಮು ಸರ್ವೆ ನಂಬರ ೧೯೨ ಕರ ೧೯.೭ ತ ೦ ರೂಪಾಯಿ ೮ ಜೂಡಿ ೨ರೂ ೧೦ಆಣೆ ಈ ಪೂರಾ ನಂಬರನ್ನು ನಮಗೆ ಖರೀದಿಗೆ ಕೊಡುತ್ತಿದ್ದಾರೆ ಈ ಜಮೀನಿನ ಮೇಲೆ ಯಾರಾದರೂ ತಮ್ಮ ತಮ್ಮ ಸಾಲಗಳ ಮತ್ತು ವಾರಸಾ ನಾತೆಯ ಹಾಗೂ ಇತರ ಹಕ್ಕು ಬಾಧ್ಯತೆಗಳು ಇದ್ದಲ್ಲಿ ಅಂಥವರು ನಮಗೆ ಈ ಜಾಹೀರಾತು ಪ್ರಸಿದ್ಧವಾದ ಹದಿನೈದು ದಿವಸಗಳಲ್ಲಿ ಸವಕ್ಷವ ನಮ್ಮ ಕಡಿಗೆ ಬಂದು ಇಲ್ಲವೇ ನಮ್ಮ ಹೆಸರಿಲೆ ನೋಟೀಸಿನ ದ್ವಾರದಿಂದಾ ತಿಳುಹಿಸಿದಲ್ಲಿ ಅದರ ಬಗ್ಗೆ ಪೂರ್ಣ ವಿಚಾರಿಸಿ ಅದರ ನಿಕಾಲಿ ಮಾಡ್ಸಿ ಖರೀದಿಗೆ ತೆಗೆದುಕೊಳ್ಳುವೆವು ಜರ ಈ ಮುದ್ದತಿಯೊಳಗಾಗಿ ನಮಗೆ ಯಾವ ರೀತಿಯಿಂದ ಅಕ್ಷರ ತಿಳುಹಿಸದೆ ಇದ್ದಲ್ಲಿ ಮುಂದೆ ನಿಮ್ಮ ನಿಮ್ಮ ಹಕ್ಕು ಬಾಧ್ಯತೆಗಳು ಸದರೀ ಜಮೀನಿನ ಮೇಲೆ ಉಳಿಯಲಾರವು ಮತ್ತು ಅಲ್ಪವಯಿ ಹಿತಚಿಂತಕರು ಇದಕ್ಕೆ ಸಂಬಂಧಿಸಿದವರು ಇದರ ಮೇಲೆ ಯಾವ ತರದ ಬೋಜಾ ಹೊರಿಸುವವರು ಇದ್ದರೆ ಅವರ ಹಿತಚಿಂತಕರು ಸಹಿತ ಸದರೀ ಮುದ್ದತಿನೊಳಗಾಗಿ ನೋಟೀಸಿನದ್ವಾರದಿಂದಲೇ ನನಗೆ ತಿಳುಹಿಸಬೇಕು ತಿಳಿಯುವದು ತಾ॥ ೩೦-೪-೧೯೩೦ ಇಸ್ವಿ

ವೀರಪ್ಪ ಬಸಪ್ಪ ಕದಾಂಪೂರ ಸಾ॥ ಹಲರ್ಪೂರ ವಸ್ತಿ ಗದಗಪೇಟೆ ಫಕ್ಕೀರಪ್ಪ ಗುರಪ್ಪ ತಳಕಲ್ಲ ಇವರ ಮನೆಯಲ್ಲಿ ಇರುವದು

ನೋಟೀಸು

—(೦)—

ರಾ॥ ರಾ॥ ಬಸಪ್ಪ ಭರಮಪ್ಪ ಮುದ ನೂರ ಸಾ॥ ಕಿಲಟನೂರು ತಾ॥ ರಾಮದುರ್ಗ ಇ ವನಿಗೆ—

ತಮಗೆ ತಿಳಿಸುವದೇನೆಂದರೆ ನೋಟೀಸ ಕೊಡೋದೇನಂದರೆ– ನೀನು ನನ್ನ ಲಗ್ನದ ಗಂಡ ನಿರುತ್ತಿ ನಾನು ಅಲ್ಪವಯ ಇದ್ದಾಗ ನನ್ನ ತಂದಿ ೧ ವರ್ಷದ ಹಿಂದೆ ನೀನು ನನ್ನ ತಂದಿ ವನಿಯಲ್ಲಿಯೇ ಇರಬೇಕೆಂತ ಕರಾರು ಮಾಡಿಗುತ್ತನೆ ಯಾವತ್ತೂ ಖರ್ಚು ಮಾಡಿ ನಿನಗೆ ಲಗ್ನ ಮಾಡಿಕೊಟ್ಟನು

ಆ ಪ್ರಕಾರ ನೀನು ಕರಾರು ಮಾಡಿ ಲಗ್ನ ಮಾಡಿಕೊಂಡು ಎರಡು ತಿಂಗಳ ಇದ್ದಿ ನಂತರ ಜಗಳಾ ತೆಗದು ಹೊಸಮಾನಗಿತ್ತಿ ಕಾಲಿಗೆ ಪಗ್ಗರಿ ಮಾಡಿಕೊಳ್ಳದೆ ಹೋದಿ ಪುನಃ ಈ ವರೆಗೆ ನೀನು ಬರಲೇ ಇಲ್ಲಾ ನಾನು ಈಗ ನೈನೆರೆದು ೫ ವರ್ಷ ಆದವು ನಾನು ಹೇಳಿಕಳಿಸಿದರೆ ಒಲಿಬಲ್ಲಾ ನೀನು ಒಬ್ಬ ಮುಸಲಮಾನ ರಂಡಿಯನ್ನು ಇಟಗೊಂಡು ಇರುತ್ತಿ ಇದರ ಮುಂದೆ ನನ್ನನ್ನ ಇಟಗೊಂಡು ಬಾಳ್ವೆ ಮಾಡೋದು ನಿನ್ನ ಮನಸ್ಸಿನಲ್ಲಿ ಇಲ್ಲಾ ಅಂತ ತೋರುತ್ತದೆ

ಇವತ್ತಿನ ವರೆಗೆ ನನ್ನ ಅನ್ನ ವಸ್ತ್ರದ ಬಗ್ಗೆ ಜನಂ ಕಡೆಗೆ ೪೦೦ ರೂಪಾಯಿ ಸಾಲಾ ಮಾಡಿರುವೆ ಇನ್ನು ಮುಂದೆ ಸಾಲಾ ತಿಗೋಬಲ್ಲಾ ನನಗೆ ತಿಗಾದ್ವಿಲಗಿದೆ ಕಾರಣ ಈ ನೋಟೀಸು ಕೊಡೋ ಭಾಗ ಬಿತ್ತು ಈ ನೋಟೀಸು ಮುಟ್ಟಿದ ೭ ದಿವಸದಲ್ಲಿ ನೀನು ಬಂದು ನಾನು ಮಾಡಿದ ಸಾಲಾ ತೀರಿಸ ನಮ್ಮ ಧರ್ಮದ ಪ್ರಕಾರ ಶೀರಿ ಕುಬಸಾ ವಗೈರೆ ಕೊಟ್ಟು ರಂಡೀ ಬಿಟ್ಟು ನನ್ನನ್ನ ಚನ್ನಾಗಿ ಇಟಗೊಂಡು ಹೊಡೆಯದೆ ತ್ರಾಸ ಕೊಡದೆ ಬಾಳ್ವೆ ಮಾಡತೇನಂತ ಯೋಗ್ಯ ಎರಡು ಜಾಮೀನು ಕೊಟ್ಟು ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ರೆ ಇದೇ ಸೋಡಪತ್ರ ಅಂತ ತಿಳಿದು ಎಂಟನೇ ದಿವಸನ್ನು ಲಡಕಿ ಇ ಕೇನೆ ಆ ಮೇಲೆ ನಿನ್ನ ಯಾವ ಪ್ರಕಾರದ ಹಕ್ಕು ನನ್ನ ಮೇಲೆ ಇಲ್ಲ ನನ್ನ ಸಾಲದ ಬಗ್ಗೆ ನಿನ್ನ ಮೇಲೆ ದಿವಾಣಿಯಲ್ಲಿ ದಾವೇ ಮಾಡಿ ಖರ್ಚು ಸಹ ವಸೂಲ ಮಾಡಲಾಗುವದು ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಿಳಿಯೋದು. ತಾ॥ ೨೮-೪-೩೦ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಶೀವವ್ವ ಕೋಂ ಬಸಪ್ಪ ಮುದನೂರ ಸಾ॥ ಹಿಂಸಂಗಿ ಹಾಲಿನ ಸ್ಥಿ ಕುಂದನಗೌಡಪ್ಪ ಇವರ ಕೈನು ಇದೆ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಪೂರ್ಣ ಗುಣವಾಗುವದು. ಇದಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಪರೀಕ್ಷಿತ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆ ಖರ್ಚು ಇಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ ಪೋಸ್ಟ್ ತಿಕೀಟಿನ ರೂಪದಿಂದಾಗಲಿ ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮುಧ. ಬ್ಯಾಂಕ ಧಾರವಾಡ

ಜಾಹೀರ ನಿವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ವೇದಿಕೆಯನ್ನು ನಾವು ತಿಳಿಸಿರುವದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ

ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯ್ವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಆಖೈರದೊಳಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದದರಿಂದ ಕೂಡಲೆ ಅರ್ಜೀ ಮಾಡಿ, ಸ್ಥಳ ಕಾಯು ಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

ಸೆಶನ್ಸ ಕೋರ್ಟಿನ ಹತ್ತರ, ಧಾರವಾಡ

ನೋಟೀಸಿನ ದರಗಳು

—— (೦) ——

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಓಳಿಗೆ ಒಂದಾಣೆ. ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅಭಾಷಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಓಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಸೂಚನೆಯು

—(೦)—

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ,

ವರ್ಷ ೧೧ ಧಾರವಾಡ ಮಂಗಳವಾರ ತಾರೀಖು ೩ ನೇ ಮೇ ೧೯೩೦ (ಸಂಚಿಕೆ ೧೦೩

(Incorporated in S. S.) (Registered in England)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLAN

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟ್ರಾರದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ	ಖಂಡಿತವಾದ ಬೋನಸಗಳ
ಧಾರಾಳವಾದ ಕರಾರುಗಳ ಮೇಲೆ	ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ	ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ.

ಧಾರವಾಡ ಅರ್ಬನ ಕೋ-

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶಿಂದಿಗೆಯು ಎಂಟು ಲಕ್ಷದ ಮೇಲೆಂಟು ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಸೇಫ್ಟಿ ಇಟ್ಟುಕೊಳ್ಳುವ ಪೆಟಿಗೆಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಜಿ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಬಾಳುಕ್ಕೆ ವಿಶ್ರಮ ವರ್ಷದೊಳು ವೈಶಾಖ ಶುದ್ಧ ೫

೧ ವಿಜಯಂ ಶ್ರೀಕಪ್ರಿಯ

೨ ನಿಜಪದಪಿಯು ನೆಲೆಸಿರೆ ಸುಹಿತಕಾರಿತೆಗಳಿಂ

೩ "ವಿಜಯಂ" ಶ್ರೀಕರುಣಾ

೪ ವಿಹಿತಂಗಳ ವಿವರಿಸುವಲಿವುದು ಸಾಜಂಗ

ಹುಟ್ಟಿದ ಕೂಡಲೇ ಉತ್ಪಾತ.

ಲಾರ್ಡ ಅಯರ್ವಿನಸಾಹೇಬರು ಪೋಲೀಸ ಮತ್ತು ದಂಡು ತಮ್ಮ ಕರಾಂಗುಲಿಯು ಮೇಲೆ ಆಟವಂತೆ ಕುಣಿಸುತ್ತ ನಡಿಸುವ ಹಾಗೆ, ವರ್ತಮಾನ ಪತ್ರಗಳ ಮೇಲೂ ತಮ್ಮ ಅಮಲು ನಡೆಸಿದ್ದಾರೆ. ಲಾರ್ಡ ಸಾಹೇಬರಿಗೆ ಯಾವದೊಂದು ಕಾಯದೆಯನ್ನು ಸರ್ಟಿಫಿಕೇಟು ಕೊಟ್ಟು, ಅದನ್ನು ಮಂಜೂರ ಮಾಡುವ ಅಧಿಕಾರವಿರುವಂತೆ, ಆರ್ಡಿನನ್ಸ ಮತ್ತು ಲಷ್ಕರೀ ಕಾಯದೆಯನ್ನು ತೆಗೆಯುವ ಸಾರ್ವಭೌಮ ಅಧಿಕಾರವುಂಟು. ಆರ್ಡಿನನ್ಸವು ಲಷ್ಕರೀ ಕಾಯದೆಗಿಂತ ಸೌಮ್ಯವಾದದ್ದು. ಕಲ್ಲಿಗಿಂತ ಇಟ್ಟಂಗಿಯು ಮೆತ್ತಗಿನ್ನಂತೆ!! ಲಾರ್ಡ ಸಾಹೇಬರು ಅಸೆಂಬ್ಲಿ ಕರೆದು, ಅಲ್ಲಿ ವರ್ತಮಾನಪತ್ರಗಳ ಬಗ್ಗೆ ಹೊಸ ಕಾಯದೆ ಮಂಜೂರ ಮಾಡಿಕೊಳ್ಳಬೇಕಾಗಿತ್ತು. ಹಾಗೆ ಮಾಡದೆ, ಮೊದಲು ಆರ್ಡಿನನ್ಸ ತೆಗೆದು, ವರ್ತಮಾನಪತ್ರಗಳ ಮೇಲೆ ಭಯಂಕರ ಗದಾ ಪ್ರಹಾರ ಮಾಡಿದ್ದಾರೆ. ಈ ಗದಾ ಪ್ರಹಾರವು ಹುಟ್ಟಿದ ಕೂಡಲೆ ಉತ್ಪಾತವಾದಂತಿರುತ್ತಿದೆ. ಯಾವದೊಂದು ಕಾಯದೆಯನ್ನು ಅಮಲಿನಲ್ಲಿ ತರುವಾಗ, ಅದು ಇಂಥ ತಾರೀಖಿನಿಂದ ಅಮಲಿನಲ್ಲಿ ಬರುವದೆಂದು ಮೊದಲೇ ಜಾಹೀರ ಮಾಡುವರು. ತಾಂದ ಕಾಯದೆಯೇ ಒಂದು ಸಾಕ್ಷಿಯು. ಆದರೆ ಈ ಆರ್ಡಿನನ್ಸಕ್ಕೆ ಕ್ಷಮಾಪನ ಕಾಲ ಕೂಡ ಇಲ್ಲ. ಹುಟ್ಟಿದ ಕೂಡಲೆ ತನ್ನ ಭೀಕರ ಸ್ವರೂಪ ತೋರಿಸಿತು. ಕಾಯದೆಯಾಗಿ ಅಪರಾಧವಾದರೆ ಶಿಕ್ಷೆಯಾಗಬೇಕು. ಈ ನ್ಯಾಯ ಮಾರ್ಗವು ಇದರಲ್ಲಿ ಕೂಡಲೇ ಇಲ್ಲ. ಏಕೆಂದರೆ ಮುಂದೆ ಅಪರಾಧ ಮಾಡುವರೆಂದು ಊಹಿಸಿ ಅದರ ಪ್ರಾಯಶ್ಚಿತ್ತವೆಂದು ದಿಲ್ಲಿಯಲ್ಲಿ ಇಂಥ ಪ್ರತಾಪ, ತೇಜ, ಅರ್ಜುನ ಮತ್ತು ಹಿಂದುಸ್ಥಾನ ಟಾಯಿಮ್ಸಕ್ಕೆ ಎರಡರಿಂದ ಐದು ಸಾವಿರದ ಜಾಮೀನು ಬೇಡಿದರು. ಈ ಜಾಮೀನು ಬೇಡುವದೇ ಸುಲ್ತಾನಶಾಹಿಯ ಪ್ರತ್ಯಕ್ಷ ದ್ಯೋತಕವಾಗುತ್ತದೆ. ಇಂಥಿಂಥ ಲೇಖಗಳನ್ನು ಬರೆದು, ಇಂಥಿಂಥ ಅಪರಾಧ ಮಾಡಿದ್ದೀರಿ; ಅದಕ್ಕೆ ನೀವು ಜಾಮೀನು ಕೊಡಬೇಕೆಂದು ಹುಕುಮು ಮಾಡುವದು ವಾಸ್ತವಿಕವಾಗುತ್ತದೆ. ಹೀಗೆ ಮಾಡದೆ ಒಮ್ಮೆಯಲೇ ಜಾಮೀನು ಬೇಡಿದ್ದು, ಅಧಿಕಾರದ ದುರುಪಯೋಗವೇ ಸರಿ. ಈ ಪ್ರಕಾರ ನಡೆಯುವ ಬೇಬಂದಶಾಹಿಗೆ ಉತ್ತರವೆಂದು ಈ ಎಲ್ಲ ಪತ್ರಕಾರರು ಒಮ್ಮೆಲೆ ತಮ್ಮ ಪತ್ರದ ಮುದ್ರಣವನ್ನೇ ನಿಲ್ಲಿಸ ಮಾಡಿದ್ದಾರೆ. ಹೀಗೆ ಮಾಡದ ಪತ್ರಕಾರರು ತಮ್ಮ ಜಾಮೀನುಗಳನ್ನು ಸರಕಾರದ ಟ್ರೆಜರಿಯಲ್ಲಿ ತುಂಬಿದ್ದರೆ, ಪುನಃ ಪುನಃ ಈ ರಕಮನ್ನು ಹೆಚ್ಚಿಸುತ್ತಾ ಕೊನೆಗೆ ಮುದ್ರಾಲಯವನ್ನೇ ಜಪ್ತ ಮಾಡುವ ಸಮಯ ತರುತ್ತಿದ್ದರು. ಈ ಭವಿಷ್ಯ ಮೊದಲೇ ತಿಳಿದು ಪತ್ರಗಳನ್ನೇ ನಿಲ್ಲಿಸುವ ಕ್ರಮವ ಮಾಡಿದ್ದಾರೆ.

ಹಿಂದಕ್ಕೆ ಅಸಹಕಾರ ಚಳವಳಿಯ ಕಾಲಕ್ಕೆ, ದೇಶಾಭಿಮಾನಿಗಳು ಈ ಕಾಯದೆಯ ಬಲಿಗೆ ಬಿದ್ದಿದ್ದರು. ಕಾಯದೆಯು ಭಯಂಕರ ಅನ್ಯಾಯವಾಗಿರುತ್ತದೆಂದು ಆಗ್ಗೆ ಹಾಯಕೋರ್ಟಿನ ಜಡ್ಜರು ಕೂಡ ಅಭಿಪ್ರಾಯ ಪಟ್ಟು, ಕಾಯದೆಯ ವಿರುದ್ಧ ತಮಗೆ ಹೋಗಗೊಳಿಸಲಿಕ್ಕೆ ಮಾರ್ಗವಿಲ್ಲೆಂದು ಚಿಂತಿಸಿ ತಮ್ಮ ತೀರ್ಪಿನಲ್ಲಿ ಬರೆದಿರುತ್ತಾರೆ. ತಮ್ಮವರೇ ಆದಂಥ ಯುರೋಪಿಯನ್ನ ಮತ್ತು ಮುಸಲಮಾನ ಹಾಯಕೋರ್ಟಿನ ಜಡ್ಜರು ತಮಗೆ ಕೊಟ್ಟ ಆಹುತಿಯನ್ನು ಮುಚ್ಚಿಟ್ಟುಕೊಂಡು, ಪುನಃ ಕಪ್ಪಿನ ಮೇಲೆ ತಪ್ಪು ಮಾಡುವದು ರಾಜ್ಯಕಾರಭಾರಕ್ಕೆ ಹೆಚ್ಚಿನ ಅಲಂಕಾರವನ್ನುಂಟು ಮಾಡುವದೇ ಸರಿ.

ಬಸವಜಯಂತಿಯಲ್ಲಿ ಖಾದೀ ಮತ್ತು ರಾಷ್ಟ್ರೀಯ ನಿಶಾನೆ.

—(o)—

ಮೊನ್ನಿನ ದಿವಸ ಹುಬ್ಬಳ್ಳಿಯಲ್ಲಾದ ಬಸವ ಜಯಂತಿಯ ಉತ್ಸವದಲ್ಲಿ ಖಾದಿ ಮತ್ತು ರಾಷ್ಟ್ರೀಯ ನಿಶಾನೆಯು ಮುಖ್ಯಂಗಗಳಾಗಿದ್ದವು. ಮೆರವಣಿಗೆಯಲ್ಲಿ ಬಸವಣ್ಣನವರನ್ನು ಹಿಡಿದವರೆಲ್ಲರೂ ಖಾದೀ ಧಾರಣ ಮಾಡಿದ್ದರು. ಮತ್ತು ಸ್ವಯಂಸೇವಕರು ರಾಷ್ಟ್ರೀಯ ನಿಶಾನೆ ಹಿಡಿದಿದ್ದರು. ಹುಬ್ಬಳ್ಳಿಯ ವೀರಶೈವರು ಹೊಗಳುವಂತೆ ಮಾಡಿದ ಈ ಕೃತಿಯನ್ನು ಕರ್ತವ್ಯವೆಂದು ತೋರಿಯುವರು ಬಸವ ಜಯಂತಿ ಮಾತ್ರವಲ್ಲ; ಬೇರೆ ಪ್ರಸಂಗಗಳಲ್ಲಿಯೂ ಮಾಡುವರೆಂದು ನಂಬಿರುತ್ತೇವೆ.

ಹುಬ್ಬಳ್ಳಿಯಲ್ಲಿ ಐವರು ಸ್ತ್ರೀಯರು ಮೆರವಣಿಗೆಯಿಂದ ಉಪ್ಪು ಮಾರಿದರು.

—(o)—

ಕರ್ನಾಟಕದ ಕಂಟಗಿನಿಯು ಶಾಸನಭಂಗದ ದಿವಸ ಕಾಯದೆಭಂಗವಾಗಬೇಕೆಂದು ಗೊತ್ತಾದ ಮೇರೆಗೆ ಹುಬ್ಬಳ್ಳಿಯಲ್ಲಿಯೂ ಕಾಯದೆಭಂಗವಾಯಿತು. ಐದು ಸ್ತ್ರೀಯರು ಕರ್ನಾಟಕ ಪ್ರೆಸಿನಿಂದ ಮೆರವಣಿಗೆ ತೆಗೆದು, ಬೀದಿಗುಂಟ ಉಪ್ಪು ಮಾರುತ್ತಾ ಹೋದರು. ಪುರಾಣಗಳು ನಡೆದಲ್ಲಿಗೂ ಹೋಗಿ, ಸ್ತ್ರೀಯರಿಗೆ ಸ್ವದೇಶಿಯ ಉಪದೇಶ ಮಾಡಿ, ಬಳಿಕ ಉಪ್ಪು ಮಾರಿದರು.

ಶಿಕ್ಷೆಯ ನೆಪದಿಂದ ವ್ಯಕ್ತಿಸ್ವಾತಂತ್ರ್ಯದ ಮೇಲೆ ಕಣ್ಣಿಗೆ ಬಿಜೆ.

—(o)—

ಪುಣೆಯ ಸುಪ್ರಸಿದ್ಧ ನಾಗರಿಕರಾದ ಶ್ರೀ. ಭೋಪಟಕರರಿಗೆ ಆರು ತಿಂಗಳ ಶಿಕ್ಷೆಯಾಯಿತಷ್ಟೆ; ಈ ಶಿಕ್ಷೆಯು ನಿಷೇಧವೆಂದು ಮ್ಯುನಿಸಿಪಾಲಿಟಿ ಯವರೇ ತಮ್ಮ ಹುಕುಮಿನಿಂದ ತಮ್ಮ ಅಧೀನಕ್ಕೊಳಪಟ್ಟ ಎಲ್ಲ ಕಚೇರಿ ಮತ್ತು ಶಾಲೆಗಳಿಗೆ ಬಿಡುವು ಕೊಟ್ಟು, ಹರತಾಳ ಮಾಡಿದರು. ಈ ಪ್ರಕಾರದ ಮಾರ್ಗ ಮಾತ್ರ ಪುರುಷತ್ವದ ದ್ಯೋತಕವಾಗುತ್ತದೆ. ಚಾಪೇಕರನೆಂಬ ಹೆಸರು ಬಂದೇ ತೀರಿ, ಒಂದು ಮತ್ತು ಎರಡು ಇದರಲ್ಲಿ ಸರಾಸರಿ ಎಲ್ಲಾ ಪುಕ್ಕ ಎನ್ನುವಷ್ಟು ಅಂತರವುಂಟು.

ಸಾಂಬಯಿಗೆ ಮಹಾತ್ಮರ ಆಗಮನ

ಉಪ್ಪಿನ ಉಗ್ರಾಣದ ಮೇಲೆ ದಾಳಿ.

—(O)—

ಮೊದಲೇ ದಂಡಿನ ಬಂದೋಬಸ್ತು

ಮಹಾತ್ಮರು ಮುಂಬಯಿಗೆ ಬಂದು ಉಪ್ಪಿನ ಉಗ್ರಾಣದ ಮೇಲೆ ದಾಳೀ ಇಡುವರೆಂದು ವರ್ತಮಾನವಾಗಿದೆ. ಆ ಸಮಯದಲ್ಲಿ ಅಥವಾ ಬೇರೊಂದು ಸಮಯದಲ್ಲಿ ದಂಗೆ ಮಾಡೀತೆಂದೂ, ಅದರ ಬಂದೋಬಸ್ತು ಮಾಡಬೇಕೆಂದೂ ಗವ್ಹರ್ನರಸಾಹೇಬರು ಈಗಾಗಲೆ ಹೊರಗಿನಿಂದ ದಂಡು ತರಿಸಿದ್ದಾರೆ.

ಅಧ್ಯಕ್ಷ ಪಟೇಲರು ರಾಷ್ಟ್ರೀಯ ನಿಶಾನೆ ಏರಿಸಿದರು

—(O)—

ದಿಲ್ಲಿಯಲ್ಲಿ ಶ್ರೀ. ಪಟೇಲರವರಿಂದಲೇ ರಾಷ್ಟ್ರೀಯ ಧ್ವಜವಂದನೆ ಯಾಯಿತು. ಜಯಪ್ರಾಪ್ತಿಯಾಗುವತನಕ ಯಾವ ಕಾರಣದಿಂದಲೂ ಈ ನಿಶಾನೆ ಇಳಿಸಲಾಗದೆಂದು. ಶ್ರೀ. ಪಟೇಲರು ಸ್ವಯಂಸೇವಕರಿಗೆ ಸೂಚನೆಗಳುಳ್ಳಂಥ ಭಾಷಣ ಮಾಡಿದರು.

ವರ್ತಮಾನಪತ್ರಗಳ ದಬ್ಬಾಳಿಕೆ.

ದಿಲ್ಲಿ, ಲಾಹೋರ ಮತ್ತು ಕಲಕತ್ತೆಯಲ್ಲಿ ಕೋಲಾಹಲ.

—:(೦):—

ದಿಲ್ಲಿಯ ಎಲ್ಲ ಪತ್ರಗಳು ಬಂದಾದವು.

—(೦)—

ದಿಲ್ಲಿಯಲ್ಲಿ ಅಧಿಕಾರಿಗಳು ಬಹುತೇಕವಾಗಿ ಎಲ್ಲ ವರ್ತಮಾನಪತ್ರ ಮತ್ತು ಮುದ್ರಾಲಯಗಳಿಂದ ಜಾಮೀನು ಬೇಡಿದ್ದಾರೆ. ಇವುಗಳ ಜಾಮೀನದ ರಕಮು ಐವತ್ತು ಸಾವಿರಕ್ಕಿಂತ ಹೆಚ್ಚಾಗುತ್ತದೆ. ಇದು ಜಾಮೀನದ ವಿಷಯವಲ್ಲ, ಶಕ್ತಿದ ಪ್ರಶ್ನವಾಗಿದೆ. ಆದ್ದರಿಂದ ಎಲ್ಲರೂ ಒಂದಾಗಿ, ಸರಕಾರವು ದಬ್ಬಾಳಿಕೆ ನಿಲ್ಲಿಸುವತನಕ ಒಂದು ಪತ್ರವನ್ನಾದರೂ ಮುದ್ರಿಸಬಾರದೆಂದು ಗೊತ್ತುಮಾಡಿದರು. ಇದರಿಂದ ದಿಲ್ಲಿಯಲ್ಲಿ ಎರಡು ದಿವಸಗಳಿಂದ ಒಂದೂ ಪತ್ರವಿಲ್ಲದಂತಾಗಿದೆ. ಇಷ್ಟೇ ಅಲ್ಲದೆ ಪರಊರುಗಳಿಂದಲೂ ಯಾರೂ ತಮ್ಮ ಪತ್ರಗಳನ್ನು ದಿಲ್ಲಿಗೆ ಕಳಿಸಬಾರದೆಂದೂ ಮಾರುವವರು ಇವನ್ನು ಮಾರಬಾರದೆಂದೂ ಕಟ್ಟು ಮಾಡಿದ್ದಾರೆ.

ಕಲಕತ್ತೆಯಲ್ಲಿಯೂ ಹಾವಳಿ.

—(೦)—

ಕಲಕತ್ತೆಯಲ್ಲಿ ಫ್ಯಾರವರ್ಡ, ಲಿಬರ್ಟಿ, ಅಮೃತಬಝಾರ ಹಿಂದವಾಸಿ ಮೊದಲಾದ ಪತ್ರಗಳಿಂದಲೂ ಜಾಮೀನು ಬೇಡಿದ್ದಾರೆ.

ಲಾಹೋರಿನ ನಿಷೇಧ.

—(೦)—

ದಬ್ಬಾಳಿಕೆಯ ನಿಷೇಧವೆಂದು ಲಾಹೋರಿನ ವರ್ತಮಾನಪತ್ರಗಳು ಎರಡು ದಿವಸ ಪತ್ರಗಳನ್ನು ಮುದ್ರಿಸಬಾರದೆಂದು ಗೊತ್ತು ಮಾಡಿದ್ದಾರೆ.

ಮೊದಲು ಹೊಟ್ಟೆಪ್ಪ ಬಳಿಕ ವಿಶ್ವಪ್ಪ!!

ವಿಲಾಯತಿಯ ಡಾಕ್ಟರರು ಹಿಂದುಸ್ಥಾನದ ಡಾಕ್ಟರರು ತಮ್ಮ ಸರೀಕರಲ್ಲವೆಂದು ನಿರ್ಣಯಿಸಿದ್ದರಿಂದ, ಹಿಂದುಸ್ಥಾನದ ಡಾಕ್ಟರರು ಅವರ ಕೃತ್ಯವನ್ನು ನಿಷೇಧಿಸಿ, ವಿಲಾಯತಿಯ ಔಷಧಗಳನ್ನು ಕೊಳ್ಳಬಾರದೆಂದು ಅಲ್ಲಲ್ಲಿಯ ಡಾಕ್ಟರರು ಸಭೆಮಾಡಿದಂತೆ ಬೆಳಗಾವಿಯಲ್ಲಿಯೂ ಸಭೆಯಾಗಿ ಠರಾವು ಮಾಡುವಾಗ, ಸಿವ್ಹಿಲಸರ್ಜನರೊಬ್ಬರೇ ಪ್ರತಿಕೂಲ ಮತ ಕೊಟ್ಟರು. ಇದರಲ್ಲಿ ಸಾಹೇಬರ ಸ್ವದೇಶಾಭಿಮಾನ-ಸ್ವಜನಾಭಿಮಾನ ವ್ಯಕ್ತವಾಗುತ್ತದೆ. ಇದರ ತಾತ್ಪರ್ಯವು ಮೊದಲು ಹೊಟ್ಟೆಪ್ಪ ಬಳಿಕ ವಿಶ್ವಪ್ಪವೆಂಬಂತಾಗಿರುತ್ತದೆ.

ವಕೀಲರ ಸಭೆಗೆ ಪೋಲೀಸರ ಪ್ರತಿಬಂಧ.

—()—(೦)—()—

ಮದ್ರಾಸದಲ್ಲಿ ಅ್ಯಡವೋಕೇಟರಾಗಿದ್ದ ಶ್ರೀ ಗೋವಿಂದಸ್ವಾಮಿ ಮೊದ್ಲಿಯಾರರವರು ಗುಂಡು ಹೊಡೆದು ಸತ್ತಿದ್ದಾರೆ; ಇವರ ಗೌರವಕ್ಕಾಗಿ ಹಾಯಕೋರ್ಟಿನ ಜಡ್ಜರು ಸಹ ದುಃಖ ಪ್ರದರ್ಶನ ಮಾಡಿದರು. ಇವರ ಮೃತ್ಯುವಿನ ಸಲುವಾಗಿ ದುಃಖ ಪ್ರದರ್ಶನ ಮಾಡಲು ವಕೀಲರು ಸಭೆ ಕೂಡಿಸುವ ನೋಟೀಸು ತೆಗೆದರು. ಇದಕ್ಕೆ ಸರ ಸಿ. ಪಿ. ರಾಮಸ್ವಾಮಿ ಅಯ್ಯರ ನೂರಾರು ಗಣ್ಯ ಜನ ವಕೀಲರು ಸಹೀ ಮಾಡಿದ್ದರು. [illegible] ಗಳ ತನಕ ಪಟ್ಟಣದಲ್ಲಿ ಸಭೆ [illegible] ನಾವು ನೋಟೀಸು ತೆಗೆ[illegible] ಮಾಡಲಿಕ್ಕಾಗದೆಂದು ಪೋಲೀಸ ಕಮೀಶನರು [illegible]ಕೆಗೆ ತಿಳಿಸಿದ್ದಾರೆ. ಒಂದು ಕಾಲದಲ್ಲಿ ಸರ ರಾಮಸ್ವಾಮಿಯವರು ಪೋಲೀಸ ಖಾತೆಯ ಹೆಡ್ಡರಿದ್ದರು. ಆ ಇಂಗ್ರೇಜಿ ಹೆಡ್ಡರ ಬದಲಾಗಿ ಈಗ ಸ್ವಲ್ಪ ಕಾಯದೆ ಪಂಡಿತರಾದರೂ ಕನ್ನಡ ಹೆಡ್ಡರಾಗುವ ಹೊತ್ತು ಬಂದಿದೆ. ಇವರು ಅಸೆಂಬ್ಲಿಯ ಅಧ್ಯಕ್ಷರಾಗುವ ಆಶೆಯುಳ್ಳವರಾಗಿದ್ದಾರೆಂಬಲೂ ಧೋಕವಾರ್ತೆಯುಂಟು.

ಸುರಂಗದಲ್ಲಿರುವಾಗಲೇ ಅಧ್ಯಕ್ಷಪದದ ಚುನಾವಣೆ.

—(೦)—

ಬ್ರಿಟಿಶ ಸರಕಾರದ ಕೃಪಾದೃಷ್ಟಿಯಿಂದ ಸತ್ತೆ ಸಿಡಿಯುವಂಥ ಬೇಸಿಗೆಯಲ್ಲಿ ಸಾಕಷ್ಟು ಗಾಳಿಯು ಸುಳಿ ಕೂಡ ಇಲ್ಲದೆ, ರಕ್ತ ಗಟ್ಟಿಯಾಗಿ ಕೂತು ಇಳಿದು, ಸೆರೆಯಲ್ಲಿ ವ್ಯಥೆಪಡುತ್ತಿರುವ ಶ್ರೀ ಸೆನಗುಪ್ತರು ಕಲಕತ್ತೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಈ ಚುನಾವಣೆಯು ಸತತವಾಗಿ ಐದನೆಯ ಸಾರೆಯಾಗಿದ್ದು, ಇದರಿಂದ ಇವರಲ್ಲಿ ಪ್ರಜರ ವಿಶ್ವಾಸವೆಷ್ಟಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಆಳರಸರು ಇಂಥವರನ್ನು ನಂಬದೆ, ಎರಡು ಸವಿ ಮಾತುಗಳನ್ನಾಡುವಂಥ ಮನುಷ್ಯರನ್ನು ನಂಬುವದರಿಂದಲೇ ಹಿಂದೂ ದೇಶದ ಸಾಂಪ್ರತೀನ ಸ್ಥಿತಿಗೆ ಒಂದು ಈಗಂತೂ ಹಾಹಾಕಾರವನ್ನುಂಟು ಮಾಡಿರುತ್ತದೆ.

ದೊಡ್ಡ ದೊಡ್ಡವರ ದಸ್ತಗಿರಿ ಮತ್ತು ಶಿಕ್ಷೆ.

ಮೂರು ದಿವಸ [illegible] ಬಳಿಕ ದೊಡ್ಡ ದೊಡ್ಡವರ ದಸ್ತಗಿರಿ ಮತ್ತು ಶಿಕ್ಷೆಯ ತಾರಿನ ಸುದ್ದಿಗಳು ಹಿನ್ನಿನಂತೆ ಬಂದಿರುತ್ತವೆ.

ಹಿಡಿಯಲ್ಪಟ್ಟವರು

೧ ಮೌ. ಜಾಫರಅಲ್ಲಿಖಾನ ಲಾಹೋರ
೨ ಶ್ರೀ. ಕಾಶಿನಾ[illegible]ದ ಶಿವರಾವ ಮಂಗಳೂರ
೩ ಶ್ರೀ ಎ ಎಸ್ [illegible]

ಶಿಕ್ಷೆ

೧ ಶ್ರೀ. ರಾಜಗೋಪಾಲಾಚಾರ್ಯ ಆರು ತಿಂಗಳ ಸಾದಾ
೨ ಶ್ರೀ ಶಾಂತಾರಾಮ ಲೇಲೇಕರ ,,
೩ ಶ್ರೀ ಎಸ್ ಎನ್ ದೇಶಪಾಂಡೆ ಕಾರವಾರ ನಾಲ್ಕು ತಿಂಗಳ ಸಕ್ತಮ.

[illegible] ಮಗನಿಗೆ ಒಂದು ವರ್ಷದ ಕಠಿಣ ಶಿಕ್ಷೆ.

—()(೦)()—

ದಿಲ್ಲಿಯ ಮ್ಯಾಜಿಸ್ಟ್ರೇಟರು ಮಹಾತ್ಮರ ಚಿರಂಜೀವರಾದ ಶ್ರೀ. ದೇವೀದಾಸ ಗಾಂಧಿಯವರಿಗೆ ರಾಜದ್ರೋಹದ ಆರೋಪದ ಮೂಲಕ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ಕೌನ್ಸಿಲಕ್ಕೆ ಮೆಂಬರರ ರಾಜೀನಾಮೆ.

—(೦)—

ಮುಂಬಯಿ ಕೌನ್ಸಿಲದ ಮೆಂಬರರಾದ ಶ್ರೀ. [illegible]ರರು ದಬ್ಬಾಳಿಕೆಯನ್ನು ನಿಷೇಧಿಸಿ, ಕೌನ್ಸಿಲಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇದೇ ಪ್ರಕಾರ ಮುಂಬಯಿಯಲ್ಲಿ ಆನರರಿ ಮ್ಯಾಜಿಸ್ಟ್ರೇಟರಾಗಿರುವ ಗೋವಿಂದಲಾಲ [illegible] ರಾಜೀನಾಮೆ ಕೊಟ್ಟರು.

ಸತ್ಯಾಗ್ರಹಿಗಳನ್ನು ಒಯ್ಯಬೇಕೆಂದು ಬಂದ ಪೋಲೀಸರಿಗೆ ಮೋಟಾರ ಸಿಗಲಿಲ್ಲ

—(೦)—

ಪೇಣದಲ್ಲಿ ಹಿಡಿದ ಮತ್ತು ಶಿಕ್ಷೆಯಾದ ಮರಾಠೀ ಸತ್ಯಾಗ್ರಹಿಯಾದ ಶ್ರೀ ಗೋಸಾವಿಯವರ ದೇಶೆಯಿಂದ ಬಂದ ಪೋಲೀಸರಿಗೆ ಸಿಪಾಯರೊಬ್ಬರೂ ಮೋಟಾರ ಕೊಡಲಿಲ್ಲ. ಆಗ ಪೋಲೀಸರು [illegible] ವರೆಗೆ ನಡೆಯುತ್ತ ಹೋಗಿ ಮೋಟಾರ ತಂದು ಶ್ರೀ ಗೋಸಾವಿಯವರನ್ನು [illegible] ಹೋದರು.

ನೋಟೀಸು

—(೦)—

ರಾ|| ರಾ|| ಬಸಣ್ಣೆಪ್ಪಾ ಚನ್ನಬಸಪ್ಪಾ ಹೂದಕಲಾಟ್ಟಿ ಸಾ|| ಉಪ್ಪಿನಬೆಟಗೇರಿ ತಾಲೂಕ ಧಾರವಾಡ ಇವರಿಗೆ-

ನಿಮಗೆ ಹುಟ್ಟಿದ ಗುಡಾರ ಮಾಡುವ ಬಸಪ್ಪಾ ತಂದಿ ಕರಿಮಲ್ಲಪ್ಪಾ ಬಂಡಕನವರ ಸಾಕೀನ ಬಿಬಾರಗಟ್ಟಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ಧಾರವಾಡ ತಾಲೂಕ ಬಿಬಾರಗಟ್ಟಿ ಗ್ರಾಮದಲ್ಲಿರುವ ನನ್ನ ಜಮೀನ ಮತ್ತು ಮನೆಯು ಇದ್ದ ಜಮೀನು ನಿಮಗೆ ಅಜಮಾಸು ಆರೇಳು ವರ್ಷಗಳ ಹಿಂದೆ ಕೋರ್ಟಿನಲ್ಲಿ ಬರೆದುಕೊಟ್ಟಿದ್ದನು. ಆ ಬಾಬತು [illegible] ಸಹಿತ ಮೆ. ಅಬ್ದುಲ್ ಸಾಹೇಬ ಖಾದಿರಸಾಹೇಬ ಮನ್ಸೂರಸಾಹೇಬರವರ, ಹುಸೇನಸಾಹೇಬ ವ|| ಗವಸುಸಾಹೇಬ [illegible] ಸಾ|| ಬೆಟಗೇರಿ, ಇನಾಮಸಾಹೇಬ ವ|| [illegible]ಸಾಹೇಬ ಮುನವಳ್ಳಿ ಮತ್ತು ಕೆಲವರ ಸಮಕ್ಷಮ ಕೊಟ್ಟಿದ್ದು [illegible] ಬಾಕಿ ಸದರ ಕೋರ್ಟಿನಲ್ಲಿ ಕಾಗದಪತ್ರ ಮೇಲೆ ಭರಮಾಯಿ. ಹಾಕಿ ಕಳೆದೆನೆಂದು ಹೇಳಿದವನು ಇಂದು ನಾಳೆ ಮಾಡುತ್ತಾ ಈಗ [illegible] ಜಮೀನಿಕ್ಕೆ ಹತ್ತಿರುತ್ತೀದಿ ಅದ್ದರಿಂದ ನಿನಗೆ ಈ ನೋಟೀಸು ಕೊಡಬೇಕಾಯಿತು. ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಕಾಗದ ನನಗೆ ಮರತ ಕೊಡಬೇಕು. ಇದಕ್ಕೆ ತಪ್ಪಿದರೆ- ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡಲಾದೀತು ಮತ್ತು ಸದರ ಕಾಗದ ರದ್ದ ಬಾತಲ ಇರುತ್ತದೆಂದು ತಿಳಿಯಬೇಕು. ಆ ಸಂಧಿ ನೀನು ಏನಾದರೂ ಇಲಾಜ ನಡಿಸಿದರೆ- ಅ[illegible] ಬಾಬತು ಆಗುವ ನನ್ನ ಯಾವತ್ತು ಲುಕಸಾನ ಭರಾಯಿಸಿ ಕೊಡಲಿಕ್ಕೆ ನೀನು ಜವಾಬದಾರನಿರುತ್ತೀದಿ ಎಂದು ತಿಳಿಯುವದು. ಈ ನೋಟೀಸಿನ ಖರ್ಚ ನಿನ್ನ ತಲೆಯಮೇಲಿದೆ. ತಾ|| ೩ ನೇ ೧೯೩೦ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುಡಾರ ಬಸಪ್ಪಾ ತಂದಿ ಕರಿಮಲ್ಲಪ್ಪಾ ಬಂಡಕನವರ ಈತನ ಕೈದು ರುತ್ತದೆ.

ಸ್ವಯಮುಂದು

—(೦)—

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ನೋಟೀಸು

—(೦)—

ಮುದಕಪ್ಪಾ ಚನ್ನ ಮಲ್ಲಪ್ಪಾ ಕಾಂಬಳೆ ರ ಸಾಕೀನ ಹೊನ್ನಾಪೂರ ತಾಲೂಕ ಬೈಲಹೊಂಗಲ ಇವರಿಗೆ-

ಎಡಗೈ ಹೆಬ್ಬೆಟ್ಟಿನ ಗುಡಾರ ಮಾಡುವ ಸಂಗಪ್ಪಾ ತಂದಿ ಕಲ್ಲಪ್ಪಾ [illegible] ಸಾಕೀನ [illegible] ತಾಲೂಕ ಬೈಲಹೊಂಗಲ ಹಾಲಿ ವಸ್ತಿ [illegible] ತಾ|| ಧಾರವಾಡ ಈತನು ಈ ನೋಟೀಸಿನಿಂದ ತಿಳಿಸುವದೇನಂದರೆ-

ನನ್ನ [illegible] ಮಾಡಿಕೊಳ್ಳ [illegible] ಎರಡು ಜಿನ್ನಗಳ ಜಬರೆಯಿಂದ [illegible] ದ ಪ್ರಕಾರ

೧ ಜಿಳೇಬು, ಬಿಲಪಂಕ

೨ ಕರೇದು ನೆಟ್ಟಿಗರೋಡು

ಈ ಪ್ರಕಾರ ಜಬರೆಯುಳ್ಳ ಎರಡು ಎತ್ತುಗಳನ್ನು ಅವುಗಳ ಪೇಟಿಮಾಲ ಧಾರಣೆ [illegible] ರು (೬೬) ರುಪಾಯಿ. ನನ್ನ ವಶದಲ್ಲಿ ಇದ್ದ ಎತ್ತುಗಳನ್ನು ನೀನು ನನಗೆ ಹುಷಾರಿ ಕೊಡುವದಾಗಿ ಹೇಳಿ. ಒಂದು ತಿಂಗಳ ಮುದತ್ತಿನಲ್ಲಿ ನಿನ್ನ ಎತ್ತುಗಳನ್ನು ನಿನಗೆ ತಂದು ಕೊಡುತ್ತೇನೆಂದು ಹೇಳಿ ಈಗ [illegible] ರುಪಾಯಿಕು. ಆದಾಗ್ಯೂ ನಾನು [illegible] ಮುದ್ದಾಮ ಬಂದು ನಿನಗೆ ಕೇಳಿದಾಗ್ಯೂ ಮತ್ತು ನನ್ನ ಕಡೆಯಿಂದ ಗುನೆಪ್ಪರನ್ನು ಕಳಿಸಿದಾಗ್ಯೂ ನೀನು ದಾದು ಮಾಡದೆ ಸುಮ್ಮನೆ ಕುಳಿತುಕೊಂಡಿರುತ್ತಿ. ಆದರೆ ಈಗ ನಾನು ಈ ನೋಟೀಸು ಕೊಡುವ ಕಾರಣವೆಂದರೆ ಈ ನೋಟೀಸು ಮುಟ್ಟಿದ ಹತ್ತು ದಿವಸದೊಳಗಾಗಿ ನನ್ನ ಎತ್ತು ನನ್ನ ಕೈಯಕ್ಕೆ ಕೊಟ್ಟು, ನನ್ನ ಕಡೆಯಿಂದ ಪಾವತಿ ತೆಗೆದುಕೊಳ್ಳಬೇಕು ಮತ್ತು ಈ ಒಂದೂವರೆ ವರ್ಷದಲ್ಲಿ ನನ್ನ ಎತ್ತುಗಳಿಂದಾಗುತ್ತಿದ್ದ ಫಾಯದೆ ಇನ್ನೂರು ರುಪಾಯಿ ಕೊಡಬೇಕು. ತಪ್ಪಿದಲ್ಲಿ ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡಲಾದೀತು. ಈ ನೋಟೀಸಿನ ಖರ್ಚ ನಿನ್ನ ತಲೆಯಮೇಲಿದೆ ತಿಳಿಯುವದು.

ತಾ|| ೨ ನೇ ೧೯೩೦ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುಡಾರ ಸಂಗಪ್ಪಾ ತಂದಿ ಕಲ್ಲಪ್ಪಾ [illegible] ಈತನ ಕೈದು ಇರುತ್ತದೆ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣಾ ಸಂಸ್ಥೆ.

[illegible]

ಪ್ರ. ಶ್ರೀ. [illegible]

[illegible] ಧಾರವಾಡ

ನೋಟೀಸಿನ ದರಗಳು

— —(೦)— —

ತಿಂಗಳ ಕಾಲಿನ ಹತ್ತು ಪಂಕ್ತಿಗಳಿಗೆ ಒಂದು ರುಪಾಯಿ [illegible] ಇಂಗ್ಲಿಷ [illegible] ಸರಕಾರಿ [illegible] ನೋಟೀಸುಗಳಿಗೆ [illegible] ದ [illegible] ಕಾಲಿನ [illegible] ಕಾರ್ಯಾಲಯದ [illegible] ಪತ್ರವ್ಯವಹಾರ ಮಾಡಬಹುದು.

ವ್ಯಾನೆಜರ ವಿಜಯ ಧಾರವಾಡ.

ಈ ಪತ್ರವನ್ನು [illegible] ಕೊಡಕಸಾರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ರವಿವಾರ ತಾರೀಖು ೪ ನೇ ಮೇ ೧೯೩೦ (ಸಂಚಿಕೆ ೧೦೩

(Incorporated in S. S.) (Registered in England)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLAN

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು	ಸ್ಥಿರವಾದ ಅಸಮರ್ಥತೆಯುಳ್ಳದ್ದೂ	ಖಂಡಿತವಾದ ಬೋನಸಗಳ
ಉದಾರವಾದ ಕರಾರುಗಳ ಮೇಲೆ	ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ	ಯೋಜನೆಗಳು ಉದಾರವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆದುಕೊಳ್ಳಿ

ಧಾರವಾಡ ಅರ್ಬನ ಕೋ॰

ಆಪರೇಟಿವ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಇದು ಕೋಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಕಿಂದಿಗೆಯು ಪೇಟೆಯ ಲಕ್ಷದ ಮೇಲಿಂದೆ. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿಯು ಇಟ್ಟುಕೊಳ್ಳಲಾಗುದು. ದರವನ್ನು ಪತ್ರದ್ವಾರ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಸ್ತ್ರ/ ಇಟ್ಟುಕೊಳು ವ ತಿಜೋರಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗುತ್ತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ವೈಶಾಖ ಶುದ್ಧ ೬

ಆ ವಿಜಯಂ ಶ್ರೀಕಬ್ಬರು
೯೯ ಪಸ್ಸುವಣಿಯ ಸಲಿಸಿರೆ ಸುಚರಿತಚರಿತೆಗಳಿಂ ೧
ದಿ "ವಿಜಯಂ" ಶ್ರೀಕರಮಣ ।
ನಾವಿಹಿತಂಗೆ ನಿರಂತರಂ ಸ್ವಜನ್ಮ ॥

ವೈಸ್ರಾಯ ನ್ಯಾಯ ಶಾಸನದಲ್ಲಿಯುವರ ಮನೋರಾಜ್ಯ.

ವೈಸ್ರಾಯರು ಮಹಾತ್ಮಗಳಲ್ಲಿಯವರು ಮುಂಬಯಿ ಗವ್ಹರ್ನರ ಸಾಹೇಬರನ್ನು ಕಂಡು, ಲಾರ್ಡ ಇರ್ವಿನ ಸಾಹೇಬರಿಗೆ ಮಹಾತ್ಮರನ್ನು ಹಿಡಿದರೆ ಏನು ದುಷ್ಪರಿಣಾಮವು ಹುಟ್ಟುವದೆಂದು-ತಾವು ಮಾಡಿದ್ದೇವೆಂದು ಮಹಾತ್ಮರಿಗೆ ತಿಳಿಸಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ವೈಸ್ರಾಯ ಸಾಹೇಬರು ಇಷ್ಟರಿಂದಲೇ ತೃಪ್ತರಾಗದೆ, ಈ ಸಂಬಂಧವಾಗಿ ತಾವು ಮಾಡಿದ ಕಾರಭಾರವನ್ನು ವರ್ತಮಾನ ಪತ್ರಗಳಲ್ಲಿ ಮುದ್ರಿಸಿ, ತಮ್ಮ ಬೆನ್ನು ಚಪ್ಪರಿಸಿಕೊಂಡಿದ್ದಾರೆ. ಮಹಾತ್ಮರನ್ನು ತಮ್ಮ ಕಿವಿಯೊಳಗೆ ಹಾಕಿಕೊಳ್ಳಬೇಕೆಂದು ವೈಸ್ರಾಯ ಸಾಹೇಬರು ಇಷ್ಟು ಪ್ರಯತ್ನಮಾಡುತ್ತಿದ್ದಾರೆ. ಆದರೆ ಮಹಾತ್ಮರ ಹಿತ ಏನಿದೆ, ಸ್ವರಾಜ್ಯ ಸ್ವಾತಂತ್ರ್ಯದ ಕಲಹದಲ್ಲಿ ಅವರಿಗೆ ಸಂಪೂರ್ಣ ಸಹಾಯ ಮಾಡುವಂಥ ಜನರು ತಮ್ಮ ತಲೆ ಕೊಟ್ಟು ಹಾರನೆಂಥವರಾಗಿದ್ದಾರೆಂಬುದನ್ನು ವೈಸ್ರಾಯ ಸಾಹೇಬರು ಮರೆತೇ ಬಿಟ್ಟಿದ್ದಾರೆ. ಕಲಿಕಾಲದಲ್ಲಿ ಸ್ವತಂತ್ರ ಪಕ್ಷದವರಾದ ನೆ. ಲ್ಯಾನ್ಸರಿ ಮುತ್ತು ಅರ್ವಿನ ಸಾಹೇಬರವರ ಪಕ್ಷದಲ್ಲಿ ಪೂರ್ಣ ವಿಶ್ವಾಸವುಳ್ಳವರಾಗಿ, ಅವರಿಗೆ ಪ್ರತಿಯೊಂದು ತರಹದ ಸಹಾಯ ಮಾಡತಕ್ಕವರಾಗಿದ್ದಾರೆ. ಮಂತ್ರಿ ಮಂಡಳಕ್ಕೂ ಇವರಿಗೂ ನಿಕಟ ಸಂಬಂಧವುಂಟು. ಇವರು ತಾವಾಗಿ ದಿವಾಣಗಿರಿ ಬಿಟ್ಟವರು. ಇವರ ಮುಂದೆ ವೈಸ್ರಾಯ ಸಾಹೇಬರ ಪ್ರಕಾಶವು ಸೂರ್ಯನ ಮುಂದೆ ಹಣತೆಯ ದೀಪದಂತಾಗುತ್ತದೆ. ಇವರ ಕರ್ಮಯೋಗದ ಅನೇಕ ಪೂರ್ಣ ಜ್ಞಾನಾನುಭವತಿಯುಂಟು. ಬರೇ ನಿಮ್ಮ ಸಹಾನ್ನಭೂತಿ ಬೇಕು. ಪ್ರತ್ಯಕ್ಷ ಜ್ಞಾನ ಕೃತಿಯಿಂದ ಸಿದ್ಧನೆಂದು ಕೊಡುತ್ತೇನೆಂದು ಮಹಾತ್ಮರು ಇವರಿಗೆ ಸವಾಲು ಹಾಕಿದ್ದಾರೆ. ಮಹಾತ್ಮರು ಅಮೇರಿಕೆ ಅಥವಾ ಫ್ರಾನ್ಸದ ಪ್ರೆಸಿಡೆಂಟರಿಗೆ ನಿಮ್ಮ ನೈತಿಕ ನೆರವು ಕೊಡಿರೆಂದು ಹೇಳಿದರೆ ಅವರು ಆನಂದದಿಂದ ಮುಂದೆ ಬರುವರು. ಇಂಥಿಂಥ ಮಹನೀಯರು ಮಹಾತ್ಮರ ಇಚ್ಛಾನುಸಾರವಾಗಿ ನಡೆಯಲು ಸಿದ್ಧರಾಗಿರುವಾಗ, ವೈಸ್ರಾಯ ಸಾಹೇಬರು ಮಹಾತ್ಮರ ಕಣ್ಣಿನಲ್ಲಿ ತಮ್ಮ ದೊಡ್ಡಸ್ತಿಕೆ ಹೇಳಿಕೊಳ್ಳುವದು ಅಪ್ರಸಂಗಿಕತನವಾಗುತ್ತದೆ.

ತಮ್ಮ ರಾಷ್ಟ್ರಪತಿಯಲಕ್ಕೆ ವಿಘ್ನ ಬರಬಾರದೆಂದೇ ಮಹಾತ್ಮರು, ಪಂಡಿತ ಮೋತಿಲಾಲರು, ಪಂಡಿತ ಮಾಲವಿಯರವರನ್ನು ಹಿಡಿದಿಲ್ಲ. ಇದೇ ಪ್ರಕಾರ ಶ್ರೀ. ಕೇಳಕರರವರನ್ನೂ ಹಿಡಿಯಲಾರರು. ಬ್ರಿಟಿಶರು ರಾಜ್ಯತಂತ್ರದಲ್ಲಿ ನುರಿತವರಿದ್ದು, ಬಿಸಿಲು ಬಂದತ್ತ ಕೊಡೆ ಹಿಡಿಯುವವರ ಬೆನ್ನು ಹತ್ತತಕ್ಕವರಲ್ಲ. ಇವರು ಒಂದು ವೇಳೆ ಮಹಾತ್ಮರನ್ನು ತುರಂಗದಲ್ಲಿ ಹಾಕಿದರೂ ಹಾಕದಿದ್ದರೂ ಹಾಕುವ ಸಿದ್ಧತೆ ನಡೆದದ್ದೆಂದು ಉತ್ಕಲಮಂಡಲದ ತಂತಿ ಹೇಳುತ್ತದೆ. ತುರಂಗದಲ್ಲಿ ಹಾಕಿದರೂ ಅವರ ಕೂಡ ಚೇಲಿಕಸ್ಲಿಯ ರಾಜೇ ಸಂಭಾಷಣ ನಡಿಸುತ್ತಿದ್ದು ಜಗಳೂಲ ಪಾಶಾಹನನ್ನು ಜೆಪ್ಸ್ಲರಕ್ಕೆ ಹದ್ದುಪಾರು ಮಾಡಿದ್ದರೂ, ಅಲ್ಲಿಯೇ ಇಜಿಪ್ತದ ಸ್ವಾತಂತ್ರ್ಯದ ಒಡಂಬಡಿಕೆ ನಡೆಸಿದರು. ಐರ್ಲಂಡದಲ್ಲಿ ಇತ್ತ ತೋಫು ಹೊಡೆಯುತ್ತಿದ್ದರು. ಅತ್ತ ರಾಜೀ ನಡೆಸಿದ್ದರು. ಇವು ತೀರ ಹೊಸವೆನಿಸುವಂಥ ಪ್ರತ್ಯಕ್ಷ ಪ್ರಮಾಣಗಳಾಗಿ ವೈಸ್ರಾಯ ಮಹಾಶಯದಲ್ಲಿರುವವು. ಹೇಳಿರೆಂದು ಲಾರ್ಡ ಇರ್ವಿನ ಸಾಹೇಬರು ಮಹಾತ್ಮರನ್ನು ಹಿಡಿಯರೆಂಬುದು ಅವಿವೇಕವು. ವೇಳಿನ ಮಾರ್ಗವನ್ನು ಬಿಟ್ಟು ಅನೇಕ ಘನವಂತರು ತುರಂಗ ಕಂಡಿದ್ದಾರೆ. ಅದರೂ ರಾವು ಜಟಿ-ಬಲಕ್ಕೆ ಹೋಗುವಂಥ ಯೋಗ್ಯತೆಯವರೇ? ಸ್ವೇನಗುಪ್ತರನ್ನೇಕೆ ಬಿಡಬಾರದು? ಸಂದಾರ ಪಟೇಲರೇನು ಸಾಮಾನ್ಯರೇ? ಮಹಾತ್ಮರು ಮಾತ್ರ ಕಾಯದೆಭಂಗದ ಎಲ್ಲ ಜನರನ್ನು ಬಂಧಮುಕ್ತ ಮಾಡಿದ ವಿನಹ ನಿಮ್ಮ ಟೇಬಲದ ಆಮಂತ್ರಣ ಸ್ವೀಕಾರ ಮಾಡುವದಿಲ್ಲೆಂದು ಸ್ಪಷ್ಟ ಹೇಳುವರು. ಅಂತೇ ಅವರು ಮಹಾತ್ಮರು. ವೈಸ್ರಾಯ ಸಾಹೇಬರು ಮನೋರಾಜ್ಯದ ಸುಖ ಭೋಗಿಸತಕ್ಕವರು.

ವರ್ತಮಾನಪತ್ರಗಳು ಬಂದಾದವು.

—(೦)—

ಕಲಕತ್ತೆಯಲ್ಲಿ ರಾಷ್ಟ್ರೀಯ ಪಕ್ಷದ ಪ್ರಮುಖ ಪತ್ರಗಳಾದ ಲಿಬರ್ಟಿ, ಅ್ಯಡವ್ಹಾನ್ಸ, ಬಂಗಬಾನಿ ಪತ್ರಗಳು ಜಾಮೀನು ಕೊಡದೆ ಬಂದು ಮಾಡಲ್ಪಟ್ಟವು; ಸ್ವಾತಂತ್ರ್ಯವೆಂಬುದು ಸ್ವಾಯತ್ತೆಯ ಸಮಯಲದ ವೇಳೆ ಹೊರಬೀಳುತ್ತದೆ.

ಮೂವತ್ತು ಮಂದಿ ಕೂತ ಮೋಟಾರು ಹೊಳಿಯಲ್ಲಿ ಬಿತ್ತು.

—(೦)—

ಹೋದ ಮಂಗಳವಾರ ದಿನದ ಎರಡು ತಾಸು ರಾತ್ರಿ ಸಮಯದಲ್ಲಿ ಸವದತ್ತಿಯ ದಾರಿಯ ಮೇಲೆ ಒಂದು ಮೋಟಾರ ಹೊಳೆಯಲ್ಲಿ ಬಿದ್ದು, ಒಬ್ಬನು ಸತ್ತನು; ಅನೇಕರು ಘಾತವಾದರು. ಮೋಟಾರದ ಅಪಘಾತಗಳು ನಿತ್ಯ ನಡೆದರೆ ಅವುಗಳ ರಾಜೀಯಾಗುತ್ತದೆ. ಆದರೆ ಈ ಅಪಘಾತ ಮಾತ್ರ ಹೆಚ್ಚಿನದು. ಡ್ರಾಯವ್ಹರನು ಮತ್ತು ಮಾಲಕರು ಸೇರಿ ೩೦ ಜನರನ್ನು ತುಂಬಿದ್ದರು. ದಾರಿಗುಂಟ ಜನರನ್ನು ತುಂಬುತ್ತಾ ನಡೆದಿದ್ದರು. ಒಂದು ಸಂತೆ ಇದ್ದದರಿಂದ ಒಳೇ ಜನರು; ಅವರ ಸಂತೆಯ ಗಂಟು ಬುಟ್ಟಿಗಳೂ ಇದ್ದವು. ೧೬ ಜನರು ಕೂಡ ಒಳಗೆ ಕುಳಿತಿರುವರು. ಮತ್ತು ಮೇಲೆ ಟಾಪಿನ ಮೇಲೆ ಸಾಮಾನು, ಅದರ ಮೇಲೆ ಐದಾರು ಜನರು ಕೂತರು. ಹೀಗೆ ಆಶ್ಚರ್ಯವೆನಿಸುವಷ್ಟು ಭಾರವಾದ ಮೋಟಾರು ತುಸು ಇಳಿಯಲಿಯಾದ ಕೂಡಲೆ ಹೊಳೆಯಲ್ಲಿ ಬಿದ್ದು, ಅನರ್ಥವಾಯಿತು. ಮೋಟಾರದ ಹಿಂದಿನ ಪಳಿಯ ಮೇಲೆ ನಿಂತವನು ಬುಡಕ್ಕೆ ಸಿಕ್ಕು ಸತ್ತು ಹೋದನು. ಇಂಥ ಭಯಂಕರ ಅನಾಹುತವಾದರೂ, ಡ್ರಾಯವ್ಹರ ಮತ್ತು ಮಾಲೀಕರು ಸತ್ತವನನ್ನು ಅಲ್ಲಿಯೇ ಬಿಟ್ಟು ಹೋದರು. ಪೋಲೀಸ ವಿಚಾರಣೆ ನಡೆದಿದೆ.

—

ಹುಬ್ಬಳ್ಳಿಯಲ್ಲಿ ಶ್ರೀಯುತ ಹರ್ಡೀಕರ ಮಂಜಪ್ಪನವರ ಭಾಷಣ.

—:*:—

ದುರ್ಗದಬೈಲಿಗೆ ಗಾಂಧಿ ಚೌಕದ ನಾಮಕರಣ.

ನಿನ್ನೆ ಸಾಯಂಕಾಲದಲ್ಲಿ ಹುಬ್ಬಳ್ಳಿಯಲ್ಲಿ ದುರ್ಗದ ಬೈಲಿನ ಕೂಟದಲ್ಲಿ ಶ್ರೀ. ಮಂಜಪ್ಪಾ ಹರ್ಡೇಕರ ಇವರ ಭಾಷಣವಾಯಿತು. ಪುರಾಣ ಪುಣ್ಯ ಕಥೆಗಳಲ್ಲಿ, ಸಭೆ ವ್ಯಾಖ್ಯಾನಗಳಲ್ಲಿ ಸಂಗತ ಕಳೆದುಬಿಟ್ಟು, ನೂಲುತ್ತಾ ಶ್ರವಣ ಮಾಡಿರಿ; ಹೀಗೆ ನಿಮ್ಮ ನೂಲಿನಿಂದ ನಿಮ್ಮ ಬಟ್ಟೆ ಮಾಡಿಕೊಳ್ಳಿರಿ, ಅರಿವೆಯ ದಸಿಯಿಂದ ಪರದೇಶಿಯರಿಗೆ ಬಾಯಿ ತೆರೆಯಬೇಡಿರೆಂದು ಉಪದೇಶ ಮಾಡಿದರು. ಮತ್ತು ಇದೇ ವೇಳೆಯಲ್ಲಿ ದುರ್ಗದ ಬೈಲಿಗೆ ಗಾಂಧಿ ಕಟ್ಟೆವೆಂದು ನಾಮಕರಣ ಮಾಡಲ್ಪಟ್ಟಿತು.

ಹತ್ತು ಸಾವಿರದ ಖಾದೀ ಭಾಂಡಾರ.

——(೦)——

ಹುಬ್ಬಳ್ಳಿಯ ಜನಪ್ರಿಯ ವ್ಯಾಪಾರಸ್ಥರು ಅಸ್ಪೃಶ್ಯತೀಯ ಸಮರದಲ್ಲಿ ಸಹಕಾರ ಪದ್ಧತಿಯಿಂದ ಹತ್ತು ಸಾವಿರ ರೂಪಾಯಿಯ ಬಂಡ ವಾಳದಿಂದ ಒಂದು ಖಾದೀ ಭಾಂಡಾರ ತೆರೆಯುತ್ತಾರೆಂದು ಬರೆಯಲಿಕ್ಕೆ ಸಂತೋಷವಾಗುತ್ತದೆ.

———

ಪತ್ರೋತ್ಸವದ ತೀರ್ಮಾನ ಗೋವಿಂದ ಶೇಠಿಕರ

——(೦)——

ಪತ್ರ ಸಮ್ಮೇಳನದಲ್ಲಿ ಪ್ರತಿಪಾದಿಸಿದಂತೆ ಮಧ್ಯ ಪ್ರಾಂತದ ಸಭೆ ನಡೆಯಬೇಕು. ಸಭೆ ಸ್ವತಂತ್ರ ವಾದ ಸಂಸ್ಥೆಯ ವಿಷ್ಯ ಬೇಕು, ಅಸ್ಪೃಶ್ಯ ಸ ಮಿತಿ ವೇತ್ತರಿಂದಲೇ ಉತ್ತರವಾದ ಮತ್ತು ಉಳಿ ದ ಸಂಗತಿಗಳ ಬಗ್ಗೆ ನಿರ್ಣಯ ಜರಗಿಸಬೇಕೆ. ಅಲ್ಲಿ ಎಷ್ಟು ಜನರ ಮಾನ ಮರ್ಯಾದೆ ಗಳನ್ನು ಸಂರಕ್ಷಿಸಬೇಕೆಂದು ನಿರ್ಣಯ ಮಾಡಿದ್ದಾರೆ.

———

ಪೋಲೀಸ ವ್ಯಕ್ತಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿದರು.

——(೦)——

ಮದ್ರಾಸ ಇಲಾಖೆಯಲ್ಲಿ ಪೋಲೀಸ ಎಂಬ ನೊಬ್ಬ ವ್ಯಾಪಾರದ ದೊಡ್ಡ ಪಟ್ಟಣವುಂಟು ಅ ಲ್ಲಿಯ ಮ್ಯುನಿಸಿಪಾಲಿಟಿಯವರು ನಾವಿ ನಡೆಸ ಮೆಂ ಬರ ಸಹಿಯಾಗಿ ಸರ್ವಾನುಮತದಿಂದ ಕಚೇರಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು ಗೊ ತ್ತುವಳಿ ಮಾಡಿ, ಆ ಪ್ರಕಾರ ನಿಶಾನೆ ಏರಿಸುವ ಸ ಮಾರಂಭ ಮಾಡಿದರು ಮತ್ತು ಇದೇ ಸಭೆಯ ಲ್ಲಿ ಸರಕಾರವು ದೊಡ್ಡ ದೊಡ್ಡ ಜನರನ್ನು ಹಿಡಿ ದು, ಸೆರೆಮನೆಗಳಲ್ಲಿ ಹಾಕುವ ಕೃತ್ಯವನ್ನು ನಿಷೇಧಿ ಸಿದರು.

———

ಉಪ್ಪಿನ ಕರ ಕಡಿಮೆಯಾಗಲಾರದು ?

—()—(೦)—()—

ಸರಕಾರದವರು ಬೇಗನೆ ಉಪ್ಪಿನ ಕರ ಕ ಡಿಮೆ ಮಾಡುವರು. ಆಗ ಉಪ್ಪು ಮಾರಲಿಕ್ಕೆ ತ ಗೆದುಕೊಂಡು ಉಪ್ಪಿನ ವರ್ತಕರು ತಂತಮ್ಮ ಉ ಪ್ಪನ್ನು ಉಗ್ರಾಣದಲ್ಲಿ ಕೂಡಿಟ್ಟಿದ್ದಾರೆ. ಸರಕಾರ ವು ಕರ ಕಡಿಮೆ ಮಾಡುವದಿಲ್ಲ. ಜನರು ವ್ಯರ್ಥ ಕಲ್ಪನೆ ಮಾಡಿಕೊಳ್ಳಬಾರದು. ಮಳೆಗಾಲಕ್ಕೆ ಒಂ ದೇ ತಿಂಗಳು ಉಳಿದಿತು. ವ್ಯಾಪಾರ ದೃಷ್ಟಿಯಿಂ ದಲೇ ಪರಿಷ್ಟಿಟಿಗೆ ಉಪ್ಪು ಕಳಿಸಿದರೆ ಇಲ್ಲವಾದ ರೆ ಮಳೆಗಾಲದಲ್ಲಿ ಮತ್ತಷ್ಟು ಕಟ್ಟಮಾಡೀತೆಂದು ಮುಂಬಯಿ ಸರಕಾರದವರು ಒಂದು ಜಾಹೀರ ಪ ತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ.

———

ಉಪ್ಪಿನವರು ತಮ್ಮ ಉಪ್ಪನ್ನು ಸರಕಾರ ಕೊಟ್ಟಿದ್ದರೆ ಸತ್ಯಾಗ್ರಹಿಗಳಿಗೆ ಮಾರುವರು.

——(೦)——

ಕುಲಾಬೆಯ ಕಲೆಕ್ಟರ ಸಾಹೇಬರು ಉಪ್ಪಿನ ಕಾರಖಾನೆಯವರಾದ ಶಿರೋಡ್ಕರ ಎಂಬವರಿಗೆ ಸತ್ಯಾ ಗ್ರಹಿಗಳಿಗೆ ಉಪ್ಪು ಮಾರಬಾರದೆಂದು ತಾಕೀತು ಮಾ ಡಿದರು. ಶಿರೋಡ್ಕರರು ಸಾಹೇಬರ ಹುಕುಮಿಗೆ ಕಾರಣವೇನೆಂದು ಕೇಳಬೇಕಾಯಿತು. ಇವರು ಸಾಹೇಬರಿಗೆ "ಈಗ ಸತ್ಯಾಗ್ರಹದ ಮೂಲಕ ಉಪ್ಪಿಗೆ ಬೇಡಿಕೆ ಇಲ್ಲ. ಸತ್ಯಾಗ್ರಹಿಗಳಿಗೆ ಉಪ್ಪು ಮಾ ರಬಾರದೆಂದು ಸರಕಾರದ ಅಪೇಕ್ಷೆಯಾದರೆ ಸರಕಾರವು ನಮ್ಮ ಉಪ್ಪು ಕೊಳ್ಳಬೇಕು. ಇ ಲ್ಲವಾದರೆ ಅದನ್ನು ಸತ್ಯಾಗ್ರಹಿಗಳಿಗೆ ಮಾ ರುತ್ತೇವೆ" ಎಂಬದಾಗಿ ಖಡಿತವಾದ ಉತ್ತರ ಕೊಟ್ಟಿದ್ದಾರೆ.

———

ಮದ್ರಾಸದ ಆಲೋಚನೆ

——(೦)——

ಮದ್ರಾಸದ ಗವ್ಹರ್ನರ ಸಾಹೇಬರು ಪ್ರಸ್ತು ತದ ರಾಜಕೀಯ ಪರಿಸ್ಥಿತಿಯ ವಿಚಾರ ಮಾಡ ಲಿಕ್ಕೆ ಸರಕಾರದ ಕೆಳಗಿನವರನ್ನು ಆಗಕ್ಕೆ ಪೂರ್ತಿವಾಗಿ ಉ ತ್ತರವಂದಲಕ್ಕೆ ಕರೆಸಿಕೊಂಡಿದ್ದಾರೆ.

೧ ಸರ ಪೆಟ್ರೋ
೨ ದಿವಾನ ಬಹಾದ್ದೂರ ನಾರಾಯಣಸ್ವಾಮಿ ಶೆಟ್ಟಿ
೩ ನಾಮದಾರ ಜೆ. ಎ ಸಲ್ಡಾನ
೪ ನಾಮದಾರ ರಾಮಸ್ವಾಮಿ ಮೊದ್ಲಿಯಾರ

———

ಲಾಹೋರದಲ್ಲಿ ರಾಜಕೀಯ ಭೂಕಂಪ !!

——(೦)——

ಲಾಹೋರದ ಹೊಟ್ಟೆಯಲ್ಲಿ ರಾಜಕೀಯ ಭೂ ಕಂಪವಾಗುವಂಥ ಯಾವ ಲಕ್ಷಣಗಳು ಕಂಡಿಯು ತ್ತಿರಬೇಕೆಂಬದನ್ನು ದೇವರೇ ಬಲ್ಲ. ಪೋಲೀಸ ರು ಊರೊಳಗೆ ಬರುವ ಧ ಪ್ರಮಾಣಿಕರ ಮೇಲೆ ಟೀರುಗಳನ್ನು ಹಿಡಿದು ಹಾಕುವರು. ಅವಕ್ಕೆ ತಿ ರುಗಿ ತಂತಮ್ಮ ಸ್ಥಳಕ್ಕೆ ಹೋಗಗೊಡುವದಿಲ್ಲ. ಇ ಷ್ಟೇ ಅಲ್ಲದೆ, ಪೇಠಾವರ ಮತ್ತು ಅಮೃತಸರ ರೇ ಲ್ವೆಯ ಪ್ರಯಾಣವನ್ನೇ ನಿಲ್ಲಿಸಿಬಿಟ್ಟಿದ್ದಾರೆ,

———

ಆರೋಪಿಯ ಗೈರಹಾಜರಿಯಲ್ಲಿ ವಿಚಾರಣೆ.

—(೦)—

ಶಿಕ್ಷೆಯಾದರೆ, ಶಿಕ್ಷೆಯ ಮೇಲೆ ಅಪೀಲಿಲ್ಲ.

—()—( )—()—

ಹಿಂದುಸ್ಥಾನ ಸರಕಾರದವರು ಇನ್ನೊಂದ ಆರ್ಡಿನನ್ಸ ತೆಗೆದು, ಲಾಹೋರ ಕೇಸಿನ ಆರೋ ಪಿಗಳ ವಿಚಾರಣೆಯು ಮೂವರು ಜಡ್ಜರ ಮುಂದೆ ನಡೆಯಬೇಕು. ಇವರ ತೀರ್ಪೇ ಕೊನೆಯ ತೀರ್ಪು. ಆರೋಪಿಗಳು ಬೇನೆಯಿಂದ ಅಥವಾ ಸತ್ಯಾಗ್ರಹ ದಿಂದ ಕೋರ್ಟಿಗೆ ಬರದಿದ್ದರೂ, ವಿಚಾರಣೆಯು ನ ಡೆಯಬೇಕೆಂದು ಹುಕುಮು ಮಾಡಿದ್ದಾರೆ.

———

ಮಹಾತ್ಮರು ಮೂರು ಶರತ್ತುಗಳಿಂದ ಮುಂಬಯಿಗೆ ಬರುವರು.

——(೦)——

ಮುಂಬಯಿ ಕಾಂಗ್ರೆಸ ಕಮೀಟಿಯ ಆಪೇ ಕ್ಷೆಯ ಕಾರಣವಾಗಿ ಮಹಾತ್ಮರು ಮುಂಬಯಿಗೆ ಬರು ವರು. ಆದರೆ ಅವರು ಮೂರು ಶರತ್ತುಗಳನ್ನು ಹಾಕುವರು. ಅವನ್ನು ಪೂರ್ಣ ಮಾಡುತ್ತೇವೆಂದು ಮಾತು ಕೊಟ್ಟರೇ ಬರುವರು. ಕಮೀಟಿಯವರು ಇವುಗಳ ವಿಚಾರಣೆ ಮಾಡುತ್ತಿದ್ದಾರೆ.

———

ಶ್ರೀ ಗೋಖಲೆಯವರಿಗೆ ಎಂಟು ತಿಂಗಳ ಶಿಕ್ಷೆ.

ಮರಾಠಾ ಪತ್ರದ ಸಂಪಾದಕರಾದ ಶ್ರೀ. ಡಿ. ವ್ಹಿ. ಗೋಖಲೆಯವರಿಗೆ ಮ್ಯಾಜಿಸ್ಟ್ರೇಟರು ಎಂ ಟು ತಿಂಗಳ ಸಾದಾ ಕೈದು ಮತ್ತು ಎರಡುನೂರು ರೂಪಾಯಿ ದಂಡ ಮಾಡಿ ಇವರನ್ನು ಎ ಕ್ಲಾಸಿ ನಲ್ಲಿ ಸೇರಿಸಿಕೊಳ್ಳಬೇಕೆಂದು ತೀರ್ಪಿನಲ್ಲಿ ಬರೆದಿದ್ದಾರೆ.

———

ಡಾಕ್ಟರರಿಗೆ ಬಿ ಕ್ಲಾಸಿನ ಶಿಕ್ಷೆ.

——(೦)——

ಕಲ್ಯಾಣದ ಡಾಕ್ಟರರಾದ ಶ್ರೀ ಫಡಕೆಯ ವರು ಕಾಯದೆಭಂಗ ಮಾಡಿದ ಆರೋಪಕ್ಕಾಗಿ ಮ್ಯಾ ಜಿಸ್ಟ್ರೇಟರು ನಾಲ್ಕು ತಿಂಗಳ ಶಿಕ್ಷೆ ವಿಧಿಸಿ, ಅವ ರನ್ನು "ಬಿ" ಕ್ಲಾಸಿನಲ್ಲಿ ಹಾಕಿದರು.

———

ನೀಲಗಿರಿಯ ಸುದ್ದಿಯು—

ರಾ. ಬ ಕಂಬಳಿಯವರು ಕೌನ್ಸಿಲಕ್ಕೆ ರಾ ಜೀನಾಮೆ ಕೊಟ್ಟರೆಂದು ಪ್ರಸಿದ್ಧವಾದ ಸುದ್ದಿಯು ನೀಲಗಿರಿಯಿಂದ ನಮಗೆ ಸುದ್ದಿಯಿಂದ ತಿಳಿಯು ತ್ತದೆ. ರಾ. ಬ. ರವರು ಈಗ ಮಹಾಬಳೇಶ್ವ ರದಲ್ಲಿದ್ದು, ಅಲ್ಲಿ ಕೌನ್ಸಿಲದ ಒಂದು ಸಿಲೆಕ್ಟ ಕಮೀ ಟಿಯ ಮೆಂಬರರಾಗಿ ಕೆಲಸ ಮಾಡುತ್ತಿದ್ದಾರೆ. ಇಂ ಥ ನಿರಾಧಾರ ಸುದ್ದಿಗಳನ್ನು ಬರೆಯುವದು ಬಹು ಜಾಗರೂಕರಾಗಿರತಕ್ಕದ್ದು ಎಂದು ಸೂಚಿಸುತ್ತೇವೆ.

ವಿವಿಧ ವರ್ತಮಾನಗಳು

ಪೇಶಾವರದಲ್ಲಿರುವ ಇಂಪೀರಿಯಲ್, ಚಾರ್ಟರ್ಡ್ ಮತ್ತು ಗ್ರಿಂಡಲೆ ಈ ಮೂರು ಬ್ಯಾಂಕುಗಳು ಪುಂಡಾಟಿಕೆಯ ಭಯದಿಂದ ದಂಡಿನ ಸೀಮೆಯಲ್ಲಿ ಹೋಗಿ, ಅಲ್ಲಿ ವ್ಯವಹಾರ ನಡಿಸುವವು. ಸ್ವದೇಶಿ ಬ್ಯಾಂಕುಗಳಿಗೆ ಇಂಥ ಹೆದರಿಕೆ ಇರದ್ದರಿಂದ ಅವು ಇದ್ದಲ್ಲೇ ಇರುತ್ತವೆ.

ಕಲಘಟಗಿ ತಾಲೂಕ ಮಿಶ್ರಿಕೋಟಿಯಲ್ಲಿ ೭ ನೇ ತಾರೀಖಿನ ದಿವಸ ತರುಣ ಸಂಘದ ಸಭೆಯೂ ರಾಷ್ಟ್ರೀಯ ಧ್ವಜ ವಂದನೆ ಯಾಯಿತು. ಸಭೆಯಾಗಿ ಶ್ರೀ. ಚನ್ನಪ್ಪಾ ಶಿಂತ್ರೆಯವರು ಸ್ವದೇಶಿ ವ್ರತದ ಮೇಲೆ ಭಾಷಣಮಾಡಿದರು.

ಬೆಳಗಾವಿಯಲ್ಲಿ ಶ್ರೀ. ಗೋಖಲೆಯವರಿಗೆ ನೂರು ರೂಪಾಯಿ ದಂಡವಾಯಿತು. ಮತ್ತು ಶ್ರೀ. ವಾಮನರಾವ ಬೇಡಿ ಮೊದಲಾದವರಿಗೆ ಆರಾರು ತಿಂಗಳ ಶಿಕ್ಷೆಯಾಯಿತು.

ಕಲಕತ್ತೆಯಲ್ಲಿ ಅಮೃತ ಬಝಾರ ಪತ್ರಿಕೆ ಬಂದಾಯಿತು ಹಿಂದುಸ್ಥಾನದ ವರ್ತಮಾನ ಪತ್ರಗಳ ಸಭೆಕೂಡಿ ಎಲ್ಲ ಪತ್ರಗಳನ್ನು ಒಂದು ಮಾಡಬೇಕೆಂಬ ವಿಚಾರ ನಡೆದಿದೆ

ಶ್ರೀ. ಪಟೇಲರು ಬರುವ ಶುಕ್ರವಾರ ದಿವಸ ಮುಂಬಯಿಗೆ ಬರುವರು.

ಶ್ರೀ. ಕಾರ್ನಾಡ ಸದಾಶಿವರಾಯರಿಗೆ ೧೫ ತಿಂಗಳ ಶಿಕ್ಷೆಯಾಯಿತು.

ಜಾಹೀರನೋಟೀಸ

ಮೇ|| ಜೀವಣಸಾಬ ವಲ್ಲದ ಬಡೇಸಾಬ ವಿಜಾಪುರ ನಾಯಿಕನವರ ಸಾಕೀನ ಕೋಟವುಮಚಿಗಿ ಹಾಲಿ ಮುಕ್ಕಾಮ ಬೆಟಗೇರಿ ಯವರಿಗೆ C/o ಶಿವಪ್ಪಾ ಚನಮಲ್ಲಪ್ಪಾ ಮುಳಗುಂದ ಚನ್ನಾಗವಡರ ಬೆಟಗೇರಿ.

ಕೆಳಗೆ ಸಹಿ ಮಾಡಿದವಳು ಯಿನೋಟೀಸಿನಿಂದ ತಿಳಿಸುವದೇನಂದ್ರೆ,

ನಿನಗೆ ನಾನು ಲಗ್ನ ಮಾಡಿಕೊಂಡು ಅಜಮಾಸ ೧೧ ವರುಷ ಆಯಿತು. ಲಗ್ನ ವಾದನಂತರಾ ಕೆಲವು ದಿವಸ ಚನ್ನಾಗಿ ಬಾಳ್ವೆ ಮಾಡುತಿರಲು ಒಂದು ಹೆಣ್ಣು ಕೂಸು ಹುಟ್ಟಿತು ಆ ಕೂಸು ಸದ್ಧ್ಯಕ್ಕೆ ೪ ವರುಷದ್ದು ಅದೆ ಸದರ ಕೂಸಿನ ಹೆಸರು ಮಹಾಬೂಬಿ ಅಂತಾ ಅದೆ ನೀನು ಕೆಟ್ಟ ಜನರ ಸಂಗತಿ ಹಿಡಿದು ದುರ್ವ್ಯಸನಕ್ಕೆ ಬಿದ್ದು ನನ್ನನ್ನು ಹೊಡಿಯುವದು ಬಡಿಯುವದು ಮಾಡಿ ನನ್ನನ್ನು ಮ ನನ್ನ ಹೊಟ್ಟೆಯಿಂದಾ ಹುಟ್ಟಿದ ಕೂಸನ್ನು ಮ ಮೈಮೇಲೆ ಯಿದ್ದ ತವರಮನಿಯು ದಾಗಿನೆಯನ್ನು ಕಸೆದುಕೊಂಡು ನನ್ನನ್ನು ತವರಮನಿಗೆ ಕಳಿಸಿದಿ ನಂತರ ಕರಕೊಂಡು ಹೋಗಿ ಚಲೋರೀತಿ ಬಾಳ್ವೆ ಮಾಡಬೇಕೆಂದು ೨-೩ ವರುಷದ ಲಾಗಾಯಿತ ಸಂಭಾವಿತ ಜನರ ಮುಂದೆ ಹೇಳಕಳಿಸಿದೆ. ಆದರೂ ನನ್ನನ್ನು ನೀನು ಕರಕೊಂಡು ಹೋಗಲಿಲ್ಲ ನನ್ನ ತವರ ಮನೆಯವರು ಬಡವರಿದ್ದದ್ದರಿಂದಾ ನನ್ನ ಹೊಟ್ಟೆಯ ವೆಚ್ಚ ದಕಿಯಿಂದಾ ಮ ನಿನ್ನ ಮಗಳ ಸಂರಕ್ಷಣೆದಕಿಯಿಂದಾ ನಾನು ಮುನ್ನೂರು ೩೦೦ ರೂಪಾಯಿ ಸಾಲಾಮಾಡಿದ್ದೇನೆ ಸದರ ಸಾಲಾ ಕೊಟ್ಟು ನನ್ನನ್ನು ಕರೆದುಕೊಂಡು ಹೋಗಿ ಬಾಳ್ವೆ ಮಾಡಬೇಕೆಂದು ೪ ತಿಂಗಳಹಿಂದೆ ಗದಗ ತಾಲೂಕ ಬೆಟಗೇರಿ ಗ್ರಾಮದ ಹೊಸಪ್ಯಾಟಿಯಲ್ಲಿರುವ ಮ|| ರಾ|| ಆದಮ್ಸಾಬ ಮ ಅಮೀನಸಾಬ ಮ ಫಕೀರಸಾಬ ಮ ನಿಂಗಪ್ಪಾ ವಗೈರೆ ಜನರನ್ನು ನಮ್ಮ ತಂದೆಯು ಕರಕೊಂಡು ಹೋಗಿ ಕೇಳಲು ನನ್ನ ಸ್ಥಿತಿಯು ಬಹಳ ಕೆಟ್ಟದೆ ಸದರ ಸಾಲಾ ಕೊಟ್ಟು ಕರೆದುಕೊಂಡು ಒಂದು ಬಾಳ್ವೆ ಮಾಡಲಿಕ್ಕೆ ನನ್ನಲ್ಲಿ ಶಕ್ತಿ ಯಿಲ್ಲಾ ನಾನು ತಲ್ಲಾಕನಾಮಾ ಕೊಟ್ಟಿದ್ದೇನೆ ಅಂತಾ ಮೂರು ಮೂರು ಸಾರೆ ನಿಮ್ಮ ಧರ್ಮಶಾಸ್ತ್ರ ಪ್ರಕಾರಾ ದೈವರ ಸಮಕ್ಷಮ ನನ್ನನ್ನು ಬಿಟ್ಟು ನಮ್ಮ ಸುನ್ನಿ ಹನಿಫಿ ಧರ್ಮಪ್ರಕಾರಾ ನಿನ್ನ ಲಗ್ನದ ಹಕ್ಕು ನನ್ನ ಮೇಲೆ ನಮ್ಮ ಧರ್ಮಶಾಸ್ತ್ರ ಪ್ರಕಾರಾ ಉಳಿಯಲಿಲ್ಲಾ. ಮುಂಬೈ ಯಿಂಡಿಯನ್ ಲಾ. ರಿಪೋರ್ಟಲ ಸುನ್ನಿ ಹನಿಫಿಪ್ರಕಾರಾ ನಾಲ್ವರ ಸಮಕ್ಷಮ ತಲಾಖ ಕೊಟ್ಟರೆ ಹೆಂಡತಿ ಮೇಲಿನ ಹಕ್ಕು ತುಟಾಯಿಸಿತು ಅಂತಾ ವೃಘಡ ಕಾಯಿದೆ ಅದೆ ಯಿದಲ್ಲದೆ ನಿನ್ನ ಕೆಟ್ಟ ನಡಾವಳಿಯಿಂದಾ ಬಹುಮೂಕ್ರವಾಗಿ ದ್ರವ್ಯಾರ್ಜನೆ ಹಿಡಿದು ನಾಲ್ಕು ಮಂದಿಯಲ್ಲಿ ನಿನು ಕೂಡ್ರುವಂತೆ ಯಿಲ್ಲಾ. ನೀನು ಮಹಾ ಗೃಹಸ್ಥನ ಹೊಲಾ ಕಾಯಿಕೋತಾ ಹೊಲದಲ್ಲಿಯೇ ಯಿರುತ್ತಿ. ನೀನಾಗಿಯೇ ನನ್ನನ್ನು ಬಿಟ್ಟಿದ್ದರಿಂದಾ ನನ್ನ ಮಹಾರಿನ ಹಣಾ ಯೆಂಟನೂರಾ ಐವತ್ತು ೮೫೦ ರೂಪಾಯಿ ನನ್ನ ಸಂರಕ್ಷಣೆ ದಕಿಯಿಂದಾ ಮ ನಿನ್ನ ಮಗಳ ಸಂರಕ್ಷಣೆ ದಕಿಯಿಂದಾ ಮಾಡಿರೋ ದೇಣೆ ಮುನ್ನೂರು ೩೦೦ ರೂಪಾಯಿ ಅಂತು ಐದು ನೂರಾ ಐವತ್ತು ೫೫೦ ರೂಪಾಯಿ ರಕಮನ್ನು ಯಿನೋಟೀಸು ಮುಟ್ಟಿದ ೮ ದಿವಸದಲ್ಲಿ ನಾಲ್ವರ ಸಮಕ್ಷಮ ಕೊಟ್ಟು ನನ್ನಿಂದಾ ಪಾವತಿ ಪಡೆಯಬೇಕು ಯಿಲ್ಲದಿದ್ದರೆ ನಿನ್ನಮೇಲೆ ದಿವಾಣಿ ಕೋರ್ಟಿನಲ್ಲಿ ರಿತಿಪ್ರಕಾರಾ ದಾವಾ ಮಾಡಿ ವಸೂಲುಮಾಡಲ್ಪಡುವದು ಮತ್ತು ನಮ್ಮ ಧರ್ಮಶಾಸ್ತ್ರ ಪ್ರಕಾರಾ ತಲ್ಲಾಕನಾಮಾ ಕೊಟ್ಟದ್ದರಿಂದಾ ಮತ್ತು ೪ ತಿಂಗಳ ಹಿಂದೆ ಕೊಟ್ಟ ತಲ್ಲಾಕನಾಮಾ ಇದ್ದು ಕಾಯದೆಯು ಮುದ್ದತು ಬಾಹೇರ ಆದ್ದರಿಂದಾ ನಾನು ಸ್ವತಂತ್ರ ಆಗಿದ್ದೇನೆ. ಆದ್ದರಿಂದಾ ನನ್ನ ಮನಸ್ಸಿಗೆ ಬಂದವನನ್ನು ನಾನು ಉಡಕಿ ಮಾಡಿಕೊಂಡರೂ ನನ್ನ ಮೇಲೆ ಮ ನನ್ನ ಉಡಿಕೆ ಗಂಡನ ಮೇಲೆ ನಿನ್ನ ಯಾವ ಪ್ರಕಾರದ ಹಕ್ಕು ಏನೂ ಇರುವದಿಲ್ಲಾ ನನ್ನ ಸ್ತ್ರೀಧರ್ಮದ ಪ್ರಕಾರಾ ನನಗೆ ಹಾಗೆ ಇರಲಿಕ್ಕೆ ಆಗದ್ದರಿಂದಾ ನಾನು ಎರಡನೆಯವರನ್ನು ಉಡಿಕೆ ಮಾಡಿಕೊಳ್ಳುತ್ತೇನೆ ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಇರುತ್ತದೆ ತಿಳಿಯುವದು

ತಾರೀಖು ೩ ಮೇ ಸನ್ ೧೯೩೦

ಯಿ ಯಡಗೈ ಹೆಬ್ಬಟ್ಟಿನ ಗುರ್ತು ಹುಸೇನಬಿ ಗಂಡ ರಾಜೇಸಾಹೇಬ ಹೊಸಪೇಟಿ ಸಾ|| ಬೆಟಗೇರಿ ಯಿ ಕೇದು ಅದೆ.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದರಿಂದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ, ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಿಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಸೋಮವಾರ ತಾರೀಖು ೫ ನೇ ಮೇ ೧೯೩೦ (ಸಂಚಿಕೆ ೧೦೪

Incorporated in S. S.) (Registered in England)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

BIENNIAL BONUSES. GUARANTEED BONUS PLAN

GENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದ ಬ

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ದ್ವೈವಾರ್ಷಿಕ ಬೋನಸುಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯು	ಖಂಡಿತವಾದ ಬೋನಸಗಳ ಯೋಜನೆಗಳು
ಉದಾರವಾದ ಕರಾರುಗಳ ಮೇಲೆ	ಚಾಲಿಸುವ ಯೋಜನೆ	ಉದಾರವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬಳ್ಳಿ,

ಇವರಿಗೆ ಬರೆದುಕೊಳ್ಳಿ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೪ ವೈಶಾಖ ಶುದ್ಧ ೭

ಆ ವಿಜಯಂ ಶ್ರೀಕಪ್ರಿಯ
ನೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ॥
ದೀ " ವಿಜಯಂ " ಶ್ರೀಕರುಣಾ ।
ತಾ ವಿಹಿತಂಗಳ ವಿವರಿಸನಲಿವುಸು ಸಾಜಂ॥೨

ದಿವಾನ ಜಾಧವರಾಯರ ಸಹಕಾರದ ಟಿಪ್ಪಣಿ ಜಾರಿಸಿದರು.

——(೦)——

ಎಲ್ಲಾ ಜಾತಿಯವರಲ್ಲಿಯೂ ಪ್ರಸ್ತುತದ ಕಾಯಿದೆಭಂಗದಲ್ಲಿ ಇಬ್ಬಣವಾಗಿದೆ. ಹೊಟ್ಟೆಯ ಪೂಜೆ ಮಾಡುವಂಥವರಲ್ಲಿ ಅನಿವಾರ್ಯವಿಲ್ಲದೆ ತೋಂಡೆಯಲ್ಲಿ ಕಾಯಿದೆಭಂಗ ಮಾಡದವರೇ ಬಹಳ. ವಕೀಲರು ಇಂದು ಬೇಕಾದ ಹಾಗೆ ಕಾಯಿದೆ ಮುರಿಯುವರು. ಆದರೆ ಸನದು ಹೋಗುವದೆಂಬ ಭಯದಿಂದ ಇದರಲ್ಲಿ ತಂಡ ತಂಡಾಗಿ ಸೇರರು. ಆದರೆ ಈ ಚಳವಳಿಯಲ್ಲಿ ಅವರ ಸಂಪೂರ್ಣ ಸಹಾನುಭೂತಿಯುಂಟು. ಅದೇ ಪ್ರಕಾರದ ಸಹಾಯ ಮತ್ತು ಸಹಾನುಭೂತಿಯು ಸರಕಾರೀ ಕಾಮದಾರರದೂ ಇರುತ್ತದೆ. ಇದೇ ಪ್ರಕಾರ ಬಹುಕೇಳವಾಗಿ ಎಲ್ಲ ಜಾತಿಗಳ ಪರಿಸ್ಥಿತಿಯಾಗಿರುತ್ತದೆ. ಹಿಂದಿನ ಅಸಹಕಾರದಲ್ಲಿ ಕರ್ನಾಟಕದಲ್ಲಿ ವೀರಶೈವರು, ಮಹಾರಾಷ್ಟ್ರದಲ್ಲಿ ಮರಾಟರು ಅಸಹಕಾರ ಮಾಡಲಿಲ್ಲ. ಪ್ರಸ್ತುತದಲ್ಲಿ ಬಹು ಸಂಖ್ಯೆಯಿಂದ ಇವರು ಕಾಯಿದೆಭಂಗ ಮಾಡಿದವರಾಗಿದ್ದು, ಸಹಕಾರಿಗಳವರು ಅಲ್ಪಸಂಖ್ಯಾಕರಾಗುತ್ತಾರೆ.

ಮುಂಬಯಿ ಇಲಾಖೆಯ ಮಟ್ಟಿಗೆ ವಿಚಾರ ಮಾಡಿದರೆ- ಮಹಾರಾಷ್ಟ್ರದಲ್ಲಿ ಮರಾಟರು ಕರ್ನಾಟಕದಲ್ಲಿ ವೀರಶೈವರು ಕಾಯಿದೆಭಂಗಕ್ಕೆ ಪೂರ್ಣ ಅನುಕೂಲರಾಗಿದ್ದಾರೆ. ಆದರೆ ಇವರಲ್ಲಿ ಈ ಪರ್ಯಂತರ ಮುಖಂಡರೆಂದು ಮೆರೆಯುತ್ತಿದ್ದವರು ಸಹಕಾರದ ನಿಶಾನೆ ಏರಿಸಿದ್ದಾರೆ. ಇವರ ಪತಿಯಿಂದ ದಿವಾನರಾದ ಜಾಧವರಾಯರು ಎರಡು ದಿವಸಗಳ ಹಿಂದೆ ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿ, ಕಾಯಿದೆಭಂಗವನ್ನು ನಿಷೇಧಿಸಿ, ಸರಕಾರದ ಕೂಡ ಸಹಕಾರವೆಂಬ ಟಿಪ್ಪಣಿಯನ್ನು ಜಾರಿಸಿದ್ದಾರೆ. ದಿವಾನರಿಗೆ ದಿಲ್ಲಿಗೆ ಹೋಗುವ ಅವಸರವಾಗಿ, ಅಲ್ಲಿಗೆ ಹೊರಟು ಹೋದರು. ಹೊರಡುವ ಪೂರ್ವದಲ್ಲಿ ಪುಣೆಯಲ್ಲಿ ಬ್ರಾಹ್ಮಣೇತರರ ಮ್ಯಾನೇಜಿಂಗ ಕಮೀಟಿಯನ್ನು ಕೂಡಿಸಿ, ಅದರ ಮುಖಾಂತರ ಕಾಯಿದೆಭಂಗದ ವಿರುದ್ಧ ಸಭೆ ಮಾಡಬೇಕೆಂದಿದ್ದರು ಆದರೆ ಕೋರಮ ಕೂಡಲಿಲ್ಲ. ಕೋರಮ ಕೂಡದಿರಲಿಕ್ಕೆ ಆದರೆ ಐವರು ಮೆಂಬರರು ಕಮೀಟಿಗೆ ಬರಲು ಶಕ್ಯವಾಗಲಿಲ್ಲ. ಏಕೆಂದರೆ ಇವರು ಕೌನ್ಸಿಲ ಮೆಂಬರರಿದ್ದು ಮಹಾಬಳೇಶ್ವರದಲ್ಲಿ ಸಿಲೆಕ್ಟ ಕಮೀಟಿಯಲ್ಲಿ ತೊಡಗಿದ್ದಾರೆ. ಆದರೂ ಅವರು ಕಾಯಿದೆಭಂಗದ ವಿರುದ್ಧ ತಮ್ಮ ಸಮ್ಮತಿಯನ್ನು ತಿಳಿಸಿದ್ದರಿಂದ, ದಿವಾನರು ಅವರೆಲ್ಲರ ಪತಿಯಿಂದ ಮೇಲೆ ಹೇಳಿದ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ದಿವಾನರ ಕಮೀಟಿಗೆ ಸೇರಿದ ಕೆಲ ಮೆಂಬರರು ಚಳವಳಿಯ ವಿರುದ್ಧ ಆಮನ ಸಭೆಯಂಥ ಚಳವಳಿಯನ್ನು ಮಾಡಬೇಕೆಂದಿರುತ್ತಾರೆಂಬುದು ನಿಜವಾಗಿ ಸಂತೋಷವು ಏಕೆಂದರೆ ಆಗ ಬಲಾಬಲದ ಪರೀಕ್ಷೆಯಾಗುವದು. ಸರಕಾರಕ್ಕೆ ಈಗ ಲೋಕಮತವು ಎತ್ತ ಇರುತ್ತದೆಂಬುದು ಗೊತ್ತುಂಟು. ಆದರೂ ದಿವಾನಬಹಾದ್ದೂರರಂಥವರು ನಮಗೆ ಅನುಕೂಲರಾಗಿದ್ದಾರೆಂದು ಒಂದು ತರದ ಮಾಯಾದಲ್ಲಿದ್ದಾರೆ. ಆ ಮಾಯೆಯು ಸಹಕಾರಿಗಳ ಬಲಾಬಲದ ಪರೀಕ್ಷೆಯಿಂದ ದೂರಾಗುವದುಂಟು. ಇವರು ಯಾವದೊಂದು ಊರಲ್ಲಿ ಜಾಹೀರ ಸಭೆ ಮಾಡಲಿ; ಗಾಂಧಿ ಕೂಟವೆಂದು ನಾಮಕರಣ ಮಾಡಿದ ದುರ್ಗದಬೈಲಿನಲ್ಲಿ, ಸಭೆ ಮಾಡಿ, ಪರೀಕ್ಷೆ ಮಾಡಿಕೊಳ್ಳಲಿ. ಅಂದರೆ ಯಾರ ಸ್ವರೂಪ ಹೇಗುಂಟೆಂಬದರ ನಿರ್ಣಯವಾಗುವದು. ತಮ್ಮ ಸ್ವರೂಪ ನಿರ್ಣಯ ಮಾಡಿಕೊಳ್ಳಲಿಕ್ಕೆ ಯಾರೂ ಎಲ್ಲಿಯೂ ಪ್ರಯತ್ನಿಸಲಾರರೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಇವರು ಸಾರ್ವಜನಿಕ ರಂಗಸ್ಥಳದ ಮೇಲೆ ನಿಲ್ಲುವದೆಂದರೆ- ತಮ್ಮ ಅಪಮಾನ-ಅವಲಕ್ಷಣವನ್ನು ತಾವಾಗಿ ಮಾಡಿಕೊಳ್ಳುವಂತಾಗುತ್ತದೆ. ತಮಗೆ ತಕ್ಕಮಟ್ಟಿಗಾದರೂ ಯಶ ಬರುತ್ತದೆಂದು ಆಳರಸರಿಗೆ ಅನಿಸಿದ್ದರೆ- ಅಮನಸಭೆಯ ಉಪದ್ವ್ಯಾಪವನ್ನು ಎಂದೋ ಪ್ರಾರಂಭಿಸುತ್ತಿದ್ದರು. ಅದನ್ನು ತಿಳಿದೇ ಪ್ರೆಸ ಆಕ್ಟ್, ಆರ್ಡಿನನ್ಸ್, ಮುಂತಾದವುಗಳ ಅಡ್ಡ ಹಾದೀ ಹಿಡಿದಿದ್ದಾರೆ. ಇದನ್ನು ತಿಳಿಯದೆ ದಿವಾನ ಜಾಧವರಾವ ಮೊದಲಾದವರು ಸಹಕಾರದ ಟಿಪ್ಪಣಿ ಜಾರಿಸುವದು ಹೆಡ್ಡತನವಲ್ಲವೇ ?

ಕಾಂಗ್ರೆಸದ ಅಧ್ಯಕ್ಷರಾದ ಪಂಡಿತ ಮೋತಿಲಾಲರು ಅಧ್ಯಕ್ಷ ಪಟೇಲಸಾಹೇಬರನ್ನು ಪೇಶಾವರದ ಅನಾಹುತದ ವಿಚಾರಣೆ ಮಾಡುವ ಕಮೀಟಿಯ ಅಧ್ಯಕ್ಷರಾಗಿ ನೇಮಿಸಿದ್ದಾರೆ.

ಅಂಕೋಲಾ ಮತ್ತು ಕುಮಟಾ ತಾಲೂಕಿನ ಸಮುದ್ರದ ದಂಡೆಯಲ್ಲಿರುವ ಹಳ್ಳಿಗಳಲ್ಲಿಯೂ ಸಾರ್ವತ್ರಿಕ ಸತ್ಯಾಗ್ರಹ.

ಕಾಯಿದೆಭಂಗವೆಂದರೆ ಚಿಕ್ಕಮಕ್ಕಳ ಆಟ

——(೦)——

(ವಿಜಯಕ್ಕಾಗಿ ಬಂದ ಲೇಖ)

ಮುಂಜಾನೆ ೮ ಗಂಟೆಗೆ ಸರಿಯಾಗಿ ಸತ್ಯಾಗ್ರಹ ಶಿಬಿರದಿಂದ ಸತ್ಯಾಗ್ರಹ ಮೆರವಣಿಗೆಯು ಹೊರಟಿತು ಮೆರವಣಿಗೆಯು ಊರಲ್ಲಿ ಹೋದ ಹಾಗೆಲ್ಲ ಜನರ ಸಂಖ್ಯೆಯು ಹೆಚ್ಚುತ್ತ ನಡೆಯಿತು. ಕಾಯದೇಭಂಗಕ್ಕೆ ಹೊರಟ ಜನರ ಮೆರವಣಿಗೆಯಲ್ಲಿ ಹೆಣ್ಣುಮಕ್ಕಳ ಮತ್ತು ಬಾಲಕರ ಸಂಖ್ಯೆಯೇ ಎದ್ದು ಕಾಣುವಂಥಾದ್ದಾಗಿತ್ತು. ಉಪ್ಪು ಮಾಡಲಿಕ್ಕೆಂದು ಕೇಣಿ ಮತ್ತು ಪೂದಗೇರಿ ಎಂಬ ಎರಡು ಸ್ಥಾನಗಳಿಗೆ ಎರಡು ಪ್ರಚಂಡ ಮೆರವಣಿಗೆಗಳು ಸಾಗಿದವು. ಜನರು ಬಹುಶಾಂತರಾಗಿ, ಗಾಂಭೀರ್ಯದಿಂದ ಶಾಂತಿಮಯ ಯುದ್ಧದ ಸೈನಿಕರಂತೆ ಶೋಭಿಸುತ್ತಿದ್ದರು. ಕಾಯಿದೇಭಂಗ ಮಾಡಿದ ಜನರ ಸಂಖ್ಯೆಯು ಒಟ್ಟು ಮೂರುಸಾವಿರ ಆಗಬಹುದು. ಉಪ್ಪು ಮತ್ತು ಉಪ್ಪಿನ ಮಣ್ಣನ್ನು ತೆಗೆದುಕೊಂಡು ತಿರುಗಿದನಂತರ, ಊರಲ್ಲಿ ಪ್ರಚಂಡ ಮೆರವಣಿಗೆಯಾಯಿತು. ೩-೪ ವರ್ಷದ ಚಿಕ್ಕ ಮಕ್ಕಳು ಸಹಿತ ಉಪ್ಪು ಮಾಡಲಿಕ್ಕೆ ಹೋಗಿದ್ದರು. ಕಾಯದೇಭಂಗ ಮಾಡುವದೆಂದರೆ ಜನಗಳಿಗೆ ಬಹು ಚಿಕ್ಕ ಸಂಗತಿಯಾಗಿದೆ. ಅಜ್ಞ ಜನರು ಸಹಿತ ಬಹು ನಿರ್ಭಯರಾಗಿ ಉತ್ಸಾಹದಿಂದ ಭಾಗ ತೆಗೆದುಕೊಂಡರು. ೧೦ ಘಂಟೆಗೆ ತಾಲೂಕ ಕಚೇರಿಯ ಮುಂದಿನ ವಿಸ್ತಾರವಾದ ಮೈದಾನದಲ್ಲಿ ಸಭೆ ಮಾಡಿದರು ಅಲ್ಲಿ ಶ್ರೀಮತಿ ಸೀತಾಬಾಯಿ ಶೇಣವಿ ಇವರು ಸಮಯೋಚಿತ ಮಾತುಗಳನ್ನಾಡಿದನಂತರ ಪ್ರಾರ್ಥನೆಯಾಗಿ ಸಭೆಯು ಪೂರ್ತಿಗೊಂಡಿತು.

ಶಾಂತಿಮಯ ಜನರ ಮಧ್ಯದಲ್ಲಿ ಪೋಲೀಸರಿಗೆ ಆನುವೇ ದೊರೆಯುವಂತಿಲ್ಲ ಅಂತೆಯೇ ಒಬ್ಬಿಬ್ಬ ಬಿನ್ ಡ್ರೆಸ್ಸಿನ ಪೋಲೀಸರು ಈ ಪ್ರಚಂಡ ಗುಂಪಿನಲ್ಲಿ ಇದ್ದರೆ ಇದ್ದಿರಬಹುದು. ಇವೆಲ್ಲವೂ ಶಾಂತತೆಯ ಪ್ರಭಾವವೇ ಎಂದು ಹೇಳಬಹುದು.

ಶ್ರೀ. ಗಂಗಾಧರರಾಯರನ್ನು ರತ್ನಾಗಿರಿಗೆ ಒಯ್ದರು.

ಶ್ರೀ. ದೇಶಪಾಂಡೆ ಗಂಗಾಧರರಾಯರನ್ನು ನಾಳಿನ ದಿವಸ ಬಂಧಮುಕ್ತ ಮಾಡತಕ್ಕದ್ದು. ಆದರೆ ಅವರನ್ನು ಏಕೋ ರತ್ನಾಗಿರಿಗೆ ಒಯ್ದಂತೆ ವರ್ತಮಾನ ಬಂದಿರುತ್ತದೆ.

ಡಾಕ್ಟರ ಕಿಚಲೂಸಾಹೇಬರ ದಸ್ತಗಿರಿ.

—:-:*:-:—

ಪಂಜಾಬದ ತುಂಬ ಹರತಾಳ.

—(೦)—

ಪೇಶಾವರದಲ್ಲಿ ಸೋಲ್ಜರರ ಗುಂಡಿನಿಂದ ಸತ್ತ ಜನರ ಸ್ಮರಣೆಗಾಗಿ ಪಂಜಾಬದ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಹರತಾಳವಾಯಿತು. ಟಾಂಗಾ ಮೋಟಾರ, ಚಕ್ಕಡಿ ಮುಂತಾದ ವಾಹನಗಳು ಸಹ ಹರತಾಳ ಮಾಡಿದ್ದವು.

ಕಿಚಲು ಸಾಹೇಬರ ದಸ್ತಗಿರಿ-

ರಾಜದ್ರೋಹದ ಆರೋಪದಿಂದ ಪೋಲೀಸರು ಡಾಕ್ಟರ ಕಿಚಲೂಸಾಹೇಬರನ್ನು ಹಿಡಿದಿರುತ್ತಾರೆ

ಆವೃಕಸರದಲ್ಲಿ ಪೋಲೀಸಮಾತ್ರರಲ್ಲದೆ, ಎಲ್ಲ ಅಗಸೀಬಾಗಿಲಗಳಲ್ಲಿ ದಂಡಿನ ಕಾವಲಿಟ್ಟರು. ಮತ್ತು ಅಲ್ಲಲ್ಲಿ ಮ್ಯಾಜಿಸ್ಟ್ರೇಟರು ಸಿದ್ಧರಾಗಿ ನಿಂತುಕೊಂಡಿದ್ದರು. ಸಮಯ ಬಿದ್ದರೆ ಗುಂಡು ಹಾಕಲಿಕ್ಕೆ ಅಪ್ಪಣೆ ಕೊಡಲು ಅವಕಾಶವಾಗಬೇಕೆಂದು ಈ ಪೂರ್ವೋಪಾಯವು.

ಭಯಂಕರ ಶಿಕ್ಷೆ-

ಜಳವಳಿಯ ಮುಖಂಡರೆಂದು ಪೇಶಾವರದಲ್ಲಿ ಮೌಲಾನಾ ಅಬ್ದುಲರಹೀಮ, ರಹೀಮಬಕ್ಷ ಗಾಜಿ ಮತ್ತು ಗುಲಾಮರಬ್ಬಾನಿ ಇವರಿಗೆ ಮೂರ್ಮೂರು ವರ್ಷಗಳ ಸಕ್ರಮ ಶಿಕ್ಷೆ ವಿಧಿಸಿದರು.

ಅಧ್ಯಕ್ಷರ ಮೆರವಣಿಗೆ ಚದರಿಸಿದರು.

—(೦)—

ಅಧ್ಯಕ್ಷ ಪಟೇಲಸಾಹೇಬರು ಕಲಕತ್ತೆಗೆ ಹೋದರು. ಅಲ್ಲಿ ಅವರ ಮೆರವಣಿಗೆ ತೆಗೆದರು. ಪೋಲೀಸರು ಈ ಮೆರವಣಿಗೆ ಮುರಿದರು.

ಬಹಿಷ್ಕಾರದ ಮೂಲಕ ಸರಕಾರೀ ಕಾಮಗಾರರು ಒದಗುವದೇ ಕಠಿಣವಾಯಿತು.

—(೦)—

ಕುಲಾಬಾ ಜಿಲ್ಲೆಯ ಅಬಾಗಾದ ಜನರು ಉಪ್ಪಿನ ಖಾತೆಯ ಸರಕಾರೀ ಕಾಮಗಾರರಿಗೆ ಹಾಕಿದ ಬಹಿಷ್ಕಾರದಿಂದ ನೀರು ಸಹ ಸಿಗಲೊಲ್ಲದೆಂದು ಕಾಂಗ್ರೆಸ ಕಮಿಟಿಗೆ ದೂರ ಹೇಳಿಕೊಳ್ಳಲು- ಎಂಟು ದಿವಸದ ತನಕ ನೀರು ಕೊಡುತ್ತೇವೆ. ಆ ನಂತರ ನಿಮ್ಮ ಹಣೇಬರಹವನ್ನು ನೀವು ನೋಡಿಕೊಳ್ಳಿರೆಂದು ಊರವರು ಇವರಿಗೆ ನೋಟೀಸು ಕೊಟ್ಟಂತೆ ತಿಳಿಸಿದ್ದಾರೆ.

ಧಾರವಾಡದಿಂದ

"ವಿಕ್ರಮ" ಪಥಕದ ಪ್ರಯಾಣ.

ಇಲ್ಲಿಂದ ತಾ|| ೩-೫-೧೯೩೦ ನೇ ದಿವಸ ಕೋಡ ತಾಲೂಕಿನಲ್ಲಿ ಕಾಂಗ್ರೆಸ್ಸದ ಪ್ರಚಾರಕ್ಕಾಗಿ ಕೆಳಗೆ ಕಾಣಿಸಿದ ಐದು ಜನರ ಪಥಕವು ಹೋಯಿತು.

೧) ಅವದಾನಿ ಬಾಳಾಚಾರ್ಯ
೨) ಕುಲಕರ್ಣಿ ಗೋವಿಂದ
೩) ಕುಲಕರ್ಣಿ ತಿರಕಪ್ಪ
೪) ಕೇರೂರ ನಾರಾಯಣ
೫) ಕುರ್ತಕೋಟಿ ರಾಘವೇಂದ್ರ

ಈ ಪಥಕವು ಕೋಡ ತಾಲೂಕಿನಲ್ಲಿಯ ೩೧ ಹಳ್ಳಿಗಳಲ್ಲಿ ಈ ತಿಂಗಳ ಕೊನೆಯ ವರೆಗೆ ಪ್ರಚಾರ ಕೆಲಸವನ್ನು ಕೈಕೊಂಡು ಜೂನ ಮೊದಲನೇ ವಾರದಲ್ಲಿ ಮರಳಿ ಬರತಕ್ಕವರಿದ್ದಾರೆ. ಆದ ಕಾರಣಾ ಅಲ್ಲಲ್ಲಿಯ ಜನರು ಅವರಿಗೆ ನೆರವಾಗಬೇಕೆಂದು ವಿನ್ನಹ.

ವಿಕ್ರಮ ಪಥಕದ ಕಾರ್ಯಕ್ರಮವು.

ಊರು	ತಾ||
ಧಾರವಾಡದಿಂದಾ ಬ್ಯಾಡಗಿಗೆ—ತಾ	೩-೫-೩೦
೨) ಮುಲ್ಲೂರ	೪-೫-೩೦
೩) ಮಾಸಣಗಿ	೪-,,-,,
೪) ಕೆರವಡಿ	೫-,,-,,
೫) ಸಿದ್ದೇನೂರ	೬-,,-,,
೬) ಕದರಮಂಡಲಗಿ	೭-,,-,,
೭) ಬ್ಯಾಡಗಿ	೮-,,-,,
೮) ಮೋಟೇಬೆನ್ನೂರ	೯-,,-,,
೯) ಹೊಮ್ಮರಡ್ಡಿ	೧೦-,,-,,
೧೦) ಕುರಬಗೊಂಡ	೧೧-,,-,,
೧೧) ಕಾಗಿನೆಲ್ಲಿ	೧೧-,,-,,
೧೨) ಚಿಕ್ಕಬಾಸೂರ	೧೨-,,-,,
೧೩) ಮಳ್ನಾಪೂರ ಮತ್ತು ಅತ್ತಿಕಟ್ಟಿ	೧೩ ,,-,,
೧೪) ತಿಳವಳ್ಳಿ	೧೪-,,-,,
೧೫) ಶೇಷಗಿರಿ	೧೫ ,,-,,
೧೬) ಕಜಾವಿ	೧೬-,,-,,
೧೭) ಮದ್ಲೂರ	೧೭-,,-,,
೧೮) ಸಾತೇನಹಳ್ಳಿ	೧೭- ,,-,,
೧೯) ಚಿಕ್ಕೆರೂರ	೧೮-,,-,,
೨೦) ಗೋತಿಕೊಂಡ	೧೯-,,-,,
೨೧) ಬುರಡಿಗಟ್ಟಿ	೧೯-,,-,,
೨೨) ಹಿರೇಕೆರೂರ	೨೦-,,-,,
೨೩) ಮಾಸೂರ	೨೧-,,-,,
೨೪) ಬಟ್ಟೇಹಳ್ಳಿ	೨೨-,,-,,
೨೫) ಹಿರೇಕೆರೂರ	೨೩-,,-,,
೨೬) ಬಬಲೂರ	೨೪-,,-,,
೨೭) ಕೋಡ	೨೫-,,-,,
೨೮) ಹಾಂಸಭಾವಿ	೨೬-,,-,,
೨೯) ಚಿನ್ನಮುಳಗುಂದ	೨೭-,,-,,
೩೦) ಅಂಗೀಕಟ್ಟಿ	೨೮-,,-,,
೩೧ ಬ್ಯಾಡಗಿಯಿಂದಾ ಧಾರವಾಡ	೨೯-,,-,,

ಸಂಗೀತ ಕಲಾಭಿಮಾನಿಗಳಾದ ಕರ್ನಾಟಕಸ್ಥರಿಗೊಂದು ಬಿನ್ನಹ

—(೦)—

ಮಹನೀಯರೇ, ಧಾರವಾಡದಲ್ಲಿಯ ಕರ್ನಾಟಕ ಮಹಿಳಾ ವಿದ್ಯಾಲಯವು ೧೦ ವರ್ಷಗಳ ಲಾಗಾಯತ ಸಂಸ್ಥಾಪಿತವಾಗಿ ಸ್ತ್ರೀ ಶಿಕ್ಷಣದ ಬಗ್ಗೆ ಅವ್ಯಾಹತವಾಗಿ ಪ್ರಯತ್ನ ಮಾಡುತ್ತಲಿದೆ, ಇದರ ಏಳಿಗೆಗಾಗಿ ಧನಸಂಚಯವನ್ನು ಮಾಡುವದಕ್ಕಾಗಿ ನವ್ಯ ಕಲೆಯ ಗಾಯನ ಮಾಸ್ತರರೂ, ಕರ್ನಾಟಕದ ಸುಪ್ರಸಿದ್ಧ ಕೀರ್ತನಕಾರರೂ ಆದ ವೇ. ಶ್ರೀ. ಹರಿಸರ್ವೋತ್ತಮಾಚಾರ್ಯ ಮುಂಡರಗಿ ಇವರು ಸ್ವತಂತ್ರವಾಗಿ ಶ್ರಮ ತೆಗೆದುಕೊಂಡು, ನಾನಾ ವಾದ್ಯಗಳನ್ನು ಬಾರಿಸಿ ಸಂಗೀತ ಕಚೇರಿಯನ್ನು (ಜಲಸಾ) ಮಾಡುವ ಸಾಹಸವನ್ನು ಕೈಕೊಂಡಿದ್ದಾರೆ. ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚಾರ ಮಾಡಿ ಬಂದ ದ್ರವ್ಯಾಂಶವನ್ನು ಅಂತಃಕರಣಪೂರ್ವಕವಾಗಿ ವಿದ್ಯಾಲಯಕ್ಕೆ ಸಮರ್ಪಿಸುವರಾಗಿ ಒಪ್ಪಿ, ಶಾಲೆಯ ಪತಿಯಿಂದಲೇ ಸಂಚಾರಕ್ಕೆ ಹೊರಟಿದ್ದಾರೆ. ಕಾರಣ ಇವರಿಂದಾಗುವ ಸ್ತ್ರೀ ಸಮಾಜದ ವಾಙ್ಮಯ ಸೇವೆಗೆ ಅಖಿಲ ಕರ್ನಾಟಕವು ತನುಮನ ಧನ ಸಹಾಯವನ್ನು ಸ್ವಹಸ್ತ ಸರಹಸ್ತದಿಂದ ಮಾಡುವದೆಂದು ನಂಬಿದ್ದೇವೆ.

ಶ್ರೀ ಹರಿಸರ್ವೋತ್ತಮಾಚಾರ್ಯರು ಮಾಡುವ ಸಂಗೀತ ಕಚೇರಿಯಲ್ಲಿ ಅಪೂರ್ವವಾದ ಸಪ್ತಕರಂಗಗಳ, ಪಾಶ್ಚಿಮಾತ್ಯ ತಂತುವಾದ್ಯಗಳ ಮತ್ತು ಇತರ ಹಿಂದೂ ವಾದ್ಯಗಳ ಲಯಬದ್ಧಕೃತಿ ಮನೋಹರವಾದ ಎಷ್ಟೋ ಸಾಧನದ ಕೆಲಸಗಳನ್ನು ಪ್ರತ್ಯಕ್ಷ ನೋಡಿಯೂ ಕೇಳಿಯೂ ಮನಗಾಣಬೇಕಲ್ಲದೇ ಬಣ್ಣವರ್ಣನೆಯು ಅನಾವಶ್ಯಕವು.

ರಾ|| ಕೃಷ್ಣರಾವ ಗುಂಜೀಕರ ಬಿ. ಎ.
ರಿಟಾಯರ್ಡ ಡಿ. ಡಿ. ಸಿ.
ಅಧ್ಯಕ್ಷ, ಕರ್ನಾಟಕ ಮಹಿಳಾ ವಿದ್ಯಾಲಯ
ಧಾರವಾಡ

ತಾ|| ೪-೫-೧೯೩೦
ಧಾರವಾಡ

K· N. E 1413

ಬಿಡಿ ಪ್ರತಿ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೬ ನೇ ಮೇ ೧೯೩೦ (ಸಂಚಿಕೆ ೧೬

ದಿವಾನ ಜಾಧವರಾಯರು ಸಹಕಾರದ ಟಮುಕಿ ಬಾರಿಸಿದರು.

ಎಲ್ಲಾ ಜಾತಿಯವರಲ್ಲಿಯೂ ಪ್ರಸ್ತುತದ ಕಾಯದೆಭಂಗದಲ್ಲಿ ಉತ್ಸಾಹವಾಗಿದೆ. ಹೊಟ್ಟೆಯ ಪೂರ್ತಿ ಮಾಡುವಂಥವರಲ್ಲಿ ಅನಿವಾರ್ಯವಿಲ್ಲದ ಶ್ರೀಮಂತಿಕೆಯಲ್ಲಿ ಕಾಯದೆಭಂಗ ಮಾಡದವರೇ ಬಹಳ. ವಕೀಲರು ಇಂದು ಬೇಕಾದ ತ್ಯಾಗ ಕಾಯದೆ ಮುರಿಯುವರು. ಆದರೆ ಸನದು ಹೋಗುವದೆಂಬ ಭಯದಿಂದ ಇದರಲ್ಲಿ ತಂಡ ತಂಡವಾಗಿ ಸೇರರು. ಆದರೆ ಈ ಚಳವಳಿಯಲ್ಲಿ ಅವರ ಸಂಪೂರ್ಣ ಸಹಾನುಭೂತಿಯುಂಟು. ಅದೇ ಪ್ರಕಾರದ ಸಹಾಯ ಮತ್ತು ಸಹಾನುಭೂತಿಯು ಸರಕಾರೀ ಕಾಮದಾರರದೂ ಇರುತ್ತದೆ. ಇದೇ ಪ್ರಕಾರ ಸ್ಥೂಲವಾಗಿ ಎಲ್ಲಾ ಜಾತಿಗಳ ಪರಿಸ್ಥಿತಿಯಾಗಿರುತ್ತದೆ. ಹಿಂದಿನ ಅಸಹಕಾರದಲ್ಲಿ ಕರ್ನಾಟಕದಲ್ಲಿ ವೀರಶೈವರು, ಮಹಾರಾಷ್ಟ್ರದಲ್ಲಿ ಮರಾಟರು ಅಸಹಕಾರ ಮಾಡಲಿಲ್ಲ. ಪ್ರಸ್ತುತದಲ್ಲಿ ಬಹು ಸಂಖ್ಯೆಯಿಂದ ಇವರು ಕಾಯದೆಭಂಗ ಮಾಡಿದವರಾಗಿದ್ದು, ಸಹಕಾರಿಗಳೆಂಬವರು ಅಲ್ಪಸಂಖ್ಯಾಕರಾಗುತ್ತಾರೆ.

ಮುಂಬಯಿ ಇಲಾಖೆಯ ಮಟ್ಟಿಗೆ ವಿಚಾರ ಮಾಡಿದರೆ- ಮಹಾರಾಷ್ಟ್ರದಲ್ಲಿ ಮರಾಟರು ಕರ್ನಾಟಕದಲ್ಲಿ ವೀರಶೈವರು ಕಾಯದೆಭಂಗಕ್ಕೆ ಪೂರ್ಣ ಅನುಕೂಲರಾಗಿದ್ದಾರೆ. ಆದರೆ ಇವರಲ್ಲಿ ಈ ಪರ್ಯಾಂತರ ಮುಖಂಡರೆಂದು ಮೆರೆಯುತ್ತಿದ್ದವರು ಸಹಕಾರದ ನಿಶಾನೆ ಏರಿಸಿದ್ದಾರೆ. ಇವರ ಪತಿಯಿಂದ ದಿವಾನರಾದ ಜಾಧವರಾಯರು ಎರಡು ದಿವಸಗಳ ಹಿಂದೆ ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿ ಕಾಯದೆಭಂಗವನ್ನು ನಿಷೇಧಿಸಿ, ಸರಕಾರದ ಕೂಡ ಸಹಕಾರವೆಂಬ ಟಿಮಕಿಯನ್ನು ಬಾರಿಸಿದ್ದಾರೆ. ದಿವಾನರಿಗೆ ದಿಲ್ಲಿಗೆ ಹೋಗುವ ಅವಸರವಾಗಿ, ಅಲ್ಲಿಗೆ ಹೊರಟು ಹೋದರು. ಹೊರಡುವ ಪೂರ್ವದಲ್ಲಿ ಪುಣೆಯಲ್ಲಿ ಬ್ರಾಹ್ಮಣೇತರರ ಮ್ಯಾನೇಜಿಂಗ ಕಮೀಟಿಯನ್ನು ಕೂಡಿಸಿ, ಅದರ ಮುಖಾಂತರ ಕಾಯದೆಭಂಗದ ವಿರುದ್ಧ ಸಭೆ ಮಾಡಬೇಕೆಂದಿದ್ದರು ಆದರೆ ಕೋರಮ ಕೂಡಲಿಲ್ಲ. ಕೋರಮ ಕೂಡದಿರಲಿಕ್ಕೆ ಅದರ ಐವರು ಮೆಂಬರರು ಕಮೀಟಿಗೆ ಬರುವದು ಶಕ್ಯವಾಗಲಿಲ್ಲ. ಏಕಂದರೆ ಇವರು ಕೌನ್ಸಿಲ ಮೆಂಬರರಿದ್ದು ಮಹಾಬಳೇಶ್ವರದಲ್ಲಿ ಸಿಲೆಕ್ಟ ಕಮೀಟಿಯಲ್ಲಿ ತೊಡಗಿದ್ದಾರೆ. ಇದರೂ ಅವರು ಕಾಯದೆಭಂಗದ ವಿರುದ್ಧ ತಮ್ಮ ಸಮ್ಮತಿಯನ್ನು ತಿಳಿಸಿದ್ದರಿಂದ, ದಿವಾನರು ಅವರೆಲ್ಲರ ಪತಿಯಿಂದ ಮೇಲೆ ಹೇಳಿದ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ದಿವಾನರ ಕಮೀಟಿಗೆ ಸೇರಿದ ಕೆಲ ಮೆಂಬರರು ಚಳವಳಿಯ ವಿರುದ್ಧ ಅವುನ ಇಂಥ ಸಭೆಗಳನ್ನು ಮಾಡಬೇಕೆಂದಿರುತ್ತಾರೆಂಬದು ನಿಜವಾಗಿ ಸಂತೋಷವು. ಏಕಂದರೆ ಆಗ ಬಲಾಬಲದ ಪರೀಕ್ಷೆಯಾಗುವದು. ಸರಕಾರಕ್ಕೆ ಈಗ ಲೋಕರ ಬೆಂಬಲ ಎಷ್ಟು ಇರುತ್ತದೆಂಬದು ಗೊತ್ತಾಗುವದುಂಟು. ಆದರೂ ದಿವಾನಬಹಾದ್ದೂರರಂಥವರು ನಮಗೆ ಅನುಕೂಲರಾಗಿದ್ದಾರೆಂದು ಒಂದು ತರದ ಮಾಯೆಯಾದ [illegible]ದ್ದಾರೆ. ಆ ಮಾಯೆಯು ಸಹಕಾರಿಗಳ ಬಲಾಬಲದ ಪರೀಕ್ಷೆಯಿಂದ ದೂರಾಗುವದುಂಟು. ಇವರು ಯಾವದೊಂದು ಊರಿನಲ್ಲಿ ಜಾಹೀರ ಸಭೆ ಮಾಡಿ, ಗಾಂಧಿ ಕೂಟವೆಂದು ನಾಮಕರಣ ಮಾಡಿದ ಸಂಗಾದಿಗಳಲ್ಲಿ, ಸಭೆ ಮಾಡಿ, ಪರೀಕ್ಷೆ ಮಾಡಿಕೊಳ್ಳಲಿ. ಅಂದರೆ ಯಾರ ಸ್ವರೂಪ ಹೇಗುಂಟೆಂಬದರ ನಿರ್ಣಯವಾಗುವದು. ತಮ್ಮ ಸ್ವರೂಪ ನಿರ್ಣಯ ಮಾಡಿಕೊಳ್ಳಲಿಕ್ಕೆ ಯಾರೂ ಎಲ್ಲಿಯೂ ಪ್ರತ್ಯಕ್ಷರಾಗಲಿಲ್ಲವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಇವರು ಸಾರ್ವಜನಿಕ ರಂಗಸ್ಥಳದ ಮೇಲೆ ನಿಲ್ಲುವದೆಂದರೆ- ತಮ್ಮ ಅಪಮಾನ-ಅವಲಕ್ಷಣವನ್ನು ತಾವಾಗಿ ಮಾಡಿಕೊಳ್ಳುವಂತಾಗುತ್ತದೆ. ತಮಗೆ ತಕ್ಕಮಟ್ಟಿಗಾದರೂ ಯಶ ದೊರೆಯುತ್ತದೆಂದು ಅವರಿಗೆ ಅನಿಸಿದ್ದರೆ- ಆಮನಸಭೆಯ ಉಪದ್ವ್ಯಾಪವನ್ನು ಎಂದೋ ಪ್ರಾರಂಭಿಸುತ್ತಿದ್ದರು. ಅದನ್ನು ಬಿಡದೇ ಪ್ರೆಸ ಆಕ್ಟ, ಆರ್ಡಿನನ್ಸ, ಮುಂತಾದವುಗಳ ಅಡ್ಡ ಹಾದೀ ಹಿಡಿದಿದ್ದಾರೆ. ಇದನ್ನು ತಿಳಿಯದೆ ದಿವಾನ ಜಾಧವರಾವ ಮೊದಲಾದವರು ಸಹಕಾರದ ಟಿಮಕಿ ಬಾರಿಸುವದು ಹೆಡ್ಡತನವಲ್ಲವೇ ?

ಡಾಕ್ಟರ ಕಿಚಲುಸಾಹೇಬರ ದಸ್ತಗಿರಿ.

ಪಂಜಾಬದ ತುಂಬ ಹರತಾಳ.

ಪೇಶಾವ್ವರದಲ್ಲಿ ಸೋಲ್ಜರರ ಗುಂಡಿನಿಂದ ಸತ್ತ ಜನರ ಸ್ಮರಣೆಗಾಗಿ ಪಂಜಾಬದ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಹರತಾಳವಾಯಿತು. ಟಾಂಗಾ ಮೋಟಾರ, ಚಕ್ಕಡಿ ಮುಂತಾದ ವಾಹನಗಳು ಸಹ ಹರತಾಳ ಮಾಡಿದ್ದವು.

ಕಿಚಲು ಸಾಹೇಬರ ದಸ್ತಗಿರಿ-

ರಾಜದ್ರೋಹದ ಆರೋಪದಿಂದ ಪೋಲಿಸರು ಡಾಕ್ಟರ ಕಿಚಲುಸಾಹೇಬರನ್ನು ಹಿಡಿದಿರುತ್ತಾರೆ.

ಅಮೃತಸರದಲ್ಲಿ ಪೋಲಿಸಪಾತ್ರರಲ್ಲದೆ, ಎಲ್ಲಾ ಅಗಸೀಬಾಗಿಲುಗಳಲ್ಲಿ ದಂಡಿನ ಕಾವಲಿಟ್ಟರು. ಮತ್ತು ಅಲ್ಲಲ್ಲಿ ಮ್ಯಾಜಿಸ್ಟ್ರೇಟರು ಸಿದ್ಧರಾಗಿ ಕುಳಿತುಕೊಂಡಿದ್ದರು. ಸಮಯ ಬಿದ್ದರೆ- ಗುಂಡು ಹಾರಿಸಲಿಕ್ಕೆ ಅಪ್ಪಣೆ ಕೊಡಲು ಅವಕಾಶವಾಗಬೇಕೆಂದು ಈ ಪೂರ್ವೋಪಾಯವು.

ಭಯಂಕರ ಶಿಕ್ಷೆ-

ಚಳವಳಿಯ ಮುಖಂಡರೆಂದು ಪೇಶಾವರದಲ್ಲಿ ಮೌಲಾನಾ ಅಬ್ದುಲರಹೀಮ, ರಹೀಮಬಕ್ಷ ಗಾಜಿ ಮತ್ತು ಗುಲಾಮರಬ್ಬಾನಿ ಇವರಿಗೆ ಮೂರು ಮೂರು ವರ್ಷಗಳ ಸಕ್ತ ಶಿಕ್ಷೆ ವಿಧಿಸಿದರು.

ಲಾಹೋರಿನಲ್ಲಿ ರಾಜಕೀಯ ಭೂಕಂಪ !!

ಲಾಹೋರಿನ ಕೋಟೆಯಲ್ಲಿ ರಾಜಕೀಯ ಭೂಕಂಪವಾಗ ಬಂಧೆ ಯಾವ ರಸಾಯನಗಳ, ಕಂದಿಯು ತ್ತಿದೇಕೆಂಬದನ್ನು ದೇವರೇ ಬಲ್ಲ. ಪೋಲೀಸರು ಊರೊಳಗೆ ಬರುವ ಆ ಪ್ರಯಾಣಿಕರ ಮೋಟಾರುಗಳನ್ನು ಹಿಡಿದು ಹಾಕುವರು. ಅವಕ್ಕೆ ತಿರಿಗಿ ಕಂತವ್ಯ ಸ್ಥಳಕ್ಕೆ ಹೋಗಗೊಡುವದಿಲ್ಲ. ಇಷ್ಟೇ ಅಲ್ಲದೆ, ಪೇಶಾವರ ಮತ್ತು ಅಮೃತಸರ ರೇಲ್ವೆಯ ಪ್ರವಾಸವನ್ನೇ ನಿಲ್ಲಿಸಿಬಿಟ್ಟಿದ್ದಾರೆ.

ಆರೋಪಿಯ ಗೈರಹಾಜರಿಯಲ್ಲಿ ವಿಚಾರಣೆ. ಶಿಕ್ಷೆಯಾದರೆ, ಶಿಕ್ಷೆಯ ಮೇಲೆ ಅಪೀಲಿಲ್ಲ.

ಹಿಂದುಸ್ಥಾನ ಸರಕಾರದವರು ಇನ್ನೊಂದು ಆರ್ಡಿನನ್ಸ ತೆಗೆದು, ಲಾಹೋರಿನ ಕೊಲೆಯ ಆರೋಪಿಗಳ ವಿಚಾರಣೆಯು ಮೂವರು ಜಡ್ಜರ ಮುಂದೆ ನಡೆಯಬೇಕು. ಇವರ ತೀರ್ಪೇ ಕೊನೆಯ ತೀರ್ಪು. ಆರೋಪಿಗಳು ಬೇನೆಯಿಂದ ಅಥವಾ ಸತ್ಯಾಗ್ರಹದಿಂದ ಕೋರ್ಟಿಗೆ ಬರದಿದ್ದರೂ, ವಿಚಾರಣೆಯು ನಡೆಯಬೇಕೆಂದು ಹುಕುಮು ಮಾಡಿದ್ದಾರೆ.

ದೊಡ್ಡ ದೊಡ್ಡವರ ದಸ್ತಗಿರಿ ಮತ್ತು ಶಿಕ್ಷೆ.

೪೩೧ ಹಣಮಂತ ವೀರಪ್ಪಾ ಮಡಿಕೇರಿ ೨೫೦
೪೩೬ ಹೇಮನಗೌಡ ಚನಬಸನಗೌಡ ಪಾಟೀಲ ೩೪೭
೪೪೬ ಹುತ್ತನಗೌಡಾ ಮಲ್ಲಪ್ಪಗೌಡಾ ಪಾಟೀಲ ೩೦೭
೪೫೫ ಈಶ್ವರಯ್ಯಾ ಕರವೀರಯ್ಯಾ ಕಾಲವಾಡ ೨೩೦
೪೬೦ ಜಟ್ಟಪ್ಪ ಗೋಳಪ್ಪ ಸಾವಂತವಾಡಿ ೩೯೩
೪೬೧ ಕಟ್ಟೆಪ್ಪಾ ಮಲ್ಲಪ್ಪಾ ಮೋಟೇಬೆನ್ನೂರ ೨೬೩
೪೬೩ ಜಾಯನಗೌಡಾ ಫಕೀರಗೌಡಾ ಲಿಂಗನಗೌಡ್ರ ೨೯೯
೪೬೮ ಜಾನ ದೇವಪುತ್ರಪ್ಪಾ ಬೀರನೂರ ೨೬೩

೪೭೨ ಕಾಡಪ್ಪಾ ನಿಂಗಪ್ಪಾ ಡೊಳ್ಳಿ ೩೩೧
೪೭೩ ಕಳಕಪ್ಪಾ ಮಲ್ಲಪ್ಪಾ ಸಜ್ಜನರ
೪೮೩ ಕಲ್ಲಪ್ಪಾ ಚನಬಸಪ್ಪಾ ಬೂದಣ್ಣನವರ ೨೩೯
೪೮೬ ಕಲ್ಲಪ್ಪಾ ಮಲ್ಲಪ್ಪಾ ಗಾಣಿಗೇರ ೨೪೯
೪೯೧ ಕರಬಸಪ್ಪಾ ಹುಚ್ಚಪ್ಪಾ ಧಡಿ ೩೨೭
೩೯೪ ಕಂವೀರಯ್ಯಾ ಚನ್ನಯ್ಯಾ ಮಠ ೨೫೫
೪೯೫ ಕರಿಯಪ್ಪಾ ಕೋಟೆಪ್ಪಾ ಕುರಿ ೨೩೯
೫೧೦ ಕೃಷ್ಣಾಜೀ ಮಹಾದೇವ ಕುಲಕರ್ಣಿ ೨೬೬
೫೧೩ ಕೃಷ್ಣಪ್ಪಾ ಬಸಪ್ಪಾ ದೇವನೂರ ೨೬೬
೫೨೨ ಲಕ್ಷ್ಮಣ ಸಿದ್ದಪ್ಪಾ ಅರ್ಕಸಾಲಿ ೨೬೮
೫೩೫ ಲಕ್ಷ್ಮಣರಡ್ಡಿ ಎಲ್ಲಾರಡ್ಡಿ ಕಾಮರಡ್ಡೇರ ೨೫೬
೫೪೩ ಲಿಂಗಪ್ಪಾ ಚಂದ್ರಪ್ಪಾ ಗುಲಗಂಜಿ ೨೯೮
೫೪೮ ಲಿಂಗೋ ಜೀವಾಜಿ ಕುಲಕರ್ಣಿ ೨೦೮
೫೫೧ ಲೋಕಾ ನಿಂಗಪ್ಪಾ ಉಪ್ಪಾರ ೨೬೪
೫೬೧ ಮಹಾದೇವ ಹೇಮಗಿರಿಯಪ್ಪಾ ಆರೇರ ೨೯೯
೫೭೧ ಮಹಾದೇವ ಮಲ್ಲಪ್ಪಾ ಮಹಾಂತಶೆಟ್ಟರ ೨೬೪
೫೭೫ ಮಹಾದೇವ ಮಲ್ಲಪ್ಪಾ ಹಡಪದ ೨೩೧
೫೭೬ ಮಹಾಲಿಂಗಪ್ಪಾ ಮಲ್ಲಪ್ಪಾ ಅಂಗಡಿ ೩೨೭
೫೮೦ ಮಹಮ್ಮದಹುಸೇನ ರಾಜಾಸಾಹೇಬ ನವಲೂರ ೨೨೯
೫೮೫ ಮಹಿಪತ ಗುರುನಾಥ ಮಾಧವರಾಯರ ೨೮೯
೫೯೬ ಮಲ್ಲನಗೌಡಾ ದ್ಯಾಮನಗೌಡಾ ಶೆಟ್ಟನಗೌಡ್ರ ೨೨೭
೬೦೪ ಮಲ್ಲಪ್ಪಾ ಚಳ್ಳಪ್ಪ ಗುಡಿಸಲಮನಿ ೨೪೨
೬೦೬ ಮಲ್ಲಪ್ಪಾ ನೀಲಕಂಠಪ್ಪಾ ಕಬ್ಬಿಣದ ೨೧೦
೬೧೧ ಮಲ್ಲಪ್ಪಾ ಸಕ್ರಪ್ಪಾ ಸೂಲವಣ್ಣವರ ೨೫೬
೬೧೭ ಮಲ್ಲಯ್ಯಾ ವೀರಯ್ಯಾ ಚಾವಡಿ ೨೫೫
೬೧೮ ಮಲ್ಲೇಶಪ್ಪಾ ಭೀಮರಾಯಪ್ಪಾ ಶಾಂತಗಿರಿ ೨೫೨
೬೨೦ ಮಲ್ಲೇಶಪ್ಪಾ ವೀರಪ್ಪಾ ಹೊಸಪೇಟೆ ೨೬೯
೬೩೦ ಮರಿಗೌಡಾ ನಿಂಗನಗೌಡಾ ಸೀರಲಗಿ ೨೬೩
೬೩೧ ಮರಿಗೌಡಾ ತಿಪ್ಪನಗೌಡಾ ದೊಡ್ಡಗೌಡ್ರ ೨೪೭
೬೩೨ ಮರಿಯಪ್ಪಾ ಧರಮಪ್ಪಾ ಶಿರಕೋಳ ೨೯೦
೬೩೫ ಮಾರ್ತಾಂಡ ಮಲ್ಲಪ್ಪಾ ಕರಿಗಾರ ೨೫೩
೬೩೬ ಮಹಾರುದ್ರ ಕಾಳಪ್ಪಾ ಒಡಿಗೇರ ೨೮೮
೬೩೮ ಮೋಟೆಪ್ಪಾ ಹನಮಪ್ಪಾ ದಳಬಾಯಿ ೩೧೪
೬೪೦ ಮೋಲಾಸಾಬ ಮಲೀಕಸಾಬ ದೇವಲಖಾನ ೨೪೦
೬೪೨ ಮುದಕನಗೌಡಾ ಶಿದ್ದನಗೌಡಾ ಪಾಟೀಲ ೨೬೭
೬೪೬ ಮುರಿಗೆಪ್ಪಾ ಫಕೀರಪ್ಪಾ ವಿಭೂತಿ ೨೪೩
೬೪೭ ,, ರುದ್ರಪ್ಪಾ ಪಟ್ಟಣದ ೨೩೯
೬೪೮ ನಭಪ್ಪಾ ರಾಮಚಂದ್ರಪ್ಪಾ ಕರಕಣ್ಣವರ ೨೩೭
೬೫೬ ನಾಗಪ್ಪಾ ಎಲ್ಲಪ್ಪಾ ಹಿಂಗಣ್ಣವರ ೩೧೨
೬೫೭ ನಾಗಪ್ಪಾ ಫಕೀರಪ್ಪಾ ಹಲಗೇರಿ ೨೪೦
೬೬೦ ನಾಗಪ್ಪ ಗುಡ್ಡಪ್ಪಾ ದಿವಟರ ೨೧೮
೬೬೨ ನಾಗಪ್ಪ ಮಾದಪ್ಪಾ ಭಗವಂತಿ ೨೭೦
೬೬೫ ನಾಗಯ್ಯಾ ಗುರಯ್ಯಾ ಹಿರೇಮಠ ೨೬೮
೬೭೪ ನಾರಾಯಣ ಗೋವಿಂದ ಗೋಡಸಟ್ಟಿ ೨೫೮
೬೮೫ ನಾರಾಯಣ ಶ್ರೀನಿವಾಸ ಯಜುರ್ವೇದಿ ೨೭೪
೬೮೮ ನಾರಾಯಣ ಶ್ರೀನಿವಾಸಾಚಾರ್ಯ ಅಟ್ಟಿಹಳ್ಳಿ ೩೨೯
೬೮೭ ನೀಲಕಂಠ ಭೀಮಾಜಿ ಕುಲಕರ್ಣಿ ೨೬೦
೬೮೯ ನೀಲಕಂಠ ತಮ್ಮಣಶಾಸ್ತ್ರಿ ಸಗರ ೨೭೮
೬೯೧ ನೀಲಕಂಠಯ್ಯಾ ಚನ್ನಯ್ಯಾ ಮಠ ೨೭೨
೭೦೧ ನೀಲಪ್ಪಾ ಫಕೀರಪ್ಪಾ ಕುಂಬಾರ ೨೧೧
೭೦೯ ನಿಂಗಪ್ಪಾ ಎಲ್ಲಪ್ಪಾ ಸೋಮೋಡ್ಡಿ ೨೪೨
೭೨೩ ಪಾಂಡುರಂಗ ರಾಮಚಂದ್ರ ದೇಶಪಾಂಡೆ ೩೦೬
೭೨೭ ಫಕೀರಪ್ಪಾ ಫಕೀರಪ್ಪಾ ಕುರ್ತಕೋಟಿ ೩೦೬
೭೨೮ ಪರಸಪ್ಪಾ ಅಡಿವೆಪ್ಪಾ ಮಡಿವಾಳ ೨೬೮
೭೨೯ ಪರಸಪ್ಪಾ ಚನಬಸಪ್ಪಾ ಕೂಬಿಹಾಳ ೨೦೯
೭೩೬ ಪ್ರಲ್ಹಾದ ಕೃಷ್ಣ ವೈದ್ಯ ೩೩೯
೭೩೯ ಪ್ರಲ್ಹಾದ ರಾಮಚಂದ್ರ ಕೋಟಿ ೨೨೦
೭೪೭ ಪುಟ್ಟಪ್ಪಾ ಫಕೀರಪ್ಪಾ ನಂಜನಗೌಡರ ೨೯೯
೭೪೮ ಪುಟ್ಟಯ್ಯಾ ಗದಿಗೆಯ್ಯಾ ಹಿರೇಮಠ ೨೨೧
೭೫೨ ರಾಚಪ್ಪಾ ಬಸವಣ್ಣೆಪ್ಪಾ ಹೆಬ್ಬಳ್ಳಿ ೩೧೫
೭೫೧ ರಾಚಪ್ಪಾ ಶಿವರುದ್ರಪ್ಪಾ ಅಂಗಡಿ ೨೧೬
೭೫೩ ರಾಚಯ್ಯಾ ಅಡಿವೆಯ್ಯಾ ಹಿರೇಮಠ ೨೭೨
೭೬೨ ರಾಘವೇಂದ್ರ ವೆಂಕಟೇಶ ಕುಲಕರ್ಣಿ ೨೫೮
೭೬೪ ರಾಜಾರಾಮ ಮಾಧೂಸಾ ಮೇರವಾಡಿ ೩೦೩
೭೭೩ ರಾಮಚಂದ್ರ ಬಸವಂತು ಗುಮಾಸ್ತೆ ದೇಸಾಯಿ ೨೪೯
೭೭೬ ರಾಮಚಂದ್ರ ಗಣೇಶ ಸೂಗೂರ ೨೫೯
೭೮೦ ರಾಮಚಂದ್ರ ಹಣಮಂತ ಘಾಟಗೆ ೨೩೦
೭೮೧ ರಾಮಚಂದ್ರ ಹಣಮಂತ ಹೊಂಬಳ ೨೯೪
೭೮೨ ರಾಮಚಂದ್ರ ಹಣಮಂತ ಪಾಟೀಲ ೨೧೮
೭೮೩ ರಾಮಚಂದ್ರ ಹಣಮಂತಪ್ಪಾ ಉಳ್ಳಿ ೩೧೦
೭೮೬ ರಾಮಚಂದ್ರ ಮಧ್ವಾಚಾರ್ಯ ಭಂದ್ರಿ ೩೦೪
೭೯೨ ರಾಮಚಂದ್ರ ವೆಂಕಟರಾವ ಕುಲಕರ್ಣಿ ೨೫೧
೮೦೧ ರಾಮನಗೌಡಾ ಲಿಂಗನಗೌಡಾ ಪಾಟೀಲ ೯೦
೮೦೫ ರಾಮಪ್ಪಾ ಭರಮಪ್ಪಾ ಕಾಲಗಗ್ಗರಿ ೨೨೩
೮೦೬ ರಾಮಪ್ಪಾ ಚನಬಸಪ್ಪಾ ಮೇಂಟಿ ೨೧೬
೮೦೮ ರಾಮಪ್ಪಾ ಗೋವಿಂದಪ್ಪಾ ಬಾರಿಕೇರ ೨೫೫
೮೧೧ ರಾಮಪ್ಪಾ ಸಿಂಗಪ್ಪಾ ಶಿರಕಪ್ಪನವರ ೨೩೩
೮೧೨ ರಾಮಪ್ಪಾ ತಿಪ್ಪಣ್ಣಾ ಕೋರವನವರ ೨೫೧
೮೧೮ ರಾಮಾಚಾರ್ಯ ಬಾಳಾಚಾರ್ಯ ಮಿತ್ರಿಕೋಟಿ ೨೫೯
೮೧೯ ರಂಗಾಚಾರ್ಯ ತಿರಕಾಚಾರ್ಯ ಕಸವಳ್ಳಿ ೨೫೭
೮೨೨ ರಂಗಪ್ಪಾ ಶಿವಸಪ್ಪಾ ಪೂಜಾರ ೨೬೬
೮೨೪ ರಂಗೋ ಅಣ್ಣಾಜಿ ದೇಸಾಯಿ ೨೭೮
೮೨೮ ರವಳಪ್ಪಾ ರತ್ನಪ್ಪಾ ಕೋಟಿ ೨೨೨
೮೨೯ ರೇವಣಯ್ಯಾ ರಾಚಯ್ಯಾ ಕಂವೀರಯ್ಯನವರ ೨೨೩
೮೩೦ ರೇವಣಯ್ಯಾ ಶಿದ್ದಯ್ಯಾ ಕಾಡಯ್ಯನವರ ೩೦೯
೮೩೪ ರುದ್ರಗೌಡಾ ಫಕೀರಗೌಡಾ ಪಾಟೀಲ ೨೪೨
೮೩೫ ರುದ್ರಪ್ಪಾ ಬಸಪ್ಪಾ ಹಳ್ಳಿಪ್ಪನವರ ೨೩೨
೮೩೭ ರುದ್ರಪ್ಪಾ ಫಕೀರಪ್ಪಾ ಬ್ಯಾಹಟ್ಟಿ ೨೨೨
೮೪೨ ರುದ್ರಯ್ಯಾ ಗುರುಪಾದಯ್ಯಾ ಮಠದ ೨೪೬
೮೪೪ ರುದ್ರಯ್ಯಾ ವೀರಯ್ಯಾ ನವಲೀಮಠ ೨೧೧
೮೪೫ ರಾಮು ಗೋವಿಂದಪ್ಪಾ ಕಾಯಪ್ಪನವರ ೨೫೪
೮೫೦ ಸಹದೇವ ಅರ್ಜುನಪ್ಪಾ ಮರಾಠೆ ೨೨೫
೮೫೨ ಸಾಲೋಮನ ಸಾಮೊಯಲಪ್ಪಾ ಗುಂಡಿ ೨೩೯
೮೫೭ ಸಣ್ಣ ಬಸಪ್ಪಾ ಬಸಪ್ಪಾ ಕೊಡಶೆಟ್ಟರ ೨೩೦
೮೬೫ ಸಂಗಾ ನಾಗಪ್ಪಾ ಸವದತ್ತಿ ೨೩೭
೮೭೮ ಶಂಕರ ಗಣೇಶ ಕುಲಕರ್ಣಿ ೨೭೭
೮೭೯ ಶಂಕರ ಕೃಷ್ಣ ಕುಲಕರ್ಣಿ ೨೯೩
೮೮೦ ಶಂಕರ ಲಿಂಗಪ್ಪಾ ಬೈಸರ ೨೬೪
೮೮೧ ಶಂಕರ ಪರೆಪ್ಪಾ ಮಾದನಾಳ ೨೩೬
೮೮೯ ಶಂಕರೆಪ್ಪಾ ದ್ಯಾಮಪ್ಪಾ ರೂಗಿ ೨೪೮
೮೯೨ ಶಂಕರೆಪ್ಪಾ ಪರಪ್ಪಾ ಮುಂದಿನಮನಿ ೩೦೫
೮೯೪ ಶಂಕರೆಪ್ಪಾ ಶಿವಲಿಂಗಪ್ಪಾ ಹಾಡಕಾರ ೨೪೦
೯೦೦ ಶಾಂತಯ್ಯಾ ಮೂಕಪ್ಪಾ ನೆಲ್ಲಿಕೊಪ್ಪದ ೨೯೯
೯೦೨ ಶಟ್ಟೆಪ್ಪಾ ಬಸಪ್ಪಾ ಹಡಪದ ೨೧೮
೯೦೬ ಶೇಷಗಿರಿ ಬಾಳಕೃಷ್ಣ ಪಾಟೀಲ ೨೭೦
೯೦೮ ಶೇಷೋ ಬಾಳಾಜಿ ದೇಶಪಾಂಡೆ ೨೩೦
೯೧೦ ಶಿದಬಸನಗೌಡಾ ಶಿದ್ರಾಮಪ್ಪಾ ದೇಸಾಯಿ ೨೯೯
೯೧೫ ಶಿದ್ದಪ್ಪಾ ಬೂದಪ್ಪಾ ಹೂಗಾರ ೨೭೪
೯೧೬ ಶಿದ್ದಪ್ಪ ಉರ್ಫ ರಂಗಪ್ಪಾ ದೇವಪ್ಪಾ ಗೌಡಪ್ಪನವರ ೨೪೧
೯೧೭ ಶಿದ್ದಪ್ಪಾ ಕಲ್ಲಪ್ಪಾ ಸಿಡ್‌ನಾಯಿಕರ ೨೨೭
೯೧೯ ಶಿದ್ದಪ್ಪಾ ಶಿವಲಿಂಗಪ್ಪಾ ತಿಪ್ಪಶೆಟ್ಟಿ ೨೨೯
೯೨೮ ಶಿದ್ರಾಮಪ್ಪ ಹನಮಪ್ಪಾ ಆರೇರ ೨೨೭
೯೩೮ ಶಿವಪ್ಪ ಬೈಲಪ್ಪಾ ನಿಡಗುಂದಿ ೨೬೮
೯೪೧ ಶಿವಪ್ಪಾ ಫಕೀರಪ್ಪಾ ಹರಿದಾಳ ೨೨೪
೯೪೨ ಶಿವಪ್ಪಾ ಫಕೀರಪ್ಪಾ ರಾಮಣ್ಣವರ ೨೯೩
೯೪೮ ಶಿವಪುತ್ರ ಗುರಪ್ಪ ಕಡಗದ ೨೬೭
೯೪೯ ಶಿವರಾಯಪ್ಪಾ ಗಣಪ್ಪಾ ಕಾಲವಾಡ ೨೫೪
೯೫೩ ಶಿವಯ್ಯಾ ಬಸಯ್ಯಾ ಕೊಣ್ಣೂರ ೨೭೭
೯೫೪ ಶಿವಯ್ಯಾ ಚನಬಸಯ್ಯಾ ಕಟ್ಟೀಮನಿ ೨೫೭
೯೫೭ ಶಿವಾಜಿ ದುರ್ವಾಸ ಕುಲಕರ್ಣಿ ೨೩
೯೫೮ ಶಿವಾಜಿ ಗಣೇಶ ಏಕಣಿ ೨೬೯
೯೬೬ ಶ್ರೀನಿವಾಸ ಬಲಭೀಮ ನಾಡಗೌಡರ ೨೧೬
೯೬೯ ಶ್ರೀನಿವಾಸ ಗೋವಿಂದ ಕುಲಕರ್ಣಿ ೨೧೫
೯೭೩ ಶ್ರೀನಿವಾಸ ನಾರಾಯಣ ಸಂಗೀತ ೨೫೩
೯೭೮ ಶ್ರೀನಿವಾಸ ವೆಂಕಣ್ಣಾಚಾರ್ಯ ಮೊರಬ ೨೮೧
೯೯೧ ಶಿದ್ದಪ್ಪಾ ಹಣಮಪ್ಪಾ ನಲವಡಿ ೨೪೧
೯೯೬ ಶಿದ್ದಪ್ಪಾ ವೀರಪ್ಪಾ ಹೊಸಬಿಕ್ಕಲ ೨೫೬
೧೦೨೦ ಸದಾನಂದ ಯುಸಫ ಕಾಕೋಳ ೨೩೭
೧೦೨೭ ತಿಮ್ಮಪ್ಪಾ ಗೋವಿಂದಪ್ಪಾ ಕಲಬನೂರ ೨೨೨
೧೦೩೨ ಟೋಕಪ್ಪಾ ಬಸಪ್ಪಾ ನೀಲಗುಂದ ೨೬೩
೧೦೩೫ ತ್ರಿಯಂಬಕ ಗುರುನಾಥ ಕುಲಕರ್ಣಿ ೨೪೬
೧೦೩೬ ಉಡಚಪ್ಪಾ ಯಲ್ಲಪ್ಪಾ ತಳವಾರ ೨೮೩
೧೦೪೬ ವೆಂಕಪ್ಪಾ ಶಂಕರೆಪ್ಪಾ ರಡ್ಡಿ ೨೭೫
೧೦೫೦ ವೆಂಕಟೇಶ ಭೀಮರಾವ ಜಹಾಗೀರದಾರ ೨೪೭
೧೦೯೪ ವೀರಪ್ಪಾ ಗೋವಿಂದಪ್ಪಾ ನಾಯಿಕರ ೨೫೧
೧೦೯೭ ವೀರಪ್ಪಾ ಪರಪ್ಪಾ ಮಾಳೂರ ೩೪೨
೧೧೨೨ ವಿಠ್ಠಲ ವೆಂಕಟೇಶ ರಿಸಬೂಡ ೨೧೮
೧೧೨೪ ವ್ಯಾಸರಾಜ ಭೀಮಾಚಾರ್ಯ ಉಪಾಧ್ಯ ೨೬೯

ಶೇತಕೀ ಮುಲ್ಕೀ ಪರೀಕ್ಷೆ

೮ ಹಣಮಂತಗೌಡಾ ಫಕೀರಗೌಡ ಭಗವಂತಗೌಡ್ರ ೩೨೭
೧೧ ಹೊಳಿಬಸಪ್ಪ ಶಿವಪ್ಪಾ ಹುಚ್ಚನಗೌಡರ ೨೯೪
೧೨ ಇಮಾಮಸಾಬ ಹುಸೇನಸಾಬ ಕಿತ್ತೂರ ೨೯೨
೧೪ ಲಕ್ಷ್ಮಣ ನೀಲಕಂಠ ಹುಣಸವಾಡಕರ ೨೨೩
೧೫ ಮಲ್ಲೇಶಿ ದೇವಣ್ಣಾ ಕಮ್ಮಾರ ೩೯೧
೧೬ ಶ್ರೀನಿವಾಸ ಜಿವಾಜಿ ಪಾಟೀಲ ೨೯೯
೧೬ ವೀರಭದ್ರಯ್ಯಾ ಸಂಗಯ್ಯಾ ಮೂಲಿಮನಿ ೨೮೦

ಈ ಪರೀಕ್ಷೆ ಪರಿಣಾಮದ ಪ್ರತಿಗಳು ವಿಜಯದ ಏಜಂಟರಾದ ಮಿ. ಜಿ. ವ್ಹಿ. **ನವರತ್ನ** ಮಾರ್ಕೆಟ ರೋಡ ಧಾರವಾಡ ಇವರಲ್ಲಿ ದೊರೆಯುವವು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

ಈ ಸಂಬಂಧವನ್ನು ಯಾರೂ ಕಳೆದುಕೊಳ್ಳಲಾರರೆಂದು ವಿನಂತಿ.

ಫಡಣೀಸ ರಾಮಚಂದ್ರರಾಯರು

ಶಿರಹಟ್ಟಿ ಅಧ್ಯಕ್ಷ.

ಪು ಕ ಶಾಖೆ ಪ್ರದರ್ಶನ ಕಮಿಟಿ

ಲೋಕಲ್‌ಬೋರ್ಡ ಶಿರಹಟ್ಟಿ.

ತಾ|| ೫-೫-೧೯೩೦

ನೋಟೀಸು

ರಾ|| ರಾ|| ಮುದಿಯಪ್ಪಾ ತಂದಿ ... ಮುದಗಲ್ಲ ನ ನಾಗಪ್ಪಾ ತಂದಿ ಮುದಿಯಪ್ಪಾ ಮುದಗಲ್ಲ ಸಾಕೀನ ಲಕ್ಷ್ಮೇಶ್ವರ ತಾಲೂಕ ಗದಗ ಬೆಟಿಗೇರಿ ಇವರಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತ ಮಾಡಿದವಳು ಈ ನೋಟೀಸಿನಿಂದಾ ತಿಳಿಸುವದೇನಂದರೆ ನೀವು ಉಭಯತರು ಕೂಡಿಕೊಂಡು ಅಜಮಾಸು ೨ ಅಥವಾ ೩|| ವರ್ಷದ ಕೆಳಗೆ ನಮ್ಮನ್ನು ಸಂಪೂರ್ಣ ... ದುವ ಕರಾರಿನಿಂದಾ ನನ್ನ ಒಬ್ಬಳೇ ಒಬ್ಬ ... ಳಾದ ಪಾರ್ವತೆವ್ವಾ ಎಂಬವಳನ್ನು ಬಾರಿಗೇ ... ವಗೈರೆ ಯೇನೂ ಇಲ್ಲದೆ ಲಗ್ನ ಮಾಡಿಕೊಂಡಿರಿ ಸದ್ರಿ ನಿಮ್ಮ ಕರಾರ ಪ್ರಕಾರ ಹುಡಿಗಿಯ (ಪಾರ್ವತೆವ್ವಾ) ಗಂಡನಾದ ಸದ್ರಿ ನಾಗಪ್ಪಾ ಈತನು ನಮ್ಮ ಮನೆಯಲ್ಲಿ ಬಂದು ಇರಲಿಲ್ಲಾ ತಂ... ಕ್ಕಳಿಬ್ಬರೂ ನೀವು ಲಗ್ನ ಆದ ಒಂದೆರಡು ... ಳಲ್ಲಿ ಕರಾರ ಪತ್ರದ ಪ್ರಕಾರ ನಡೆಯುವದಕ್ಕೆ ಇನಕಾರ ಮಾಡಿದಿರಿ ಅಗ್ಯೆ ನಾವು ಬಹಳೇ ಹೇಳಿಕೊಂಡಿವಿ ಮತ್ತು ನಾಲ್ಕು ಜನ ಸಂಭಾವಿತರಿಂದಾ ಹೇಳಿಸಿದಿವಿ ಆದರೂ ಕೇಳದೆ ಸದ್ರಿ ಮುದಿಯಪ್ಪನು ನನ್ನ ಮಗನಾದ ನಾಗಪ್ಪನನ್ನೂ ಸಹಾ ನೀವು ನಿಮ್ಮ ಮನೆಯಲ್ಲಿ ಇಡುವದಿಲ್ಲಾ ನಮಗೆ ಇದರ ನಡುವೆ ಯಾರೂ ಹೇಳಬೇಡಿರಿ ನಮ್ಮ ಕೈಲೆ ಆದ್ರೆ ನಾವು ಹುಡಿಗನ್ನ ಹೊತ್ತುಕೊಂಡು ಹೋಗತೇವಿ ನೀವು ಏನು ಮಾಡುವದು ಮಾಡಿರಿ ಅಂತಾ ಸ್ಪಷ್ಟವಾಗಿ ಹೇಳಿದ್ದರಿಂದಾ ಹೆಣ್ಣುಮಕ್ಕಳಾದ ನಮಗೆ ಭೀತಿ ಹುಟ್ಟಿ ಯಾವ ಕಾಲಕ್ಕೆ ಬಂದು ನೀವು ಉಭಯತರು ಏನು ಮಾಡೀರಿ ಅಂಬುವ ಅಂದೇಶೆಯಿಂದಾ ಈ ನೋಟೀಸು ನಿಮಗೆ ಕೊಡಬೇಕಾಯಿತು ಈ ನೋಟೀಸ ಮುಟ್ಟಿದ ೧೫ ದಿವಸಗಳೊಳಗಾಗಿ ಬಂದು ನಮ್ಮ ಉಪಜೀವನಕ್ಕಾಗಿ ಆದ ೫೦೦ ರೂಪಾಯಿ ಸಾಲಾ ತೀರಿಸಿ ನಾಗಪ್ಪಾ ಈತನು ನಾಲ್ಕು ಜನ ಸಂಭಾವಿತರ ಜಾಮೀನು ಕೊಟ್ಟು ನಮ್ಮ ಮನೆಯಲ್ಲಿ ಇದ್ದು ಉತ್ತಮ ರೀತಿಯಿಂದ ತನ್ನ ಹೆಂಡತಿ ಕೂಡಾ ಬಾಳುವೆ ಮಾಡಬೇಕು ಮತ್ತು ಯಾವದೇ ತರದ ನಮಗೆ ತ್ರಾಸು ಆಗದಂ... ವ್ಯವಸ್ಥೆ ಮಾಡಿಕೊಟ್ಟು ಹೋಗಬೇಕು ಮತ್ತು ಮುದಿಯಪ್ಪಾ ಈತನು ಸದ್ರಿ ನಾಗಪ್ಪನಿಗೆ ಚಿತಾಯಿಸಿ ... ನನಗೆ ತನ್ನ ಮಗನಾದ ಸದ್ರಿ ನಾಗನನ್ನೂ ಕರಕೊಂಡು ಹೋಗದಂತೆ ನಾಲ್ಕು ಜನರ ಮುಂದೆ ಕಬೂಲ ಮಾಡಬೇಕು ಇದಕ್ಕೆ ತಪ್ಪಿದರೆ ನಮ್ಮ ನಿಮ್ಮ ಸಂಬಂಧದಲ್ಲಿ ವ್ಯತ್ಯಯ ಆಗಲಾರದು. ಮತ್ತು ಸದ್ರಿ ಸಾಲದ ಬಗ್ಗೆ ೫೦೦ ರೂಪಾಯಿಯ ಧಮಕಿ ಒಗ್ಗೆ ರೀತಿ ಪ್ರಕಾರ ನಿಮ್ಮಿಬ್ಬರ ಮೇಲ ಕೇಲ ನಡಿಸತೇನೆ ತಿಳಿಯಿರಿ ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಇರುತ್ತದೆ ಅಂತಾ ... ನೋಟೀ... ತಾ ... ೧೯೩೦ ನೇ ಇಸ್ವಿ

... ಗುರ್ತ ಮುಖಾಂತರ ... ಅಡಿವೆಪ್ಪಾ ಗದ್ದಿ ... ಮುಂ ... ಲಕ್ಷ್ಮೇಶ್ವರ ... ಆದ

... ನೋಟೀಸು

ಹ... ವೀರನ ಗೌಡಾ ಪಾಟೀಲ ... ಸಾಕೀನ ... ಇವರಿಗೆ-

ಕೆಳಗೆ ಸಹಿ ಮಾಡಿದವಳಿಂದಾ ಕೊಡುವ ಉತ್ತರ ನೋಟೀಸು ಏನೆಂದರೆ-

ನನ್ನ ತಂದಿ ವೀರನಗೌಡನಿಗೆ ನೀನು ದತ್ತಕ ಮಗನಿದ್ದು ಅವನ ಆಸ್ತಿ ಬಗ್ಗೆ ತಂಟೆ ಮಾಡಹತ್ತಿರುತ್ತಿ ಮತ್ತು ಐಲಿಕರಿಗೆ ಸವಣೂರಲ್ಲಿಂ ಹತ್ತಿ ಫಟಿಂಗತನ ಮಾಡಹತ್ತಿರುತ್ತಿ ಕಾರಣಾ ನೀನು ನನ್ನ ಮೇಲೆ ಸುಳ್ಳು ಮತ್ತು ಅವಮಾನವಾಗತಕ್ಕ ಮಜಕೂರಿನ ನೋಟೀಸು ತಾರೀಖು ೨-೪-೧೯೩೦ ಇಸ್ವಿ ರವಿವಾರ "ವಿಜಯ" ಪತ್ರದಲ್ಲಿ ಪ್ರಸಿದ್ಧ ಮಾಡಿರುತ್ತಿ ಆದ್ರೆ ನೀನು ನನ್ನ ಕೂಡ ಈ ವರೆಗೆ ಒಳ್ಳೇ ರೀತಿಯಿಂದಾ ಬಾಳ್ವೆ ಮಾಡಿ ನಿನಿಂದಾ ಶಂಕರವ್ವಾ ಎಂಬ ಮಗಳನ್ನು ಹಡೆದು ನಂತ್ರ ಈಗ ನಿನ್ನಿಂದಲೇ ಅಜಮಾಸು ೭ ತಿಂಗಳ ಗರ್ಭಿಣಿ ಇರುತ್ತೇನೆ ನೀನು ಶಿಟ್ಟಿನ ಕೈಯಲ್ಲಿ ಬದ್ಧಿಕೊಟ್ಟು ನನಗೆ ಅಪಮಾನವಾಗತಕ್ಕ ಮಜಕೂರಿನ ನೋಟೀಸು ಕೊಟ್ಟದ್ದು ಅದೆ ಈ ನೋಟೀಸು ಮುಟ್ಟಿದ ಕೂಡಲೆ ರದ್ದ ಪತ್ರ ಪ್ರಸಿದ್ಧ ಮಾಡುವ ಮತ್ತು ಮೊದಲಿನಂತೆ ನನ್ನ ಕೂಡಾ ಒಳ್ಳೇ ರೀತಿಯಿಂದಾ ಬಾಳ್ವೆ ಮಾಡುವಹಾಗೆ ಮಾಡಲಿಕ್ಕೆ ತಪ್ಪಿದರೆ ನನ್ನ ಅಪಮಾನವಾದದ್ದು ತುಂಬಿಕೊಡಲಿಕ್ಕೆ ನೀನು ಜವಾಬದಾರನಾಗುವಿ ನೀನು ಕೊಟ್ಟ ಸೋಡಪತ್ರವನ್ನು ನಾನು ಸ್ವೀಕಾರ ಮಾಡುವದಿಲ್ಲ ಮತ್ತು ಸೋಡಪತ್ರ ಕೊಡಲಿಕ್ಕೆ ನಿನಗೆ ಅಧಿಕಾರವಿಲ್ಲ ತಿಳಿದಿರಲಿ ತಾರೀಖು ೪-೫-೧೯೩೦

ಸಹಿ ಸಿವಗಂಗವ್ವಾ ಕೋಂ ಹನಮಂತಗೌಡಾ ಪಾಟೀಲ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಕಾಲೇಜದಲ್ಲಿ

ಇದೊಂದೇ ಶಿಕ್ಷಣ ... ಮೋಟಾರ ಡ್ರಾಯ್ವರ ... ಜನರ ಈವರೆಗೆ ಪುಣೆ, ಬೆಳಗಾವಿಗೆ ಹ... ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ... ಒರುವರು. ಈ ವೆಚ್ಚದ ಉಳಿತಾಯ ... ಡ್ರಾಯ್ವ್ಹಿಂಗದ ಉತ್ತಮ ಶಿಕ್ಷಣ ... ವರ್ಗವನ್ನು ನಾವು ಧಾರವಾಡದಲ್ಲಿ ... ಕರು ಶಿಕ್ಷಣ ಪಡಿಯುತ್ತಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ... ಕಲಿಯುವವರ ನಿರಾಶೆಯಾಗಬಾರದು ... ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ... ದೊಳಗಾಗಿ ಹತ್ತು ಜನರನು ... ವೆವು. ಆದರಿಂದ ಕೂಡಲೆ ಅರ್ಜಿ ಮಾಡಿ, ... ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ... ಗಿ.

ಮೋಟಾರಪ್ರದರ್ಶನ... ಧಾರವಾಡ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದಾವರ ಆಣೆ ಇಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಜಾಹಿರಾತುಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

ನಿತ್ಯ ಪತ್ರಿಕೆ

ವಿಜಯ

ವಾರಪತ್ರಿಕೆ

ಸಂ. ಕೃಷ್ಣಾಬಾಯಿ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ತಾರೀಖು ೯ ನೇ ಮೇ ೧೯೩೦ (ಸಂಖ್ಯೆ ೧೦೭

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUSES

AGENTS WANTED ON LIBERAL TERMS

For further particulars apply to –

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರ್ ಮಾಡಿದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯ ಕಲಮಿನ ಯೋಜನೆ	ಖಂಡಿತವಾದ ಬೋನಸಗಳ ಯೋಜನೆಗಳು
ಉದಾರವಾದ ಕರಾರುಗಳ ಮೇಲೆ		ಉದಾರವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ–

ಶ್ರೀ ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮೆಂಗಳೂರ)

ಪೋ. ಬಾ. ೩೪ ಹುಬ್ಬಳಿ

ಇವರಿಗೆ ಬರೆಯಿರಿ

ಮೈಸೂರು ಸರಕಾರದ ಅಪ್ಪಣೆಯಂತೆ

ಕರ್ನಾಟಕ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಏಟು ಲಕ್ಷದ ಮೇಲೆ ಇದೆ. ಡಿಪಾಸಿಟು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸವಿಸ್ತರ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ

ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವು.

ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವು ಬಹು ಸಡಗರದಿಂದ ನೆರವೇರಿತೆಂದು ಬರೆಯುವದಕ್ಕೆ ಸಂತೋಷ ಪಡುತ್ತೇವೆ. ಹಿಂದಿನ ಸಂಬಂಧವಿಲ್ಲದೆ ಈ ಸಂಗತಿಯನ್ನೋದಿ ವಾಚಕರು ಆಶ್ಚರ್ಯಚಕಿತರಾಗಬಹುದು. ಒಂದು ತಿಂಗಳ ಹಿಂದೆ ಈ ನಿಶಾನೆ ಹತ್ತುವದೇ ಹೇಗೆಂಬ ದೊಡ್ಡ ಚಿಂತೆಯುತ್ಪನ್ನವಾಗಿತ್ತು. ಆದರೆ ನಿಜವಾದ ಪರಿಸ್ಥಿತಿಯು ಹಾಗಿರಲಿಲ್ಲ. ಈಗ ಧ್ವಜಾರೋಹಣವಾದ ಕಟ್ಟಡವನ್ನು ತೆರೆಯುವ ಸಮಾರಂಭವಾಗ ರಾಷ್ಟ್ರೀಯ ನಿಶಾನೆಯನ್ನೇರಿಸಿದ್ದರೆಂಬುದನ್ನು ಧ್ಯಾನಕ್ಕೆ ತಂದರೆ ಧಾರವಾಡಕ್ಕೆ ಇದೇನು ಹೊಸ ವಿಷಯವಾಗಿದ್ದಿಲ್ಲ. ಆ ಸಮಾರಂಭವಾದನಂತರ ಗವರ್ನರಸಾಹೇಬರು ಬಂದರು. ಆಗ ಯುನಿಯನ್ ಜಾಕದ ದೆಸೆಯಿಂದ ನಾತಗುಡಿಯು ಅರಗಿನ ಮನೆ ಕಂಡಿತು. ಆದರೆ ಅದಕ್ಕೆ ಮುಂದೆ ದಾರಿಯಿರುತ್ತದೆಂಬುದನ್ನು ಬಲ್ಲವರಿದ್ದರು. ಆ ನಿಶಾನೆಯು ಹಬ್ಬ ಹುಣ್ಣಿವೆಗೆ ತೋರುವ ಹೊಸ ಅರಿವೆಯಂತೆ ಕ್ಷಣಿಕವಾಗಬಾರದು. ನಿರಂತರ ರಾಷ್ಟ್ರೀಯತ್ವದ ಪ್ರಭಾವ ತೋರಿಸಬೇಕೆಂದಿತ್ತು. ಯೂನಿಯನ್ ಜಾಕದ ಬದಲು ರಾಷ್ಟ್ರೀಯ ನಿಶಾನೆ ಹತ್ತಬೇಕೆಂಬದಾಗಿ ಹೋರಾಟ ತರಾವು ಯಾವಾಗಲು ಆಳರಸರನ್ನು ಸುಪ್ರಸನ್ನ ಮಾಡಿಕೊಳ್ಳಬೇಕೆನ್ನುವಂಥವರಿಗೆ ಕಸಿವಿಸಿಯನ್ನುಂಟುಮಾಡಿತು. ಆದ್ದರಿಂದ ಅವರು ಅದನ್ನು ಮುಂದೆ ಹಾಕುತ್ತಾ ಬಂದರು. ಈ ನಿಶಾನೆ ಹಚ್ಚಬಾರದೆಂದು ಯಾವ ಠರಾವು ಆಗಲಿಲ್ಲ, ಹಚ್ಚಬೇಕೆಂದು ಬಂದ ಠರಾವನ್ನು ಮಾತ್ರ ಮುಂದೆಯೊಗೆಯುತ್ತಾ ಬಂದರು. ಯಾಕೆಂದರೆ ಅದು ಪಾಸಾಗುವದೆಂದೇ ಅವರಿಗೆ ತಿಳಿದಿತ್ತು. ತಮ್ಮ ಕಾಲದಲ್ಲಿ ಹೀಗಾಯಿತೆಂದು ಆಳರಸರಿಂದ ಛೀಹಾಕಿಸಿಕೊಳ್ಳಬಾರದೆಂದು ಅವರ ಕುಹಕತನವಾಗಿತ್ತು. ತಮ್ಮ ಆಳಿಕೆ ಹೋದರೂ, ಬೇಕೆಂದು ಕಮಿಟಿಗೆ ಬಂದು, ತಮ್ಮ ವಿರುದ್ಧ ಮತ ಕೊಟ್ಟರು. ಅಲ್ಲಿ ಆರು ಜನ ಮುಸಲಮಾನ ಮೆಂಬರಿದ್ದಾರೆ. ಅವರಲ್ಲಿ ನಾಲ್ವರು ಪ್ರತಿಕೂಲ ಮತ ಕೊಟ್ಟರು. ಅವರಾರೆಂದರೆ ಮಾಜೀ ಅಧ್ಯಕ್ಷ ಮೆ. ಪಠಾಣ ಸಾಹೇಬರು, ಬೆಂಚ ಮ್ಯಾಜಿಸ್ಟ್ರೇಟರಾದ ಮೆ. ಫಕರುದ್ದೀನ ಮತ್ತು ಜವಳಿಯವರು, ನಾಲ್ಕನೆಯವರು ಮಿ. ಫೋಡೆಸ್ತಾರರೆಂಬವರು. ಉಳಿದ ಇಬ್ಬರಾದ ಶ್ರೀ ಮೆಹಬೂಬ ಅಬ್ದುಲ್ಲಾಸಾಹೇಬ ಮಿರಾಸಿ ಮತ್ತು ಜಮಾಲುದ್ದೀನರು ಅನುಕೂಲ ಮತ ಕೊಟ್ಟರು. ನಾವು ಕಮಿಟಿಗೆ ಬಂದರೆ ಮನಸ್ಸಿನಲ್ಲಿದ್ದರೂ, ಅಧಿಕಾರಸ್ಥರ ದಾಕ್ಷಿಣ್ಯದ ದೆಸೆಯಿಂದ ದೇಶದ ವಿರುದ್ಧ ಹೋಟು ಕೊಡಬೇಕಾಗುತ್ತದೆಂದು ಕೆಲ ಮೆಂಬರರು ಬರಲಿಲ್ಲ. ನಾಮಿನೇಟಾದಂಥ ಖಾನಸಾಹೇಬ ರಾವಸಾಹೇಬರಂಥವರು ಬರಲಿಲ್ಲ. ಅದರಂತೆ ಇವರೂ ಬರದಿದ್ದರೆ ಯಾವ ಹಾನಿಯೂ ಆಗುತ್ತಿದ್ದಿಲ್ಲ. ಇನ್ನು ಯಾವ ಸ್ವಾರ್ಥ ಪಕ್ಷ ಕೊಂಡರೋ ಅದನ್ನು ದೇವರೇ ಬಲ್ಲ. ವಿರೋಧವಾದರೂ ಕೊನೆಯಲ್ಲಿ ಬಹುಮತದಿಂದ ಠರಾವು ಪಾಸಾಗಿ ಆಗಿಂದಾಗ ನಿಶಾನೆ ಹಚ್ಚಲ್ಪಟ್ಟಿತೆಂಬುದು ಬಹು ಸಂತೋಷ. ಈ ಠರಾವಿನ ಕೂಡ ಅದೇ ಮ್ಯುನಿಸಿಪಾಲಿಟಿಯ ಸಭಾಮಂದಿರದಲ್ಲಿ ಮಹಾತ್ಮರ ದೊಡ್ಡದಾದ ಭಾವಚಿತ್ರವನ್ನೂ ಇಡಬೇಕೆಂಬ ವಿಚಾರ ನಡೆದಿದೆ. ಇದೊಂದು ಕಾರ್ಯವಾಯಿತೆಂದರೆ ಮ್ಯುನಿಸಿಪಾಲಿಟಿಯು ನಿಜವಾಗಿ ರಾಷ್ಟ್ರೀಯವಾಗುವದು. ಆಗ ಇದರ ಮುಂದೆ ಯಾವ ಗವರ್ನರ ಅಥವಾ ಯುರೋಪಿಯನ್ನ ಕಾಮದಾರನು ಕೂಡ ಮಾನ ಮರ್ಯಾದೆ ಹೊಂದಲಪೇಕ್ಷಿಸನು. ಸರ ಪುಟ್ಟಣಶೆಟ್ಟರು ಇದೇ ಕಟ್ಟಡವನ್ನು ತೆರೆಯುವ ಸಮಾರಂಭ ಮಾಡಿದಾಗ ರಾಷ್ಟ್ರೀಯ ನಿಶಾನೆ ಮತ್ತು ಹಿಂದೂ ಗೃಹಸ್ಥನಿಂದ ಸಮಾರಂಭವೆಂಬ ಕಾರಣದಿಂದ ಯಾವ ಆಂಗ್ಲೇಯನೂ ಆಮಂತ್ರಣವಿದ್ದರೂ ಸಮಾರಂಭಕ್ಕೆ ಬರಲಿಲ್ಲ. ಅಂದಬಳಿಕ ಮಹಾದ್ವಾರದಲ್ಲಿ ಬಂದ ಕೂಡಲೆ ಕಣ್ಣಿಗೆ ಬೀಳುವ ರಾಷ್ಟ್ರೀಯ ನಿಶಾನೆ ಮತ್ತು ಒಳಗೆ ಹೋದ ಕೂಡಲೆ ಲಂಗೋಟಿಯನ್ನು ಹಾಕಿ, ಬರೀ ಮೈಯಿಂದಿರುವ ಆಳೆತ್ತರವಿರುವ ಮಹಾತ್ಮರ ಭಾವಚಿತ್ರವನ್ನು ನೋಡುತ್ತಾ ಯಾವನೂ ಕೂಡ್ರಲಾರನು. ಏಕೆಂದರೆ ಅವರಲ್ಲಿ ಅಂಥ ಅಭಿಮಾನವುಂಟು. ಅಂಥ ಅಭಿಮಾನ ಮಾತ್ರ ನಮ್ಮ ಜನರಲ್ಲಿರುವದಿಲ್ಲ; ಆ ಅಭಿಮಾನ ಕಲಿಸಲಿಕ್ಕೆ ವರ್ತಮಾನ ಕಾಲದ ಚಳವಳಿಯು ಒಂದು ವಸ್ತುಪಾಠವಾಗಿರುತ್ತದೆ. ಮುಂದೆ ಸ್ವರಾಜ್ಯ ಸಿಕ್ಕ ಕೂಡಲೆ ಈಗ ವಿರುದ್ಧ ಹೋಟು ಕೊಟ್ಟವರು ಎರಡೂ ದಂಡೆಯ ಮೇಲೆ ಕಣ್ಣಿಡಬೇಕೆನ್ನುವಂಥವರು, ಪುಕ್ಕರು ಮತ್ತು ಬೇರೆ ಬೇರೆ ಪ್ರಕೃತಿಯವರು ಇದೇ ರಾಷ್ಟ್ರೀಯ ನಿಶಾನೆಗೆ ಸಲಾಮು ಮಾಡಿ, ರಾಷ್ಟ್ರಗೀತದ ಪಲ್ಲವಿ ಹಾಡುವರೆಂಬುದು ಖಂಡಿತ.

ಪಂಡಿತಪ್ಪಾ ಚಿಕ್ಕೋಡಿಯವರ ಲಿಂಗಾಯತಾಭಿಮಾನ.

ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ರಾಷ್ಟ್ರೀಯ ಸಂಘದವರಿದ್ದರೂ, ಉದಾರಪಕ್ಷದವರಾಗಿದ್ದರೆಂದು ಜನರಿಗೆ ಗೊತ್ತು. ಆದರೆ ಅವರಿಗೆ ಸ್ವಸ್ತಿಕದ ಚಳವಳಿಯಲ್ಲಿ ತಮ್ಮ ಕುಲದ ಅಭಿಮಾನವಷ್ಟೇ ಹುಟ್ಟಿದ್ದನ್ನು ಕಂಡು ನಮಗೆ ಬಹು ಕೌತುಕವೆನಿಸಿತು. ಇವರೇಕೆ ಇಂಥ ದುರ್ಬುದ್ಧಿ ಹುಟ್ಟಬೇಕು? ತಮ್ಮ ಜಾತಿಯ ಜನರಿಗೇ ಮತ್ತು ಇವರ ಕಷ್ಟಗಳನ್ನೇ ನಮ್ಮ ಕಮಿಶನರ ಸಾಹೇಬರ ಮುಂದೆ ತೋರಿಸಿಕೊಳ್ಳಲು ಕೆಲವರನ್ನು ಸಂಗಡ ಕರಕೊಂಡು ಅದಕ್ಕೆ ತಕ್ಕ ಮಂಡಲದ ದ್ರವ್ಯ ಹೊರಬಿಟ್ಟುಕೊಂಡು ಹೋಗಬೇಕೆಂದಿದ್ದಾರೆಂಬ ವರ್ತಮಾನ ಕೇಳಿದ ಕೂಡಲೆ, ಬೆಳಗಾವ ಜಿಲ್ಲೆಯ ದೊಡ್ಡ ದೊಡ್ಡ ಗ್ರಾಮಗಳ ವೀರಶೈವರು ಸಭೆಮಾಡಿ, ಇವರ ಈ ಕೃತ್ಯಕ್ಕೆ ತಮಗೆಷ್ಟು ಸಮ್ಮತವಿಲ್ಲೆಂದು ಜಾಹೀರ ಮಾಡಿದ್ದಾರೆ. ಪಂಡಿತರು ಸಾಹೇಬರ ಮುಂದೆ ಸ್ವಜನರ ಹಿತಸಾಧಿಸುವ ವಿಷಯವಾಗಿ ಎಷ್ಟು ಪಾಂಡಿತ್ಯವನ್ನು ಸೂರೆ ಮಾಡಿದರೂ ವ್ಯರ್ಥವೇ ಆಗುವದು. ಏಕೆಂದರೆ ಇವರಂತೆ ನೂರಾರು ಜಾತಿಯವರು ತಂತಮ್ಮ ಕುದುರೆಗಳನ್ನು ಮುಂದೆ ಹಾಕುವರು. ಪಂಡಿತರು ಬೇಡಿಕೊಳ್ಳುವದರಿಂದ ಆಗುವದಾದರೇನು? ನೂರು ನಾಲ್ಕು ಕಾರಕೂನಕಿ, ಎರಡು ಮೂರು ಮಾಮಲತಿ, ಒಂದು ಡೆಪ್ಯುಟಿ ಕಲೆಕ್ಟರ ಇಷ್ಟು ಸ್ಥಳಗಳು ದೊರೆಯಬಹುದು. ಇವುಗಳ ಹೊರತು ಲಿಂಗಾಯತರಿಗೆಂದೇ ರಾಜಕೀಯ ಹಕ್ಕುಗಳನ್ನು ಸ್ವತಂತ್ರವಾಗಿ ಕೊಡುವ ಹಕ್ಕು ಕಮೀಶನರಸಾಹೇಬರಿಗಿಲ್ಲ. ಸರಕಾರಕ್ಕಿಲ್ಲ. ಅಂದಬಳಿಕ ಇವರು ಸಾಹೇಬರ ಮುಂದೆ ಹೇಳಿಕೊಳ್ಳುವದಾದರೂ ಏನು? ಇಂಥ ಹಕ್ಕುಗಳನ್ನು ಕೇಳಿಕೊಳ್ಳಹತ್ತಿದ್ದರೆಂದು ಮುಂದಾಗಿ ಜಾಹೀರ ಮಾಡಿದ್ದರೆ ಅದಕ್ಕೆ ಹೌದು ಅಥವಾ ಅಲ್ಲವೆನ್ನಬಹುದು. ಜನರು ಕುರಿಗಳಂತೆ ತಮ್ಮನ್ನು ಹಿಂಬಾಲಿಸಬೇಕೆಂದು ಅಪೇಕ್ಷಿಸುವ ಕಾಲ ಹಿಂದಾಯಿತು. ಆ ಜಿಲ್ಲೆಯ ವೀರಶೈವರು ಯೋಗ್ಯಕಾಲದಲ್ಲಿ ಇವರ ಕಣ್ಣಿಗೆ ಅಂಜನ ಹಾಕಿದ್ದು ಸ್ತುತ್ಯವಾಯಿತು. ೧೧ನೆಯ ತಾರೀಖಿನ ದಿವಸ ಕೂಡುವ ಸಭೆಯಲ್ಲಿ ವೀರಶೈವರು ಶ್ರೀ. ಪಂಡಿತರ ಪಾಂಡಿತ್ಯದ ಪ್ರದರ್ಶನವು ತಮಗೆಷ್ಟು ಬೇಕಾಗಿಲ್ಲೆಂದು ಜಾಹೀರ ಮಾಡುವರೆಂದು ನಂಬಿರುತ್ತೇವೆ.

ದಿಲ್ಲಿ ಮತ್ತು ಕಲಕತ್ತೆಯಲ್ಲಿ
ಗೋಳೀಬಾರು

ಅನೇಕರು ಸತ್ತರು; ಬಹು ಜನರು ಘಾಯವಾದರು.

ದಿಲ್ಲಿ.

ಮಹಾತ್ಮರನ್ನು ಹಿಡಿದ ಬಗ್ಗೆ ಹಿಂದುಸ್ಥಾನದ ತುಂಬ ಪ್ರತಿಯೊಂದು ಪಟ್ಟಣ ಹಳ್ಳಿಯಲ್ಲಿ ಹರತಾಳವಾಯಿತು. ಹರತಾಳದ ಪ್ರಭಾವವು ಗೋಳೀಬಾರನಲ್ಲಿ ಮೂರು ನಾಲ್ಕು ಕಡೆಗೆ ಪರಿಣಮಿಸಿತು. ದಿಲ್ಲಿಯಲ್ಲಿ ಹೊರಟ ಮೆರವಣಿಗೆಯಲ್ಲಿ ಲಕ್ಷ ಜನ ಕೂಡಿತ್ತು. ಮುಂಚಿನ ಮೆರವಣಿಗೆಯಲ್ಲಿ ತುಂಬ ಜನರು ಪೋಲೀಸ ಸುಪರಿಂಟೆಂಡೆಂಟರಾದ ದೀನದಯಾಳರ ಮೋಟಾರ ಮುರಿದು, ಅವರ ಟೊಪ್ಪಿಗೆ ಕಸಕೊಂಡು ಹರಿದು ಹಾಕಿದ್ದರು. ಸಾಯಂಕಾಲದಲ್ಲಾದ ಮೆರವಣಿಗೆಯಲ್ಲಿ ಪೋಲೀಸರ ಮೇಲೆ ಕಲ್ಲು ಬಿದ್ದು ಕೆಲವರು ಪೆಟ್ಟು ತಿಂದರು. ಆಗ ಗುಂಡು ಹಾಕಬೇಕಾಯಿತು. ಲಾಠಿಯ ಪ್ರಯೋಗವೂ ನಡೆಯಿತು. ಲಾಠಿಯ ಹೊಡತದಿಂದಲೂ ಇಬ್ಬರು ಸತ್ತಿದ್ದಾರೆ. ಗುಂಡಿನಿಂದಾದ ಲಯದ ಸಂಖ್ಯೆಯು ಪೂರಾ ತಿಳಿದಿಲ್ಲ. ಚಾಂದಣಿ ಚೌಕಿನಲ್ಲಿ ಸೋಲ್ಜರರ ಕಾವಲಿಟ್ಟಿದ್ದು, ಯುರೋಪಿಯನ್ನರು ವಾಸವಾಗಿರುವಂಥ ಭಾಗ ಮತ್ತು ಹೊಸ ದಿಲ್ಲಿಯ ರಹದಾರಿಯನ್ನು ಬಂದು ಮಾಡಿದ್ದಾರೆ.

ಕಲಕತ್ತೆ–

ಕಲಕತ್ತೆಯಲ್ಲಿ ಮೂರು ನಾಲ್ಕು ಕಡೆಗೆ ದಂಗೆಯಾಯಿತು. ಊರ ತುಂಬ ಪೋಲಿಸ ಮತ್ತು ದಂಡಿನ ಕಾವಲಿತ್ತು. ಜನರು ನದಿಯ ಎರಡನೆಯ ದಂಡೆಯ ಮೇಲೆ ಕೂಡಿ, ರೇಲ್ವೆಗೆ ಬಹುವಾಗಿ ಕೇಡು ಮಾಡಿದರು. ದಾರಿಗುಂಟ ಗಿಡಗಳನ್ನು ಕಡಿದು, ಉಗಿಬಂಡಿ ಬಂದು ಮಾಡಿದರು. ತಾರು ಮತ್ತು ಮುಳ್ಳಿನ ತಂತಿಯ ಬೇಲೀ ಕತ್ತರಿಸಿದರು. ದಾರೀ ಕೆಲಸಕ್ಕಾಗಿ ಮ್ಯುನಿಸಿಪಾಲಿಟಿಯವರು ಅಲ್ಲಿ ಹಾಕಿದ ಕಲ್ಲಿನ ಬಟ್ಟಿಗಳ ಸಂಪೂರ್ಣ ಉಪಯೋಗ ಮಾಡಿದರು. ಕವಣೆಗಳು ಅಸಂಖ್ಯವಾಗಿ ಕಂಡು ಬಂದವು. ಟ್ರಾಮುಗಳಿಗೂ ಸಂಕ್ರಾಂತಿ ಬಂತು. ಜನರ ಸಂಖ್ಯೆಯು ಹೆಚ್ಚಾಗಲು ಪೋಲೀಸರು ಹಿಂದೆ ಸರಿದರು. ಅರ್ಧ ಮೈಲಿನವರೆಗೆ ಇವರಿಗೆ ಹಿಂಬಡತಿ ದೊರೆಯಿತು. ರೇಲ್ವೆಯ ಹಮಾಲರೂ ಸಂಪು ಮಾಡಲು ಪರಿಸ್ಥಿತಿಯು ಬಹಳ ಕ್ಷೋಭಿಣವಾಯಿತು; ದಂಗೆಯು ಭಯಂಕರವಾಗುತ್ತದೆಂದು ಪೋಲಿಸರು ಅಂದುಕೊಂಡು, ಘೇರು ಮಾಡಿದರು. ಆಗ ಜನರು ಚದರಿದರು. ಐವರಿಗಿಂತ ಹೆಚ್ಚು ಜನರು ಒಂದೆಡೆಯಲ್ಲಿ ಸೇರಬಾರದೆಂದು ಊರ ತುಂಬ ಜಾಹೀರನಾಮೆ ಹಚ್ಚಿದ್ದಾರೆ.

ರಾಷ್ಟ್ರೀಯ ನಿಶಾನೆಯ ಮೆರವಣಿಗೆ.

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ರಾಷ್ಟ್ರೀಯ ನಿಶಾನೆಯನ್ನು ಹಚ್ಚಬೇಕೆಂಬ ಠರಾವು ಬುಧವಾರ ಸಾಯಂಕಾಲದಲ್ಲಿ ಬರತಕ್ಕದ್ದಿತ್ತು. ಇದಕ್ಕೆ ಬೆಂಬಲವಾಗಿ ಊರೊಳಗಿಂದ ಸ್ತ್ರೀ ಮತ್ತು ಪುರುಷ ಸ್ವಯಂಸೇವಕರ ಎರಡು ಸ್ವತಂತ್ರ ಮೆರವಣಿಗೆಗಳು ಹೊರಟು, ಮುಖ್ಯ ಮುಖ್ಯ ಬೀದಿಗಳಲ್ಲಿ ತಿರುಗಿ ಸಾವಿರಾರು ಜನರೊಂದಿಗೆ ಮ್ಯುನಿಸಿಪಾಲಿಟಿಗೆ ಹೋಯಿತು. ಆಗಿನ ನೋಟವು ಪ್ರೇಕ್ಷಣೀಯವಾಗಿತ್ತು. ಠರಾವು ಪಾಸಾದ ಬಳಿಕ, ವಂದೇಮಾತರಂ ಮತ್ತು ಮಹಾತ್ಮಾ ಗಾಂಧಿಯವರ ಜಯಘೋಷದಲ್ಲಿ ನಿಶಾನೆ ಏರಿಸಲ್ಪಟ್ಟಿತು. ಅನಂತರ ಐದಾರು ಸಾವಿರ ಜನ ಕೂಡಿದ ಸಭೆಯಲ್ಲಿ ಅಧ್ಯಕ್ಷ ಶ್ರೀ. ಜೋಗ ಮತ್ತು ಠರಾವಿನ ಉತ್ಪಾದಕರಾದ ಶ್ರೀ. ಭಿಸೆಯವರ ಅಭಿನಂದಿಸಲ್ಪಟ್ಟಿತು. ಸಭಾಧ್ಯಕ್ಷರಾಗಿದ್ದ ಶ್ರೀ ಕೃಷ್ಣಾಬಾಯಿ ಪಣಜೀಕರರು ಗೌರವದಿಂದ ಇವರನ್ನು ಹೂಮಾಲೆಗಳಿಂದ ಸುಶೋಭಿತಮಾಡಿದರು. ಆಗ ಶ್ರೀ. ಜೋಗರಿಗೆ ರಾಷ್ಟ್ರೀಯ ನಿಶಾನೆಯ ಗೀತೆಯನ್ನು ಮುದ್ರಿಸಿದ ಪಟವನ್ನು ಮೆಚ್ಚುಕೊಡಲ್ಪಟ್ಟಿತು. ತರುಣ ಸಂಘದವರು ಶ್ರೀ. ಜೋಗರಿಗೆ ಒಂದು ನಿಶಾನೆಯನ್ನು ಬಹುಮಾನವಾಗಿ ಕೊಟ್ಟಿದ್ದು, ಇದನ್ನು ಇವರು ತಮ್ಮ ಮನೆಯ ಮುಂಬಾಗಿಲಲ್ಲಿ ನಿಲ್ಲಿಸಿದ್ದಾರೆಂದು ಬರೆಯಲು ಸಂತೋಷಪಡುತ್ತೇವೆ.

ಮಹಾತ್ಮರನ್ನು ಪುರಂದರಕ್ಕೆ ಕಳಿಸಿದರು.

ಆಳರಸರು ಮಹಾತ್ಮರನ್ನು ಪುರಂದರ ಕಿಲ್ಲೆಗೆ ಕಳಿಸಿದ್ದಾರೆ. ಮೂವರು ಡಾಕ್ಟರರು ಇವರ ಪ್ರಕೃತಿಯ ನಿದಾನ ಮಾಡಿ, ಪ್ರಕೃತಿಯು ನೆಟ್ಟಗಿರುತ್ತದೆಂದು ಸರ್ಟಿಫಿಕೇಟು ಕೊಟ್ಟಿರುತ್ತಾರೆ.

'ಇಂಗ್ಲಂಡವು ಹಿಂದುಸ್ಥಾನವನ್ನು ಕಳಕೊಳ್ಳಬೇಕೇ' ಎಂದು ಅರ್ದನ ಜಸಬರ್ನರೆಂಬ ಸಾಹೇಬರು ಬರೆದ ಪುಸ್ತಕವು ಹಿಂದುಸ್ಥಾನಕ್ಕೆ ಬರಕೂಡದೆಂದು ಹಿಂದುಸ್ಥಾನ ಸರಕಾರದವರು ಜಾಹೀರ ಮಾಡಿದ್ದಾರೆ.

ಬ್ರಹ್ಮದೇಶದಲ್ಲಿ ಭೂಕಂಪ.

ರಂಗೂನದಲ್ಲಿ ಭಯಂಕರ ಹಾನಿ.

ಆರು ನೂರು ಜನರು ಸತ್ತರು.

ಬ್ರಹ್ಮದೇಶದಲ್ಲಿ ಒಂದೂವರೀ ನಿಮಿಷದವರೆಗೆ ಭೂಕಂಪವಾಗಿ ಜಪಾನದೇಶದಲ್ಲಾಗುವಂಥ ಪ್ರಳಯವಾಗಿರುತ್ತದೆ. ರಂಗೂನ ಪಟ್ಟಣದಲ್ಲಿ ೪೦ ಜನರು ಸತ್ತರು. ೧೫೦ ಜನರು ಘಾಯವಾಗಿದ್ದಾರೆ. ಒಂದು ದೊಡ್ಡ ಕಟ್ಟಡವು ನೆಲಕ್ಕುರುಳಿದ್ದರಿಂದ ಹತ್ತು ಜನರು ಅದರಲ್ಲಿ ಸಿಕ್ಕು ಸತ್ತರು. ಮದನವೆಂಬ ಭವ್ಯ ಥಿಯೇಟರ ಮತ್ತು ಒಂದು ಮಸೀದಿಯು ನೆಲಸಮವಾದವು. ಅನೇಕ ಮನೆಗಳು ಅರ್ಧಮರ್ಧ ಬಿದ್ದಿರುತ್ತವೆ.

ಪೇಗೂ ಪಟ್ಟಣದಲ್ಲಂತೂ ಭಯಂಕರ ಹಾನಿಯಾಗಿದೆ. ನಾಲ್ಕು ನೂರು ಜನರು ಸತ್ತಿದ್ದಾರೆ. ಮ್ಯುನಿಸಿಪಾಲಿಟಿಯ ಕಚೇರಿ, ಸರಕಾರೀ ಶಾಲೆ ಮತ್ತು ಸರಕಾರೀ ಬ್ಯಾಂಕು ನೆಲಸಮವಾಗಿವೆ. ಸೇಕ್ರೆಟರಿಯಟದ ಕಟ್ಟಡವು ಕುಸಿದಿದ್ದು, ಕಚೇರಿಯ ಕೆಲಸ ಕಟ್ಟಾಗಿದೆ.

ವಿಜಾಪೂರದಲ್ಲಿರುವ ಎಡವರ್ಡ ಬಾದಶಹರ ಶಿಲಾಮೂರ್ತಿಯ ಮೋರೆಗೆ ಯಾರೋ ಮಸೀ ಹಚ್ಚಿದ್ದು, ಪೋಲಿಸರು ಅದರ ತಪಾಸಣೆ ನಡೆಸಿದ್ದಾರೆ.

ಜಾಹೀರ ನೋಟೀಸು

ಯಾವತ್ತು ಒಕ್ಕಲತನದ ಅಭಿಲಾಷೆಯುಳ್ಳವರಿಗೆ ತಿಳಿಸುವದೇನಂದರೆ—

ತಿಂಹಟ್ಟಿಯಲ್ಲಿ ಶ್ರೀ ಫಕೀರಸ್ವಾಮಿಯ ಜಾತ್ರೆಯು ಪ್ರತಿವರುಷದ ಪ್ರಕಾರ ಈ ವರುಷ ವೈಶಾಖ ಶು|| ೧೫ ತಾ|| ೧೨-೫-೧೯೩೦ನೇ ಇಸ್ವಿ ಸೋಮವಾರದಿಂದ ಸುರುವು ಆಗತಕ್ಕದ್ದಿದೆ. ಸದರೀ ಜಾತ್ರೆಯಲ್ಲಿ ಬಹು ವಿಧವಾದ ದನಗಳು ದೂರ ದೂರ ದೇಶಗಳಿಂದ ಬರತಕ್ಕವು ಇದ್ದು, ಅವುಗಳಲ್ಲಿ ಉತ್ತಮವಾದ ದನಗಳಿಗೆ ಬಕ್ಷೀಸು ಮತ್ತು ಸರಟೀಫಿಕೀಟು ವಗೈರೆ ಉತ್ತೇಜನಾರ್ಥವಾಗಿ ಕೊಡುವದು ಇಲ್ಲಿಯ ಪ್ರದರ್ಶನ ಕಮಿಟಿಯಿಂದ ಠರಾಯಿಸಿರುತ್ತದೆ. ಇದರ ಹೊರತಾಗಿ ಅನುಕೂಲವಾದಲ್ಲಿ ದನಗಳ ಹುಟ್ಟುವಳಿಯ ಮಾಹಿತಿ ಮತ್ತು ಒಕ್ಕಲತನದ ಯಾವತ್ತು ಸಾಮಾನ ವ ಬೀಜಗಳ ಬಗ್ಗೆ ಉಪಯುಕ್ತ ಮಾಹಿತಿಯು ಶೇತಕೀ ಖಾತೆಯ ತಜ್ಞ ಜನರಿಂದ ಕೊಡಲ್ಪಡುವದು. ಕಾರಣ

WANTED

A Qualified Sanitary Inspector, who has passed the Sanitary Surveyor's Examination to serve under the Byadgi Municipality on a salary of Rs 40-2-60 per mensem. Candidates should apply with copies of testimonials so as to reach the undersigned on or before the 31st May 1930 Preference wil be given to Kanarese knowing Candidates

Byadgi M C Shettar
1st. May 1930 President,
Byadgi Municipality

ಜಾಹೀರ ನೋಟೀಸು

——(೦)——

ಯಾವತ್ತು ಒಕ್ಕಲತನದ ಅಭಿಲಾಷೆಯುಳ್ಳವರಿಗೆ ತಿಳಿಸುವದೇನಂದರೆ—

ಶಿರಹಟ್ಟಿಯಲ್ಲಿ ಶ್ರೀ ಫಕೀರಸ್ವಾಮಿಯ ಜಾತ್ರೆಯು ಪ್ರತಿವರುಷದ ಪ್ರಕಾರ ಈ ವರುಷ ವೈಶಾಖ ಶು|| ೧೫ ತಾ|| ೧೨-೫-೧೯೩೦ನೇ ಇಸ್ವಿ ಸೋಮವಾರದಿಂದ ಸುರುವು ಆಗತಕ್ಕದ್ದಿದೆ. ಸದರೀ ಜಾತ್ರೆಯಲ್ಲಿ ಬಹು ವಿಧವಾದ ದನಗಳು ದೂರ ದೂರ ದೇಶಗಳಿಂದ ಬರತಕ್ಕವು ಇದ್ದು ಅವುಗಳಲ್ಲಿ ಉತ್ತಮವಾದ ದನಗಳಿಗೆ ಬಕ್ಷೀಸು ಮತ್ತು ಸರಟೀಫಿಕೀಟು ವಗೈರೆ ಉತ್ತೇಜನಾರ್ಥವಾಗಿ ಕೊಡುವದು ಇಲ್ಲಿಯ ಪ್ರದರ್ಶನ ಕಮೀಟಿಯಿಂದ ಠರಾಯಿಸಿರುತ್ತದೆ. ಇದರ ಹೊರ್ತಾಗಿ ಅನುಕೂಲವಾದಲ್ಲಿ ದನಗಳ ಹುಟ್ಟುವಳಿಯ ಮಾಹಿತಿ ಮತ್ತು ಒಕ್ಕಲತನದ ಯಾವತ್ತೂ ಸಾಮಾನ ವ ಬೀಜಗಳ ಬಗ್ಗೆ ಉಪಯುಕ್ತ ಮಾಹಿತಿಯು ಶೇತಕೀ ಖಾತೆಯ ತಜ್ಞ ಜನರಿಂದ ಕೊಡಲ್ಪಡುವದು. ಕಾರಣ ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಲಾರರೆಂದು ವಿನಂತಿ.

ಫಡಕೇಸ ರಾಮಚಂದ್ರರಾಯರು

ಶಿರಹಟ್ಟಿ ಅಧ್ಯಕ್ಷ.
ಪ್ರ ಕ. ಕೌಲೂರ ಪ್ರದರ್ಶನ ಕಮೀಟಿ
ಲೋಕಲ್‌ಬೋರ್ಡ ಶಿರಹಟ್ಟಿ.
ತಾ|| ೩-೫-೧೯೩೦

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅಮೃತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ಈ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಬೇಡಿಕೆಯನ್ನು ಮಾಡಿರುವಿರಿಯೋ ಅದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸೋಯಿ.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ-ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದಕಾರಣ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ನೋಟೀಸಿನ ದರಗಳು

—:(೦):—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕಿಸುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1448

ವಿಜಯ

ನಿತ್ಯ ಪತ್ರ   ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ,

ವರ್ಷ ೧೧   ಧಾರವಾಡ ಶನಿವಾರ ತಾರೀಖು ೧೦ ನೇ ಮೇ ೧೯೩೦.   (ಸಂಚಿಕೆ ೧೦೪

(Incorporated in S. S.)   (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES.   GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲೆಂಡದಲ್ಲಿ ರಜಿಸ್ಟರ ಮಾಡಲ್ಪಟ್ಟದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯುಳ್ಳ ಯೋಗ್ಯ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಎಂಟು ಲಕ್ಷದ ಮೇಲುಂಟು. ಹಳೆ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು [illegible] ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦.

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ಶುದ್ಧ ೧೨

ಆ ವಿಜಯಂ ಶ್ರೀಕವಿಸ್ತ್ರಯ
ಕೀ ವಸುಮತಿಯ ನಲಿಸಿರೆ ಸುಕೃತಚರಿತೆಗಳಿಂ ವಿ
ಜಿ “ ವಿಜಯಂ ” ಶ್ರೀಕರಣ !
ನಾ ವಿಹಿತಂಗಳ ವಿವರಿಸಲಿನ್ನು ಸಾಜಂ॥೧

ಮಹಾತ್ಮರನ್ನು ಹಿಡಿಯುವ ಪೂರ್ವ ಸಿದ್ಧತೆ.

ದೇಶದ ತುಂಬ ಪೋಲೀಸ ಮತ್ತು ದಂಡಿನ ಬಂದೋಬಸ್ತು.

—(೦)—

ಇಂಗ್ರೇಜಿ ಸರಕಾರದವರು ಮಹಾತ್ಮರನ್ನು ಹಿಡಿಯುವ ಮುಂಚೆ ದೇಶದ ತುಂಬ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪೋಲೀಸ ಮತ್ತು ದಂಡಿನ ಭದ್ರೋಪಾಯಗಳನ್ನು ಕೈಕೊಂಡಿದ್ದರು. ಈ ಉಪಾಯಗಳಿಂದ ಮಹಾತ್ಮರನ್ನು ಹಿಡಿಯುವರೆಂದು ಮುಂದಾಗಿ ಜನರಿಗೆ ತಿಳಿದು ಹೋಗಿತ್ತು. ಧಾರವಾಡದ್ದೇ ಒಂದು ಉದಾಹರಣೆ ತಕ್ಕೊಳ್ಳುವಾ- ಅಂದು ಪ್ರಾತಃಕಾಲದಲ್ಲಿ ಊರೊಳಗೆ ಹೆಗಲ ಮೇಲೆ ಬಂದೂಕು ಹೊತ್ತುಕೊಂಡ ಪೋಲೀಸರ ಮೆರವಣಿಗೆ ಹೊರಟಿತು. ಕಚೇರಿಗಳ ಹತ್ತರ ಅವರ ಠಾಣವಿತ್ತು. ಕಲೆಕ್ಟರಸಾಹೇಬರ ಬಂಗ್ಲೆಯ ಹತ್ತರ ಸಜ್ಜಾಗಿ ನಿಂತಿದ್ದರು. ಇವನ್ನು ಕಂಡು, ಮಹಾತ್ಮರನ್ನು ಹಿಡಿಯುವರೆಂದು ಎರಡು ದಿವಸಗಳಿಂದ ಹುಟ್ಟಿದ ಸುದ್ದಿಯು ಇಂದು ನಿಜವಾಗುವದೆಂದು ಜನರಿಗೆ ಅನಿಸಿತು. ಅದು ಮಧ್ಯಾನ್ಹದಲ್ಲಿ ಕಾರು ಬಂದು ನಿಜ ಮಾಡಿತು. ಧಾರವಾಡಕ್ಕಿಂತ ಮಿಗಿಲಾದ ಬಂದೋಬಸ್ತು ಬೆಳಗಾವಿ ತುಂಬ ಆಗಿತ್ತು. ಹುಬ್ಬಳ್ಳಿಯಲ್ಲಿ ಮಶಿನಗನ್ನುಗಳನ್ನಿಟ್ಟಿದ್ದರು. ಮುಂಬಯಿಗೆ ಮುಂದಾಗಿ ಸೋಲ್ಜರರ ದಂಡು ತಂದಿದ್ದರು. ಅವನ್ನು ಕೋಟೆ ಕಟ್ಟೆಗೆ ನಿಲ್ಲಿಸಿದ್ದರಲ್ಲದೆ, ಹಿಂದು ಕೆಲವನ್ನು ಕಾಂಗ್ರೆಸ ಕಚೇರಿಯ ಹತ್ತರವೇ ಇಟ್ಟಿದ್ದರು. ಪೇಟೆಯಲ್ಲಿ ತಾರ- ಟೆಲಿಫೋನ ಮುಂತಾದ ಮಹತ್ವದ ಸ್ಥಳಗಳು ಪೈನಿಕರ ಪಹರೆಯ ನಿಲುವಿಕೆಯಿಂದ ಭಯಾನಕವಾಗಿ ತೋರುತ್ತಿದ್ದವು. ಪೇಶಾವರದಲ್ಲಂತೂ ಊರ ಹೊರಗೆ ಜನರು ಹೋಗದಂತೆ ಬಂದೋಬಸ್ತು ಮಾಡಿ, ದಂಗೆಗಾರ ಮತ್ತು ರಾಜದ್ರೋಹಿಗಳೆನ್ನುವಂಥ ಎಲ್ಲ ಜನರನ್ನು ಹಿಡಿದರು. ಕರಾಚಿಯಲ್ಲಿ ಬಂದೋಬಸ್ತು ಮಾತ್ರವಲ್ಲ. ಬಂದೂಕು ಮತ್ತು ಕಾಡತೂಸು ಮಾರುವ ಅಂಗಡಿಗಳೊಳಗಿನ ಎಲ್ಲ ಬಂದೂಕು ಮತ್ತು ಕಾಡತೂಸುಗಳನ್ನು ಜಪ್ತ ಮಾಡಿ, ಅವನ್ನು ಸುರಕ್ಷಿತ ಸ್ಥಳಕ್ಕೆ ಒಯ್ದಿಟ್ಟರು. ಸರಕಾರದ ಬಂದೋಬಸ್ತಿನ ಇಂಥ ಹಲವು ಸಂಗತಿಗಳ ಆಯಾ ಪಟ್ಟಣದ ಪರಿಸ್ಥಿತಿಯ ಪ್ರಕಾರ ನಡೆದವು.

ತಾವು ಮಹಾತ್ಮರನ್ನು ಹಿಡಿಯುತ್ತಿಲ್ಲ, ಹಿಡಿಯಬೇಕೆಂದು ತೋರುವಂತೆ ಆ ದಿನ ಉಪಾಯ ಕೈಕೊಂಡಿದ್ದರು. ಏಕೆಂದರೆ ರಾತ್ರಿ ಹಿಡಿದರು. ಬೆಳಗಾದ ಕೂಡಲೆ ಅಲ್ಲಲ್ಲಿ ಪೋಲೀಸ ವ್ಯಕ್ತಿ ಕಂಡಿತು. ಇವರನ್ನು ಹೇಗೆ ಹಿಡಿಯುವರೆಂಬದನ್ನು ಮೊದಲಾಗಿ ಹಮ್ಮಿಕೊಟ್ಟಿದ್ದರು. ಅದರ ಸಕಾಶಿ ಮತ್ತು ಕಾರ್ಯಕ್ರಮವನ್ನು ಗೊತ್ತು ಮಾಡಿದ್ದರು. ಹಿಡಿಯುವ ಅಧಿಕಾರ, ಕಾರಭಾರ ಮತ್ತು ಮಂದಿ ಪತ್ರಗಾರಿಕೆಯು ಮೆ ಹಾಟಸನ ಸಾಹೇಬರಿಗಿತ್ತು. ಈ ಸಾಹೇಬರು ಇಂಗ್ರೇಜಿ ಪತ್ರಕಾರರ ಪ್ರತಿನಿಧಿಗಳಿಗೆ ಸಕಾಶಿ ಮತ್ತು ಕಾರ್ಯಕ್ರಮವನ್ನು ಮುಂದಾಗಿ ತೋರಿಸಿದ್ದರು. ಇಂಗ್ರೇಜಿ ಜನರಂತೆ ಹಿಂದೂ ಅಥವಾ ಮುಸಲಮಾನ ಪತ್ರಕಾರನಿಗೆ ಇವರ ಸುತರಾಮ ಸುದ್ದಿ ತಿಳಿಯಗೊಡಲಿಲ್ಲ. ಸರಕಾರವೆಂದು ಬೆಂಬಿಟ್ಟಿಗೊಡುವಂಥವರು ಇನ್ನಾದರೂ ಬುದ್ಧಿಗಲಿಯುವಂಥ ಮಾತು.

ಸರಕಾರದವರು ಮಹಾತ್ಮರನ್ನು ಹಿಡಿಯುವಂತೆ ಬಂದೋಬಸ್ತು ಮಾಡುವಾಗ ಜನರನ್ನು ಹಿಡಿಯುವಾಗ ೩೩ ಕೋಟಿ ಜನರ ಹೃದಯದ ಬಂದೋಬಸ್ತು ಮಾಡುವ ವಿಚಾರ ಮಾಡಲಿಲ್ಲ. ಮಹಾತ್ಮರನ್ನು ಹಿಡಿದರೆ- ಚಳವಳಿಯು ಸಾಯುವದೆಂದು ಇವರ ಗ್ರಹಿಕೆಯು. ಅದು ಪೂರಾ ಸುಳ್ಳಾಗುವಂತೆ ಅಂದೇ ಸಾಯಂಕಾಲದಲ್ಲಿ ಪ್ರತಿಯೊಂದು ಪಟ್ಟಣ ಹಳ್ಳಿಯಲ್ಲಾದ ಹರತಾಳ ಮತ್ತು ಮೆರವಣಿಗೆಗಳಿಂದ ಸ್ಪಷ್ಟವಾಗುತ್ತದೆ. ಹಿಂದುಸ್ಥಾನದ ಜನರಿಗೆ ಬೇಕಾಗುವಂಥ ಸ್ವರಾಜ್ಯ ದೊರೆಕ ಹೊರತು ಈ ಬೇಗೆಯು ಆರಲಾರದು. ಉಪ್ಪಿನ ಕಾಯದೆಭಂಗದಲ್ಲಿ ಸರಕಾರವು ಸೋಲುತ್ತದೆಂದು ಡಂಗುರ ಸಾರಿದಂತಾಗಿರುತ್ತದೆ. ದಿನಾಲು ಲಕ್ಷಾವಧಿ ಜನರು ಕಾಯದೆಭಂಗ ಮಾಡುತ್ತಾರೆ. ಅವರನ್ನು ಹಿಡಿಯದೆ, ಎಲ್ಲಿಯೋ ಒಬ್ಬಿಬ್ಬರನ್ನು ಹಿಡಿಯುವರು. ಮಳೆಗಾಲ ಪ್ರಾರಂಭವಾದನಂತರ ಉಪ್ಪು ಮಾಡುವದು ಹಿಂದೆ ಬಿದ್ದರೆ, ವಿಲಾಯತಿ ಒಟ್ಟೆಯ ಬಹಿಷ್ಕಾರವು ಪ್ರತಿಶ ಜನಾಂಗದ ಎದೆಯ ಮೇಲೆ ಎಳನೆಯ ತಸಿಯಂತೆ ಕೂಡ್ರುವದು. ೧೧ ನೆಯ ತಾರೀಖಿನ ದಿವಸ ಹಿಂದುಸ್ಥಾನದ ತುಂಬ ವಿಲಾಯತಿಯ ಬಟ್ಟೆಗಳ ಹೋಳಿಯಾಗತಕ್ಕದ್ದುಂಟು ಸಿದ್ಧತೆಯಾಗಿದೆ. ಈ ಹೋಳಿಯು ಕೂಡ ಆದರ ಸಾರಾಟವು ಕುಗ್ಗಿ, ವ್ಯಾಪಾರಿಗಳಿಂದ ಲಕ್ಷಾವಧಿ ಕೂಲಿಕಾರರ ಹಾಗು ಇವರ ಮೇಲೆ ಉಪಜೀವಿಸುವ ಲಕ್ಷಾವಧಿ ಜನರ ಹೊಟ್ಟೆಯ ಮೇಲೆ ಕಾಲಿಡುವದೊಂಬದನ್ನು ರಾಜ್ಯಕರ್ತರು ಮರೆಯದೆ, ಕಾಂಗ್ರೆಸದ ಕೂಡ ರಾಜಿಯಾಗುವ ಆಲೋಚನೆ ತೆಗೆಯಬೇಕು. ಮುವಾಳ ಫ್ರಾನ್ಸ ಅಥವಾ ಕ್ರಿಸ್ತನನ್ನು ನಂಬಿ ನಡೆದರೆ- ಮುಂದಾಗುವದು ತ್ಯಾಗ ಹತ್ತಿರ ಕದ್ದಿಯು ತನ್ನ ಪ್ರಾಣವನ್ನೇ ಹೋಗುವದೆಂಬ ಆಶೆ ಮಾಡಿದಂತಾಗುತ್ತದೆ.

ಕದರಮಂಡಲಗಿ ಗೌಡನ ಗುಂಡಾಟ

—()—( )··()—

ರಾಣೆಬೆನ್ನೂರ ತಾಲೂಕ ಕದರಮಂಡಲಗಿ ಗ್ರಾಮವು ಅಲ್ಲಿಯ ಪ್ರಾಣದೇವರ ಜಾಗೃತ ಸ್ಥಾನದ ದೆಸೆಯಿಂದ ಪ್ರಸಿದ್ಧವಿರುತ್ತದೆ. ಧಾರವಾಡದಿಂದ ಸ್ವದೇಶ ಪ್ರಚಾರಕ್ಕಾಗಿ ಹೊರಟಂಥ ಏಕ್ಕ ಮಹಾಮಂಡಲವು ಸೇನೆಯು ತಂಗಿದ ದಿವಸ ಅಲ್ಲಿಗೆ ಹೋದರು. ಇವರು ಕಾರ್ಯಕ್ರಮದ ಪ್ರಕಾರ ಪ್ರಾತಃಕಾಲದಲ್ಲಿ ನಗರ ಸಂಕೀರ್ತನೆ ಮಾಡಿ, ರಾಷ್ಟ್ರಧ್ವಜವಂದನೆ ಮಾಡಿದರು. ಈ ಸಂಗತಿಯು ಅಲ್ಲಿಯ ಗೌಡರ ತಲೆ ತಿರುಗಿಸಿತು. ಒಂದು ವಾರದಿ ಇವರು ಹಿಂದಕ್ಕೆ ಆಮಂತ ಸಭೆ ಸ್ಥಾಪಿಸಿದವರಿರಬಹುದು. ಸಾಯಂಕಾಲದಲ್ಲಿ ದೇವಾಲಯದಲ್ಲಿ ಸಭೆಯಾಯಿತು. ಐನೂರು ಜನರು ಸೇರಿದರು. ಗೌಡರು ತಾವು ಊರ ಅಧಿಕಾರಿ ಎಂದು ಸ್ವಯಂಸೇವಕರಿಗೆ ತಿಳಿಯುವಂತೆ ಆಜ್ಞಾಪಿಸಲುದ್ಯುಕ್ತರಾದರು. ಇಲ್ಲಿ ನೀವು ಸಭೆ ಮಾಡುತ್ತೀರಿ. ಊರೊಳಗೆ ಕೆಲವು ತುಡುಗರಿರುವರೆ- ಯಾರು ಜವಾಬದಾರರೆಂದು ನೋರಿ ಕೆಂಜಗೆ ಮಾಡಿ ಉರಿಯುತ್ತ ಗದ್ದರಿಸಿದರು. ಗೌಡರ ಗದ್ದರಿಸುವಿಕೆಯನ್ನು ಯಾರೂ ಲಕ್ಷಿಸಲಿಲ್ಲ. ಸಭೆಯು ಮುಗಿದ ಬಳಿಕ, ಗೌಡರು ಅಧಿಕಾರದ ಅವತಾರಧಾರಣ ಮಾಡಿದರು. ಪೋಲೀಸ ಶಿಪಾಯಿ ಮತ್ತು ಓಲೇಕಾರರನ್ನು ಕರಕೊಂಡು ಬಂದು ಸ್ವಯಂಸೇವಕರಿಗೆ ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆಂದು ಹೇಳಿದರು. ಇವರು ಮಾರಿಯು ಜೋರಿನಲ್ಲಿ- ಉಪ್ಪಿನ ಮುದ್ದೇ ಮಾಲು ಸಹಿತವಾಗಿ ಹಿಡಿದಿದ್ದೇವೆ. ಫೌಜದಾರರು ಬರುವತನಕ ಬಿಡುವದಿಲ್ಲೆಂದರು. ಸಾಯಂಕಾಲ, ಸ್ವಯಂಸೇವಕರಿಗೆ ಉಪಹಾರ ಮಾಡಿಸುತ್ತೇವೆಂದು ಊರವರು ಗೌಡರಿಗೆ ಹೇಳಿದರೂ, ಗೌಡರು ಅಷ್ಟು ಸಹ ದಯತೋರಿಸಲಿಲ್ಲ. ರಾತ್ರಿ ಹತ್ತು ಹೊಡೆಯಿತು. ಫೌಜದಾರರನ್ನೇ ಕಾಣಲು ಸ್ವಯಂಸೇವಕರೂ, ಗೌಡರೂ ಬ್ಯಾಡಗಿಗೆ

ದಾರೀ ಹಿಡಿದರು. ಗೌಡರು ಕಾವಲಿಗಾಗಿ ಬಿಚ್ಚುಗತ್ತಿಯ ಪೋಲೀಸರನ್ನು, ಆಳು ಜನ ಹೊಲೆಯರನ್ನು ಸಂಗಡ ಕರೆಕೊಂಡು ನಡೆದರು. ದಾರಿಯಲ್ಲಿ ಅರ್ಧ ಸಬ್ ಇನ್ಸಪೇಕ್ಟರರು ಎದುರಾಗಿ ಒಂದು, ವಾರಂಟು ಇಲ್ಲದೆ ಇವರನ್ನೇಕೆ ಹಿಡಿದಿರೆಂದು ಗೌಡರಿಗೆ ಸಿಟ್ಟು ಮಾಡಿ, ಬಿಡಿಸಿದರು. ಗೌಡರ ಮೂರ್ಖತನದಿಂದ ಅಲ್ಲಿಯ ಚಳವಳಿಗೆ ವಿಶೇಷ ಸ್ವರೂಪ ಒಂದಿದ್ದು, ೩೦ ೪೦ ಜನರು ಸ್ವಯಂಸೇವಕರಾಗಿದ್ದಾರೆ. ಮತ್ತು ಆ ಊರ ಸುತ್ತಮುತ್ತಲು ಲೋಕ ಜಾಗ್ರತಿ ಉಂಟಾಗಿರುತ್ತದೆ. ಈ ವಿಚಾರ ಹೇಗಿದ್ದರೂ, ತನಗೆ ಅಧಿಕಾರವಿಲ್ಲದೆ ಗೌಡನು ಸಾತ್ವಿಕ ಜನರನ್ನು ಅನ್ಯಾಯದಿಂದ ಪ್ರತಿಬಂಧದಲ್ಲಿಟ್ಟದ್ದಕ್ಕೆ ಕಲೆಕ್ಟರ ಸಾಹೇಬರು ಆತನಿಗಾವ ಶಿಕ್ಷೆ ಮಾಡುವರು, ಮತ್ತು ತಮ್ಮಲ್ಲಿ ನ್ಯಾಯ ಬುದ್ಧಿಯು ಜಾಗ್ರತವಾಗಿರುತ್ತದೆಂಬುದನ್ನು ಕೃತಿಯಿಂದ ತೋರಿಸುವರೆಂದು ಆಶಿಸುತ್ತೇವೆ.

ಭಾರತೀಯ ಮರಾಠರ [illegible] ಸಭೆ.

ಬ್ರಾಹ್ಮಣೇತರರೊಂದಿಗೆ [illegible] ಬಿಟ್ಟರು.

—— (·) ——

ಬ್ರಾಹ್ಮಣೇತರ [illegible]ವರು ಸ್ವಾರ್ಥಸಾಧುಗಳು !

—((೧))—

ಮೊನ್ನಿನ ದಿವಸ ಈ ಊರಲ್ಲಿರುವ ಮರಾಟ ಜಾತಿಯವರು ಒಂದು ಜಾಹೀರ ಸಭೆಯನ್ನು ಕೂಡಿಸಿ, ವರ್ಣವರ್ಗ ಪರಿಸ್ಥಿತಿಯನ್ನು ಕುರಿತು ಮಹತ್ವದ ಠರಾವ ಪಾಸ ಮಾಡಿದ್ದಾರೆ. ಅದರ ಮುಖ್ಯ ಸಂಗತಿಗಳು—

೧ ಸರಕಾರದಲ್ಲಿದ್ದ ನಂಬಿಗೆ ಮತ್ತು ಭರವಸೆಯು ಲಯವಾದವು. ಸರಕಾರವು ತನ್ನ ಹೃದಯ ಬದಲು ಮಾಡುವತನಕ ಸಮಾಜದವರು ಅಸಹಕಾರದ ದೀಕ್ಷೆ ಧಾರಣ ಮಾಡಬೇಕು. ಮತ್ತು ಖಾದಿಯ ಧಾರಣ ಮಾಡಬೇಕು. ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕಬೇಕು.

೨ ಸರಕಾರವು ಪ್ರಜಾ ಸಮಸ್ತರ ಇಚ್ಛೆಯನ್ನು ತೃಪ್ತ ಮಾಡದಿದ್ದರೆ ಮಂಟಿಲ ಕಾಂಗ್ರೆಸದ ಆಜ್ಞೆಗಳನ್ನು ಮನ್ನಿಸುವದಲ್ಲದೆ, ಸಂಪೂರ್ಣ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ಜಾಹೀರ ಮಾಡಿ ಕಾಯದೆಭಂಗ ಮಾಡತಕ್ಕದ್ದು.

೩ ಸರಕಾರದವರು ನಡಿಸಿದ ದಬ್ಬಾಳಿಕೆ ಮತ್ತು ಹಿಂಸೆಗಳು ಕಾಡು ಮತ್ತು ಅನಾಯಕತನದ್ದಾಗಿರುತ್ತವೆ.

೪ ಸರಕಾರವು ಅನ್ಯಾಯ ಮತ್ತು ಅನೀತಿಯದಾದ ಉಪ್ಪಿನ ಕಾಯದೆಯನ್ನು ರದ್ದು ಮಾಡಬೇಕು.

೫ ಮರಾಟರು ಕುಡಿಯುವದನ್ನು ಬಿಟ್ಟು, ಕುಡಿಯುವದರ ವಿರುದ್ಧ ನಡೆದ ಚಳವಳಿಯಲ್ಲಿ ಸೇರಬೇಕು.

೬ ಮರಾಟರು ಯಾವ ರೀತಿಯಿಂದಲೂ ಸರಕಾರಕ್ಕೆ ಸಹಾಯ ಮಾಡತಕ್ಕದ್ದಲ್ಲ. ಮತ್ತು ಈಗಿನ ಚಳವಳಿಗೆ ಯಾವ ಬಗೆಯಿಂದಲೂ ವಿರೋಧ ಬೆಳೆಯಿಸತಕ್ಕದ್ದಲ್ಲ.

೭ ಕರ್ನಾಟಕದ ಮರಾಟರು ತಮಗೆ ಬ್ರಾಹ್ಮಣೇತರರೆಂದು ಯಾವಾಗಲು ಹೇಳಿಕೊಳ್ಳಲಿಕ್ಕಾಗದು.

೮ ಬೆಳಗಾವಿಯಲ್ಲಿ ಕೂಡುವ ಬ್ರಾಹ್ಮಣೇತರ ಸಭೆಯವರು ಬ್ರಾಹ್ಮಣೇತರರೆಂಬ ಹೆಸರು ತೆಗೆದು ಹಾಕಿ, ಎಲ್ಲ ಕುಲಗಳ ಸೇರ್ಪಡೆಯಾಗುವಂಥ ಯೋಗ್ಯ ಹೆಸರಿಟ್ಟುಕೊಳ್ಳಬೇಕು ಮತ್ತು ಲೋಕ[illegible] ಕಾರ್ಯ ಕರ್ತವ್ಯ [illegible]ಬೇಕು.

೯ ಹಿಂದುಳಿದ ಜನಾಂಗಗಳ ಮತ್ತು ರೈತರ ಹಿತ[illegible] ಹೇಳಿಕೊಂಡು ಸರಕಾರದ ಗುಲಾಮರಾಗಿ ತಮ್ಮ ಸ್ವಾರ್ಥಸಾಧಿಸಿಕೊಳ್ಳುತ್ತಿರುವ [illegible] ಮತ್ತು ಮರಾಠಿ ಮಂದಿ [illegible] ರೀತಿಯನ್ನು ಮರಾಟರು ತಿರಸ್ಕರಿಸುತ್ತಾರೆ.

೧೦ ಈ ಠರಾವುಗಳನ್ನು [illegible] ಮರಾಟ [illegible] ವತಿಯಿಂದ ಮತ್ತು ಮರಾಟರಲ್ಲಿ ಜಾಗ್ರತಿ ಉಂಟುಮಾಡಲು ಕರ್ನಾಟಕ ಮರಾಠಾ [illegible] ಸಂಘವೆಂಬ ಸಂಸ್ಥೆಯನ್ನು ಸ್ಥಾಪಿಸುತ್ತಾರೆ.

ರಾವಸಾಹೇಬ ಹಳಕಟ್ಟಿಯವರು ಬ್ರಾಹ್ಮಣೇತರರಿಗೆ ಕೊಟ್ಟ ಸರ್ಟಿಫಿಕೇಟ.

—— (೦) ——

ರಾವಸಾಹೇಬ ಹಳಕಟ್ಟಿಯವರು ತಮ್ಮ ನವಕರ್ನಾಟಕದಲ್ಲಿ ಕರ್ನಾಟಕ ಪ್ರಾಂತದ ಬ್ರಾಹ್ಮಣೇತರರಿಗೆ ಮುಂದೆ ಕೊಟ್ಟಂತೆ ಸರ್ಟಿಫಿಕೇಟು ಕೊಟ್ಟಿರುತ್ತಾರೆ—

ಬ್ರಾಹ್ಮಣೇತರ ಪಕ್ಷದ ಮುಖ್ಯ ಉದ್ದೇಶಗಳೆಂದರೆ ಸಮಾಜ ಸಮಾಜಗಳಲ್ಲಿರುವ ವ್ಯತ್ಯಾಸಗಳನ್ನು ದೂರ ಮಾಡುವದು, ಅವುಗಳಲ್ಲಿ ಸಮಾನತ್ವವನ್ನು ಹಬ್ಬಿಸುವದು ಮತ್ತು ಸಾಮಾಜಿಕ, ರಾಜಕೀಯ, ಮತ್ತು ಧಾರ್ಮಿಕ ಅನ್ಯಾಯಗಳನ್ನು ಪರಿಹರಿಸುವದು ಇವುಗಳೇ ಇರುತ್ತವೆ. ಆದರೆ ಈ ಬಗೆಯ ಕಾರ್ಯಗಳನ್ನು ಈ ೧೦ ವರ್ಷಗಳಲ್ಲಿ ಬ್ರಾಹ್ಮಣೇತರ ಪುಢಾರಿಗಳು ಯಾವವನ್ನೂ ಜರುಗಿಸಿಲ್ಲ, ಅವರು ಕೇವಲ ಪರಸ್ಪರ ಕಲಹಗಳಲ್ಲಿ ತೊಡಕಿಕೊಂಡಿರುತ್ತಾರೆ. ಹಾಗೆ ಅವರು ಮಾಡದಂಥ ಕಾರ್ಯಗಳನ್ನು ಮ. ಗಾಂಧಿಯವರು ತಮ್ಮ ಕೃತಿಯಿಂದಲೇ ಮಾಡಿತೋರಿಸಿದ್ದಾರೆ. ಅವರ ಪ್ರಯತ್ನಗಳ ಮೂಲಕ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಯ ಕಾರ್ಯವು ಇಡೀ ಹಿಂದುಸ್ಥಾನವನ್ನೇ ಆಕ್ರಮಿಸುತ್ತಿರುತ್ತದೆ. ಈ ಕಾರ್ಯಕ್ಕೆ ಪರಿಪೋಷಕವಾಗಿ ಬ್ರಾಹ್ಮಣೇತರರು ವರ್ತಿಸುವದು ಅವರ ಈಗಿನ ಕರ್ತವ್ಯವಾಗಿರುತ್ತದೆ.

ಬಾಂಡೋಲಿಯವರ ಠರಾವು.

—— (೦) ——

ಪಟ್ಟಿ ಕೊಡಬಾರದು; ಗ್ರಾಮಸ್ಥರು ರಾಜೀನಾಮೆ ಕೊಡಬೇಕು.

— (೧) —

ಮಹಾತ್ಮರನ್ನು ಬಂಧಮುಕ್ತ ಮಾಡುವತನಕ ಅಥವಾ ಅಖಿಲ [illegible] ಹೇಳುವತನಕ [illegible] ಪಟ್ಟಿ ಕೊಡಬಾರದು ಮತ್ತು ರಾಜೀನಾಮೆ ಕೊಡದ ಗ್ರಾಮಸ್ಥರು ರಾಜೀನಾಮೆ ಕೊಡಬೇಕು. [illegible] ಬಾಂಡೋಲಿ ತಾಲೂಕಿನವರು ಠರಾವು ಮಾಡಿದ್ದಾರೆ.

[illegible]

ಅಹಮದಾಬಾದಿನ ಶ್ರೀ [illegible] ಮತ್ತು ಇನ್ನು ಮೂವರು [illegible] ರಾಜೀನಾಮೆ ಕೊಟ್ಟರು.

ಸೊಲ್ಲಾಪೂರದಲ್ಲಿ ಜಪ್ಪು ಮಾಡಿದ ಮನೆಗಳ ಕೋರ್ಟಿಗೆ ಬೆಂಕಿ ಹಚ್ಚಿದ್ದು, ಅಲ್ಲಿ ನೇಮಿಸಲ್ಪಟ್ಟ ಮಿ. ಪುಲಕೋಟಿಯವರು ಅಲ್ಲಿಗೆ ಹೋಗಿರುತ್ತಾರೆಂದು ವರ್ತಮಾನವುಂಟು.

ಸರದಾರ ಪಟೇಲರನ್ನು ಬೆಳಗಾವಿಯ ಹಿಂಡಲಗಿಯ ಕುರಂಗಕ್ಕೆ ಕಳಿಸಿರುತ್ತಾರೆಂದು ವರ್ತಮಾನವುಂಟು.

ಶ್ರೀ. ನರಿಮನರು ಬಂಧಮುಕ್ತರಾದರು. ಕೂಡಲೆ ಕಾಂಗ್ರೆಸ ಸೇರಿದರು. ಬೆಳಗಾವಿಯ ಶ್ರೀ ಜೋಶಿ ನಾರಾಯಣಚಾರ್ಯರ ವಿಚಾರವೇನು?

ಬ್ರಹ್ಮದೇಶದಲ್ಲಾದ ಭೂಕಂಪದಿಂದ ನೂರಾರು-ಹತ್ತಾರು ಸಾವಿರ ಜನರು ನಿರಾಶ್ರಿತರಾದರು. ಒಂದು ಪಟ್ಟಣವೇ ಮುಳುಗಿ ಹೋಯಿತು. ನದಿಗಳು ತುಂಬಿ ಹರಿದವು. ತೆಗ್ಗು ಗುಡ್ಡವಾದವು. ಗುಡ್ಡ ತೆಗ್ಗಾದವು.

ದ ಹಿಸ್ಸೇದಾರರಾಗಿದ್ದರು. ಸಭೆಯು ಕೊಂಚ ಎತ್ತ ನೋಡಿದತ್ತ ಗಾಂಧೀ ಟೊಪ್ಪಿಗೆಗಳೇ ಕಾಣಿಸುತ್ತಿದ್ದವು. ಇದೇ ದೃಶ್ಯವು ಎರಡು ತಿಂಗಳು ಕಂಡು ಬರುವದಾದರೆ ವಿಲಾಯತಿಯ ಅರಿವೆಯ ವ್ಯಾಪಾರದ ದಿವಾಳಿ ಹೊರಡುವದೆಂದು ವ್ಯಾಖ್ಯಾತರು ಉದ್ಗಾರ ತೆಗೆದರು.

ಪರದೇಶಿ ವ್ಯಾಪಾರವು ಕುಸ್ತರಿಸಹತ್ತಿತು.

—(೦)—

ಹಿಂದುಸ್ಥಾನದ ಬಹಿಷ್ಕಾರವು ಪರದೇಶೀ ವ್ಯಾಪಾರಗಳಿಗೆ ಅಗಲೇ ಕಡಕ ಕೂಡಹತ್ತಿದೆ. ಲಂಕೇಶಾಯರದ ಬುಡವೇ ಅದರುವದು ಆಶ್ಚರ್ಯವಲ್ಲ. ಜಪಾನದ ರೇಶ್ಮಿಯ ಅರಿವೆಯ ಖರಿದಿಗಾಗಿ ಬರೆದ ಪತ್ರಗಳನ್ನು ಹಿಂದೂ ವರ್ತಕರು ರದ್ದು ಮಾಡಿದ್ದರಿಂದ ಯೋಕೋಹೋಮಾದಲ್ಲಿರುವ ಗಿರಣಿಯವರು ಕಳವಳಿಸಹತ್ತಿದ್ದಾರೆ. ಫ್ರಾನ್ಸ ಮತ್ತು ಜರ್ಮನಿಯ ಗಿರಣಿಯವರೂ ಮುಂಬೈಗೆ ಎಷ್ಟು ಹಚ್ಚುವ ಹೊತ್ತು ಬಂದಿದೆ. ಮುಂಬಯಿಯಲ್ಲಿ ಆಜಿನ ವ್ಯಾಪಾರ ಮಾಡತಕ್ಕವರೆಲ್ಲ ತೂ ಮುಸಲಮಾನರಾಗಿದ್ದಾರೆ. ಮಹಾತ್ಮರನ್ನು ಹಿಡಿದರೆಂಬ ತ್ವೇಷಕ್ಕಾಗಿ ಇವರು ಇಂಗ್ಲಂಡದಿಂದ ಕಾಜಿನ ಒಂದೂ ಪದಾರ್ಥ ತರಿಸಬಾರದೆಂದು ಕಟ್ಟು ಮಾಡಿದ್ದಾರೆ.

ವಿಜಾಪೂರದಲ್ಲಿ ವಿ. ಅಂಗಡಿಯವರ ಮೇಲೆ ಚಾರ್ಜ ಇಟ್ಟಿರುತ್ತಾರೆ.

ಜಾಹೀರ ನೋಟೀಸು

ಯಾವತ್ತು ಒಕ್ಕಲತನದ ಅಭಿಲಾಷೆಯುಳ್ಳವರಿಗೆ ತಿಳಿಸುವದೇನಂದರೆ—

ಶಿರಹಟ್ಟಿಯಲ್ಲಿ ಶ್ರೀ ಫಕೀರಸ್ವಾಮಿಯ ಜಾತ್ರೆಯು ಪ್ರತಿವರುಷದ ಪ್ರಕಾರ ಈ ವರುಷ ವೈಶಾಖ ಶ. ೫ ಗುರುವಾರ ತಾ|| ೧೫-೫-೧೯೩೦ನೇ ಅಸ್ವಸೋಮವಾರದಿಂದ ಸುರುವು ಆಗತಕ್ಕದ್ದಿದೆ. ಸದರೀ ಜಾತ್ರೆಯಲ್ಲಿ ಬಹು ವಿಧವಾದ ದನಗಳು ದೂರ ದೂರ ದೇಶಗಳಿಂದ ಬರತಕ್ಕವು ಇದ್ದು ಅವುಗಳಲ್ಲಿ ಉತ್ತಮವಾದ ದನಗಳಿಗೆ ಬಕ್ಷೀಸು ಮತ್ತು ಸರ್ಟಿಫಿಕೇಟು ವಗೈರೆ ಉತ್ತೇಜನಾರ್ಥವಾಗಿ ಕೊಡುವದು ಇಲ್ಲಿಯ ಪ್ರದರ್ಶನ ಕಮೀಟಿಯಿಂದ ಠರಾಯಿಸಿರುತ್ತದೆ. ಇದರ ಹೊರತಾಗಿ ಅನುಕೂಲವಾದಲ್ಲಿ ದನಗಳ ಹುಟ್ಟುವಳಿಯ ಮಾಹಿತಿ ಮುಕ್ಕ ವಕ್ಕಲತನದ ಯಾವತ್ತು ಸಾಮಾನ ವ ಬೀಜಗಳ ಬಗ್ಗೆ ಉಪಯುಕ್ತ ಮಾಹಿತಿಯು ಕೇಶಕೀ ಮಾತೆಯು ತಜ್ಞಜನರಿಂದ ಕೊಡಲ್ಪಡುವದು. ಕಾರಣ ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಲಾರರೆಂದು ವಿನಂತಿ.

ಪ್ರದರ್ಶನ ಕಮಿಟಿಯ ಪರವಾಗಿ

ಶಿರಹಟ್ಟಿ — ಅಧ್ಯಕ್ಷ,

ಪ್ರ. ಕ. ಕಾರಭಾರಿ — ಪ್ರದರ್ಶನ ಕಮಿಟಿ

ಲೋಕಲ ಬೋರ್ಡ — ಶಿರಹಟ್ಟಿ.

ತಾ|| ೫-೫-೧೯೩೦

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೈಕ್ಕರ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮುನ್ಸಿಬ್ಯಾಂಕ ಧಾರವಾಡ

ಸೂಚನೆ:— ನಿವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡುತ್ತಿರುವದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯ್ವ್ಹರ ವಿದ್ಯಾರ್ಥಿಯಾಗಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳು ಸ್ಥಳಸೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ಪಿ. ಎಸ. ಇಟಗಿ.

ಮುನಸಫಕೋರ್ಟ ಸಮೀಪ, ಧಾರವಾಡ

ನೋಟೀಸಿನ ದರಗಳು

—:(೦):—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ--

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ — **ವಿಜಯ** — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೧೧ ನೇ ಮೇ ೧೯೩೦ (ಸಂಚಿಕೆ ೧೨

(Incorporated in S. S.) (Registered in England)

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara

N. T. Khona P. B. 34. *Hubli.*

ಕನ್ನಡದಲ್ಲಿ (ಜಾಹೀರಾತು)

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು	ಸ್ಥಿರವಾದ ಅಸಮರ್ಥತೆಯ ಲಕ್ಷಣಯುಕ್ತ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯು ಯೋಜನೆ	ಖಂಡಿತವಾದ ಬೋನಸಗಳ ಯೋಜನೆಗಳು
ಉದಾರವಾದ ಕರಾರುಗಳ ಮೇಲೆ	ಬಂಡವಲವು	ಉದಾರವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ		ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ:-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೨ ಇಸವಿಯ ಕ್ರೆಡಿಟ ಸೊಸಾಯಿಟಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಒಂದು ಲಕ್ಷದ ಮೇಲಿರುವುದು. ಹಣ ಕಳಿಸುವದು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠೇವಿಯು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸವಿಸ್ತರವಾಗಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಸೊಲ್ಲಾಪೂರದಲ್ಲಿ ಭಯಂಕರ ಪುಂಡಾಟಿಕೆ.

ಡಿಸ್ಟ್ರಿಕ್ಟ ಕೋರ್ಟು ಸುಟ್ಟು ಬೂದಿಯಾಯಿತು.

೧೦ ಜನರು ಸತ್ತರು. ೪೦ ಜನರು ಗಾಯವಾದರು.

ದಂಗೆಗಾರರು ಇಬ್ಬರು ಪೋಲೀಸರನ್ನು ಸುಟ್ಟು ಕೊಂದರು.

ಗುರುವಾರ ಪ್ರಾತಃಕಾಲದಲ್ಲಿ ಮುಂಬಯಿಯಲ್ಲಿ ಬಂಧಮುಕ್ತರಾದಂಥ ಶ್ರೀ. ನರಿಮನ್ನರ ಭಾವ ಪಟವನ್ನು ಕುದುರೆಯ ಮೇಲೆ ಕೂಡ್ರಿಸಿ, ಮೆರವಣಿಗೆ ತೆಗೆದರು. ಮೆರವಣಿಗೆಯಲ್ಲಿ ಐವತ್ತು ಸಾವಿರ ಜನವಿತ್ತು. ಮೆರವಣಿಗೆಯ ಕೊನೆಯಲ್ಲಿ ಶೇಂದಿಯ ಗಿಡಗಳನ್ನು ಕಡಿಯಬೇಕೆಂಬ ವಿಚಾರ ಹೊರಟು, ನೂರು ಜನ ಸ್ವಯಂಸೇವಕರು ತುಳಜಾಪೂರ ಅಗಸಿಗೆ ಬಂದು ಅಲ್ಲಿರುವ ಗಿಡಗಳನ್ನು ಕಡಿಯುತ್ತಿದ್ದರು. ಈ ವರ್ತಮಾನ ಕೇಳಿ, ಪೋಲೀಸ ಮತ್ತು ಕಲೆಕ್ಟರಸಾಹೇಬರು ಪೋಲೀಸ ಸಿಪಾಯರ ಜಮಾವದಿಂದ ಬಂದು, ಏಳೆಂಟು ಜನ ಸ್ವಯಂಸೇವಕರನ್ನು ಹಿಡಿದರು. ಈ ಸುದ್ದಿಯು ಊರೊಳಗೆ ಕಾಡ್ಗಿಚ್ಚಿನಂತೆ ಹಬ್ಬಿತು. ಹತ್ತೆಂಟು ಸಾವಿರ ಜನರು ಅತ್ತ ಹೋದರು. ಸಮುದ್ರದಂತೆ ಜನ ನಿಂತಿತು. ಪೋಲೀಸರು ಸ್ವಯಂಸೇವಕರನ್ನು ಬಿಟ್ಟಿದ್ದರೆ ಮುಂದೆ ಗೊಂದಲವೇ ಏಳುತ್ತಿದ್ದಿಲ್ಲ. ಇಂಥ ಸುವಿಚಾರ ಹುಟ್ಟಲಿಲ್ಲ. ಅಧಿಕಾರದ ದರ್ಪ ತೋರಿಸಲಿಕ್ಕೆ ಹೋದರು. ಜಗತ್ತು ತ್ರಿಗುಣಾತ್ಮಕವಾಗಿರುತ್ತದೆ. ೧೫-೨೦ ಸಾವಿರ ಜನರಲ್ಲಿ ಸೇರಿದಂಥ ತಮೋಗುಣದವರು ಪೋಲೀಸರ ಮೇಲೆ ಕಲ್ಲೊಗೆದರು. ಆಗ ಪೋಲೀಸರು ಇವರನ್ನು ಚದರಿಸಲು ಆಕಾಶದಲ್ಲಿ ಗುಂಡು ಹಾರಿಸಿದರು, ಇದಕ್ಕೆ ಜನರು ಹೆದರಲಿಲ್ಲ. ಜನರ ಮೇಲೆಯೇ ಗುಂಡು ಹಾಕಲು- ಅವರು ದಾರಿ ತೋರಿದತ್ತ ಹಿಂದಕ್ಕೆ ಸರಿದರು. ಆದರೆ ಇದು ಕಡೆತನಕ ಆಗಲಿಲ್ಲ. ಪುನಃ ಜನರ ಪ್ರಚಂಡ ಗುಂಪು ಸೇರಿತು. ಊರ ಪ್ರಮುಖರು ಬಂದು ಜುಂಬರಿಗೆ ಬೇಕಾದಷ್ಟು ಉಪದೇಶ ಮಾಡಿದರೂ, ವ್ಯರ್ಥವಾಯಿತು. ಪೋಲೀಸರು ಪುನಃ ಗೋಳಿಬಾರ ಮಾಡಿದರು. ಆದರೆ ತಮಗಿಂತ ಜನರ ಸಂಖ್ಯೆಯು ದೊಡ್ಡದಾಗಿದ್ದದ್ದನ್ನು ಕಂಡು, ಹೆಡ್ಡಕ್ವಾರ್ಟರಕ್ಕೆ ಹೋಗಿ, ಅಲ್ಲಿ ಎಲ್ಲರೂ ಕೂಡಿಕೊಂಡು ಬಂದು ಗುಂಡು ಹಾಕಿದರು. ಅಷ್ಟರಲ್ಲಿ ಮುಖ್ಯ ಮುಖ್ಯ ಪುಂಡಗಾರರು ಊರ ದಾರಿ ಹಿಡಿದರು. ಜಜ್ಜಕೋರ್ಟಿಗೆ ಬಂದು, ಅದಕ್ಕೆ ಬೆಂಕಿ ಹಚ್ಚಿ, ಪೂರಾ ಸುಟ್ಟುಬಿಟ್ಟರು. ಎಲ್ಲಾ ರಿಕಾರ್ಡು ಬೂದಿಯಾಯಿತು. ಇದೇ ಪ್ರಕಾರ ಬೇರೆ ಕಚೇರಿಗಳೂ ಪೋಲೀಸ ಚಾಕಿಗಳೂ ಸುಟ್ಟವೆ. ಇವನ್ನು ಬೆಂಕಿಯ ಬಾಯಿಗೆ ಕೊಟ್ಟ ನಂತರ ಊರೊಳಗೆ ಬಂದು ಚಾವಡಿ ಮತ್ತು ಬೇರೆ ಪೋಲೀಸ ಸ್ಟೇಶನಗಳಲ್ಲಿದ್ದ ಎಲ್ಲ ಕಾಗದಪತ್ರಗಳನ್ನು ಹೊರಗೆ ತಂದು, ಅಲ್ಲಿ ಅವುಗಳ ಹೋಳೀ ಮಾಡಿದರು. ಈ ಗೊಂದಲದಲ್ಲಿ ಇಬ್ಬರು ಸಿಪಾಯರು ಸಿಕ್ಕರು. ಇವರನ್ನು ಹಿಡಿದು, ಕಲ್ಲಿನ್ನಿಂದ ಹೊಡೆದು, ಬೆಂಕಿ ಹಚ್ಚಿ ಸುಟ್ಟು ಹಾಕಿದರು. ಈ ಪ್ರಕಾರ ಊರ ತುಂಬ ಹಾಹಾಕಾರವೆದ್ದು, ತಮಗೆ ದಂಗೆಯು ಆಟೋಪಿಸುವದಿಲ್ಲೆಂಬದನ್ನು ಕಂಡು ಅಹಮ್ಮದನಗರ ಮತ್ತು ಪುಣೆಗೆ ತಾರು ಮಾಡಿ, ದಂಡು ತರಿಸಿದರು. ಅಹಮ್ಮದನಗರದಿಂದ ಮೊದಲು ಬಂದ ದಂಡು, ಕವಚದ ಬಂಡಿಗಳ ಸಹಾಯದಿಂದ ಊರೊಳಗೆ ಬಂದೋಬಸ್ತಿಗೆ ಪ್ರಾರಂಭ ಮಾಡಿತು. ಪುಣೆಯ ದಂಡು ಬಂದು, ಇದಕ್ಕೆ ಸಹಾಯ ಮಾಡ ಹತ್ತಿತು. ಆ ದಂಡು ಬಂದರೂ ದಂಗೆಯು ಮುಂದುವರಿಸಿ ಭಯಂಕರ ಸ್ವರೂಪ ಧಾರಣ ಮಾಡಬಹುದೆಂದು ಅಲ್ಲಿಯ ಯುರೋಪಿಯನ್ನರು ಅಂಜಿಕೊಂಡು ತಮ್ಮ ಹೆಂಗಸರನ್ನೂ ಹುಡುಗರನ್ನೂ ಸುರಕ್ಷಿತೆಗಾಗಿ ಸ್ಪೇಶಲ್ ಟ್ರೇನಿನಿಂದ ಪುಣೆಗೆ ಕಳಿಸಿದರು. ಹೀಗೆ ಎರಡು ಟ್ರೇನುಗಳು ಬಿಟ್ಟವು. ಮೊದಲಿನದರಲ್ಲಿ ಇನ್ನೂರು ಜನರಿದ್ದರು. ಎರಡನೆಯದೂ ತುಂಬಿ ಹೋಯಿತು. ಇದರಲ್ಲಿ ಗಿರಣಿಯ ಕಾಮದಾರರ ಹೆಂಡರು ಮಕ್ಕಳೂ ಇದ್ದಾರೆ. ದಂಗೆಯಲ್ಲಿ ಸುಡಿಸಿಕೊಂಡ ಇಬ್ಬರು ಸಿಪಾಯರಲ್ಲದೆ, ಮೂವರು ಪುರಸೋನ್ನಾರು ಗಾಯವಾಗಿದ್ದಾರೆ. ಐದಾರು ಜನರು ಭಯಂಕರ ಗಾಯವಾಗಿದ್ದಾರೆ. ಜನರ ಗುಂಪಿನಲ್ಲಿ ಹತ್ತು ಜನರು ಸತ್ತಿದ್ದು, ೪೦ ಜನರು ಗಾಯವಾಗಿದ್ದಾರೆ. ಈ ಘೋರ ಪ್ರಸಂಗದ ದೆಸೆಯಿಂದ ಊರ ತುಂಬ ಹಂತಾಕವಾಗಿದ್ದು, ಗಿರಣಿಗಳೂ ಬಂದಾಗಿರುತ್ತವೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಜಾಹೀರನಾಮೆಯನ್ನು ಹಚ್ಚಿ, ಐವರಿಂತ ಹೆಚ್ಚು ಜನರು ಒಂದೆಡೆಯಲ್ಲಿ ಸೇರಬಾರದೆಂದು ಹುಕುಮು ಮಾಡಿದ್ದಾರೆ.

ಶ್ರೀ ಗಂಗಾಧರರಾಯರಿಗೆ ಪುನಃ ಶಿಕ್ಷೆ.

ರತ್ನಾಗಿರಿಯಲ್ಲಿ ಶ್ರೀ. ದೇಶಪಾಂಡೆ ಗಂಗಾಧರರಾಯರಿಗೆ ಮತ್ತೆ ೫ ತಿಂಗಳ ಸಾದಾಶಿಕ್ಷೆಯಾಯಿತು,

ಇವರಿಗಲ್ಲದೆ- ಇದೇ ಜಿಲ್ಲೆಯ ಚಿಕ್ಕೋಡಿ ಅಪ್ಪಾ, ಶ್ರೀ ಸಿದ್ಧಾಂತಿಯವರಿಗೆ ೩|| ತಿಂಗಳ ಸಖ್ತ ಶಿಕ್ಷೆಯಾಗಿದೆ.

ಕೊಕಟನೂರರಿಗೆ ೨೦೦ ರೂಪಾಯಿ ದಂಡವಾಗಿದ್ದು ಶ್ರೀ ಚಾಂದೋರಕರರಿಗೆ ೪ ತಿಂಗಳ ಸಖ್ತ ಶಿಕ್ಷೆಯಾಯಿತು,

ಇದು ವರೆಗೆ ಈ ಜಿಲ್ಲೆಯಲ್ಲಿ ೬೦ ಈ ಕಾಯದೆಭಂಗಕ್ಕಾಗಿ ಜನರಿಗೆ ಶಿಕ್ಷೆಯಾಗಿದೆ.

ಕರ್ನಾಟಕದಲ್ಲಿ ಇದುವರೆಗೆ ೧೫೦ ಜನರಿಗೆ, ಉಪ್ಪಿನ ಕಾಯದೆಭಂಗ, ರಾಜದ್ರೋಹ ಮೊದಲಾದ ಅಪರಾಧಗಳಿಗೋಸ್ಕರ ಶಿಕ್ಷೆಯಾಗಿದೆ.

ಫೌಜದಾರನ ಉಬ್ಬಾಳತನ.

ಮುರಗೋಡದಲ್ಲಿ ದಿನಾಲು ಕಾಯದೆಭಂಗ ನಡೆದಿದೆ. ಮೊನ್ನೆಯ ದಿನ ಲಿಲಾವಾಗುತ್ತಿದ್ದ ಸ್ವತಂತ್ರ ಉಪ್ಪನ್ನು ಕಸಿದುಕೊಳ್ಳಲು ಅಲ್ಲಿಯ ಫೌಜದಾರರು ಪ್ರಯತ್ನಪಟ್ಟರು, ಸ್ವಯಂಸೇವಕರು ಈ ಉಪ್ಪನ್ನು ಕೊಡದಾಗಲು, ಎದೆಗೆ ಪಿಸ್ತೂಲು ಅನಿಸಿದರು, ಆದರೆ ಸ್ವಯಂಸೇವಕರು "ಗುಂಡು ಹಾಕು" ಎಂದು ಎದೆ ಮುಂದೆ ಮಾಡಿ ನಿಲ್ಲಲು, ಫೌಜದಾರರು ಮೋರೆ ಬಾಗಿಸಿಕೊಂಡು ಮನೆಯ ದಾರಿ ಹಿಡಿದರು.

ಈ ಊರಲ್ಲಿ ಜನಜಾಗ್ರತಿಯು ಚನ್ನಾಗಿದೆ. ಹಿಂದೂ ಮುಸಲ್ಮಾನರೆಲ್ಲ ಒಂದಾಗಿದ್ದಾರೆ.

ಸರಕಾರೀ ಅಧಿಕಾರಸ್ಥರನ್ನು ಬಹಿಷ್ಕರಿಸುವ ಕಾರ್ಯವು ಜೋರಿನಲ್ಲಿದೆ.

ಮುಂಬಯಿ ಕರ್ನಾಟಕದಲ್ಲಿ ಹರತಾಳ.

ಶಿಳವಳ್ಳಿ-

ಮಹಾತ್ಮರನ್ನು ಹಿಡಿದ ಸುದ್ದಿ ಬಂದ ಕೂಡಲೆ ಅಂಗಡಿಗಳನ್ನು ಬಂದು ಮಾಡಿ, ಹರತಾಳ ಮಾಡಿದರು. ಮಹಾತ್ಮರಿಗೆ ಶ್ರೇಯೋಭಿವೃದ್ಧಿಯಾಗಲೆಂದು ದೇವರನ್ನು ಪ್ರಾರ್ಥಿಸಿದರೆಂದು ಕಾಂಗ್ರೆಸ ಸ್ವಯಂಸೇವಕ ಶ್ರೀ ಬಿ ಎನ್ ನಾಶಗೇರ ಇವರು ಬರೆಯುತ್ತಾರೆ.

ಕಲಘಟಗಿ-

ಮಹಾತ್ಮರನ್ನು ಬಂಧಿಸಿದ್ದಕ್ಕಾಗಿ ನಿಷೇಧ ಮಾಡುವದಕ್ಕಾಗಿ ಮಂಗಳವಾರದ ದಿವಸ ಹರತಾಳವಾಯಿತು. ಸಂತೆ ಇದ್ದರೂ ಎಲ್ಲ ವ್ಯವಹಾರ ಕಟ್ಟಾಯಿತು. ಮಧ್ಯಾಹ್ನದಲ್ಲಿ ಹುಬ್ಬಳ್ಳಿಯಿಂದ ಬಂದ ಸ್ವಯಂಸೇವಕ ಸಭಿಕದವರು ವ್ಯಾಖ್ಯಾನ ಕೊಟ್ಟರು. ಧಾರವಾಡದ ಯುವಕ ಸಂಘದ ಕಾರ್ಯದರ್ಶಿಯಾದ ಶ್ರೀ. ಹಿರೇಮಠ ಇವರ ಭಾಷಣವೂ ಆಯಿತೆಂದು ಶ್ರೀ. ಗೋವಿಂದ ಲಕ್ಷ್ಮಣ ಹಳ್ಳಿಕ್ಕನವರ ಇವರು ಬರೆಯುತ್ತಾರೆ.

ರಟ್ಟಿಹಳ್ಳಿ-

ಮಾಸೂರ ಮಾರ್ಗವಾಗಿ ಅರಸ್ಸಾತ್ರಾಗಿ ಬಂದ ಸ್ವಯಂಸೇವಕರ ಆಗಮನದಿಂದ ಊರಲ್ಲಿ ಉತ್ಸಾಹವೆದ್ದಿತು. ರಾಷ್ಟ್ರಧ್ವಜದ ಮೆರವಣಿಗೆಯಾಗಿ ದಾರಿಗುಂಟ ರಣಭೇರಿ ಮೊದಲಾದ ರಾಷ್ಟ್ರಗೀತಗಳಾಗುತ್ತಿದ್ದವು. ಚಾವಡಿಯ ಹತ್ತರ ಶ್ರೀ. ಮುರಿಗೆಪ್ಪ ಗುಂಡನಕಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಕೊನೆಯಲ್ಲಿ ಪರದೇಶೀ ಬಟ್ಟೆಯ ಹೋಳಿಯಾಯಿತು. ಸ್ವತಃ ಅಧ್ಯಕ್ಷರು ತಮ್ಮ ಮೈ ಮೇಲಿನ ಪರದೇಶೀ ಅರಿವೆಯ ಹೋಳೀ ಮಾಡಿದ್ದಲ್ಲದೆ ಸತ್ಯಾಗ್ರಹ ನಿಧಿಗೆ ೫) ರೂಪಾಯಿ ಕೊಟ್ಟರು. ನೀಲಪ್ಪ ಆಗಸರನೆಂಬ ಉತ್ಸಾಹಿ ತರುಣನು ಸ್ವಯಂಸೇವಕನಾದನು. ತುಮ್ಮಿನಕಟ್ಟಿಯಲ್ಲಿ ಅಕ್ಷಯ್ಯ ತೃತೀಯದ ದಿವಸ ಖಾದೀ ವಸ್ತ್ರಾಲಯ ಸ್ಥಾಪಿಸಲ್ಪಟ್ಟಿದೆ.

ಆಗಡಿ-

ಮಹಾತ್ಮರನ್ನು ಹಿಡಿದ ಸುದ್ದಿಯು ಮಂಗಳವಾರ ಬಂತು. ಕೂಡಲೆ ಊರ ತುಂಬ ಹರತಾಳವಾಯಿತು. ಬಿಲ್ಲಿಯ ನಾಸೀಪುಡಿ, ಅಡಿಕೆ ಸಿಗಲಿಲ್ಲ. ಮುಂಜಾನೆ ಮೆರವಣಿಗೆ ಹೊರಟು, ಪರದೇಶಿ ಅರಿವೆಗಳನ್ನು ಕೂಡಿ ಹಾಕಲ್ಪಟ್ಟಿತು. ಸಾಯಂಕಾಲದಲ್ಲಿ ಸಭೆ ಮಾಡಿ, ಈ ಅರಿವೆಗಳ ಹೋಳೀ ಮಾಡಲ್ಪಟ್ಟಿತು. ಈ ಕೆಲಸದಲ್ಲಿ ಶ್ರೀ. ದಾಸರ ಹಣಮಂತಪ್ಪನು ಬಹು ಶ್ರದ್ಧೆಯಿಂದ ಕೆಲಸ ಮಾಡಿದನು.

ಶಿಗ್ಗಾಂವಿ-

ಆರನೆಯ ತಾರೀಖು ಸಾಯಂಕಾಲಕ್ಕೆ ಮಹಾತ್ಮರನ್ನು ಹಿಡಿದ ಸುದ್ದಿ ಬಂತು. ಕೂಡಲೆ ವ್ಯಾಪಾರಸ್ಥರು ಅಂಗಡಿಗಳನ್ನು ಬಂದು ಮಾಡಿದರು. ಮರು ದಿವಸ ಹರತಾಳವಾಯಿತು. ಒಂದು ಕಾಸಿನ ಬೀಡಿ ಸಹ ಸಿಗಲಿಲ್ಲ. ಸಾಯಂಕಾಲದಲ್ಲಿ ಮಹಾತ್ಮರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ತೆಗೆದರು. ಶ್ರೀ. ಮುಳಿ ಅಶ್ವತ್ಥರಾಯರು ಮಹಾತ್ಮರ ಸಂದೇಶವನ್ನು ಓದಿ ತೋರಿಸಿದರು. ಬಳಿಕ ಪರದೇಶೀ ಬಟ್ಟೆಗಳ ಹೋಳಿಯಾಯಿತು.

ಅಂಕೋಲಾ-

ಮಹಾತ್ಮರನ್ನು ಹಿಡಿದ ಸುದ್ದಿ ಬಂದ ಕೂಡಲೆ ಶಿಬಿರದವರು ೨೪ ತಾಸುಗಳ ಉಪವಾಸದ ಪ್ರತಿಜ್ಞಾಣ ಮಾಡಿದರು. ವ್ಯಾಸಪೀಠದ ಮೇಲೆ ಮಹಾತ್ಮರ ಭಾವಚಿತ್ರವಿಟ್ಟು ಒಳ್ಳೇ ಸಿಸ್ತಿನಿಂದ ಕೂಡಿದ ಸತ್ಯಾಗ್ರಹದ ಸ್ವಯಂಸೇವಕರು ಮೆರವಣಿಗೆ ಹೊರಡಿಸಿದರು. ಶಾಂತಾದುರ್ಗಾ ಮತ್ತು ವೆಂಕಟರಮಣ ದೇವಾಲಯಗಳಿಗೆ ಹೋಗಿ ಪ್ರಾರ್ಥನೆ ಮಾಡಲ್ಪಟ್ಟಿತು. ತಾಲೂಕ ಕಚೇರಿಯ ಮುಂದಿನ ಬೈಲಿಗೆ ಮೆರವಣಿಗೆ ಬಂತು. ಅಲ್ಲಿ ಎಳೆಂಟು ಸಾವಿರ ಜನ ಕೂಡಿತ್ತು. ಸಭೆಯ ಪ್ರಾರಂಭದಲ್ಲಿ ಐದು ನಿಮಿಷಗಳತನಕ ಭಜನೆಯಾಯಿತು. ಬಳಿಕ ಶ್ರೀ. ಶಿವಾನಂದ ಸೂನೇವರು ಸದ್ಯಸ್ಥಿತಿಯಲ್ಲಿ ಗೀತೆಯ ಉಪಯೋಗ ಈ ವಿಷಯದ ಮೇಲೆ ಉಪನ್ಯಾಸ ಮಾಡಿದರು.

ಬಂಕಾಪೂರ-

ಮಹಾತ್ಮರನ್ನು ಹಿಡಿದ ಕೂಡಲೆ ಆ ದಿನ ಸಂತೆ ಇದ್ದರೂ ಊರ ತುಂಬ ಹರತಾಳವಾಯಿತು. ಪ್ರಮುಖ ಲಿಂಗಾಯಿತ ವ್ಯಾಪಾರಸ್ಥರೂ, ಜವಳಿ ಯುವರೂ ಮುಂದಾಗಿ ಹರತಾಳ ಮಾಡಿದರು. ಸಾಯಂಕಾಲದಲ್ಲಿ ಸಭೆಯಾಗಿ, ಸರಕಾರದ ಕೃತ್ಯ ನಿಷೇಧಿಸಲ್ಪಟ್ಟಿತು. ಒಂದೂವರೀ ತಿಂಗಳಲ್ಲಿ ಸ್ವತಃ ನೂತು, ನೆಯಿದು ಒಂದು ಥಾನು ತಂದು ಕೊಟ್ಟವರಿಗೆ ಇನಾಮು ಕೊಡುವಂತೆ ಗೊತ್ತು ಮಾಡಿದ್ದಾರೆ. ಅನೇಕರು ಈಗಾಗಲೆ ಈ ಪಂದ್ಯದಲ್ಲಿ ಸೇರಿದ್ದಾರೆ. ಮಹಾತ್ಮರನ್ನು ಹಿಡಿದಿದ್ದಕ್ಕಾಗಿ ಸಿಂಪಿಗರು ಉಪವಾಸ ಮಾಡಿದರು.

ಮುಂಬಯಿ ಇಲಾಖೆಯೊಳಗಿನ ಜಕಾತಿ ಕಟ್ಟೆಗಳನ್ನು ತೆಗೆದು ಹಾಕುವರು.

—(೦)—

ಮುಂಬಯಿ ಸರಕಾರದವರು ಮೋಟಾರಗಳ ಸೋಯಿಗಾಗಿ ಪ್ರಾವ್ಹಿನ್ಸಿಯಲ ರೋಡಗಳ ಮೇಲಿರುವ ಜಕಾತಿ ಕಟ್ಟೆಗಳನ್ನು ತೆಗೆದು ಹಾಕಿದ್ದಾರಷ್ಟೇ; ಅದೇ ಪ್ರಕಾರ ಈಗ ಲೋಕಲಬೋರ್ಡುಗಳಿಗೆ ಅಧೀನವಾಗಿರುವ ಜಕಾತಿ ಕಟ್ಟೆಗಳನ್ನೂ ತೆಗೆದು ಹಾಕುವ ವಿಚಾರ ಮಾಡಿದ್ದಾರೆ. ದಾರಿಗುಂಟ ಹೋಗಿ ಬರುವಾಗ ಆಗಾಗ್ಗೆ ಕೊಡುವ ಜಕಾತಿಗಳಿಂದ ಜನರಿಗೆ ಬಹಳೇ ತೊಂದರೆಯಾಗುತ್ತಿರುವದರಿಂದ, ಈ ತಾಪ ತಪ್ಪಿಸಲು ಇವನ್ನು ತೆಗೆದು ಹಾಕುವರು. ಕಟ್ಟೆಗಳನ್ನು ತೆಗೆದು ಹಾಕುವದರಿಂದ ಬರತಕ್ಕ ಹಾನಿಯನ್ನು ಚಕ್ಕಡಿ, ಮೋಟಾರ, ಟಾಂಗಾ ಮುಂತಾದವುಗಳ ಮೇಲೆ ಕರ ಕೂಡಿಸಿ, ತುಂಬಿ ತೆಗೆಯುವರು. ಅದಕ್ಕಾಗಿ ಇವುಗಳ ಗಣತಿಯ ಕೆಲಸ ನಡೆದಿದೆ. ಕಟ್ಟೆಗಳನ್ನು ತೆಗೆದು ಹಾಕುವ ಬಿಲ್ಲು ಬಹುಶಃ ಈ ಸಾರೆ ಕೂಡುವ ಕೌನ್ಸಿಲದಲ್ಲಿ ಬರಬಹುದು.

ಶ್ರೀ. ಕೇಳಕರರ ಮುಂಡಾಸದ ಮೇಲೆ ಟೀಕೆ.

—(೦)—

ನುಡಿದಂತೆ ನಡೆಯುವವರ ಕಾಲಿಗೆ ನಮಸ್ಕಾರ.

—(೦)—

ತುರಂಗಕ್ಕೆ ಹೋದ ಮಹನೀಯರ ಬಗ್ಗೆ ಕೃತಜ್ಞತೆಯನ್ನು ವ್ಯಕ್ತ ಪಡಿಸಲು ಪುಣೆಯಲ್ಲಿ ಶ್ರೀ. ಶಿವಾಜಿ ಮಂದಿರದಲ್ಲಿ ಜಾಹೀರ ಸಭೆ ಕೂಡಿತ್ತು. ಶ್ರೀ. ಕೇಳಕರರು ವಿಲಾಯತಿಯ ಜನುಗು ನೂಲಿನ ಪುಣೆದ ಮುಂಡಾಸ ಹಾಕಿದ್ದರು. ಇದರ ಮೇಲೆ ಒಬ್ಬ ಗುಜರಾಥೀ ಹೆಣ್ಣು ಮಗಳು ಟೀಕೆ ಮಾಡಲು ಹಿಂಜರಿಯಲಿಲ್ಲ. ಶ್ರೀ. ಕೇಳಕರರು ನೋರಿ ಕೆಳಗೆ ಮಾಡುವಂತಾಗಿ, ಜನರು ಚಪ್ಪಳೆ ನಕ್ಕರು. ಶ್ರೀ. ಕೇಳಕರರು ಬಹುಶಃ ಗಾಂಧೀ ಟೊಪ್ಪಿಗೆ ಹಾಕುತ್ತಿದ್ದು, ಅಂದು ಮುಂಡಾಸ ಹಾಕಿಕೊಳ್ಳುವ ಬುದ್ಧಿಯೇಕೆ ಹುಟ್ಟಿತೆಂಬದು ಮಹದಾಶ್ಚರ್ಯ !!

ಎರಡೇ ತಿಂಗಳಲ್ಲಿ ವಿಲಾಯತಿ ಬಟ್ಟೆಯ ವ್ಯಾಪಾರದ ದಿವಾಳಿ ಹೊರಡುವದು.

—(೦)—

ಪುಣೆಯಲ್ಲಿ ಮಹಾತ್ಮರನ್ನು ಹಿಡಿದ ದಿವಸ ಆದ ಸಭೆಗೆ ೪೦ ಸಾವಿರ ಜನ ಕೂಡಿತ್ತು. ಇದರಲ್ಲಿ ಮೂರು ಸಾವಿರ ಸ್ತ್ರೀಯರೇ ಇದ್ದರು. ಈ ಮೆರವಣಿಗೆಯು ಬುಧವಾರ ಪೇಠಿನಿಂದ ದಾಟಿ ಹೋಗಲಿಕ್ಕೆ ಒಂದು ತಾಸು ಹತ್ತಿತು. ಆಗಿನ ವ್ಯವಸ್ಥೆಯು ಸ್ವಯಂಸೇವಕರದೇ ಆಗಿತ್ತು. ಪೋಲಿಸ

ವಿಳಾಯಿತಿಯು ಪೆಟ್ಟಿಗೆ ಅಧೋಗತಿಗುಪ್ಪ-

ಮುಂಬಯಿಯ ವರ್ತಕರು ಪೂರ್ಣ ಸ್ವದೇಶಿಯರಾಗಿದ್ದು, ಇವರು ತಮ್ಮಲ್ಲಿದ್ದ ವಿಳಾಯಿತಿಯ ಅರಿವೆಯನ್ನು ಆಫ್ರಿಕೆಗೆ ಕಳಿಸಿ ಪರಿಶುಳರಾಗುವರು. ಸ್ವದೇಶಿಯರಲ್ಲಿ ಸ್ವದೇಶಿ ವಸ್ತ್ರದ ಅಂಗಡಿಯ ಮುಂದೆ ಸ್ತ್ರೀಯರು ಪಿಕೆಟಿಂಗ ನಡೆಸಿದ್ದರಿಂದ, ಅಂಗಡಿಕಾರರು ಬಾಗಿಲ ಹಾಕಿಬಿಟ್ಟರು.

ಯಾರನ್ನೂ ಕೋರ್ಟಿನಲ್ಲಿ ಬಿಡಲಿಲ್ಲ-

ರತ್ನಾಗಿರಿಯಲ್ಲಿ ಸ್ತ್ರೀ ಗಂಗಾಧರರಾಯರ ವಿಚಾರಣೆ ನಡೆದಾಗ, ಅವರ ಅಪ್ತರು ಅಥವಾ ಸ್ತ್ರೀ ಹಿತರನ್ನು ನೋಡಲಿಕ್ಕೆ ಬಿಡಲಿಲ್ಲ.

ಡಾಕ್ಟರ ಸತ್ಯಪಾಲರಿಗೆ ಮೂರು ವರ್ಷ, ಡಾಕ್ಟರ ಆಲಮರಿಗೆ ೧೮ ತಿಂಗಳು ಮತ್ತು ಮ. ಚಾಫೇಕರವರಿಗೆ ಎರಡು ವರ್ಷದ ಶಿಕ್ಷೆಯಾಯಿತು. ಎಲ್ಲರಿಗೂ ಸಶ್ರಮದ ಶಿಕ್ಷೆ!!!

ತ್ವರೆಮಾಡಿರಿ! ಇತ್ತ ಲಕ್ಷ ಕೊಡಿರಿ!!

ಜಾಹೀರ ನೋಟೀಸು

—()(°)()—

ಧಾರವಾಡ ಶಹರ ಮ್ಯುನಿಸಿಪಾಲಿಟಿಯವರಿಂದ ವ ಮ. ಕಲೆಕ್ಟರಸಾಹೇಬರ ಕಡೆಯಿಂದ ಸಮ್ಮತಿ ಪಡೆದ ನಮ್ಮ ಪ್ಲಾಟುಗಳನ್ನು ಮಾರಲಿಕ್ಕೆ ವ ಅವುಗಳಲ್ಲಿ ಇಮಾರತಿ ಕಟ್ಟಿಸಲಿಕ್ಕೆ ಪರವಾನಿಗಿ ದೊರೆತಿರುತ್ತದೆ ಬೇಕಾದವರು ಕೆಳಗೆ ಬರೆದವರಿಗೆ ಸಮಕ್ಷಮ ಭೆಟ್ಟಿಯಾಗಬೇಕು. ಅಥವಾ ಪತ್ರವ್ಯವಹಾರ ಮಾಡಬೇಕು. ತಾ|| ೧೦ ೫-೧೯೩೦

ಸರದಾರ ಲಕ್ಷ್ಮಣರಾವ ಮಾಧವರಾವ
ಹೆಬಳೀಕರ ಜಹಾಗಿರದಾರ,
ಕಿಲ್ಲೆ, ಧಾರವಾಡ.

ಚಂದಾದಾರರಿಗೆ ಸೂಚನೆ

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ಮುಂಗಡ ಚಂದಾ ಕಳಿಸದ ಚಂದಾದಾರರ ಹೆಸರಿನಿಂದ ವಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವಿ. ಪಿ. ಸ್ವೀಕರಿಸಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಸ್ವಯಂವರ

ವಿ. ರ್. ಶ್ರೀನಿವಾಸಯ್ಯಂಗಾರ್, ಗೌ. ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆವೆಚ್ಚವಿಲ್ಲ. ಆ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟು ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ—ನೀವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ನಿಮಗೆ ಈ ಬೇಡಿಕೆಯನ್ನು ಮಾಡುತ್ತೀರಿ. ಬರೆದು ತಿಳಿಸಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಯಾಗಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳು ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇನೆ. ಮೇ ಆಖೈರದೊಳಗಾಗಿ ಹೆಸರು ದಾಖಲು ಮಾಡಿಕೊಳ್ಳುವೆವು. ಆದದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಿಪಲ್ ಅರ್ಪಿನಹತ್ತರ, ಧಾರವಾಡ

ಶೀಘ್ರ ... ... ಕರಿಗೆ

ಶ್ರೀದತ್ತ ಸ್ಪಿನಿಂಗ್ ಮಿಲ್

ಹುಬ್ಬಳ್ಳಿ.

—(○)—

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

—(○)—

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಚವಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ. ಮಾಲು ತಿರಿಗಿ ತಕ್ಕೊಳ್ಳುವೆವು.

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೧೨ ನೇ ನೋ. ೧೯೩೦ (ಸಂಖ್ಯೆ ೧೧೦

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUSES

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಹಾನಿಯಾಗಿ ರದ್ದಾಗದ ಪಾಲಿಸಿಯ ಯೋಜನೆ ಬಂದಿವೆ	ಖಾತ್ರಿಯಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ದಾಮೋದರ ಪ್ರೆಸ್‌ ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಒಳ್ಳೆ ಲಕ್ಷದ ಮೇಲುಂಟು. ಡಿಶ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾಕೀಮು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳಲಾಗುದು. ದರವನ್ನು ಸಾಕ್ಷಾತ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ಶುದ್ಧ ೧೫

ಆ ವಿಜಯಂ ಶ್ರೀಕರಪ್ರಿಯು
ಈ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ॥
ದೀ " ವಿಜಯಂ " ಸ್ವೀಕರಿಸುಗು ।
ನಾವಿಹಿತಂಗಳ ವಿವರಿಸಿನಲಿವುದು ಸಾಜಂ ॥

ರಾಣೇಬೆನ್ನೂರಿನ ಠಂಡಿತನ.

—(೦)—

ಮೇಲಿನ ತಲೆ ಕಟ್ಟು ನೋಡಿ ವಾಚಕರು ಆಶ್ಚರ್ಯಚಕಿತರಾಗಬಹುದು. ಎಲ್ಲವ್ವನಿಗೆ, ದೇವವ್ವನಿಗೆ ಠಂಡಿತನ ಬರುತ್ತದೆ. ಆದರೆ ರಾಣೇಬೆನ್ನೂರಿಗೆ ಹೇಗೆ ಬಂತು; ಅಥವಾ ಬರುವದೆಂದು ಆ ಊರಿನವರೇ ಪ್ರಶ್ನೆ ಮಾಡಬಹುದು, ಹತ್ತು ವರ್ಷಗಳ ಹಿಂದಿನ ಅಲ್ಲಿಯ ಅಸಹಕಾರಾಂದೋಲನವನ್ನು ಸ್ಮರಣೆಗೆ ತನ್ನಿರಿ. ಸರಕಾರೀ ಶಿಲೆದಾರರಿಗೆ ಒಂದು ಚಪ್ಪಲಿ ಅಥವಾ ಎತ್ತು ಬಿಟ್ಟಿ ಸಿಗಲಿಲ್ಲ. ಬಿಟ್ಟೀ ಹಿಡಿಯಬಾರದೆಂಬ ಸರಕಾರೀ ಠರಾವು ಜನರಿಂದಲೇ ಆಮಲಿನಲ್ಲಿ ಬಂತು. ಆಗ್ಗೆ ಊರ ಜನರು ಸತ್ಯಾಗ್ರಹಕ್ಕೆ ಅನುಕೂಲರಾಗಿದ್ದರು. ಅಂತೇ ಅಲ್ಲಿ ಧಾರವಾಡ ಜಿಲ್ಲೆಯ ರಾಜಕೀಯ ಪರಿಷತ್ತು ಸೇರಿ, ಅದೇ ಬಂಧಮುಕ್ತರಾಗಿ ಬಂದಿದ್ದ ಧಾರವಾಡದ ಗೋಳೀಬಾರಿನ ಸಗ್ಗುಹಸ್ತರ ಸನ್ಮಾನ ಮಾಡುವ ಮೊದಲನೇಯ ಮಾನವು ಆ ಊರಿಗೆ ಬಂತು.

ಹತ್ತು ವರ್ಷಗಳನಂತರ ಆ ಊರು ಅಡಿಯು ಮುಂದಿಡದೆ ಹಿಂದಕ್ಕೆ ಸರಿಯುತ್ತದೆ. ಪ್ರಮುಖರೆಂಬ ಬ್ರಾಹ್ಮಣ- ವೀರಶೈವರು ದಿವಾಳೀತರಂತೆ ಮನೆ ಹಿಡಿದು ಕೂತಿದ್ದಾರೆ. ಇವರಿಗೆ ಹೊರಗೆ ಬರುವ ಧೈರ್ಯವೇ ಇರುವದಿಲ್ಲ. ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲದೆನ್ನುವಂತೆ ಅಲ್ಲಿಯ ಚಳವಳಿಯು ಕುಗ್ಗಿಲ್ಲ. ಪಂಡಿತ ಜವಾಹರಲಾಲರನ್ನೂ ಮಹಾತ್ಮರನ್ನೂ ಹಿಡಿದಾಗ ಹರತಾಳವಾಯಿತು. ವಿದೇಶೀಯ ಬಟ್ಟೆಯ ಹೋಳಿಯಾಯಿತು. ಆತುರ ಮನುಷ್ಯರಂಥವರು ಮಾತ್ರ ಹೆದರಿಕೊಂಡು ಮನೆ ಹಿಡಿದು ಕೂತರು.

ಹುಬ್ಬಳ್ಳಿ, ಗದಗ, ಬ್ಯಾಡಗಿ ಮತ್ತು ಹಾವೇರಿ ಗ್ರಾಮಗಳು ಈಗಿನ ಪರಾಕ್ರಮ ತೋರಿಸುತ್ತಲಿವೆ. ಉತ್ತಮ ಕುಮಾರನಂತೆ ತಾವಾವ ಕೃತ್ಯ ಮಾಡುತ್ತಿದ್ದೇವೆಂಬುದನ್ನು ಪುರಪ್ರಮುಖರೆಂದೆನಿಸಿಕೊಳ್ಳುವಂಥವರು ಕನಸಿನಲ್ಲಾದರೂ ಚಿಂತಿಸಬಾರದೇ? ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹತ್ತಿತು. ಧಾರವಾಡವಾದ ಕೂಡಲೆ ಹುಬ್ಬಳ್ಳಿಯಲ್ಲಿಯೂ ಏರಿಸುವಂತೆ ರಾ. ಬ. ಕಂಬಳಿಯವರು ತಮ್ಮವರಿಗೆ ವಚನ ಕೊಟ್ಟಿದ್ದಾರೆ. ಕೌನ್ಸಿಲದ ಡಿಪುಟಿ ಪ್ರೆಸಿಡೆಂಟರೆಂಬವರು ರಾಷ್ಟ್ರೀಯತ್ವವನ್ನು ತೋರಿಸುತ್ತಿರುವಾಗ, ಬೇರೆ ತಾಲೂಕಿನವರು ಅಂಜುವವರ ಮೇಲೆ ತಪ್ಪೆಯೆಂದು ಹೇಳಿಕೊಳ್ಳುವದು ವಿವೇಕಶೂನ್ಯವೇ ಸರಿ. ಕೇವಲ ರಾವಸಾಹೇಬ ರಾವಬಹಾದ್ದೂರ ಪದವಿಗಳಿಗಾಗಿ ಇಂಥ ಜನರು ಮೈಯ್ಯಾಳಿಸಿಕೊಳ್ಳುತ್ತಿದ್ದಾರೆ. ಸ್ವರಾಜ್ಯದಲ್ಲಿ ಈ ಪದವಿಗಳು ಹೊಸ ನೀರು ಹಳೆ ನೀರು ಕಿತ್ತಿ ಹೋಗುವಂತೆ ಹರಿದು ಹೋಗುವವೆಂಬುದನ್ನು ಪೂರಾ ಧ್ಯಾನದಲ್ಲಿಡತಕ್ಕದ್ದು. ಎಲ್ಲವ್ವನಿಗೆ ಠಂಡಿತನ ಬಂದರೂ, ಪುನಃ ಮುತ್ತೈದೆಯಾಗುವಳು. ಅದೇ ಪ್ರಕಾರ ರಾಣೇಬೆನ್ನೂರಿನ ಪುಂಡರು ತಮ್ಮೂರ ಠಂಡಿತನ ಕಳೆಯುವರೆಂದು ಆಶಿಸುತ್ತೇವೆ.

ಮಗನ ಮುಂಜಿಯಾಗುವಾಗ ದಸ್ತಗಿರಿ ಮತ್ತು ಶಿಕ್ಷೆ

—(೦)—

ಮಹಾಡದ ನಿವಾಸಿಗಳು ಸರಕಾರೀ ಕಾಮದಾರರಿಗೆ ಬಹಿಷ್ಕಾರ ಹಾಕಿದ್ದರಿಂದ ದುಡ್ಡು ಕೊಟ್ಟರೂ ಪದಾರ್ಥ ಸಿಗುವದಿಲ್ಲ. ಪೋಲೀಸಸಾಹೇಬರು ಬಂದು ಬಲವಂತಿಕೆಯಿಂದ ಅಂಗಡಿಯೊಳಗಿನ ಸಾಮಾನು ತಕ್ಕೊಳ್ಳಲಾರಂಭಿಸಿದರು. ಆದರೂ ಅವರ ಉದ್ದೇಶ ಸಫಲವಾಗಲಿಲ್ಲ. ಈ ಸಿಟ್ಟಿನಿಂದ ಮುಖಂಡರಾದ ಟಿಪಣೀಸ ಮತ್ತು ಪೋತನೀಸರನ್ನು ಹಿಡಿಯ ಹೋದರು. ಆಗ ಪೋತನೀಸರ ಮಗನ ಮುಂಜಿಯಾಗಿ ಅತಿಥಿಗಳ ಭೋಜನ ನಡೆದಿತ್ತು. ಇದಾವುದನ್ನೂ ಲಕ್ಷಿಸದೆ ಸಾಹೇಬರು ಇವರನ್ನು ಹಿಡಕೊಂಡು ಹೋದರು. ಮುಂದೆ ಒಂದೇ ತಾಸಿನಲ್ಲಿ ಆರು ತಿಂಗಳ ಶಿಕ್ಷೆಯಾಯಿತು. ಮುಂಜಿ ಮತ್ತು ಮದುವೆಗೆ ಬಂದಿದ್ದ ಬೀಗರು ಬಿಜ್ಜರು ವಂದೇಮಾತರಮ್‌ದ ಜಯಘೋಷದಲ್ಲಿ ಇವರನ್ನು ತುರಂಗಕ್ಕೆ ಸಾಗಕಳಿಸಿದರು.

ಶ್ರೀ ದಾಬಡೆನಾಯಿಕರ ಪುನಃ ದಸ್ತಗಿರಿ.

—(೦)—

ಬೆಳಗಾವಿಯಲ್ಲಿ ಉಪ್ಪಿನ ಕಾಯದೆ ಮುರಿದು ಶ್ರೀ ಗಂಗಾಧರರಾಯರ ಕೂಡ ಮೊದಲನೆಯ ಪಟ್ಟಿಗೆ ತುರಂಗವಾಸಿಯಾಗಿ, ಬಿಡುಗಡೆ ಹೊಂದಿಬಂದ ಶ್ರೀ. ದಾಬಡೆನಾಯಿಕರನ್ನು ಪುನಃ ಅಥಣಿಯಲ್ಲಿ ಹಿಡಿದಿರುತ್ತಾರೆಂದು ತಾರಿನ ವರ್ತಮಾನ ಬಂದಿರುತ್ತದೆ. ಇವರ ಕೂಡ, ಕುಲಕರ್ಣಿಕೆಗೆ ರಾಜೀನಾಮೆ ಕೊಟ್ಟಂಥ ಪ್ರಾಚ್ಛಾಪೂರದ ಕುಲಕರ್ಣಿಯವರನ್ನೂ ಹಿಡಿದಿದ್ದಾರೆ.

ಚನ್ನಮ್ಮನ ಕಿತ್ತೂರಿನಲ್ಲಿ ನಾಲ್ಕುನೂರು ಶಿಂದಿಯ ಗಿಡಗಳು ಧ್ವಂಸವಾದವು.

ಗುಜರಾಥದಲ್ಲಿ ಶಿಂದಿಯ ಗಿಡ ಕಡಿದು ಧ್ವಂಸ ಮಾಡುತ್ತಿದ್ದರ ಸಂಕವು ಕರ್ನಾಟಕಕ್ಕೂ ಹತ್ತಿತು. ವೀರರಾಣಿ ಚನ್ನಮ್ಮನ ಕಿತ್ತೂರಿನಲ್ಲಿ ಇದರ ಪ್ರಾರಂಭವಾಗಿರುತ್ತದೆ. ಮಹಾತ್ಮರನ್ನು ಹಿಡಿದ ಮೂರು ದಿವಸಗಳಲ್ಲಿ ನಾಲ್ಕುನೂರು ಗಿಡಗಳು ಸ್ವಯಂಸೇವಕರ ಕೊಡ್ಲಿಯ ಪೆಟ್ಟಿಗೆ ಬಿದ್ದು, ಈ ಪರ್ಯಂತರ ಮಾಡಿದ ಪಾಪವನ್ನು ನೀಗಿಸಬೇಕೆಂದು ಭೂದೇವಿಗೆ ಮೊರೆ ಹೊಕ್ಕವು. ಈ ವರ್ತಮಾನ ಕೇಳಿದ ಕೂಡಲೆ ಫೌಜದಾರರು ೧೧ ಜನ ಸಿಪಾಯರೊಂದಿಗೆ ವಿಚಾರಣೆಗಾಗಿ ಬಂದರು. ತಮ್ಮ ಜವಾಬು ಕೇಳಿದರೆ- ಅದಕ್ಕೆ ನಿರ್ಭಯದಿಂದ ಉತ್ತರ ಕೊಡುವದಕ್ಕಾಗಿ ಸ್ವಯಂಸೇವಕರು ಬಂದೆಡೆಯಲ್ಲಿ ಸಿದ್ಧರಿಂದ ಕೂತುಕೊಂಡರು. ಕಡಿದು ಹಾಕಿದ ಗಿಡಗಳು ಸರಕಾರಿಯಾಗದೆ, ಸ್ವಂತ ಮಾಲಕಿಯವಾದ್ದರಿಂದ, ಪೋಲೀಸರಿಗೆ ಪಂಚನಾಮೆ ಮುಂತಾದ ವಿಧಿ ವಿಧಾನಗಳನ್ನು ಮಾಡುವ ಅವಶ್ಯಕತೆಯುಂಟಾಗಲಿಲ್ಲ. ಗಿಡಗಳ ಮಾಲೀಕರನ್ನು ಕರಿಸಿ, ನಿಮ್ಮದೇನಾದರೂ ಫಿರ್ಯಾದಿಯುಂಟೇ ಎಂದು ಪ್ರಶ್ನೆ ಮಾಡಲು- ಅವರು ಒಂದಕ್ಕೆ ಎರಡು ಉತ್ತರ ಕೊಟ್ಟರು. ನಮ್ಮ ಫಿರ್ಯಾದಿ ಇಲ್ಲೆಂದಿಷ್ಟೇ ಹೇಳುವದರ ಕೂಡ ಗಿಡಗಳನ್ನು ಕಡಿಯುವದರಿಂದ ನಮ್ಮ ಆವ ಹಾನಿಯೂ ಆಗಿಲ್ಲೆಂದು ಹೇಳಿದರು. ಇದರ ಕೂಡ ಸ್ವಯಂಸೇವಕರು ಲೋಕೋಪಕಾರವನ್ನೂ ಮಾಡಿದ್ದರೆಂದು ಮಾಲಕರನ್ನೆಯ ಉತ್ತರ ಕೊಟ್ಟಿದ್ದರೆ- ಮತ್ತಿಷ್ಟು ಉತ್ಕೃಷ್ಟವಾಗುತ್ತಿತ್ತು. ಮಾಲೀಕರು ಫಿರ್ಯಾದಿ ಇಲ್ಲೆಂದು ಅತ್ಯಂತ ಸಂತೋಷದಿಂದ ಹೇಳಿದ ಕೂಡಲೆ ಫೌಜದಾರರು ತಮ್ಮ ಕೆಲಸವಾಯಿತೆಂದು ಸ್ವಸ್ಥಾನಕ್ಕೆ ಪ್ರಯಾಣ ಬೆಳೆಸಿದರು; ಸ್ವಯಂಸೇವಕರು ಅಂದು ಸಾಯಂಕಾಲದಲ್ಲಿ ಪುನಃ ಶಿಂದೀ ಬನಕ್ಕೆ ಹೋಗಿ, ಅನೇಕ ಗಿಡಗಳನ್ನು ಕಡಿದು ಸಾಯಂಕಾಲದಲ್ಲಿ ಸಭೆ ಮಾಡಿದರು.

ಈ ಸಭೆ ಕೂಡಿದಾಗ ಜನರು ಮನಸ್ಸಿನಲ್ಲಿಲ್ಲದೆ ಹೊರಗಿನಿಂದ ಕೆಲ ಪ್ರಮುಖರು ಬಂದರು. ಇವರಲ್ಲಿ ಮೊದಲನೆಯವರು ಸಾಧುಮಯ ಮತ್ತು

ಯಾಗಿಯು ಪರಮ ಭಕ್ತರಾದ ಶ್ರೀ. ಪಶುಪತಿಯವರು. ಇವರ ದರ್ಶನದಿಂದ ಜನರಿಗೆ ಮಹದಾನಂದವಾಯಿತು. ಇದರ ನಂತರ ಬೆಳಗಾವಿಯಲ್ಲಿ ಕೂಡಬೇಕಾಗಿದ್ದ ಬ್ರಾಹ್ಮಣೇತರರ ಸಭೆಗೆ ಆಮಂತ್ರಣ ಕೊಡಲು ಬೆಳಗಾವಿಯಿಂದ ಶ್ರೀ. ಕೆ. ಎಸ್. ನಾಡಗೀರರು ಬಂದರು. ಇವರ ನಂತರ ಧಾರವಾಡದಿಂದ ಶ್ರೀ ಹ[illegible] ಮತ್ತು [illegible]ಕರವ[illegible]ರು ಬಂದರು. [illegible] ಮಹಾತ್ಮಾ ಗಾಂಧಿ ಕಿ ಜಯ, ವಂದೇ ಮಾ[illegible]ರಂ ಜಯಘೋಷವಾಯಿತು. [illegible] ಹಿಡಿದ ಬಗ್ಗೆ ಪೋಲೀಸರು ಒಂದ ಬ[illegible]ಗಿ ಧಾರವಾಡಕ್ಕೆ [illegible] ಸುದ್ದಿ [illegible] ಕೂಡಲೆ ಬರಬೇಕಾಯಿತೆಂದೂ ಇಷ್ಟ[illegible]ವನ್ನು ನೋಡಲಾಗಿ ತಮಗೆ ಪ್ರತ್ಯಕ್ಷವ[illegible] ಅನುಭೂತಿಯು ದರ್ಶನವಾಗಿ ಹರ್ಷ[illegible] ತಮ್ಮ ಭಾಷಣದಲ್ಲಿ ಹೇಳಿದರು [illegible] ವೆಕವು ಕಳೆದ ಹಲವು ದಿವಸಗಳಲ್ಲಿ [illegible] ಕಾರ್ಯವನ್ನು ಅಂತು ತಮಗೆ ಬಹು ಹಿ[illegible]ತು. ಇವರು ಇಮ್ಮಡಿ ಸಂ[illegible]ಯು ದ[illegible]ಂದ ಈ ಕೆಲಸ ಮಾಡಬೇಕೆಂದು ಇವರನ್ನು [illegible]ಸಿದರು. ಇವರನಂತರ ಶ್ರೀ. ನಾಗಯ[illegible] ಎಂಬ ತರುಣ ವಿದ್ಯಾರ್ಥಿ ತಮ್ಮ ಸಹಜವಾ[illegible]ನ್ನಡ ವಾಣಿಯಿಂದ "ಈಗಿನ ಆಂದೋಲನ [illegible] ಸೇರದೆ, ಬುದ್ಧಿಪುರಸ್ಸರವಾಗಿ [illegible] ಸಿಕೊಳ್ಳು[illegible]ಗೆ ಅವರವರ ಕರ್ಮ ಸಮಾಂತರವಾಗಿ ಹೇಗೆ [illegible] ಫಲಿಸುತ್ತದೆಂಬುದನ್ನು ವಿಶದವಾಗಿ ಹೇಳಿ[illegible]. ಶ್ರೀ. ಸೋಮಚಂದ್ರರವರು ವ್ಯಾಖ್ಯಾಕರ [illegible]ತ್ತು ಸಭೆಗೆ ಬಂದವರ ಆಭಾರವನ್ನಿಸಿದ ಬಳಿಕ, ವಂದೇಮಾತರಮ್ದ ಸಭೆಯು ವಿಸರ್ಜನೆಯಾಯಿತು

ಧಾರಾಸಾನದ ಮೇಲೆ ಸತ್ಯಾಗ್ರಹಿಗಳ ದಾಳಿಯು-

ಮಹಾತ್ಮರ ಯೋಜನೆಯ ಪ್ರಕಾರ ಅವರ ತರುವಾಯ ಶ್ರೀ. ತಯ್ಯಾಬಜಿಯವರು ಇಪತ್ತಿನ ದಿವಸ ಕರಾಡಿಯಿಂದ ಧಾರಾಸಾನಕ್ಕೆ ಸ್ವಯಂಸೇವಕರೊಂದಿಗೆ ಹೊರಡುವರು. ಮೂರು ದಿವಸ ದಾರಿ ನಡೆದು ಅಲ್ಲಿಗೆ ಮುಟ್ಟುವರು. ಬಳಿಕ ಉಪ್ಪಿನ ಮಾಲಕರಿಗೆ ಬೆಲೆಕೊಟ್ಟು ಅದನ್ನು ಕೊಳ್ಳುವರು. ಆದರೆ ಸರಕಾರಕ್ಕೆ ಕರ ಕೊಡದೆ ಹೊರಗೆ ತರುವರು. ಸರಕಾರದವರು ಇವರನ್ನು ಹಿಡಿದರೆ-ಶ್ರೀ. ಸರೋಜಿನಿ ನಾಯುಡು ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯಿ ನಿಯುವರು. ಇವರ ತರುವಾಯ ಸರಕಾರದ ಕೂಡ ಸಾತ್ವಿಕ ಸಂಗರಕ್ಕೆ ತೊಡಗುವರು.

ಹರತಾಳದ ಸುದ್ದಿಗಳು.

—(೧)—

ಮುಂಡರಗಿ-

ಮಹಾತ್ಮರನ್ನು ಹಿಡಿದ ಸುದ್ದಿಯು ಆರನೆಯ ತಾರೀಖಿನ ದಿವಸ ಬಂತು. ಅಂದು ಗದಗಿನಿಂದ ಮುಂಡರಗಿ ಕರಿಸಬೇಕೆಂಬ ವಿಚಾರವಿತ್ತು. ಅಲ್ಲಿ ಅದ್ವಿತೀಯವಾದ ಹರತಾಳವಿದ್ದದರಿಂದ ಅಲ್ಲಿಯವರಿಗೆ ಬರುವದಾಗಲಿಲ್ಲ. ಮರುದಿವಸ ಸ್ವಯಂಸೇವಕರು ಗದಿಗ್ಗೆ ಹೋಗಿ, ಶ್ರೀ ಸಾವುಕಾರ ಮಾಸ್ತರರನ್ನು ಕರಕೊಂಡು ಬಂದರು. ಶ್ರೀ ವೆಂಕಟಸ್ವಾಮಿಯು ನಗರಸಂಕೀರ್ತನೆ ಮಾಡಿದರು. ಸಾಯಂಕಾಲದಲ್ಲಿ ಸಭೆಯಾಯಿತು. ಫೌಜದಾರ ಮಹಾಲಕರಿ ಮತ್ತು ಅವರ ಮ್ಯಾಜಿಸ್ಟ್ರೇಟರು ಬಂದಿದ್ದರು. ವ್ಯಾಖ್ಯಾನವಾಗಿ ರಾಷ್ಟ್ರಗೀತವನ್ನು ವಾಗ ಈ ಮೂವರ ಹೊರತು ಎಲ್ಲರೂ ಎದ್ದು ನಿಂತಿದ್ದರು. ಬಳಿಕ ಪರ[illegible] ಘೋಷಗಳ ಹೋಳಿಯಾಗಿ ಸಭೆಯು ವಿಸರ್ಜನೆಯಾಯಿತು.

ಮುಳಗುಂದ-

ಮಹಾತ್ಮರ ದಸ್ತಗಿರಿಯು ದೆಸೆಯಿಂದ ಖಡಕವಾದ ಹರತಾಳವಾಯಿತು. ಸಾಯಂಕಾಲದಲ್ಲಿ ಮಹಾತ್ಮರ ಭಾವಚಿತ್ರದ ಮೆರವಣಿಗೆಯಾಯಿತು. ಜಾಪಡಿಯು ಮುಂದಿನ ದೊಡ್ಡ ಬೈಲಿನಲ್ಲಿ ಸಭೆ ಸೇರಿತು. ಇದಕ್ಕೆ ಗಾಂಧೀ ಕಟ್ಟೆಯೆಂದು ಹೆಸರಿಟ್ಟಿದ್ದಾರೆ. ಶ್ರೀ. ಚನ್ನಬಸಪ್ಪಾ ಬಳ್ಳಿ, ವಾಸುದೇವರಾವ ಕುಲಕರ್ಣಿ, ಹಣಮಂತರಾವ ಸೊರಟೂರ, ಶಿವಪ್ಪಾ ಬಳ್ಳಾರಿ ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದವು. ಕಾಯದೆಭಂಗದ ಉಪ್ಪು ಮಾಡಿ, ಮಾರಲ್ಪಟ್ಟಿತು. ನೂರಾರು ಜಂಗಮರು ಇದನ್ನು ಕೊಂಡರು. ಬಳಿಕ ಪರದೇಶಿ ಅರಿವೆಯ ಹೋಳಿಯೂ ಆಯಿತು.

ಸವದತ್ತಿ-

ಮಹಾತ್ಮರನ್ನು ಹಿಡಿದ ಬಗ್ಗೆ ಸಂಪೂರ್ಣ ಹರತಾಳವಾಯಿತು. ಆದರೆ ಬರೆಯತಕ್ಕ ಶ್ರೀ ಕುಮಗಲ್ಲ ಅನಂತ-ಚಾರ್ಯರು ಕೈಲಿ ಲೇಖಣಿಕೆ ಹಿಡಿಯಲಿಲ್ಲ. ಕೂಲಿಕಾರರು ಕೂಲಿಗೆ ಸಹ ಹೋಗಲಿಲ್ಲ. ಮೇಟಗಳು ನಿಂತಲ್ಲಿಯೇ ನಿಂತವು ಸುತ್ತಲೂ ಗ್ರಾಮಗಳಲ್ಲಿ ಹರತಾಳವಾಯಿತು ಕರೀಕಟ್ಟಿಯು ಧ್ವಂದ್ವ ಇದ್ದು, ಅದು ಬಾಂದೋಲಿಯಾಗಬೇಕೆನ್ನುತ್ತದೆ. ಸಾಯಂಕಾಲದಲ್ಲಿ ಸಭೆಯಾಗಿ ಸ್ವರಾಜ್ಯ ಸ್ವಾತಂತ್ರ್ಯದ ಜಯಜಯಕಾರವಾಯಿತು.

ಲಕ್ಕುಂಡಿ-

ದೇವಪುರುಷರಂತಿರುವ ಮಹಾತ್ಮರನ್ನು ಸರಕಾರದವರು ಅನ್ಯಾಯವಾಗಿ ಪ್ರತಿಬಂಧಿಸಿದ ವರ್ತಮಾನ ಬಂದ ಕೂಡಲೆ, ಶೆಟ್ಟರು ಸಾಹುಕಾರರು ಎಲ್ಲ ವ್ಯವಹಾರ ಬಂದುಮಾಡಿ ಹರತಾಳ ಮಾಡಿದರು. ಅಂದು ಸಂತೆ! ಸುತ್ತುಮುತ್ತಲಿನ ಹತ್ತಿಪ್ಪತ್ತು ಗ್ರಾಮಗಳ ಜನರು ಕೂಡುವ ದಿವಸ. ಎಲ್ಲ ಅಂಗಡಿಗಳು ಬಂದಾದವು ಪರಸ್ಥಳದಿಂದ ಬಂದ ಅಂಗಡಿಕಾರರೂ ಇದರಲ್ಲಿ ಸೇರಿದರು ಸಾಯಂಕಾಲದಲ್ಲಿ ಸಭೆ ಆಗಿ, ಮಹಾತ್ಮರಿಗೆ ಬಂದ ಗಂಡಾಂತರ ದೂರಾಗಲೆಂದು ಅವರ ಹೆಸರಿನ ಜಯಘೋಷದೊಡನೆಯೇ ಸಭೆಯು ವಿಸರ್ಜನೆಯಾಯಿತು.

ಸೊಲ್ಲಾಪೂರದ ವಿಶೇಷ ಸುದ್ದಿಯು-

ಪಟ್ಟಣಕ್ಕೆ ದಂಡಿನ ಛಾವಣಿಯು ಸ್ವರೂಪ ಬಂದಿದೆ. ಸರಕಾರದ ಕೃತ್ಯ ಸಿಷೆಧಿಸುವದಕ್ಕಾಗಿ ಸುಪ್ರಸಿದ್ಧ ವ್ಯಾಪಾರಸ್ಥರಾದ ಶೇಟ ಲಾಲಚಂದ ಹೀರಾಚಂದರು ಸಿ. ಆಯ. ಇ. ಮತ್ತು ಜೆ. ಪಿ ಪದವಿಗೆ ರಾಜೀನಾಮೆ ಕೊಟ್ಟರು. ಇವರಿಗೆ ತೀರ ವಿರುದ್ಧವಾಗಿ ಡಾಕ್ಟರ ಮುಳೆ, ಮಾಣಿಕಚಂದ ಶಹಾ ಮತ್ತು ಖಾನ್ ಬಹಾದ್ದೂರ ಇವರು ಆನರರಿ ಮ್ಯಾಜಿಸ್ಟ್ರೇಟರಾಗಿ ಜನರಲ್ಲಿ ಶಾಂತತೆಯುಂಟು ಮಾಡುವ ಅಧಿಕಾರ ಪಡಕೊಂಡಿದ್ದಾರೆ.

ಮಹಾರಾಷ್ಟ್ರದ ಸ್ಥಿತಿ—

ಮರಾಟೆಯರು ಶಿರೋಡೆ ಎಂಬಲ್ಲಿ ಧಾರಾಸಾನದಂತೆ ಉಪ್ಪಿನ ಮೇಲೆ ದಾಳಿ ಇಡುವರು. ಬೇರೆ ಬೇರೆ ಜಿಲ್ಲೆ ಮತ್ತು ಪ್ರಾಂತಗಳಿಂದ ನೂರಾರು ಸ್ವಯಂಸೇವಕರು ಅಲ್ಲಿ ಸೇರುವರು. ಪ್ರೇಕ್ಷಕರಂಥ ಸ್ವಾರ್ಥತ್ಯಾಗ, ಸ್ವಾರ್ಥತ್ಯಾಗ ಮಾಡುವರು: ಕಷ್ಟಕಾಪಗಳನ್ನು ಸಹಿಸುವರು. ಪೋಲೀಸರು ಗುಂಡುಹಾಕಲಿಕ್ಕೆ ಬಂದರೆ- ತಮ್ಮ ಎದೆಯ ಮೇಲೆ ಮೊದಲನೆಯ ಗುಂಡು ಹಾಕಿಸಿಕೊಳ್ಳಲು ಆವು ಮುಂದೆ ಬರುವೆವೆಂತೆ ಪ್ರೊಫೆಸರ ಶಿರೋಳೆಯವರು ಮುಂತಾಗಿ ಜಾಹೀರ ಮಾಡಿದ್ದಾರೆ.

ದಬ್ಬಾಳಿಕೆಯ ಮಹಿಮೆ-

ಪೇಶಾವರದ ದಂಗೆಯ ವಿಚಾರಣೆ ಮಾಡಲಿಕ್ಕೆ ಬರುವೆನು. ದಾರಿ ಕೊಡಿರೆಂದು, ಪಂಡಿತ ಮೋತಿಲಾಲರು ಲಾರ್ಡ ಆಯರ್ವಿನ ಸಾಹೇಬರಿಗೆ ಪತ್ರ ಬರೆದಿದ್ದರಂತೆ. ನಿಮಗೆ ಬಿಡುವದಿಲ್ಲ. ಬಂದರೆ ಹಿಂದಕ್ಕೆ ಅಟ್ಟುವೆವೆಂದು ಪೇಶಾವರದ ಕಮೀಶನರ ಸಾಹೇಬರು ಇವರಿಗೆ ಉತ್ತರ ಕೊಟ್ಟಿದ್ದಾರೆ.

R. N. B 1443

ಸಾಪ್ತಾಹಿಕ | ಬೆಲೆ ೧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) | ಧಾರವಾಡ ಮಂಗಳವಾರ ತಾರೀಖು ೧೩ ನೇ ಮೇ ೧೯೩೦ | (ಸಂಚಿಕೆ ೧

ಸೋಲ್ಲಾಪೂರದಲ್ಲಿ ಭಯಂಕರ ಪುಂಡಾಟಿಕೆ.

ಡಿಸ್ಟ್ರಿಕ್ಟ ಕೋರ್ಟು ಸುಟ್ಟು ಬೂದಿಯಾಯಿತು.

೧೦ ಜನರು ಸತ್ತರು. ೮೦ ಜನರು ಘಾಯವಾದರು.

ದಂಗೆಗಾರರು ಇಬ್ಬರು ಪೋಲೀಸರನ್ನು ಸುಟ್ಟು ಕೊಂದರು.

ಗುರುವಾರ ಪ್ರಾತಃಕಾಲದಲ್ಲಿ ಮುಂಬಯಿಯಲ್ಲಿ ಬಂಧಮುಕ್ತರಾದಂಥ ಶ್ರೀ. ನರಿಮನ್ನರ ಭಾವಚಿತ್ರವನ್ನು ಕುದುರೆಯ ಮೇಲೆ ಕೂಡ್ರಿಸಿ, ಮೆರವಣಿಗೆ ತೆಗೆದರು. ಮೆರವಣಿಗೆಯಲ್ಲಿ ಐದಾರು ಸಾವಿರ ಜನವಿತ್ತು. ಮೆರವಣಿಗೆಯ ಕೊನೆಯಲ್ಲಿ ಶಿಂದಿಯ ಗಿಡಗಳನ್ನು ಕಡಿಯಬೇಕೆಂಬ ವಿಚಾರ ಹೊಳೆದು, ನೂರು ಜನ ಸ್ವಯಂಸೇವಕರು ಕುಳಗಾವ ಅಗಸಿಗೆ ಬಂದು ಅಲ್ಲಿರುವ ಗಿಡಗಳನ್ನು ಕಡಿಯಹತ್ತಿದರು. ಈ ವರ್ತಮಾನ ಕೇಳಿ, ಪೋಲೀಸ ಮತ್ತು ಸಿಟಿ ಮ್ಯಾಜಿಸ್ಟ್ರೇಟಸಾಹೇಬರು ಪೋಲೀಸ ಸಿಪಾಯರ ಜಮಾತಿನಿಂದ ಬಂದು, ಏಳೆಂಟು ಜನ ವ್ಹಾಲಂಟಿಯರನ್ನು ಹಿಡಿದರು. ಈ ಸುದ್ದಿಯು ಊರೊಳಗೆ ಕಾಳ್ಗಿಚ್ಚಿನಂತೆ ಹಬ್ಬಿತು. ಹತ್ತೆಂಟು ಸಾವಿರ ಜನ ಅತ್ತ ಹೋದರು. ಸಮುದ್ರದಂತೆ ಜನ ನಿಂತಿತ್ತು. ಪೋಲಿಸರು ವ್ಹಾಲಂಟಿಯರರನ್ನು ಬಿಟ್ಟಿದ್ದರೂ ಮುಂದೆ ಗೊಂದಲವೇ ಏಳುತ್ತಿದ್ದಿಲ್ಲ. ಇಂಥ ಸುವಿಚಾರ ಹುಟ್ಟಲಿಲ್ಲ; ಅಧಿಕಾರದ ದರ್ಪ ತೀರಿಸಲಿಕ್ಕೆ ಹೋದರು. ಜಗತ್ತು ತ್ರಿಗುಣಾತ್ಮಕವಾಗಿರುತ್ತದೆ. ೧೫-೨೦ ಸಾವಿರ ಜನರಲ್ಲಿ ಕೆಲವಂಥ ತಮೋಗುಣದವರು ಪೋಲಿಸರ ಮೇಲೆ ಕಲ್ಲೆಸೆದರು. ಆಗ ಪೋಲೀಸರು ಇವರನ್ನು ಚದರಿಸಲು ಆಕಾಶದಲ್ಲಿ ಗುಂಡು ಹಾರಿಸಿದರು. ಇದಕ್ಕೆ ಜನರು ಹೆದರಲಿಲ್ಲ. ಜನರ ಮೇಲೆಯೇ ಗುಂಡು ಹಾರಿಸಲು— ಅವರು ದಾರಿ ತೋರದಿತ್ತು. ಹಿಂದಕ್ಕೆ ಸರಿದರು. ಆದರೆ ಇದು ಇಷ್ಟಕ್ಕೆ ಆಗಲಿಲ್ಲ. ಮತ್ತೆ ಜನರ ಪ್ರಚಂಡ ಗುಂಪು ಸೇರಿತು. ಊರ ಮುಖಂಡರು ಒಂದು ಕಡೆಗೆ ಬೇಕಾದಷ್ಟು ಉಪದೇಶ ಮಾಡಿದರೂ, ವ್ಯರ್ಥವಾಯಿತು. ಪೋಲೀಸರು ಪುನಃ ಘಾಯರ ಮಾಡಿದರು. ಆದರ ಕಿಂತ ಜನರ ಸಂಖ್ಯೆಯು ದೊಡ್ಡದಾಗಿದ್ದದ್ದನ್ನು ನೋಡಿ, ಪೋಲೀಸರು ಕೋರ್ಟಿನ ಕಡೆಗೆ ಹೋಗಿ, ಅಲ್ಲಿ ಎಲ್ಲರೂ ಅಡಗಿಕೊಂಡು ಒಂದು ಗುಂಡು ಹಾರಿಸಿದರು. ಆಗ ಜನರಲ್ಲಿ ಮುಖ್ಯ ಮುಖ್ಯ ಪುಂಡಗಾರರು ಊರ ಕಡೆಗೆ ಹೋದರು. ಡಿಸ್ಟ್ರಿಕ್ಟಕೋರ್ಟಿಗೆ ಬಂದು, ಅದಕ್ಕೆ ಬೆಂಕಿ ಹಚ್ಚಿ, ಪೂರಾ ಸುಟ್ಟುಬಿಟ್ಟರು. ಡಿಸ್ಟ್ರಿಕ್ಟಕೋರ್ಟು ಬೂದಿಯಾಯಿತು. ಇದೇ ಪ್ರಕಾರ ಬೇರೆ ಕಚೇರಿಗಳೂ ಪೋಲೀಸ ಚೌಕಿಗಳೂ ಸುಟ್ಟವು. ಇವನ್ನು ಬೆಂಕಿಯ ಬಾಯಿಗೆ ಕೊಟ್ಟನಂತರ ಊರೊಳಗೆ ಬಂದು ರೈಲ್ವೆ ಮತ್ತು ಬೇರೆ ಪೋಲಿಸ ಸ್ಟೇಶನಗಳಲ್ಲಿದ್ದ ಕಾಗದಪತ್ರಗಳನ್ನು ಹೊರಗೆ ತಂದು, ಅವುಗಳ ಹೋಳೀ ಮಾಡಿದರು. ಈ ಗೊಂದಲದಲ್ಲಿ ಇಬ್ಬರು ಸಿಪಾಯಿರು ಸಿಕ್ಕರು. ಅವರನ್ನು ಹಿಡಿದು, ಕಲ್ಲೆಣ್ಣೆ ಸುರುವಿ, ಬೆಂಕಿ ಹಚ್ಚಿ ಸುಟ್ಟು ಹಾಕಿದರು. ಈ ಪ್ರಕಾರ ಊರ ತುಂಬ ಹಾಹಾಕಾರವೆದ್ದು, ತಮಗೆ ದಂಗೆಯು ಆಟೋಪಿಸುವದಿಕ್ಕೆಂದು ಸೈನ್ಯ ಕಳಿಸು ಅಹಮದನಗರ ಮತ್ತು ಪುಣೆಗೆ ತಾರು ಮಾಡಿ, ದಂಡು ತರಿಸಿದರು. ಅಹಮದನಗರದಿಂದ ಮೊದಲು ಬಂದ ದಂಡು, ಕವಚದ ಬಂಡಿಗಳ ಸಹಾಯದಿಂದ ಊರೊಳಗೆ ಬಂದೋಬಸ್ತಿಗೆ ಪ್ರಾರಂಭ ಮಾಡಿತು. ಪುಣೆಯ ದಂಡು ಬಂದು, ಇದಕ್ಕೆ ಸಹಾಯ ಮಾಡಲಾರಂಭಿಸಿತು. ಆ ದಂಡು ಒಂದರೂ ದಂಗೆಯು ಮರಳಿಸಿ ಭಯಂಕರ ಸ್ವರೂಪ ಧಾರಣ ಮಾಡಬಹುದೆಂದು ಅಲ್ಲಿಯ ಯುರೋಪಿಯನ್ನರು ಅಂಜಿಕೊಂಡು ತಮ್ಮ ಹೆಂಗಸರನ್ನೂ ಹುಡುಗರನ್ನೂ ಸುರಕ್ಷಿತಕ್ಕಾಗಿ ಸ್ಪೇಶಲ್ ಟ್ರೇನಿನಿಂದ ಪುಣೆಗೆ ಕಳಿಸಿದರು ಹೀಗೆ ಎರಡು ಟ್ರೇನುಗಳು ಬಿಟ್ಟವು. ಮೊದಲಿನದರಲ್ಲಿ ಇನ್ನೂರು ಜನರಿದ್ದರು. ಎರಡನೆಯದೂ ತುಂಬಿ ಹೋಯಿತು. ಇದರಲ್ಲಿ ಗಿರಣಿಯ ಕಾಮದಾರರ ಹೆಂಡರು ಮಕ್ಕಳೂ ಇದ್ದಾರೆ. ದಂಗೆಯಲ್ಲಿ ಸುಡಿಸಿಕೊಂಡ ಇಬ್ಬರು ಸಿಪಾಯರಲ್ಲದೆ, ಮೂವರು ಮರಣೋನ್ಮುಖರಾಗಿದ್ದಾರೆ. ಐದಾರು ಜನರು ಭಯಂಕರ ಘಾಯವಾಗಿದ್ದಾರೆ. ಜನರ ಗುಂಪಿನಲ್ಲಿ ಹತ್ತು ಜನರು ಸತ್ತಿದ್ದು, ೮೦ ಜನರು ಘಾಯವಾಗಿದ್ದಾರೆ. ಈ ಘೋರ ಪ್ರಸಂಗದ ಬಳಿಯಿಂದ ಊರ ತುಂಬ ಹಂತಾರವಾಗಿದ್ದು, ಗಿರಣಿಗಳೂ ಬಂದಾಗಿರುತ್ತವೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಜಾಹೀರನಾಮೆಯನ್ನು ಹಚ್ಚಿ, ಐವರಿಗಿಂತ ಹೆಚ್ಚು ಜನರು ಒಂದೆಡೆಯಲ್ಲಿ ಸೇರಬಾರದೆಂದು ಹುಕುಮು ಮಾಡಿದ್ದಾರೆ.

ಚನ್ನಮ್ಮನ ಕಿತ್ತೂರಿನಲ್ಲಿ ನಾಲ್ಕುನೂರು ಶೆಂದಿಯ ಗಿಡಗಳು ಧ್ವಂಸವಾದವು.

ಗುಜರಾಥದಲ್ಲಿ ಶೆಂದಿಯ ಗಿಡಗಳನ್ನು ಧ್ವಂಸ ಮಾಡುತ್ತಿದ್ದರ ಸುಂಕವು ಕರ್ನಾಟಕಕ್ಕೂ ಹತ್ತಿ ತು ವೀರರಾಣಿ ಚನ್ನಮ್ಮನ ಕಿತ್ತೂರಿನಲ್ಲಿ ಇದರ ಪ್ರಾರಂಭವಾಗಿರುತ್ತದೆ. ಮಹಾತ್ಮರನ್ನು ಹಿಡಿದ ಮೂರು ದಿವಸಗಳಲ್ಲಿ ನಾಲ್ಕುನೂರು ಗಿಡಗಳು ಸ್ವಯಂಸೇವಕರ ಕೊಡ್ಲಿಯ ಪೆಟ್ಟಿಗೆ ಬಿದ್ದು, ಈ ಪರ್ಯಂತರ ಮಾಡಿದ ಪಾಪವನ್ನು ಕ್ಷಮಿಸಬೇಕೆಂದು ಭೂದೇವಿಗೆ ಮೊರೆ ಹೊಕ್ಕವು. ಈ ವರ್ತಮಾನ ಕೇಳಿದ ಕೂಡಲೆ ಫೌಜದಾರರು ೧೧ ಜನ ಸಿಪಾಯರೊಂದಿಗೆ ವಿಚಾರಣೆಗಾಗಿ ಬಂದರು. ತಮ್ಮ ಜವಾಬು ಕೇಳಿದರೆ ಅದಕ್ಕೆ ನಿರ್ಭಯದಿಂದ ಉತ್ತರ ಕೊಡುವದಕ್ಕಾಗಿ ಸ್ವಯಂಸೇವಕರು ಒಂದೆಡೆಯಲ್ಲಿ ಶಿಸ್ತಿನಿಂದ ಕೂತುಕೊಂಡರು. ಕಡಿದು ಹಾಕಿದ ಗಿಡಗಳು ಸರಕಾರಿಯಾಗದೆ, ಸ್ವಂತ ಮಾಲಕಿಯವಾದ್ದರಿಂದ, ಪೋಲೀಸರಿಗೆ ಪಂಚನಾಮೆ ಮುಂತಾದ ವಿಧಿ ವಿಧಾನಗಳನ್ನು ಮಾಡುವ ಅವಶ್ಯಕತೆಯುಂಟಾಗಲಿಲ್ಲ. ಗಿಡಗಳ ಮಾಲೀಕರನ್ನು ಕರೆಸಿ, ನಿಮ್ಮದೇನಾದರೂ ಫಿರ್ಯಾದಿಯುಂಟೇ ಎಂದು ಪ್ರಶ್ನೆ ಮಾಡಲು ಅವರು ಒಂದಕ್ಕೆ ಎರಡು ಉತ್ತರ ಕೊಟ್ಟರು. ನಮ್ಮ ಫಿರ್ಯಾದಿ ಇಲ್ಲೆಂದಷ್ಟೇ ಹೇಳುವದರ ಕೂಡ ಗಿಡಗಳನ್ನು ಕಡಿಯುವದರಿಂದ ತಮ್ಮ ಆವ ಹಾನಿಯೂ ಆಗಿಲ್ಲೆಂದು ಹೇಳಿದರು. ಇದರ ಕೂಡ ಸ್ವಯಂಸೇವಕರು ಲೋಕೋಪಕಾರವನ್ನೂ ಮಾಡಿದ್ದಾರೆಂದು ಮಾಲಕನೆಯ ಉತ್ತರ ಕೊಟ್ಟಿದ್ದರೆ ಮತ್ತಿಷ್ಟು ಉತ್ಕೃಷ್ಟವಾಗುತ್ತಿತ್ತು. ಮಾಲೀಕರು ಫಿರ್ಯಾದಿ ಇಲ್ಲೆಂದು ಅತ್ಯಂತ ಸಂತೋಷದಿಂದ ಹೇಳಿದ ಕೂಡಲೆ ಫೌಜದಾರರು ತಮ್ಮ ಕೆಲಸವಾಯಿತೆಂದು ಸ್ವಸ್ಥಾನಕ್ಕೆ ಪ್ರಯಾಣ ಬೆಳೆಸಿದರು; ಸ್ವಯಂಸೇವಕರು ಅಂದು ಸಾಯಂಕಾಲದಲ್ಲಿ ಪುನಃ ಶಿಂದೀ ವನಕ್ಕೆ ಹೋಗಿ, ಅನೇಕ ಗಿಡಗಳನ್ನು ಕೆಡವಿ ಸಾಯಂಕಾಲದಲ್ಲಿ ಸಭೆ ಮಾಡಿದರು.

ರಾಣೇಬಿನ್ನೂರಿನ ರಂಡಿತನ.

ಮೇಲಿನ ತಲೆ ಕಟ್ಟು ಓದಿ ವಾಚಕರು ಆಶ್ಚರ್ಯಚಕಿತರಾಗಬಹುದು. ಯಲ್ಲಮ್ಮನಿಗೆ, ದೇವಮ್ಮನಿಗೆ ರಂಡಿತನ ಬರುತ್ತದೆ. ಆದರೆ ರಾಣೇಬಿನ್ನೂರಿಗೆ ಹೇಗೆ ಬಂತು, ಅಥವಾ ಬರುವದೆಂದು ಆ ಊರಿನವರೇ ಪ್ರಶ್ನೆ ಮಾಡಬಹುದು. ಹತ್ತು ವರ್ಷಗಳ ಹಿಂದಿನ ಅಲ್ಲಿಯ ಅಸಹಕಾರವನ್ನು ಸ್ಮರಣೆಗೆ ತನ್ನಿರಿ. ಸರಕಾರೀ ಕಾಮದಾರರಿಗೆ ಒಂದು ಚಕ್ಕಡಿ ಅಥವಾ ಎತ್ತು ಬಿಟ್ಟಿ ಸಿಗಲಿಲ್ಲ. ಬಿಟ್ಟೀ ಹಿಡಿಯಬಾರದೆಂಬ ಸರಕಾರೀ ಠರಾವು ಜನರಿಂದಲೇ ಅಮಲಿನಲ್ಲಿ ಬಂತು. ಆಗ್ಗೆ ಊರ ಜನರು ಸತ್ಯಾಗ್ರಹಕ್ಕೆ ಅನುಕೂಲರಾಗಿದ್ದರು. ಅಂತೇ ಅಲ್ಲಿ ಧಾರವಾಡ ಜಿಲ್ಹೆಯ ರಾಜಕೀಯ ಪರಿಷತ್ತು ಸೇರಿ, ಅದೇ ಬಂಧಮುಕ್ತರಾಗಿ ಬಂದಿದ್ದ ಧಾರವಾಡದ ಗೋಲೀಬಾರಿನ ಸದ್ಗೃಹಸ್ಥರ ಸನ್ಮಾನ ಮಾಡುವ ಮೊದಲನೇಯ ಮಾನವು ಆ ಊರಿಗೆ ಬಂತು.

ಹತ್ತು ವರ್ಷಗಳನಂತರ ಆ ಊರು ಅಡಿಯ ಮುಂದಿಡದೆ ಹಿಂದಕ್ಕೆ ಇಟ್ಟಿರುತ್ತದೆ. ಪ್ರಮುಖರೆಂಬ ಬ್ರಾಹ್ಮಣ- ವೀರಶೈವರು ದಿವಾಭೀತರಂತೆ ಮನೆ ಹಿಡಿದು ಕೂತಿದ್ದಾರೆ. ಇವರಿಗೆ ಹೋಗೆ ಬರುವ ಧೈರ್ಯವೇ ಇರುವದಿಲ್ಲ. ಅಕ್ಕ ನತ್ತಿಗೆ ಅನೂಪಾಕ್ಯ ನಿಲ್ಲದೆನ್ನುವಂತೆ ಅಲ್ಲಿಯ ಚಳವಳಿಯು ಕುಗ್ಗಿಲ್ಲ. ಪಂಡಿತ ಜವ್ಹೇರಿಲಾಲರನ್ನೂ ಮಹಾತ್ಮರನ್ನೂ ಹಿಡಿದಾಗ ಹರತಾಳವಾಯಿತು. ಎಲ್ಲಾ ಯುತಿಯ ಒಟ್ಟೆಯ ಹೋಳಿಯಾಯಿತು. ಆದರೆ ಮುಖಂಡರೆಂಬವರು ಮಾತ್ರ ಹೆದರಿಕೊಂಡು ಮನೆ ಹಿಡಿದು ಕೂತರು.

ಹುಬ್ಬಳ್ಳಿ, ಗದಗ, ಬ್ಯಾಡಗಿ ಮತ್ತು ಹಾವೇರಿ ಗ್ರಾಮಗಳು ಈಗಿನ ಪರಾಕ್ರಮ ತೋರಿಸುತ್ತಲಿವೆ. ಉತ್ತರ ಕುಮಾರನಂತೆ ತಾವೇನ ಕೃತ್ಯ ಮಾಡುತ್ತಿದ್ದೇವೆಂಬದನ್ನು ಪುರ ಪ್ರಮುಖರೆಂದೆನಿಸಿಕೊಳ್ಳುವಂಥವರು ತುಸುವಾದರೂ ಚಿಂತಿಸಬಾರದೇ? ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹತ್ತಿತು. ಧಾರವಾಡವಾದ ಕೂಡಲೆ ಹುಬ್ಬಳ್ಳಿಯಲ್ಲಿಯೂ ಏರಿಸುವಂತೆ ರಾ. ಬ. ಕಂಬಳಿಯವರು ತಮ್ಮವರಿಗೆ ವಚನ ಕೊಟ್ಟಿದ್ದಾರೆ. ಕೌನ್ಸಿಲದ ಡಿಪುಟಿ ಪ್ರೆಸಿಡೆಂಟರೆಂಬವರು ರಾಷ್ಟ್ರೀಯತ್ವವನ್ನು ತೋರಿಸುತ್ತಿರುವಾಗ, ಒಂದು ತಾಲೂಕಿನವರು ಅಂಜುವವರ ಮೇಲೆ ಕಪ್ಪೆಯೆಂದು ಹಟಗೊಳ್ಳುವದು ವಿವೇಕಶೂನ್ಯವೇ ಸರಿ. ಕೇವಲ ರಾವಸಾಹೇಬ ರಾವಬಹಾದ್ದೂರ ಪದವಿಗಳಿಗಾಗಿ ಇಂಥ ಜನರು ಮಯ್ಯುಳಿಸಿಕೊಳ್ಳುತ್ತಿದ್ದಾರೆ. ಸ್ವರಾಜ್ಯದಲ್ಲಿ ಈ ಪದವಿಗಳು ಹೊಸ ನೀರು ಹಳೆ ನೀರು ಕಿತ್ತಿ ಹೋಗುವಂತೆ ಹರಿದು ಹೋಗುವವೆಂಬದನ್ನು ಪೂರಾ ಧ್ಯಾನದಲ್ಲಿಡತಕ್ಕದ್ದು. ಯಲ್ಲಮ್ಮನಿಗೆ ರಂಡಿತನ ಬಂದರೂ, ಪುನಃ ಮುತ್ತೈದಿಯಾಗುವಳು. ಅದೇ ಪ್ರಕಾರ ರಾಣೇಬಿನ್ನೂರಿನ ಮುಖಂಡರು ತಮ್ಮೂರ ರಂಡಿತನ ಕಳೆಯುವರೆಂದು ಆಶಿಸುತ್ತೇವೆ.

ಕದರಮಂಡಲಗಿ ಗೌಡನ ಗುಂಡತನ.

ರಾಣೇಬಿನ್ನೂರ ತಾಲೂಕ ಕದರಮಂಡಲಗ್ರಾಮವು ಅಲ್ಲಿಯ ಪ್ರಾಣದೇವರ ಜಾಗೃತ ಸಾನಿಧ್ಯ ದೆಸೆಯಿಂದ ಪ್ರಸಿದ್ಧವಿರುತ್ತದೆ. ಧಾರವಾಡದಿಂದ ಸ್ವದೇಶ ಪ್ರಚಾರಕ್ಕಾಗಿ ಹೋದಂಥ ವಿಕ್ರಮಪಥಕದವರು ಏಳನೆಯ ತಾರೀಖಿನ ದಿವಸ ಅಲ್ಲಿಗೆ ಹೋದರು. ಇವರು ಕಾರ್ಯಕ್ರಮದ ಪ್ರಕಾರ ಪ್ರಾತಃಕಾಲದಲ್ಲಿ ನಗರ ಸಂಕೀರ್ತನೆ ಮಾಡಿ ರಾಷ್ಟ್ರಧ್ವಜವಂದನೆ ಮಾಡಿದರು. ಈ ಸಂಗತಿಯು ಅಲ್ಲಿಯ ಗೌಡರ ತಲೆ ತಿರುಗಿಸಿತು. ಬಹಳ ಮಾಡಿ ಇವರು ಹಿಂದಕ್ಕೆ ಆಮನ ಸಭೆ ಸ್ಥಾಪಿಸಿದವರಿರಬಹುದು. ಸಾಯಂಕಾಲದಲ್ಲಿ ದೇವಾಲಯದಲ್ಲಿ ಸಭೆಯಾಯಿತು. ಐದಾರು ನೂರು ಜನರು ಸೇರಿದರು. ಗೌಡರು ತಾವು ಊರ ಅಧಿಕಾರಿ ಎಂದು ಸ್ವಯಂಸೇವಕರಿಗೆ ತಿಳಿಯುವಂತೆ ಆಚರಿಸಲುದ್ಯುಕ್ತರಾದರು. ಇಲ್ಲಿ ನೀವು ಸಭೆ ಮಾಡುತ್ತೀರಿ ಊರೊಳಗೆ ಕಳವು ತುಡುಗುಗಳಾದರೆ ನೀವೇ ಜವಾಬದಾರರೆಂದು ಮೋರೆ ಕೆಂಪಗೆ ಮಾಡಿ ಉರಿಯುತ್ತ ಗದ್ದರಿಸಿದರು. ಗೌಡರ ಗದ್ದರಿಸುವಿಕೆಯನ್ನು ಯಾರೂ ಲಕ್ಷಿಸಲಿಲ್ಲ. ಸಭೆಯು ಮುಗಿದ ಬಳಿಕ, ಗೌಡರು ಅಧಿಕಾರದ ಅವತಾರಧಾರಣ ಮಾಡಿದರು. ಪೋಲೀಸ ಸಿಪಾಯಿ ಮತ್ತು ಓಲೇಕಾರರನ್ನು ಕರಕೊಂಡು ಬಂದು ಸ್ವಯಂಸೇವಕರಿಗೆ ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆಂದು ಹೇಳಿದರು. ಇವರು ವಾರಂಟು ತೋರಿಸಿರೆನ್ನಲು— ಉಪ್ಪಿನ ಮುದ್ದೇ ಮಾಲು ಸಹಿತವಾಗಿ ಹಿಡಿದಿದ್ದೇವೆ, ಫೌಜದಾರರು ಬರುವತನಕ ಬಿಡುವದಿಲ್ಲೆಂದರು. ಸಾಯಂಕಾಲ, ಸ್ವಯಂಸೇವಕರಿಗೆ ಉಪಹಾರ ಮಾಡಿಸುತ್ತೇವೆಂದು ಊರವರು ಗೌಡರಿಗೆ ಹೇಳಿದರೂ, ಗೌಡರು ಅಷ್ಟು ಸಹ ದಯತೋರಿಸಲಿಲ್ಲ. ರಾತ್ರಿ ಹತ್ತು ಹೊಡೆಯಿತು. ಫೌಜದಾರರನ್ನೇ ಕಾಣಲು ಸ್ವಯಂಸೇವಕರೂ, ಗೌಡರೂ ಬ್ಯಾಡಿಗಿಯ ದಾರೀ ಹಿಡಿದರು. ಗೌಡರು ಕಾವಲಿಗಾಗಿ ಬಿಚ್ಚುಗತ್ತಿಯ ಓಲೇಕಾರರನ್ನೂ, ಏಳು ಜನ ಹೊಲೆಯರನ್ನೂ ಸಂಗಡ ಕರಕೊಂಡು ನಡೆದರು. ದಾರಿಯಲ್ಲಿಯೇ ಸಬ್ ಇನ್ಸಪೇಕ್ಟರರು ಎದುರಾಗಿ ಬಂದು, ವಾರಂಟು ಇಲ್ಲದೆ ಇವರನ್ನೇಕೆ ಹಿಡಿದಿರೆಂದು ಗೌಡರಿಗೆ ಸಿಟ್ಟು ಮಾಡಿ, ಬಿಡಿಸಿದರು. ಗೌಡನ ಮೂರ್ಖತನದಿಂದ ಅಲ್ಲಿಯ ಚಳವಳಿಗೆ ವಿಶೇಷ ಸ್ವರೂಪ ಬಂದಿದ್ದು, ೩೦-೪೦ ಜನರು ಸ್ವಯಂಸೇವಕರಾಗಿದ್ದಾರೆ. ಮತ್ತು ಆ ಊರ ಸುತ್ತುಮುತ್ತಲು ಲೋಕ ಜಾಗ್ರತೆಯುಂಟಾಗಿರುತ್ತದೆ. ಈ ವಿಚಾರ ಹೇಗಿದ್ದರೂ, ತನಗೆ ಅಧಿಕಾರವಿಲ್ಲದೆ ಗೌಡನು ಸಾತ್ವಿಕ ಜನರನ್ನು ಅನ್ಯಾಯದಿಂದ ಪ್ರತಿಬಂಧದಲ್ಲಿಟ್ಟದ್ದಕ್ಕೆ ಕಲೆಕ್ಟರ ಸಾಹೇಬರು ಆತನಿಗಾವ ಶಿಕ್ಷೆ ಮಾಡುವರು, ಮತ್ತು ತಮ್ಮಲ್ಲಿ ನ್ಯಾಯ ಬುದ್ಧಿಯು ಜಾಗ್ರತವಾಗಿರುತ್ತದೆಂಬದನ್ನು ಕೃತಿಯಿಂದ ತೋರಿಸುವರೆಂದು ಆಶಿಸುತ್ತೇವೆ.

ಮಲಗಿದಾಗ ದಸ್ತಗಿರಿ.

ಡಾಕ್ಟರ ಕೆಜಲುಸಾಹೇಬರು ಸತ್ಯಾಗ್ರಹದ ಚಳವಳಿಯ ಪ್ರಾರಂಭದಿಂದ ಜಾಲಿನವಾಲಾಬಾಗದಲ್ಲಿಯೇ ಇರುತ್ತಾರೆ. ಪೋಲಿಸರು ಇವರನ್ನು ಅಪರಾತ್ರಿಯಲ್ಲಿ ಹಿಡಿಯಲಿಕ್ಕೆ ಹೋದರು. ಮುಂಬಾಗಿಲ ಹಾಕಿತ್ತು. ಹಿಂಬದಿಯ ಗೋಡೆಯ ಮೇಲಿಂದ ಹಾರಿ, ಒಳಗೆ ಹೋಗಿ, ಎಬ್ಬಿಸಿ ವಾರಂಟು ತೋರಿಸಿ, ಕರಕೊಂಡು ಹೋದರು. ಮಿಸ್ಟರ ಕಾರಾಶೀಂಗರು ಇವರ ಸ್ಥಳದಲ್ಲಿ ಅಲ್ಲಿಯ ಸತ್ಯಾಗ್ರಹಿಗಳ ಸೇನಾಧಿಪತಿಯಾದರು.

ಮಹಾತ್ಮರ ರಾಜಕೀಯ ಬಂದಿವಾಸ.

ಬ್ರಿಟಿಶರಸರು ಮಹಾತ್ಮರನ್ನೇಕೆ ಹಿಡಿದರು?

ಮಹಾತ್ಮರನ್ನು ಹಿಡಿದ ಕೂಡಲೆ- ಇವರನ್ನು ಹಿಡಿಯಲಿಕ್ಕಾದ ಕಾರಣವೇನೆಂಬುದರ ಹಿಂದು 'ಜಾಹೀರ ಪತ್ರಿಕೆ'ಯನ್ನು ಮುಂಬಯಿ ಸರಕಾರದವರು ಪ್ರಸಿದ್ಧ ಮಾಡಿದ್ದಾರೆ. ಅದರ ಮುಖ್ಯಾಂಶಗಳು ಮುಂದೆ ಕೊಟ್ಟಿರುತ್ತೇವೆ.

ಕಾಯದೆ ಮತ್ತು ಶಾಂತತೆ-

ಮಹಾತ್ಮರ ಇತ್ತಲಾಗಿನ ವರ್ತನವು ಕಾಯದೆ ಮತ್ತು ಶಾಂತತೆಗೆ ಧಕ್ಕಿ ತರುವಂಥದ್ದಾಗಿರುತ್ತದೆಂದು ಸರಕಾರಕ್ಕೆ ಕಂಡು ಬಂದದ್ದರಿಂದ ಇವರನ್ನು ೧೮೨೭ನೆಯ ರೆಗ್ಯುಲೇಶನ ೨೫ ಪ್ರಕಾರ ಬಂಧನದಲ್ಲಿಟ್ಟಿದೆ. ಈ ಕಾಯದೆಯ ಮೇರೆಗೆ ಮಹಾತ್ಮರನ್ನು ಬೇಕಾದಷ್ಟು ಕಾಲ ಪರ್ಯಂತರ ಬಂಧನದಲ್ಲಿಡಲಿಕ್ಕೆ ಬರುತ್ತದೆ. ಪ್ರತಿಬಂಧದಲ್ಲಿರುವ ತನಕ ಇವರ ಸುಖ ಮತ್ತು ಅನುಕೂಲತೆಗಳ ದೆಸೆಯಿಂದ ಸರಕಾರವು ದಕ್ಷವಾಗಿರುವದು.

ಹಿಡಿಯಲಿಕ್ಕುಂಟಾದ ಕಾರಣ-

ಮಹಾತ್ಮರು ಕಾಯದೆಭಂಗದ ಚಳವಳಿಯ ಪುರಸ್ಕರ್ತರಾಗಿದ್ದಾರೆ. ಇವರ ಚಳವಳಿಯಿಂದ ಹಿಂದುಸ್ಥಾನದಲ್ಲಿ ಎಲ್ಲ ಜನರು ಸರಕಾರೀ ಕಾಯದೆಯನ್ನು ಮುರಿಯ ಹತ್ತಿದ್ದಾರೆ. ಅದ್ದರಿಂದ ಶಾಂತತೆಗೆ ಧಕ್ಕಿ ಒದಗಿದೆ. ಇದು ಅನಿಷ್ಟವಾದದ್ದಾಗಿರುತ್ತದೆಂದು ಅವರೂ ಇವರ ಅನುಯಾಯಿಗಳೂ ಹೇಳುತ್ತಿದ್ದರೂ, ಇದರಿಂದ ದಂಗೆ ಮತ್ತು ಗಲಾಟೆಗಳೇಳಲಾರಂಭಿಸಿವೆ ಮತ್ತು ಮಹಾತ್ಮರು ಇಂಥ ದಂಗೆಗಳ ನಿಷೇಧ ಮಾಡುವದನ್ನು ಕಡಿಮೆ ಮಾಡುತ್ತಿದ್ದಾರೆ ಮತ್ತು ಇವರಿಗೆ ತಮ್ಮ ಅನುಯಾಯಿಗಳ ಮೇಲೆ

ನಿಯಂತ್ರಣ ಮಾಡುವ-

ಸ್ವಾತಂತ್ರ್ಯವು ಇರಲಿಲ್ಲೆಂಬುದೂ ಸ್ಪಷ್ಟವಾಗಿರುತ್ತದೆ. ಈ ಮೂಲಕ ಶಾಂತತೆ ಮತ್ತು ಕಾಯದೆಗಳನ್ನು ನಿರ್ಬಂಧಪಡಿಸುವದು ಬಹು ಕಠಿಣವಾದ್ದರಿಂದ, ಇವರನ್ನು ೧೮೨೭ನೆಯ ರೆಗ್ಯುಲೇಶನ ಕಲಮಿನ ಪ್ರಕಾರ ಪ್ರತಿಬಂಧದಲ್ಲಿಡಲ್ಪಟ್ಟಿದೆ. ಗುಜರಾಥದಲ್ಲಿಯ

ಮಹಾತ್ಮರ ಗೌರವ ಪ್ರತಿಷ್ಠೆ-

ಯು ಒಡಕಲವಾಗಿರುವದು. ಅಮದಾಬಾದಿನಿಂದ ದಾಂಡಿಯ ತನಕ ಇವರು ಜೋಡಿಸಿದ ದಂಡಯಾತ್ರೆಯಿಂದ ಈ ಸಂಗತಿಯು ಸ್ಪಷ್ಟವಾಗುತ್ತದೆ. ಮತ್ತು ಖೇಡ ಮತ್ತು ಸೂರತ ಜಿಲ್ಹೆಗಳಲ್ಲಿ ಅವರ ಚಳವಳಿಯ ಪರಿಣಾಮವು ಕ್ಷಿಪ್ರವಾಗಿ ತೋರಿತು. ಇವರ ಚಳವಳಿಯಿಂದ ಜನರು ಸರಕಾರೀ ಕಾಮಗಾರರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿದ್ದರಿಂದ, ಗೌಡ ಕುಲಕರ್ಣಿಯವರಿಗೆ ಅನ್ನವಸ್ತ್ರ ದೊರೆಯುವದು

ಕಠಿಣವಾಯಿತು. ಈ ಬಿಕ್ಕಟ್ಟಿನ ಪರಿಸ್ಥಿತಿಯ ಮೂಲಕ ಅನೇಕರು ರಾಜೀನಾಮೆ ಕೊಟ್ಟರು. ಇದರಿಂದ ಸರಕಾರಕ್ಕೆ

ರಾಜ್ಯಕಾರಭಾರ-

ನಡಿಸುವದು ಕಠಿಣವಾಯಿತು. ಉಪ್ಪಿನ ಕಾಯದೆಭಂಗ, ಪರದೇಶಿ ಅರಿವೆಯ ಮೇಲಿನ ಬಹಿಷ್ಕಾರ ಇವುಗಳಿಂದ ಜನತೆಯ ಮೇಲೆ ಅಗತ್ಯಕ್ಕಷ್ಟು ಪರಿಣಾಮವಾಗಲಿಲ್ಲೆಂದು ಕಂಡುಬಂದದ್ದರಿಂದ, ಅವರು ರೈತರಿಗೆ

ಹಪ್ತೆ ಕೊಡಬೇಡಿರೆಂದು

ಉತ್ತೇಜನ ಕೊಡುವ ಉಪಕ್ರಮ ಮಾಡಿದರು. ಈ ಎಲ್ಲ ಪರಿಸ್ಥಿತಿಯ ವಿಚಾರಮಾಡಿ, ಸರಕಾರಕ್ಕೆ ಹಿಡಿಯುವ ಅಗತ್ಯವುಂಟಾಯಿತು. ಹಿಂದುಸ್ಥಾನ ಸರಕಾರದ ಒಪ್ಪಿಗೆಯನ್ನು ಪಡಕೊಂಡು ಹಿಂದುಸ್ಥಾನ ಸರಕಾರದವರು ಇವರನ್ನು ಪ್ರತಿಬಂಧಿಸಿದ್ದಾರೆ.

ಮೇಲಿನ ಪತ್ರದ ಅನುವಾದವನ್ನೇ ಅರ್ಲ ರಸೆಲಸಾಹೇಬರು ಪಾರ್ಲಿಮೆಂಟ ಸಭೆಯಲ್ಲಿ ಮಾಡಿದ್ದಾರೆ.

ಮಹಾತ್ಮರ ದಸ್ತಗಿರಿ.

ಹೇಗೆ ಹಿಡಿದರು?

—(೦)—

ಮಹಾತ್ಮರು ಕರಾಡಿಯಲ್ಲಿ ನಿಶ್ಚಿಂತರಾಗಿ ತಮ್ಮ ಆಶ್ರಮದಲ್ಲಿ ಮಂಚದ ಮೇಲೆ ಮಲಗಿದ್ದರು. ಆದಿತ್ಯವಾರದ ಮಧ್ಯರಾತ್ರಿಯಾದ ಕೂಡಲೆ, ಸೂರತದ ಪೋಲೀಸ ಸಾಹೇಬರು ೩೦ ಜನ ಸಿಪಾಯಿಗಳೊಂದಿಗೆ ಅಲ್ಲಿಗೆ ಹೋಗಿ, ಫ್ಲಾಶಲಾಯಿಟಿನ ಪ್ರಕಾಶ ಕೆಡವಿದರು. ಆಗ ಮಹಾತ್ಮರು ಎಚ್ಚರದಿಂದಿದ್ದರು. ಮಹಾತ್ಮರ ಮಂಚದ ಮೇಲೆ ಪ್ರಕಾಶ ಕೆಡವಿದ ಕೂಡಲೆ, ಸಿಪಾಯರು ಮಹಾತ್ಮರ ಮಂಚಕ್ಕೆ ಮುತ್ತಿಗೆ ಹಾಕಿದಂತೆ ಸುತ್ತಲು ನಿಂತರು. ಆಗ ಸ್ವಯಂಸೇವಕರೂ ಎಚ್ಚತ್ತರು. ಮಹಾತ್ಮರು ಪೋಲೀಸ ಸಾಹೇಬರಿಗೆ ಯಾವ ಆರೋಪದಿಂದ ಹಿಡಿದಿರುತ್ತೀರೆಂದು ಪ್ರಶ್ನೆ ಮಾಡಲು- ರೇಗ್ಯುಲೇಶನ ಆಕ್ಟದ ಪ್ರಕಾರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ವಾರಂಟು ತೋರಿಸಿದರು. ಕೂಡಲೆ ಮಹಾತ್ಮರು ತಮ್ಮ ಗವಳ್ಯಾದ ಖರೆ ನಾರಾಯಣಬುವಾನನ್ನು ಕರಿಸಿ, ಆತನಿಂದ ಹಿಂದೇಡು ದೇವತಾ ಸ್ತೋತ್ರಗಳನ್ನು ಅನಿಸಿದರು. ಬಳಿಕ ಸ್ವಯಂಸೇವಕರು ಇವರಿಗೆ ನಮಸ್ಕಾರ ಮಾಡಿದರು. ನಿಮ್ಮ ಪತ್ನಿಯವರಿಗೆ ಏನಾದರೂ ಹೇಳುವದುಂಟೇನು? ಕೇಳಲು- ಅವಳು ವೀರಯುವತಿಯಾಗಿದ್ದಾಳೆ. ನಿರೋಪದ ಅಗತ್ಯವಿಲ್ಲೆಂದರು. ಬಳಿಕ ಹಜ್ಞಾಯಿಸರಾಯರ ದೆಸೆಯಿಂದ ಬರೆದಿದ್ದ ಮೊದಲನೇ ಪತ್ರ ಮತ್ತು ಬೇರೆ ಕಾಗದ ಪತ್ರಗಳನ್ನು ಸ್ವಯಂಸೇವಕರ ವಶ ಮಾಡಿ, ಪೋಲೀಸರ ಕೂಡ ಹೊರಟರು. ಅಲ್ಲಿಂದ ಇವರನ್ನು ರೇಲ್ವೆಗೆ ತಂದು ಸ್ಪೆಶಲ್ಲಿನಲ್ಲಿ ಕೂಡಿಸಿದರು. ಮುಂಬಯಿಯ ಪತ್ರಂಸೇ ಇಳಿಸಿಕೊಂಡು, ಬಹು ವೇಗವುಳ್ಳ ಮೋಟಾರದಲ್ಲಿ ಕೂಡ್ರಿಸಿಕೊಂಡು, ಬ್ರಿಟಿಶ ಪಾಟೀಯಿಂದ ಯರವಡೆಯ ತುರಂಗಕ್ಕೆ ಕರತಂದರು. ತಮ್ಮ ಕೂಡ ಸೌಜನ್ಯದಿಂದ ನಡೆದ ಬಗ್ಗೆ ಮಹಾತ್ಮರು ಪೋಲೀಸರ ಪ್ರಶಂಸೆ ಮಾಡಿದ ಪತ್ರವನ್ನು ಮುಂಬಯಿ ಸರಕಾರಕ್ಕೆ ಬರೆದಿದ್ದು, ಇವರ ಆರೋಗ್ಯ ಮತ್ತು ಸುಖಸೋಯಿಗಳ ವಿಷಯವಾಗಿ ದಕ್ಷತೆ ತಕ್ಕೊಳ್ಳುವೆವೆಂದು ಮುಂಬಯಿ ಸರಕಾರದವರೂ ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ. ಕರಾಡಿಯಿಂದ ಯರವಡೆಗೆ ಬರುವತನಕ ಇವರ ಸಂಗಡ ಒಬ್ಬ ಸಿವ್ಹಿಲಸರ್ಜನರಿದ್ದನು.

ಮಹಾತ್ಮರನ್ನು ಹಿಡಿದ ಕಾಯದೆಯಿಂದ ಸರಕಾರವು ಇವರನ್ನು ತನ್ನ ಮನಸ್ಸಿಗೆ ಬರುವ ತನಕ ಬೇಕಾದಷ್ಟು ತಿಂಗಳು, ಬೇಕಾದಷ್ಟು ವರ್ಷ ತುರಂಗದಲ್ಲಿಡಬಹುದಾಗಿರುತ್ತದೆ.

ಮೊದಲೇ ಗೊತ್ತಾದ ಮೇರೆಗೆ ಬಡೋದೆಯ ಜಡ್ಜರಾಗಿದ್ದ ವಯೋವೃದ್ಧ ಗೃಹಸ್ಥರಾದ ಮಿ. ಅಬ್ಬಾಸ ತಯಾಬಜಿಯವರು ಮಹಾತ್ಮರ ಸ್ಥಳವನ್ನಾಕ್ರಮಿಸುವರು.

ಹಾವೇರಿ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ.

ಹಾವೇರಿ ಮ್ಯುನಿಸಿಪಾಲಿಟಿಯಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚಬೇಕೆಂದು ಸರ್ವಾನುಮತದಿಂದ ಪಾಸಾಯಿತು. ಆ ಪ್ರಕಾರ ಶನಿವಾರ ದಿವಸ ಈ ನಿಶಾನೆ ಹಚ್ಚುವ ಸಮಾರಂಭವು ಬಹು ಉತ್ಸಾಹದಿಂದ ನೆರವೇರಿತು. ಮೊದಲು ಬ್ಯಾಂಡ ಬಾಜಾದ ವಾದ್ಯಗಳೊಂದಿಗೆ ನಿಶಾನೆಯನ್ನು ಊರ ತುಂಬ ಮೆರಿಸಿ ಮ್ಯುನಿಸಿಪಾಲಿಟಿಗೆ ತಂದು, ಅಲ್ಲಿ ಅದನ್ನೇರಿಸುವ ಸಮಾರಂಭ ಜರುಗಿಸಿದರು. ಈ ವಿಷಯವಾಗಿ ಮೂರು ಪತ್ರಗಳು ಬಂದಿದ್ದು ಅವನ್ನು ಸ್ಥಳ ಸಂಕೋಚದ ಮೂಲಕ ಪ್ರಸಿದ್ಧ ಮಾಡಲಿಕ್ಕಾಗುವದಿಲ್ಲೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಮಹಾತ್ಮರನ್ನು ಹಿಡಿಯುವ ಪೂರ್ವಸಿದ್ಧತೆ.

ದೇಶದ ತುಂಬ ಪೋಲೀಸ ಮತ್ತು ದಂಡಿನ ಬಂದೋಬಸ್ತು.

ಇಂಗ್ರೇಜಿ ಸರಕಾರದವರು ಮಹಾತ್ಮರನ್ನು ಹಿಡಿಯುವ ಮುಂಚೆ ದೇಶದ ತುಂಬ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪೋಲೀಸ ಮತ್ತು ದಂಡಿನ ಫಡ್ಡ್ರೀವಾಯಿಗಳನ್ನು ಕೈಕೊಂಡಿದ್ದರು. ಈ ಉಪಾಯಗಳಿಂದ ಮಹಾತ್ಮರನ್ನು ಹಿಡಿಯುವರೆಂದು ಮುಂದಾಗಿ ಜನರಿಗೆ ತಿಳಿದು ಹೋಗಿತ್ತು. ಧಾರವಾಡದಲ್ಲೇ ಒಂದು ಕುದುರೆಗಳ ತುಕಡಿಯಿತ್ತು- ಅಂದು ರಾತ್ರಿ ಕಾಲದಲ್ಲಿ ಊರೊಳಗೆ ಹಾಲ ಬೋಳೆ ಬಂದವು. ಮತ್ತು ಕೆಲ ದಂಡಿನ ಪೋಲೀಸರ ಮೆರವಣಿಗೆ ಹೊರಟಿತು. ಕಚೇರಿಗಳ ಹತ್ತಿರ ಜನರ ಲವಲವಿತ್ತು. ಕಲೆಕ್ಟರ ಸಾಹೇಬರ ಬಂಗ್ಲೆಯ ಹತ್ತಿರ ಸಶಸ್ತ್ರ ಸಿಪಾಯಿಗಳು ನಿಂತಿದ್ದರು. ಇದನ್ನು ಕಂಡು, ಮಹಾತ್ಮರನ್ನು ಹಿಡಿಯುವರೆಂದು ಎರಡು ದಿವಸಗಳಿಂದ ಹುಟ್ಟಿದ ಸುದ್ದಿಯು ಇಂದು ನಿಜವಾಗುವದೆಂದು ಜನರಿಗೆ ಅನಿಸಿತು. ಅದು ಮಧ್ಯಾಹ್ನದಲ್ಲಿ ತಾರು ಬಂದು ನಿಜ ಮಾಯಿತು. ಧಾರವಾಡಕ್ಕಿಂತ ಹಿರಿದಾದ ಬಂದೋಬಸ್ತು ದೇಶದ ತುಂಬ ಆಗಿತ್ತು. ಮುಖ್ಯ ಸ್ಥಳದಲ್ಲಿ ಮಶೀನಗನ್ನುಗಳನ್ನಿಟ್ಟಿದ್ದರು. ಮುಂಬಯಿಗೆ ಮುಂದಾಗಿ ಸೋಲ್ಜರ ದಂಡು ತಂದಿದ್ದರು. ಇದನ್ನು ಕೂಡ ಊಟಿಗೆ ನಿಲ್ಲಿಸಿದ್ದರಲ್ಲದೆ, ಒಂದು ದಂಡವನ್ನು ಕಾಂಗ್ರೆಸ ಕಚೇರಿಯ ಹತ್ತಿರವೇ ಇಟ್ಟಿದ್ದರು. ಪ್ರತಿಯೊಂದು ಕಾರ- ಟೆಲಿಫೋನು ಮುಂತಾದ ಮಹತ್ವದ ಸ್ಥಳಗಳು ಸೈನಿಕರ ಪಹರೆಯಿಂದ ಪರಿಪಾಲನವಾಗಿ ತೋರುತ್ತಿದ್ದವು. ... ರಾತ್ರಿ ಮಾಡಿ, ದಂಗೆಗಾರ ಮತ್ತು ರಾಜದ್ರೋಹಿಗಳೆನಿಸುವಂಥ ಎಲ್ಲ ಜನರನ್ನು ಹಿಡಿದರು. ಕರಾಚಿಯಲ್ಲಿ ಬಂದೋಬಸ್ತು ಮಾತ್ರವಲ್ಲ. ಬಂದೂಕು ಮತ್ತು ಕಾಡತೂಸು ಮಾರುವ ಅಂಗಡಿಗಳೊಳಗಿನ ಎಲ್ಲ ಬಂದೂಕು ಮತ್ತು ಕಾಡತೂಸುಗಳನ್ನು ವಶ ಮಾಡಿ, ಅವನ್ನು ಸುರಕ್ಷಿತ ಸ್ಥಳಕ್ಕೆ ಒಯ್ದಿಟ್ಟರು. ಸರಕಾರದ ಬಂದೋಬಸ್ತಿನ ಇಂಥ ಹಲವು ಸಂಗತಿಗಳು ಆಯಾ ಪಟ್ಟಣದ ಪರಿಸ್ಥಿತಿಯ ಪ್ರಕಾರ ನಡೆದವು.

ತಾವು ಮಹಾತ್ಮರನ್ನು ಹಿಡಿಯಲಿಕ್ಕಿಲ್ಲ, ಬಿಡುವೆವೆಂದು ತೋರುವಂತೆ ಆ ದಿನ ಉಪಾಯವು ಕೈಕೊಂಡಿದ್ದರು. ಏಕೆಂದರೆ ರಾತ್ರಿ ಹಿಡಿದರು. ಬೆಳಗಾದ ಕೂಡಲೆ ಅಲ್ಲಲ್ಲಿ ಪೋಲೀಸ ದೃಶ್ಯ ಕಂಡಿತು. ಅವರನ್ನು ಹೇಗೆ ಹಿಡಿಯುವರೆಂಬುದನ್ನು ಮೊದಲೇ ಗುಪ್ತವಿಟ್ಟಿದ್ದರು. ಅದರ ಸಲುವಾಗಿ ಮತ್ತು ಕಾರ್ಯಕ್ರಮವನ್ನು ಗೊತ್ತು ಮಾಡಿದ್ದರು. ಹಿಡಿಯುವ ಅಧಿಕಾರ, ಕಾರಬಾರ ಮತ್ತು ವಾರ ಪತ್ರಗಾರಿಕೆಯು ಇದ್ದವು. ಈ ಸಾಹೇಬರು ಇಂಗ್ರೇಜಿ ಪತ್ರಕಾರರ ಪ್ರತಿನಿಧಿಗಳಿಗೆ ಸಹಾಯ ಮತ್ತು ಕಾರ್ಯಕ್ರಮವನ್ನು ಮುಂದಾಗಿ ತೋರಿಸಿದ್ದರು. ಇಂಗ್ರೇಜಿ ಜನರಂತೆ ಹಿಂದೂ ಅಥವಾ ಮುಸಲಮಾನ ಪತ್ರಕಾರರಿಗೆ ಇದರ ಸುಳಿವು ಸುದ್ದಿ ತಿಳಿಯಗೊಡಲಿಲ್ಲ. ಸಹಕಾರವೆಂದು ಬಿಸಬ್ಬೆಗೊಡುವಂಥವರು ಇದ್ದಾದರೂ ಬುದ್ಧಿಗಲಿಯುವಂಥ ಮಾತು.

ಸರಕಾರದವರು ಮಹಾತ್ಮರನ್ನು ಹಿಡಿಯುವಂತೆ ಬಂದೋಬಸ್ತು ಮಾಡುವಾಗ ಜನರನ್ನು ಹಿಡಿಯುವಾಗ ೩೩ ಕೋಟಿ ಜನರ ಹೃದಯದ ಬಂದೋಬಸ್ತು ಮಾಡುವ ವಿಚಾರ ಮಾಡಲಿಲ್ಲ. ಮಹಾತ್ಮರನ್ನು ಹಿಡಿದರೆ ಚಳವಳಿಯು ನಿಲ್ಲುವದೆಂದು ಇವರ ಗ್ರಹಿಕೆಯು. ಅದು ಪೂರಾ ಸುಳ್ಳಾಗಿರುವಂತೆ ಅಂದೇ ಸಾಯಂಕಾಲದಲ್ಲಿ ಪ್ರತಿಯೊಂದು ಪಟ್ಟಣ ಹಳ್ಳಿಯಲ್ಲಾದ ಹರತಾಳ ಮತ್ತು ಮೆರವಣಿಗೆಗಳಿಂದ ಸ್ಪಷ್ಟವಾಗುತ್ತದೆ. ಹಿಂದುಸ್ಥಾನದ ಜನರಿಗೆ ಬೇಕಾಗುವಂಥ ಸ್ವರಾಜ್ಯ ದೊರೆತ ಹೊರತು ಈ ಬೇಗೆಯು ಆರಲಾರದು. ಉಪ್ಪಿನ ಕಾಯದೆಭಂಗದಲ್ಲಿ ಸರಕಾರವು ಸೋತಿತೆಂದು ಡಂಗುರ ಸಾರಿದಂತಾಗಿರುತ್ತದೆ. ದಿನಾಲು ಲಕ್ಷಾವಧಿ ಜನರು ಕಾಯದೆಭಂಗ ಮಾಡುತ್ತಾರೆ. ಅವರನ್ನು ಹಿಡಿಯದೆ, ಎಲ್ಲಿಯೋ ಒಬ್ಬಿಬ್ಬರನ್ನು ಹಿಡಿಯುವರು. ಮಳೆಗಾಲ ಪ್ರಾರಂಭವಾದನಂತರ ಉಪ್ಪು ಮಾಡುವದು ಹಿಂದೆ ಬಿದ್ದರೆ, ವಿಲಾಯತಿ ಬಟ್ಟೆಯ ಬಹಿಷ್ಕಾರವು ಬ್ರಿಟಿಶ ಜನಾಂಗದ ಎದೆಯ ಮೇಲೆ ಎಳೆಯ ತನಿಯಂತೆ ಕೂಡ್ರುವದು. ೧೧ ನೆಯ ತಾರೀಖಿನ ದಿವಸ ಹಿಂದುಸ್ಥಾನದ ತುಂಬ ವಿಲಾಯತಿಯ ಬಟ್ಟೆಗೆ ಹೋಳಿಯಾಗತಕ್ಕದ್ದುಂಟು ನಿಶ್ಚಿತವಾಗಿದೆ. ಈ ಹೋಳಿಯ ಕೂಡ ಅದರ ವ್ಯಾಪಾರವು ತಗ್ಗಿ, ಮ್ಯಾಂಚೆಸ್ಟರದ ಲಕ್ಷಾವಧಿ ಕೂಲಿಕಾರರ ಹಾಗು ಇವರ ಮೇಲೆ ಉಪಜೀವಿಸುವ ಲಕ್ಷಾವಧಿ ಜನರ ಹೊಟ್ಟೆಯ ಮೇಲೆ ಕಾಲು ಬರುವದೆಂಬುದನ್ನು ರಾಜ್ಯಕರ್ತರು ಮುಂಚಿತವಾಗಿ ತಿಳಿದು, ಕಾಂಗ್ರೆಸದ ಕೂಡ ರಾಜಿಯಾಗುವ ಉಪಾಯ ತೆಗೆಬೇಕು. ಮಹಾಳ ಫಾಸಿ ಅಥವಾ ಕ್ರಿಸ್ತನನ್ನು ಸಂಪಿ ನಡೆದರೆ ಮುಳುಗುವವನು ಕೈಗೆ ಹತ್ತಿದ ಕಡ್ಡಿಯು ತನ್ನ ದಡ ಸೇರಿಸುವದೆಂಬ ಆಶೆ ಮಾಡಿದಂತಾಗುತ್ತದೆ

ತುರಂಗದಲ್ಲಿ ಕಾಲಿಡುವಾಗ ಮಹಾತ್ಮರು ಹಿಂದುಸ್ಥಾನಕ್ಕೆ ಹೇಳಿದ ಸಂದೇಶವು.

ನನ್ನನ್ನು ಹಿಡಿದರೆ ಸರಕಾರಿಗಳು ಅಥವಾ ಜನತೆಯು ಹೆದರುವ ಕಾರಣವಿಲ್ಲ. ಈ ಯುದ್ಧ ನಡಿಸುವವನು ನಾನಲ್ಲ; ಪರಮೇಶ್ವರನಾಗಿದ್ದಾನೆ. ಅವನು ಎಲ್ಲರ ಹೃದಯದಲ್ಲಿಯೂ ವಾಸವಾಗಿರುತ್ತಾನೆ. ನಮ್ಮಲ್ಲಿ ಶ್ರದ್ಧೆಯಿದ್ದರೆ- ಆತನು ನಮ್ಮ ಸಹಾಯಕ್ಕೆ ಧಾವಿಸಿ ಬರುವನು. ನಮ್ಮ ಮಾರ್ಗವು ಹೊಡೆದಿಟ್ಟದ್ದಿರುತ್ತದೆ. ಉಪ್ಪು ಮಾಡಲಿಕ್ಕೆ ಅಥವಾ ಅದನ್ನು ಎತ್ತಿಕೊಂಡು ಹೋಗುವದಕ್ಕೆ ಬಾರಿಗೆ ಊರೇ ಮುಂದೊರೆದು ಒಯ್ಯುತ್ತದೆ. ಹೆಣ್ಣುಮಕ್ಕಳು ಗಡಂಗು, ವಿಲಾಯತಿ ಅರಿವೆ ಮತ್ತು ಅಫೀಮ ಅಂಗಡಿಗಳಿಗೆ ಮುತ್ತಿಗೆ ಹಾಕಬೇಕು. ಮತ್ತು ಕಾರ್ಯ ಸಿದ್ಧಿ ಮಾಡಬೇಕು. ಮನೆ ಮನೆಗೆ ಚಿಕ್ಕ ದೊಡ್ಡ ರಾಟಿಗಳನ್ನು ನಡೆಸಬೇಕು. ಪರದೇಶೀ ಬಟ್ಟೆಯ ಹೋಳಿ ಮಾಡಬೇಕು. ಹಿಂದೂ ಜನರು ಯಾರನ್ನೂ ಅಸ್ಪೃಶ್ಯರಾಗಿ ತಿಳಿಯಕೂಡದು. ಹಿಂದೂ, ಮುಸಲಮಾನ, ಶೀಖ, ಪಾರ್ಸಿ, ಕ್ರಿಸ್ತಿ ಮೊದಲಾದವರೆಲ್ಲರೂ ಒಟ್ಟುಗೂಡಿರು. ಹೃತ್ಪೂರ್ವಕ ಭೆಟ್ಟಿಯಾಗಬೇಕು. ಸಣ್ಣ ಜಾತಿಯವರು ಉಳಿದವರಲ್ಲಿ ದೊಡ್ಡ ಜಾತಿಯವರು ಸಂತೋಷ ಪಡಬೇಕು. ವಿದ್ಯಾರ್ಥಿಗಳು ಸರಕಾರೀ ಶಾಲೆಗೆ ಹೋಗುವದನ್ನು ಬಿಡಬೇಕು. ರಾಜೀನಾಮೆ ಕೊಟ್ಟಂಥ ಅಧಿಕಾರಿಗಳ ಗೌರವ ಅನುಕರಣ ಮಾಡಿ, ಉಳಿದವರು ರಾಜೀನಾಮೆ ಕೊಟ್ಟು ಲೋಕಸೇವೆಯಲ್ಲಿ ತೊಡಗಬೇಕು. ಅಂದರೆ ನಿಮಗೆ ಮನೆಯಲ್ಲಿ ಕೂತಲ್ಲಿಯೇ ಪೂರ್ಣ ಸ್ವರಾಜ್ಯ ದೊರೆಯುವದು.

ಬಾರಡೋಲಿಯವರ ಠರಾವು.

ಹಪ್ತೆ ಕೊಡಬಾರದ ; ಗ್ರಾಮಸ್ಥರು ರಾಜೀನಾಮೆ ಕೊಡಬೇಕು

ಮಹಾತ್ಮರನ್ನು ಬಂಧಮುಕ್ತ ಮಾಡುವತನಕ ಅಥವಾ ಅಧ್ಯಕ್ಷ ಪಟೇಲರು ಹೇಳುವತನಕ ರೈತರು ಹಪ್ತೆ ಕೊಡಬಾರದು. ಮತ್ತು ರಾಜೀನಾಮೆ ಕೊಡದ ಗ್ರಾಮಸ್ಥರು ರಾಜೀನಾಮೆ ಕೊಡಬೇಕು. ಇಲ್ಲವಾದರೆ ಅವರಿಗೆ ಬಹಿಷ್ಕಾರ ಹಾಕಬೇಕೆಂದು ಬಾರಡೋಲಿ ತಾಲೂಕಿನವರು ಠರಾವು ಮಾಡಿದ್ದಾರೆ.

ಸರದಾರ ಪಟೇಲರನ್ನು ಬೆಳಗಾವಿಯ ಹಿಂಡಲಗಿಯ ತುರಂಗಕ್ಕೆ ತರತಂದಿರುತ್ತಾರೆಂದು ವರ್ತಮಾನವುಂಟು.

ಶ್ರೀ. ನರಿಮನ್ನರು ಬಂಧಮುಕ್ತರಾದರ ಕೂಡಲೆ ಕಾಂಗ್ರೆಸ ಸೇರಿದರು. ಬೆಳಗಾವಿಯ ಶ್ರೀ ಜೋಶಿ ನಾರಾಯಣರಾಯರ ವಿಚಾರವೇನು?

ವಿಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕುವ ಕಾರ್ಯವನ್ನು ಸಿದ್ಧಿಗೊಯ್ಯಲು ಪುಣೆಯಲ್ಲಿ ಒಂದು ಸಾವಿರ ಸ್ವಯಂಸೇವಕರನ್ನು ಮನೆಮನೆಗೆ ಹೋಗಿ ಉಪದೇಶ ಮಾಡಲಿಕ್ಕೆ ನೇಮಿಸುವರು.

ನವಸಾರಿಯಲ್ಲಿ ಮಹಾತ್ಮರನ್ನು ಹಿಡಿದ ಬಳಿಕ ಅವರ ಪತ್ನಿ ಶ್ರೀ ಕಸ್ತೂರಿಬಾಯಿಯವರ ನೇತೃತ್ವದಲ್ಲಿಯೇ ಪ್ರಚಂಡ ಮೆರವಣಿಗೆ ಹೊರಟಿತ್ತು.

ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ
ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವು.

ಧಾರವಾಡ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸುವ ಸಮಾರಂಭವು ಬಹು ಸಡಗರದಿಂದ ನೆರವೇರಿತೆಂದು ಬರೆಯುವದಕ್ಕೆ ಸಂತೋಷ ವಾಗುತ್ತದೆ. [illegible]

ರಾಷ್ಟ್ರೀಯ ನಿಶಾನೆಯ ಮೆರವಣಿಗೆ.

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ರಾಷ್ಟ್ರೀಯ ನಿಶಾನೆಯನ್ನು ಹಚ್ಚಬೇಕೆಂಬ ಠರಾವು [illegible]

ಕೌನ್ಸಿಲಕ್ಕೆ ಶ್ರೀ. ಜೋಗ ವಿಶ್ವನಾಥ ರಾಯರ ರಾಜೀನಾಮೆ.

[illegible]

ಪಂಡಿತಪ್ಪಾ ಚಿಕ್ಕೋಡಿಯವರ ಲಿಂಗಾಯತಾಭಿಮಾನ.

ಶ್ರೀ. ಪಂಡಿತಪ್ಪ ಚಿಕ್ಕೋಡಿಯವರು ರಾಷ್ಟ್ರೀಯರಾಗಿದ್ದರೂ, ಉದಾರ ಪಕ್ಷದವರಾಗಿದ್ದಾರೆಂದು ಜನರಿಗೆ ಗೊತ್ತು. [illegible]

ಹೆಣ್ಣುಮಕ್ಕಳ ಮುಲಕೀ ಪರೀಕ್ಷೆಯ ಪರಿಣಾಮವು.

ಧಾರವಾಡ ಸೆಂಟರ

[illegible]

ಶ್ರೀ. ಮೋಹರೆ ಹನುಮಂತರಾಯರಿಗೆ ಶಿಕ್ಷೆ.

[illegible]

[illegible] ಬಾಗದ ಕೊಠಡಿ

ಬೆಳಗಾವಿಯಲ್ಲಿ [illegible]

ಬ್ರಹ್ಮದೇಶದಲ್ಲಿ ಧರತಿಕಂಪ

ರಂಗೂನದಲ್ಲಿ ಧರ್ಮಶಾಲೆ ಬಿದ್ದು [illegible] ಜನರು ಸತ್ತರು.

[illegible]

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮಣ್ಣ ಕಂಪನಿ ಲಿಮಿಟೆಡ್-

ಎಂಬ ವ್ಯಾಪಾರದ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಈ ವರ್ಷ ಕಂಪನಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ದಕ್ಷಿಣ ದೊಡ್ಡ ಅನುಭವದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ಮಾಡಲ್ಪಡುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಶೃಂಗಾರಕಿ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ದಾರದಾನ, ಕಾಲಿಚೀಲ, ಹತ್ತಿಕಾಳು, ಚಿಮಣಿಎಣ್ಣಿ ಕಿರಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಖರೀದಿಸಿರಿಂದ ಕೊಂಡುಕೊಳ್ಳಬೇಕಾಗಿ ವಿನಂತಿಯು. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತಿಕಾಳು, ಹುರುಳಿ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತನಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟ ರೀತಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಲ್ಪಟ್ಟ ಯೋಗ್ಯದರದಿಂದ ಖರೀದಿಮಾಡುವದರಲ್ಲಿ ಬರುವದು ಈ ಸುಸಂಧಿಯನ್ನು ವ್ಯರ್ಥಕಳೆದುಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಗೋದಿ, ಜೋಳ, ಶೇಂಗಾ ವಗೈರೆ ಮಾಲು ಮತ್ತು ಕರಹದ ನಾಲಗನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರ ಲಕ್ಷ್ಯವು ಕೊಡಬೇಕೆಂದೂ ಮತ್ತು ಲಾಭ-ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ.

ತಮ್ಮ

ಗದಗ.

ರಾ. ಸಾ. ಲಿಂಗನಗೌಡಾ ಪಾಟೀಲ, ಚೀರಮನ್.

ಅಂಗಡಿ ನಂ ೧೭೩

ಲಕ್ಷ್ಮಣಪ್ಪಾ ಗೋಕಾವಿ, ಸಾಹುಕಾರ ಮೈದೂರ ಡಾಯರೆಕ್ಟರ

ಕಾಟನ್ ಮಾರ್ಕೆಟ ರೋಡ

ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ವಕೀಲ

ಹನಮರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ ಧಾರವಾಡ

ಸೂಚನೆ:— ಮಾಲು ಇಳಿಸುವಲ್ಲಿ ಮಾಲಿನ ಮೇಲೆ ೭೫ ಟಕ್ಕೆಕ್ಕಿಂತ ಹೆಚ್ಚಿಲ್ಲದಷ್ಟು ರಕಮು ಅಗಾವು ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ ಮೀರದಷ್ಟು ಬಡ್ಡೀ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ವ್ಯಾಪಾರದಲ್ಲಿ ಖಾಸಗಿ ರಿಸ್ಕ ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಖಲಾಸಿ ಬಿಲಾಪು ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಖಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ.

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಬಡತನ, ಅಜ್ಞಾನ, ಅನಾನುಕೂಲತೆ ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು.

ಮೆಂಬರರು

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ ಬೆಳಗಾವಿ, ಕಾರವಾರ ಹಾಗೂ ಶೋಲಾಪೂರ ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ಫೀಸಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು– ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ದೇಣಿಗೆಯನ್ನು ಕೊಡುವಂಥವರು,

ದಾತೃಗಳು, ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಆಜೀವ ಸಭಾಸದರು– ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು,

ಸಾಧಾರಣ ಸಭಾಸದರು– ಮುವವರು, ಕೆಳ– ೧ ನೇ ತರಗತಿ– ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ

೨ ನೇ ತರಗತಿ– ಕನಿಷ್ಠ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.

೩ ನೇ ತರಗತಿ– ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.

೪ ನೇ ತರಗತಿ– ಕನಿಷ್ಠ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಕರುಣಾಳುಗಳು, ಬಂಧು-ಭಗಿನಿಯರು ಆದಷ್ಟುಶೀಘ್ರ ಸಂಘದ ಮೆಂಬರರಾಗಬೇಕೆಂದು ಒಬ್ಬೇ ಆಗ್ರಹದ ವಿನಂತಿಯು.

ದ್ಯಾವನಗೌಡ ಲಿಂಗನಗೌಡ ಪಾಟೀಲ,

ಬಿ. ಎ. ಎಲ್‌ಎಲ್. ಬಿ ಹಾಯಕೋರ್ಟ ವಕೀಲ, ಧಾರವಾಡ

ಸೆಕ್ರೆಟರಿ.

ಛತ್ರ ತಿಂಗಳು ಈ ಪತ್ರದ ವರ್ಗಣಿದಾರರಿಗೆ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೆಡಿಯಂ ಲಿವ್ಹರ ವಾಚು

ಈಗ

ಮೊದಲಿನ ಕಿಮ್ಮತ್ತು. ರೂ. ೧೫



ಕೊಡುವ ಕಿಮ್ಮತ್ತು. ರೂ. ೭॥

ಇವುಗಳ ಕಿಮ್ಮತ್ತಿನ ಕಿಮಾಯು ೬. ೩. ಬೇರೆ

ಒಮ್ಮೆಲೇ ೩ ವಾಚ ತರಿಸಿದರೆ. ೬॥ ಖ, ಮಾಫ. ಒಮ್ಮೆಲೇ ೬ ವಾಚ ತರಿಸಿದರೆ ೧ ವಾಚ ಬಿಟ್ಟಿ. ಇವುಗಳಿಗೆ ಗ್ಯಾರೆಂಟಿ ೫ ವರ್ಷ ಕೊಡುವೆವು. ಈ ವಾಚುಗಳು, ಸಿಲೆಂಡರ ಅಲ್ಲ, ಲಿವ್ಹರ ಇರುವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ.

ಬಂದವಾದ ಮುದ್ರಣ. ಶ್ರೀ ವಿದ್ಯಾರಣ್ಯ ಪುಸ್ತಕಮಾಲೆಯ ಕುಸುಮ ೬. ೭. ಅಪೂರ್ವ ಭಾವಚಿತ್ರಗಳ

ಕನ್ನಡ ನಾಡಿನ ಇತಿಹಾಸವು! ಸ್ಫೂರ್ತಿದಾಯಕ!! ಸಿದ್ಧವಾಗುತ್ತಲಿದೆ!!!

ಕರ್ನಾಟಕ ಸಾಮ್ರಾಜ್ಯ ಸ. ೨

ಲೇಖಕರು— ರಾ. ಹ. ದೇಶಪಾಂಡೆ ಎಂ. ಎ.

ಈ ಗ್ರಂಥವು ಕ್ರಿ. ಶ. ೬೫೭ ರಿಂದ ೧೧೮೯ ರ ವರೆಗಿನ ಇತಿಹಾಸವನ್ನೊಳಗೊಂಡಿದ್ದು ಈಗ ಬೆಂಗಳೂರು ಮುದ್ರಾಲಯದಲ್ಲಿ ಅಚ್ಚಾಗುತ್ತಲಿದೆ. ಇದು ೧ನೆಯ ಸಂಪುಟಕ್ಕಿಂತ ಸುಮಾರು ೧೦೦ ಪುಟಗಳಿಂದ ದೊಡ್ಡದಾಗಬಹುದು. ಇದರ ೧ ನೆಯ ಭಾಗದಲ್ಲಿ ರಾಷ್ಟ್ರಕೂಟರ ಅಥವಾ ನಾಡುಗಳ ವರ್ಣನೆಯೂ ೨ ನೆಯ ಭಾಗದಲ್ಲಿ ಕಲ್ಯಾಣದ ಚಾಲುಕ್ಯರ ವರ್ಣನೆಯೂ ಸ್ವಯಂಸ್ಫೂರ್ತಿದಾಯಕವಾಗಿದ್ದರೂ ಬರಹಗಾರರ ಕನ್ನಡ ನುಡಿನಾಡಿನ ಅಭಿಮಾನದಿಂದ ಇಮ್ಮಡಿ ಮಹತ್ವವನ್ನು ಹೊಂದಿರುವದು. ಇದು ಕನ್ನಡ ನಾಡಿನ ವಿಷಯವಾಗಿ ಇಲ್ಲಿವರೆಗೂ ತಿಳಿದುಬಂದಿರುವ ವಿಷಯಗಳನ್ನೆಲ್ಲ ಒಳಗೊಂಡು ಅತಿ ಸಂಕ್ಷೇಪವಾಗಿಯಾಗಲಿ ಅತಿ ದೀರ್ಘವಾಗಿಯಾಗಲಿ ಇರದೆ ಸ್ವಯಮಧುರವಾಗಿಯೂ ಹೃದಯಂಗಮವಾಗಿಯೂ ಇರುವ ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ.

ಈ ಗ್ರಂಥವನ್ನು ಬಯಸುವವರು ೧ ರೂ. ಪ್ರವೇಶ ಫೀಯನ್ನು ಕೊಟ್ಟು ಮಾಲೆಯ ಚಂದಾದಾರರಾದರೆ ಅವರಿಗೆ ಈ ಸಂಪುಟವನ್ನು ೧ ರೂ. ೧೨ ಆ. ಗೆ ಕೊಡುವೆವು. ಅಂಚೇ ವೆಚ್ಚ ಬೇರೆ. ಮಾರ್ಚ ತಿಂಗಳ ಕೊನೆಯವರೆಗೆ ಮುಂಗಡ ೨ ರೂ. ೪ ಆ. ಕಳಿಸುವವರಿಗೆ ಟಪಾಲು ಹಾಸಲ ಬೀಳುವದಿಲ್ಲ. ಸ್ವಲ್ಪೇ ಪ್ರತಿಗಳನ್ನು ತೆಗೆಸುವದರಿಂದ ಗ್ರಾಹಕರು ತ್ವರೆಮಾಡತಕ್ಕದ್ದು.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯದೆ ಸಹ) ನಕಾಶ ಚಿತ್ರಗಳೂ ಬರವಣಿ ಸಾಮಾನುಗಳೂ ಅಗ್ಗವಾಗಿ ದೊರೆಯುವವು. ಪಟಿಪಟ್ಟಿ ಬೇಕಾದವರು ೪ ಆಣೆ. ಅಂಚೆ ಟಿಕೀಟುಗಳನ್ನು ಕಳಿಸತಕ್ಕದ್ದು.

ವ್ಯವಸ್ಥಾಪಕರು,

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.

ಮಾಳಮಡ್ಡಿ, ಧಾರವಾಡ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ — ಮುಂಜಾನೆ ೧೧ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೧ ರಿಂದ ೧ ರ ವರೆಗೆ.

ಚಾಲೂ ಖಾತೆಗಳು — ಪ್ರತ್ಯೇಕವಾಗಿ ತೆರೆಯಲ್ಪಡುವವು

ಸೇವಿಂಗ್ಸ ಬ್ಯಾಂಕು — ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩ ರೂ.

ಮುದತಿ ಠೇವುಗಳು — ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ.

ದೇಣಿ— ಬಂಗಾರ ದಾಗಿನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಬಡ್ಡೀ ದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ಸಿಕ್ಯೂರಿಟಿ ಕಂಪನಿಯ ಶೇರುಗಳ ಖರೀದಿ ವಿಕ್ರೀ ಮಾಡಿ ಆಯಾ ಖಾತೆ ... ಹಿಡಿಯುವದರಲ್ಲಿಯೂ ಅಥವಾ ಕೆಳಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಯಿಗಳಿಗೆ ಅವುಗಳ ಖರೀದಿ ವಿಕ್ರೀ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಡುವದರಲ್ಲಿಯೂ ಮತ್ತು ಬಿಲ್ಲ ಹುಂಡಿಗಳನ್ನು ವಸೂಲು ಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮಂಜೂರ ಇರುವ ನಿಯಮಗಳಲ್ಲಿ ಬರುವಂಥ ಎಲ್ಲ ತರದ ವ್ಯವಹಾರಗಳನ್ನು ಮಾಡಲಾಗುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ಕೇಳಬಹುದು.

ಆರ್. ಎಚ್. ರಿಕಾರ್ಡ.

ಏಜಂಟರು.

ತಿಳಿಯದೇ ಧಾತುಕ್ಷಯವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮಧ್ಯವಯಸ್ಸಿನಲ್ಲಿಯೇ ನಿಜವಾಗಿ ಸಂಸಾರ ಸುಖವು, ದೊರೆಯದೇ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಇಂಥ ಮನುಷ್ಯರ ಧಾತುಕ್ಷಯರೋಗವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂಥದನ್ನು. ವೈದ್ಯರಾಜ ತೀ. ಕೇಶವ ಶಾಸ್ತ್ರೀ ನಿರಂಜನ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಣ್ಣಗಿನ ದುರ್ಬಲ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಶಾರೀರಕ ಪುರುಷತ್ವಹೀನ ದೇಹ, ಅನಿಶ್ಚಿತ ಸ್ವಭಾವ, ನಿಸ್ತೇಜತನವನ್ನೂ ಜೋಡಿತನವನ್ನೂ ಬಂಜೆತನ, ಅಕಾಲ ವೃದ್ಧಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳ ಉರಿಯೋಣ, ಉರಿಮೂತ್ರ, ಇಂದ್ರಿಯದ ಉದ್ರೇಕ, ಪಿತ್ತವಿಕಾರ, ಅಗ್ನಿಮಾಂದ್ಯ ನಿದ್ರಾನಾಶ, ಮಲಬದ್ಧತೆ, ಬೆನ್ನು ನೋವು ಸೊಂಟನೋವು, ತಲೆಸುತ್ತು, ಪಿತ್ತವಿಕಾರ, ಪ್ರಮೇಹ, ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ವಾಸಿಯಾಗಿ, ರಸ, ರಕ್ತ, ಅಸ್ಥಿ, ಮಜ್ಜಾ, ವೀರ್ಯ ಮೊದಲಾದ ಏಳು ಧಾತುಗಳು ವೃದ್ಧಿಯಾಗಿ, ಇಂದ್ರಿಯ ... ಆಕೃತಿಯು ನವವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನಬೇನೆ, ಕೆಂಪು, ಬಿಳಿ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳೂ ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧ ತೊಲಿ ತೆಗೆದುಕೊಂಡು ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೆಗೆದುಕೊಳ್ಳಬೇಕು. ಹತ್ತು ದಿನಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ, ೧೨ ಬಾಟಲಿಗಳಿಗೆ ೧೧ ರೂ. ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ

(ನಿಪ್ಪಾಣಿ ಜಿ.

ಧಾರವಾಡ ಮರಾಟರ ಮಹತ್ವದ ಸಭೆಯು.

ಬ್ರಾಹ್ಮಣೇತರರೆಂಬದಕ್ಕೆ ನೀರು ಬಿಟ್ಟರು.

ಬ್ರಾಹ್ಮಣೇತರ ಮುಖಂಡರೆಂಬವರು ಸ್ವಾರ್ಥಸಾಧುಗಳು !!!

ಮೊನ್ನಿನ ದಿವಸ ಈ ಊರಲ್ಲಿಯ ಮರಾಟ ಜಾತಿಯವರು ಒಂದು ಜಾಹೀರ ಸಭೆಯನ್ನು ಕೂಡಿಸಿ, ವರ್ತಮಾನ ಪರಿಸ್ಥಿತಿಯನ್ನು ಕುರಿತು ಮಹತ್ವದ ಠರಾವು ಪಾಸ ಮಾಡಿದ್ದಾರೆ. ಅದರ ಮುಖ್ಯ ಸಂಗತಿಗಳು.

೧ ಸರಕಾರದಲ್ಲಿದ್ದ ನಂಬಿಗೆ ಮತ್ತು ಭರವಸೆಯು ಒಡೆದು ಹೋಗಿದೆ. ಸರಕಾರವು ತನ್ನ ಹೃದಯ ಬದಲು ಮಾಡುವತನಕ ಸಮಾಜದವರು ಅಸಹಕಾರದ ದೀಕ್ಷೆ ಧಾರಣ ಮಾಡಬೇಕು. ಮತ್ತು ಖಾದಿಯ ಧಾರಣ ಮಾಡಬೇಕು. ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕಬೇಕು.

೨ ಸರಕಾರವು ಪ್ರಜಾ ಮನುಷ್ಯತ್ವಾಕಾಂಕ್ಷೆಯನ್ನು ಪೂರ್ಣ ಮಾಡದಿದ್ದರೆ ಮರಾಟರು, ಕಾಂಗ್ರೆಸದ ಆಜ್ಞೆಗಳನ್ನು ಪಾಲಿಸುವದಲ್ಲದೆ, ಸಂಪೂರ್ಣ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ಜಾಹೀರ ಮಾಡಿ ಕಾಯದೆಭಂಗ ಮಾಡತಕ್ಕದ್ದು.

೩ ಸರಕಾರದವರು ನಡಿಸಿದ ದಬ್ಬಾಳಿಕೆ ಮತ್ತು ಹಿಂಸೆಗಳು ಕ್ರೂರ ಮತ್ತು ಅನ್ಯಾಯಕಾರಕವಾಗಿರುತ್ತವೆ.

೪ ಸರಕಾರವು ಅನ್ಯಾಯ ಮತ್ತು ಅನೀತಿಯ ದಾದ ಉಪ್ಪಿನ ಕಾಯದೆಯನ್ನು ರದ್ದು ಮಾಡಬೇಕು.

೫ ಮರಾಟರು ಕಾಯದೆಯವರನ್ನು ಬಿಟ್ಟು, ಕೈ ಹಿಡಿಯುವವರ ವಿರುದ್ಧ ನಡೆದ ಚಳವಳಿಯಲ್ಲಿ ಸೇರಬೇಕು.

೬ ಮರಾಟರು ಯಾವ ರೀತಿಯಿಂದಲೂ ಸರಕಾರಕ್ಕೆ ಸಹಾಯ ಮಾಡತಕ್ಕದ್ದಲ್ಲ. ಮತ್ತು ಈಗಿನ ಚಳವಳಿಗೆ ಯಾವ ಬಗೆಯಿಂದಲೂ ವಿರೋಧ ಬೆಳೆಸತಕ್ಕದ್ದಲ್ಲ.

೭ ಕರ್ನಾಟಕದ ಮರಾಟರು ತಮಗೆ ಬ್ರಾಹ್ಮಣೇತರರೆಂದು ಯಾವಾಗಲು ಹೇಳಿಕೊಳ್ಳಲಿಕ್ಕಾಗದು.

೮ ಬೆಳಗಾವಿಯಲ್ಲಿ ಕೂಡುವ ಬ್ರಾಹ್ಮಣೇತರ ಪಕ್ಷದವರು ಬ್ರಾಹ್ಮಣೇತರರೆಂಬ ಹೆಸರು ತೆಗೆದು ಹಾಕಿ, ಎಲ್ಲ ಜಾತಿಗಳ ಸೇವೆಗೆ ಸಲ್ಲತಕ್ಕಂಥ ಯೋಗ್ಯ ಹೆಸರಿಟ್ಟುಕೊಳ್ಳಬೇಕು. ಮತ್ತು ಲೋಕಪ್ರಿಯ ಎನಿಸುವಂಥ ಕಾರ್ಯ ಕರ್ತವ್ಯ ಕೈಕೊಳ್ಳಬೇಕು.

೯ ಹಿಂದುಳಿದ ಜನಾಂಗಗಳ ಮತ್ತು ಬೈಕರ ಹಿತಸಂಬಂಧ ಹುಸಿಕೊಂಡು ಸರಕಾರದ ಬಳಿ ಹಿಂಬಾಲಕ ಸ್ವಾರ್ಥಸಾಧಕರಿಂದ್ದಂಥ ಲಾಗಿಗಳಾದ ಮತ್ತು ಮರಾಟ ಮುಂದಾಳುಗಳೆಂಬ ... ನಡೆಸಿರುವ ರೀತಿಯನ್ನು ಮರಾಟರು ತೀವ್ರ ತಿರಸ್ಕಾರದಿಂದ ತಿರಸ್ಕರಿಸುತ್ತಾರೆ.

ಈ ಠರಾವುಗಳನ್ನು ಪಾಸುಮಾಡಿದ ನಂತರ ಮರಾಟರ ಪತಿಯಿಂದ ಮತ್ತು ಮಾರಾಟದವರ ಜಾಗ್ರತಿಯನ್ನುಂಟುಮಾಡಲು ಸ್ಟಾರ್ಕಿಟ್ ಮಂಡಳ ರಚಿಸಿ ... ನೇಮಿಸಿ ಸಭೆಯನ್ನು ಬರಕಾಸ್ತು ಮಾಡಿದರು.

ನಿಜವಾಗಿಯೂ ಹೊಗಳಬೇಕಾದವರು

ಬ್ರಾಹ್ಮಣೇತರರಿಗೆ ಕಟ್ಟ ಹಿಡಿ ಚಿಕೆಟು.

ನಿಜವಾಗಿಯೂ ಹೊಗಳುವವರು ಅದ್ದನ ಕರ್ನಾಟಕದಲ್ಲಿ ಕರ್ನಾಟಕ ಪತ್ರಿಕೆಯ ಬ್ರಾಹ್ಮಣೇತರ ಬರಿಯ ಮಂದಿ ಕಟ್ಟುಕೊಂಡ ಸರ್ಟಿಫಿಕೇಟು ಕಾಣಬಹುದು.

ಬ್ರಾಹ್ಮಣೇತರ ಪಕ್ಷದ ಮುಖ್ಯ ಉದ್ದೇಶ ಕಾಳಿಂದರೆ ಸಮಾಜ ಸಮಾಜಗಳಲ್ಲಿಯ ವ್ಯತ್ಯಾಸಗಳನ್ನು ಗಟ್ಟಿ ಮಾಡುವದು, ಅಸ್ಪೃಶ್ಯ ಜನಾಂಗ ವಿಷ್ಟವನ್ನು ಹುಟ್ಟಿಸುವದು ಮತ್ತು ಸಾಮಾಜಿಕ, ರಾಜಕೀಯ, ಮತ್ತು ಧಾರ್ಮಿಕ ಅನ್ಯಾಯಗಳನ್ನು ಪ್ರತಿಪಾದಿಸುವದು ಇವುಗಳೇ ಇರುತ್ತವೆ. ಆದರೆ ಈ ಬಗೆಯ ಕಾರ್ಯಗಳನ್ನು ಈ ೧೦ ವರ್ಷಗಳಲ್ಲಿ ಬ್ರಾಹ್ಮಣೇತರ ಪುಢಾರಿಗಳು ಯಾವವನ್ನು ಜರಗಿಸಿಲ್ಲ. ಅವರು ಕೇವಲ ಪ್ರಸ್ಪರ ಕಚ್ಚಾಟದಲ್ಲಿ ತೊಡಗಿಕೊಂಡಿರುತ್ತಾರೆ. ಹೀಗೆ ಅವರು ಮಾಡಿದಂಥ ಕಾರ್ಯಗಳನ್ನು ಮ. ಗಾಂಧಿಯವರು ತಮ್ಮ ಕೃತಿಯಿಂದಲೇ ಮಾಡಿಕೊಳ್ಳಿಸಿದ್ದಾರೆ. ಅವರ ಪ್ರಯತ್ನಗಳ ಮೂಲಕ ಸಾಮಾಜಿಕ ಮತ್ತು ಧಾರ್ಮಿಕತೆಯ ಸುಧಾರಣೆಯು ಬಹುಪ್ಪ ಇಡೀ ಹಿಂದುಸ್ಥಾನದಲ್ಲೇ ಆ ಪ್ರವೇಶಿಸುತ್ತಿರುತ್ತದೆ. ಈ ಒಂದು ಮಾತ್ರ ಸಂತೋಷಕರವಾಗಿ ಬ್ರಾಹ್ಮಣೇತರರು ಪಡಿಸುವದು ಅನರ ಈಗಿನ ಕರ್ತವ್ಯವಾಗಿರುತ್ತದೆ.

THE ANKALGI BANK LTD

Head Office
Kamanlatta Dharwar
Branches
Ranebennur & Hirekerur

5%
Interest allowed on
ANNA SAVINGS BANK
DEPOSIT

Dharwar
3-1-1927

K. B. ANKALGI
Managing Director

WANTED

A Qualified Sanitary Inspector, who has passed the Sanitary Surveyor's Examination to serve under the Byadgi Municipality on a salary of Rs 40-2-60 per mensem. Candidates should apply with copies of testimonials so as to reach the undersigned on or before the 31st May 1930 Preference will be given to Kanarese knowing Candidates.

Byadgi
1st. May 1930

M C Shettar
President,
Byadgi Municipality

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ. ಠೇವಿಗೆಯು ಎಂಟು ಲಕ್ಷದ ಮೇಲಿರುವದು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಚಾಲೂ ಠೇವುಗಳ ಬಡ್ಡಿ ಚನ್ನಾಗಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಆಫೀಸದಲ್ಲಿ ಕೇಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಠೇವಿಯಿಂದ ಹಣವನ್ನು ಇಡಲಾಗು ... ಬಡ್ಡಿಯನ್ನು ಕೊಡಲಾಗುವದು. ದರವನ್ನು ನಮ್ಮ ಆಫೀಸಿನಲ್ಲಿ ವಿಚಾರಿಸಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ಕೊಳ್ಳುವ ... ವರುಷ ನೂರಕ್ಕೆ ತಿಂಗಳಿಗೆ ಒಂದು ಆಣೆಯಂತೆ ಇರುತ್ತದೆ.

ವಿ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣಾಲಯ ಸಕಲ.

ಮೋಟಾರ ಡ್ರಾಯ್ವರ ವಿದ್ಯಾರ್ಥಿಯಲು ಜನರು ಈವರೆಗೆ ಪುಣೆ, ಬೆಳಗಾವಿ ಹೋಗಿ, ಬಂದಕ್ಕೆ ನೂರು ರೂಪಾಯಿ ವೆಚ್ಚ ಮಾಡಿಕೊಂಡು ಬರುವದರ ಈ ಪೆಚ್ಚದ ಉಳಿಕೆಯು ಮಾಡಿಕೊಟ್ಟು, ಡ್ರಾಯ್ವರ ಉದ್ಯೋಗ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆದುಕೊಂಡಿದ್ದಾರೆ. ಪ್ರತಿ ತಿಂಗಳು ಪ್ರಯಾಣ ನಿಯಮಿತ ಜನರನು ಕಳುಹಿಸುವ ... ಕಲಿಯುವವರ ಸಿರಾಕರಣವಾದಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಪ್ರಿ ಅಪ್ಪರಿ ಮೋಟಾರಿಗೆ ಹತ್ತು ಜನರನ್ನು ಕಳುಹಿಸುವರು. ಅದರಿಂದ ಕಡಿಮೆ ಖರ್ಚಿನಿಂದ ... ಹೆಚ್ಚಿನ ಕಾಯ್ದೆಗಳ ಪಡೆಯಲು ವಿಶೇಷ ಮಾಹಿತಿಯನ್ನು ನಮ್ಮನ್ನು ಪತ್ರದ್ವಾರಾ ಕೇಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಿಪಲ್ ಕೌನ್ಸಿಲ್ಲರ, ಧಾರವಾಡ

THE UNITED KARNATAK INSURANCE COMPANY
LTD. DHARWAR

ಸುಸಂಧಿ ಸ್ವದೇಶಿ ಕಡಿಮೆ ಖರ್ಚಿನದು

ದಿ ಯುನಾಯಿಟೆಡ್ ಕರ್ನಾಟಕ ಇನ್ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಏಳನೇ ಆಕ್ಟಿನ ಪ್ರಕಾರ ರಜಿಸ್ಟರ ಆಗಿದೆ)

ಡಾಯರೆಕ್ಟರರು

೧ ಜೋಧರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್ಎಲ್ ಬಿ ಸರಕಾರಿ ವಕೀಲ ಮತ್ತು ಡಿಸ್ಟ್ರಿಕ್ಟ ಪ್ಲೀಡರ ಧಾರವಾಡ ಚೇರಮನ.
೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಉಮಚಗಿ ಎಲ್ ಎಮ್ ಅ್ಯಾಂಡ ಎಸ್ ಗದಗ
೩ ರಾ॥ ಶ್ರೀನಿವಾಸರಾವ ಶೇಷಗಿರಿರಾವ ಮುತಾಲಿಕ (ದೇಸಾಯಿ) ಬಿ ಎ ಅಣ್ಣಿಗೇರಿ
೪ ಮಿ॥ ರಾಮಚಂದ್ರ ರಂಗಪ್ಪ ಸಾವಕಾರ ವರ್ತಕರು ಹಳೆ ಹುಬ್ಬಳ್ಳಿ
೫ ಮಿ॥ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್ಎಲ್ ಬಿ ವಕೀಲ ಗದಗ
೬ ಮಿ॥ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡಡ್ಡುಬ್ಬಳ್ಳಿ ನರಗುಂದಕರ ...
೭ ಮಿ॥ ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್ಎಲ್ ಬಿ ವಕೀಲ ಹುಬ್ಬಳ್ಳಿ
೮ ಮಿ॥ ರಾಮರಾವ ಜಿ. ಭಂಡಿವಾಡ ಬಿ ಎ. ಎಲ್. ಎಲ್ ಬಿ ವಕೀಲ ಧಾರವಾಡ
೯ ಮಿ॥ ಅಬ್ದುಲ ಕರಿಮ ಅಮೀನ ಸಾಬ ಮದಗಿ ವ್ಯಾಪಾರಿ ಗದಗ

ಕನ್ನಡಿಗರ ಸೇವೆಯಲ್ಲಿ ನಿರತವಾದ ಇನ್ಶ್ಯೂರನ್ಸ ಕಂಪನಿಯೆಂದರೆ ಇದೇ ಮೊದಲನೆಯದು. ಈ ಕಂಪನಿಯು ಡಾಯರೆಕ್ಟರರು ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ. ಕರ್ನಾಟಕದ ಜನರಿಗೆ ಬೇಕಾದ ... ವಿಮೆ ಯೋಜನೆಗಳನ್ನು ಹೊಂದಿದೆ ... ಕರ್ನಾಟಕದಲ್ಲಿಯೇ ಹೆಚ್ಚಿ ಹೆಸರು ಪಡೆಯಬೇಕೆಂಬ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಪಾಲಸಿಗಳು ಸರ್ವರೀತಿಯಿಂದ ಹಿತಕರವಾಗಿದ್ದು ... ಕೆಲಸವು ಎಪ್ರಿಲ ತಿಂಗಳಿನಿಂದ ... ಪಾಲಸಿಗಳನ್ನು ಮಾಡುವದಕ್ಕೆ ಮತ್ತು ವಿಮೆಯ ಕೆಲಸವನ್ನು ತಂದು ಕೊಡುವ ಎಜಂಟರು ಬೇಕಾಗಿದ್ದಾರೆ ... ಅರ್ಜಿದಾರರು ತಮ್ಮ ಸವಿಸ್ತರ ಮಾಹಿತಿಯೊಡನೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Hudgelkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಸ್ವದೇಶಿ!! ನೋಡಿ ಆನಂದ ಪಡಿರಿ!!! ಬೇಕಾದ ವಸ್ತುಗಳು!!

ನವೀನ ತರದ ಬಯಲಾಟಕ್ಕೆ ಮೇಳಗಳಿಗೆ ಬೆಡಗು

ಮಹಾಶಯರೇ!

ಶ್ರೀಪು ನವೀನವಾಗಿಯೂ ಗಂಧವ ಕಸ್ತೂರಿ ಸುಗಂಧ ದ್ರವ್ಯಗಳಿಂದ ಅನೇಕ ಪ್ರಕಾರದ ಉತ್ಪನ್ನಗಳನ್ನು ... ಈಗಿನ ಸೌಕರ್ಯಗಳನ್ನು ಮತ್ತು ಮಾರ್ಪಾಡುಗಳನ್ನು ತಯಾರಿಸಿದ್ದು ಪ್ರಸಿದ್ಧಪಡಿಸಿದ ಬಯಲಾಟಕ್ಕೆ ನವೀನ ತರದ ಗಂಧವನ್ನ ಸುಗಂಧ ದ್ರವ್ಯಗಳಿಂದ ದೂರವಾಗಿ ... ಆನಂದಪಡಲು ಅಪೇಕ್ಷಿಸುವವರು ... ನಮ್ಮ ಗಂಧವನ್ನು ... ಸುಗಂಧ ದ್ರವ್ಯಗಳನ್ನು ಒಮ್ಮೆ ತರಿಸಿ ನೋಡಿ ...

ಮತ್ತು ನಾವು ಸರ್ವ ತರಹದ ... ಮತ್ತು ಪ್ರತಿದಿನದ ಉಪಯೋಗಕ್ಕೆ ಬೇಕಾಗುವಂಥ ... ಹೊಸ ತರಹದ ಸುವಾಸನೆಯ ... ವ್ಯಾಪಾರಿಗಳಿಗೆ ಯೋಗ್ಯ ಕಮಿಶನ ಕೊಡಲಾಗುವದು ... ಅವರಿಂದ ಹರಣ್ಣು ... ಈ ಸುಗಂಧದ್ರವ್ಯವನ್ನು ... ತೈಲ, ಕಸ್ತೂರಿ ... ಕ್ರೀಮು ... ಮಾಡುವ ...

ಮತ್ತು ವಿವರಗಳನ್ನು ಕಂಪನಿಯಿಂದ ... ನಮ್ಮ ಪರಿಚಿತ ... ಪ್ರಕಟಿಸುವದು ...

ವಿ ದತ್ತಾತ್ರೇಯ. ವಿ. ಪಡ್ನ್ಯಾಯ ಬಂಧುಗಳು
ದ್ರಾಕ್ಷಿ ... ಕುಂದಗೋಳ
... Camp ಪುಣೆ

ಎಂ ಎಸ್ ಮಹದೇವರಾವ ಅಕ್ಕಾರ...
ಪರಿಮಳ ಅಂಗಡಿ ...
... ಸುಂದರ

ಜಾಹೀರಾತು

ತಿವಾರಿ ... ಕಂಪನಿಯ ... ೧೦೦ ಪುತಿ ೧ ... ಶಿವಮೊಗ್ಗ ... ರೂಪಾಯಿಗೆ ... ೧೦೦ ಪುತಿ ... ತಿವಾರಿ ... ೧೦೦ ಪುತಿ ... ೧ ... ತಿಂಗಳ ... ಸೀರೆ ... ಕಂಪನಿ ಧಾರವಾಡ

ಪತ್ತೆ— ತಿವಾರಿ ಮತ್ತು ಕಂಪನಿ ಧಾರವಾಡ

ಸೀರೆ ಪತ್ತಲ ಅಂಗಿ

ಶ್ರೀ ದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ.

—(೦)—

ಕರ್ನಾಟಕದಲ್ಲಿ ಇಂಥ ನೇಯ್ಗೆಯ ಕೆಲಸ ಬೇರೆ ಇಲ್ಲ.

—(೦)—

ಇದೇ ಮಿಲ್ಲಿನಲ್ಲಿ ಪತ್ತಲ ಒಳ್ಳೆಯ ಸರ್ವಾಂಗ ಸುಂದರ ಸೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಖಾತರಿ ಮಾಡಿ, ಸಿಗಾಗ ... ಮಾಲು ಕೂಡ ಖಾತ್ರಿ ಮಾಡಿದ್ದೇವೆ.

ಒಳ್ಳೆ ಪತ್ತಲ, ಒಳ್ಳೆ ಹೋರೇ ... ಮಾಲು ತರಿಸಿಕೊಳ್ಳುವೆವು.

ಮೈಸೂರು ಊದುಬತ್ತಿ

ಹಚ್ಚು ಅಂತರಬತ್ತಿ ಇದು ಬಹಳ ಸುವಾಸ ನೆಯುಳ್ಳದ್ದು ... ನಿಮಗೆ ... ವಾಸನೆ ಕಡಿಮೆ ಯಾಗುವದಿಲ್ಲ ... ಮಾಡಿದ ... ಪ್ರತಿದಿವಸ ಮನೆಯಲ್ಲಿ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೫೦ ಕಡ್ಡಿಯು ನೂರು ರೂಪಾಯಿ ...—
ಕೃಷ್ಣವಾಟಿಯಾರ ... ಕೊಟ್ಟ ಗಳ್ಳ ...—
... ೧೧-೨೪ ... ಮೈಸೂರು ...,
... ಬಸವನಗುಡಿ ...
... ...

ರಂದಾಂದಾರರಿಗೆ ಸೂಚನೆ

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ಹಿಂದಿನ ವರ್ಷದ ಬಾಕಿ ಪತ್ರದ ಚಂದಾ ಬಾಕಿ ಇದ್ದವರು ... ಮನಿಆರ್ಡರಿನಿಂದ ಕಳಿಸಬೇಕು ... ನಮ್ಮ ... ವಿನಂತಿಯು.

ವ್ಯವಸ್ಥಾಪಕ ವಿಜಯ ಕಾರ್ಯಾಲಯ

ಹರ್ತಾಳ.

ತೆಳವಳ್ಳಿ- ಮಹಾತ್ಮರನ್ನು ಹಿಡಿದ ಸುದ್ದಿ ಬಂದ ಕೂಡಲೆ ಅಂಗಡಿಗಳನ್ನು ಬಂದು ಮಾಡಿ, ಹರತಾಳ ಪಾಲಿಸಿದರು. ಮಹಾತ್ಮರಿಗೆ ಶ್ರೀಯೋಭಿವೃದ್ಧಿಯಾಗಲೆಂದು ದೇವರನ್ನು ಪ್ರಾರ್ಥಿಸಿದರೆಂದು ಕಾಂಗ್ರೆಸ ಸ್ವಯಂಸೇವಕ ಶ್ರೀ ಬಿ ಎನ್ ನಾಡಗೇರ ಇವರು ಬರೆಯುತ್ತಾರೆ

ಅಂಕೋಲಾ- ಮಹಾತ್ಮರನ್ನು ಬಂಧಿಸಿದ್ದಕ್ಕಾಗಿ ನಿಷೇಧ ವ್ಯಕ್ತಪಡಿಸುವದಕ್ಕಾಗಿ ಮಂಗಳವಾರದ ದಿವಸ ಹರತಾಳವಾಯಿತು. ಸಂಜೆ ಇದ್ದರೂ ಎಲ್ಲ ವ್ಯವಹಾರ ಆಟ್ಟಾಯಿತು. ಮಧ್ಯಾಹ್ನದಲ್ಲಿ ಹುಬ್ಬಳ್ಳಿಯಿಂದ ಬಂದ ಸ್ವಯಂಸೇವಕ ಪಥಕದವರು ವ್ಯಾಖ್ಯಾನ ಕೊಟ್ಟರು. ಧಾರವಾಡದ ಯುವಕ ಸಂಘದ ಕಾರ್ಯದರ್ಶಿಯಾದ ಶ್ರೀ. ಹಿರೇಮಠ ಇವರ ಭಾಷಣವೂ ಆಯಿತೆಂದು ಶ್ರೀ ಗೋವಿಂದ ಲಕ್ಷ್ಮಣ ಹಳ್ಳಿಕೇರಿಯವರ ಇವರು ಬರೆಯುತ್ತಾರೆ

ಬೆಟ್ಟಹಳ್ಳಿ- ಮಾಸೂರ ಮಾರ್ಗವಾಗಿ ಆಕಸ್ಮಾತ್ತಾಗಿ ಬಂದ "ಸ್ವಯಂಸೇವಕರ ಆಗಮನದಿಂದ ಊರಲ್ಲಿ ಉತ್ಸಾಹವೆದ್ದಿತು. ರಾಷ್ಟ್ರಧ್ವಜದ ಮೆರವಣಿಗೆಯಾಗಿ ಬಾರಿಗುಂಟ ರಣಭೇರಿ ಮೊದಲಾದ ರಾಷ್ಟ್ರಗೀತಗಳಾಗುತ್ತಿದ್ದವು. ಚಾವಡಿಯ ಹತ್ತರ ಶ್ರೀ. ಮರಿಗೆಪ್ಪ ಗುಂಡನಕಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಕೊನೆಯಲ್ಲಿ ಪರದೇಶೀ ಬಟ್ಟೆಯ ಹೋಳಿಯಾಯಿತು. ಸ್ವತಃ ಅಧ್ಯಕ್ಷರು ತಮ್ಮ ಮೈಮೇಲಿನ ಪರದೇಶೀ ವೆಯ ಹೋಳೀ ಮಾಡಿದ್ದಲ್ಲದೆ ಸತ್ಯಾಗ್ರಹ ನಿಧಿಗೆ ೫ ರೂಪಾಯಿ ಕೊಟ್ಟರು ನೀಲಪ್ಪ ಅಗಸರನೆಂಬ ಉತ್ಸಾಹಿ ತರುಣನು ಸ್ವಯಂಸೇವಕನಾದನು. ತಿಮ್ಮನಕಟ್ಟಿಯಲ್ಲಿ ಅಕ್ಷಯ್ಯ ತೃತೀಯದ ದಿವಸ ಖಾದೀ ವಸ್ತ್ರಗಳು ಸ್ಥಾಪಿಸಲ್ಪಟ್ಟಿವೆ.

ಅಗಡಿ- ಮಹಾತ್ಮರನ್ನು ಹಿಡಿದ ಸುದ್ದಿಯು ಮಂಗಳವಾರ ಬಂತು. ಕೂಡಲೆ ಊರ ತುಂಬ ಹರತಾಳವಾಯಿತು. ಚಹಾ ಸಹ ನಾಸ್ತಿಯೇ, ಅಡಿಕೆ ಸಿಗಲಿಲ್ಲ. ಮುಂಜಾನೆ ಮೆರವಣಿಗೆ ಹೊರಟು, ಪರದೇಶೀ ಅರಿವೆಗಳನ್ನು ಕೂಡಿ ಹಾಕಲ್ಪಟ್ಟಿತು ಸಾಯಂಕಾಲದಲ್ಲಿ ಸಭೆ ಮಾಡಿ, ಆ ಅರಿವೆಗಳ ಹೋಳೀ ಮಾಡಲ್ಪಟ್ಟಿತು. ಈ ಕೆಲಸದಲ್ಲಿ ಶ್ರೀ ಹಾಸರ ಹಣಮಂತಪ್ಪನು ಬಹು ಶ್ರದ್ಧೆಯಿಂದ ಕೆಲಸ ಮಾಡಿದನು.

ಶಿರಹಟ್ಟಿ- ಆರನೆಯ ತಾರೀಖು ಸಾಯಂಕಾಲಕ್ಕೆ ಮಹಾತ್ಮನ್ನು ಹಿಡಿದ ಸುದ್ದಿ ಬಂತು ಕೂಡಲೆ ವ್ಯಾಪಾರಸ್ಥರು ಅಂಗಡಿಗಳನ್ನು ಬಂದು ಮಾಡಿದರು. ಮರು ದಿವಸ ಹರತಾಳವಾಯಿತು ಒಂದು ಕಾಸಿನ ಬೀಡಿ ಸಹ ಸಿಗಲಿಲ್ಲ. ಸಾಯಂಕಾಲದಲ್ಲಿ ಮಹಾತ್ಮರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ತಗೆದರು ಶ್ರೀ ಮಹಿಪತಿ ಅಶ್ವಥರಾಯರು ಮಹಾತ್ಮರ ಸಂದೇಶವನ್ನು ಓದಿ ತೋರಿಸಿದರು ಬಳಿಕ ಪರದೇಶೀ ಬಟ್ಟೆಗಳ ಹೋಳಿಯಾಯಿತು.

ಅಂಕೋಲಾ- ಮಹಾತ್ಮರನ್ನು ಹಿಡಿದ ಸುದ್ದಿ ಬಂದ ಕೂಡಲೆ ಶಿಬಿರದವರು ೨೪ ತಾಸುಗಳ ಉಪವಾಸದ ವ್ರತಧಾರಣ ಮಾಡಿದರು ವ್ಯಾಪಾರಿಗಳ ಮೇಲೆ ಮಹಾತ್ಮರ ಭಾವಚಿತ್ರವಿಟ್ಟು ಶಿಬಿರದಿಂದ ಕೂಡಿದ ಸತ್ಯಾಗ್ರಹದ ಸ್ವಯಂಸೇವಕರು ಮರವಣಿಗೆ ಹೊರಡಿಸಿದರು. ಶಾಂತಾದುರ್ಗಾ ಮತ್ತು ವೆಂಕಟರಮಣ ದೇವಾಲಯಗಳಿಗೆ ಹೋಗಿ ಪ್ರಾರ್ಥನೆ ಮಾಡಲ್ಪಟ್ಟಿತು ಶಾಲಾಕ ಕಚೇರಿಯ ಮುಂದಿನ ಬೈಲಿಗೆ ಮೆರವಣಿಗೆ ಬಂತು. ಅಲ್ಲಿ ಎಳೆಂಬು ಸಾವಿರ ಜನ ಕೂಡಿತ್ತು. ಸಭೆಯ ಪ್ರಾರಂಭದಲ್ಲಿ ಐದು ನಿಮಿಷಗಳವರೆಗೆ ಭಜನೆಯಾಯಿತು. ಬಳಿಕ ಶ್ರೀ. ಶಿವಾನಂದ ಸೂರನರವರು ಸಧ್ಯಸ್ಥಿತಿಯಲ್ಲಿ ಗೀತೆಯ ಉಪಯೋಗ ಈ ವಿಷಯದ ಮೇಲೆ ಉಪನ್ಯಾಸ ಮಾಡಿದರು.

ಬಂಕಾಪೂರ- ಮಹಾತ್ಮರನ್ನು ಹಿಡಿದ ಕೂಡಲೆ ಆ ದಿನ ಸಂಜೆ ಇದ್ದರೂ ಊರ ತುಂಬ ಹರತಾಳವಾಯಿತು ಪ್ರಮುಖ ಲಿಂಗಾಯತ ವ್ಯಾಪಾರಸ್ಥರೂ, ಜನಲಿಯವರೂ ಮುಂದಾಗಿ ಹರತಾಳ ಮಾಡಿದರು ಸಾಯಂಕಾಲದಲ್ಲಿ ಸಭೆಯಾಗಿ, ಸರಕಾರದ ಕೃತ್ಯ ನಿಷೇಧಿಸಲ್ಪಟ್ಟಿತು. ಒಂದೂವರೆ ತಿಂಗಳಲ್ಲಿ ಸ್ವತಃ ನೂತು, ನಯಿದು ಒಂದು ಜಾನು ತಂದು ಕೊಟ್ಟವರಿಗೆ ಇನಾಮು ಕೊಡುವಂತೆ ಗೊತ್ತು ಮಾಡಿದ್ದಾರೆ. ಅನೇಕರು ಈಗಾಗಲೆ ಈ ಪಂಥ್ಯದಲ್ಲಿ ಸೇರಿದ್ದಾರೆ. ಮಹಾತ್ಮರನ್ನು ಹಿಡಿದಿದ್ದಕ್ಕಾಗಿ ಸಿಂಪಿಗರು ಉಪವಾಸ ಮಾಡಿದರು

ಮುಂಡರಗಿ- ಮಹಾತ್ಮರನ್ನು ಹಿಡಿದ ಸುದ್ದಿಯು ಆರನೆಯ ತಾರೀಖಿನ ದಿವಸ ಬಂತು ಅಂದು ಗದಗಿನಿಂದ ಮುಖಂಡರನ್ನು ಕರಿಸಬೇಕೆಂಬ ವಿಚಾರವಿತ್ತು. ಅಲ್ಲಿ ಅದ್ವಿತೀಯವಾದ ಹರತಾಳವಿದ್ದದರಿಂದ ಅಲ್ಲಿಯವರಿಗೆ ಬರುವದಾಗಲಿಲ್ಲ, ಮರುದಿವಸ ಸ್ವಯಂಸೇವಕರು ಗದಿಗೆ ಹೋಗಿ, ಶ್ರೀ ಸಾವುಕಾರ ಮಾಸ್ತರರನ್ನು ಕರಕೊಂಡು ಬಂದರು ಶ್ರೀ ವೆಂಕಟಸ್ವಾಮಿಯು ನಗರಸಂಕೀರ್ತನೆ ಮಾಡಿದರು. ಸಾಯಂಕಾಲದಲ್ಲಿ ಸಭೆಯಾಯಿತು ಫೌಜದಾರ ಮಹಾಲಕರಿ ಮತ್ತು ಆನರರಿ ಮ್ಯಾಜಿಸ್ಟ್ರೇಟರು ಇದ್ದರು ವ್ಯಾಖ್ಯಾನವಾಗಿ ರಾಷ್ಟ್ರಗೀತವನ್ನು ವಾಗ ಈ ಮೂವರ ಹೊರ್ತು ಎಲ್ಲರೂ ಎದ್ದು ನಿಂತಿದ್ದರು ಬಳಿಕ ಪರದೇಶೀ ಬಟ್ಟೆಗಳ ಹೋಳಿಯಾಗಿ ಸಭೆಯ ವಿಸರ್ಜನೆಯಾಯಿತು.

ಮುಳಗುಂದ- ಮಹಾತ್ಮರ ದಸ್ತಗಿರಿಯ ದೆಸೆಯಿಂದ ಬಹಳ ತರವಾದ ಹರತಾಳವಾಯಿತು. ಸಾಯಂಕಾಲದಲ್ಲಿ ಮಹಾತ್ಮರ ಭಾವಚಿತ್ರದ ಮೆರವಣಿಗೆಯಾಯಿತು ಚಾವಡಿಯ ಮುಂದಿನ ದೊಡ್ಡ ಬೈಲಿನಲ್ಲಿ ಸಭೆ ಸೇರಿತು. ಅದಕ್ಕೆ ಗಾಂಧೀ ಕಟ್ಟೆವೆಂದು ಹೆಸರಿಟ್ಟಿದ್ದಾರೆ. ಶ್ರೀ. ಚನ್ನಬಸಪ್ಪಾ ಬುಳ್ಳಾ, ವಾಸುದೇವರಾವ ಕುಲಕರ್ಣಿ, ಹಣಮಂತರಾವ ಸೊರಟೂರ, ಶಿವಪ್ಪಾ ಒಳ್ಳಾರಿ ಮೊದಲಾದವರ ಸ್ಫೂರ್ತಿದಾಯಕ ಭಾಷಣಗಳಾದವು ಕಾಯದೆಭಂಗದ ಉಪ್ಪುಮಾಡಿ, ಮಾರಲ್ಪಟ್ಟಿತು. ನೂರಾರು ಹೆಂಗಸರೂ ಇದನ್ನು ಕೊಂಡರು ಬಳಿಕ ಪರದೇಶಿ ಅರಿವೆಯ ಹೋಳಿಯೂ ಆಯಿತು.

ಸವದತ್ತಿ- ಮಹಾತ್ಮರನ್ನು ಹಿಡಿದ ಬಗ್ಗೆ ಸಂಪೂರ್ಣ ಹರತಾಳವಾಯಿತು ಆದ- ಬರೆಯುತಕ್ಕ ಶ್ರೀ ಕುಸುಗಲ್ಲ ಅನಂತಾಚಾರ್ಯರು ಕೈಲಿ ಲೆಕ್ಕಣಿಕೆ ಹಿಡಿಯಲಿಲ್ಲ. ಕೂಲಿಕಾರರು ಕೂಲಿಗೆ ಸಹ ಹೋಗಲಿಲ್ಲ ಮೋಟಾರುಗಳು ನಿಂತಲ್ಲಿಯೇ ನಿಂತವು ಸುತ್ತಲೂ ಗ್ರಾಮಗಳಲ್ಲಿ ಹರತಾಳವಾಯಿತು ಕಚೇರಿಯ ಮುಂದ ಇದ್ದು, ಅದು ಖಾದೀಮೋಲಿಯಾಗಬೇಕೆನ್ನುತ್ತದೆ ಸಾಯಂಕಾಲದಲ್ಲಿ ಸಭೆಯಾಗಿ ಸ್ವರಾಜ್ಯ ಸ್ವಾತಂತ್ರ್ಯದ ಜಯಜಯಕಾರವಾಯಿತು

ಲಕ್ಕುಂಡಿ- ದೇವಪುರುಷರೆಂತಿರುವ ಮಹಾತ್ಮರನ್ನು ಸರಕಾರದವರು ಅನ್ಯಾಯವಾಗಿ ಪ್ರತಿಬಂಧಿಸಿದ ವರ್ತಮಾನ ಬಂದ ಕೂಡಲೆ, ಶೆಟ್ಟರು ಸಾಹುಕಾರರು ಎಲ್ಲ ವ್ಯವಹಾರ ಬಂದುಮಾಡಿ ಹರತಾಳಮಾಡಿದರು ಅಂದು ಸಂಜೆ ! ಸುತ್ತುಮುತ್ತಲಿನ ಹತ್ತಿಪ್ಪತ್ತು ಗ್ರಾಮಗಳ ಜನರು ಕೂಡುವ ದಿವಸ ಎಲ್ಲ ಅಂಗಡಿಗಳು ಒಂದಾದವು ಪರಸ್ಥಳದಿಂದ ಬಂದ ಅಂಗಡಿಕಾರರೂ ಇದರಲ್ಲಿ ಸೇರಿದರು ಸಾಯಂಕಾಲದಲ್ಲಿ ಸಭೆಯಾಗಿ, ಮಹಾತ್ಮರಿಗೆ ಬಂದ ಗಂಡಾಂತರ ದೂರಾಗಲೆಂದು ಅವರ ಹೆಸರಿನ ಜಯಘೋಷದಲ್ಲಿಯೇ ಸಭೆಯ ವಿಸರ್ಜನೆಯಾಯಿತು.

ಶ್ರೀ ಗಂಗಾಧರರಾಯರಿಗೆ ಪುನಃ ಶಿಕ್ಷೆ.

ರತ್ನಾಗಿರಿಯಲ್ಲಿ ಶ್ರೀ ದೇಶಪಾಂಡೆ ಗಂಗಾಧರರಾಯರಿಗೆ ಮತ್ತೆ ೫ ತಿಂಗಳ ಸಾದಾಶಿಕ್ಷೆಯಾಯಿತು.

ಇವರಿಗಲ್ಲದೆ- ಇದೇ ಜಿಲ್ಲೆಯ ಡಾ ಕೋಲ್ಹಾಳಿ, ಶ್ರೀ ಸಿದ್ಧಾಂತಿಯವರಿಗೆ ೩॥ ತಿಂಗಳ ಸಶ್ರಮ ಶಿಕ್ಷೆಯಾಗಿದೆ.

ಕೊಟಲೂರಿಗೆ ೨೦೦ ರೂಪಾಯಿ ದಂಡ ವಾಗಿದ್ದು ಶ್ರೀ ಚಾಂದೋರಕರರಿಗೆ ೮ ತಿಂಗಳ ಸಶ್ರಮ ಶಿಕ್ಷೆಯಾಯಿತು.

ಇದು ವರೆಗೆ ಈ ಜಿಲ್ಲೆಯಲ್ಲಿ ೭೧ ಈ ಕಾಯದೆಭಂಗಕ್ಕಾಗಿ ಜನರಿಗೆ ಶಿಕ್ಷೆಯಾಗಿದೆ.

ಕರ್ನಾಟಕದಲ್ಲಿ ಇದುವರೆಗೆ ೧೫೦ ಜನರಿಗೆ, ಉಪ್ಪಿನ ಕಾಯದೆಭಂಗ, ರಾಜದ್ರೋಹ ಮೊದಲಾದ ಅಪರಾಧಗಳಿಗೋಸ್ಕರ ಶಿಕ್ಷೆಯಾಗಿದೆ.

ಫೌಜದಾರನ ಉದ್ಧಾಟತನ.

ಮುರಗೋಡದಲ್ಲಿ ಶಿಸ್ತಿನಿಂದ ಕಾಯದೆಭಂಗ ನಡೆದಿದೆ ಪೇಟೆಯ ದಿನ ಲಿಲಾವಾಗುತ್ತಿದ್ದ ಸ್ವತಃ ಉಪ್ಪನ್ನು ಕಸಿದುಕೊಳ್ಳಲು ಅಲ್ಲಿಯ ಫೌಜದಾರರು ಪ್ರಯತ್ನಪಟ್ಟರು ಸ್ವಯಂಸೇವಕರು ಈ ಉಪ್ಪನ್ನು ಕೊಡದಾಗಲು, ಎದೆಗೆ ಪಿಸ್ತೂಲು ಆನಿಸಿದರು, ಆದರೆ ಸ್ವಯಂಸೇವಕರು " ಗುಂಡು ಹಾಕು " ಎಂದು ಎದೆ ಮುಂದೆ ಮಾಡಿ ನಿಲ್ಲಲು, ಫೌಜದಾರರು ಮೋರೆ ತಗ್ಗಿಸಿಕೊಂಡು ಮನೆಯ ದಾರೀ ಹಿಡಿದರು.

ಈ ಊರಲ್ಲಿ ಜನಜಾಗೃತಿಯು ಚನ್ನಾಗಿದೆ ಹಿಂದೂ ಮುಸಲ್ಮಾನರೆಲ್ಲ ಒಂದಾಗಿದ್ದಾರೆ

ಸರಕಾರೀ ಅಧಿಕಾರಗಳನ್ನು ಬಹಿಷ್ಕರಿಸುವ ಕಾರ್ಯವು ಜೋರಿನಲ್ಲಿದೆ.

ಶ್ರೀ ನಾಡಗೌಡರ ಪುನಃ ದಸ್ತಗಿರಿ

ಬೆಳಗಾವಿಯಲ್ಲಿ ಉಪ್ಪಿನ ಕಾಯದೆ ಮುರಿದು ಶ್ರೀ ಗಂಗಾಧರರಾಯರ ಕೂಡ ಮೊದಲನೆಯ ಪೆಟ್ಟಿಗೆ ತುರಂಗವಾಸಿಯಾಗಿ, ಬಿಡುಗಡೆ ಹೊಂದಿ ಬಂದ ಶ್ರೀ. ನಾಡಗೌಡರನ್ನು ಪುನಃ ಅಥಣಿಯಲ್ಲಿ ಹಿಡಿದಿರುತ್ತಾರೆಂದು ತಾರಿನ ವರ್ತಮಾನ ಬಂದಿರುತ್ತದೆ ಇವರ ಕೂಡ, ಕುಲಕರ್ಣಿಕೆಗೆ ರಾಜೀನಾಮೆ ಕೊಟ್ಟಂಥ ಮಂಗಸೂಳಿಯ ಕುಲಕರ್ಣಿಯವರನ್ನೂ ಹಿಡಿದಿದ್ದಾರೆ

ಮಗನ ಮುಂದೆಯೇ ಹೋಗುವಾಗ

ದಸ್ತಗಿರಿ ಮತ್ತು ಶಿಕ್ಷೆ

ಮಹಾಡದ ನಿವಾಸಿಗಳು ಸರಕಾರೀ ಕಾಮದಾರರಿಗೆ ಬಹಿಷ್ಕಾರ ಹಾಕಿದ್ದರಿಂದ ದುಡ್ಡು ಕೊಟ್ಟರೂ ಪದಾರ್ಥ ಸಿಗುವದಿಲ್ಲ ಪೋಲೀಸಸಾಹೇಬರು ಬಂದು ಬಲವಂತಿಕೆಯಿಂದ ಅಂಗಡಿಯೊಳಗಿನ ಸಾಮಾನು ತಕ್ಕೊಳ್ಳಲಾರಂಭಿಸಿದರು. ಆದರೂ ಅವರ ಉದ್ದೇಶ ಸಫಲವಾಗಲಿಲ್ಲ. ಈ ಸಿಟ್ಟಿನಿಂದ ಮುಖಂಡರಾದ ಟಿಪಣೀಸ ಮತ್ತು ಫೋತನೀಸರನ್ನು ಹಿಡಿಯ ಹೋದರು ಆಗ ಫೋತನೀಸರ ಮಗನ ಮುಂದೆಯಾಗಿ ಅಂದಿಗಳ ಭೋಜನ ನಡೆದಿತ್ತು ಇದಾವದನ್ನೂ ಲಕ್ಷಿಸದೆ ಸಾಹೇಬರು ಇವರನ್ನು ಹಿಡುಕೊಂಡು ಹೋದರು ಮುಂದೆ ಒಂದೇ ತಾಸಿನಲ್ಲಿ ಆರು ತಿಂಗಳ ಶಿಕ್ಷೆಯಾಯಿತು ಮುಂದೆ ಮತ್ತು ಮದಿವೆಗೆ ಬಂದಿದ್ದ ಬೀಗರು ಬಿಜ್ಜರು ವಂದೇಮಾತರಮದ ಜಯಘೋಷದಲ್ಲಿ ಇವರನ್ನು ತುರಂಗಕ್ಕೆ ಸಾಗಕಳಿಸಿದರು

ಮಹಾರಾಷ್ಟ್ರದ ಸ್ಥಿತಿ-

ಮರಾಠಿಗರು ತಿರೋಡಿ ಎಂಬಲ್ಲಿ ಧಾರಾಸಾ ನದಂತೆ ಉಪ್ಪಿನ ಮೇಲೆ ದಾಳಿ ಇಡುವರು. ಬೇರೆ ಬೇರೆ ಜಿಲ್ಲೆ ಮತ್ತು ಪ್ರಾಂತಗಳಿಂದ ಐನೂರು ಸ್ವಯಂಸೇವಕರು ಅಲ್ಲಿ ಸೇರುವರು. ಬೇಕಾದಂಥ ಸ್ವಾರ್ಥತ್ಯಾಗ, ಸ್ವಾಸುತ್ಯಾಗ ಮಾಡುವರು. ಕಷ್ಟಕಾಪಗಳನ್ನು ಸಹಿಸುವರು ಪೋಲೀಸರು ಗುಂಡುಹಾಕಲಿಕ್ಕೆ ಬಂದರೆ, ತಮ್ಮ ಎದೆಯ ಮೇಲೆ ಮೊದಲನೆಯ ಗುಂಡು ಹಾಕಿಸಿಕೊಳ್ಳಲು ತಾವು ಮುಂದೆ ಬರುವಂತೆ ಪ್ರೊಫೆಸರ ಕೋಲ್ಹಟಕರ ಬಿಸುಮರು ಮುಂದಾಗಿ ಜಾಹೀರ ಮಾಡಿದ್ದಾರೆ.

ಸೊಲ್ಲಾಪೂರದ ವಿಶೇಷ ಸುದ್ದಿಯು-

ಪಟ್ಟಣಕ್ಕೆ ದಂಡಿನ ಭಾವಣಿಯ ಸ್ವರೂಪ ಬಂದಿದೆ 'ಸರಕಾರದ ಕೃತ್ಯ ನಿಷೇಧಿಸುವದಕ್ಕಾಗಿ ಸುಪ್ರಸಿದ್ಧ ವ್ಯಾಪಾರಸ್ಥರಾದ ಶೇಟ ವಾಲಚಂದ ಹೀರಾಚಂದರು ಸಿ ಆಯ. ಇ. ಮತ್ತು ಜೆ ಪಿ ಪದವಿಗೆ ರಾಜೀನಾಮೆ ಕೊಟ್ಟರು ಇವರಿಗೆ ತೀರ ವಿರುದ್ಧವಾಗಿ ಡಾಕ್ಟರ ಮುಳೆ, ಮಾಣಿಕಚಂದ ಶಹಾ ಮತ್ತು ಫಾರ್ಸಿ ಜಸವಾಲಾ ಇವರು ಆ ನರರಿ ಮ್ಯಾಜಿಸ್ಟ್ರೇಟರಾಗಿ ಜನರಲ್ಲಿ ಶಾಂತತೆಯುಂಟು ಮಾಡುವ ಅಧಿಕಾರ ಪಡಕೊಂಡಿದ್ದಾರೆ

ದಬ್ಬಾಳಿಕೆಯ ಮಹಿಮೆ-

ಪೇಶಾವರದ ದಂಗೆಯ ವಿಚಾರಣೆ ಮಾಡಲಿಕ್ಕೆ ಬರುವೆವು ದಾರೀ ಕೊಡಿರೆಂದು ಪಂಡಿತ ಮೋತಿಲಾಲರು ಲಾರ್ಡ ಆಯರ್ವಿನ ಸಾಹೇಬರಿಗೆ ಪತ್ರ ಬರೆದಿದ್ದಂತೆ ನಿಮಗೆ ಬರಗೊಡುವದಿಲ್ಲ ಬಂದರೆ ಹಿಂದಕ್ಕೆ ಅಟ್ಟುವೆವೆಂದು ಪೇಶಾವರದ ಕಮೀಶನರಸಾಹೇಬರು ಇವರಿಗೆ ಉತ್ತರ ಕೊಟ್ಟಿದ್ದಾರೆ.

ವಿಲಾಯತಿಯ ಬಟ್ಟೆಗೆ ಆರ್ಧಚಂದ್ರವುಳ್ಳವು-

ಮುಂಬಯಿಯ ವರ್ತಕರು ಪೂರ್ಣ ಸ್ವದೇಶಿ ಯಾಗಿದ್ದು, ಇವರು ತಮ್ಮಲ್ಲಿದ್ದ ವಿಲಾಯತಿಯ ಅಂಬೆಯನ್ನು ಆಫ್ರಿಕೆಗೆ ಕಳಿಸ ಹಂಚಲಕರಾಗುವರು, ಮುಜಪಿಯ ಲ್ಲಿ ಇದೇಜವಳಿಯ ಅಂಗಡಿಯ ಮುಂದೆ ಫ್ಲೋಯರು ಪಿಕೆಟಿಂಗ ನಡೆಸಿದ್ದರಿಂದ, ಅಂಗಡಿಕಾರರು ಬೀಗಿಲ ಹಾಕಿಬಿಟ್ಟರು.

ಯಾರನ್ನೂ ಕೋರ್ಟಿನ್ಲಿ ಬಿಡಲಿಲ್ಲ-

ರತ್ನಾಗಿರಿಯಲ್ಲಿ ಶ್ರೀ ಗಂಗಾಧರರಾಯರ ವಿಚಾರಣೆ ನಡೆದಾಗ, ಅವರ ಅಪ್ತರು ಅಥವಾ ಸ್ನೇಹಿತರನ್ನು ನೋಡಲಿಕ್ಕೆ ಬಿಡಲಿಲ್ಲ.

ಡಾಕ್ಟರ ಸತ್ಯಪಾಲರಿಗೆ ಮೂರು ವರ್ಷ, ಡಾಕ್ಟರ ಆಲಮರಿಗೆ ೧೮ ತಿಂಗಳು ಮತ್ತು ಮೌ. ಜಾಫರ ಲಿಯವರಿಗೆ ಎರಡು ವರ್ಷದ ಶಿಕ್ಷೆಯಾಯಿತು ಎಲ್ಲರಿಗೂ ಸಶ್ರಮದ ಶಿಕ್ಷೆ !!!

ಇಂಗ್ಲಂಡವು ಹಿಂದುಸ್ಥಾನವನ್ನು ಕಳಕೊಳ್ಳಲೇಬೇಕೆಂದು ಅರ್ಡನ ಜಸವರ್ನರೆಂಬಸಾಹೇಬರು ಬರೆದ ಪುಸ್ತಕವು ಹಿಂದುಸ್ಥಾನಕ್ಕೆ ಬರಕೂಡದೆಂದು ಹಿಂದುಸ್ಥಾನ ಸರಕಾರದವರು ಜಾಹೀರ ಮಾಡಿದ್ದಾರೆ.

ವಿಠಾಪೂರಿನಲ್ಲಿರುವ ಎಡವರ್ಡ ಬಾದಶಹರ ಶಿಲಾಮೂರ್ತಿಯ ಮೇಲೆರೆಗೆ ಯಾರೋ ಮಸೀ ಹಚ್ಚಿದ್ದು, ಪೋಲೀಸರು ಆದರ ತನಾಸಣೆ ನಡೆಸಿದ್ದಾರೆ.

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

ಗಿರಣಿಯ (ಶೇಅರ್ಸು) ಮತ್ತು ದಿ ಬ್ಯಾಂಕ ಆಫ್ ಬರೋಡ ಲಿಮಿಟೆಡ (ಶೇಅರ್ಸು) ಸಿಗುವವು ಪ್ರತ್ಯುತ್ತರ ಸಲುವಾಗಿ ಬಂದು ಆಣೆಯ ಪೋಸ್ಟ ಸ್ಟಾಂಪು ಕಳಿಸ ಕೂಡದು. ದೊಡ್ಡ ದೊಡ್ಡ ಶಹರುಗಳಲ್ಲಿ ಪಗಾರ ಮಂಮೀಶನದ ಮೇಲೆ ಕೆಲಸ ಮಾಡುವರು ಬೇಕು

ಪತ್ತೆ ಮನಿಲೆಂಡ

ಟೆಲಿಫೋನ, ಪಿ ಡಿ ಘಾಟಿಕಾಂಡೇ (ಬೆಂಕರ
ಫೋನ ನಂಬರ ಕೇಶವ ಬಾಗ ಗೋಲ್ಡ ಮೋಹರ ಮುಂದೆ ಪೋಸ್ಟ ಬೋಕ್ಸ ನಂಬರ ೫೫೫೦,
ದಾದರ ಬೊಂಬೈ

(೧) ರಾಣೆಬೆನ್ನೂರ (೨) ಹಿರೇಕೆರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ಗಣೇಶ ಶಂಕರ ಜೋಶಿ ಇವರನ್ನು ನಾವು ಏಜಂಟರಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ನಮ್ಮ ವ್ಯವಹಾರವನ್ನು ಇವರ ಹತ್ತ ಮಾಡುವದಕ್ಕೆ ಹರಕತ್ತು ಇಲ್ಲಾ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಮೂವತ್ತು ಸಾವಿರ ಮಸೀದೆಗಳು
[illegible]ದಾರವು.

—(೦)—

ರಸಿಯಾದ ಬೋಲ್ಶವಿಕ ಸರಕಾರದವರು ಪಾದ್ರಿಗಳಿಗಾನ್ನ ಒಂದು ಮಾಡಿದಂತೆ ಮುಸಲಮಾನರ ಮುಲ್ಲಾಗಳನ್ನೂ ಒಂದು ಮಾಡಿದರು. ಆ ಮಸೀದೆಗಳ ಬಾಗಿಲು ಹಾಕಿದ್ದರಿಂದ ಸಮಾಜ ಮುಂತಾದ ಧರ್ಮಕಾರ್ಯಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಮುಸಲಮಾನರ ಸ್ವಕ್ಷೇತ್ರ ರಕ್ಷಣೆಗಳನ್ನು ದೇಶಾಂತರವಾಸಿಗಳಾಗಿ ಹೋದರು, ಇಂಗ್ಲಂಡದ ಕ್ಯಾಂಟರಬರಿಯ ಆರ್ಚಬಿಶಪ್ಪರು ಮಧ್ಯಸ್ಥಿ ಮಾಡಿ, ಮಸೀದೆಗಳಲ್ಲಿ ಪ್ರಾರ್ಥನೆ ಮಾಡುವಂತೆ ಒದಗಿಸಿಕೊಡಬೇಕೆಂದು ಬೇಡಿಕೊಂಡಿದ್ದಾರೆ.

ಪುಣೆಯ ಗುಪ್ತ ಪೋಲೀಸನು ಸತ್ಯಾಗ್ರಹಿಯಾದನು.

—(೦)—

ಪುಣೆಯಲ್ಲಿ ಇನಾಮದಾರನೆಂಬವನು ಗುಪ್ತ ಪೋಲೀಸಖಾತೆಯಲ್ಲಿ ತಪಾಸಣೆ ಭಾಗದಲ್ಲಿದ್ದನು ಈತನು ರಾಜೀನಾಮೆ ಕೊಟ್ಟು ಸತ್ಯಾಗ್ರಹಿಯಾಗಿದ್ದಾನೆ

ಪುಣೆಯಲ್ಲಿಯ [illegible] ಸತ್ರಿ ಬಂದೂಕುಗಳನ್ನು ಕೂಡಹಾಕಿ, ಬ್ರಿಟಿಶ ಕೂಡ ಯ[illegible] ಸಿದ್ಧರಾಗಿ ಇದು ಅಲ್ಲಲ್ಲಿ [illegible] ಮುಸಿಯಂದ ವ ಬ್ರಿಟಿಶ ಹಸ್ತ ಪತ್ರಿಕೆ [illegible] ಹಚ್ಚಿದ್ದರು [illegible] ಕೆಲ [illegible] ಸೇನಾಧಿಪತಿ ಎಂದು ಸಹಿಯುಂಟು. ಪೋಲೀಸರು ಇವುಗಳ ಫೋಟೋ ತಕ್ಕೊಂಡರು. ಒನರು ಉಳಿದವನ್ನು ಸುಡು ಹಾಕಿದರು.

ನೋಟೀಸಿಗೆ ಉತ್ತರ

ತ. [illegible] ಕೆಂಪ [illegible] ಬಸವಂತ್ತಿ ಸಾ॥ ಯರಿಕುಪ್ಪಿ ತಾ॥ ರಾಣೆಬೆನ್ನೂರ ಇವರಿಗೆ

ಬಸಪ್ಪ ಮರಿಯಪ್ಪಾ ಬಸವಂತ್ತಿ ಸಾ॥ ಧಾರವಾಡ ಈತನು ಕೊಡುವ ನೋಟೀಸು ಏನಂದರೆ ನೀನು ಇದೇ ವರ್ತಮಾನಪತ್ರದಲ್ಲಿ ಕೊಟ್ಟ ತಾ॥ ೩-೫-೧೯೩೦ ಇಸ್ವಿಯ ನೋಟೀಸು [illegible] ಟ್ಟಿತು ಅದರಲ್ಲಿ ನೀನು ಬರೆದ [illegible] ಭಕ್ತ ಸುಳ್ಳು ಅದೆ ನಿನ್ನನ್ನು ನಾನು ಬಂಗಾಂತನಕ್ಕೆ ಎಂದೂ ಕಳಿಸಿಲ್ಲ ನಿಮ್ಮ ತಂದೆಯು ನನ್ನ ಮೇಲೆ ಹಾನಗಲ್ಲ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಹಣ ಅಪರಾತಫರ ಮಾಡಿದನೆಂತ [illegible] ಯಾದ [illegible] ಮಾಡಿ ಕೋರ್ಟಿನಲ್ಲಿ [illegible] ನನ್ನನ್ನು ದಸ್ತಗೀರ ಮಾಡಿದ ೨-೩ ದಿವಸಗಳಲ್ಲಿ ನನಗ ಮತ್ತು ನಿಮ್ಮ ತಂದೆಯವರಿಗೆ ಮಧ್ಯಸ್ಥರು [illegible] ದಿಂದಾ ನಮ್ಮ [illegible] ನನ್ನ ಮೇಗಿನ ಅಪರಾಧ ಮಾಫಿಯಾದ ಮೇಲೆ [illegible] ನಿಮ್ಮ ಅಕ್ಕನಾದ ಲಕ್ಷ್ಮವ್ವನ ಕಡಿಂದ [illegible] ನನಗೆ ಇನಾಮ ಕೊಡುವರೆ ಮಾಡಬೇಕ [illegible] ನಿಮ್ಮ ತಾಯಿ [illegible] ತಂದೆಯು ನಿನಗೆ ಬರ್ಥಾರಣೆ ನಾನು ತಮ್ಮ ಊರಿಗೆ ಕರಕೊಂಡು ಹೋಗಿ [illegible] ನಾನು ನಿನ್ನನ್ನು ೪-೬ ಸಾರೆ ಕರೆಯಲಿಕ್ಕೆ ಬಂದರೂ ನೀನು ಬರಲಿಲ್ಲ

ಇಂಥ ಪರಿಸ್ಥಿತಿಯಲ್ಲಿ ನಾನು ನಿಮ್ಮ ತಂದೆಯ ಮನೆಗೆ ಬಂದು ದಾಗೀನೆ ಬೇಕೆಂದು ನೀನು ಕೊಟ್ಟದ್ದು ತೀರ ಅಸಂಭವದ ಮಾತು ಸದರಿ ದಾಗೀನೆಗಳು ನಿನ್ನ ಹತ್ತರವೇ ಇದ್ದು ನಿನ್ನ ತಾಯಿ ತಂದೆಯು [illegible] ಈ ಪ್ರಕಾರ ಸುಳ್ಳು ನೋಟೀಸು ಕೊಟ್ಟಿರುತ್ತಿ

ನಿಮ್ಮ ತಂದೆಯು [illegible] ತಾ॥ ೫ ೫ ೧೯೩೦ ಇಸ್ವಿಯ ನೋಟೀಸಿನಲ್ಲಿ ಬರೆದ [illegible] ಒಂದು [illegible] ಮಾಡಿ [illegible] ದರ ಮ್ಯಾಲೆ ನಾನು [illegible] ಒಪ್ಪುತೆ ಇಲ್ಲ [illegible]

ಕಾರಣ ಈ ನೋಟೀಸಿನಿಂದ ತಿಳಿಸುವದೇನಂದರೆ ಈ ನೋಟೀಸ ಮುಟ್ಟಿದ ೪ ದಿವಸಗಳ ಒಳಗಾಗಿ ನೀನು ನಿನ್ನ ನೋಟೀಸಿನಲ್ಲಿ ನಮೂದಿಸಿದ ದಾಗೀನೆಗಳನ್ನು ತಗೊಂಡು ಬಂದು ಒಂದು ಯಂದಿನಂತೆ ಬಾಳುವೆ ಮಾಡಬೇಕು ಮತ್ತು ನಿಮ್ಮ ತಂದೆಯಾದ ಮರಿಬಸಪ್ಪಾ [illegible] ಬತ್ತಿಲ ಸಾ॥ ಯರಿಕುಪ್ಪಿ ತಾ॥ ರಾಣೆಬೆನ್ನೂರ ಈತನು ನನ್ನ ಮೇಲೆ ನಮೂದಿಸಿದ ರಾಗದ ನೋಟೀಸು ಮಾಡಿ ನನಗೆ ತಿರಿಗಿ ಕೊಡಬೇಕು ಈ ಪ್ರಕಾರ ಮಾಡದಿದ್ದರೆ ನಿಮ್ಮ [illegible] ಮ್ಯಾಲೆ ದಿವಾಣಿ ಮತ್ತು ಫೌಜದಾರ ಕೋರ್ಟಿನಲ್ಲಿ ಕೆಲ್ಸ ನಡೆಸಲಾಗುವದು. ಇದೇ ನೋಟೀಸಿನ ಒಂದು ಪ್ರತಿ ಸದರಿ ನಿಮ್ಮ ತಂದೆಗೆ ಕಳಿಸಿದೆ ತಿಳಿಯುವದು ತಾ॥ ೩-೫-೧೯೩೦ ಇಸ್ವಿ

[illegible] ಮರಿಯಪ್ಪಾ ಬಸವಂತ್ತಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹೋಗುವ ಮುಟ್ಟಿನ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ [illegible] ಮೂರೆ ದಿನಗಳಲ್ಲಿ [illegible] ಗುಣವಾಗುವದು. ಇದ್ದೊಂದು ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ [illegible] ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆಖರ್ಚ ಬೇರೆ. ೨ ರೂಪಾಯಿಗಳನ್ನು ಮನಿಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o ವೈಧ್ಯ ಭ್ಯಾಂಕ ಧಾರವಾಡ

ಸೂಚನೆ:— ನಿಮ್ಮ ಔಷಧ ಬೇಕಾದ್ದಲ್ಲಿ ಯಾವ ವರ್ತಮಾನಪತ್ರದ ಜಾಹೀರಾತನ್ನು [illegible] ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ನೇಕಾರ ನಡಿಸುವದನ್ನು ಕಲಿಯುವ ಸೋಯಿಯು



ಬಾರದಾದ ಜಿಲ್ಲೆಯಲ್ಲಿ
[illegible] ಶಿಕ್ಷಣ [illegible] ಸ ಹವು.

[illegible] ಬರಿ[illegible] ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ಪೆಟ್ಟು ಮಾಡಿಕೊಂಡು ಬರುವಂಥ ಈ [illegible] ಮಾಡಿಕೊಟ್ಟು. [illegible] ದ ಉದ್ಯಮ ಶಿಕ್ಷಣ [illegible] ನ ವು ಧಾರವಾಡದಲ್ಲಿ ತೆಗೆದಿದ್ದು, ಅಲ್ಲಿ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ [illegible] ಯ ಮಿತ ಜನರು [illegible] ಕಲಿಯುವವರ ಸಿರಾಶೆಯಾಗಬಾರದೆಂದು [illegible] ಈ ಜಾಹೀರಾತು [illegible] ಮೇ [illegible] [illegible] ಜನರು [illegible] [illegible] ಕೂಡಲೆ ಅರ್ಜಿ ಮಾಡಿ, [illegible] [illegible] ಸಮಕ್ಷ [illegible] ಪತ್ರದ್ವಾರದಿಂದ [illegible].

ಪ್ರೊ. [illegible]
[illegible] ಧಾರವಾಡ

ಈ ಪತ್ರವನ್ನು [illegible]ಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಬುಧವಾರ ತಾರೀಖು ೧೪ ನೇ ನೋವೆಂಬರ ೧೯೩೦ (ಸಂಖ್ಯೆ ೧೨೧

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. [illegible]

AGENTS WANTED ON LIBERAL TERMS

For further particulars apply to -

Chief representative for Karnatak and South Kanara.

N. T. Phona. P. B. 34. *Hubli.*

ಇಂಗ್ಲೆಂಡದಲ್ಲಿ ರಜಿಸ್ಟರ ಆದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಸಮರ್ಥ ಠೇವಣಿಯುಳ್ಳ ಕಾಯಮಾಗಿ ರದ್ದಾಗದ ಪಾಲಿಸಿಯು [illegible] ಯೋಜನೆ ಒದಗಿಸಲಾಗಿವೆ	ಬಿ ಬಿನವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಫೋನ್ಸ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೀ. ಬಾ. ೩೪,

[illegible]

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಬಡ್ಡಿ ಹೆಚ್ಚಿನ ಮೇಲುಂಟು. ಅಕ ಕೌಂಟು ತೆರೆದವರಿಗೆ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಠೇವಣಿಗಳಿಗೆ ಒಳ್ಳೇ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ದಾತಾರ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ —

ಹಸ್ತಿ ಕೊಡಬಾರದೆಂದು ಬಾರಡೋಲಿ ರೈತರ ಸತ್ಯಪ್ರತಿಜ್ಞೆ.

"ಸರಕಾರದವರು ನಮಗೆ ಜೀವಕ್ಕಿಂತ ಹೆಚ್ಚು ಪ್ರಿಯರಾದಂಥ ಸರದಾರ ವಲ್ಲಭಭಾಯಿ ಪಟೇಲರನ್ನು ತುರಂಗದಲ್ಲಿ ಹಾಕಿದರು. ಬಾರಡೋಲಿ ತಾಲೂಕಿನ ಅನೇಕ ಪವಿತ್ರಾತ್ಮರನ್ನು ಸೆರೆಯಲ್ಲಿಟ್ಟದ್ದರಿಂದ ಅನೇಕ ಮುಖಂಡರು ಬಂದಿವಾಸ ಅನುಭವಿಸುತ್ತಿದ್ದಾರೆ. ಹಿಂದುಸ್ಥಾನದ ಹೃದಯ, ಮಹಾತ್ಮ ಮತ್ತು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠರಾದ ಮಹಾತ್ಮರನ್ನು ಹಿಡಿದು ಹಾಕಿದರು. ಇವೆಲ್ಲ ಅನ್ಯಾಯಗಳನ್ನು ನಾವು ಬಾರಡೋಲಿಯ ರೈತರು ಸಹನ ಮಾಡಲಾರೆವು. ಆದುದರಿಂದ ನಾವು ಇಂದು ಕೂಡಿದ ಸಭೆಯಲ್ಲಿ ಸರಕಾರೀ ಹಸ್ತಿಯನ್ನು ಕೊಡಬಾರದೆಂದು ಭೀಷ್ಮಪ್ರತಿಜ್ಞೆ ಮಾಡುತ್ತೇವೆ. ಈ ಪ್ರತಿಜ್ಞೆಯಲ್ಲಿ ಸರಕಾರದ ಅಮಲದಾರರು ನಮಗೆ ತರುವ ಎಲ್ಲ ಕಷ್ಟನಷ್ಟ ತಾಪಗಳನ್ನು ಸಹನ ಮಾಡುವೆವು. ತುರುಂಗದಲ್ಲಿ ಹಾಕಿದರೆ, ಸ್ಥಾವರ ಜಂಗಮ ಜಿನಗಿಯನ್ನು ಜಪ್ತು ಮಾಡಿದರೆ, ಅಥವಾ ಜೀವ ಹೋಗುವ ಪ್ರಸಂಗ ಬಂದರೆ ಎಲ್ಲಕ್ಕೂ ಸಿದ್ಧರಾಗಿದ್ದೇವೆ. ಸರದಾರ ಪಟೇಲ ಅಥವಾ ಮಹಾತ್ಮರು ಹಸ್ತಿ ಕೊಡಬೇಕೆಂದು ಹೇಳಿದರೆ ಮಾತ್ರ ಕೊಡುವೆವು. ಆಳರಸರ ದಬ್ಬಾಳಿಕೆಗೆ ಹೆದರಿ ಎಂದೆಂದಿಗೂ ಕೊಡತಕ್ಕವರಲ್ಲೆಂದು ರೈತರು ಶನಿವಾರ ಹತ್ತನೆಯ ತಾರೀಖಿನ ದಿವಸ ಬಾರಡೋಲಿಯಲ್ಲಿ ಸ್ವರಾಜ್ಯಾಶ್ರಮದಲ್ಲಿ ಮಹಾತ್ಮರ ತರುವಾಯ ದಳಪತಿಯಾದ ಶ್ರೀ. ಅಬ್ಬಾಸ ತಯಾಬಜಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಠರಾವು ಮಾಡಿದ್ದಾರೆ."

ಸರಕಾರೀ ಕಾಮದಾರರನ್ನು

ಹಾಳೆ ಮಾಡುವರು.

ರೈತರು ಸತ್ಯಾಗ್ರಹದ ವೀರಪ್ರತಿಜ್ಞೆ ಮಾಡಿದಾಗ ಸರಕಾರೀ ಕಾಮದಾರರು ಕೆಲಸದಲ್ಲಿರುವದರಿಂದ, ಪ್ರಜೆಗಳನ್ನು ತೊಂದರೆ ಪಡಿಸಲು ದಾರಿಯಾಗುತ್ತದೆ. ಆದ್ದರಿಂದ ಇಂಥ ಸಂಕಟದ ಪರಿಸ್ಥಿತಿಯಲ್ಲಿ ಬಾನಭೋಗರನ್ನು ಪ್ರಾರಂಭಿಸಿ ತಾಲೂಕಿನ ಎಲ್ಲ ಕಾಮದಾರರು ರಾಜೀನಾಮೆ ಕೊಡಬೇಕು. ಪ್ರತಿಯೊಂದು ಹಳ್ಳಿಯವರು, ಜಾತಿ ಜಾತಿಗಳ ಪಂಚರು, ಮಹಾ ಜನರು ಈ ಜನರಿಗೆ ಮುಂಚಾಗಿ ತಾಕೀದಿ ಕೊಡತಕ್ಕದ್ದು. ಈ ಎಚ್ಚರಿಕೆಗೆ ಅವರು ಸೊಪ್ಪು ಹಾಕದಾದರೆ ಅವರನ್ನು ಕುಲದಿಂದ ಹೊರಗೆ ಇಟ್ಟು, ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲ್ಪಡುವದು.

ರೈತರಿಗೆ ಶ್ರೀ. ತಯ್ಯಬಜಿಯವರ ಉಪದೇಶ

ಅಧ್ಯಕ್ಷರಾದ ಶ್ರೀ. ತಯ್ಯಬಜಿಯವರು ರೈತರಿಗೆ ಉಪದೇಶ ಮಾಡಿದ್ದೇನಂದರೆ–

ರೈತರು ತಮ್ಮ ಹೊಲಗಳ ದೆಸೆಯಿಂದಲೂ ಸತ್ಯಾಗ್ರಹದ ಶಿಕ್ಷಣ ಪಡೆಯುವದು ಅವಶ್ಯವಾಗಿರುತ್ತದೆ. ನಿಮ್ಮ ಹಣ (ಹಸ್ತಿ) ಉಳಿಸಿಕೊಳ್ಳುವದಕ್ಕಾಗಿ ಈ ಹೊದಲು ಸತ್ಯಾಗ್ರಹದ ತಾಲೀಮು ಮಾಡಿದ್ದೀರಿ, ಸರಕಾರವು ಏನೇನು ಮಾಡಲು ಸಮರ್ಥವಾಗಿರುತ್ತದೆಂಬದನ್ನು ನೀವು ಬಲ್ಲಿರಿ. ಸರಕಾರದವರು ನಿಮ್ಮ ಹೊಲಗಳನ್ನು ಖಾಲಸಾ ಮಾಡಿದರೆ ಅದು ಕಾಗದದಲ್ಲಿ ಮಾತ್ರ ಉಳಿಯುವದು. ನಿಮ್ಮ ಹೊಲಗಳನ್ನು ಲಿಲಾವಿಗೆ ಹಚ್ಚಿದರೆ ಯಾವನೂ ಸವಾಲು ಮಾಡಲಾರನು. ಯಾವನೊಬ್ಬನು ಸವಾಲು ಮಾಡಿ, ತಕ್ಕೊಂಡರೆ ಅದನ್ನು ಹರಗಿ ಬಿತ್ತುವ ರೈತನು ದೊರೆಯಲಾರನು. ಈ ಠರಾವಿನ ವಿರುದ್ಧ ಯಾವನಾದರೂ ನಡೆದರೆ ಅವನನ್ನು ಕುಲದಿಂದ ಹೊರಗೆ ಇಡತಕ್ಕದ್ದು.

ಖೇಡ ಜಿಲ್ಹೆಯಲ್ಲಿಯೂ ಹಸ್ತಿ ಕೊಡ

ಬಾರದೆಂಬ ಚಳವಳಿಯು

ಶ್ರೀ. ದಾದಾಭಾಯಿ ದೇಸಾಯಿಯವರು ಕೌನ್ಸಿಲ ಮೆಂಬರರಾಗಿದ್ದರು. ಅವರು ದಬ್ಬಾಳಿಕೆಯನ್ನು ನಿಷೇಧಿಸಿ ರಾಜೀನಾಮೆ ಕೊಟ್ಟದ್ದು, ಕರಬಂದಿಯ ಚಳವಳಿಯಲ್ಲಿ ಪ್ರಮುಖ ಭಾಗ ತಕ್ಕೊಂಡಿದ್ದಾರೆ. ಇವರು ಖೇಡ ಜಿಲ್ಹೆಯ ಪ್ರಮುಖ ಜನರ ಪರಿಷತ್ತನ್ನು ಬೇಗನೆ ಕೂಡ್ರಿಸಿ, ಇಡೀ ಜಿಲ್ಹೆಯ ರೈತರು ಹಸ್ತಿ ಕೊಡಬಾರದೆಂಬ ಕೋಲಾಹಲ ಎಬ್ಬಿಸಬೇಕೆಂದಿದ್ದಾರೆ.

ಜಂಬೂಸರವು ಬಾರಡೋಲಿಯನ್ನು

ಹಿಂಬಾಲಿಸಿತು.

ಬಡೋದೆ ಜಿಲ್ಹೆಗೆ ಸೇರಿದ ಜಂಬೂಸರ ತಾಲೂಕಿನ ಯಾವತ್ತು ಗ್ರಾಮಗಳ ರೈತರು ಸರಕಾರೀ ಹಸ್ತಿ ಕೊಡಬಾರದೆಂಬ ಠರಾವು ಮಾಡಿದ್ದಾರೆ. ಹಸ್ತಿ ಕೊಡಬಾರದೆಂಬ ಬೇಗೆಯು ಇಡೀ ಗುಜರಾಥದಲ್ಲಿ ಹಬ್ಬುವದೆಂದು ಈ ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

ವಕೀಲರ ಖಾದೀ ಪ್ರತಿಜ್ಞೆಯು.

ಕರಾಚಿಯಲ್ಲಿ ಸಿಂಧಪ್ರಾಂತದ ವಕೀಲರ ಸಭೆಯು ಸೇರಿ, ಈಗಿನ ದಬ್ಬಾಳಿಕೆ, ಮಹಾತ್ಮರ ದಸ್ತಗಿರಿ ಮತ್ತು ಪ್ರೆಸ ಆರ್ಡಿನನ್ಸವನ್ನು ನಿಷೇಧಿಸಿದರು. ಆ ಸಭೆಗೆ ಬರತಕ್ಕ ವಕೀಲರು ಸಂಪೂರ್ಣ ಖಾದಿಯ ಉಡಿಗೆ ತೊಡಿಗೆ ಮಾಡಿದ್ದರಲ್ಲದೆ, ಇನ್ನುಮುಂದೆಯೂ ತಾವು ಕೂಡ ಅರ್ಬಿಗಳನ್ನು ರಾಷ್ಟ್ರೀಯ ನಿಶಾನೆಗಳಿಂದ ಸಿಂಗರಿಸಿದ್ದರು.

ಶ್ರೀ. ಹೊಸಮನೆಯ ಸಿದ್ದಪ್ಪನವರ

ಮಹತ್ವದ ಭಾಷಣವು.

ಬೆಳಗಾವಿಯಲ್ಲಿ ಸೇರಿದ ಬ್ರಾಹ್ಮಣೇತರ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಹೊಸಮನೆಯ ಸಿದ್ದಪ್ಪನವರು ಮಹತ್ವದ ಭಾಷಣ ಮಾಡಿದ್ದು ಅದರ ಮುಖ್ಯಾಂಶಗಳನ್ನು ಇದರಡಿ ಕೊಡುತ್ತೇವೆ.

೧ ಪ್ರಕಿಯೆಂದು ಒಣದಲ್ಲಿ ಸಾಕಷ್ಟು ಜಾಗೃತಿಯಾಗಿರುವದರಿಂದ ಇನ್ನು ಮುಂದೆ ಬ್ರಾಹ್ಮಣೇತರವೆಂಬ ಹೆಸರು ನಿರರ್ಥಕವು.

೨ ಬ್ರಾಹ್ಮಣೇತರವೆಂದರೆ ಬ್ರಾಹ್ಮಣರನ್ನು ಬಿಟ್ಟು ಬ್ರಾಹ್ಮಣೇತರ ಇತರ ಅರ್ಥವನ್ನು ನಿಶ್ಚಿತವಾಗಿ [illegible] ಎಂದು ಹೇಳಬಹುದು. ಇದನ್ನು ರಾಜಕೀಯದಲ್ಲಿ ತಂದರೆ ರಾಜಕಾರಣದಲ್ಲಿ ಜಾತಿ [illegible] ಒಪ್ಪಿದ ಹಾಗಾಗುತ್ತದೆ. ಆ ಯಾವ [illegible] ಜೀವನಕ್ಕಾಗಿ [illegible] ಹಿಂದೂ ಪುತ್ರನು ಜಾತಿಭೇದದ ಭಾವನೆಯನ್ನು ಕೂಡಿ ಗೊತ್ತಾದ ಸಮಯ ಬಂದಿದೆ. ಅದರಿಂದ ರಾಷ್ಟ್ರೀಯ ಪಕ್ಷವೆಂದು ಕರೆದುಕೊಳ್ಳುವದು ಹೆಚ್ಚು ಸಮಂಜಸವೆಂದು ನನಗೆ ತೋರುತ್ತದೆ.

೩ ಇಲ್ಲಿಯ ವರೆಗೆ ಜಾತಿಭೇದದ ತಪ್ಪು ತಿಳುವಳಿಕೆಯಲ್ಲಿ ನಾವು ವ್ಯರ್ಥ ಹೊಡೆದಾಡಿದೆವು. ಯುರೋಪಿಯನ್ನರ ದೇಶಗಳಲ್ಲಿ ಶ್ರೀಮಂತ, ಬಡವ, ಕೂಲಿಕಾರ ಹೀಗೆ ಜಾತಿಭೇದಗಳಿಗೆ ಅವಕಾಶವಿದ್ದರೂ, ಒಕ್ಕಲತನದಿಂದ ಜೀವಿಸುವ ಭರತಭೂಮಿಯಲ್ಲಿ ಬ್ರಾಹ್ಮಣ–ಬ್ರಾಹ್ಮಣೇತರ ಭೇದವನ್ನು ಸಹಜವಾಗಿ ಇಲ್ಲದಂತೆ ಮಾಡಬಹುದು.

೪ ಮಾಂಟೆಗು–ಚೆಮ್ಸಫೋರ್ಡ ಸುಧಾರಣೆಗಳನ್ನು ಸ್ವೀಕರಿಸಿ ಮುಸಲರೂ, ಬ್ರಾಹ್ಮಣೇತರರೂ ಗುಡ್ಡದಂಥ ತಪ್ಪು ಮಾಡಿದರೆಂದು ನನಗೆ ಅನಿಸುತ್ತದೆ. ಇವು ಹೆಚ್ಚು ಪೆಚ್ಚುವನ್ನು ರೈತನ ಮೇಲೆ ಹೇರಿ, ಅವನ ಹಿತವನ್ನು ಬಿಟ್ಟು ಎಲ್ಲವನ್ನೂ ಬಯಸುವಂತಹವು. ವಿದ್ಯಾಖಾತೆಯ ಮಂತ್ರಿಯು ಮದ್ಯಪಾನ ಪ್ರತಿಬಂಧ ಮಾಡಬೇಕೆಂದರೆ ಶಿಕ್ಷಣ ಖಾತೆಯನ್ನು ಬಂದು ಮಾಡಬೇಕು. ಮಾಂಟೆಗು ಸುಧಾರಣೆಗಳು ದೇಶಕ್ಕೆ ತಂದು ಕೊಟ್ಟಂಥ ಫಲದ ಇದೊಂದು ಮಾದರಿಯು.

೫ ೧೯೧೯ ರಲ್ಲಿಯ ಸುಧಾರಣೆಗಳಲ್ಲಿಯ ಅಂತರ್ಗತವಾದ ಕಾಂಗ್ರೆಸ್ಸು ಬ್ರಾಹ್ಮಣೇತರರಿಗೆ

ಮುಂದ ಪಕ್ಷದವರಿಗೂ ನಾವು ಒಪ್ಪಲೇಬೇಕು. ಬಡವರ ಹಿತವು ಸ್ವಲ್ಪಾದರೂ ಸಾಧಿಸಬಹುದೆಂಬ ಆಶೆಯಿಂದ ಜನತೆಯು ವಿರೋಧವನ್ನು ಲೆಕ್ಕಿಸದೆ, ಸರಕಾರಕ್ಕೆ ಸಂಪೂರ್ಣ ಬೆಂಬಲವನ್ನು ಕೊಟ್ಟೆವು. ಅವರೇನು? ಸುಧಾರಣೆಯು ನಮಗೆ ಹೇಗೆ ಸಿಕ್ಕಿತು.

೬ ದಂಡಿನ ಖಾತೆಗೆ ಅನವಶ್ಯಕವಾಗಿ ಹೆಚ್ಚಾಗಿ ವಿನಿಯೋಗಿಸಲ್ಪಡುವ ಹಣವನ್ನು ಮತ್ತು ಕಲೆಕ್ಟರ ಮೊದಲಾದ ಜನರ ಸಂಬಳವನ್ನು ಕಡಿಮೆ ಮಾಡಬೇಕೆಂಬ ನಮ್ಮ ಬಲವಾದ ಇಚ್ಛೆ ಇದ್ದರೂ ಇವುಗಳ ಬಗ್ಗೆ ನಮಗೆ ಏನೂ ನುಡಿಯಲಿಕ್ಕೆ ಬರುವದಿಲ್ಲ. ಏಕೆಂದರೆ ಇವು ಕಾದಿಟ್ಟ ಖಾತೆಗಳು.

೭ ಯುರೋಪಿಯನ್ನರು ಅಮೇರಿಕೆಯು ಬ್ರಿಟಿಶರಿಂದ ಬೇರೆಯಾಗಿ ರಾಜ್ಯಸೂತ್ರವನ್ನು ನಡಿಸಲು ಸಮರ್ಥರಾದಂತೆ ಉಚ್ಚ ಸಂಸ್ಕೃತಿಯುಳ್ಳ ಹಿಂದೀಯರು ರಾಜ್ಯಭಾರವನ್ನು ಹೊರಲು ಅಸಮರ್ಥರಿರುವರೆಂದು ಸಾರುವದು ಶುದ್ಧ ತಪ್ಪು. ಬಹುಕಾಲದ ಗುಲಾಮಗಿರಿಯಿಂದ ಇಂಗ್ಲೆಂಡಿಗೆ ಬಂದ ಸರೆಯಿಂದ ಮುಂದ ಪಕ್ಷದವರು ಪೂರ್ಣ ಸ್ವಾತಂತ್ರ್ಯ [illegible] ಸಾರಿ ಸಾಮಂತ ಸ್ವರಾಜ್ಯವನ್ನು [illegible] ರೆಂದು ತಿಳಿಯುತ್ತಾರೆ.

೮ [illegible] ಜನತೆಗೆ ಅಧಿಕಾರ [illegible] ದವೇ ಇಲ್ಲ. [illegible] ದ ರಾಜ್ಯಶಾಸನವು [illegible] ವೇಳೆ ಹೇಳಲಾದದ್ದು [illegible] ಭಾವನನ್ನು ಹೇರಿದೆ

೯ ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯವು ಹೇಗೆ ಸಿಗುವ ಯಾವ ಚಂದ ಚಿನ್ಹವೂ ಇರುವದಿಲ್ಲ. ಹತ್ತು ವರ್ಷಗಳ ಹಿಂದೆ ೧೯೨೦ರಲ್ಲಿ ಸಿಗುವದೆಂದು ಭಾವಿಸಿದ್ದು [illegible]. ಅದು ಈಗ ನೋಡಲಿಕ್ಕೆ ಇಲ್ಲವೆ ಅದಕ್ಕೂ ಹೆಚ್ಚು ದೂರ ಸರಿದಂತೆ ಅನಿಸುತ್ತದೆ. ಒಡೆಯರು ಮಾತ್ರ ದಿನೇ ದಿನೇ [illegible]ದ್ದಾರೆ

೧೦ ಕೆಲವು ಜನರು ಸಾಮಂತ ಸ್ವರಾಜ್ಯ ಹಾಗು ಪೂರ್ಣ ಸ್ವರಾಜ್ಯದಲ್ಲಿ ಕಾಣಬರುವಷ್ಟು ಅಂತರವಿಲ್ಲೆಂದು ಪ್ರತಿಪಾದಿಸುವರು. ಇಂದಿನವರೆಗೆ ಬ್ರಿಟಿಶರೊಡನೆ ಬೆರತು ಅರಿತ ಅನುಭವದಿಂದ ದಾಸ್ಯತ್ವ ಮತ್ತು ಸ್ವಾತಂತ್ರ್ಯ ಇವುಗಳ ನಡುವೆ ಇರುವಷ್ಟೇ ಭೇದವು ಸಾಮಂತ ಮತ್ತು ಪೂರ್ಣ ಸ್ವರಾಜ್ಯಗಳ ನಡುವೆ ಕಂಡುಬರುತ್ತದೆ

೧೧ ಅಸ್ಪೃಶ್ಯರು ಸಾಮಾಜಿಕ ದೃಷ್ಟಿಯಿಂದ ಮತ್ತು ಹಿಂದೂ ಸಮಾಜವೇ ರಾಜಕೀಯ ದೃಷ್ಟಿಯಿಂದ ಬ್ರಿಟಿಶರಿಗೆ ಅಸ್ಪೃಶ್ಯವಾಗಿದೆ ಅಸ್ಪೃಶ್ಯ, ಮುಸಲಮಾನ, ಶೀಖ ಮೊದಲಾದವರು ಕಾಂಗ್ರೆಸಿನ ಕೂಡ ಸಹಕಾರ್ಯ ಮಾಡಿದರೆ ಹಿಂದುಸ್ಥಾನವು ಬ್ರಿಟಿಶ ರಿಗಿಂತ ಹೆಚ್ಚು ಉಪಾರ್ಜನೆಯಾಗಿದ್ದಿಂದ ಇವರ ಸುಧಾರಣೆಗಳನ್ನು ನೋಡುವದರಲ್ಲಿ ಸಂದೇಹವಿಲ್ಲ.

೧೨ ಮೇಲಿನ ಸಂಗತಿಗಳನ್ನು ಸಾಂಗೋಪಾಂಗವಾಗಿ ವಿಚಾರಿಸಲಾಗಿ, ನಮಗೆ ಕಾಂಗ್ರೆಸಿನ ಧ್ಯೇಯವನ್ನೇ ಅನುಸರಿಸದೆ ಗತ್ಯಂತರವಿಲ್ಲ. ಮುಂದ ಪಕ್ಷದವರು ಏನೇ ಹೇಳಲಿ ನಾವು ಮಾತ್ರ ಸಾರಾಸಾರ ವಿಚಾರದಿಂದ ಕಾಂಗ್ರೆಸಿನ ಧ್ಯೇಯವೇ ಸ್ವೀಕರಿಸಲು ಸಮಂಜಸವಾದುದೆಂದು ಮನಗಂಡಿರುವೆನು

೧೩ ಕರ್ನಾಟಕ ಮಾತೆಯ ಸುಪುತ್ರರಾದ ಶಂಕರ, ರಾಮಾನುಜ, ಬಸವ ಮಧ್ವ ಮತ್ತು ವಿದ್ಯಾರಣ್ಯರ ಹೆಸರಿಗೆ ಕಲಂಕ ತರದಂತೆ ನೀವೆಲ್ಲರೂ ಒಕ್ಕಟ್ಟಾಗಿ ಸ್ವಾತಂತ್ರ್ಯಕ್ಕೆ ಸಿದ್ಧರಾಗಬೇಕೆಂದು ಒಲವಾಗಿ ಅಪೇಕ್ಷಿಸುವೆನು.

ಬ್ರಾಹ್ಮಣೇತರರು ಕಾಂಗ್ರೆಸ ಸೇರಿದರು.

ಬೆಳಗಾವಿಯ [illegible]
ಸ್ಫೋಟಕ ಸುದ್ದಿಯು.

ಅದ್ಯ [illegible] ದಿವಸ ಬೆಳಗಾವಿಯಲ್ಲಿ ಬ್ರಾಹ್ಮಣೇತರ ಸಭೆ ಸೇರಿತು. ಧಿಮಿಟ ಸಾವಿರದಷ್ಟು ಜನ ಕೂಡಿತ್ತು ಅರ್ಧಕ್ಕಿಂತ ಹೆಚ್ಚು ಜನರು ಸ್ಥಳವಿಲ್ಲದೆ ಹೊರಗೆ ನಿಂತರು. ಶ್ರೀ. ಕೃ. ಹ್ವ ಪಾಟೀಲರು ಸ್ವಾಗತಾಧ್ಯಕ್ಷ ಮತ್ತು ಶ್ರೀ. ಹೊಸಮನಿ ಶಿದ್ದಪ್ಪನವರು ಸಭಾಧ್ಯಕ್ಷರಾಗಿದ್ದರು. ಸಭೆಯಲ್ಲಿ ಬ್ರಾಹ್ಮಣೇತರರೆಲ್ಲರು

"ಕರ್ನಾಟಕ ಕಾಂಗ್ರೆಸ ಲೋಕಪಕ್ಷವೆಂಬ ಹೆಸರಿನಿಂದ ಕಾಂಗ್ರೆಸದಲ್ಲಿ ಸೇರಬೇಕು. ಮತ್ತು ಕಾಂಗ್ರೆಸಿನ ಎಲ್ಲ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು"

ಎಂದು ಠರಾವು ಮಾಡಿದರು. ಇದರಲ್ಲಿ ಮುಖ್ಯವಾಗಿ

೧ ಅಸ್ಪೃಶ್ಯತಾ ನಿವಾರಣೆ
೨ ಮದ್ಯಪಾನ ಪ್ರತಿಬಂಧ
೩ ಪರದೇಶಿ ಸರಕಿಗೆ ಬಹಿಷ್ಕಾರ
೪ ಖಾದಿ ಹುಟ್ಟುವಳಿ ಮತ್ತು ಪ್ರಚಾರ
೫ ಗ್ರಾಮ ಸಂಘಟನೆ

ಇಷ್ಟು ಕಾರ್ಯಗಳನ್ನು ಕೂಡಲೆ ಕೈಕೊಳ್ಳಬೇಕೆಂದು ಗೊತ್ತು ಮಾಡಿದ್ದಾರೆ ಮತ್ತು ಸಭೆಯಲ್ಲಿ

೧ ಮಹಾತ್ಮರನ್ನು ಹಿಡಿದ ಬಗ್ಗೆ
೨ ಪ್ರೆಸ ಏಕ್ಟಿನ ಆರ್ಡಿನನ್ಸ ತೆಗೆದ ಬಗ್ಗೆ ನಿಷೇಧವನ್ನು ವ್ಯಕ್ತಪಡಿಸಿದರು. ಮತ್ತು ಕಾಂಗ್ರೆಸಕ್ಕೆ ಸದಸ್ಯರನ್ನು ಕೂಡಿಸಲಿಕ್ಕೂ ಇತರ [illegible] ಕಾರ್ಯಗಳನ್ನು ಕೃತಿಯಲ್ಲಿ ತರುವದಕ್ಕಾಗಿಯೂ ಶ್ರೀ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿ ನೇಮಿಸಿದರು.

---

೩೭ ಸ್ವಯಂಸೇವಕರನ್ನು ಹಿಡಿದು ೩೧ ಜನರನ್ನು ಬಿಟ್ಟರು.

ವಿಲಾಯತಿಯ ಅರಿವೆಯ ಹೋಳಿಯ ದಿನ ಮುಂದ ಪೋಲೀಸರು ೩೭ ಜನ ಸ್ವಯಂಸೇವಕರನ್ನು ಹಿಡಿದರು ಆಗ ಪಟ್ಟಣದ ತುಂಬ ದೊಡ್ಡ ಚಳವಳಿಯಾಯಿತು. ಮೇಲಿನ ಸಭೆಯಲ್ಲಂತೂ ವಿಲಕ್ಷಣ ಗಡಿಬಿಡಿಯಾಯಿತು. ಹಿಂದುಗಡೆ ಪೋಲೀಸರು ೩೧ ಜನರನ್ನು ಬಿಟ್ಟು, ಆರೇ ಜನರನ್ನು ಹಿಡಿದಿದ್ದಾರೆ. ಸಾಯಂಕಾಲದಲ್ಲಿ ವಿಲಾಯತಿಯ ಅರಿವೆಯ ಪ್ರಚಂಡ ಹೋಳಿಯಾಯಿತು.

ಧಾರವಾಡಕ್ಕೆ ನಿನ್ನೆ ಸಾಯಂಕಾಲದಲ್ಲಿ ಬಂದ ತಾರುಗಳು.

ತಯ್ಯಬಜಿಯ ದಸ್ತಗಿರಿ—
ಧರಾಸಣದಲ್ಲಿ ಉಪ್ಪಿನ ಉಗ್ರಾಣವನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಹೊರಟ ಶ್ರೀ ಅಬ್ಬಾಸ ತಯ್ಯಬಜಿ ಮತ್ತು ಅವರ ೫೯ ಜನ ಹ್ವಾಲಂಟಿಯರರನ್ನು ದಸ್ತಗಿರಿ ಮಾಡಿದರು. ಇವರ ಮೇಲೆ ಬೇಕಾಯದೆಶೀರ ಮಂಡಲಿ ಆರೋಪ ಹೊರಿಸಿದ್ದಾರೆ.

ಶ್ರೀ ಸರೋಜಿನಿಯವರ ಮುಖಂಡತ್ವ—
ಶ್ರೀ ದೇವಿ ಸರೋಜಿನಿಯವರು ಧರಾಸಣ ತಯ್ಯಬಜಿಯವರ ಸ್ಥಾನದಲ್ಲಿ ಕಾಯದೆಭಂಗದ ಮುಖಂಡತ್ವವನ್ನು ವಹಿಸುವರು. ಇವರು ಮುಂಬಯಿಯಿಂದ ಸ್ವಯಂಸೇವಕರ ದೊಡ್ಡ ತಂಡವನ್ನೊಯ್ಯುವರು.

ಕಿಚಲೂಸಾಹೇಬರಿಗೆ ಶಿಕ್ಷೆ—
ಅಮೃತಸರದಲ್ಲಿ ಡಾಕ್ಟರ ಕಿಚಲೂಸಾಹೇಬರಿಗೆ ಮೂರು ವರ್ಷದ ಸಶ್ರಮ ಶಿಕ್ಷೆಯಾಯಿತು.

ಶಿರೋಡೆಯಲ್ಲಿ ೯೦ ಜನರ ದಸ್ತಗಿರಿ—
ಮಹಾರಾಷ್ಟ್ರದಲ್ಲಿ ಶಿರೋಡವು ಕಾಯದೆಭಂಗದ ಮಧ್ಯಸ್ಥಳವಾಗಿರುತ್ತದಷ್ಟೇ. ಇಲ್ಲಿಯವರು ೪೦೦ ಮಣ ಉಪ್ಪು ಮಾರಿದರು. ಇದರ ಮುಖ್ಯವೆಂದು ಸರಕಾರದವರು ಅಲ್ಲಿಯ ಮುಖಂಡರು ಮತ್ತು ಹ್ವಾಲಂಟಿಯರರು ಸೇರಿ ತೊಂಭತ್ತು ಜನರನ್ನು ಹಿಡಿದಿದ್ದಾರೆ.

ರಾವುಂಡ ಟೇಬಲಿನ ಜಾಹೀರನಾಮೆ.

—()—()—()—

ಕಟ್ಟಕಡೆಗೆ ಮಿ. ಬೆನ್ನ ವೆಜ್‌ವುಡ್ಡಸಾಹೇಬರು ಅಕ್ಟೋಬರ ತಿಂಗಳ ೨೦ನೇ ತಾರೀಖಿನ ದಿವಸ ರಾವುಂಡ ಟೇಬಲ ಪರಿಷತ್ತು ಲಂಡನದಲ್ಲಿ ಕೂಡುವದೆಂದು ಜಾಹೀರ ಮಾಡಿದ್ದಾರೆ.

ಇದನ್ನು ನೋಡಿ ೯ ನೇಯ ತಾರೀಖಿನ ದಿನ ಆ ಪಳ್ಳಿಗಳಲ್ಲಿನ ಸಾವಿರಾರು ಗ್ರಾಮಸ್ಥರು ಇದೇ ರೀತಿ ಸೋಕ್ಷವನ್ನು ಕೊಡದೆ ಉಪ್ಪನ್ನು ತಂದರು. ಅಲ್ಲದೆ ನಾಳಿನ ದಿನ ಅಲ್ಲಿ ಸಾಮುದಾಯಿಕ ಉಪ್ಪಿನ ಕಾಯದೆಭಂಗವು ನಡಿಯುವದಿದೆ.

ಪರದೇಶೀ ವಸ್ತ್ರ ಬಹಿಷ್ಕಾರ ಚಳವಳಿಯಂತೂ ಒಳ್ಳೇ ಹುರುಪಿನಿಂದ ನಡೆಯುತ್ತಿದೆ. ಇಲ್ಲಿನವರೆಗೂ ವಿದೇಶೀ ವಸ್ತ್ರಗಳ ಬಹಿಷ್ಕಾರ ಚಳವಳಿಯಲ್ಲಿ ಸ್ತ್ರೀಯರು ಅತಿಶಯ ಭಾಗವನ್ನು ತೆಗೆದುಕೊಂಡು ಕೆಲಸ ಮಾಡುತ್ತಾ ಬರುತ್ತಿದ್ದಾರೆ.

ಪ್ರಕಟನಾ ಅಧಿಕಾರಿ
ಅಂಕೋಲಾ

ಬ್ಯಾರಿಸ್ಟರರ ಕಾಯದೆಭಂಗ–

ನಾಗಪೂರದ ಬ್ಯಾರಿಸ್ಟರ ಅಭ್ಯಂಕರರು ಆ ಇಲಾಖೆಯ ಮರಾಟಿ ಭಾಗದ ಕಾಂಗ್ರೆಸದ ಅಧ್ಯಕ್ಷರಾಗಿದ್ದಾರೆ. ಇವರು ಸಾರ್ವಜನಿಕವಾಗಿ ಇಂಗ್ಲಿಷ ಸರಕಾರದವರು ಪ್ರೊಸ್ಕ್ರಾಯಿಬ ಮಾಡಿದಂಥ ಭಾರತವು ಇಂಗ್ರೇಜಿ ರಾಜ್ಯವೆಂಬ ಪುಸ್ತಕದೊಳಗಿನ ಭಾಗವನ್ನೋದಿದರು.

ಧಾರವಾಡ–

ಇಲ್ಲಿಯ ಶ್ರೀ. ಯಮುನಪ್ಪಾ ರೇವಡಿಯವರ ಪುತ್ರಿ ಕುಮಾರಿ ಸಾವಿತ್ರಿಬಾಯಿಯವರು ಎಮ್. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿದ್ದಾರೆಂದು ಬರೆಯುವದಕ್ಕೆ [illegible]ಕೋಷವಾಗುತ್ತದೆ. ಇಲ್ಲಿ ಹೆಣ್ಣುಮಕ್ಕಳಲ್ಲಿ ವೈದ್ಯಕೀಯಲ್ಲಿ ಇಷ್ಟು ದೊಡ್ಡ ಪರೀಕ್ಷೆ [illegible]ಟ್ಟವರು ಇವರೇ ಮೊದಲನೆಯವರು.

ಜಾಹೀರ ನೋಟೀಸು

ಕೆಳಗೆ ಹೆಸ್ಸಟ್ಟಿನ ಗುಕಾರ್ ಮಾಡುವವಳು ಈ ಜಾಹೀರ ನೋಟಿಸಿನಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ

ಮಹಾದೇವಗೌಡಾ

ಭೀಮನಗೌಡಾ	ಗುರುಸಿದ್ಧನಗೌಡಾ	ದೇವಕಗೌಡಾ	ಶಿವನಗೌಡಾ (ಹ.ಬ್ಬಾ)
	ಮಲ್ಲನಗೌಡನಿಗೆ ದತ್ತಕ		ಬಾಸಹೆಂಡತಿ ಬಸವ್ವಾ

ಹೋಗಿರತ್ತಾರೆ

ನಾನು ಈಗ ಇದೇ ಧಾರವಾಡ ಕೋರ್ಟಿನಲ್ಲಿ ಗುರುಸಿದ್ಧಗೌಡಾ ದತ್ತಕ ತಂದಿ ಮಲ್ಲನಗೌಡಾ ಈತನ ಮೇಲೆ ಯಾವತ್ತು ಆಸ್ತಿ ಕಬಜ [illegible] ದಾವೆ ಮಾಡಿಯುತ್ತೇನೆ ಈತನು ಲ್ಯಾಂಡ ಮಾರಗೇಜ ಬ್ಯಾಂಕಿನಲ್ಲಿ ಸಾಲ ತೆಗೊಳ್ಳ [illegible] ನಡಿಸಿ[illegible]ತ್ತಾನೆ ಕಾರಣ ಇವನಿಗೆ ಬ್ಯಾಂಕಿನವರು ಅಥವಾ ಯಾರಾದರು ಸಾಲಾ [illegible] ಪತ್ರ ವಗೈರ ಹಿಡದರೆ ದಾವದ ಆಸ್ತಿಯ ಮೇಲೆ ಬಾಂಧಾ ಇಸಲಾರದು ತಿಳಿಯುವದ [illegible]

ಈ ಎಡಸ್ಸೆ ಹೆಸ್ಸಟ್ಟಿನ ಗುರ್ತ [illegible] ದಿನದ [illegible] ‖ ಫ್ಫೆ [illegible] ಇಕ್ಕೈದು ಇರುತ್ತದೆ

ಅನೇಕ [illegible]

ನಿರಾಶರಾಗಿರುವ [illegible] ಸಂತೋಷ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣ ದಳಿಯ [illegible] ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದಿಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಪೈಸ್ಸಾರ [illegible] ವರ್ಷಗಳ ಅನುಭವ! [illegible] ರೂಪಾಯಿ, ಅಂಚೆಖರ್ಚ ಬೇರೆಯಲ್ಲ. ಈ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಟೀಪ್:– ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಔಷಧಿಯನ್ನು ತರಿಸುವಿರೆಂಬದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರೈವ್ಹರ ವಿದ್ಯೆ ಕಲಿಯಬೇಕಾದ ಜನರು ಇವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ನೆಷ್ಟದ [illegible] ಮಾಡಿಕೊಟ್ಟು, ನ್ಯಾಯಸ್ಥಿಂದ ಉತ್ತಮ ಶಿಕ್ಷಣ [illegible] ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿನ್ನು, ಈಗಾಗಲೇ ಅನೇಕರು ಶಿಕ್ಷಣ ಪಡೆ[illegible] ಪ್ರತಿ ತಿಂಗಳ [illegible] ನಿಯಮಿತ [illegible] ಕಲಿಯುವವರ [illegible] ಆದ್ದರಿಂದಾಗಿ ಈ ಜಾಹೀರಾತು [illegible] ಮೋ ಅಪ್ಪಿರಿ [illegible] ಆದರಿಂದ ಕೊಡಲ[illegible] ಕಾಯ್ದುಕೊ[illegible] ಸಮಕ್ಷಮ ಅಥವಾ ಪತ್ರದ್ವಾರ [illegible].

ಪ್ರೊ. ಪ್ರಿ. [illegible] ಇಟಗಿ.
ಜುಬಿಲಿಸರ್ಕಲ್ [illegible], ಧಾರವಾಡ

ಸುಸಮಯ

ಪಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ

ಈ ಪತ್ರವನ್ನು [illegible]ಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ,

ವರ್ಷ ೧೧ ಧಾರವಾಡ ಗುರುವಾರ ತಾರೀಖು ೧೭ ನೇ ಮೇ ೧೯೩೭ (ಸಂಖ್ಯೆ ೧೧೨

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona· P. B. 34. *Hubli.*

ಇಂಗ್ಲೆಂಡಿನಲ್ಲಿ ರಜಿಸ್ಟರ್ ಆದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯು ಆದರ್ಶ ಯೋಜನೆ ಬಂಡವಾಲವು	ಖಾತ್ರಿ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ಧಾರವಾಡ ಅರ್ಬನ ಕೋ-

ಆಪರೇಟಿವ್ ಬ್ಯಾಂಕ ಲಿಮಿಟೆಡ

ಪ್ರಾಂತಿಕ ಸಹಕಾರಿ ಬ್ಯಾಂಕಿನ ಸ್ಥಾನೀಯ ಶಾಖೆಯ ಆಫೀಸ ಮಂಜೂರ ಮಾಡಲ್ಪಟ್ಟಿದೆ.

ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಡ್ಡಿಯ ದರವು ಕಡಿಮೆ, ಚಕ ಹುಂಡಿ ಮುಂತಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲಾಗುವದು. ಠೇವಣಿ ಮತ್ತು ಬೇರೆ ತರದ ಡಿಪಾಝಿಟುಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಜುನಾಥ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎಂ. ಕೆ. ಶಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೪೪ ವೈಶಾಖ ವದ್ಯ ೩

ಆ ವಿಜಯಂ ಶ್ರೀಕಪ್ರಿಯ
ಶ್ರೀ ವಸುಮತಿಯ ನಲಿಸಿರೆ ಸುಹಿತಜನರ್ಗಂ
ದ" ವಿಜಯಂ " ಶ್ರೀಕರಣಾ
ನಾ ವಿಹಿತಂಗಳ ವಿವರಿಸನಲಿರ್ಪವು ಸಾಜಂ"

ಬೆಳಗಾವಿಯಲ್ಲಿ ಕಂಡುಬಂದ ಎರಡು ನೋಟಗಳು.

—(೦)—

ಹ್ವಾಲಂಟಿಯರರು ಜಿದ್ದು ಗೆದ್ದರು.

——(೦)——

ರಾ. ಬ. ಅಂಗಡಿಯವರ ಸ್ವರೂಪ ಪರೀಕ್ಷೆ.

——(೦)——

ಕರ್ನಾಟಕದಲ್ಲೆಲ್ಲ ಆದಂತೆ ಬೆಳಗಾವಿಯಲ್ಲಿಯೂ ೧೧ನೆಯ ತಾರೀಖಿನ ದಿವಸ ವಿಭಾಯುತಿಯ ಅರ್ಜಿಯ ಪ್ರಚಂಡ ಹೋಳಿಯಾಯಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ತೆಗೆದ ಜಾಹೀರನಾಮೆಯಿಂದ ಸಾರ್ವಜನಿಕ ಬೀದಿಗಳಲ್ಲಿ ಅಕ್ಷಿವೆಯನ್ನು ಸುಡಲಿಕ್ಕೆ ಬರುವಂತಿಲ್ಲ. ಹ್ವಾಲಂಟಿಯರರು ಈ ಅನ್ಯಾಯದ ಹುಕುಮನ್ನು ಮನ್ನಿಸಲಿಚ್ಛಿಸಲಿಲ್ಲ. ಎರಡು ಕಡೆಗೆ ಹೋಳೀ ಮಾಡಬೇಕೆಂದು ಗೊತ್ತು ಮಾಡಿದರು ಪೋಲೀಸ ಅಧಿಕಾರಿಗಳು ಮುಖಂಡರನ್ನು ಕಂಡು, ನೀವು ಹೋಳೀ ಮಾಡಬೇಡಿರಿ; ಗುಂಡು ಹಾಕುವ ಹೊತ್ತು ಬರುವದೆಂದು ಬೆದರಿಸಿದರು. ಸ್ವಯಂಸೇವಕ ಬಂಟರು ಇದಕ್ಕೆ ಹೆದರದೆ, ಹೋಳಿಯ ಸಿದ್ಧತೆ ಮಾಡಿದರು. ಪ್ರಚಂಡ ಜನಸಮೂಹ ಕೂಡಿತು. ಬೆಂಕೆ ಹಚ್ಚಿತು. ಪೋಲಿಸರು ಬಂದರು; ಇವರು ಅರಿಸಬಾರದೆಂದು ಸ್ವಯಂಸೇವಕರು ಬಳ್ಳೀ ಕಟ್ಟಿ ಸುತ್ತಲು ನಿಂತರು. ಆಗ ಅವರಲ್ಲಿ ೩೭ ಜನರನ್ನು ಹಿಡಕೊಂಡು ಹೋಗಿ, ಕೆಲ ಹೊತ್ತಿನ ನಂತರ ೩೧ ಜನರನ್ನು ಬಿಟ್ಟರು. ಈ ಸಂಗತಿಯು ಸಂಭವಿಸಿದ ನಂತರ, ಎರಡನೆಯ ಕಡೆಗೆ ದೊಡ್ಡದಾದ ಹೋಳೀ ಮಾಡಿದರು. ಪೋಲೀಸರು ಇಲ್ಲಿಯವರನ್ನು ತಡವಲೇ ಇಲ್ಲ. ಹೀಗೆ ಹ್ವಾಲಂಟಿಯರರು ಪೋಲೀಸರ ಮೇಲೆ ಜಿದ್ದು ಗೆದ್ದರು.

ಬ್ರಾಹ್ಮಣೇತರ ಸಭೆಗೆ ಬಂದಿದ್ದ ಸಂಕೇಶ್ವರದ ಪ್ರತಿನಿಧಿಗಳಿಗಾಗಿ ಕಿಲ್ಲೆಯಲ್ಲಿ ಊಟದ ವ್ಯವಸ್ಥೆ ಮಾಡಿದ್ದರು. ಅಲ್ಲಿ ಗಾಂಧೀ ಟೊಪ್ಪಿಗೆ ಹಾಕಿದವರನ್ನು ಒಳಗೆ ಬಿಡಬಾರದೆಂದು ಪೋಲೀಸರ ಕಾವಲವು. ಸಂಕೇಶ್ವರದವರು ಬರೇ ಗಾಂಧೀ ಟೊಪ್ಪಿಗೆಯಲ್ಲ, ಕಯ್ಯಲ್ಲಿ ರಾಷ್ಟ್ರೀಯ ನಿಶಾನೆ ಹಿಡಿದಿದ್ದರು. ಒಂದೇ ವೇಳೆಯಲ್ಲಿ ಎರಡು ಬರಹಣಗಳಾದ್ದರಿಂದ ಪೋಲಿಸರು ಇವರಿಗೆ ಮಜ್ಜಾವ ಮಾಡಿದರು, ಅಷ್ಟರಲ್ಲಿ ರಾ. ಬ. ಅಂಗಡಿಯವರು ಅಲ್ಲಿಗೆ ಬಂದರು, ನಡೆದ ಸಮಾಚಾರ ಕೇಳಿ, ರಾಷ್ಟ್ರೀಯ ಪ್ರತಿನಿಧಿಗಳಿಗೆ ಒಂದು ಬಗಲಲ್ಲಿ ಟೊಪ್ಪಿಗೆ ಹಿಡಿಯಿರಿ; ಇನ್ನೊಂದು ಬಗಲಲ್ಲಿ ರೇಶ್ಮೆಯ ವಾಯಿಲ್ಸಿನ ಸ್ವಂತ ನಿಶಾನೆ ಸುತ್ತಿ ಹಿಡಕೊಂಡು ಒಳಗೆ ಸಾಗಿರೆಂದು ಇವರಿಗೆ ಬುದ್ಧಿ ಹೇಳಿದರು. ಹಾಗು ಪೋಲಿಸರಿಗೆ ಇವರನ್ನು ಬಿಡಬೇಕೆಂದೂ ಸೂಚಿಸಿದರು. ಆದರೆ ಇದು ಬರೇ ವ್ಯಾಯಿತು. ಎಲ್ಲಾ ಎಲ್ಲ ಸಿ ಆಯಿತು. ಸಹಕಾರವಾಯಿತು. ಪೋಲಿಸರಿಗೆ ಹುಕುಮು ಮಾಡುವ ಅಧಿಕಾರವೆಲ್ಲಿಂಟು? ಪೋಲಿಸರು ಇವರಿಗೆ ನಿಮ್ಮ ಮಾತು ಕೇಳುವದಿಲ್ಲೆಂದು ಬಿಚ್ಚ ಮಾತಿನಿಂದ ಹೇಳಿದರು, ಯೋಗಾಯೋಗವು ವಿಲಕ್ಷಣವಾದದ್ದು. ಇದೇ ಸಮಯದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ, ಪೋಲಿಸಸಾಹೇಬರೂ ಅಲ್ಲಿಗೆ ಬಂದರು. ಪೋಲಿಸ ಮತ್ತು ರಾವಬಹಾದ್ದೂರರವರಿಗೆ ನಡೆದ ವಾಗ್ವಾದ ಕೇಳಿ, ರಾವಬಹಾದ್ದೂರರೇ ನೀವು ನಾನ-ಕೋ-ಆಪರೇಟರರಿಗೆ ಅನ್ನ ಹಾಕುತ್ತೀರಾ ಎಂದು ಪ್ರಶ್ನೆ ಮಾಡಲು- ಹಾಗೇನಿಲ್ಲ. ಅವರು ನಮ್ಮ ಸ್ನೇಹಿತರಿದ್ದಾರೆ. ಅವರಿಗೂ ನಮಗೂ ರಾಜಕೀಯ ಮತಭೇದವುಂಟು. ಎಂಬದಾಗಿ ವಿನಯದಿಂದ ಹೇಳಿಕೊಂಡರೂ ಸಾಹೇಬರು ನೋ ಎಂದು ತಮ್ಮ ಹಟ ಬಿಡಲಿಲ್ಲ. ಹ್ವಾಲಂಟಿಯರರು ಇದೊಂದು ಪ್ರಾಂಜನರ ವನವಾಸವೆಂದು ತಿಳಕೊಂಡು, ಅಲ್ಲೇ ಊಟ ತಂಸಿಕೊಂಡು, ಗಿಡದ ಬುಡಕ್ಕೆ ಕೂತು ಉಂಡು ಮರಳಿ ಸಭೆಗಿದ್ದ ಯುದ್ಧಮಾಡಿಸಿದರು. ತಮ್ಮ ದೊಡ್ಡಸ್ಥಿಕೆ ನಡೆಯಲಿಲ್ಲೆಂದು ಅರಿದುಕೊಂಡು, ರಾ. ಬ. ರವರು ವಿಷಾದಗೊಂಡು ಊರ ದಾರೀ ಹಿಡಿದರು. ಈ ಸಂಗತಿಯಿಂದ ರಾ. ಬ. ರವರಿಗೆ ಸರಕಾರದಲ್ಲಿ ತಮ್ಮ ಸಹಕಾರಿತ್ವಕ್ಕಾಗಿ ಎಷ್ಟು ಗೌರವವಿರುತ್ತದೆಂಬದನ್ನು ತಿಳಕೊಂಡು ಸ್ವಜನರ ಮುಂದಾದ ಅಪಮಾನದ ಮುಖ್ಯವೆಂದು ರಾವಬಹಾದ್ದೂರ ಮತ್ತು ಕೌನ್ಸಿಲ ಪದಕ್ಕೆ ರಾಜೀನಾಮೆ ಕೊಟ್ಟು ತಮ್ಮ ಮರ್ಯಾದೆ ಕಾಯ್ದುಕೊಳ್ಳಬೇಕೆಂದು ಸೂಚಿಸುವದು ಎಷ್ಟೂ ಅಸಮಂಜಸವಾಗುವದಿಲ್ಲ.

ಜಕ್ಷ ತಯಬಜಿಯವರಿಗೆ ಆರು ತಿಂಗಳ ಶಿಕ್ಷೆ.

೫೩ ಹ್ವಾಲಂಟಿಯರರಿಗೆ ಮೂರು ಮೂರು ತಿಂಗಳ ಶೀಕ್ಷೆ.

—(೦)—

ಮಹಾತ್ಮರ ತರುವಾಯ ಎರಡನೇ ಅಂದರೆ ಧೀಮಾಚಾರ್ಯರ ತರುವಾಯ ದೊರೆತ ನಾಯಕರಂಥ ಜಕ್ಷ ತಯಬಜಿಯವರು ೧೩ ನೆಯ ತಾರೀಖಿನ ದಿವಸ ಕರೂಡಿಯಿಂದ ಹೊರಟು, ಧಾರಾಸಾನಕ್ಕೆ ಹೋಗಿ ಉಪ್ಪಿನ ಉಗ್ರಾಣವನ್ನು ಸ್ವವಶ ಮಾಡಿಕೊಳ್ಳತಕ್ಕ ಪ್ರಸಂಗಸತ್ಯ ಮಾಡಿದ್ದರಷ್ಟೇ; ದಾಳಿಯ ಮೇಲೆ ಶರಸಂಧಾನವು ನಾಳಿನ ದಿವಸವಾಗತಕ್ಕದ್ದಿತ್ತು. ಇಲ್ಲಿ ದಾಳಿ ಬರಬಾರದೆಂದು ಸರ್ಕಾರದವರು ಮುಂದಾಗಿ ಸಶಸ್ತ್ರ ಪೋಲಿಸರ ಬಂದೋಬಸ್ತು ಮಾಡಿದ್ದಲ್ಲದೆ, ಸುತ್ತಲು ತಂತಿಗಳ ಬೇಲೀ ಕಟ್ಟಿದ್ದಾರೆ. ಯುದ್ಧ ಕಾಲದಲ್ಲಿ ವೈರಿಯು ಬರದಂತೆ ಮಾಡುವಂಥ ಕಠಿಣೋಪಾಯ. ರಣಾಂಗಣದಲ್ಲಿ ಈ ತೆರವಾಗಿ ವ್ಯವಸ್ಥೆ ಮಾಡಿದ್ದರೂ, ಪರಿಪಂಥಿಗಳನ್ನು ಇಲ್ಲಿಯ ತನಕ ಬರಗೊಡಲೇ ಇಲ್ಲ. ಜಡ್ಜರು ಮ.ಹಾತ್ಮರ ಸ್ವಯಂಸೇವಕರೊಡಗೆ ಕರೋಡಿಯಿಂದ ಹೊರಡುವಾಗ, ಶ್ರೀ. ಕಸ್ತೂರಿಬಾಯಿ ಮತ್ತು ಶ್ರೀ ಕಮಲಾಬಾಯಿ ಚಟ್ಟೋಪಾಧ್ಯಾಯಿಯವರಿದ್ದರು. ಇವರು ಊರು ಬಿಟ್ಟು ಹೊರಗೆ ಬಂದರು. ಕೂಡಲೆ ಮ್ಯಾಜಿಸ್ಟ್ರೇಟರು ಪೋಲಿಸರೊಂದಿಗೆ ಅಧಿಕಾರಿಗಳು ಬಂದು, ಇವರನ್ನು ಸುತ್ತುಗಟ್ಟಿದರು. ಹ್ವಾಲಂಟಿಯರರಿಗೆ ನೀವು ಹಿಂದಕ್ಕೆ ಸರಿದರೆ- ನಿಮ್ಮನ್ನು ಹಿಡಿಯುವದಿಲ್ಲೆಂದು ಅನ್ನಲು- ಅವರು ಅದಕ್ಕೆ ಒಪ್ಪದಾಗಲು- ಪೋಲಿಸರು ಇವರು ಸಹಿತವಾಗಿ ಜಡ್ಜಸಾಹೇಬರನ್ನು ಹಿಡಿದು, ಸವಸರಿಗೆ ಕರಕೊಂಡು ಹೋದರು. ಆಗ ಶ್ರೀ. ಕಸ್ತೂರಿಬಾಯಿ ಮತ್ತು ಶ್ರೀ. ಕಮಲಾಬಾಯಿಯವರು ತಮ್ಮನ್ನೂ ಹಿಡಿಯಬೇಕೆಂದು ಪೋಲಿಸರ ಎದುರಿಗೆ ವೀರಸ್ತ್ರೀಯರಿಗೆ ಯೋಗ್ಯವಾದ ರೀತಿಯಿಂದ ನಿಂತರು. ಪೋಲಿಸರು ನಿಮ್ಮನ್ನು ಹಿಡಿಯುವದಿಲ್ಲೆಂದು ಹೇಳಿ, ದಾರೀ ಹಿಡಿದರು. ನವಸರಿಯಲ್ಲಿ ಮ್ಯಾಜಿಸ್ಟ್ರೇಟರು ಸಿದ್ಧರಾಗಿಯೇ ನಿಂತಿದ್ದರು. ಈಗಿನ ನ್ಯಾಯ ನಿರ್ಣಯವು ಎಲೆಗೆ ಸುಣ್ಣ ಹಚ್ಚುವದಕ್ಕಿಂತ ಕಡಿಮೆ ಹೊತ್ತಿನಲ್ಲಾಗುವದು. ಮ್ಯಾಜಿಸ್ಟ್ರೇಟರು ಎಪ್ಪತ್ತು ವರ್ಷದ ಮುದುಕರಾದ ಜಡ್ಜರಿಗೆ ಆರು ತಿಂಗಳ ಹಾಗು ೫೩ ಹ್ವಾಲಂಟಿಯರರಿಗೆ ಮೂರು ಮೂರು ತಿಂಗಳ ಸಕ್ರಮ ಶೀಕ್ಷೆ ವಿಧಿಸಿದರು. ಉಳಿದ ಇವರಿಗೆ ತಾಕೀದಿ ಮಾಡಿ ಬಿಟ್ಟು ಬಿಟ್ಟರು.

ಸೊಲ್ಲಾಪೂರದಲ್ಲಿ ಲಷ್ಕರೀ ಕಾಯದೆ.

ಮ್ಯುನಿಸಿಪಾಲಿಟಿಯ ಮೇಲಿನ ರಾಷ್ಟ್ರೀಯ ನಿಶಾನೆ ಹೋಯಿತು.

ಗಾಂಧೀ ಟೊಪ್ಪಿಗೆಗೆ ಗಂಡಾಂತರ ಬಂತು.

ಎಲ್ಲಿ ಬೇಕಾದಲ್ಲಿ ಗುಂಡು ಹಾರಿದವು.

ಸರಕಾರದವರು ಸೊಲ್ಲಾಪೂರದಲ್ಲಿ ಲಷ್ಕರೀ ಕಾಯದೆಯನ್ನು ಜಾಹೀರ ಮಾಡಿದರು. ಶಹೇರದ ಅಧಿಕಾರವು ಸೇನಾಧಿಪತಿಯ ಕೈಗೆ ಹೋಯಿತು. ದಂಡಿನವರು ಮೊದಲನೆ [illegible] ಸ್ವಾಮ್ಯೆಯನ್ನು [illegible] ಗಿ, ಇಲ್ಲಿಯ ರಾಷ್ಟ್ರೀಯ ನಿಶಾನೆಯನ್ನು ಇಳಿಸಿ ಹಾಕಿದರು. ಬಳಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿ ಶ್ರೀ. ಜಾಧವ ಮತ್ತು ಕಾಂಗ್ರೆಸದ ಬೇರೆ ೧೫ ಜನರಿಗೆ ಗಾಂಧೀ ಟೊಪ್ಪಿಗೆಯನ್ನು ತೆಗೆಯಲಿಕ್ಕೆ ಹುಕುಮ ಮಾಡಿದರು. ಇವರು ಹುಕುಮನ್ನು ಮಾನ್ಯಮಾಡದ್ದರಿಂದ, ಇವರೆಲ್ಲರನ್ನು ಚತುರ್ಭುಜ ಮಾಡಿದರು. ಪಟ್ಟಣದ ತುಂಬ ಸೈನಿಕರು ಕಾವಲಗಾರರಾಗಿ ನಿಂತದ್ದರಿಂದ ಪರಿಸ್ಥಿತಿಯು ಭೀತಿಜನಕವಾಗಿರುತ್ತದೆ. ಈ ಕಾಯದೆಯ ಅಮಲು ಹತ್ತು ದಿವಸಗಳ ತನಕ ನಡೆಯುವದೆಂದು ಲೋಕವಾರ್ತೆಯಾಗಿದೆ.

ಹುಕುಮು-

(೧) ಜನರು ಬಡಿಗೆ, ಆಯುಧ ಮತ್ತು ರಾಷ್ಟ್ರೀಯ ನಿಶಾನೆ ಹಿಡಕೊಂಡು ತಿರುಗಾಡಬಾರದು. (೨) ಒಂದೆಡೆಯಲ್ಲಿ ನಾಲ್ವರಿಗಿಂತ ಹೆಚ್ಚು ಜನರು ಸೇರಬಾರದು (೩) ಸಾರ್ವಜನಿಕ ಮೆರವಣಿಗೆ ತೆಗೆಯಬಾರದು. (೪) ರಾತ್ರಿ ಏಳರಿಂದ ಬೆಳಗಿನ ಆರರ ತನಕ ಯಾರೂ ಬೀದಿಗಳಲ್ಲಿ ತಿರುಗಾಡಬಾರದು.

ಎಂದು ಹುಕುಮು ಮಾಡಿದ್ದಾರೆ. ೩೦೦ ಸೋಲ್ಜರರೂ ೪೦೦ ಹಿಂದೀ ಸೈನಿಕರೂ ಬಂದಂತೆ ತಿಳಿಯುತ್ತದೆ.

ಸೊಲ್ಲಾಪೂರದಲ್ಲಿ ಈರ್ವರು ಪೋಲೀಸರನ್ನು ಕೊಂದು, ರಾಜಬೀದಿಯಲ್ಲಿ ಸುಟ್ಟ ಕೃತ್ಯದಿಂದ ಕ್ರೋಧಗೊಂಡ ಪೋಲೀಸರು ತಮಗೆ ಎಲ್ಲಿ ಬೇಕಾದಲ್ಲಿ ಗುಂಡು ಹಾಕಿ; ತಮ್ಮಲ್ಲಿನ ತಾಮಸವೃತ್ತಿ[illegible]ದನ್ನು ಜಗತ್ತಿಗೆ ತೋರಿಸಿಕೊಂಡರು. ದಂಗೆಯ ಸ್ಥಳದಲ್ಲಿ ಗುಂಡು ಹಾಕಿ; ನೂರಾರು ಜನರನ್ನು ಕೊಂದರೂ ಕೂಡ ಡಾಯರಸಾಹೇಬನಂತೆ ತಿಳುವಳಿಕೆಯು ತಪ್ಪೆಂದು ಸರಕಾರದವರು ಸ್ವಪಕ್ಷಸಮರ್ಥನ ಮಾಡಿಕೊಳ್ಳಬಹುದು. ಆದರೆ ಬಳಂಗಳವಿದ್ದ ಮನೆಗಳ ಮೇಲೆ, ಹುಡುಗರ ಮೇಲೆ ಗುಂಡ ಹಾಕಿ, ಕೊಲೆಯ ಪಾಪ ಕಟ್ಟಿಕೊಂಡದ್ದು ಮಾತ್ರ ಆಶ್ಚರ್ಯವಾಯಿತು. ಸಿಪಾಯರನ್ನು ಕೊಂದ ಪಾಪಕ್ಕಾಗಿ ಜನರನ್ನು ಲಷ್ಕರೀ ಹುಕುಮಿನಿಂದ ತೋಫಿನ ಬಾಯಿಗೆ ಕೊಡುವಂತೆ, ಬಾಲಹತ್ಯ ಮಾಡಿ [illegible] ಗುಂಡಿಗೆ ಗುರಿ ಮಾಡಿಸರೇ- ನ್ಯಾ[illegible] ಸಮನಾಗಿ ನಿಲ್ಲುವವು [illegible] ಅಡ್ಡ ಹೆಸರಿನ [illegible] ಗೃಹಸ್ಥನ ಏದಾ-ರು ವರುಷದ ಮಗನು ಬೇರೆ ಹುಡುಗರೊಂದಿಗೆ ಒಳಂಗಳವಿದ್ದ ಮನೆಯ ಚಿನ್ನೆಯ ಮೇಲೆ ನಿಂತಿದ್ದನು, ಆ ಮಗುವಿನ ಹಣೆಗೆ ಗುಂಡು ಒಡೆದು, ಅತನು ರಕ್ತಬಂಬಾಳಾಗಿ, ತಲೆ ಒಡೆದು ಹೋಗಿದ್ದು, ನೋಡಲಿಕ್ಕೆ ಕೂಡ ಅಸಹ್ಯ ಮತ್ತು ಹೃದಯದ್ರಾವಕವಾಗಿ ಸತ್ತು ಹೋದನು. ಈ ಅನಾಹುತದ ವಿಚಾರ ಮಾಡುವ ಪುಣ್ಯಾತ್ಮನೇ ಇಲ್ಲ. ನಿರಪರಾಧಿ ಮತ್ತು ನಿಷ್ಪಾಪಿಯಾದಂಥ ಕಂದಮ್ಮನನ್ನು ಕೊಂದಕ್ಕಾಗಿ ಸರಕಾರವನ್ನು ಹೊಣೆಯಾಗಿ ಹಿಡಿಯಬೇ ಇನ್ನಾರನ್ನು ಹಿಡಿಯಬೇಕು ?

ಮದಿವೆಯ ರಾಷ್ಟ್ರೀಯ ಮಹೋತ್ಸವವಾಯಿತು.

—(೦)—

ಅಳಿಯನ ಮೈಲುದ್ದ ಮೆರವಣಿಗೆಯು.

—(೦)—

ಮಹಾಡದಲ್ಲಿ ಶ್ರೀ ಟಿಪನೀಸ ಮತ್ತು ಪೋತನೀಸರನ್ನು ಪೋಲಿಸರು ಹಿಡಕೊಂಡು ಹೋದ ಮರುದಿವಸ ಶ್ರೀ. ಟಿಪನೀಸರ ತಮ್ಮನ ಮದಿವೆಯಾಯಿತು. ಅಣ್ಣನು ತುರಂಗಕ್ಕೆ ಹೋಗಿರೂ, ಇದೊಂದು ರಾಷ್ಟ್ರೀಯ ಕಾರ್ಯವೆಂದು ತಿಳಿದು, ಮಹಾಡ ಮತ್ತು ತಾಲೂಕಿನ ಪ್ರಮುಖರೆಲ್ಲರೂ ಸೇರಿ, ಈ ವಿವಾಹ ಕಾರ್ಯವನ್ನು ಬಹು ಸಮಾರಂಭದಿಂದ ನೆರವೇರಿಸಿದರು. ಮದುಮಗನ ಮದಿವೆಗೆ ಹೊರಟ ದಿಬ್ಬಣವು ಒಂದು ಮೈಲು ಉದ್ದವಾಗಿತ್ತು. ಸ್ವಯಂಸೇವಕರು ಸೈನ್ಯದ ಶಿಸ್ತಿನಿಂದ ರಾಷ್ಟ್ರೀಯ ನಿಶಾನ ಹಿಡಕೊಂಡು ಜಯಘೋಷ ಮಾಡುತ್ತ ನಡೆದಿದ್ದರು. ಅಸ್ಪೃಶ್ಯರೂ ಮೆರವಣಿಗೆಯಲ್ಲಿ ಸೇರಿದ್ದಲ್ಲದೆ, ವಧೂವರರ ಕೊರಳೊಳಗೆ ಹೂವಿನ ಮಾಲೆ ಹಾಕಿದರು. ಟಿಪಣೀಸರು ಮಹಾಡದ ವೀರಾಗ್ರಣ್ಯನಾದ ತಾನಾಜಿ ಎಂದು ಖ್ಯಾತಿವಂತನಾಗಿದ್ದರಿಂದ, ವಿವಾಹಕಾಲದಲ್ಲಿ ತಾನಾಜಿಯ ಲಾವಣಿಯನ್ನು ಹಾಡಿದರು.

ಶ್ರೀ. ಹೊಸಮನಿಯ ಶಿದ್ದಪ್ಪನವರ ಬಹುಮಾನ.

—(೦)—

ಬೆಳಗಾವಿಯ ಬ್ರಾಹ್ಮಣೇತರ ಸಭೆಯ ಅಧ್ಯಕ್ಷರಾಗಿ ಬ್ರಾಹ್ಮಣೇತರರು ಕಾಂಗ್ರೆಸವನ್ನು ಕೂಡಿಕೊಳ್ಳಬೇಕೆಂದು ಗೊತ್ತುವಳಿಯಾದನಂತರ ಶ್ರೀ. ಶಿದ್ದಪ್ಪನವರು ಮಂಗಳವಾರ ದಿವಸ ಇಲ್ಲಿಗೆ ಬಂದರು. ಅಂದು ಸಾಯಂಕಾಲದಲ್ಲಿ ಸಾರ್ವಜನಿಕ ಸಭೆಯಾಗಿ, ಅವರ ಹಾಗು ಬೇರೆ ಬ್ರಾಹ್ಮಣೇತರರ ಬಹುಮಾನ ಮಾಡಲ್ಪಟ್ಟಿತು. ಆಗ ಶ್ರೀ. ಶಿದ್ದಪ್ಪನವರಿಗೆ ಶ್ರೀ. ಸಾಲಿ ರಾಮಚಂದ್ರರಾಯರು ರಚಿಸಿದ ರಾಷ್ಟ್ರಧ್ವಜದ ಪದ್ಯಾವಲಿಯು ಬಹುಮಾನವಾಗಿ ಅರ್ಪಿಸಲ್ಪಟ್ಟಿತು. ಇದೇ ಪ್ರಕಾರ ಕಾಂಗ್ರೆಸ ಕಚೇರಿಯಲ್ಲಿ ಕರ್ನಾಟಕ ಪ್ರಾಂತಿಕ ಕಮೀಟಿಯ ವತಿಯಿಂದ ಬಹುಮಾನ ಮಾಡಲ್ಪಟ್ಟಿತು. ಶ್ರೀ. ಕೌಜಲಗಿ ಶ್ರೀನಿವಾಸರಾಯರು ಶ್ರೀ. ಹೊಸಮನಿಯವರ ರಾಷ್ಟ್ರೀಯತ್ವದ ವಿಚಾರವನ್ನು ಹೇಳಿ, ಅವರ ಅಭಿನಂದನ ಮಾಡಿ, ಪುಷ್ಪಮಾಲೆಯಿಂದ ಸನ್ಮಾನಿಸಿದರು. ಈ ಸನ್ಮಾನಕ್ಕೆ ಉತ್ತರ ಕೊಡುವಾಗ ಶ್ರೀ. ಹೊಸಮನಿಯವರಿಗೆ ಕುತ್ತಿಗೆ ಶಿರ ಉಬ್ಬಿಬಂದು, ಐದಾರು ನಿಮಿಷಗಳ ತನಕ ಮಾತಾಡಲಿಕ್ಕೇ ಬರಲಿಲ್ಲ. ಕಣ್ಣುಗಳಿಂದ ದಳ ದಳ ನೀರಿಳಿದವು. ತುಸು ಅವಡಿಸಿಕೊಂಡು "ನಾನು ಮೊದಲಿನಿಂದಲೂ ರಾಷ್ಟ್ರೀಯನೇ ಇದ್ದೇನೆ. ಆದರೆ ಹುಂಬಲವಿರಲಿಲ್ಲ; ನನಗೆ ಬೆಳಗಾವಿಯ ಸಭೆಯು ಬಲ ಕೊಟ್ಟಿತು. ದೇಶಕಾರ್ಯಕ್ಕಾಗಿ ನಾನು ಕಾಂಗ್ರೆಸದ ಯಾವದೊಂದು ಕೆಲಸವನ್ನು ಸಾಧಾರಣ ಸ್ವಯಂಸೇವಕನಂತೆ ಮಾಡಲು ಸಿದ್ಧನಿದ್ದೇನೆಂದು" ಆಶ್ವಾಸನ ಕೊಟ್ಟು ಭಾಷಣ ಮಾಡಿದರು.

ಅಂಕೋಲೆಯಲ್ಲಿ ಕರ್ನಾಟಕದ ಸತ್ಯಾಗ್ರಹ.

—()—( )—()—

ಇಲ್ಲಿಯವರೆಗೂ ಸಮುದ್ರದ ನೀರು ಉಪ್ಪು ಮಣ್ಣು ಇವುಗಳಿಂದ ಉಪ್ಪನ್ನು ತಯಾರು ಮಾಡುವ ಕೆಲಸವು ನಡೆಯುತ್ತಿತ್ತು. ಈಗ ಇದರೊಡನೆ ಪೋರ್ತುಗೀಸರ ಗೋವಾ ಸರಹದ್ದಿನಿಂದ ಉಪ್ಪನ್ನು ಸುಂಕ ಕೊಡದೆ ಬ್ರಿಟಿಶ ಪ್ರಾಂತದೊಳಗೆ ತರುವ ಪ್ರಯತ್ನ ನಡೆದಿದೆ. [illegible] ತಾರೀಖಿನ ದಿನ ೭೦ನ ಸತ್ಯಾಗ್ರಹಿಗಳು ಉಪ್ಪನ್ನು ತಂದರು. ಸುಂಕದ ಕಟ್ಟೆಯ ಹತ್ತರ ಸಿಪಾಯಿಗಳನ್ನು ನಿಲ್ಲಿಸಿದ್ದರು. ಸತ್ಯಾಗ್ರಹಿಗಳು ಸಣ್ಣ ಸಣ್ಣ ಚೀಲಗಳಲ್ಲಿ ಉಪ್ಪನ್ನು ತಂದರು. ಸಿಪಾಯಿಗಳು ಅವರನ್ನು ಕೈ ತಿರುವಿ, ಜಬರಿ ಉಪ್ಪನ್ನು ಕಸಿಕೊಂಡು, ಉಪ್ಪು ತಂದವರನ್ನು ಕೈದು ಮಾಡಿದರು. ಅವರಿಗೆ ಮೂರು ಮೂರು ತಿಂಗಳ [illegible]

ನವನ್ನು ಮಾಡಿದನು. ಆದರೂ ಸಭಾಕಾರ್ಯವು ಯಶಸ್ವಿಯಾಗಿ ಪರಿಣಮಿಸಿತು.

ಅದೇ ದಿನ ರಾತ್ರಿ ಹುಬ್ಬಳ್ಳಿಯಿಂದ ಖಾದೀ ಪ್ರಚಾರಕಾರ್ಯಕ್ಕಾಗಿ ಹೊರಟ ಸ್ವಯಂಸೇವಕರ ತಂಡದಲ್ಲಿದ್ದ ಬೆಂಗಳೂರ ಜಯಮಾರುತಿ ವ್ಯಾಯಾಮಶಾಲೆಯ ಸದಸ್ಯರು ತಮ್ಮ ಪ್ರೇಕ್ಷಣೀಯವಾದ ಶಕ್ತಿ ಪ್ರದರ್ಶನವನ್ನು ಮಾಡಿದರು. ಶ್ರೀ ಸ್ವಾಮಿ ಇವರ ಸ್ನಾಯು ಸಂಯಮನ ಹಾಗು ಉಚ್ಛ್ವಾಸದ ಸಲಾಕಿಗಳನ್ನು ಮಣಿಸುವನು ಶ್ರೀ. ಅಯ್ಯರ ಇವರ ಭಾರವಹನ ಇವೇ ಮೊದಲಾದವುಗಳು ಅದ್ಭುತವಾಗಿದ್ದವು. ಒಟ್ಟಿನ ಮೇಲೆ ಎಲ್ಲವುಗಳೂ ಆಶ್ಚರ್ಯವನ್ನೂ ಆದರವನ್ನೂ ಹುಟ್ಟಿಸುವಂತಿದ್ದವು. ಊರವರ ವಿನಂತಿಯನ್ನು ಮಾನ್ಯ ಮಾಡಿ ಅವರು ಶಕ್ತಿ ಪ್ರದರ್ಶನ ಮಾಡಿ ಜನರಲ್ಲಿ ಶರೀರ ವ್ಯಾಯಾಮದ ಬಗ್ಗೆ ಪ್ರೀತಿಯನ್ನು ಹುಟ್ಟಿಸಿದ ಬಗ್ಗೆ ಜಯಮಾರುತಿ ವ್ಯಾಯಾಮಶಾಲೆಯವರ ಆಭಾರವು ಮನ್ನಿಸಲ್ಪಟ್ಟಿತು.

ನೋಟೀಸು

ಫಕೀರಾ ತಂದಿ ಶಿವಪ್ಪಾ ಹಂಗರಕಿ ಉರ್ಫ ಹೆಗ್ಗೇರಿ ಹಾಲಿವಸ್ತಿ ಮೊಮ್ಮಗಟ್ಟಿ ಈತನಿಗೆ–

ಕೆಳಗೆ ಹೆಸ್ರುಬಟ್ಟಿನ ಗುತ್ತಾರ್ ಮಾಡುವ ಗದಿಗೆವ್ವಾ ಕೋಂ ಫಕೀರಾ ಹಂಗರಕಿಯವರ ಈಕೆಯು ನಿನಗೆ ಈ ನೋಟೀಸಿನಿಂದಾ ತಿಳಿಸುವದೇನಂದರೆ–

ನೀನು ನನ್ನ ಮದಿವೆಯ ಗಂಡಸಿದ್ದು, ನೀನು ನನ್ನನ್ನು ಚಲೋ ರೀತಿಯಿಂದ ನಡಿಸಿಕೊಳ್ಳದೆ ಮನೆ ಬಿಟ್ಟು ಹೊರಗೆ ಹಾಕಿದಿ. ಆ ಮಾತಿಗೆ ಎಂಟು ವರ್ಷವಾಯಿತು. ಆಗನಿಂದ ನೀನು ಬಂದು ನನ್ನನ್ನು ಕರಕೊಂಡು ಹೋಗಬೇಕೆಂದು ನನ್ನ ಹತ್ತಗಡಿಯವರು ನಿನಗೆ ಬುದ್ಧೀ ಹೇಳಿದರು. ದೈವದವರೂ ಹೇಳಿದರು. ಆದರೆ ನೀನು ಇಂದು ನಾಳೆ ಅಂತಾ ದಿನಮೂಕ ಮಾತ ಹತ್ತಿ ಬಂದಿ. ಕೊನೆಗೆ ಕೇಳಲು, ನೀನು ಪ್ರಪಂಚ ಮಾಡುವದಿಲ್ಲೆಂದು ಸ್ಪಷ್ಟವಾಗಿ ಹೇಳಿದಿ. ಅದ್ದರಿಂದ ಈ ನೋಟೀಸು ಕೊಡಬೇಕಾಯಿತು. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮನೆಗೆ ಬಂದು, ಈ ಎಂಟು ವರ್ಷಗಳಲ್ಲಿ ನನ್ನ ಉಪಜೀವನಕ್ಕಾಗಿ ನಾನು ಮಾಡಿದ ಸಾಲದ ರಕಮು ೧೫೧ ರೂಪಾಯಿ ಕೊಟ್ಟು, ಯೋಗ್ಯ ರೀತಿಯಿಂದ ಬಾಳುವೆ ಮಾಡುತ್ತೇನೆಂದು ಬಂಚಾಂ ಬಾಮೀನು ಕೊಟ್ಟು ಕರಕೊಂಡು ಹೋಗಬೇಕು. ಮತ್ತು ನನ್ನನ್ನು ಮನೀ ಬಿಟ್ಟು ಹೊರಗೆ ಹಾಕುವಾಗ ಕಸಕೊಂಡ ನನ್ನ ಮೈಮೇಲಿನ ದಾಗೀನ ಕೊಡಬೇಕು. ಮತ್ತು ನನ್ನ ಮೇಲೆ ಉಡಿಕೆ ಮಾಡಿಕೊಂಡಿದ್ದ ಹೆಂಡತಿಯನ್ನು ಬೇರೆ ಮನೆ ಮಾಡಿಡಬೇಕು. ನೀನು ಈ ಕರಾರುಗಳಿಗೆ ತಪ್ಪಿದರೆ ನಾನು ನಿನ್ನ ಉಜುರಿಡದೆ, ಬೇರೆಯವನನ್ನು ಉಡಿಕೆ ಮಾಡಿಕೊಳ್ಳಬೇಕಾಗುವದು ಮತ್ತು ಈಗಾದ ಸಾಲದ ದೆಸೆಯಿಂದ ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ, ಖರ್ಚು ಸಹಿತ ವಸೂಲ ಮಾಡುವೆನು ಅಂತಾ ತಿಳಿಯಬೇಕು. ನೀನು ಕರಕೊಂಡು ಹೋಗದಿದ್ದರೆ ಈ ನೋಟೀಸೇ ಸೋಡಪತ್ರವೆಂದು ತಿಳಿಯಬೇಕು. ಇದರ ಖರ್ಚು ನಿನ್ನ ಕಲೆಯಮೇಲೆ ಅಂತಾ ಕೊಟ್ಟ ಸೋಡಪತ್ರದ ನೋಟೀಸು ತಾ|| ೧೪ ನೇ ೧೯೩೦ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುತ್ತಾರ್ ಗದಿಗೆವ್ವಾ ಕೋಂ ಫಕೀರಾ ಹಂಗರಕಿಯವರ ಈಕೆ ಕೈಯು ಇರುತ್ತದೆ

ನೋಟೀಸು

ಲಕ್ಷ್ಮೀ ಕೋಂ ಮರಿತಮ್ಮಪ್ಪಾ ಹಂಕುಣಿ ಹಾಲಿವಸ್ತಿ ಧಾರವಾಡ ಶಹರ ಹಾವೇರಿಪೇಟ ಈಕಿಗೆ

ಕೆಳಗೆ ಸಹೀ ಮಾಡುವ ಮರಿತಮ್ಮಪ್ಪಾ ತಂದಿ ಫಕೀರಪ್ಪಾ ಹಂಕುಣಿ ಹಾಲಿವಸ್ತಿ ಅಮ್ಮಿನಭಾವಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದಿವೆಯ ಹೆಂಡತಿ ಇರುತ್ತೀದಿ. ನೀನು ನನ್ನ ಕೂಡ ಚಲೋ ರೀತಿಯಿಂದ ನಡೆಯದೆ, ಅಡ್ಡ ಹಾದಿ ಬಿದ್ದದ್ದು ನನ್ನ ನಜರಿಗೆ ಬಂದದ್ದರಿಂದ ನಿನ್ನನ್ನು ನಾನು ಪಂಚರ ಸಮಕ್ಷಮ ಮನೆ ಬಿಟ್ಟು ಹೊರಗೆ ಹಾಕಿರುತ್ತೇನೆ. ಆ ಮಾತಿಗೆ ಅಜಮಾಸು ಹತ್ತು ತಿಂಗಳಾಯಿತು ನಿನ್ನ ತಾಯಿ ಬಂದು ಪಂಚರ ಸಮಕ್ಷಮ ನಿನ್ನನ್ನು ಕರಕೊಂಡು ಹೋಗಿದ್ದಾಳೆ. ಆಗನಿಂದ ನಿನಗೂ ನನಗೂ ಏನೂ ಸಂಬಂಧವಾಗಿರುವದಿಲ್ಲ. ನೀನು ಸ್ವೈರ ಚಾಳಿಯವಳಾದ್ದರಿಂದ ನನ್ನಿಂದ ನಿನಗೆ ಪೋಟಗಿ ವಗೈರೆ ಉಪಜೀವನದ ಖರ್ಚು ದೊರೆಯಲಾರದು ಮತ್ತು ನೀನು ಈ ನಂತರ ಹಡಿಯುವದಾದರೆ ಆ ಸಂತತಿಯು ನನ್ನದಾಗದು. ವ ಕ್ತ ಅದರ ವಾರಸಾ ಹಕ್ಕು ನನ್ನ ಮೇಲೆ ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು. ಮತ್ತು ಜನನ ರಜಿಸ್ಟರದಲ್ಲಿ ಜನಕ ತಂದೆಯೆಂದು ನನ್ನ ಹೆಸರು ಹಚ್ಚಸಬಾರದು ಅಂತಾ ಕೊಟ್ಟ ನೋಟೀಸು ತಾ|| ೧೪ ಮೇ ೧೯೩೦ ನೇ ಇಸವಿ

ಸಹಿ– ಮರಿತಮ್ಮಪ್ಪಾ ಬಿನ್ನ ಫಕ್ಕೀರಪ್ಪಾ ಹಂಕುಣಿ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿ: ಯು

—(೦)—



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಿಗಿ.

ಮುನಸಫಕೋರ್ಟಿನಹತ್ತರ, ಧಾರವಾಡ

ನೋಟೀಸಿನ ದರಗಳು

—:(೦):—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೆಜರ ವಿಜಯ ಧಾರವಾಡ.

ಈ ಪತ್ರವನ್ನು ಜಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಶುಕ್ರವಾರ ತಾರೀಖು ೧೬ ನೇ ಮೇ ೧೯೩೦ (ಸಂಚಿಕೆ ೧೧೩

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

[illegible] BONUSES. [illegible] BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರ ಮಾಡಿದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ಶಾಶ್ವತರೀತಿಯ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯ ಆದರ್ಶ ಯೋಜನೆ ಒಂದಷ್ಟವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೋಡಿಗೆಯು ಎಂಟು ಲಕ್ಷದ ಮೇಲುಂಟು. ಚಾಲು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡಿಸಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,
ಮ್ಯಾನೆಜಿಂಗ ಡಾಯರೆಕ್ಟರ

— —

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟಿ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ್ತ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

— —

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ -

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ವದ್ಯ ೩

ಈ ವಿಜಯಂ ಶ್ರೀಕರಮಿದು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ತಾ
ಧೀ "ವಿಜಯಂ" ಶ್ರೀಕರಮಣ ।
ನಾ ವಿಹಿತಂಗಳ ವಿವರಿಸಿ ನಲಿವುದು ಸಾರ್ವಜನಿಗ

ಸೋಲ್ಲಾಪೂರದಲ್ಲಿ ಗುಂಡು ಹೇಗೆ ಅಡ್ಡಾತಿಡ್ಡಾ ಹಾರಿದವು.

ನಿರಪರಾಧಿಗಳು ಗುಂಡು ಬಡಿಸಿಕೊಂಡು ಗೋಳಾಡುತ್ತಿರುವರು.

—(೦)—

ದಂಡಿನ ಬಲ ಬಂದ ಕೂಡಲೆ ಪೋಲೀಸರು, ಶಿಪಾಯರು ಅಥವಾ ಬೇರೆ ಸೈನಿಕರು ಯಾರೇ ಇರಲಿ; ದಂಗೆಯನ್ನು ಮುರಿಯಬೇಕೆಂದು ಊರ ತುಂಬ ಗುಂಡಿನ ಮಳೆ ಸುರಿಸಿದರು. ಈ ಮಳೆಯು ತೀರ ಅವಿಚಾರ ಪ್ರವೃತ್ತ ನಿರ್ದಯವಾಗಿ ದ್ದಿತ್ತೆಂದು ಮುಂದೆ ಕೊಟ್ಟ ಕೆಲವು ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

೧ ಗಣಪತ ಬಾಳಕೃಷ್ಣ ಟೊಂಬೆ- ಇವರು ಟಿಳೇಕರರ ಮನಿಗೆ ಪರಊರಿಂದ ಬಂದಿದ್ದರು. ಸಂಧ್ಯಾ ಪೂರಕ್ಕೆ ಹೋಗುವುದಕ್ಕಾಗಿ ಜೈನ್ನ ಕ್ಷಿಂದಿಳಿಯುತ್ತಿದ್ದಾಗ ಕಾಲಿಗೆ ಗುಂಡು ಬಡಿಯಿತು.

೨ ಮೆಜಾನಿಕ ಥಿಯೇಟರದಲ್ಲಿ ಎಲ್ಲಕ್ಕೂ ಮೇಲಿನ ಪಾವಟಿಗೆಯ ಮೇಲೆ ಕೂತಿದ್ದ ಖ್ವಾಜ್ಜಯಿನಿಯ ಭೋಲೆ ಗರಿಬಾವಾ ಎಂಬವರ ಆವತ್ತು ವರ್ಷದ ಒಬ್ಬ ಗೋಷಾಪಿ ಮುದುಕನ ಕಾಲಿಗೆ ಗುಂಡು ಒಡೆಯಿತು.

೩ ಪಾಂಜರಪೋಳದಲ್ಲಿರುವ ಸ್ಟ್ಯಾಂಡಿಗೆ ಬಂದಂಥ ತಾತ್ಯಾ ಎಂಬವನಿಗೆ ಒಂದರ ಮೇಲೊಂದರಂತೆ ಮೂರು ಸಾರೆ ಗುಂಡು ಹಾಕಿ, ಅವನನ್ನು ಕೊಂದರು.

೪ ಕುಂಬಾರ ಅಗಸಿಯಲ್ಲಿ ಒಬ್ಬ ಮುಸಲ್ಮಾನ ಕಟಕನೂ ಬೇರೂರಿಂದ ಬಂದ ಹಿಂದೂ ಮನುಷ್ಯನೂ ಬೈಲಕಡಿಗೆ ಹೋಗುತ್ತಿದ್ದರು. ದಾರಿಯಲ್ಲಿಯೇ ಇವರನ್ನು ಗುಂಡಿನಿಂದ ಘಾಯಪಡಿಸಿದರು.

೫ ಶುಕ್ರವಾರ ಪೇಟೆಯಲ್ಲಿ ಶೇಟ ಹಿರಾಚಂದ ವಾಲಚಂದ ಇವರ ೧೩-೧೪ ವರ್ಷದ ಹುಡುಗನು ಮೂರನೆಯ ಅಂತಸ್ತಿನ ಮೇಲೆ ನಿಂತಿದ್ದನು. ಅಲ್ಲೇ ಗುಂಡು ತಾಕಿ, ಸತ್ತನು.

೬ ನರಸಿಂಗಗಿರಜಿಯ ಗಿರಣಿಯ ಮ್ಯಾನೇಜರನು ಅಟ್ಟದ ಮೇಲೆ ಮಾತಾಡುತ್ತಾ ಕೂತಾಗ, ಆತನ ತಲೆಯ ಮೇಲಿಂದ ಗುಂಡು ಹಾದು, ಗೋಡೆಯೊಳಗೆ ಕೂತು ನಾಟಿತು.

೭ ಸಕ್ಕರೆಪೇಟೆಯಲ್ಲಿ ಬಣಗಾರರ ಒಬ್ಬ ಹೆಣ್ಣು ಮಗಳು ತಂಬಿಗೆ ತಕ್ಕೊಂಡು ಹೋಗುತ್ತಿದ್ದಾಗ ಗುಂಡು ಬಡಿಯಿತು.

೮ ಭಡಂಗೆ ಎಂಬ ಅರೆ ಹುಚ್ಚನು ಕಟ್ಟೆಯ ಮೇಲೆ ಕೂತಾಗ ಗುಂಡು ಬಡಿಸಿಕೊಂಡನು.

೯ ಜೋಡಬಾವಿಯ ಪೇಟೆಯಲ್ಲಿ ಮಲ್ಲಿಕಾರ್ಜುನ ಸ್ವಾಮಿಯವರು ಒಂದು ಅಂಗಡಿಯಲ್ಲಿ ನಿಂತಾಗ ಗುಂಡು ಬಡೆಯಿತು.

೧೦ ಮೆಜಾನಿಕ ಥಿಯೇಟರದ ಒಳಂಗಳದಲ್ಲಿರುವ ಒಂದು ಕೋಣೆಯಲ್ಲಿ ಕೂತಿದ್ದ ಸುಂದರಸಿಂಗರೆಂಬವರ ಪತ್ನಿ ಸೀತಾಬಾಯಿಯ ಎದೆ ಮತ್ತು ತೊಡೆಗೆ ಗುಂಡುಗಳು ಬಡಿದಿವೆ.

೧೧ ಇದೇ ಥಿಯೇಟರದ ಹತ್ತಿರವಿರುವ ಚಹಾದ ಅಂಗಡಿಯಲ್ಲಿ ಚಹಾ ಕುಡಿಯುತ್ತ ಕೂತಿದ್ದ ಬಾಬುರಾವ ಶ್ರೀಕೆ ಎಂಬವರಿಗೆ ಗುಂಡು ಬಡೆಯಿತು.

೧೨ ಒಂದು ಊಟದ ಮನೆಯಲ್ಲಿ ಬಾಗಿಲ ಹಾಕಿಕೊಂಡು ಜನರು ಊಟಕ್ಕೆ ಕೂತಿದ್ದರು. ಬಾಗಿಲಕ್ಕೆ ಗುಂಡು ಹೊಡೆದರು. ಗುಂಡು ಬಾಗಿಲದೊಳಗಿಂದ ಹಾದು ಮನೋಹರ ಕೃಷ್ಣ ಜಾಧವರೆಂಬವರ ಬಲ ತೊಡೆಯನ್ನು ಸವರಿ, ಎಡ ತೊಡೆಯಿಂದ ಪಾರಾಗಿ ಹೋಯಿತು.

ಈ ಪ್ರಕಾರ ಅನ್ಯಾಯಕತನ ಮಾಡಿದರೂ, ಘಾಯಪಾದಂಥ ಜನರ ವಿಷಯವಾಗಿ ಅಧಿಕಾರಿಗಳು ಯಾವ ಉಪಾಯ ಮಾಡಲಿಲ್ಲ. ಕೋರ್ಟು ನಡುತ್ತಿದ್ದರೂ ಅದನ್ನು ಅರಿಸುವ ಪ್ರಯತ್ನ ಮಾಡಲಿಲ್ಲೆಂದು ಅಲ್ಲಿಯ ಕರ್ಮಯೋಗಿ ಪತ್ರದಲ್ಲಿ ಬರೆದಿದೆ.

ಪರದೇಶೀ ಪದಾರ್ಥಗಳು ಪರದೇಶಿಯಾದವು.

—(೦)—

ಅಂಕೋಲೆಯಲ್ಲಿ ವಿದೇಶಿ ಬಟ್ಟೆಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಲ್ಪಟ್ಟಿದೆ, ಸಿಂಪಿಗರು ಕೂಡ ಪರದೇಶೀ ಅರಿವೆಯನ್ನು ಹೊಲಿಯುತಕ್ಕದ್ದಲ್ಲೆಂದು ಶಪಥ ಮಾಡಿದ್ದಾರೆ. ಕಿರಾಣಿ ಅಂಗಡಿಯವರು ವಿಲಾಯತಿಯ ಸಕ್ಕರೆಗೆ ಬಹಿಷ್ಕಾರ ಹಾಕಿದ್ದಾರೆ. ಊರಿಗೆ ಊರೇ ಪರದೇಶಿ ಪದಾರ್ಥಗಳಿಗೆ ಅರ್ಧಚಂದ್ರ ತೋರಿಸಿದ್ದರಿಂದ, ಅವು ಮುಂದುಗಾಣದೆ ಪರದೇಶಿಯಾಗಿರುತ್ತವೆ.

ಆರೋಪಿಗಳು ಕೋರ್ಟಿನಲ್ಲಿ ಕೊಟ್ಟ ಸ್ವಾರಸ್ಯದ ಜವಾಬುಗಳು.

—(೦)—

ಮಹಾತ್ಮರೇ ತಂದೆ, ಸ್ವರಾಜ್ಯ ಸಿಗುವ ತನಕ ಕಾಯದೆ ಮುರಿಯುವರು.

—(೦)—

ಜಲ್ಗಾವ ತಯ್ಯಬಜಿ ಮತ್ತು ಪ್ಯಾಂಟಯಾರಾದ ಆರೋಪಿಗಳ ವಿಚಾರಣೆ ನಡೆದಾಗ ಕೆಲ ವ್ಹಾಲಂಟಿಯರರು ಸ್ವಾರಸ್ಯಕರ ಜವಾಬು ಕೊಟ್ಟಿದ್ದಾರೆ. ಮಾದರಿಗಾಗಿ ಕೆಲವನ್ನು ಇಲ್ಲಿ ಕೊಡುತ್ತೇವೆ.

ಕೆಲವರು ನಿಮ್ಮ ತಂದೆಯ ಹೆಸರೇನೆಂದು ಕೇಳಲ್ಪಟ್ಟ ಪ್ರಶ್ನೆಗೆ ಮಹಾತ್ಮರೇ ತಂದೆ ಎಂದು ಜವಾಬು ಕೊಟ್ಟರು.

ಪ್ರೊಫೆಸರ ಪಾಂಜಿ ದೇಸಾಯಿ ನಾವು ಬೇಕಾಯಿದೆಶೀರ ಮಂಡಳದ ಮೆಂಬರನಾಗಿರುವುದಕ್ಕೆ ಬಹಳೇ ಅಭಿಮಾನಪಡುತ್ತೇವೆ. ಬೇಕಾಯಿದೆಶೀರವು ಇಂಗ್ಲಿಷರದಲ್ಲ ಮಹಾತ್ಮರಿಂದ ಸ್ಥಾಪಿಸಲ್ಪಟ್ಟಂಥಾದ್ದು.

ಹದಿನಾರು ವರ್ಷದ ಹುಡುಗ- ನೀವು ನನ್ನನ್ನು ಬಿಟ್ಟ ಕೂಡಲೆ ನೀಟಾಗಿ ಧಾರಾಸಣಕ್ಕೆ ಹೋಗಿ ಉಪ್ಪಿನ ಉಗ್ರಾಣದ ಮೇಲೆ ಹಲ್ಲೆ ಮಾಡುವೆನು.

ಇನ್ನೊಬ್ಬನು- ಸ್ವಲ್ಪ ಶಿಕ್ಷೆ ಕೊಡಬೇಡಿರಿ. ಎಷ್ಟು ದೊಡ್ಡ ಶಿಕ್ಷೆ ಕೊಟ್ಟೀರಿ ನನಗೆ ಅಷ್ಟು ಸಂತೋಷವೆಂದನು.

ಮೂರನೆಯವ- ಗಂಡಹತಿ ನನ್ನನ್ನು ಕೊಲ್ಲುವ ಶಿಕ್ಷೆ ಕೊಡದ್ದಕ್ಕೆ ವಿಷಾದವಾಗುತ್ತದೆ.

ನಮಗೆ ಸುರಂಗದಲ್ಲಿ ಜೈಲಿನಲ್ಲಿ ಮುಚ್ಚಿ ಕೊಡಿರಿ ಅಂದರೆ ನಾವು ಓಡಿಹೋಗುವ ಮನಸ್ಸೇ ಮಾಡುವದಿಲ್ಲ.

ಪ್ರತಿಷ್ಠಿತ ಬ್ರಾಹ್ಮಣೇತರ ಮುಖಂಡನಿಗೆ ಶಿಕ್ಷೆ.

—(೦)—

ಸುಪ್ರಸಿದ್ಧ ಅಂತ್ಯಜೋದ್ಧಾರಕರೂ, ಬ್ರಾಹ್ಮಣೇತರರೂ ಆದ ಶ್ರೀ ವಿಠ್ಠಲ ರಾಮಜಿ ಶಿಂದೆಯವರು ಕಾಯದೆಭಂಗದ ಚಳವಳಿಯನ್ನು ಪುಣೆಯ ಜಿಲ್ಲೆಯ ತುಂಬ ನಡಿಸಿದರು. ಕೂಡಲೆ ಇವರ ಮೇಲೂ ಸರಕಾರದ ಕೃಪೆಯಾಗಿ, ಇವರು ಆರು ತಿಂಗಳ ಸಕ್ತಮಜೂರಿ ಶಿಕ್ಷೆ ಹೊಂದಿದರು. ಇಷ್ಟು ದೊಡ್ಡ ಮನುಷ್ಯರಾದರೂ ಬಿ. ಕ್ಲಾಸ ದೊರೆಯಿತು, ಅಸ್ಪೃಶ್ಯರು ತಮ್ಮ ಉದ್ಧಾರಕರು ತುರಂಗದಲ್ಲಿ ಕೂಡ್ರುವದೂ ತಾವು ಈ ಚಳವಳಿಯಲ್ಲಿ ಯಾವ ಭಾಗ ತಕ್ಕೊಳ್ಳದಿರುವದೂ ಉಪಕಾರಗೇಡಿತನವೆನಿಸುತ್ತದ್ದೇ

ಫಲ್ಲ ನೇಳಿಗನ್ನಿ ಎಲ್ಲರೂ ಗೌತ್ತವಲ್ಲ.

ಬೆಳಗಾವಿಯಲ್ಲಿ ಕೂಡಿದ ಬ್ರಾಹ್ಮಣೇತರ ಸಭೆಗೆ ಇಲ್ಲಿಂದ ರಾ. ಬ. ಬಿ. ಎಲ್. ಪಾಟೀಲ, ಈಸಾಳ ಮ್ಯಾಜಿಸ್ಟ್ರೇಟ ಕೆಲಸಕ್ಕೆ ರಾಜೀನಾಮೆ ಕೊಡುತ್ತೇನೆಂದು ಹೇಳಿ ಕೊಡದಿರುವ ವಿ॥ ಗವಿಗ ಯ್ಯಾ ಇವರೇ ಮುಂತಾದವರು ಹೋದರು. ಆದರೆ ಅಲ್ಲಿ ಇವರು [illegible] ಕೂಡ ಕೊಡದೆ ಹೊರ ಹೊರಟು ಹೋದರು. ಬೆಳಗಾವಿಯವರೇ ಆದಂಥ ರಾ. ಬ. ಅಂಗಡಿ ಮತ್ತು ವಿ. ಸಂಡಿಕಪ್ಪ ಚಿಕ್ಕೋಡಿಯವರು ಸಭೆಯಲ್ಲಿ ಏನೂ ಸಹ ಹಾಕಲಿಲ್ಲ. ಅನ್ನ ದಿಂದ ಬ್ರಾಹ್ಮಣೇತರ ಮುಖಂಡರೆಂಬವರು ಸಭೆಗೆ ಹೋಗಲಿಲ್ಲ. ಕಾರಣ ಇಂಗ್ರೇಜಿ ಪತ್ರಗಳು ಇದು ನಿಜವಾದ ಬ್ರಾಹ್ಮಣೇತರ ಸಭೆಯಲ್ಲೆಂದು ಕೂಗ್ರಹ್ಣ ನಡೆಸಿರುತ್ತವೆ. ಈ ಹೇಳಿಕೆಯು ವಸ್ತುಸ್ಥಿತಿಗೆ ತೀರ [illegible] ಈ ಸಭೆಯಲ್ಲಿ ತ [illegible] ನು ಅಸೆಂಬ್ಲಿಯ ಸಭಾಸದತ್ವವನ್ನು [illegible] ರಾ. ಬ. ಬಿ. ಎಲ್. ಪಾಟೀಲ. ಸಭಾ [illegible] ಪ್ರೇಕ್ಷಕರಾಗಿ ಹೋದರು; [illegible] ಏನು ಹೇಳಿದರು. ಇವರ ತಿ ಉತಿವರಿ ಹಾಕೇಬೇಕು. ಸಭೆಗೆ ವಿರೋಧವನ್ನು ಬೆಳೆಸಿ, ಅಲ್ಲಿ ಇವರು ಬೇಕಾದಂತೆ ಬಕು [illegible] ಮಾಡಿಕೊಳ್ಳಬಹುದಾಗಿತ್ತು. ಹಾಗೆ ಸ್ವಯ ತ್ತಿಸಿದ್ದರೆ- ಕ್ಕೆ ತಿ ಳಿಸಿ ಅವಲ್ಲ [illegible] ಮಾಡಿಕೊಳ್ಳುವದೇ ಆಗ [illegible]. ಅದರಿಂದ ದೂರ ಸರಿದು ನಿಂತು, ಮ [illegible] ಕಲಕಾರರ ಮಸಲತ್ತು ನಡೆಸಿರುತ್ತಾರೆ. ಸರಕಾರದವರು ಮುಂದೆ ಇವರನ್ನು ಇನ್ನೂ ಉಬ್ಬಿಸಲಿ; ಬೆನ್ನು ಚಪ್ಪರಿಸಲಿ; ಇನ್ನೂ ಹೆಚ್ಚಿನ ಪದವಿ ಕೊಡಲಿ; ಬ್ರಾಹ್ಮಣೇತರ ಸಮಾಜದಲ್ಲಿ ಇವರಿಗೆ ಮಂಗಳಾರತಿ ಯಾಗಿರುತ್ತದೆಂದು ಖಚಿತವಾಗಿ ತಿಳಿಯಲಿ; ತಾವು ನಿಜವಾದ ಮುಖಂಡರು; ಜನರು ತಮ್ಮನ್ನು ಹಿಂಬಾಲಿಸುವರು; ತಮ್ಮ ವಚನವೇ ವೇದವಚನವೆಂದು ಇವರಿಗೆ ಆತ್ಮವಿಶ್ವಾಸವಿದ್ದರೆ- ಹುಬ್ಬಳ್ಳಿಯ ದು [illegible] ಬೈಲಿನಲ್ಲಿ ಸಭೆ ಕೂಡಿದರು ನಿಂತು ವ್ಯಾಖ್ಯಾನ ಕೊಟ್ಟು, ಯುಕ್ತಿ ತರ್ಕದಿಂದ ಏಟಿಯೂದ ಮಾತನ್ನು ಸುಳ್ಳು ಮಾಡಲಿ

ಸಣ್ಣ ಕಿಡಿ ಭಾರಿದಿಲಿ ಸಾಕು;
ಕಿಚ್ಚೇ ಆಗುತ್ತದೆ.

—:-:*:-:—

ಮುಂಬಯಿಯಲ್ಲಿ ಮಾಟುಂಗಾವೆಂಬ ಉಪನಗರವುಂಟು. ಇಲ್ಲಿ ಶ್ರೀಮಂತ ಜನರು ಬಂಗಲೇ ಕಟ್ಟಿಕೊಂಡು ವಾಸವಾಗಿರುತ್ತಾರೆ. ಅಲ್ಲಿಯ ಪೋಲೀಸರಿಲ್ಲದ್ದರ ಮೈಪೊಕ್ಕಿನಿಂದ ಒಬ್ಬ ಭಯ್ಯಾನನ್ನು ಹೊಡೆದರು. ಅಲ್ಲಿನ ಊರ ಜನರೆಲ್ಲ ನಿಷೇಧವನ್ನು ವ್ಯಕ್ತಪಡಿಸಿದರು. ಮತ್ತು ಅಂಗಡಿಕಾರರು ಪೋಲೀಸರಿಗೆ ಚಹಾ ಸಕ್ಕರೆ ಮೊದಲಾದ ಯಾವ ಪದಾರ್ಥ ಕೊಡಬಾರದೆಂದು ಕಟ್ಟುಮಾಡಿದ್ದಾರೆ.

ಜಮುನಾದಾಸ ದ್ವಾರಕಾ ದಾಸರಿಗೆ ಶಿಕ್ಷೆ.

—()—( )-()—

ಬ್ಯಾರಿಸ್ಟರ ಪುರುಷೋತ್ತಮ ದಾಸರಿಗೆ ಶಿಕ್ಷೆ.

—(೨)—

ಅನಿಬಿಸ್ಸೆಂಟ ಕೃಸನರ ಪರಮ ಶಿಷ್ಯರಾಗಿರುವ ಶ್ರೀ. ಜಮುನಾದಾಸ ದ್ವಾರಕಾದಾಸರೆಂಬ ದೊಡ್ಡ ಶ್ರೀಮಂತ ಗೃಹಸ್ಥರು ಗಾಂಧಿ ಚಳವಳಿಯಲ್ಲಿ ಸೇರಿ ಗಾಢ ದಿತರಾಗಿದ್ದರು. ಮೊನ್ನಿನ ದಿವಸ ಪೋಲೀಸರು ಇವರನ್ನು, ಬ್ಯಾರಿಸ್ಟರ ಪುರುಷೋತ್ತಮದಾಸರನ್ನೂ ಹಿಡಿದು, ಉಪ್ಪಿನ ಕಾಯದೆ ಭಂಗಕ್ಕೆ ಉತ್ತೇಜನ ಕೊಟ್ಟರೆಂದು ಇವರ ಮೇಲೆ [illegible] ನಡೆಸಿದರು [illegible] ಮ್ಯಾಜಿಸ್ಟ್ರೇಟ [illegible] ಗೆ ಇವರು ತಿಂಗಳ ಸಾದಾ ಶಿಕ್ಷೆ ಮತ್ತು [illegible] ರೂಪಾಯಿ ದಂಡ ಮಾಡಿದರು.

ಪೋಲೀಸರು ಜಮುನಾದಾಸರನ್ನು [illegible] ನಾಗ, ಕಾಂಗ್ರೆಸ [illegible] ಮಾಡಿ ನ [illegible] ಕ ದಿಂದ [illegible] ಮಾಡಿ, ಜಮುನಾದಾಸರ ಅಪ್ಪಣೆಯಿಲ್ಲದೆ [illegible] ಕೇಳಿದರು. ಈ ಪ್ರಶ್ನವನ್ನು [illegible] ಜಮುನಾದಾಸರು ಕೇಳಿ, ಹೌದು ನಾ ನಿಲ್ಲಿಸಿ [illegible] ಹಿಡಿಯಿರಿ ಎಂದು [illegible] ಹಾಗಾದರೆ ನೀವು ಪೋಲೀಸ್ಟೇಶನಕ್ಕೆ [illegible] ಇವರಿಗೆ ಪುನಃ ಟೆಲಿಫೋನ ಮಾಡಿದರು. ಆಗ ಕಮಿಟಿಯ ಕೆಲಸ ನಡೆದರೆ [illegible] ದಾಗಿರುವದಿಲ್ಲೆಂದು ಉತ್ತರ ಕೊಟ್ಟರು. ಕೊನೆಗೆ ಇಬ್ಬರು ಗುಪ್ತ ಪೋಲೀಸರು ಬಂದು ಇವರನ್ನು ಹಿಡಿದುಕೊಂಡು ಹೋದರು.

ಸ ದಾರ [illegible], ಕಾಕಾ ಕಾಲೇಕರರ ಅಪ್ಪೆತ್ಯಾಗ.

—(೨)—

ಸರದಾರ ಪಟೇಲರು ಸಾಬರಮತಿಯ ಕಾರಾಗೃಹದಲ್ಲಿದ್ದಾರೆ. ಅ, ಬ ಮತ್ತು ಕ ವರ್ಗದ ಕಾಮದೀಯರಿಗೆ ಕ್ಯಾದಿಗಳನ್ನು ಹಿಂಡಿಸಿ ಇಲ್ಲಿ ಜೇಲ ಇಟ್ಟಿದ್ದರು. ಕ ವರ್ಗದವರನ್ನು ಕಾರಾಗೃಹದಲ್ಲಿಯೇ ಬೇರೆ ಕಡೆಗೆ ಒಯ್ದರು. ತಮ್ಮವರನ್ನು ಬಲಾತ್ಕಾರಪೂರ್ವಕವಾಗಿ ಅಗಲಿಸುವದಾಗಿರುತ್ತದೆಂದು ಸರದಾರ ಪಟೇಲ, ಕಾಕಾ ಕಾಲೇಲಕರ, ಮಹಾದೇವ ದೇಸಾಯಿ, ಮಹಿಪಾಲ ಕೋರಿಕೆ [illegible] ದವರು ಅಪ್ಪೆತ್ಯಾಗ ಮಾಡಿ [illegible] ಪ್ರಾರಂಭಿಸಿದ್ದಾರೆ.

ಪುಣೆಯಲ್ಲಿ ಪಿಕೆಟಿಂಗ ಅರಿವೆಗೆ ಸರದೇಶಿ ಬಹಿಷ್ಕಾರ ಮತ್ತು ಹರತಾಳ.

—(೨)—

ಪುಣೆಯ ಜನರು ಗಡಂಗಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಿದ್ದಾರೆ. ಅಲ್ಲಿ ಕೆಲವು ಮದ್ಯ ದ ಅಂಗಡಿಗಳಿದ್ದು, ಇವುಗಳ ಮುಂದೆ ನಡೆದ ಪಿಕೆಟಿಂಗದಿಂದ ಒಂದು ಕಾಳಿನ ವ್ಯಾಪಾರವಾಗಿಲ್ಲ. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ಕುಳಕರ್ಣಿಯವರ ಮನೆಯಲ್ಲಿ ಕಪ್ಪಿನ ವ್ಯಾಪಾರಿಗಳ ಕಮಿಟಿಯಾಗಿ, ಇಂಗ್ಲಂಡದಿಂದ ಕಪ್ಪಣದ ಯಾವ ಸರಕನ್ನೂ ತರಿಸಬಾರದೆಂಬ ಠರಾವು ಮಾಡಿದ್ದಾರೆ. ಪುಣೆಯಲ್ಲಿ ಎರಡು ಸಾರೆ ಕಾಂಗ್ರೆಸದ ಮೆರವಣಿಗೆ ತೆಗೆಯುವರು. ಮೆರವಣಿಗೆಯೂ ಸ್ವಾಗತವಾಗುತ್ತಿದ್ದು, ಮೂರು ಮೂರು ಕಡೆಗೆ ವ್ಯಾಖ್ಯಾನಗಳ ವ್ಯವಸ್ಥೆ ಮಾಡುತ್ತಾರೆ. ಚಕ್ಕ ತಪ್ಪ ಒಡೆಯುವರನ್ನು ಹಿಡಿ [illegible] ಊರಲ್ಲಿ ಹರತಾಳ ವಾಯಿತು.

ದ ಬಡೆ ನಾಯಕರಿಗೆ ಒಂದು ವರ್ಷ ಸಕ್ತ ಶಿಕ್ಷೆ.

—(೦)—

ಬೆಳಗಾವಿಯಲ್ಲಿ ವಿರ್ಮಯುತಿಯು ಹೋಳಿಯ ದೆಸೆಯಿಂದ ಹಿಡಿದ ಐದು ಸ್ವಯಂಸೇವಕರಲ್ಲಿ ನಾಲ್ವರಾದ ಪ್ರಭು, ವೈದ್ಯ, ಕಿತಸ್ತೂರ, ಬಾಳಕೃಷ್ಣ ದೇಶಪಾಂಡೆ ಇವರಿಗೆ ಆರಾರು ತಿಂಗಳ ಸಕ್ತಶಿ [illegible] ರೂಪಾಯಿ ದಂಡ ಮಾಡಿದರು. ಶ್ರೀ. [illegible] ನಾಯಕರ ವಾಚಡೆಯವರಿಗೆ ಹಿಂದಕ್ಕೆ ಧರ್ಮವೀರದ ಗೋಳಿಭಾರು ಮತ್ತು ಇನ್ನಿನ ಉಪ್ಪಿನ ಕಾಯದೆಭಂಗ ಈ ಪ್ರಕಾರ ಎರಡು ಸಾರೆ ಶಿಕ್ಷೆಯಾದ್ದರಿಂದ, ಇವರಿಗೆ ಒಂದು ವರ್ಷದ ಕಠಿಣ ಶ್ರಮದ ಶಿಕ್ಷೆ ಮಾಡಿದರು. ವಿಚಾರಣೆಯು ಏ. ನಾಡಿಗರ ಮುಂದೆ ನಡೆಯಿತು.

ಕಲಘಟಿಗಿಯ ಸುದ್ದಿಯು.

ರವಿವಾರ ತಾ|| ಗಂಗೇ ದಿನ ಸ್ವಯಂಸೇವಕರ ಊರಲ್ಲೆಲ್ಲ ತಿರುಗಾಡಿ ಸ್ವದೇಶಿ ಬಟ್ಟೆಗಳನ್ನು ಕೂಡಿಸಿದರು. ಸಂಜೆಗೆ ಕೂಡಿದ ಸಭೆಯಲ್ಲಿ ಅವುಗಳ ಹೋಳಿಯು ಮಾಡಲ್ಪಟ್ಟಿತು. ಮುನ್ನಾದಿನ ಇಲ್ಲಿಯ ಮಹಾಜನರು ಸ್ವದೇಶಿ ಅರಿವೆಗಳ ಹೋಳಿಯನ್ನು ಮಾಡಬಾರದೆಂದು ಬೋಧಿಸಿದರು. ಸಭೆಯಲ್ಲಿ ವಾಲಿ ಕಾಂನೆ [illegible] ಸರಕಾರದ ಪ್ರೋತ್ಸಾಹದಿಂದ ಅರಿವೆಗಳನ್ನು ಸುಡಬಾರದೆಂದು, ಉಪ್ಪನ್ನು ತಾರಿಸುತ್ತಾ ಉಪಾಧ್ಯಾಯಪಕ

ಕಿತ್ತೂರ ಸುತ್ತಲು ೫೦೦೦ ಶಿಂದಿಗಿಡಗಳು ನೆಲಸಮವಾದವು.

ಪರಶುರಾಮನ ಅವತಾರ.

ಗ೫೦ ಕೊಡ್ಲಿಗಳ ಮೆರವಣಿಗೆ.

—()—(.)—()—

ಶನಿವಾರ ತಾ॥ ೧೦-೫-೩೦ ನೇ ದಿನ ನಾಲ್ಕು ನೂರು ಶಿಂದಿಗಿಡಗಳು ಕಡಿಯಲ್ಪಟ್ಟವು.

ರವಿವಾರ ತಾ॥ ೧೧-೫-೩೦ ನೇ ದಿನ ಪರದೇಶೀ ಮಾಲಿನ ಹೋಳಿ ಹೊತ್ತಿತು. ಸಭೆಯು ಜರುಗಿತು. ಸೋಮವಾರ ತಾ॥ ೧೨-೫-೩೦ ನೇ ದಿನ ಪರಶುರಾಮನ ಅವತಾರವಾಯಿತು. ೧೫೦ ಕೊಡಲಿಗಳ ಮೆರವಣಿಗೆಯು ಸಂಜೆಯ ನಸು ಸಮಯದಲ್ಲಿ ಹೊರಟು ಮೆರವಣಿಗೆಯಾಯಿತು.

ಈ ಮೆರವಣಿಗೆಯು ಸಮೀಪದ ವೃಕ್ಷಳ್ಳಿ ಹಳ್ಳಿಗಳ ಮೇಲಾಗಿ ಕಳೆದ ೪-೫ ದಿನಗಳಲ್ಲಿ ನಾಲ್ಕೈದು ಸಹಸ್ರ ಶಿಂದಿಗಿಡಗಳು ಬಿದ್ದಂತೆ ಸುದ್ದಿ ಬಂದಿದೆ.

ಕೇವಲ ಕಿತ್ತೂರ ಸ್ವಯಂಸೇವಕರಿಂದ ಈ ವರೆಗೆ ೧೫೦೦ ಶಿಂದಿಗಿಡಗಳು ಭೂಮಿಗುರುಳಿದವು.

ಉಪವಾಸ ಕಯಿಕೊಂಡವರ ಕಾರಾಗೃಹವಾಸಕ್ಕಾಗಿ ತಾ॥ ೧೪-೫-೩೦ನೇ ದಿನ ಸಂಪೂರ್ಣ ಹರತಾಳ ಮಾಡಲ್ಪಟ್ಟಿತು.

ಸಂಜೆಯಮುಂದೆ ಪ್ರಚಂಡ ಸಭೆಯೂ ಜರುಗಿತು. ಆ ಸಭೆಯಲ್ಲಿ ೧ ಉಪವಾಸ ಕಯ್ಕೊಂಡವರನ್ನು ಹಿಡಿದ ಸರಕಾರದ ಕೃತಿಯನ್ನು ತಿರಸ್ಕರಿಸಲ್ಪಟ್ಟಿತು. ಆ ಬ್ರಾಹ್ಮಣೇತರೆಂಬ ಹಳೇ ಹೆಸರನ್ನು ತ್ಯಜಿಸಿ "ಕಾಂಗ್ರೆಸ ಲೋಕ ಪಕ್ಷ" ವೆಂದು ಹೆಸರು ಧಾರಣ ಮಾಡಿ ರಾಷ್ಟ್ರ ಯಜ್ಞದಲ್ಲಿ ದುಮುಕಿದ ಬೆಳಗಾವ ಸಭೆಯವರಿಗೆ ಹಾರ್ದಿಕ ಸಂಪೂರ್ಣವಾ ಕೃತಜ್ಞತೆಯನ್ನು ಸಮರ್ಪಿಸಲ್ಪಟ್ಟಿತು.

ಕಿತ್ತೂರ — ತಮ್ಮ

ತಾ॥ ೧೫-೫-೩೦ — ಸುದ್ದಿಗಾರ

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ. ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಮಠದಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ಎಳ ತೊಲೆಯ ಸೇರಿಗೆ ೩—೦—೦

ಕೃಷ್ಣಪಾರಿಜಾತ ಅಕ್ಕರು ತೊಲೆ ೧ಕ್ಕೆ ೪—೦—೦

೧೯-೧೧-೨೯ — ಮೈಸೂರ ಸ್ಟೋರ,
ಜಕ್ಕಣಾಚಾರಿಯವರ ಗಲ್ಲಿ
ಹುಬ್ಬಳ್ಳಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಪ್ರತಿ ತಿಂಗಳು ಔಷಧ ಬೇಡುವಾಗ್ಗೆ ರಜದ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಬೇಡಿಕೆಯನ್ನು ಸಲ್ಲಿಸುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾಲಯವಿಲ್ಲ ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದರಿಂದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ಸ್ಥಳವೂ ನಿಯಮಿತ ಜನರನು ತೆಗೆದುಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇನೆ. ಮೇ ಅಖೈರೆ ಯೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದದಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮಾನಸ್ಸಾ ಇಂಜಿನಿಯರಿಂಗ ವರ್ಕ್ಸ, ಧಾರವಾಡ

ನೋಟೀಸಿನ ದರಗಳು

—:(०):—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲ ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಸೂಸಮಯ

——(०)——

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ವೆಂಕಟಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಶನಿವಾರ ತಾರೀಖು ೧೭ ನೇ ಮೇ ೧೯೩೦ (ಸಂಚಿಕೆ ೧೨೪

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲೆಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಕಲಮದ ಆದರ್ಶ ಯೋಜನೆ ಒದಗಲವು	ಖಂಡಿತವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಗಳು ಎರಡು ಲಕ್ಷದ ಮೇಲುಂಟು. ಚಕ್ ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಾಕ್ಷಾತ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗಿನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೨೫೪ ವೈಶಾಖ ವದ್ಯ ೫

ಆ ವಿಜಯಂ ಶ್ರೀಕರಂಗಳು
ಶ್ರೀ ಪಸುಮತಿಯು ಸಲಿಸಿ ಸೌಹಿತಶಕ್ತಿಗೆಳಂ ॥
ದೀ "ವಿಜಯಂ" ಶ್ರೀಕರಮಣ ।
ತಾ ವಿಹಿತಂಗಳ ವಿಸ್ತರಿಸಲಿಸ್ತುವ ಸಾಹಸ॥

ಮುಸಲಮಾನರು ಕಾಂಗ್ರೆಸ ಸೇರಿದರು.

—(೦)—

ಲಾರ್ಡ ಆಯ್ವಿನ, ಮಿ. ಬೆನ್ನ ಮೊದಲಾದ ರಾಜ್ಯಕರ್ತರು ಕಾಯದೆಭಂಗದ ಚಳವಳಿಯು ಹಿಂದೂ ಜನರದಾಗಿದ್ದು, ಅದರಲ್ಲಿ ಮುಸಲಮಾನರು ಸೇರಿಲ್ಲೆಂದು ಆಗ್ರಹದಿಂದ ಹೇಳುತ್ತಾರೆ. ಹಾಗೆ ವರ್ತಮಾನ ಪರಿಸ್ಥಿತಿಯು ಇರುವದೇ ಇಲ್ಲ. ಹಿಂದೂ ಜನರಂತೆ ಮುಸಲಮಾನರಿಗೂ ಹಿಂದುಸ್ಥಾನವು ರಾಜಕೀಯ ಸ್ವಾತಂತ್ರ್ಯ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯುಂಟು. ಕೆಲವೆ ಅವರು ಹಿಂದೂ ಜನರಿಂದ ಅದಷ್ಟು ಹೆಚ್ಚು ಹಕ್ಕುಗಳನ್ನು ಪಡೆಯಬೇಕೆಂದು ಮುನಿಸುಗೊಂಡಂತೆ ಮಾಡಿದ್ದಾರೆ. ನವಾಬ ಅಥವಾ ರಾಜನಿಷ್ಠರಾದಂಥ ಸರ ಶಾಫಿ ಸಾಹೇಬರ ವರ್ಗದವರು, ಅಧಿಕಾರಕ್ಕಾಗಿ, ಕುದುರೆಗಳಿಗಿರುವ ಅಲ್ಲಿ ಬಂಧುಗಳು, ಬ್ಯಾರಿಸ್ಟರ ಜಿನ್ನಾ ಸಾಹೇಬರು ಇಂಗ್ರೇಜಿ ಸರಕಾರದ ಗದ್ದೆಯು ತವ್ಕ ನೆಲ್ಲಿಯ ಮೇಲೆ ಯಾವಾಗಲೂ ಜೋತಾಡುತ್ತಿರಬೇಕೆಂದು ಎಂದೆಂದಿಗೂ ಅಪೇಕ್ಷಿಸುವದಿಲ್ಲ. ಸಾಮೋಪಚಾರದಿಂದ ಅದಷ್ಟು ಅಧಿಕಾರಗಳನ್ನು ತಕ್ಕೊಳ್ಳಬೇಕೆಂದೇ ಅವರ ಮತವು. ಈ ಮತದಂತೆ ನಡೆದರೆ ನೂರಾರು ವರ್ಷಗಳಾದರೂ ಸ್ವಾತಂತ್ರ್ಯ ಹೋಗಲಾರದೆಂದು ರಾಷ್ಟ್ರೀಯರ ಮತವು ಈ ಮತಕ್ಕೆ ಪುಷ್ಟಿಯಾಗಿ ಕಾಯದೆಭಂಗದ ಯುದ್ಧ ಸಾರಿರುವದು. ಇದಕ್ಕೆ ಅನುಕೂಲರಾದಂಥ ಮುಸಲಮಾನರಿಷ್ಟೂ ಕಡಿಮೆ ಇರುವದಿಲ್ಲ. ಡಾಕ್ಟರ ಕಿಚ್ಲು ಸಾಹೇಬರು ಸಂಪೂರ್ಣ ಸ್ವಾತಂತ್ರ್ಯವಾದಿಯಾಗಿದ್ದು, ಹಿಂದಕ್ಕೆ ಅಲ್ಲೀ ಬಂಧುಗಳ ಕೂಡ್ಲ ಕುರಂಗವಾಸಿಯಾದಂಥವರು. ಈಗ ಸಹ ಮೂರು ವರ್ಷಗಳ ವರೆಗೆ ಕಠಿಣ ಶಿಕ್ಷೆ ಹೊಂದಿದರು. ಪೇಶಾವರದ ಕಾಂಗ್ರೆಸ ಕಮೀಟಿಯು ಮುಖಂಡರೆಲ್ಲರೂ ಮುಸಲಮಾನರೇ! ಕ್ವೇಟಾ, ಬೆರಾಇಸ್ಮಾಯಿಲಖಾನ್, ಕೊಹಾಟ ಮುಂತಾದ ಪಟ್ಟಣಗಳಲ್ಲಿಯು ರಾಷ್ಟ್ರೀಯ ಸ್ವಯಂಸೇವಕರಲ್ಲಿ ಹಿಂದೂ ಜನರಿಗಿಂತ ಮುಸಲಮಾನರೇ ಹೆಚ್ಚಾಗಿದ್ದಾರೆ. ಸರಹದ್ದಿನ ಮುಸಲಮಾನರು ಸಹ ಕಾಂಗ್ರೆಸಕ್ಕೆ ಅನುಕೂಲರಾಗಿದ್ದಾರೆಂದು ಇಂಗ್ರೇಜಿ ಸರಕಾರದವರೇ ಕಬೂಲಿ ಕೊಟ್ಟಿರುತ್ತಾರೆ. ಕಲಕತ್ತೆಯ ಮುಸಲಮಾನರು ಜಾಹೀರ ಪತ್ರಿಕೆ ತೆಗೆದು ತಾವು ಕಾಂಗ್ರೆಸ ಸೇರಿದಂತೆ ಪ್ರಸಿದ್ಧ ಮಾಡಿದ್ದಾರೆ. ಕಾನಪೂರವಂತೂ ಈ ವಿಷಯದಲ್ಲಿ ಬಹಳ ಮುಂದೆ ಹೋಗಿದೆ ಮಹಾತ್ಮರನ್ನು ಹಿಡಿದ ದಿವಸ ಅಲ್ಲಿ ಮೂವತ್ತು ಸಾವಿರ ಮುಸಲಮಾನರ ಸಭೆಯು ಕೂಡಿತ್ತು. ಹಜರತ ಮೋಹಿನಿ, ಸರದ್ದಾರ ಅಲ್ಲಿಸಾಹೇಬರವರು ಭಾಷಣಮಾಡಿ, ನಮಗೆ ಇನ್ನು ಸಾಮಂತ ಸ್ವರಾಜ್ಯ ಬೇಕಾಗಿಲ್ಲ; ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂಬ ಠರಾವು ಮಾಡಿದರು: ಆಗ ಆ ಪರದೇಶಿ ಅರಿವೆಗಳ ಹೋಳಿಯು ಹಿಂದ ಸ್ಥಾನದಲ್ಲಿಯೇ ಅದ್ವಿತೀಯ ಮತ್ತು ಅಪೂರ್ವವಾಯಿತು. ಇದರ ಉರಿಯು ಸುತ್ತಲು ಹತ್ತು ಮೈಲಿನ ತನಕ ಕಾಣುತ್ತಿತ್ತೆಂಬದರ ಮೇಲಿಂದ ಎಷ್ಟು ಅರಿವೆ ಸುಟ್ಟಿರಬೇಕೆಂಬದನ್ನು ವಾಚಕರು ಊಹಿಸಬಹುದು. ಮಿರಠದಲ್ಲಿ ಜಮಾಯತ ಉಲೇಮಾ ಸಭೆಯಾಯಿತು. ಎಲ್ಲರೂ ಮೌಲ್ವಿಗಳು; ಧರ್ಮಾಚಾರ್ಯರಿದ್ದರು. ಇವರು ಕಾಂಗ್ರೆಸ ಸೇರಬೇಕೆಂದೇ ಠರಾವು ಮಾಡಿದ್ದಾರೆ. ಈ ಠರಾವು ಪಾಸಾಗಿ ಒಂದೇ ವಾರವಾಯಿತು. ಈ ಠರಾವಿನಿಂದ ಹಿಂದುಸ್ಥಾನದ ತುಂಬ ಮುಸಲಮಾನರಲ್ಲಿ ಜಾಗ್ರತಿಯಾಗಿದ್ದು, ಕಾಂಗ್ರೆಸದ ಹೊರತು ರಾಜಕೀಯ ಸದ್ಗತಿಯಿಲ್ಲೆಂಬ ಭಾವನೆಯುಂಟಾಗಿದೆಂಬದು ಸಂತೋಷವು. ಮುಂಬಯಿಯಲ್ಲಿ ಮುಸಲಮಾನರ ಪ್ರಚಂಡ ಸಭೆಯಾಗಿ, ಕಾಂಗ್ರೆಸ ಕೂಡಬೇಕೆಂಬ ಗೊತ್ತುವಳಿಯಾಯಿತು. ಡಾಕ್ಟರ ಕಿಚ್ಲು, ಜಸ್ಟ ಅಬಾಸ ತಯ್ಯಬಜಿ, ಡಾಕ್ಟರ ಅಲಮ ಮೊದಲಾದವರ ದಸ್ತಗಿರಿ ಮತ್ತು ಶಿಕ್ಷೆಗಳಿಂದ ಇಂಗ್ಲಿಷ ದಬ್ಬಾಳಿಕೆಯು ಹಿಂದೂ ಮುಸಲಮಾನರಲ್ಲಿ ಭೇದ ಮಾಡುವದಿಲ್ಲೆಂದು ಮನಗಂಡ ಬಳಿಕ, ಮುಸಲಮಾನರು ಹಿಂದೂ ಜನರಿಂದ ಸಿಡಿದು ನಿಲ್ಲುವದು ಘಾತಕವೇ ಸರಿ. ಕರ್ನಾಟಕದ ಪುಟ್ಟಿಗೆ ಪ್ರಚಾರ ಮಾಡಿದರೂ, ಮಹಾತ್ಮರನ್ನೂ, ಅಬ್ಬಾಸ ತಯಬಜಿಯವರನ್ನೂ ಹಿಡಿದಾಗ ಮುಂಬಯಿ ಮತ್ತು ಗದಗಿನಂಥ ದೊಡ್ಡ ಊರುಗಳಲ್ಲಿ ಮುಸಲಮಾನರು ಹರತಾಳದಲ್ಲಿ ಸೇರಿದ್ದರು ಇದರಿಂದ ಕಾಂಗ್ರೆಸಕ್ಕೆ ಸಂಪೂರ್ಣ ಸಹಾನುಭೂತಿಯುಂಟೆಂದು ಸ್ಪಷ್ಟವಾಗುತ್ತದೆ. ಎಷ್ಟು ಸ್ವಯಂಸೇವಕರಾಗಿ, ಭಾಷಣಕಾರರಾಗಿ ಮುಂದೆ ಬಂದರೆ ಸಂಪೂರ್ಣ ಕಾಂಗ್ರೆಸದ ದೀಕ್ಷೆ ತಕ್ಕೊಂಡಂತಾಗುತ್ತದೆ.

ಬೆಳಗಾವಿಯಲ್ಲಿ ೧೫ ವರ್ಷದ ಹುಡುಗನಿಗೆ ಪಟಕೀ ಶಿಕ್ಷೆ.

—(೦)—

ಬೆಳಗಾವಿಯಲ್ಲಿ ೧೨ನೆಯ ತಾ-ರಿ ಖಿನ ದಿವಸ ಮಿ. ವೈಲ್ಲ ಸಾಹೇಬರ ಮುಂದೆ ಎಂಟು ಜನ ಸ್ವಯಂಸೇವಕರ ವಿಚಾರಣೆ ನಡೆದು, ಪ್ರತಿಯೊಬ್ಬನಿಗೆ ಏಳೂವರೆ ತಿಂಗಳ ಸಕ್ತ ಶಿಕ್ಷೆಯಾಯಿತು. ಇವರ ಕೂಡ ಆರೋಪಿಯಾಗಿದ್ದ ಗಾವಡೆ ಎಂಬೋ ೧೫ ವರ್ಷದ ಹುಡುಗನಿಗೆ ಸಾಹೇಬರು ೧೫ ಪಟಕೀ ಶಿಕ್ಷೆ ಕೊಟ್ಟರು. ಈ ಶಿಕ್ಷೆಯು ಅವನ ನೆಯಮೊತಲ್ಲೇ ಹೇಳಕಕ್ಕದ್ದು. ಬದಮಾಷ ಜನರಿಗೆ ಹೊಡೆಯುವಂಥಾದ್ದು. ಗಾವಡೆಯು ಬದಮಾಷನಲ್ಲ. ಚಿಕ್ಕ ವಯಸ್ಸಿನ ಸ್ವಯಂಸೇವಕನು, ಸಜ್ಜನನು. ಅಹಿಂಸೆಯ ಮೂರ್ತಿಯು. ಇಂಥವನಿಗೆ ಪಟಕೀ ಶಿಕ್ಷೆಯೇ? ಧಾರವಾಡದ ತುರಂಗದಲ್ಲಿ ಕಳವು ಮುಂತಾದ ಹಲವು ತರದ ಅಪರಾಧ ಮಾಡಿದ ಇಡೀ ಇಬ್ಬರೂ ಹುಡುಗರು ಸ್ವೂ ಹುಡುಗರಿದ್ದಾರೆ. ಇವರಲ್ಲಿ ಎರಡೆರಡು ವರ್ಷ ಶಿಕ್ಷೆಯಾದವರೂ ಇದ್ದಾರೆ ಒಬ್ಬನಿಗೂ ಪಟಕಿ ಹೊಡೆದಿಲ್ಲ. ಸಾಹೇಬರು ಗಾವಡೆಯಿಗೂ ಶಿಕ್ಷೆ ಹೇಳಿ, ಧಾರವಾಡಕ್ಕೆ ಕಳಿಸಬಹುದಾಗಿತ್ತು. ಆದರೆ ಪಟಕೀ ಹೊಡೆಯುವಂಥ ಎರ್ದಯ್ಯದ ಶಿಕ್ಷೆ ಹೇಳಿದ್ದು ಅತ್ಯಂತವಾಗಿ ನಿಂದ್ಯವಾಯಿತು. ಅಲ್ಲಿ ೧೨೦೦೦ ಜನರ ಪ್ರಚಂಡ ಸಭೆಯಾಗಿ ಈ ಶಿಕ್ಷೆಯನ್ನು ತೀವ್ರತರ ಶಬ್ದಗಳಿಂದ ನಿಷೇಧಿಸಲ್ಪಟ್ಟಿತು.

ವಿಕ್ರಮ ಪಥಕದ ಕಾರ್ಯ.

—(೦)—

ವಿಜಯದಲ್ಲಿ ಪ್ರಸಿದ್ಧವಾದ ಕಾರ್ಯಕ್ರಮದ ಮೇರೆಗೆ ಹಿರೇಕೆರೂರ ತಾಲೂಕ ಚಿಕ್ಕಬಾಸೂರಿಗೆ ಧಾರವಾಡ ವಿಕ್ರಮ ಶಿಬಿರದವರು ೧೨ನೆಯ ತಾರೀಖಿನ ದಿವಸ ದಯಮಾಡಿಸಿದರು. ಪ್ರಾತಃಕಾಲದಲ್ಲಿ ರಾಷ್ಟ್ರೀಯ ನಿಶಾನೆಯೊಂದಿಗೆ ಊರಲ್ಲಿ ಮೆರವಣಿಗೆ ಹೊರಡಿಸಿದರು. ಮಧ್ಯಾಹ್ನದಲ್ಲಿ ಶ್ರೀ ರಾಘವೇಂದ್ರರಾವ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಹಿಂದೂ ಮುಸಲಮಾನರು ಒಂದಾಗಿ ಕಾಯದೆಭಂಗಕ್ಕೆ ಅನುಕೂಲರಾಗಿದ್ದರು. ಸ್ವಯಂಸೇವಕರು ತಂದ ಸ್ವದೇಶಿ ಉಪ್ಪಿನ ಲಿಲಾಂವಾಗಿ ಐದು ರೂಪಾಯಿ ಬಂತು. ಮತ್ತು ೩—೫—೦ ಫಂಡು ಕೂಡಿತು. ಇಲ್ಲಿನ ಸಭೆ ಸಮಾರಂಭ ಮುಗಿಸಿಕೊಂಡು ಸ್ವಯಂಸೇವಕರು ಹಾನಗಲ್ಲ ತಾಲೂಕ ಕೆಲೂರ ಗ್ರಾಮಕ್ಕೆ ದಯಮಾಡಿಸಿದರು.

ಮುಳಗುಂದದಲ್ಲಿ ಪೋಲೀಸರಿಗೆ ಬಹಿಷ್ಕಾರ

—(೦)—

ಮುಳಗುಂದದ ಸಭೆಯಲ್ಲಿ ಸಬ್ ಇನ್ಸಪೇಕ್ಟರರು ಫ್ರಿಸ್ರಾಲ ಕೋರಿಸಿದಂದಿನಿಂದ ಜನರು ಪೋಲೀಸರಿಗೆ ಬಹಿಷ್ಕಾರ ಹಾಕಿದ್ದಾರೆ. ಹಾವಲಿಗ, ಅಗಸ ಸಹ ಸಿಗದಾಗಿದೆ. ಅ|| ಕಲೆಕ್ಟರರಾದ ಮಿ. ವೆಸ್ಟ ಸಾಹೇಬರು ಅಲ್ಲಿಗೆ ಬಂದು, ಹಾಜರಾದವರನ್ನು ಕರೆದು ಯಾರಾರು ಬಹಿಷ್ಕಾರ ಹಾಕಿದ್ದಾರೆಂದು ಕೇಳಿದರು. ಅದಕ್ಕೆ ಅವರು

ಹಾವಲಿಗರು, ಅಗಸರು, ಹಾಲು ಮೊಸರ

ನವರು ಸಹ

ಬಹಿಷ್ಕಾರ ಹಾಕಿದ್ದಾರೆಂದು ಹೇಳಿದರು ಸಾಹೇಬರು ಎಲ್ಲರನ್ನು ಕರಸಿದರು. ಒಬ್ಬರೂ ಬರಲಿಲ್ಲ. ಅಗಸರ ಸೀನಪ್ಪನೆಂಬವನು ಬಂದು- ಯಾವ ಮಾತು ಕೇಳಿಲ್ಲ ನಾವಾಗಿ ಬಹಿಷ್ಕಾರ ಹಾಕಿದ್ದೇವೆಂದು ಹೇಳಿದನು. ಕೂಡಲೆ ಸಾಹೇಬರು ಸಿಟ್ಟಿಗೆಬಂದು, ಅವನ ಕಪಾಳಕ್ಕೆ ಹೊಡೆದು ಅವನನ್ನು ಕಚೇರಿಯಲ್ಲಿ ಕೂಡ್ರಿಸಿಕೊಂಡು, ಬಹಳ ಹೊತ್ತಿನ ಮೇಲೆ ಬಿಟ್ಟರು. ಬಳಿಕ ಊರ ಜನರು ಸೀನಪ್ಪನ ಮೆರವಣಿಗೆ ತೆಗೆದರು. ಸಾವಿರಾರು ಜನರು ಕೂಡಿದ್ದರು.

ಕರ್ನಾಟಕದ ಕಾಯದೆಭಂಗವು ಸ್ತ್ರೀಯರ ಉತ್ಸಾಹ.

—(೦)—

ನಾಗಪೂರ ಸರಕಾರದವರು ಉಪ್ಪಿನ ಕಾಯದೆಭಂಗ ಮಾಡಿದವರ ಗೊಡವಿಗೇ ಹೋಗುವದಿಲ್ಲ. ದಸ್ತಗಿರಿಯಿಲ್ಲ; ಶಿಕ್ಷೆಯಿಲ್ಲ. ಜಾಮೀನು ಮುಚ್ಚಳಿಕೆಯಿಲ್ಲ; ಜಪ್ತಿಯಿಲ್ಲ. ರೆಗ್ಯುಲೇಶನ ಅಕ್ಟ ಇಲ್ಲ. ಸರಕಾರವು ಹೀಗೆ ಕೈ ಕಟ್ಟಿಕೊಂಡು ಕೂತದ್ದನ್ನು ಕಂಡು, ಜನರು ಬೇರೊಂದು ರೀತಿಯಿಂದ ಕಾಯದೆಭಂಗ ಮಾಡಲುಪಕ್ರಮಿಸಿದ್ದಾರೆ. ಸರಕಾರದವರು ಪ್ರೊಸ್ಕ್ರೈಬ ಮಾಡಿದ ಪುಸ್ತಕಗಳನ್ನು ಚೌಕ್ಕರ ಮುಂದೆ ನುವರು ಓದಿದರಷ್ಟೇ; ಅದೇ ಪ್ರಕಾರ ವರ್ಧಾದಲ್ಲಿಯೂ ಪ್ರಾರಂಭವಾಗಿದೆ. ಸ್ತ್ರೀಯರೂ ಇದರಲ್ಲಿ ಮುಂದೊರೆದಿದ್ದಾರೆ ಅಕೋಲೆಯಲ್ಲಿ ಪ್ರಚಂಡ ಜನ ಸಭೆಯಾಗಿ ಶ್ರೀಮತಿ ದುರ್ಗಾತಾಯಿ ಜೋಶಿ ಮತ್ತು ಕುಮಾರಿ ಸುಶೀಲಾ ಗಾಂಧಿಯವರು ಸರಕಾರದವರು ರದ್ದು ಮಾಡಿದ ಪುಸ್ತಕದೊಳಗಿನ ಕೆಲ ಭಾಗಗಳನ್ನು ಓದಿದರು.

ಕಾಂಗ್ರೆಸ ಪಕ್ಷದ ಸಂಬಂಧವಿರದ ದುಂಡ ಮೇಜಿನ ಪರಿಷತ್ತು ಹುಟ್ಟಿದ ಕೂಡಲೆ ಸಾಯುವ ಕೂಸಿನಂಥ ಗತಿ ಹೊಂದುವದೆಂದು ಮ. ಮಾಳವೀಯ, ಇಂಗ್ರೇಜಿ [illegible] ಅನ್ನಲಾರಂಭಿಸಿದ್ದಾರೆ.

ದಂಡಿನ ಕಪ್ತಾನರು ರಾಜೀನಾಮೆ ಕೊಟ್ಟು ಸತ್ಯಾಗ್ರಹದಲ್ಲಿ ಸೇರಿದರು.

—(೦)—

ಸರಕಾರದ ದಬ್ಬಾಳಿಕೆಗೆಂದು ರಾವಸಾಹೇಬ ರಾವಬಹಾದ್ದೂರರು ಪದವಿಗಳನ್ನು ತ್ಯಜಿಸಿದರು. ಆನರರಿ ಮ್ಯಾಜಿಸ್ಟ್ರೇಟ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಒಬ್ಬಿಬ್ಬ ಪೋಲೀಸರೂ ಕೆಲಸ ಬಿಟ್ಟರು ಆದರೆ ದಂಡಿನ ಸೇವೆಯವರು ರಾಜೀನಾಮೆ ಕೊಟ್ಟು, ಸತ್ಯಾಗ್ರಹದಲ್ಲಿ ಸೇರಿದ್ದು ಕೇಳಿಬಂದಿದ್ದಿಲ್ಲ. ಅದೂ ಈವಂತೆ ವರ್ತಮಾನ ಬಂದಿದೆ. ಸಿಂಧ ಪ್ರಾಂತಕ್ಕೆ ಸೇರಿದ ಲಾರಖಾನದಲ್ಲಿ ಪೋಲೀಸರ ಅತ್ಯಾಚಾರಗಳನ್ನು ಕಂಡು ಅಸಹ್ಯಪಟ್ಟು, ಬಲೂಚೆಯ ಸಿಪಾಯಿದಂಡಿನ ಕ್ಯಾಪ್ಟನ ದುಹೇರಿ ಎಂಬವರು ರಾಜೀನಾಮೆ ಕೊಟ್ಟದ್ದಲ್ಲದೆ, ಸತ್ಯಾಗ್ರಹದಲ್ಲಿಯೂ ಸೇರಿದ್ದಾರೆ. ಇವರು ಬೇಗನೆ ಕಾರಾಗೃಹವಾಸಿಯಾದ ವರ್ತಮಾನ ಕೇಳಬಹುದು. ಏಕೆಂದರೆ ಆಳರಸರು ಇಂಥವರ ಮೇಲೆ ಬಹಳ ಬೇಗನೆ ಅನುಗ್ರಹ ಮಾಡುವ ಪದ್ಧತಿಯುಂಟು.

ಲಷ್ಕರೀ ಹುಕುಮಿನ ಹಿಂಸೆ.

ರಾಷ್ಟ್ರೀಯ ನಿಶಾನೆ ಹಿಡಿದರೆ- ಹತ್ತು ವರ್ಷಗಳವರೆಗೆ ಶಿಕ್ಷೆ.

—(೦)—

ಸೊಲ್ಲಾಪೂರ ಪಟ್ಟಣವನ್ನು ಲಷ್ಕರೀ ಹುಕುಮತ್ತಿನಿಂದ ತಮ್ಮ ವಶಕ್ಕೆ ತಂದುಕೊಂಡನಂತರ ಕಮ್ಯಾಂಡರರಾದ ಪಿ[illegible]ಸಾಹೇಬರು ಒಂದು ಜಾಹೀರನಾಮೆ ತೆಗೆದು, ಯಾರಾದರೂ ರಾಷ್ಟ್ರೀಯ ನಿಶಾನೆ ಅಥವಾ ಅದಕ್ಕೆ ಸಮಾನವಾದಂಥ ನಿಶಾನೆ ಹಿಡಕೊಂಡು ಬಂದರೆ- ಹತ್ತು ವರ್ಷಗಳವರೆಗೆ ಶಿಕ್ಷೆ ವಿಧಿಸಲ್ಪಡುವದೆಂದು ಸಾರಿದ್ದಾರೆ.

ಅರಬರು ಅಸಹಕಾರದ ನಿಶಾನೆ ಹಚ್ಚುವರು.

—(೦)—

ಪ್ಯಾಲೆಸ್ಟಾಯಿನದಲ್ಲಿ ರಾಜಕೀಯ ಹಕ್ಕು ಸ್ವಾತಂತ್ರ್ಯಕ್ಕಾಗಿ ಯಹೂದಿ ಮತ್ತು ಅರಬರ ನಡುವೆ ಬಂಡ ಯುದಂಥ ದಂಗೆಯಾಯಿತು. ಅನಂತರ ಬ್ರಿಟಿಶ ಸರಕಾರದವರು ಕಾರಣವನ್ನು ಮಾರಿಯದಂತೆ ಒಂದು ಕಮೀಟಿ ನೇಮಿಸಿದರು. ಈ ಕಮೀಟಿಯ ರಿಪೋರ್ಟು ಅರಬರನ್ನು ಸಮಾಧಾನ ಪಡಿಸಲಿಲ್ಲ. ಆದ್ದರಿಂದ ಇವರು ಮಹಾತ್ಮರ ಅಹಿಂಸೆಯ ಅಸಹಕಾರದ ದೀಕ್ಷೆ ತಕ್ಕೊಂಡು, ಆ ಪ್ರತಿಫಲವನ್ನು ಪೂರ್ಣ ಮಾಡಿಕೊಳ್ಳಬೇಕೆಂದಿದ್ದಾರೆ.

ಧಾರಾಸಾನದಲ್ಲಿ ಅದ್ಭುತ ಪ್ರಯತ್ನದಿಂದ ಕಾಯದೆಭಂಗ.

—(೦)—

ದೇವಿ ಸರೋಜಿನಿಯವರು ಅಹ್ಮದಾಬಾದದಿಂದ ಮುಂಬಯಿಗೆ ಬಂದು, ಅಲ್ಲಿಂದ ಧಾರಾಸಾನಕ್ಕೆ ಹೋದರು. ಅಲ್ಲಿ ಇಂದಿನ ದಿವಸ ಕಾಯದೆಭಂಗದ ಮುಂದಾಳುತನವನ್ನು ವಹಿಸುವರು. ೫೦ ಜನ ಸ್ವಯಂಸೇವಕರೊಂದಿಗೆ ಮೊದಲನೆಯ ದಂಡಯಾತ್ರೆ ಹೊರಡಿಸುವರು. ನಾಗಪೂರದ ನಾಗರಿಕರಂತೆ, ಇಲ್ಲಿಯೇ ಸ್ವರಾಜ್ಯ ಸ್ವಾತಂತ್ರ್ಯದ ಸರ್ವಶಕ್ತಿಯನ್ನು ಉಪಯೋಗಿಸುವರು. ಗುಜರಾಥವೊಂದೇ ಇಪ್ಪತ್ತು ಸಾವಿರ ಸ್ವಯಂಸೇವಕರನ್ನು ಕೊಡುವರು. ಮುಂಬಯಿಯು ಗುಜರಾಥವನ್ನು ಹಿಂಬಾಲಿಸುವದು. ಸರಕಾರವು ಎಷ್ಟು ಜನರನ್ನು ತುರಂಗಕ್ಕೆ ಕಳಿಸುವದೆಂಬುದನ್ನು ನೋಡುವಾ-

---

ಕೋಟ್ಯಾಧೀಶರು ಸರಕಾರದ ಸಂಬಂಧ ಕಡಿಕೊಂಡರು.

—(೦)—

ಅಹಮದಾಬಾದಿನ ಕೋಟ್ಯಾಧೀಶರಾದ ಅಂಬಾಲಾಲ ಸಾರಾಭಾಯಿಯವರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ, ಮ್ಯುನಿಸಿಪಾಲಿಟಿ, ಜಿಲ್ಲಾ ಕಮೀಟಿ ಮುಂತಾದ ಸರಕಾರ ಪರವಾಗಿ ನಾಮಿನೇಟಾಗಿದ್ದಂಥ ಎಲ್ಲ ಕೆಲಸಗಳನ್ನು ಬಿಟ್ಟುಬಿಟ್ಟರು. ಮತ್ತು ಅವರ ಕೈಸರ ಈ ಹಿಂದ ಪದಕವನ್ನು ಹಿಂದಿರುಗಿ ಕಳಿಸಿದರು.

ಲಕ್ಷ್ಮೀಪತಿ ರುಕ್ಮಿಣಿಬಾಯಿಗೆ ಶಿಕ್ಷೆ.

—(೦)—

ವೇದಾರಣ್ಯವು ತಮಿಳ ದೇಶದ ಅಂಕೋಲೆಯಾಗಿದೆ. ಸುಪ್ರಸಿದ್ಧ ಡಾಕ್ಟರರಾದ ಶ್ರೀ. ಲಕ್ಷ್ಮೀನಾರಾಯಣರ ಪತ್ನಿಯವರಾದ ಶ್ರೀ|| ಸೌ|| ರುಕ್ಮಿಣಿಬಾಯಿಯವರು ಉಪ್ಪಿನ ಕಾಯದೆಭಂಗ ಮಾಡಿದರೆಂದು ಮ್ಯಾಜಿಸ್ಟ್ರೇಟರು ಇವರಿಗೆ ಒಂದು ವರ್ಷದ ಸಾದಾ ಶಿಕ್ಷೆ ವಿಧಿಸಿದರು.

ಪಂಡಿತ ಕುಂಜರುರವರು [illegible] ರಾಜೀನಾಮೆ ಕೊಟ್ಟರು.

...ಎಂಬ ಉಣ್ಣುವಂತೆ ಅನ್ನಛತ್ರವಿಟ್ಟರೆ- ಹಿಂದುಸ್ಥಾನವು, ಕೈ ಬಿಡಲಾರದೆಂದು 'ಯಾರಾದರೂ ಕೇಳುವರು.

ಹರತಾಳ ಮತ್ತು ಪೋಲೀಸರು-

ಪುಣೆಯ ಕೆಲ ರಾಜನಿಷ್ಠ ವ್ಯಾಪಾರಸ್ಥರು ಪೋಲೀಸರ ಕಡೆಗೆ ಹೋಗಿ, ದಿನ ಬಿಟ್ಟು ದಿನ ನಡೆಯುತ್ತಿರುವ ಹರತಾಳದಿಂದ ತಮ್ಮ ಹಾನಿಯಾಗುತ್ತದೆಂದು ದೂರಿಕೊಂಡರು. ಅಂಗಡಿ ತೆಗೆಸುವದು, ಹರತಾಳ ನಿಲ್ಲಿಸುವದು ನಮ್ಮ ಕಯ್ಯಲ್ಲಿಲ್ಲ ನಿಮ್ಮ ಮುಖಂಡರಿಗೆ ಹೇಳಿಕೊಳ್ಳಿರೆಂದು ಪೋಲೀಸರು ಉತ್ತರ ಕೊಟ್ಟರು. ಉತ್ತರವು ಅಧಿಕ ಪ್ರಸಂಗಿಗಳನ್ನು ಎರೆದು, ಹಾಸಿ ಹೊಚ್ಚಿ ಮಲಗಿಸಿದಂತಾಯಿತು

ಜನ್ನವ್ವನ ಕಿತ್ತೂರಲ್ಲಿ!

ಮೆ|| ಡಿ|| ಡಿ|| ಕ|| ವೆಲ್ಸ ಸಾ|| ದಾಳಿಯು!

—:(೦):—

ನಿತ್ಯ ನಿಯಮದಂತೆ ತಾ|| ೧೧ ೫ ೩೦ ನೇ ದಿನ ಸ್ವಯಂಸೇವಕರ ತಂಡದವರು ಈಚಲ ಮರಗಳನ್ನು ಕಡಿಯಲು ಬೆಳಗಾಂವ ಧಾರವಾಡ ರೋಡಿನ ಮೇಲಿರುವ ತಿಮ್ಮಾಪೂರ ಎಂಬ ಗ್ರಾಮದ ಹತ್ತರ ತಮ್ಮ ಕಾಯಕವನ್ನು ನಡಿಸಿದ್ದರು. ಪ್ರೌಢ ಸ್ವಯಂಸೇವಕರು ಅತ್ತಿತ್ತ ಚಲ್ಲಾಪಿಲ್ಲಿಯಾಗಿ ಈಚಲ ಮರಗಳನ್ನು ತುಂಡರಿಸುತ್ತಿರಲು ೧೦-೧೨ ವರ್ಷದ ಎಳೆ ಬಾಲಕನೊಬ್ಬನು ರಸ್ತೆಯಾರಿಗೆ ಹತ್ತಿರುವ ಈಚಲ ಮರವನ್ನೊಂದು ತುಂಡರಿಸುತ್ತಲಿದ್ದನು. ಅಷ್ಟರಲ್ಲಿ ಮೆ|| ವೆಲ್ಸ ಸಾ|| ಡಿ| ಡಿ| ಕ| ಇವರ ಮೋಟಾರ ಬಂದಿತು ಅಲ್ಲಿಗೆ ಒಂದು ನಿಂತಿತು. ಹಾಗೂ ಆ ಬಾಲಕನನ್ನು ಕರೆದು ಕೈಯೊಳಗಿನ ಕೊಡಲಿಯನ್ನು ಕಸಿದುಕೊಂಡಿತು! ಈ ದೃಶ್ಯವನ್ನು ಉಳಿದ ಸ್ವಯಂಸೇವಕರು ಕಂಡು ಧಾವಿಸಿ ಒಂದು "ವಂದೇ ಮಾತರಂ" ಎಂದು ಜಯಘೋಷ ಮಾಡುತ್ತಿರಲು ಕೊಡಲಿಯನ್ನು ತಕ್ಕೊಂಡು, ಸಾಹೇಬರ ಮೋಟಾರವು ಭರದಿಂದ ಸಾಗಿತು. ಸ್ವಯಂಸೇವಕರು ತಮ್ಮ ನಿತ್ಯ ಕರ್ಮ ತೀರಿಸಿಕೊಂಡು ಮನೆಗೆ ಬಂದರು. ಈ ಪ್ರಕಾರ ಮೆ|| ವೆಲ್ಸ ಸಾ|| ಅಧಿಯೋಗವು ನಿನ್ನಿನ ದಿವಸ ಯಶಸ್ವಿಯಾಯಿತು!

ಸೋಮವಾರ ದಿನ ಇಲ್ಲಿಯ ಸಂತೆಯಾಗುವದು. ಕಳೆದ ಸೋಮವಾರ ದಿನ ಸಂತೆಯ ನೆರೆದಾಗ್ಗೆ ಪಂಚ-ಧಾರಿ (ಕೊಡ್ಲಿ) ತಂಡಿನ ಮೆರವಣಿಗೆಯಾಗಲು ಸಂತೆಗೆ ಬಂದಿರುವ ನೆರೆಹೊರೆ ಗ್ರಾಮಗಳ ಜನರ ಮೇಲೆ ಒಳ್ಳೇ ಪರಿಣಾಮವಾಗಿ ಮುಂಗಳವಾರದಿಂದ ಈಚಲ ಮರಗಳನ್ನು ಕಡಹುವ ಕಾರ್ಯವು ಈ ತಾಲೂಕಿನ ತುಂಬ ಬಹು ಭರದಿಂದ ಸಾಗಿದಂತೆ ಸುದ್ದಿಗಳು ಬರುತ್ತಲಿವೆ. ಆದರೆ ಪ್ರತಿಯೊಂದು ಗ್ರಾಮದ ಕಾರ್ಯವು ಯಾವಲ್ಲಿ ಯಾವ ದಿವಸ ಎಷ್ಟಾಯಿತೆಂಬದನ್ನು ತಿಳಿಯಲು ಮಾತ್ರ ಮಾರ್ಗವಿಲ್ಲ. ಆದ್ದರಿಂದ ತಾ-ಪ್ರಾ-ಕಾಂಗ್ರೆಸ ಕಮೀಟಿಯವರು ಒಬ್ಬ ಆಡಳಿತಗಾರ (ಸುಪರ ವಾಯಿಝರ) ವನ್ನು ಕೇವಲ ಇದೇ ಕಾರ್ಯಕ್ಕಾಗಿ ನೇಮಿಸಿದರೆ ಲೆಖ್ಖ ದೊರಕುವದೆಂದು ನಮ್ಮ ಸೂಚನೆಯು.

ಕಿತ್ತೂರ ತಮ್ಮ ಸುದ್ದಿಗಾರ

ತಾ|| ೧೬-೫-೩೦

ನೋಟೀಸಿನ ದರಗಳು

—:(೦):—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹಳೆಯ ಉಸುಮರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅಮೃತ ಪ್ರಸಾದ! ಮ್ಯಸ್ತರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ... ... ದೀಕ್ಷಿತ

C/o ... ಧಾರವಾಡ

ಸೂಚನೆ ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿದ ಈ ಬೇಡಿಕೆಯನ್ನು ಮಾಡಿರುವಿರೆಂಬದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಿಗಿ.

ಮುನಸಫ ಕೋರ್ಟಿನ ಹತ್ತರ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧ | ಧಾರವಾಡ ರವಿವಾರ ತಾರೀಖು ೧೮ ನೇ ಮೇ ೧೯೩೦ | (ಸಂಚಿಕೆ ೧೧೫

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

GENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ್

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸ್‌ಗಳು ಫಾಯದೇಶೀರ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯು ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ್ ಕೋ

ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಿಯು ಎಂಟು ಲಕ್ಷದ ಮೇಲುಂಟು. ಚಳ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮುಕ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳ್ಳಲಾಗುದು. ದರವನ್ನು ಸವಾಲ್ಕ ಮು ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ವಿ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ, ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ವದ್ಯ ೬

ಆ ವಿಜಯಂ ಶ್ರೀಕೃಷ್ಣನು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ॥
ದೀ "ವಿಜಯಂ" ಶ್ರೀಕರರುಣ ।
ನಾ ವಿಹಿತಂಗಳ ವಿವರಿಸುತಲಿರ್ಪುದು ಸಾಹಿತ್ಯಗ

ರಾವುಂಡ ಟೇಬಲ ಪರಿಷತ್ತು

ಗುಡ್ಡ ತೋಡಿ ಇಲಿ ತೆಗೆದಂತೆ !!!

——(೦)——

ಲಾರ್ಡ ಆಯರ್ವಿನ್‌ಸಾಹೇಬರು ಅಕ್ಟೋಬರ ತಿಂಗಳ ೩೧ನೆಯ ತಾರೀಖಿನ ದಿವಸ ಲಂಡನದಲ್ಲಿ ಬ್ರಿಟಿಶ ಜೇಜಿನ ಮಹಾ ಪರಿಷತ್ತು ಸೇರಬೇಕೆಂದು ಜಾಹೀರ ಮಾಡಿದ್ದರ ಮೇಲೆ ರಾಷ್ಟ್ರೀಯ, ಮವಾಳ, ಬ್ರಾಹ್ಮಣೇತರ ಮೊದಲಾದವರು ತಂತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಲಿದ್ದಾರೆ. ಇದೇ ಸಮಯದಲ್ಲಿ ಮುಂಬಯಿಯಲ್ಲಿ ಮವಾಳರ ಹಾಗು ಸರ ಸಪ್ರುಸಾಹೇಬರ ಮಜಲಿಸಗಳು ಕೂಡಿದವು. ಇವುಗಳಲ್ಲಿ ನಡೆದ ವಿಚಾರ, ಆಯಾ ಜನರು ತೆಗೆದ ಉದ್ಗಾರ ಮತ್ತು ಅವರು ವ್ಯಕ್ತಮಾಡಿದ ಅಭಿಪ್ರಾಯಗಳನ್ನು ನೋಡಿದರೆ- ರಾವುಂಡ ಟೇಬಲವು ಹುಟ್ಟಿದ ಕೂಡಲೆ ಸಾಯುವ ಕೂಸಿನಂತಾಗುವದೆಂದೇ ಧ್ವನಿತವಾಗುತ್ತದೆ.

ಪಂಡಿತ ಮೋತಿಲಾಲರ ಸರ್ವ ಪಕ್ಷದ ವಸಾಹತಿನ ಸ್ವರಾಜ್ಯದ ಯೋಜನೆಯು ಕಾಂಗ್ರೆಸದ ಠರಾವಿನಿಂದ ರದ್ದಾದ ಬಳಿಕ, ಸರ ಸಪ್ರುಸಾಹೇಬರು ಇದೇ ಮಾದರಿಯ ತಮ್ಮದೊಂದು ಸರ್ವಪಕ್ಷೀಯ ಕಮೀಟಿಯನ್ನು ಕೂಡಿಸಿದಂತಿತ್ತು; ಆ ಕಮೀಟಿಯು ರಚನೆಯಾಗಿ ಕುಸು ಭವತಿ ನ ಭವತಿಯಾದ ನಂತರ, ಅದು ಮುಂದೆ ಬಿತ್ತು. ಮುಂಬೆ ಬೀಳುವದೆಂದರೆ- ಅಕುಭಕ್ಯ ಕಾಲ ಹರಣ ಎಂಬಂತಾಯಿತು. ಈ ಕಮೀಟಿಯನ್ನು ಮುಂದೆ ಹಾಕಿದ ನಂತರ ಮಹಾತ್ಮರ ಕಾಯದೆಭಂಗದ ಧೂಮಧಾಮಿ ದಾಳಿ, ಇವರಿಗೆ ಪೂರಾ ಅವಕಾಶ ಮಾಡಿತು. ಕಮೀಟಿಯಲ್ಲಿ ದಾಸ್ತ್ರರ ಮುಂಜೆ ಮೊದಲಾದ ಪ್ರತಿಷ್ಠಿತರೂ ಸಹಕಾರಿಗಳಿದ್ದರು: ಅವರು ಕಾಯದೆಭಂಗ ಮಾಡಿದ್ದರಿಂದ, ಕಮೀಟಿಗೆ ಅನರ್ಹರಾದರು. ಮುಖ್ಯವಾಗಿ ಹಿಂದೂ ಮುಸಲಮಾನ ಐಕ್ಯವಾದರೆ- ಇವರ ಪ್ರತಿಯೋಜನವು. ಪಂಡಿತ ಮೋತೀಲಾಲರ ಸ್ವರಾಜ್ಯ ವಿಚಾರಕ್ಕೆ ಒಪ್ಪದಂಥ ಅಲ್ಲೀ ಬಂಧುಗಳು ಈ ಕಮೀಟಿಯಲ್ಲಿ ತಮಗೇನಾದರೂ ಫಲಾಂತ ದೊರೆಯುವದೆಂದು ಇದರಲ್ಲಿ ಸೇರಿದರು. ಆದರೆ ಇಲ್ಲಿಯೂ ಇವರ ಮನೋರಥ ಭಂಗವಾಯಿತು. ಏಕೆಂದರೆ- ಹಿಂದೂ ಮಹಾಸಭೆಯವರು ಇದಕ್ಕೆ ಈ ಸಾರೆ ಡೆಲಿಗೇಟನ್ನೇ ಕಳಿಸಲಿಲ್ಲ. ಇವರಲ್ಲದೆ ಪಂಡಿತ ಮಾಲವಿಯಾ ಮೊದಲಾದವರೂ ವಿಲಾಯತಿಯ ಬಟ್ಟೆಯ ಬಹಿಷ್ಕಾರದ ಯಜ್ಞದ ದೀಕ್ಷೆ ತಕ್ಕೊಂಡದ್ದರಿಂದ, ಇವರೂ ಕಮೀಟಿಗೆ ಬರಲಿಲ್ಲ. ಮದ್ರಾಸದ ಬ್ರಾಹ್ಮಣೇತರರ ಪಿರ್ವ ಮುಖಂಡರಾದ ಸರ ಪೆಟ್ರೋಸಾಹೇಬರು ಈ ಕಮೀಟಿಯ ಅಧ್ಯಕ್ಷರು. ಇವರು ಮುಂಬಯಿಗೆ ಬರುವಾಗ ದಾರಿಯಲ್ಲಿ ಪುಣೆಯಲ್ಲಿಳಿದು, ಶ್ರೀ. ಕೇಳಕರರ ಮನವೊಲಿಸಬೇಕೆಂದು ಅವರ ಬಿಡಾರಕ್ಕೆ ಹೋದರು. ಅಲ್ಲಿಗೆ ಹೇಗೆ ಹೋದರು; ಹಾಗೇ ತಿರುಗಿ ಬಂದರು. ಏನೆಂದರೆ ಶ್ರೀ. ಕೇಳಕರರೂ ಕಾಯದೆಭಂಗದ ತಪ್ತ ಮುದ್ರೆ ತಕ್ಕೊಂಡವರು. ಹೀಗೆ ಇವರಿಗೆ ತಮ್ಮ ಕೂಟದಲ್ಲಿದ್ದ ನಾಲ್ಕಾರು ಜನರ ಹೊರ್ತು ಯಾರೂ ಅನುಕೂಲರಿರಲಿಲ್ಲ. ಅನುಕೂಲರಿದ್ದವರಲ್ಲಿ ಸಕ ಬ್ಯಾರಿಸ್ಟರ ಜಿನ್ನಾಸಾಹೇಬರು ಕರಾಚಿಯಲ್ಲಿ! ಬ್ಯಾರಿಸ್ಟರ ಜಯಕರರು ನೀಲಗಿರಿಯ ತಂಪು ಹವೆಯಲ್ಲಿ!! ಹೀಗೇ ಬರಹವು ಹೀಗಾದ್ದರಿಂದ, ಕಾವಸಜಿ ಜಹಾಂಗೀರರ ಸಾವಿರಾರು ಜನ ಕೂಡುವಂಥ ಓಲಗದಲ್ಲಿ ಸಭೆ ಕೂಡಿಸಬೇಕೆಂದು ಮುಂದಾಗಿ ಗೊತ್ತು ಮಾಡಿದ್ದನ್ನು ರಹಿತ ಪಡಿಸಿ, ತಾಜಮಹಾಲಿನ ಒಂದು ಕೋಣೆಯಲ್ಲಿ ಕುಳಿತಿದ್ದರು. ಅಲ್ಲಿಯೇ ವಾಸವಾಗಿರುವ ಶ್ರೀ: ಸರೋಜಿನಿಯವರು ಕಾಯದೆಭಂಗ ಮಾಡಲು ಧಾರಾಸಾನಕ್ಕೆ ಹೊರಡುತ್ತಿದ್ದಾಗ ಇವರು ತಮ್ಮ ವಾಕ್ಪಟುತ್ವವನ್ನು ನಡೆಸಿದ್ದು ಪರದುಃಖ ಶೀತಲವೇ ಸರಿ.

ಸಭೆಗೆ ಎರಡು ಕೈಗಳ ಬೆರಳಿನಷ್ಟು ಸಹ ಪ್ರತಿನಿಧಿಗಳಿರಲಿಲ್ಲ. ಸರ ಸಪ್ರು ಮತ್ತು ಸರ ಸೆತಲವಾಡರು ಹತ್ತೆಯಿಸತಾಯ ಲಾರ್ಡ ಆಯರ್ವಿನ್‌ಸಾಹೇಬರನ್ನು ಕಂಡು ಪ್ರಸ್ತುತದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿ ಬಂದಿದ್ದರು. ಸರ ಸಪ್ರುಸಾಹೇಬರ ಕೂಡ ಮಾತಾಡಿದನ್ನು ಹೊತ್ತು ಸಾಹೇಬರು ಇನ್ನಾರ ಕೂಡ ಮಾತಾಡಲಿಲ್ಲೆಂದು ಸುದ್ದಿಯು. ಸದರು ಆ ಸಂಭಾಷಣೆಯ ಅಂತವನ್ನು ಹೇಳುವರೆಂದು ಜನರು ನಿರೀಕ್ಷಿಸಿದ್ದರು, ಆದರೆ ಅವರೇನೂ ಹೇಳಲಿಲ್ಲ. ಇಷ್ಟೇ ಅಲ್ಲ; ಈ ಸಭೆಯಲ್ಲಿ ತಾವೇನೂ ನಿರ್ಧಾರ ಮಾಡದಿದ್ದರೆ- ಮೊದಲೇ ಜನರು ನಮ್ಮ ಅಪಹಾಸ್ಯ ಮಾಡುತ್ತಾರೆ. ಮುಂದೆ ಸಭೆಯಾಕ್ಕೆ ಮಾಡದಿರಲೆಂದು ನಿರಾಶೆಯ ಉದ್ಗಾರ ತೆಗೆದರು. ಸಭೆಗೆ ಬರತಕ್ಕಂಥವರು ಬರದ್ದನ್ನು ಕಂಡು, ಒಂದು ಉಪ ಕಮೀಟಿ ಮಾಡಿ ಅಂದಿನ ತಮ್ಮ ಕರ್ತವ್ಯ ಮುಗಿಯಿತೆಂದು ಸ್ವಸ್ಥಾನಕ್ಕೆ ಗಮನ ಮಾಡಿದರು. ಈ ಮಜಲಿಸು ಬಿಟ್ಟಿತಲ್ಲಿ ಹಾಸ್ಯರಸ ಪೂರ್ಣವಾದ ಭಾಷಣೇ ಆಯಿತೆಂದು ಹೇಳುವಂತಾಯಿತು.

ಸರಕಾರದವರು ಮವಾಳರ ಮೇಲೆ ಬಹಳವಾಗಿ ಸಂಬಿದ್ದರು; ಆದರಿವೆ ಏಷ್ಟು ಹುಟ್ಟಿಗೆ ಬಾರೀ ಕಾತ್ರಯುವುಂಟೆಂಬದು ವಿದಿತವಾಯಿತು. ಕಮೀಟಿಗೆ ಬರದಂಥ ಮತ್ತು ಇತ್ತ ರಾಷ್ಟ್ರೀಯ ಅತ್ತ ಆಳರಸರ ವಿಶ್ವಾಸವೆಂಬೆರಡೂ ದಂಡೆಯ ಮೇಲೆ ಕಾಯ್ದುಕೊಳ್ಳುವಂಥವರು ರಾವುಂಡ ಟೇಬಲದ ಬಗ್ಗೆ ನಿರಾಶೆಯ ಉದ್ಗಾರಗಳನ್ನೇ ತೆಗೆದಿದ್ದಾರೆ. ಲಾರ್ಡ ಆಯರ್ವಿನ್‌ಸಾಹೇಬರು ಮೃದುವೆ ಧೂರ ಭಾಷಣ ಮಾಡಿದ್ದಾರಲ್ಲದೆ, ಭಾವೀ ಸ್ವರಾಜ್ಯದ ಆಶೆಯು ಮೃಗಜಲದಂತಿರುತ್ತದೆಂದು ಅಂದಿರುತ್ತಾರೆ. ಈಗಿನ ರಾಜಕೀಯ ಬಿಕ್ಕಟ್ಟಿನ ಸ್ಥಿತಿಯು ರಾವುಂಡ ಟೇಬಲಕ್ಕೆ ಎಷ್ಟೂ ಅನುಕೂಲವಿಲ್ಲ; ಮಹಾತ್ಮರ ಕೂಡ ಒಡಂಬಡಿಕೆ ಮಾಡಿಕೊಳ್ಳಿರಿ. ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿರಿ. ಅಂದರೇ ನಿಮ್ಮ ರಾವುಂಡ ಟೇಬಲ ನಡೆಯುವದು. ನಾಲ್ಕು ಜನ ಸಂಸ್ಥಾನಿಕರೂ, ಜಮೀನದಾರರೂ ಬಳಿಗಾರರನ್ನೆ ಮಾನ ಮಾಡಿಕೊಳ್ಳುವ ಮವಾಳರೂ ಬ್ರಾಹ್ಮಣೇತರರೂ ರಾವುಂಡ ಟೇಬಲಕ್ಕೆ ಬಂದರೆ- ಹಿಂದುಸ್ಥಾನದಲ್ಲಿದ್ದ ಉರಿಯು ಶಾಂತವಾಗಲಾರದೆಂದೇ ಹೇಳುತ್ತಿದ್ದಾರೆ. ಲಂಡನದಲ್ಲಿ ಈಗಿನ ಮಂತ್ರಿಗಳ ಮುಖಪತ್ರವಾದ ಡೇಲಿ ಹೆರಾಲ್ಡವು- !! ಈಗಿನ ಚಳವಳಿಯು ಹೀಗೇ ಮುಂದೆ ನಡೆದರೆ- ಹಿಂದುಸ್ಥಾನದ ಪ್ರಗತಿಯಾಗದೆ, ದಿನ ದಿನಕ್ಕೆ ಬಿಕ್ಕಟ್ಟಿನ ಪರಿಸ್ಥಿತಿಯು ಹುಟ್ಟಿ, ಸರಕಾರಕ್ಕೆ ದಬ್ಬಾಳಿಕೆಯ ಹೊರ್ತು ಗತ್ಯಂತರವೇ ಉಳಿವದಿಲ್ಲ. ಆದ್ದರಿಂದ ಸಾವು ಹಿಂದುಸ್ಥಾನಕ್ಕೆ ಸೂಚಿಸುವದೇನಂದರೆ- ಅನಧಿಕಾರಿಯಾದಂಥ ಸಂಸ್ಥಾನಿಕರನ್ನು ಪ್ರತಿನಿಧಿಗಳಾಗಿ ಕಳಿಸದೆ, ತಮ್ಮ ಪಕ್ಷವನ್ನು ಯೋಗ್ಯ ರೀತಿಯಿಂದ ಹೇಳುವಂಥವರನ್ನೇ ಕಳಿಸಬೇಕು. ಇದೇ ಪ್ರಕಾರ ಮಹಾತ್ಮರು ಪತ್ರ್ಯಯಸರಾಯರ ಏನಂತಿಗೆ ಮಾನ ಕೊಟ್ಟು, ಬಂಧಮುಕ್ತರಾಗಿ, ಬ್ರಿಟಿಶ ಸಾಮ್ರಾಜ್ಯದ ಪ್ರತಿನಿಧಿಗಳ ಕೂಡ ವಿಚಾರವಿನಿಮಯ ಮಾಡಲು ಸಿದ್ಧರಾಗುವರೆಂದು ಆಶಿಸುತ್ತೇವೆಂದು ಉದ್ಗಾರ ತೆಗೆದಿರುತ್ತದೆ.

ಶ್ರೀ. ಗುಲವಾಡಿ ಶಂಕರರಾಯರ ದಸ್ತು ೧.

ಧಾರವಾಡದ ಡಿಸ್ಟ್ರಿ ಮ್ಯಾಜಿಸ್ಟ್ರೇಟರ ವಾರಂಟಿನಿಂದ ಶ್ರೀ. ಗುಳವಾಡಿ ಶಂಕರರಾಯರನ್ನು ರಬಕವಿಯಲ್ಲಿ ಹಿಡಿದು, ಧಾರವಾಡಕ್ಕೆ ತಂದು, ನಿನ್ನೆ ಇವರ ಸ್ಪೇಶಲ ಮೋಟಾರಿನಿಂದ ಬಾಗಲಕೋಟೆ ಚರಣೆಂದು ... ರೆಂದರು

ಪೋಲೀಸ ಮತ್ತು ದೇವೀ ಸರೋಜಿನಿ ಯವರ ಜಿದ್ದಿನ ಮೇಲೆ ಜಿದ್ದು.

ಸತ್ಯ ದೇವಿಯವರು ಗೆದ್ದರು.

—(೯)—

ದೇವೀ ಸರೋಜಿನಿಯವರು ಗುರುವಾರ ರಾತ್ರಿ ಕತ್ತಲಲ್ಲಿ ಧಾರಾಸಣಕ್ಕೆ ಹೋದರು. ದಾರಿಯಲ್ಲಿಯೇ ಪೋಲಿಸರು ಬಂದು ಇವರ ಹಾಗು ಸ್ವಯಂಸೇವಕರ ಸುತ್ತಲು ಮುತ್ತಿಗೆ ಹಾಕಿದರು. ಅಷ್ಟರಲ್ಲಿ ಪೋಲೀಸಸಾಹೇಬರೂ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ ಅಲ್ಲಿಗೆ ಬಂದು, ದೇವಿಯವರ ಸಂಗಡ ಕುಸು ಹೊತ್ತು ಮಾತಾಡಿ, ಕನ್ನವು ಕಛೇರಿಗೆ ಹೋದರು. ಆದರೆ ಇವರನ್ನು ಹುಲಿಯಲಿದ್ದ ಪೋಲೀಸರು ಮುತ್ತಿಗೆ ತೆಗೆಯಲಿಲ್ಲ. ನೀರಿಗಾಗಿ ಒಬ್ಬಿಬ್ಬರನ್ನು ಹೊರಗೆ ಬಿಟ್ಟರು. ಆದರೆ ಅವರನ್ನು ತಿರಿಗಿ ಗುಂಡಿನಲ್ಲಿ ತಳ್ಳಿಕೊಳ್ಳಲಿಲ್ಲ. ಇದನ್ನು ಕಂಡು ಒಬ್ಬರೂ ನೀರಿಗೂ ಹೊರಗೆ ಹೋಗುವ ಉಸಾಬರಿ ಮಾಡಲಿಲ್ಲ. ಬಿಸಿಲು ಗಾಳಿ ಎಷ್ಟಿದೆ ಮಧ್ಯರಾತ್ರಿಯುತನಕ ಇವರು ಕೂತಲ್ಲೇ ಕೂತರು; ಪೋಲಿಸರೂ ಕೂತರು. ರಾತ್ರಿ ಒಂದು ಹೊಡೆದ ಬಳಿಕ ಪೋಲಿಸರು ಉತ್ತಾಂಡಿಯವರಿಗೆ ಅನ್ನ ನೀರು ತಂದು ಕೊಡಬೇಕೆಂದು ಅಪ್ಪಣೆ ಕೊಟ್ಟರು. ದೇವಿಯವರಿಗೆ ಒಬ್ಬನು ನಿಮಗೆ ತಾಜಮಹಾಲಿನ ಊಟಕ್ಕಿಂತ ಈ ಹಳ್ಳಿಗಾಡಿನ ಊಟ ಹೇಗೆ ರುಚಿಹತ್ತುವದೆಂದನು. ಈ ಅನ್ನವೇ ತಮಗೆ ಹೆಚ್ಚು ರುಚಿಕರವಾದದ್ದೆಂದು ಸ್ವಯಂಸೇವಕನು ಉತ್ತರ ಕೊಟ್ಟನು. ಸತ್ಯಾಗ್ರಹದಲ್ಲಿಯೇ ದೇವಿಯವರು ಹೈದರಾಬಾದಿನಲ್ಲಿರುವ ತಮ್ಮ ಮಗಳಿಗೆ ಪತ್ರ ಬರೆದಿದ್ದು, ಅದರಲ್ಲಿ ಪೋಲಿಸರ ಈ ಕೃತ್ಯವು ಮನರಂಜನೆಯು ಉಂಟಾಗಿರುತ್ತದೆಂದು ಅಂದಿದ್ದಾರೆ.

ಶ್ರೀ. ಕಮಲಾದೇವಿಗೆ ಶಿಕ್ಷೆ.

ಧಾರಾಸಣದ ಹತ್ತಿರ ದೇವಿ ಸರೋಜಿನಿಯವರನ್ನು ಅನ್ನ ನೀರಿಲ್ಲದೆ ಕೊಂಡರೆ ಪಡಿಸುತ್ತಿದ್ದಾಗ, ಮುಂಬಯಿಯಲ್ಲಿ ಪೋಲೀಸರು ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯರವರನ್ನು ಹಿಡಿದು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಇವರಿಗೆ ಆರು ತಿಂಗಳು ಸಾದಾ ಕೈದು ಮತ್ತು ೧೫೦ ರೂಪಾಯಿ ದಂಡದ ಶಿಕ್ಷೆ ವಿಧಿಸಿದರು.

ಸೊಲ್ಲಾಪೂರದ ಭಯಾನಕ ಸ್ಥಿತಿಯು.

ದಂಗೆಗಾರರಿಗೆ ಆಶ್ರಯ ಕೊಟ್ಟರೆ ಐದು ವರ್ಷದ ಶಿಕ್ಷೆ.

—(೨)—

ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನು ಹಿಡಿದರು.

ಲಷ್ಕರೀ ಕಾಯದೆಯನ್ನು ಅಮಲಿನಲ್ಲಿ ತಂದಂದಿನಿಂದ ಜನರು ಊರು ಬಿಡುತ್ತಿದ್ದಾರೆ. ಕಾಲ್ಮಾರ್ಗದಿಂದ ಹೋಗುವದಂತಿರಲಿ, ರೇಲ್ವೆಯಲ್ಲಿಯೂ ಕುರಿಗಳಂತೆ ಜನರು ತುಂಬಿ ಊರಿಗೆ ಶರಣು ಹೊಡೆಯುತ್ತಿದ್ದಾರೆ. ಗಿರಣಿ ಮತ್ತು ಪೇಟೆಯು ಇನ್ನೂ ಬಂದಾಗಿರುವದರಿಂದ, ಮತ್ತು ನಾಲ್ವರಿಗಿಂತ ಹೆಚ್ಚು ಜನರು ಕೂಡಬಾರದೆಂದು ಸಕ್ತಿಯ ಹುಕುಮು ಇರುವದರಿಂದ, ಊರು ಬಣಗುಟ್ಟುತ್ತದೆ.

ಲಷ್ಕರೀ ಹುಕುಮನ್ವಯ ೧೮ ಜನರನ್ನು ಹಿಡಿದು ಅವರಿಗೆ ಶಿಕ್ಷೆ ಮಾಡಿದ್ದಾರೆ. ಶಿಕ್ಷೆಯ ಸುದ್ದಿಯನ್ನು ಹೊರಗೆ ಹಾಕಿಲ್ಲ. ಕೋರ್ಟಿನಲ್ಲಿ ವರ್ತಮಾನಪತ್ರಗಳ ಸುದ್ದಿಗಾರರಿಗೆ ಬರಗೊಡಲಿಲ್ಲ.

ರಾಷ್ಟ್ರೀಯ ನಿಶಾನೆಯನ್ನು ಹಿಡಿದವರಿಗೆ ಹತ್ತು ವರ್ಷಗಳ ತನಕ ಶಿಕ್ಷೆ ಎಂದು ಸುಲ್ತಾನಿ ಜಾಹೀರನಾಮೆ ಹಚ್ಚಿದಂತೆ ದಂಗೆಗಾರರಿಗೆ ಆಶ್ರಯ ಕೊಟ್ಟರೆ- ಅನ್ನ ನೀರು ಕೊಟ್ಟರೆ- ಐದು ವರ್ಷಗಳ ತನಕ ಶಿಕ್ಷೆಯಾಗುವದೆಂದು ಮತ್ತೊಂದು ಜಾಹೀರನಾಮೆ ಹಚ್ಚಿದ್ದಾರೆ.

ಮ್ಯುನಿಸಿಪಾಲಿಟಿಯ ಹಳೇ ಅಧ್ಯಕ್ಷರಾಗಿದ್ದ ರಾ: ಬ. ಮುಳೆಯವರು ಮದುವೆಗಾಗಿ ಪುಣೆಗೆ ಹೋಗಿದ್ದಾರೆ. ಸರಕಾರದವರು ಇವರನ್ನು ದಂಗೆ ಶಾಂತ ಮಾಡಲಿಕ್ಕೆ ಆನರರಿ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಿದ್ದಾರೆ. ದಂಡಿನವರಿಗೆ ವಾಸಸ್ಥಾನವೆಂದು ಇವರ ಬಂಗ್ಲೆಯನ್ನು ಸೋಲ್ಜರರು ಆಕ್ರಮಿಸಿದ್ದಾರೆ.

ಮ್ಯುನಿಸಿಪಾಲಿಟಿಯ ಹೊಸ ಅಧ್ಯಕ್ಷರಾದ ಶ್ರೀ. ಮಾಣಿಕಚಂದ ಶಹಾ ಇವರನ್ನೂ ನಾಲ್ವತ್ತು ಜನರನ್ನೂ ಹಿಡಿದಿದ್ದಾರೆ. ಶಹಾನವರನ್ನು ಹಿಡಿದುದಕ್ಕಾಗಿ ವ್ಯಾಪಾರಸ್ಥರು ಕ್ಷೋಭೆಗೊಂಡಿದ್ದಾರೆ. ಶ್ರೀ. ಜಾಧವರಿಗೆ ಎರಡು ವರ್ಷದ ಸಶ್ರಮ ಶಿಕ್ಷೆಯಾಯಿತು.

ವೈಮನಸಿಂಗದಲ್ಲಿ ಗೋಳಿಬಾರು.

—:-:*:-:—

ವೈಮನಸಿಂಗದಲ್ಲಿ ಸರಕಾರೀ ಡಿಪೋದಿಂದ ಸಶಸ್ತ್ರ ಪೋಲಿಸರ ಕಾವಲಿನಲ್ಲಿ ಗುತ್ತೆದಾರನು ಅಫೂ ಮತ್ತು ಗಾಂಜಾ ತರುತ್ತಿದ್ದಾಗ ದಾರಿಯಲ್ಲಿ ಊರ ಜನರಿಗೂ ಪೋಲಿಸರಿಗೂ ಜಗಳ ಬಂದು ಪೋಲಿಸರು ಗುಂಡು ಹಾರಿಸಿದರು. ಗುಂಡಿನಿಂದ ೪೨ ಜನರು ಘಾಯವಾಗಿದ್ದು, ಮೂವರು ಮರಣೋನ್ಮುಖರಾಗಿದ್ದಾರೆ.

ಕೈದಿಗಳನ್ನು ಒಯ್ಯುವದಿಲ್ಲೆಂದು ಮೋಟಾರಿನವರ ಸಂಪು.

—(೦)—

ಮಹಾರಾಷ್ಟ್ರ ಸತ್ಯಾಗ್ರಹದ ಮುಖ್ಯ ಸ್ಥಳವಾದ ಶಿರೋಡದಲ್ಲಿ ದಿನಾಲು ನೂರಾರು ಜನರನ್ನು ಹಿಡಿಯುತ್ತಿದ್ದಾರೆ. ಇವರನ್ನು ಕರಕೊಂಡು ಹೋಗಲು- ಮೋಟಾರಿನವರನ್ನು ಕರೆದರೆ- ಅವರು ಬರುವದಿಲ್ಲೆಂದು ಸ್ಪಷ್ಟವಾಗಿ ಹೇಳುತ್ತಾರೆ. ಆದ್ದರಿಂದ ಮೋಟಾರ ಸ್ಟ್ಯಾಂಡಿನಿಂದ ಕೈದಿಗಳನ್ನು ಪುನಃ ಶಿರೋಡಕ್ಕೆ ಕರತಂದರು.

ಬಿಪಿನಚಂದ್ರಪಾಲರ ಮತ-

ಒಂದಾವರ್ತಿ ಟಿಳಕ ಮತ್ತು ಲಜಪತರಾಯರ ಕೂಡ ಮೂರನೆಯ ಮೂರ್ತಿಯಾಗಿ ಈಗ ತ್ರಿಶಂಕುರಾಯನಂತಾಗಿರುವ ಕಲಕತ್ತೆಯ ಬಿಪಿನಚಂದ್ರಪಾಲರು ಅನ್ನುವದೇನಂದರೆ-

ಪ್ರಸ್ತುತದ ಅಶಾಂತತೆ ಮತ್ತು ಅಸ್ವಸ್ಥ ಸ್ಥಿತಿಯಲ್ಲಿ ರಾಮಬಾಣ ಉಪಾಯವೆಂದು ರಾವುಂಡ ಟೇಬಲ ಕೂಡಿಸುತ್ತಿದ್ದರೆ- ಅದರ ಮೇಲೆ ನನ್ನದೆಷ್ಟು ವಿಶ್ವಾಸವಿರುವದಿಲ್ಲ. ಪರಿಷತ್ತಿನ ಕಾರ್ಯವನ್ನು ಬೇಗನೆ ನೇಮಿಸಬೇಕೆನ್ನುವಂಥವರ ಮೇಲಂತೂ ನನ್ನ ವಿಶ್ವಾಸವೇ ಇರುವದಿಲ್ಲ. ವ್ಹಾಯಿಸರಾಯರು ಮಹಾತ್ಮರಿಗೆ ಆಮಂತ್ರಣ ಕಳಿಸಬೇಕೆಂದು ನನ್ನ ಮತವು.

ಹಿಂದುಸ್ಥಾನವನ್ನು ಹೇಗೆ ಉಳಿಸಬೇಕು-

ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯದ ಕೈಬಿಟ್ಟು ಹೋಗದಂತೆ ಅದನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ವಿಚಾರ ಕೇಳಲು ಲಂಡನದಲ್ಲಿ ಒಂದು ಮೇಜವಾನಿಯಾಯಿತು. ನಾಮದಾರ ಶ್ರೀನಿವಾಸ ಶಾಸ್ತ್ರಿಯವರನ್ನು ಊಟಕ್ಕೆ ಕರೆದು, ಅವರ ಕೂಡ ಈ ವಿಷಯವಾಗಿ ಸಂಭಾಷಣೆ ಮಾಡಿದರು. ಇಂಗ್ಲಿಷ ಜನರು ಹಿಂದುಸ್ಥಾನವನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ವಿಷಯವಾಗಿ ಒಂದು ಭಾಷಣ ಮಾಡಿದರು. ಹಿಂದುಸ್ಥಾನದ ಜನರು ಹೊಟ್ಟೆ

ಇಂಗ್ಲಿಷರ ಹಿಂದುಸ್ಥಾನವೆಂಬುದು ಹಿಂದಿನ ಮಾತಾಯಿತು.

—(೦)—

ಮುಂಬಯಿಯ ಮ್ಯಾಜಿಸ್ಟ್ರೇಟರು ಕಾಂಗ್ರೆಸ ಪೈನ್ಸಿ ಪತ್ರಿಕೆಗಳನ್ನು ಮುದ್ರಿಸಬಾರದೆಂದು ಹುಕುಮು ಮಾಡಿದ್ದಾರೆ. ಕಾಂಗ್ರೆಸ ಕಮಿಟಿಯವರು ಈ ಹುಕುಮನ್ನು ಅಮಾನ್ಯ ಮಾಡಿ, ಇವನ್ನು ಊರ ತುಂಬ ಪ್ರಸಿದ್ಧ ಮಾಡುತ್ತಿದ್ದಾರೆ. ಇವರು ಒಂದು ಹಸ್ತಪತ್ರಿಕೆಯನ್ನು ತೆಗೆದು ನಾವು ಈ ಸಂಕರ ಹಿಂದುಸ್ಥಾನವು ಇಂಗ್ಲಿಷರದೆಂಬುದನ್ನು ಒಪ್ಪುವದಿಲ್ಲೆಂದು ಅದರಲ್ಲಿ ಸ್ಪಷ್ಟವಾಗಿ ಬರೆದಿರುತ್ತಾರೆ.

— —

ಪೋಲೀಸ ಆಫೀಸರನ ಮೇಲೆ ಬಾಂಬು-

ಕಲಕತ್ತೆಯಲ್ಲಿ ಪೋಲೀಸ ಆಫೀಸರನಾದ ಧೀರೇಂದ್ರಮೋಹನದಾಸ ಗುಪ್ತರವರು ಹೆಂಡರು ಮಕ್ಕಳೊಂದಿಗೆ ಒಂದು ಕೋಣೆಯಲ್ಲಿ ಮಲಗಿದಾಗ ಕಿಡಕಿಯಿಂದ ಇವರ ಮೇಲೆ ಬಾಂಬು ಚಲ್ಲಿದರು. ಬಾಂಬು ಕಬ್ಬಿಣದ ಗಜಕ್ಕೆ ಒಡೆದು, ಸಾರಿಕು ದೈವಯೋಗದಿಂದಲೇ ಇವರೆಲ್ಲರೂ ಬದುಕಿದರು.

— —

ಮೊರಬದಲ್ಲಿ ಹರತಾಳ —

ಜಗ್ಗತಯಾಚೆಯವರನ್ನು ಹಿಡಿದ ಒಗ್ಗಿ ನರಗುಂದ ತಾಲೂಕ ಮೊರಬ ಗ್ರಾಮದವರು ಹರತಾಳ ಮಾಡಿದರು. ಅಂಗಡಿಕಾರರು ಅಂಗಡಿಗಳನ್ನು ಬಂದು ಮಾಡುವದಂತೂ ಸಹಜವು. ಹರತಾಳವೆಂದರೆ ಅಂಗಡಿ ಬಂದು ಮಾಡುವರು; ಉದ್ದಿಮೆ ನಿಲ್ಲಿಸುವದು. ಆದರೆ ಅಂದು ಕೂಲಿಕಾರರು ಹೊಲಗೆಲಸಕ್ಕೆ ಸಹ ಹೋಗದೆ, ಹರತಾಳ ಮಾಡಿ, ಸಭೆ ಮತ್ತು ಮೆರವಣಿಗೆಯಲ್ಲಿ ಸೇರಿದ್ದರು.

— —

ವಿಶ್ರಮ ಫಡಕ್ಕೆ ದೊರೆತ ಸಹಾಯ

—(೦)—

	ರೂ--ಆ--ಪೈ
(೧) ಮಲ್ಲೂರ	೬-೧೫-೩
(೨) ಮಾಸಣಗಿ	೧೨-೮-೦
(೩) ಕಾವಡಿ	೧-೬-೯
(೪) ಪಿಡೇನೂರು	೩-೫-೬
(೫) ಅಂಗರಗಟ್ಟಿ	೨-೬-೬
(೬) ಕದರಮಂಡಲಗಿ	೧-೦-೦
(೭) ಮೋಟೇಬೆನ್ನೂರು	೨-೧೩-೦
(೮) ಹೊಮ್ಮರಡಿ	೦-೮-೦
(೯) ಕುರುಬಗೊಂಡ	೩-೧೦-೦
(೧೦) ಕಾಗಿನೆಲ್ಲಿ	೬-೦-೪
(೧೧) ಚಿಕ್ಕಬಾಸೂರು	೮-೫-೦
(೧೨) ಕೆಲ್ಲೂರಕೊಪ್ಪ	೧-೦-೦
(೧೩) ಸೂಡಂಬಿ	೧-೦-೬
(೧೪) ಅತ್ತೀಕಟ್ಟಿ	೨-೧೩-೩
(೧೫) ದುಮ್ಮೀಹಾಳ	೦-೧೧-೦
(೧೬) ತಿಳವಳ್ಳಿ	೦-೮-೩
(೧೭) ಶೇಷಗಿರಿ	೭-೪-೯
ಉಗಿಬಂಡಿಯಲ್ಲಿಯ ಫಂಡು	೩-೮-೦

(ಧಾರವಾಡದಿಂದ ಬ್ಯಾಡಗಿ ತನಕ)

—

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ಆ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

☞ ನಿಮ್ಮ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರಿಕೆ ಜಾಹೀರಾತಿನ ಮೂಲಕ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ನೋಟೀಸಿನ ದರಗಳು

—:(೦):—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಉತಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

—

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯವ್ಹರ ವಿದ್ಯೆಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫ ಕೋರ್ಟ ನಹತ್ತರ, ಧಾರವಾಡ

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ.

ಸಂಪಾದಕರು:- ಕೃಷ್ಣಾಚಾರ್ಯ ಬಾಲಾಚಾರ್ಯ ಜೋಶೀ.

ವರ್ಷ ೧೧ ಧಾರವಾಡ-ಸೋಮವಾರ ತಾರೀಖು ೧೯ ನೇ ಮೇ ೧೯೩೦ (ಸಂಖ್ಯೆ ೧೧೭

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಭಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯು ಯೋಜನೆ ಒಂದ ಫಲವು	ಖಚಿತವಾದ ಬೋನಸಗಳ ಯೋಜನೆಗಳು ಸರಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂಡಿಗೆಯು ಎಂಟು ಲಕ್ಷದ ಮೇಲುಂಟು. ಜಳಕಿಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ್ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೇಳಿಗಿಸ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ. ವಿಜಯ, ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ವದ್ಯ ೭

ಈ ವಿಜಯಂ ಶ್ರೀಶಪ್ರಿಯ
ಶ್ರೀ ವಸುಮತಿಯು ನಲಿಸುತೆ ಸ್ವಹಿತಶಕ್ತಿಗಳಿಂ ।
ದೀ "ವಿಜಯಂ" ಶ್ರೀಶಕರುಣಾ ।
ಸಾವಿಹಿತಂಗೆ ವಿವಾಸ್ವರಿಯಿತು ಸಾರ್ಥ ॥

ದೇವಿ ಸರೋಜನಿಯವರ ಹೊಗ ಳುವಂಥ ಧೈರ್ಯಸ್ಥೈರ್ಯ.

ದೇವಿ ಸರೋಜನಿಯವರು ಮಹಾತ್ಮರಂತೆ ಜಗತ್ಪ್ರಸಿದ್ಧರಾಗಿದ್ದಾರೆ. ಇವರು ಹಿಂದೂ, ಮುಸಲಮಾನ, ಕ್ರಿಶ್ಚನ್, ಬುದ್ಧ ಮೊದಲಾದ ಎಲ್ಲ ಜನಾಂಗಗಳಲ್ಲಿಯೂ, ಎಲ್ಲ ಖಂಡಗಳಲ್ಲಿಯೂ ಮಾನ್ಯರಾಗಿದ್ದಾರೆ. ಕೇವಲ ಒಬ್ಬ ಹೆಣ್ಣುಮಗಳು ಸತ್ಯಾಗ್ರಹ ಚಳವಳಿಯ ಸೂತ್ರ ನಡೆಸಲು ಮಹಾತ್ಮರು ಇವರಿಗೆ ತಮ್ಮ ಶಿಬಿರದ ಕಾಯದೆಭಂಗದ ಅಧಿಕಾರ ಕೊಡಲಿಲ್ಲ. ಜಗತ್ಪ್ರಸಿದ್ಧರಾದಂಥವರು ಈ ಚಳವಳಿಯಲ್ಲಿ ಸೇರಿದ್ದು, ಇವರ ಕೃತ್ಯವು ನ್ಯಾಯವಾದದ್ದೆಂದು ತೋರಿಸುವದಕ್ಕಾಗಿ ಇವರನ್ನು ಸೇರಿಸಿಕೊಂಡಿದ್ದಾರೆ. ದೇವಿಯವರೂ ಮಹಾತ್ಮರಂತೆ ಹಿಂದುಸ್ಥಾನವು ಸಂಪೂರ್ಣ ಸ್ವಾತಂತ್ರ್ಯ ಹೊಂದಬೇಕೆಂಬ ಮತದವರೇ ಆಗಿರುವದರಿಂದ, ಸ್ವಾತಂತ್ರ್ಯವನ್ನಳಿಯಲು ಇವರು ಅನೇಕ ತಾಪಗಳನ್ನು ಸಹಿಸಲು ಸಿದ್ಧರಾಗಿದ್ದಾರೆ.

ದೇವಿಯವರು ೫೦ ಜನ ವ್ಹಾಲಂಟಿಯರರನ್ನು ಕರೆಕೊಂಡು ಧಾರಾಸಾನಕ್ಕೆ ಹೋಗುವಾಗ ಉತ್ಸಾಹಿ ಜನರು ಇವರನ್ನು ಬಹು ಸಮಾರಂಭದಿಂದ ಕಳಿಸಿದರು. ರಾಷ್ಟ್ರಗೀತ ರಾಷ್ಟ್ರಧ್ವಜವಂದನೆಯಾಗಿ ಮುಂದೆ ವಂದನೆಗಳಾದವು. ಗುಜರಾಥದ ಪೋಲಿಸರು ತಳಗಿಟ್ಟಿದ್ದಾರೆ. ದೇವಿಯವರಿಗಾಗಲಿ, ಸ್ವಯಂಸೇವಕರಿಗಾಗಲಿ ಹೊಡತ ಬಡತ ಕೊಡಲು ಪ್ರಾಯವಾದರೆ ಅವರ ಪ್ರಥಮ ಚಿಕಿತ್ಸೆಗಾಗಿ ಅಹಮದಾಬಾದಿನಿಂದ ಡಾಕ್ಟರ, ಕಾಂಪೌಂಡರ ಮತ್ತು ನರ್ಸರನ್ನು ಕಳಿಸಿದ್ದರು. ಪ್ರಾಯ ಪಾಡುವಾಗಲಿಲ್ಲ. ಆದರೂ ಹೆಚ್ಚಿನ ಹಿಂಸೆಯಾಯಿತು. ಪೋಲಿಸರು ಅಥವಾ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹಿಂಸೆಗೆ ಪ್ರತ್ಯಕ್ಷ ಕಾರಣರಾದರೂ ಇಲಿಯ ಸ್ಥಿತಿಯ ಗಣಪತಿಗೆನ್ನುವಂತೆ, ಇದು ಆಪಕೀರ್ತಿಯು, ಇದರ ಕತೆ ಢಾಂಬರಿಸಾಂಥ ಕಲಂಕವು ಬ್ರಿಟಿಶ ಸಾಮ್ರಾಜ್ಯಕ್ಕೇ ಬಂತೆಂದು ಆರ್ತೀಸನ್ನದ ಕವರಿಕೆ ಇಲ್ಲದೇ ಹೇಳಬಹುದು.

ಪೋಲಿಸರು ಮಧ್ಯರಾತ್ರಿಯ ಶಾಂತವೇಳೆಯಲ್ಲಿ ಮಹಾತ್ಮರನ್ನು ಹಿಡಿದರು. ಅವರ ತರುವಾಯ ಅಬ್ಬಾಸ ತಯಬಜಿಯವರನ್ನು ಹಿಡಿದವರೇ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ, ಆರು ತಿಂಗಳ ಶಿಕ್ಷೆ ವಿಧಿಸಿ, ಕಾರಾಗೃಹಕ್ಕೆ ಕಳಿಸಿದರು. ಇದೇ ವೇಳೆಗೆ ದೇವಿ ಮತ್ತು ಅವರ ವ್ಹಾಲಂಟಿಯರರಿಗೆ ಶಿಕ್ಷೆ ವಿಧಿಸಿದ್ದರೆ ಯಾರೂ ಆಕ್ಷೇಪ ತೆಗೆಯುತ್ತಿದ್ದಿಲ್ಲ. ದೋಷ ಕೊಡುತ್ತಿದ್ದಿಲ್ಲ. ಆದರೆ ಅವರನ್ನು ಕಲ್ಲೆದೆಯಿಂದ ನಡಿಸಿಕೊಂಡ ರೀತಿಯೇ ಬೇರೆಯಾಯಿತು. ಧಾರಾಸಾನದಿಂದ ಬಂದ ತಾರಿನ ವರ್ತಮಾನವು ಏನು ಹೇಳುತ್ತದೆಂಬದನ್ನು ನೋಡಿರಿ.

"ದೇವಿ ಸರೋಜಿನಿಯವರು ೫೦ ಜನ ಸ್ವಯಂಸೇವಕರೊಂದಿಗೆ ಇಡೀ ದಿವಸ ಪೋಲಿಸರು ಆತ್ತ ಗಟ್ಟಿದಲ್ಲಿಯೇ ಇದ್ದರು. ದೇವಿ ಮತ್ತು ಸ್ವಯಂಸೇವಕರಿಗೆ ಇಡೀ ದಿವಸ ಅನ್ನ ಇಲ್ಲವೆ ನೀರು ಸಹ ಸಿಗಲಿಲ್ಲ. ಮುತ್ತಿಗೆಯು ಹೊಂಗಿದ್ದ ಸ್ವಯಂಸೇವಕರೂ, ಪ್ರೇಕ್ಷಕರೂ ಇವರಿಗೆ ಅನ್ನ ನೀರು ತಂದು ಕೊಡಬೇಕೆಂದರು. ಆದರೆ ಪೋಲಿಸರು ಬಂದು ಅಡ್ಡಿದರು." ಇದು ನಿರ್ದಯತನವೆನಿಸುದದಿಲ್ಲವೇ? ಆರೋಪಿಯು ಸರಕಾರದ ವಶವಾದ ಕೂಡಲೆ, ಆತನಿಗೆ ಅವಶ್ಯಕವ ಕೊಡುವ ಹಾಗು ಮಲಮೂತ್ರ ವಿಸರ್ಜನೆಯ ವ್ಯವಸ್ಥೆಯ ಜವಾಬದಾರಿಯು ಕಾಯದೆಯಿಂದಲೇ ಸರಕಾರದ ಮೇಲುಂಟು. ಕಲೆಕ್ಟರ ಮತ್ತು ಪೋಲೀಸಸುಪರಿಂಟೆಂಡೆಂಟರು ಈ ಜವಾಬದಾರಿಯನ್ನು ಯೋಗ್ಯ ಮತ್ತು ನ್ಯಾಯದೃಷ್ಟಿಯಿಂದ ಹೇಗೆ ನಿರ್ವಹಿಸದೆಂಬದನ್ನು ಕೇಳುವ ಹೆಚ್ಚಿನ ಮುದ್ದೇದಾರರು ಹಿಂದುಸ್ಥಾನದಲ್ಲಿರುವರೇ ಎಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಅನ್ನ ನೀರು ಕೊಡದೆ, ಬಿಸಿಲು, ಗಾಳಿ, ಇರುಳು ಎಂಬ ವಿಚಾರ ಮಾಡದೆ ಪರಿಸರಿಯಿಲ್ಲದ ನಿರ್ದಯವೆನಿಸುವಷ್ಟು ತ್ರಾಸಕೊಟ್ಟರೂ ಸತ್ಯಾಗ್ರಹಿಗಳು ಎಷ್ಟೂ ಎದೆಗುಂದಲಿಲ್ಲ. ಹುಟ್ಟಿದವರಿಗೆ ಮರಣವುಂಟು. ದೇಶಕಾರ್ಯದಲ್ಲಿ ಅನಾಯಾಸವಾಗಿ ಮರಣ ಬಂದರೆ ದಕ್ಕಿತೆಂತಲೂ, ಅದರಿಂದ ಸ್ವರ್ಗ ಪ್ರಾಪ್ತವಾಗುವದೆಂದೂ ದೃಢವಾದ ತಿಳುವಳಿಕೆಯಿಂದ ದೇವಿಯವರು ಆ ದಿವಸವೆಲ್ಲ ಅಲ್ಲೇ ಆಗಸಿ ಮುಂದಿನ ಬೆಳಗಿನಲ್ಲಿನಂತೆ ಕೂತರು. ನೀವು ನಮ್ಮ ಕಣಬಿಟ್ಟು ಹೋಗಿರಿ. ತಿರುಗಿ ಮಾತ್ರ ಬರಬೇಡಿರಿ. ಅಂದರೆ ನಿಮ್ಮನ್ನು ಹಿಡಿಯುವದಿಲ್ಲೆಂದು ಪೋಲಿಸರು ಇವರ ವ್ರತಭಂಗಮಾಡುವಂಥ ಶಕುನಿ ನೀತಿಯನ್ನು ಉಪದೇಶಿಸಿದರು. ಈ ಮಾಯೋಪಾಯಾಲಕ್ಕಲ್ಲಿ ಇವರು ಬೀಳಲೇ ಇಲ್ಲ. ಪೋಲೀಸರ ಕಲ್ಪನೆಗೆ ಹರಿಯದಂಥ ಖಂಡತಂಡಿನ ಉತ್ತರ ಕೊಟ್ಟರು. ಅವರು ಅಂದದ್ದೇನಂದರೆ-

"ನಾವು ಇಲ್ಲಿಂದ ಕದಲುವದಿಲ್ಲ. ನಮ್ಮ ಹೆಣ ಹಯ್ಯಬೇಕು. ಹಿಡಕೊಂಡು ಹೋಗಬೇಕು, ಇಲ್ಲವೆ ಪ್ರಾಯವಾದಬಳಿಕ ಹೋಗಬೇಕು. ಅಲ್ಲಿಯತನಕ ಇಲ್ಲೇ ನೆಲ ಹಿಡಿದು ಕೂಡುವೆವು."

ಈ ಉತ್ತರದಿಂದ ಪೋಲಿಸರು ಚಕಿತರಾದರು. ಆದರೆ ಇವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲಿಲ್ಲ. ಆ ಪ್ರಕಾರ ಗವ್ಹರ್ನಮೆಂಟಿನ ಬೇಟೆ ಹುಕುಮು ಇರಲಿಕ್ಕಿಲ್ಲ. ಇಡೀ ದಿವಸ ಪಂಜರದೊಳಗಿನ ಹುಲಿಯಂತೆ ಅವರು ತಿಗ್ಗಿನಲ್ಲಿ ಕೆಲವರು ಕಂಡಾನೆಯಂತೆ ಅನ್ನನೀರಿಲ್ಲದೆ ಬಳಲಿಸಿ, ರಾತ್ರಿಯಲ್ಲಿ ತಾವು ಅನ್ನನೀರಿನ ವ್ಯವಸ್ಥೆ ಮಾಡುವದರ ಬದಲು ಉತ್ತಂಡಿಯವರಿಂದ ಮಾಡಿಸಿದ್ದು ದರ್ಶನೀಯವೇ ಗರ್ಹಣೀಯವು. ಇದು ಮೊದಲನೆಯ ದಿವಸದ ಕರ್ಮಕಥೆಯಾಯಿತು. ಎರಡನೆಯ ದಿವಸದ್ದು ಮುಂದೆ ತಿಳಿಯಬೇಕಾಗಿದೆ.

ಪೋಲಿಸರ ಪಶ್ಚಾತ್ತಾಪ-

ನಡು ರಾತ್ರಿಯ ತನಕ ಅನ್ನ ನೀರು ಕೊಡದ್ದಕ್ಕೆ ಧಾರಾಸಾನದ ಪೋಲೀಸರು ದೇವಿಸರೋಜನಿಯವರ ಕ್ಷಮೆ ಬೇಡಿಕೊಂಡರೆಂದೂ ಮರುದಿವಸ ತಾವು ಉಪವಾಸದಿಂದ ಬಳಲ್ಲುವಾದೆಂದು ವ್ಹಾಲಂಟಿಯರರು ತಮ್ಮ ಅನ್ನ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡರೆಂದೂ ಪ್ರಸಿದ್ಧವಾಗಿರುತ್ತದೆ.

ಮಂತ್ರಿ ಹರಿಲಾಲ ದೇಸಾಯರಿಗೆ ಬಂದ ಸಿಟ್ಟೆಲ್ಲ

—(೧)—

ಶ್ರೀ. ಹರಿಲಾಲ ದೇಸಾಯಿಯವರು ಮುಂಬಯಿ ಸರಕಾರದ ಮಂತ್ರಿಯಾಗಿದ್ದಾರೆ. ದಬ್ಬಾಳಿಕೆ, ಪೋಲಿಸ ಹಿಂಸೆ, ಮುಂತಾದವುಗಳ ದೆಸೆಯಿಂದ ಅಹಮದಾಬಾದಿನವರು ಇವರಿಗೆ ರಾಜೀನಾಮೆ ಕೊಡದಿದ್ದರೆ ಸಾರ್ವಜನಿಕ ಸಭೆಕೂಡಿಸಿ, ಇವರ ವರ್ತನೆಯನ್ನು ನಿಷೇಧಿಸುವ ಠರಾವು ಪಾಸ ಮಾಡುವರು. ಮತ್ತು ಇವರನ್ನು ಮುಂಬಯಿರಾಗಿ ವರಿಸಿದ ಭಾಗದವರು ನಿಮ್ಮಲ್ಲಿ ನಮ್ಮ ವಿಶ್ವಾಸವಿಲ್ಲ; ರಾಜೀನಾಮೆ ಕೊಡಿರೆಂದು ಆಗ್ರಹದಿಂದ ಹೇಳುವರು. ದೇಸಾಯರು ಅಧಿಕಾರದಲ್ಲಿ 'ಬೇಕಂ' ಪಕ್ಷೆ ಪಡುವರು. ಆದರೆ ಲೋಕಮತದ ವಿರುದ್ಧ ನಡೆಯುವದು ಶಕ್ಯವಿಲ್ಲ.

ಸರಕಾರೀ ಕಾಮದಾರರಿಗೆ ಸಂಬರಾಯಿ ಮಾಡಬೇಕೆಂದು ಕಾಯದೆ ಇಲ್ಲ.

—()—(೧)—()—

ಧಾರವಾಡ ಜಿಲ್ಲೆಯಲ್ಲಿಯೂ ಸರಕಾರೀ ಕಾಮಗಾರರಿಗೆ ಸಂಬರಾಯಿ ಮಾಡಬಾರದೆಂಬ ಚಳವಳಿ ನಡೆದಿದೆ. ಹಿರೇಕೇರೂರ ತಾಲೂಕ ಚಿಕ್ಕ ಬಾಸೂರಿಗೆ ಫಾರೆಸ್ಟಖಾತೆಯ ಫೌಜದಾರರು ಹೋದಾಗ, ಅವರಿಗೆ ಚಹಾಕ್ಕೆ ಹಾಲು ಸಿಗಲಿಲ್ಲ. ಊಟಕ್ಕೆ ಅನ್ಯ ಪದಾರ್ಥಗಳು ಸಿಗಲಿಲ್ಲ. ಹಾನಗಲ್ಲಿನ ಮಾಮಲೇದಾರರು ಕಲೂರಕೊಪ್ಪಕ್ಕೆ ಹೋದರು. ಹಾಲು ಮೊಸರು ಬೆಣ್ಣೆ ಸಿಗಲಿಲ್ಲ. ಮಾಮಲೇದಾರರು ಹ್ವಿಜಿಟ ಪುಸ್ತಕದಲ್ಲಿ ಹೀಗೆ ಬರೆದು ಹೋದರು. ಅನಂತರ ಅಲ್ಲಿಗೆ ಇಲಾಖೆ ಸಾಹೇಬರು ಹೋದರು. ಹ್ವಿಜಿಟ ಪುಸ್ತಕದಲ್ಲಿ ಮಾಮಲೇದಾರರು ಬರೆದದ್ದನ್ನು ನೋಡಿ, "ಅಧಿಕಾರಿಗಳಿಗೆ ಸಂಬರಾಯಿ ಮಾಡಬೇಕೆಂದು ಕಾಯದೆ ಇಲ್ಲೆಂದು ಅದಕ್ಕೆ ಅದೇ ಹ್ವಿಜಿಟ ಪುಸ್ತಕದಲ್ಲಿ ಉತ್ತರ ಬರೆದು ಹೋದರು. ಈಗಿನ ಚಳವಳಿಯಲ್ಲಿ ಕಾಮದಾರರಿಗೆ ಯಾವ ತರದ ಸಹಾಯ ಮಾಡಬಾರದೆಂಬವರಿಗೆ ಇದೊಂದು ಬ್ರಹ್ಮಾಸ್ತ್ರವೇ ದೊರೆದಂತಾಯಿತು.

ಸೊಲ್ಲಾಪೂರದಲ್ಲಿ ಭಯಂಕರ ಶಿಕ್ಷೆ ಮತ್ತು ದಂಡ.

ದಂಡ ಸ್ವರೂಪದಿಂದ ಸರಕಾರದ ಮೇಲೆ ದ್ರವ್ಯದ ಸುರಿವಳಿ.

—(೦)—

ಸ್ಪೆಶಲಕೋರ್ಟದಲ್ಲಿ ಹೇಳಿದಷ್ಟು ದಂಡವು ಸೊಲ್ಲಾಪೂರದಲ್ಲಾದ ಲಷ್ಕರೀ ವಿಚಾರಣೆಯ ಆರೋಪಿಗಳಿಗಾಗಿರುತ್ತದೆ. ದಂಡದಂತೆ ಶಿಕ್ಷೆಯೂ ಭಯಂಕರವಾಗಿರುತ್ತದೆ. ಕೆಲವನ್ನು ಇದರಡಿ ಕೊಟ್ಟಿರುತ್ತೇವೆ.

೧ ಕಾಂಗ್ರೆಸ ಕಮೀಟಿಯ ಅಧ್ಯಕ್ಷ ಶೇಟ ರಾಮಕೃಷ್ಣ ಜಾಜೂ— ಏಳು ವರ್ಷ ೨೦೦೦ ದಂಡ.

೨ ಕಾಂಗ್ರೆಸ ಕಮಿಟಿಯ ಸೇಕ್ರೆಟರಿ. ತುಳಸೀರಾಮ ಜಾಧವ ೧೦ ವರ್ಷ ೨೦೦೦ ದಂಡ.

೩ ವೆಂಕಟೇಶ ಕೃಷ್ಣ ದೇಶಪಾಂಡೆ ೭ ವರ್ಷ ೩೦೦೦ ದಂಡ.

೪ ಜಗನ್ನಾಥನವರಿಗೆ— ಎರಡು ವರ್ಷ ೧೨೦೦ ದಂಡ.

೫ ಪ್ರಮುಖ ಸ್ವಯಂಸೇವಕರಿಗೆ ಒಂದು ವರ್ಷದಿಂದ ಎರಡು ವರ್ಷದ ಕಠಿಣ.

೬ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಶೇಟ ನಾಗಣೆಕರರಿಗೆ ಆರು ತಿಂಗಳು ಶಿಕ್ಷೆ ಹತ್ತು ಸಾವಿರ ದಂಡ

ಇವು ಹಾರಸದ್ವಿಯಿಂದ ಬಂದಂಥವು ಇದು ಹೇಗೇ ಇರಲಿ; ಅಲ್ಲಿಗೆ ದಂಡು ಹೋಗಿ ಬರುವ ಮತ್ತು ಬೇರೆ ವೆಚ್ಚವು ಈ ದಂಡದಿಂದ ಭರ್ತಿಯಾಗುವದೆಂಬುದು ನಿಜ.

ಪೋಲೀಸರ ಎದುರಿಗೇ ನೂರು ಮಣ ಉಪ್ಪಿನ ಎತ್ತುಗಡೆ.

—: .*: :—

ಶಿರೋಡದಲ್ಲಿ ಬೇಕಾದಷ್ಟು ಪೋಲೀಸ ಕಾವಲಿದ್ದು ಸ್ವಯಂಸೇವಕರು ಅವರೆದುರಿನಲ್ಲಿಯೇ ನೂರು ಮಣ ಉಪ್ಪನ್ನು ತಂದು, ಜಿಲ್ಲೆಗೆ ಶೇರಿಸಿ ಮಾರಿದರು, ಇದೇ ಪ್ರಕಾರ ಗೋವೆಯ ಹದ್ದಿನಿಂದ ಕಾರವಾರೀ ಸ್ವಯಂಸೇವಕರು ಉಪ್ಪು ತಂದು ಕಾರವಾರದಲ್ಲಿ ಜಿಲ್ಲೆಗೆ ಶೇರಿಸಂತೆ ಮಾರಿದರು.

ಶಿರಸಿಯಲ್ಲಿ ಪೋಲೀಸರು ಸುಮಾರು ಇನ್ನೂರು ಸ್ವಯಂಸೇವಕರನ್ನು ಹಿಡಿದರು. ಇವರೆಲ್ಲರ ಊಟದ ಮತ್ತು ವಾಸದ ವ್ಯವಸ್ಥೆ ಮಾಡುವದು ಶಕ್ಯವಾಗಿರಲಿಲ್ಲ. ಏಕೆಂದರೆ- ಊರೇ ಇವರಿಗೆ ಬಹಿಷ್ಕಾರ ಹಾಕಿರುತ್ತದೆ. ಆದ್ದರಿಂದ ಫೌಜದಾರಸಾಹೇಬರು ತಲೆಗೆ ಐದಾಣೆಯಂತೆ ಕೊಟ್ಟು, ಇವರನ್ನು ಸತ್ಯಾಗ್ರಹದ ಶಿಬಿರಕ್ಕೇ ಊಟಕ್ಕೆ ಕಳಿಸಿಕೊಟ್ಟರು. ಇವರು ತಾವು ತಮ್ಮವರ ಕೂಡ ಉಂಡದ್ದಲ್ಲದೆ, ಫೌಜದಾರರಿಗೂ ಅನ್ನ ತಂದು ಕೊಟ್ಟರು. ಇಲ್ಲವಾದರೆ- ಸಾಹೇಬರಿಗೆ ಅನ್ನ ಸಿಗುವದೇ ದುರ್ಲಭವಾಗುತ್ತಿತ್ತು.

ರತ್ನಾಗಿರಿ ಜಿಲ್ಲೆಯ ಕಾಮದಾರರಿಗೆ ಬಂದ ಗೋಳು.

—(೧)—

ರತ್ನಾಗಿರಿ ಜಿಲ್ಲೆಯಲ್ಲಿಯ ಕಾಮದಾರರ ಗೋಳನ್ನು ಬಲ್ಲವರೇ ಬಲ್ಲರು. ಸಾವಂತವಾಡಿ ಸಂಸ್ಥಾನದಿಂದ ಕಾಳುಕಡಿ ತರಿಸುತ್ತಿದ್ದರು. ಅಲ್ಲಿಯವರೂ ಇವರಿಗೆ ಬಹಿಷ್ಕಾರ ಹಾಕಿದರು. ಕೊಲ್ಹಾಪೂರಕ್ಕೆ ಮೊರೆ ಇಡಬೇಕಾಯಿತು. ಆಗ ಧಾನ್ಯ ದೊರೆಯಿತು. ಕಟ್ಟಿದ ಬುತ್ತಿ ಎಷ್ಟು ದಿವಸ ಪೂರೈಸುವದು?

ಅಲ್ಲೀಬಂಧುಗಳ ಪ್ರಯಾಣ—

ಸುಕಾರ ಪ್ರಕೃತಿಗಳಾಗಿದ್ದರಿಂದ ಅಲ್ಲೀ ಬಂಧುಗಳು, ಆಫ್ರಿಕೆಗೆ ಧರ್ಮದ ಮೇಲೆ ವ್ಯಾಖ್ಯಾನ ಕೊಡಲಿಕ್ಕೆ ಹೋಗುವರು. ಅಲ್ಲಿ ಮೂರು ತಿಂಗಳಿದ್ದು ಅಕ್ಟೋಬರದಲ್ಲಿ ಕೂಡುವ ರಾವುಂಡ ಟೇಬಲ ಪರಿಷತ್ತಿಗಾಗಿ ಲಂಡನಕ್ಕೆ ಹೋಗುವರು.

ಮೈಸೂರ ದರಬಾರಿನ ಪತಿಯಿಂದ ದಿವಾನರು ಹೋಗುವರೆಂದು ತಿಳಿಯುತ್ತದೆ.

ವಿಜಯಕ್ಕೆ ಬುಧವಾರದ ರಜೆ.

—(೧)—

ಮುಂಬಯಿಯಲ್ಲಿ ಹಿಂದುಸ್ಥಾನದ ಪ್ರಮುಖ ವರ್ತಮಾನಪತ್ರಕಾರರ ಸಭೆಯು ಕೂಡಿತ್ತು. ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಲು ಎಲ್ಲ ವರ್ತಮಾನಪತ್ರಗಳನ್ನು ೨೦-೨೧ನೇ ತಾರೀಖುಗಳ ದಿವಸ ಬಂದಿಡಬೇಕೆಂದು ಗೊತ್ತುವಳಿ ಮಾಡಿದ್ದರಿಂದ ನಿತ್ಯದ ವಿಜಯವು ಮಂಗಳವಾರ ಹೊರಡುವದೇ ಇಲ್ಲ. ಬುಧವಾರ ಬಂದಿಡಬೇಕಾಗುತ್ತದೆ. ಆ ಮೇರೆಗೆ ಬುಧವಾರದ ವಿಜಯವು ಪ್ರಕಟಿಸಲ್ಪಡಲಾರದು.

ಫೌಜದಾರರು ರಾಜೀನಾಮೆ ಕೊಟ್ಟು ಸತ್ಯಾಗ್ರಹಿ ಯಾದರು.

——(೦)——

ಬಂಗಾಲದಲ್ಲಿ ಕೃಷ್ಣನಗರದ ಸಬ್ ಇನ್ಸಪೆಕ್ಟರರಾದ ಶಶಾಂಕಕುಮಾರ ಮುಖರಜಿಯವರು ಮಹಾತ್ಮರನ್ನು ಹಿಡಿದ ಬಗ್ಗೆ ನಿಷೇಧವೆಂದು ರಾಜೀನಾಮೆ ಕೊಟ್ಟು ಸತ್ಯಾಗ್ರಹದಲ್ಲಿ ಸೇರಿದರು. ಇವರ ಕೂಡ ಹೆಡ್ಡ ಕಾನಸ್ಟೇಬಲ ಸರದಾರ ಪ್ರಸಾದನೂ ರಾಜೀನಾಮೆ ಕೊಟ್ಟಿರುತ್ತಾನೆ.

ಜಂಗಿಲ ಹಾಕಿಕೊಂಡು ಗುಪ್ತ ಠರಾವು.

—(೮)—

ಪ್ರಸ್ತುತದ ಕಾಯದೆಭಂಗದಲ್ಲಿ ಮುಂದಿನ ಕೃತಿಕರ್ತವ್ಯಮಾಡಬೇಕೆಂಬ ವಿಚಾರಿಸಲೋಸುಗ ಅಲಹಾಬಾದಿನಲ್ಲಿ ಕಾಂಗ್ರೆಸದ ವರ್ಕಿಂಗ ಕಮಿಟಿ ಕೂಡಿತ್ತು. ಕಮಿಟಿಯ ಕೆಲಸವು ಅತ್ಯಂತ ಗುಪ್ತವಾಗಿ ನಡೆಯಿತು. ಠರಾವುಗಳನ್ನು ಬರೆದು ಓದುವಾಗ, ಹೊರಗೆ ಯಾರಾದರೂ ಕೂತು ಕೇಳುವದೇ ಹೇಗೆಂದು ನೋಡಿದರು. ಗಿಡಗಳಲ್ಲಿ ಸಹ ತಪಾಸು ಮಾಡಿದರು. ಹೀಗೆ ಸದ್ಯದಲ್ಲಿ ಠರಾವುಗಳು ಬಹಳ ಗುಪ್ತವಾಗಿರುತ್ತವೆ.

ದಾರಿಯಲ್ಲಿಯೇ ದಸ್ತಗಿರಿ—

ಅಲಹಾಬಾದಿನಲ್ಲಿ ಮೇಲಿನ ಠರಾವುಗಳು ಪಾಸಾದನಂತರ ಲಾಹೋರಿನ ಪ್ರತಿನಿಧಿಗಳು ತಿರುಗಿ ಹೋಗುತ್ತಿದ್ದಾಗ ದಾರಿಯಲ್ಲಿಯೇ ಶಿಬಿರ ಪ್ರಮುಖರಾದ ಸಂಪೂರ್ಣಸಿಂಗರನ್ನು ಹಿಡಿದಿದ್ದಾರೆ.

ಲಾಹೋರಿನಲ್ಲಿ ದಸ್ತಗಿರಿ.

ಪರದೇಶಿ ಅರಿವೆಗಳ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿದ್ದಾಗ ಪೋಲೀಸರು, ಮೌಲಾನಾ ಅಬ್ದುಲಖಾದರ ಕಸೂರಿ, ಪಂಡಿತ ಸಂತಾನಮ್, ಪಂಡಿತ ರಾಮಕೃಷ್ಣದಾಸ, ಶೇಖ ಮಹಮದ ಹಿಮಾಯತ ಇವರನ್ನು ಹಿಡಿದಿದ್ದಾರೆ.

R· N. B 1443

ಸಾಪ್ತಾಹಿಕ | ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಮಂಗಳವಾರ ತಾರೀಖು ೨೦ ನೇ ಮೇ ೧೯೩೦ (ಸಂಚಿಕೆ ೧೨

ಸೋಲ್ಲಾಪೂರದಲ್ಲಿ ಲಷ್ಕರೀ ಕಾಯದೆ.

ಮ್ಯುನಿಸಿಪಾಲಿಟಿಯ ಮೇಲಿನ ರಾಷ್ಟ್ರೀಯ ನಿಶಾನೆ ಹೋಯಿತು.

ಗಾಂಧೀ ಟೊಪ್ಪಿಗೆಗೆ ಗಂಡಾಂತರ ಬಂತು.

ಎಲ್ಲಿ ಬೇಕಾದಲ್ಲಿ ಗುಂಡು ಹಾರಿದವು.

ಸರಕಾರದವರು ಸೊಲ್ಲಾಪೂರದಲ್ಲಿ ಲಷ್ಕರೀ ಕಾಯದೆಯನ್ನು ಜಾಹೀರ ಮಾಡಿದರು. ಕಲೇಕ್ಟರ ಅಧಿಕಾರವು ಸೇನಾಧಿಪತಿಯ ಕಡೆಗೆ ಹೋಯಿತು. ದಂಡಿನವರು ಮೊನ್ನಿನ ದಿವಸ ಜಾಹೀರನಾಮೆಯನ್ನು ಹಚ್ಚುವದರೇ ಮ್ಯುನಿಸಿಪಾಲಿಟಿಗೆ ಹೋಗಿ, ಅಲ್ಲಿಯ ರಾಷ್ಟ್ರೀಯ ನಿಶಾನೆಯನ್ನು ಕಿತ್ತಿ ಹಾಕಿದರು. ಬಳಿಕ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿ ಶ್ರೀ. ಜಾಧವ ಮತ್ತು ಕಾಂಗ್ರೆಸದ ಬೇರೆ ೧೫ ಜನರಿಗೆ ಗಾಂಧೀ ಟೊಪ್ಪಿಗೆಯನ್ನು ತೆಗೆಯಲಿಕ್ಕೆ ಹುಕುಮ ಮಾಡಿದರು. ಇವರು ಹುಕುಮವನ್ನು ಮಾನ್ಯಮಾಡದ್ದರಿಂದ, ಇವರೆಲ್ಲರನ್ನೂ ಜಪ್ತ ಮಾಡಿದರು. ಪಟ್ಟಣದ ತುಂಬ ಸೈನಿಕರು ಕಾವಲುಗಾರರಾಗಿ ನಿಂತದ್ದರಿಂದ ಪರಿಸ್ಥಿತಿಯು ಚಿಂತಾಜನಕವಾಗಿರುತ್ತದೆ. ಈ ಕಾಯದೆಯು ಕಮಲು ಹತ್ತು ದಿವಸಗಳ ತನಕ ನಡೆಯುವದೆಂದು ಲೋಕವಾರ್ತೆಯಾಗಿದೆ.

ಹುಕುಮು:-

(೧) ಜನರು ಒಡಿಗ್ಯೆ ಆಯುಧ ಮತ್ತು ರಾಷ್ಟ್ರೀಯ ನಿಶಾನೆ ಹಿಡಕೊಂಡು ತಿರುಗಾಡಬಾರದು. (೨) ಒಂದಡೆಯಲ್ಲಿ ನಾಲ್ವರಿಗಿಂತ ಹೆಚ್ಚು ಜನರು ಸೇರಬಾರದು (೩) ಸಾರ್ವಜನಿಕ ಮೆರವಣಿಗೆ ತೆಗೆಯಬಾರದು. (೪) ರಾತ್ರಿ ಎಳರಿಂದ ಬೆಳಗಿನ ೬ರ ತನಕ ಯಾರೂ ಬೀದಿಗಳಲ್ಲಿ ತಿರುಗಾಡಬಾರದು.

ಎಂದು ಹುಕುಮು ಮಾಡಿದ್ದಾರೆ. ೩೦೦ ಸೋಲ್ಜರರೂ ೪೦೦ ಹಿಂದೀ ಸೈನಿಕರೂ ಒಂದೇಸಮನೆ ತಿರುಗುತ್ತಿರುತ್ತಾರೆ.

ಸೊಲ್ಲಾಪೂರದಲ್ಲಿ ಇಬ್ಬರು ಪೋಲಿಸರನ್ನು ಕೊಂದು, ರಾಜಬೀದಿಯಲ್ಲಿ ಸುಟ್ಟ ಕೃತ್ಯದಿಂದ ಕ್ರೋಧಗೊಂಡ ಪೋಲೀಸರು ತಮಗೆ ಎಲ್ಲಿ ಬೇಕಾದಲ್ಲಿ ಗುಂಡು ಹಾಕಿ, ತಮ್ಮಲ್ಲಿಷ್ಟು ತಾಮಸವೃತ್ತಿಯುಂಟೆಂಬದನ್ನು ಜಗತ್ತಿಗೆ ತೋರಿಸಿಕೊಂಡರು. ದಂಗೆಯ ಸ್ಥಳದಲ್ಲಿ ಗುಂಡು ಹಾಕಿ; ನೂರಾರು ಜನರನ್ನು ಕೊಂದರೂ ಕೂಡ ದಯೆಯ ನಾಹೇಳನಂತೆ ತಿಳುವಳಿಕೆಯ ತಪ್ಪೆಂದು ಸರಕಾರದವರು ಸ್ವಪಕ್ಷ ಸಮರ್ಥನ ಮಾಡಿಕೊಳ್ಳಬಹುದು. ಆದರೆ ಬಾಗಿಲ ಹಾಕಿದ್ದ ಮನೆಗಳ ಮೇಲೆ, ಹುಡುಗರ ಮೇಲೆ ಗುಂಡು ಹಾಕಿ, ಕೊಲೆಯ ಪಾಪ ಕಟ್ಟಿಕೊಂಡದ್ದು ಮಾತ್ರ ಅಕ್ಷಮ್ಯವಾಯಿತು. ಸಿಪಾಯರನ್ನು ಕೊಂದ ಪಾಪಕ್ಕಾಗಿ ಜನರನ್ನು ಲಷ್ಕರೀ ಹುಕುಮಿನಿಂದ ತೋಫಿನ ಬಾಯಿಗೆ ಕೊಡುವಂತೆ, ಬಾಲಹತ್ಯ ಮಾಡಿದವರನ್ನೂ ಗುಂಡಿಗೆ ಗುರಿ ಮಾಡಿದರೇ ನ್ಯಾಯದ ತಕ್ಕಡಿಯು ಸಮನಾಗಿ ನಿಲ್ಲುವದು. ರಂಗನಡೆ ಎಂಬ ಆಡ್ಡ ಹೆಸರಿನ ಪೇಠಕರ ಗೃಹಸ್ಥನ ಏದಾರು ವರುಷದ ಮಗನು ಬೇರೆ ಹುಡುಗರೊಂದಿಗೆ ಬಾಗಿಲವಿದ್ದ ಮನೆಯ ಜಿನ್ನಿಯ ಮೇಲೆ ನಿಂತಿದ್ದನು. ಆ ಮಗುವಿನ ಹಣೆಗೆ ಗುಂಡು ಒಡೆದು, ಆ ಶಿಸು ರಕ್ತದಿಂಬಾಳವಾಗಿ, ತಲೆ ಮಿದುಳು ಹೋಗಿದ್ದು, ನೋಡಲಿಕ್ಕೆ ಕೂಡ ಅಸಹ್ಯ ಮತ್ತು ಹೃದಯದ್ರಾವಕವಾಗಿ ಸತ್ತು ಹೋದನು. ಈ ಅನಾಹುತದ ವಿಚಾರ ಮಾಡುವ ಪುರುಷಾರ್ಥನೇ ಇಲ್ಲ. ನಿರಪರಾಧಿ ಮತ್ತು ನಿಷ್ಪಾಪಿಯಾದಂಥ ಕಂದಮ್ಮನನ್ನು ಕೊಂದಕ್ಕಾಗಿ ಸರಕಾರವನ್ನು ಹೊಣೆಯಾಗಿ ಹಿಡಿಯದೆ ಇನ್ನಾರನ್ನು ಹಿಡಿಯಬೇಕು ?

ಸೊಲ್ಲಾಪೂರದಲ್ಲಿ ಗುಂಡು ಹೇಗೆ ಅಡ್ಡಾತಿಡ್ಡಾ ಹಾರಿದವು.

ದಂಡಿನ ಬಲ ಬಂದ ಕೂಡಲೆ- ಪೋಲಿಸರು, ಸೋಲ್ಜರರು ಅಥವಾ ದೇಶೀ ಸೈನಿಕರು- ಯಾರೇ ಇರಲಿ, ದಂಗೆಯನ್ನು ಮುರಿಯಬೇಕೆಂದು ಊರ ತುಂಬ ಗುಂಡಿನ ಮಳೆ ಸುರಿಸಿದರು. ಈ ಮಳೆಯು ತೀರ ಅವಿಚಾರ ಮತ್ತು ನಿರ್ದಯದ್ದಾಗಿರುತ್ತಿದೆಂದು ಮುಂದೆ ಕೊಟ್ಟ ಕೆಲವು ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

೧ ಗಣಪತ ಬಾಳಕೃಷ್ಣ ಟೆಂಬೆ- ಇವರು ಟಿಕೇಕರರ ಮನಿಗೆ ಭೋಜನಸುಳ್ಳಿಯಿಂದ ಬಂದಿದ್ದರು ಸಂಧ್ಯಾಪೂರಕ್ಕೆ ಹೋಗುವದಕ್ಕಾಗಿ ಜನ್ನಿಯಿಂದಿಳಿಯುತ್ತಿದ್ದಾಗ ಕಾಲಿಗೆ ಗುಂಡು ಬಡಿಯಿತು.

೨ ಮೆಜಸ್ಟಿಕ ಥಿಯೇಟರದಲ್ಲಿ ಎಲ್ಲಕ್ಕೂ ಮೇಲಿನ ಪಾವಟಿಗೆಯ ಮೇಲೆ ಕೂತಿದ್ದ ಉಜ್ಜಯನಿಯ ಭೋಲೆ ರಿಬಾವಾ ಎಂಬವರ ಆರುವರ್ಷದ ಒಬ್ಬ ಗೋಸಾವಿ ಮುದುಕನ ಕಾಲಿಗೆ ಗುಂಡು ಒಡಯಿತು.

೩ ಪಾಂಜರಪೋಳದಲ್ಲಿರುವ ಸ್ಟ್ಯಾಂಡಿಗೆ ಬಂದಂಥ ತಾತ್ಯಾ ಎಂಬವನಿಗೆ ಒಂದರ ಮೇಲೊಂದರಂತೆ ಮೂರು ಸಾರೆ ಗುಂಡು ಹಾಕಿ, ಅವನನ್ನು ಕೊಂದರು

೪ ಕುಂಬಾರ ಅಗಸಿಯಲ್ಲಿ ಒಬ್ಬ ಮುಸಲಮಾನ ಟಾಂಗಾದವನೂ ಬೇರೊಬ್ಬ ಒಂದು ಹಿಂದೂ ಮನುಷ್ಯನೂ ಬೈಲಕಡಿಗೆ ಹೋಗುತ್ತಿದ್ದರು. ದಾರಿಯಲ್ಲಿಯೇ ಇವರನ್ನು ಗುಂಡಿನಿಂದ ಘಾಯಪಡಿಸಿದರು.

೫ ಶುಕ್ರವಾರ ಪೇಟೆಯಲ್ಲಿ ಶೇಟ ಹರಿಭಾಈ ವೇಲಜೀ ಇವರ ೧೩-೧೪ ವರ್ಷದ ಹುಡುಗನು ಮಾಳಿಗೆಯ ಅಂತಸ್ತಿನ ಮೇಲೆ ನಿಂತಿದ್ದನು. ಅಲ್ಲೀ ಗುಂಡು ತಾಕಿ, ಸತ್ತನು.

೬ ನಂತಿಂಗ ಗಿರಜೆಯ ಗಿರಣಿಯ ಮ್ಯಾನೇಜರನು ಅಟ್ಟದ ಮೇಲೆ ಮಾತಾಡುತ್ತಾ ಕೂತಾಗ, ಆತನ ತಲೆಯ ಮೇಲಿಂದ ಗುಂಡು ಹಾದು, ಗೋಡೆಯೊಳಗೆ ತೂತು ಮಾಡಿತು.

೭ ಸಿದ್ದೇಶ್ವರಪೇಟೆಯಲ್ಲಿ ಬಣಗಾರರ ಒಬ್ಬ ಹೆಣ್ಣು ಮಗಳು ತಂಬಿಗೆ ತಕ್ಕೊಂಡು ಹೋಗುತ್ತಿದ್ದಾಗ ಗುಂಡು ಬಡಿಯಿತು.

೮ ಧಡಂಗೆ ಎಂಬ ಅರೆ ಹುಚ್ಚನು ಕಟ್ಟೆಯ ಮೇಲೆ ಕೂತಾಗ ಗುಂಡು ಒಡಿಸಿಕೊಂಡನು.

೯ ಜೋಡಬಾವಿಯ ಪೇಟೆಯಲ್ಲಿ ಮಲ್ಲಿಕಾರ್ಜುನ ಸ್ವಾಮಿಯವರು ಒಂದು ಅಂಗಡಿಯಲ್ಲಿ ನಿಂತಾಗ ಗುಂಡು ಒಡೆಯಿತು

೧೦ ಮೆಜಸ್ಟಿಕ ಥಿಯೇಟರದ ಒಳಂಗಳದಲ್ಲಿರುವ ಒಂದು ಕೋಣೆಯಲ್ಲಿ ಕೂತಿದ್ದ ಸುಂದರಸಿಂಗರಾಜವರ ಪತ್ನಿ ಸೀತಾಬಾಯಿಯ ಎದೆ ಮತ್ತು ತೊಡೆಗೆ ಗುಂಡುಗಳು ಬಡಿದವು

೧೧ ಇದೇ ಥಿಯೇಟರದ ಹತ್ತಿರವಿರುವ ಚಹಾದ ಅಂಗಡಿಯಲ್ಲಿ ಚಹಾ ಕುಡಿಯುತ್ತಾ ಕೂತಿದ್ದ ಬಾಬುರಾವ ಕ್ಷೀರ ಎಂಬವರಿಗೆ ಗುಂಡು ಬಡಿಯಿತು.

೧೨ ಒಂದು ಊಟದ ಮನೆಯಲ್ಲಿ ಬಾಗಿಲ ಹಾಕಿಕೊಂಡು ಜನರು ಊಟಕ್ಕೆ ಕೂತಿದ್ದರು. ಬಾಗಿಲಕ್ಕೆ ಗುಂಡು ಹೊಡೆದರು. ಗುಂಡು ಬಾಗಿಲದೊಳಗಿಂದ ಹಾದು ಮನೋಹರ ಕೃಷ್ಣ ಜಾಧವರೆಂಬವರ ಬಲ ತೊಡೆಯನ್ನು ಸವರಿ, ಎಡ ತೊಡೆಯಿಂದ ಪಾರಾಗಿ ಹೋಯಿತು.

ಈ ಪ್ರಕಾರ ಅನ್ಯಾಯಕತನ ಮಾಡಿದರೂ, ಘಾಯವಾದಂಥ ಜನರ ವಿಷಯವಾಗಿ ಅಧಿಕಾರಿಗಳು ಯಾವ ಉಪಾಯ ಮಾಡಲಿಲ್ಲ. ಕೋರ್ಟ ನಡೆಯುತ್ತಿದ್ದರೂ ಅದನ್ನು ಅರಿಸುವ ಪ್ರಯತ್ನ ಮಾಡಲಿಲ್ಲೆಂದು ಅಲ್ಲಿಯ ಕರ್ಮಯೋಗಿ ಪತ್ರದಲ್ಲಿ ಬರೆದಿದೆ.

ಲಷ್ಕರೀ ಹುಕುಮಿನ ಮಹಿಮೆ.

ಸೊಲ್ಲಾಪೂರ ಪಟ್ಟಣವನ್ನು ಲಷ್ಕರೀ ಹುಕುಮತ್ತಿನಿಂದ ತಮ್ಮ ವಶಕ್ಕೆ ತಂದುಕೊಂಡನಂತರ ಕಮ್ಯಾಂಡರರಾದ ಮಿಯರ್ಸ ಸಾಹೇಬರು ಒಂದು ಜಾಹೀರನಾಮೆ ತೆಗೆದು, ಯಾರಾದರೂ ರಾಷ್ಟ್ರೀಯ ನಿಶಾನ ಅಥವಾ ಅದಕ್ಕೆ ಸಮಾನವಾದಂಥ ನಿಶಾನೆ ಹಿಡಕೊಂಡು ಬಂದರೆ- ಹತ್ತು ವರ್ಷಗಳತನಕ ಶೀಕ್ಷೆ ವಿಧಿಸಲ್ಪಡುವದೆಂದು ಸಾರಿದ್ದಾರೆ.

ಸೊಲ್ಲಾಪೂರದ ಭಯಾನಕ ಸ್ಥಿತಿಯು.

ಮ್ಯುನಿಸಿಪಾಲಟಿಯ ಅಧ್ಯಕ್ಷರನ್ನು ಹಿಡಿದರು.

ಲಷ್ಕರೀ ಕಾಯದೆಯನ್ನು ಅಮಲಿನಲ್ಲಿ ತಂದಂದಿನಿಂದ ಜನರು ಊರು ಬಿಡಹತ್ತಿದ್ದಾರೆ. ಕಾಲ್ಮಾರ್ಗದಿಂದ ಹೋಗುವದಂತಿರಲಿ, ರೇಲ್ವೆಯಲ್ಲಿಯೂ ಕುರಿಗಳಂತೆ ಜನರು ತುಂಬಿ ಊರಿಗೆ ಶರಣು ಹೊಡೆಯುತ್ತಿದ್ದಾರೆ. ಗಿರಣಿ ಮತ್ತು ಪೇಟೆಯು ಇನ್ನು ಬಂದಾಗಿರುವದರಿಂದ, ಮತ್ತು ನಾಲ್ವರಿಗಿಂತ ಹೆಚ್ಚು ಜನರು ಓಡಾಡಬಾರದೆಂದು ಸಕ್ತಿಯ ಹುಕುಮ ಇರುವದರಿಂದ, ಊರು ರಣಗುಟ್ಟುತ್ತದೆ

ಲಷ್ಕರೀ ಹುಕುಮಿನನ್ವಯ ೧೮ ಜನರನ್ನು ಹಿಡಿದು ಅವರಿಗೆ ಶೀಕ್ಷೆ ಮಾಡಿದ್ದಾರೆ. ಶೀಕ್ಷೆಯ ಸುದ್ದಿಯನ್ನು ಹೊರಗೆ ಹಾಕಿಲ್ಲ. ಕೋರ್ಟಿನಲ್ಲಿ ವರ್ತಮಾನಪತ್ರಗಳ ಸುದ್ದಿಗಾರರಿಗೆ ಹೊಗಗೊಡಲಿಲ್ಲ.

ರಾಷ್ಟ್ರೀಯ ನಿಶಾನೆಯನ್ನು ಹಿಡಿದವರಿಗೆ ಹತ್ತು ವರ್ಷಗಳ ತನಕ ಶೀಕ್ಷೆ ಎಂದು ಸುಲ್ತಾನಿ ಜಾಹೀರನಾಮೆ ಹಚ್ಚಿದಂತೆ ಬಂಗಾರದ ಅಕ್ಷರ ಕೂಟ್ಟರೆ- ಅನ್ನ ನೀರು ಕೊಟ್ಟರೆ- ಐದು ವರ್ಷಗಳ ತನಕ ಶೀಕ್ಷೆಯಾಗುವದೆಂದು ಮತ್ತೊಂದು ಜಾಹೀರನಾಮೆ ಹಚ್ಚಿದ್ದಾರೆ.

ಮ್ಯುನಿಸಿಪಾಲಿಟಿಯ ಹಳೇ ಅಧ್ಯಕ್ಷರಾಗಿದ್ದ ರಾ· ಬ. ಮುಳೆಯವರು ಮದಿವೆಗಾಗಿ ಪುಣೆಗೆ ಹೋಗಿದ್ದಾರೆ. ಸರಕಾರದವರು ಇವರನ್ನು ದಂಗೆ ಶಾಂತ ಮಾಡಲು ಆನರರಿ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಿದ್ದಾರೆ. ದಂಡಿನವರಿಗೆ ವಾಸಸ್ಥಾನವೆಂದು ಇವರ ಬಂಗ್ಲೆಯನ್ನು ಸೋಲ್ಜರರು ಆಕ್ರಮಿಸಿದ್ದಾರೆ.

ಮ್ಯುನಿಸಿಪಾಲಿಟಿಯ ಹೊಸ ಅಧ್ಯಕ್ಷರಾದ ಶ್ರೀ. ಮಾಣಿಕಚಂದ ಶಹಾ ಇವರನ್ನೂ ಇಪ್ಪತ್ತು ಜನರನ್ನೂ ಹಿಡಿದಿದ್ದಾರೆ. ಶಯಾನವನ್ನು ಹಿಡಿದದಕ್ಕಾಗಿ ವ್ಯಾಪಾರಸ್ಥರು ಕ್ಷೋಭೆಗೊಂಡಿದ್ದಾರೆ. ಶ್ರೀ. ಜಾಧವರಿಗೆ ಎರಡು ವರ್ಷದ ಸಕ್ತಮ ಶೀಕ್ಷೆಯಾಯಿತು.

ಮ್ಯಮನಸಿಂಗದಲ್ಲಿ ಅಬಕಾರೀ ಡಿಪೋದಿಂದ ನಶ್ಯ ಪೋಲಿಸರ ಕಾವಲಿನಲ್ಲಿ ಗುತ್ತೆದಾರನು ಅರೆ ಮತ್ತು ಗಾಂಜಾ ತರುತ್ತಿದ್ದಾಗ ದಾರಿಯಲ್ಲಿ ಊರ ಜನರಿಗೂ ಪೋಲಿಸರಿಗೂ ಜಗಳ ಬಂದು ಪೋಲಿಸರು ಗುಂಡು ಹಾರಿಸಿದರು. ಗುಂಡಿನಿಂದ ೯೦ ಜನರು ಘಾಯವಾಗಿದ್ದು, ಮೂವರು ಮರಣಹೊಂದಿದ್ದಾರೆ.

ಸೊಲ್ಲಾಪೂರದಲ್ಲಿ ಭಯಂಕರ ಶಿಕ್ಷೆ ಮತ್ತು ದಂಡ.

ಮೇಲಕೊಡದಲ್ಲಿ ಹೇಳದಷ್ಟು ದಂಡವು ಸೊಲ್ಲಾಪೂರದಲ್ಲಾದ ಲಷ್ಕರೀ ವಿಚಾರಣೆಯ ಆರೋಪಿಗಳಿಗಾಗಿರುತ್ತದೆ. ದಂಡದಂತೆ ಶೀಕ್ಷೆಯೂ ಭಯಂಕರವಾಗಿರುತ್ತದೆ. ಕೆಲವನ್ನು ಇದರಡಿ ಕೊಟ್ಟಿರುತ್ತೇವೆ.

೧ ಕಾಂಗ್ರೆಸ ಕಮೀಟಿಯ ಅಧ್ಯಕ್ಷ ಶೇಟ ರಾಮಕೃಷ್ಣ ಜಾಜು- ಏಳು ವರ್ಷ ೨೦೦೦ ದಂಡ

೨ ಕಾಂಗ್ರೆಸ ಕಮೀಟಿಯ ಸೇಕ್ರೆಟರಿ, ತುಳಸೀರಾವ ಜಾಧವ ೧೦ ವರ್ಷ ೨೦೦೦ ದಂಡ.

೩ ವೆಂಕಟೇಶ ಕೃಷ್ಣ ದೇಶಪಾಂಡೆ ೭ ವರ್ಷ ೨೦೦೦ ದಂಡ

೪ ಜಂಗಮಯ್ಯನವರಿಗೆ- ಎರಡು ವರ್ಷ ೧೦೦೦ ದಂಡ.

೫ ಪ್ರಮುಖ ಸ್ವಯಂಸೇವಕರಿಗೆ ಒಂದು ವರ್ಷದಿಂದ ಎರಡು ವರ್ಷದ ತನಕ.

೬ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಶೇಟ ಮಾಣಿಕಚಂದರಿಗೆ ಆರು ತಿಂಗಳು ಶೀಕ್ಷೆ ಹತ್ತು ಸಾವಿರ ದಂಡ

ಇವು ಹಾರ ಸುದ್ದಿಯಿಂದ ಬಂದಂಥವು ಇದು ಹೇಗೇ ಇರಲಿ; ಅಲ್ಲಿಗೆ ದಂಡು ಹೋಗಿ ಬರುವ ಮತ್ತು ಬೇರೆ ವೆಚ್ಚವು ಈ ದಂಡದಿಂದ ಭರತಿಯಾಗುವದೆಂಬುದು ನಿಜ.

ಕಿತ್ತೂರ ಸುತ್ತಲು ೩೦೦೦ ಶಿಂದಿಗಿಡಗಳು ನೆಲಸಮವಾದವು.

ಶನಿವಾರ ತಾ॥ ೧೦-೫-೩೦ ನೇ ದಿನ ನಾಲ್ಕು ನೂರು ಶಿಂದಿಗಿಡಗಳು ಕಡಿಯಲ್ಪಟ್ಟವು.

ರವಿವಾರ ತಾ॥ ೧೧-೫-೩೦ ನೇ ದಿನ ಪರದೇಶೀ ಮಾಲಿನ ಹೋಳಿ ಹೊತ್ತಿತು. ಸಭೆಯು ಜರುಗಿತು. ಸೋಮವಾರ ತಾ॥ ೧೨-೫-೩೦ನೇ ದಿನ ಪರಶುರಾಮನ ಅವತಾರವಾಯಿತು. ೧೫೦ ಕೊಡಲಿಗಳ ಮೆರವಣಿಗೆಯು ಸಂಜೆಯ ನಡು ಸಮಯದಲ್ಲಿ ಹೊರಟು ಮೆರವಣಿಗೆಯಾಯಿತು.

ಈ ಮೆರವಣಿಗೆಯ ಸುಪರಿಣಾಮವು ಹಳ್ಳಿ ಹಳ್ಳಿಗಳ ಮೇಲಾಗಿ ಕಳೆದ ೪-೫ ದಿನಗಳಲ್ಲಿ ನಾಲ್ಕಾರು ಸಹಸ್ರ ಶಿಂದಿ ಗಿಡಗಳು ಬಿದ್ದಂತೆ ಸುದ್ದಿ ಬಂದಿದೆ.

ಕೇವಲ ಕಿತ್ತೂರ ಸ್ವಯಂಸೇವಕರಿಂದ ಈ ವರೆಗೆ ೧೫೦೦ ಶಿಂದಿಗಿಡಗಳು ಗೂರಿಗೀಡಾದವು.

ಕೋರ್ಟ್ಯಾಧೀಶನು ಸರಕಾರದ ಸಂಬಂಧ ಕಡಕೊಂಡನು.

ಅಹಮುದಾಬಾದಿನ ಕೋರ್ಟ್ಯಾಧೀಶರಾದ ಅಂಬಾಲಾಲ ಸಾರಭಾಯಿಯವರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ, ಮ್ಯುನಿಸಿಪಾಲಿಟಿ, ಜೈಲ ಕಮೀಟಿ ಮುಂತಾದ ಸರಕಾರ ಪರವಾಗಿ ನಾವು ನೇಮಲಾಗಿದ್ದಂಥ ಎಲ್ಲ ಕೆಲಸಗಳನ್ನೂ ಬಿಟ್ಟುಬಿಟ್ಟರು. ಮತ್ತು ಅವರ ಕೇಸರ ಈ ಹಿಂದ ಪದಕವನ್ನು ಹಿಂದಿರುಗಿ ಕಳಿಸಿದರು.

ಲಕ್ಷ್ಮೀಪತಿ ರುಕ್ಮಿಣಿಬಾಯಿಗೆ ಶೀಕ್ಷೆ.

ವೇದಾರಣ್ಯವು ತಮಿಳ ದೇಶದ ದಂಡಿಯಾಗಿದೆ. ಸುಪ್ರಸಿದ್ಧ ಡಾಕ್ಟರರಾದ ಶ್ರೀ ಲಕ್ಷ್ಮೀನಾರಾಯಣರ ಪತ್ನಿಯವರಾದ ಶ್ರೀ॥ ಸೌ॥ ರುಕ್ಮಿಣಿಬಾಯಿಯವರು ಉಪ್ಪಿನ ಕಾಯದೆಭಂಗ ಮಾಡಿದರೆಂದು ಮ್ಯಾಜಿಸ್ಟ್ರೇಟರು ಇವರಿಗೆ ಒಂದು ವರ್ಷದ ಸಾದಾ ಶೀಕ್ಷೆ ವಿಧಿಸಿದರು.

ವಿಜಯ.

ಶಾಲಿವಾಹನ ವಿಕ್ರಮ ವರ್ಷ ... ವೈಶಾಖ ... ಬ

ಆ ವಿಜಯಂ ಶ್ರೀರಮೆಯು
ನೀ ವಸುಮತಿಯು ನಲಿನಿ ಸುಚರಿತೆಗಳಿಂ ...
... " ವಿಜಯಂ " ಶ್ರೀಕರಣ ...
... ವಿಷಯಂಗಳ ವಿವರಿಸಿವುದು ಸಾಜ...

ರಾವುಂಡ ಟೇಬಲ ಪರಿಷತ್ತು
ಗುಡ್ಡ ಕೊರೆದು ಇಲಿ ತೆಗೆದಂತೆ !!!

ಲಾರ್ಡ ಆಯರ್ವಿನಸಾಹೇಬರು ಆಕ್ಟೋಬರ ತಿಂಗಳ ೨೦ನೆಯ ತಾರೀಖಿನ ದಿವಸ ಲಂಡನದಲ್ಲಿ ದುಂಡು ಮೇಜಿನ ಮಹಾ ಪರಿಷತ್ತು ಸೇರಬೇಕೆಂದು ಜಾಹೀರ ಮಾಡಿದ್ದರ ಮೇಲೆ ಲಾಹೋರ, ಮುಂಬಯಿ, ಬ್ರಾಹ್ಮಣೇತರ ಮೊದಲಾದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದೇ ಸಮಯದಲ್ಲಿ ... ಮ ವಾಳ್ ... [illegible] ... ಯ ಜನರು ತೆಗೆದ ಉದ್ಗಾರ ಮತ್ತು ಅವರು ವ್ಯಕ್ತಮಾಡಿದ ಅಭಿಪ್ರಾಯಗಳನ್ನು ನೋಡಿದರೆ ರಾವುಂಡ ಟೇಬಲವು ಹುಟ್ಟಿದ ಕೂಡಲೆ ಸಾಯುವ ಕೂಸಿನಂತಾಗುವದೆಂದೇ ಧ್ವನಿತವಾಗುತ್ತದೆ.

ಪಂಡಿತ ಮೋತಿಲಾಲರ ಸರ್ವ ಪಕ್ಷದ ವಸಾಹತಿನ ಸ್ವರಾಜ್ಯದ ಯೋಜನೆಯು ಕಾಂಗ್ರೆಸದ ಠರಾವಿನಿಂದ ರದ್ದಾದ ಬಳಿಕ, ಸರ ಸಪ್ರುಸಾಹೇಬರು ಇದೇ ಮಾದರಿಯ ತಮ್ಮ ದೆಂದು ಸರ್ವಪಕ್ಷೀಯ ಕಮೀಟಿಯನ್ನು ಕೂಡಿಸಿದರಷ್ಟೇ. ಆ ಕಮೀಟಿಯು ಲಡನೆಯಾಗಿ ಮನು ಭವತಿ ನ ಭವತಿಯಾದ ನಂತರ, ಅದು ಮುಂದೆ ಬಿತ್ತು. ಮುಂದೆ ಬೀಳುವದೆಂದರೆ ಅಶೋಧಿಕ್ಕ ... ಎಂಬಂತಾಯಿತು. ಈ ಕಮೀಟಿಯನ್ನು ಮುಂದೆ ಮಾಡಿದ ನಂತರ ಮಹಾತ್ಮರ ಕಾಯದೆಭಂಗದ ಧಡಾಕೇಬು ಮಾಡಿ, ಇವರಿಗೆ ಪೂರಾ ಅನುಕೂಲ ಮಾಡಿತು. ಕಮೀಟಿಯಲ್ಲಿ ಡಾಕ್ಟರ ಮುಂಜೆ ಮೊದಲಾದ ಪ್ರತಿಯೊಬ್ಬರಿಗೆ ಸಹಕಾರಿಗಳಿದ್ದರು. ಅವರು ಕಾಯದೆಭಂಗ ಮಾಡಿದ್ದರಿಂದ, ಕಮೀಟಿಗೆ ಅನುಕೂಲರಾದರು. ಮುಖ್ಯವಾಗಿ ಹಿಂದೂ ಮುಸಲಮಾನ ಐಕ್ಯವಾದರೆ ಇದು ಪ್ರತಿಯೋಜನವು ಪಂಡಿತ ಮೋತಿಲಾಲರ ಸ್ವರಾಜ್ಯ ವಿಚಾರಕ್ಕೆ ಒಪ್ಪದಂಥ ಅಲ್ಲೀಬಂಧುಗಳು ಈ ಕಮೀಟಿಯಲ್ಲಿ ಕಮಗೇನಾದರೂ ಫಲ ... ದೊರೆಯುವದೆಂದು ಇದರಲ್ಲಿ ... ಆದರೆ ಇಲ್ಲಿಯೂ ಇವರ ಮನಸ್ಸಿನಂಥ ಘಟನೆಯಾಯಿತು. ಏಕೆಂದರೆ ಹಿಂದೂ ಮಹಾಸಭೆಯವರು ಇದಕ್ಕೆ ಆ ಸಾರೆ ಹೆಚ್ಚಿಗೆ ಸ್ಥಳ ಕಳಿಸಲಿಲ್ಲ. ಇದಲ್ಲದೆ ಪಂಡಿತ ಮಾಲವೀಯರು ಮೊದಲಾದವರೂ ವಿಲಾಯತಿಯ ಬಟ್ಟೆಯ ಬಹಿಷ್ಕಾರದ ಯುದ್ಧದ ದೀಕ್ಷೆ ತಕ್ಕೊಂಡದ್ದರಿಂದ, ಇವರೂ ಕಮೀಟಿಗೆ ಬರಲಿಲ್ಲ. ಮದ್ರಾಸದ ಬ್ರಾಹ್ಮಣೇತರರ ಹಿರಿಯ ಮುಖಂಡರಾದ ಸರ ಪೆಟ್ರೋಸಾಹೇಬರು ಈ ಕಮೀಟಿಯ ಅಧ್ಯಕ್ಷರು. ಇವರು ಮುಂಬಯಿಗೆ ಬಂದಾಗ ದಾರಿಯಲ್ಲಿ ಪುಣೆಯಲ್ಲಿಳಿದು, ಶ್ರೀ. ಕೇಳಕರರ ಮನಸ್ಸೊಲಿಸಬೇಕೆಂದು ಅವರ ಬಿಡಾರಕ್ಕೆ ಹೋದರು. ಅಲ್ಲಿಗೆ ಹೋಗಿ ನೋಡಿದರು; ಹಾಗೇ ತಿರುಗಿ ಬಂದರು. ಏಕೆಂದರೆ ಶ್ರೀ. ಕೇಳಕರರೂ ಕಾಯದೆಭಂಗದ ತಪ್ಪು ಮಾಡಿ ತಕ್ಕೊಂಡವರು. ಹೀಗೆ ಇವರಿಗೆ ತಮ್ಮ ಕೂಟದಲ್ಲಿದ್ದ ನಾಲ್ಕಾರು ಜನರ ಹೊರತು ಯಾರೂ ಅನುಕೂಲರಿಲ್ಲ. ಅನುಕೂಲರಿದ್ದವರಲ್ಲಿ ಸರ ಬ್ಯಾರಿಸ್ಟರ ಜಿನ್ನಾಸಾಹೇಬರು ಕಡಚಿಯಲ್ಲಿ! ಬ್ಯಾರಿಸ್ಟರ ಜಯಕರರು ಸೀಲಗಿರಿಯ ತಂಪು ಹವೆಯಲ್ಲಿ !! ಸಾಕೇ ಬರವು ... ಕೇಳಗಾರರಿಂದ, ಕೇವಲ ಜಿ ... ಸಾಯಿಸಿದರು ಒಸ ... ಥ ... ಸಭೆ ... ಮುಂದೆ ... ಗೆ ಗೊತ್ತು ಮಾಡಿದ್ದನ್ನು ... ಮನಾಲಿನ ಒಂದು ... ಯಲ್ಲಿ ... ಸಿದರು. ಅಲ್ಲದೇ ... ವಾಗಿರುವ ಶ್ರೀ. ಸರೋಜಿನಿಯವರು ಕಾಯದೆಭಂಗ ಮಾಡಲು ಧರಾಸಣಕ್ಕೆ ಹೊರಡುತ್ತಿದ್ದಾಗ ಇವರು ತಮ್ಮ ವಾಕ್ಪಟುತ್ವವನ್ನು ನಡೆಸಿದ್ದು ವಂದು ... ಸೀಕಲವೇ ಸರಿ.

ಸಭೆಗೆ ಎರಡು ಕೈಗಳ ಬೆರಳಿನಷ್ಟು ಸಹ ಪ್ರತಿನಿಧಿಗಳಿರಲಿಲ್ಲ. ಸರ ಸಪ್ರು ಮತ್ತು ಸರ ಸೆಟಲವಾಡರು ಇತ್ತೀಚಿನ ... ಲಾರ್ಡ ಆಯರ್ವಿನಸಾಹೇಬರನ್ನು ಕಂಡು ಪ್ರಸ್ತುತದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿ ಬಂದಿದ್ದರು. ಸರ ಸಪ್ರುಸಾಹೇಬರ ಕೂಡ ಮಾತಾಡಿದಷ್ಟು ಜಯಕರ ಸಾಹೇಬರು ಇನ್ನಾರ ಕೂಡ ಮಾತಾಡಲಿಲ್ಲೆಂದು ಸುದ್ದಿಯು. ಸರರು ಆ ಸಂಭಾಷಣೆಯ ಅಂತರವನ್ನು ಹೇಳುವರೆಂದು ಜನರು ನಿರೀಕ್ಷಿಸಿದ್ದರು. ಆದರೆ ಅವರೇನೂ ಹೇಳಲಿಲ್ಲ. ಇಷ್ಟೇ ಅಲ್ಲ; ಈ ಸಭೆಯಲ್ಲಿ ತಾವೇನೂ ನಿರ್ಣಯ ಮಾಡದಿದ್ದರೆ ಮೊದಲೇ ಜನರು ನಮ್ಮ ಅಪಹಾಸ್ಯ ಮಾಡುತ್ತಾರೆ, ಮುಂದೆ ಪರಿಹಾಸ್ಯ ಮಾಡದಿರರೆಂದು ನಿರಾಶೆಯ ಉದ್ಗಾರ ತೆಗೆದರು. ಸಭೆಗೆ ಬರದವರು ಬರದ್ದನ್ನು ಕಂಡು, ಒಂದು ಉಪ ಕಮೀಟಿ ಮಾಡಿ, ಅಂದಿನ ತಮ್ಮ ಕರ್ತವ್ಯ ಮುಗಿಯಿತೆಂದು ಸ್ವಸ್ಥಾನಕ್ಕೆ ಗಮನ ಮಾಡಿದರು. ಈ ಮಜಲಿಸು ಒಟ್ಟಿನಲ್ಲಿ ಹಾಸ್ಯರಸ ಪೂರ್ಣವಾದ ಫಾರ್ಸೇ ಆಯಿತೆಂದು ಹೇಳುವಂತಾಯಿತು.

ಸರಕಾರದವರು ಮವಾಳರ ಮೇಲೆ ಬಹಳವಾಗಿ ನಂಬಿದ್ದರು. ಆದರಿಗೆ ಎಷ್ಟು ಮಟ್ಟಿಗೆ ಲೋಕಾಶ್ರಯವುಂಟೆಂಬದು ವಿದಿತವಾಯಿತು. ಕಮೀಟಿಗೆ ಬರದಂಥ ಮತ್ತು ಇತ್ತ ರೀತಿಯ ಅತ್ತ ಆಳರಸರ ವಿಶ್ವಾಸವೆಂಬೆರಡೂ ದಂಡೆಯ ಮೇಲೆ ಕಯ್ಯಿಡುವಂಥವರು ರಾವುಂಡ ಟೇಬಲದ ಬಗ್ಗೆ ನಿರಾಶೆಯ ಉದ್ಗಾರಗಳನ್ನೇ ತೆಗೆದಿದ್ದಾರೆ. ಲಾರ್ಡ ಆಯರ್ವಿನಸಾಹೇಬರು ವ್ಯರ್ಥ ... ಭಾಷಣ ಮಾಡಿದ್ದಲ್ಲದೆ, ಛಾವೀ ಸ್ವರಾಜ್ಯದ ಆಶೆಯು ವ್ಯಗಬಲದಂತಿರುತ್ತದೆಂದು ಅಂದಿರುತ್ತಾರೆ. ಈಗಿನ ರಾಜಕೀಯ ಬಿಕ್ಕಟ್ಟಿನ ಸ್ಥಿತಿಯು ರಾವುಂಡ ಟೇಬಲಕ್ಕೆ ಎಷ್ಟು ಅನುಕೂಲವಿಲ್ಲ; ಮಹಾತ್ಮರ ಕೂಡ ಒಡಂಬಡಿಕೆ ಮಾಡಿಕೊಳ್ಳಿರಿ. ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿರಿ ಅಂದರೇ ನಿಮ್ಮ ರಾವುಂಡ ಟೇಬಲ ನಡೆಯುವದು. ನಾಲ್ಕು ಜನ ಸಂಸ್ಥಾನಿಕರೂ, ಜಮೀನದಾರರೂ ಬಳಗದವರನೆ ಮಾಡಿಕೊಳ್ಳುವ ಮವಾಳರೂ ಬ್ರಾಹ್ಮಣೇತರರೂ ರಾವುಂಡ ಟೇಬಲಕ್ಕೆ ಬಂದರೆ ಹಿಂದುಸ್ಥಾನದ ಲ್ಲೆರ್ಡ ... ಉಳಿಯು ... ಕರವಾಗಲಾರದೆಂದೇ ಹೇಳುತ್ತಿದ್ದಾರೆ. ಲಂಡನದಲ್ಲಿ ಈಗಿನ ಮಂತ್ರಿಗಳ ಮುಖಪತ್ರವಾದ ಡೇಲಿ ಹೆರಾಲ್ಡವು-

" ಈಗಿನ ಆಳವಳಿಯು ಹೀಗೇ ಮುಂದೆ ನಡೆದರೆ ಹಿಂದುಸ್ಥಾನದ ಪ್ರಗತಿಯಾಗದೆ, ದಿನ ದಿನಕ್ಕೆ ಬಿಕ್ಕಟ್ಟಿನ ಪರಿಸ್ಥಿತಿಯು ಹುಟ್ಟಿ, ಸರಕಾರಕ್ಕೆ ... ಹೊರ್ತು ಗತ್ಯಂತರವೇ ಉಳಿವದಿಲ್ಲ. ... ನಾವು ಹಿಂದುಸ್ಥಾನಕ್ಕೆ ಸಹಿಸುವದೇನಂದರೆ- ಅನಧಿಕಾರಿ ವರ್ಗದಂಥ ಸಂಸ್ಥಾನಿಕರನ್ನು ಪ್ರತಿನಿಧಿಗಳಾಗಿ ಕಳಿಸದೆ, ಕಮ್ಮ ಪಕ್ಷವನ್ನು ಯೋಗ್ಯ ರೀತಿಯಿಂದ ಹೇಳುವಂಥವರನ್ನೇ ಕಳಿಸಬೇಕು. ಇದೇ ಪ್ರಕಾರ ಮಹಾತ್ಮರು ಹ್ಯಾಯಿಸರಾಯರ ವಿನಂತಿಗೆ ಮಾನ ಕೊಟ್ಟು, ಬಂಧಮುಕ್ತರಾಗಿ, ಬ್ರಿಟಿಶ ಸಾಮ್ರಾಜ್ಯದ ಪ್ರತಿನಿಧಿಗಳ ಕೂಡ ವಿಚಾರವಿನಿಮಯ ಮಾಡಲು ಸಿದ್ಧರಾಗುವರೆಂದು ಬಯಸುತ್ತೇವೆಂದು ಉದ್ಗಾರ ತೆಗೆದಿರುತ್ತದೆ.

ಖಿಲಾಫತ್ ... ಮತ-

ಒಂದಾವರ್ತಿ ... ಬೀಳ ಮತ್ತು ... ಯರ ಕೂಡ ಮೂರನೆಯ ಮೂರ್ತಿಯಾಗಿ ಈಗ ತ್ರಿಕಂಡ ... ಕಳಕಳಿಯು ... ದ್ರನಾಥರು ... ದೇನಂದರೆ-

ಪ್ರಸ್ತುತದ ಅಶಾಂತಿ ಮತ್ತು ಅಸ್ವಸ್ಥ ಸ್ಥಿತಿಯಲ್ಲಿ ... ರಾವುಂಡ ಟೇಬಲ ... ಆದರೆ ಮೇಲೆ ನನ್ನದೆ ... ಪರಿಷತ್ತಿನ ... ಇನ್ನು ... ನಮಗೆ ... ಇರುವದಿಲ್ಲ. ... ದು ನನ್ನ ಮತ.

ಮುಸಲಮಾನರು ಕಾಂಗ್ರೆಸ ಸೇರಿದರು.

ಲಾರ್ಡ ಆಯರ್ವಿನ, ಮಿ. ಜಿನ್ನ ಮೊದಲಾದ ... ಕಾಯದೆಭಂಗದ ... ಹಿಂದೂ ಜನರದಾಗಿದ್ದು, ಅದರಲ್ಲಿ ಮುಸಲಮಾನರು ಸೇರಲಿಲ್ಲೆಂದು ಆಗ್ರಹದಿಂದ ಹೇಳುತ್ತಾರೆ. ಹಾಗೆ ವರ್ತಮಾನ ಪರಿಸ್ಥಿತಿಯು ಇರುವದೇ ಇಲ್ಲ. ಹಿಂದೂ ಜನರಂತೆ ಮುಸಲಮಾನರಿಗೂ ಹಿಂದುಸ್ಥಾನವು ರಾಜಕೀಯ ಸ್ವಾತಂತ್ರ್ಯ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯುಂಟು. ಆದರೆ ಅವರು ಹಿಂದೂ ಜನರಿಂದ ಅದಷ್ಟು ಹೆಚ್ಚು ಹಕ್ಕುಗಳನ್ನು ಪಡೆಯಬೇಕೆಂದು ಮುನಿಸುಗೊಂಡಂತೆ ಮಾಡಿದ್ದಾರೆ. ಮವಾಳ ಅಥವಾ ರಾಜನಿಷ್ಠರಾದಂಥ ಸರ ಶಾಫಿ ಸಾಹೇಬರ ವರ್ಗದವರು, ಅನುಕೂಲರಾಗಿ, ಕುರಂಗಬೇಗಿಸದ ಅಲ್ಲಿ ಬಂಧುಗಳು, ಬ್ಯಾರಿಸ್ಟರ ಜಿನ್ನಾಸಾಹೇಬರು ಇಂಗ್ರೇಜಿ ಸರಕಾರದ ಗಡಿಯು ತಮ್ಮ ನೆತ್ತಿಯ ಮೇಲೆ ಯಾವಾಗಲೂ ತೂಗುತ್ತಿರಬೇಕೆಂದು ಎಂದೆಂದಿಗೂ ಅಪೇಕ್ಷಿಸುವದಿಲ್ಲ. ಸಾಮೋಪಚಾರದಿಂದ ಆದಷ್ಟು ಅಧಿಕಾರಗಳನ್ನು ತಕ್ಕೊಳ್ಳಬೇಕೆಂದೇ ಅವರ ಮತವು. ಆ ಮೇರೆಗೆ ನಡೆದರೆ ನೂರಾರು ವರ್ಷಗಳವರೆಗೂ ಸ್ವಾತಂತ್ರ್ಯ ದೊರೆಯಲಾರದೆಂದು ಅಭಿಪ್ರಾಯದ ಮತವು. ಆ ಮತಕ್ಕೆ ಪುಷ್ಟಿಯಾಗಿ ಕಾಯದೆಭಂಗದ ಯುದ್ಧ ಸಾರಿರುವದು. ಇದಕ್ಕೆ ಅನುಕೂಲರಾದಂಥ ಮುಸಲಮಾನರೇನೂ ಕಡಿಮೆ ಇರುವದಿಲ್ಲ. ಡಾಕ್ಟರ ಕಿಚಲೂಸಾಹೇಬರು ಸಂಪೂರ್ಣ ಸ್ವಾತಂತ್ರ್ಯವಾದಿಯಾಗಿದ್ದು, ಹಿಂದಕ್ಕೆ ಅಲ್ಲೀ ಬಂಧುಗಳ ... ರಂಗವಾಸಿಯಾದಂಥವರು. ಈಗ ಸಹ ಮೂರು ವರ್ಷಗಳ ವರೆಗೆ ಸತ್ರಮ ಶಿಕ್ಷೆ ಹೊಂದಿದರು. ... ಪ್ರಾಂತದ ಕಾಂಗ್ರೆಸ ಕಮೀಟಿಯ ಮುಖಂಡರೆಲ್ಲರೂ ಮುಸಲಮಾನರೇ! ಶ್ಯೇಟು, ನೆರಿಮನ್ಯೂ, ... ಪೇಶಾವರ ಮುಂತಾದ ಪಟ್ಟಣಗಳಲ್ಲಿ ... ಸ್ತ್ರೀಯ ಸ್ವಯಂಸೇವಕರಲ್ಲಿ ಹಿಂದೂ ಜನರಿಗಿಂತ ಮುಸಲಮಾನರೇ ಹೆಚ್ಚಾಗಿದ್ದಾರೆ. ... ಮುಸಲಮಾನರು ಸಹ ಕಾಂಗ್ರೆಸಕ್ಕೆ ಅನುಕೂಲರಾಗಿದ್ದಾರೆಂದು ಇಂಗ್ರೇಜಿ ಸರಕಾರದವರೇ ಕಬೂಲಿ ಕೊಟ್ಟಿರುತ್ತಾರೆ. ಕಲಕತ್ತೆಯ ಮುಸಲಮಾನರು ಜಾಹೀರ ಪತ್ರಿಕೆ ತೆಗೆದು ತಾವು ಕಾಂಗ್ರೆಸ ಸೇರಿದಂತೆ ಪ್ರಸಿದ್ಧ ಮಾಡಿದ್ದಾರೆ. ಕಾನಪೂರವಂತೂ ಈ ವಿಷಯದಲ್ಲಿ ಒಬ್ಬ ಮುಂದೆ ಹೋಗಿದೆ. ಮಹಾತ್ಮರನ್ನು ಹಿಡಿದ ದಿವಸ ಅಲ್ಲಿ ಮೂವತ್ತು ಸಾವಿರ ಮುಸಲಮಾನರ ಸಭೆಯು ಕೂಡಿತ್ತು. ಪಂಜಾಬ ಪ್ರಾಂತದ ... ಸರದಾರ ... ಭಾಷಣಮಾಡಿ, ನಮಗೆ ಇನ್ನು ಸಾಮಂತ ಸ್ವರಾಜ್ಯ ಬೇಕಾಗಿಲ್ಲ. ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂಬ ಠರಾವು ಮಾಡಿದರು. ... ಇದೇ ರೀತಿ ... ಗಳ ಜೋಳಿಯು ... ಲ್ಲಿಯೇ ಅದ್ವಿತೀಯ ಮತ್ತು ಅಭೂತಪೂರ್ವವಾಯಿತು. ಇದರ ಉದ್ದವು ಸುತ್ತಲು ಒಂದು ಮೈಲಿನ ಸನಿಕ ... ಮುಸ್ಲಿಮರಿಂದಲೇ ... ಎಷ್ಟು ... ಬೇಕೆಂಬುದನ್ನು ... ರವರಲ್ಲಿ ಜವಾಹಿರ ... ಸಭೆಯಾಯಿತು ಎಲ್ಲರೂ ಮೌಲ್ವಿಗಳು; ಧರ್ಮಾಧಿಕಾರಿಗಳು. ಇವರು ಕಾಂಗ್ರೆಸ ಸೇರಬೇಕೆಂದೇ ಠರಾವು ಪಾಸು ಮಾಡಿದ್ದಾರೆ. ಆ ಠರಾವು ಬಹುಮತವಾಗಿ ಒಂದೇ ಪಾಸಾಯಿತು. ಈ ಠರಾವಿನಿಂದ ಹಿಂದುಸ್ಥಾನದ ಕೋಟಿ ಮುಸಲಮಾನರಲ್ಲಿ ಜಾಗೃತಿಯಾಗಿದ್ದು, ಕಾಂಗ್ರೆಸದ ... ರಾಜಕೀಯ ... ಯುಂಟಾಗಿದೆಂಬುದು ಸಂತೋಷವು ... ಯಲ್ಲಿ ಮುಸಲಮಾನರ ಪ್ರಚಂಡ ಸಭೆಯಾಗಿ, ಕಾಂಗ್ರೆಸ ಕೂಡಬೇಕೆಂಬ ಗೊತ್ತುವಳಿಯಾಯಿತು. ಡಾಕ್ಟರ ... ಜನ್ನ ... ದಾವೂದ ... ವರ ದಸ್ತಗಿರಿ ಮತ್ತು ಶಿಕ್ಷೆಗಳಿಂದ ಇಂಗ್ಲಿಷ ಅಧಿಕಾರಿಗಳು ಹಿಂದೂ ಮುಸಲಮಾನರಲ್ಲಿ ಭೇದ ಮಾಡುವದಿಲ್ಲೆಂದು ಮನಗಂಡ ಬಳಿಕ, ಮುಸಲಮಾನರು ಹಿಂದೂ ಜನರಿಂದ ... ಇರುವದು ... ಸರಿ. ... ಮಟ್ಟಿಗೆ ... ಮಾಡಿದರೂ, ಮಹಾತ್ಮರನ್ನು, ಅಬ್ಬಾಸ ತಯಬಜಿಯವರನ್ನೂ ಹಿಡಿದಾಗ ಮುಂಬಯಿ ಮತ್ತು ಗದಗಿನಂಥ ದೊಡ್ಡ ಊರುಗಳಲ್ಲಿ ಮುಸಲಮಾನರು ಹರತಾಳದಲ್ಲಿ ಸೇರಿದರು. ಇದರಿಂದ ಕಾಂಗ್ರೆಸಕ್ಕೆ ಸಂಪೂರ್ಣ ಸಹಾನುಭೂತಿಯುಂಟೆಂಬುದು ಸ್ಪಷ್ಟವಾಗುತ್ತದೆ. ಎಷ್ಟು ಪ್ರಮಾಣ ಶೀಘ್ರವಾಗಿ, ಧರಾಸಣಕಾರರಾಗಿ ಮುಂದೆ ಬಂದರೆ ಸ ಪೂರ್ಣ ಕಾಂಗ್ರೆಸದ ದೀಕ್ಷೆ ತಕ್ಕೊಂಡಂತಾಗುತ್ತದೆ.

ಜಡ್ಜ ತಯಬಜಿಯವರಿಗೆ ಆರು ತಿಂಗಳ ಶಿಕ್ಷೆ.
೫೮ ಹ್ಯಾಂಟಿಯರಿಗೆ ಮೂರು ಮೂರು ತಿಂಗಳ ಶಿಕ್ಷೆ.

ಮಹಾತ್ಮರ ತರುವಾಯ ಎರಡನೇ ಅಂದರೆ ಧರಾಸಣದ ಯುದ್ಧದ ತರುವಾಯ ಶ್ರೀ ... ಜಡ್ಜ ತಯಬಜಿಯವರು ೧೨ ನೆಯ ತಾರೀಖಿನ ದಿವಸ ಕರಾಡಿಯಿಂದ ಹೊರಟು, ಧರಾಸಣಕ್ಕೆ ಹೋಗಿ ಉಪ್ಪಿನ ಉಗ್ರಾಣವನ್ನು ಸ್ವಾಧೀನ ಮಾಡಿಕೊಳ್ಳುವ ಪೂರ್ವಸಿದ್ಧತೆ ಮಾಡಿದ್ದರಷ್ಟೇ; ಈ ಮೇಲೆ ತತ್ಸಂಬಂಧವಾದ ನಾಳಿನ ವಿವರವಾಗತಕ್ಕದ್ದಿತ್ತು. ಇಲ್ಲಿ ದಾಳಿ ಬರುವದೆಂದು ಸರಕಾರದವರು ಮುಂದಾಗಿ ಸಕ್ತ ಪೋಲೀಸರ ಬಂದೋಬಸ್ತು ಮಾಡಿದ್ದಲ್ಲದೆ, ಸುತ್ತಲು ತಂತಿಗಳ ಬೇಲೀ ಕಟ್ಟಿದ್ದಾರೆ ಯುದ್ಧ ಕಾಲದಲ್ಲಿ ಸೈನ್ಯವು ಬಂದಂತೆ ಮಾಡುವಂಥ ಕಠಿಣತೆಯಾಯಿತು. ... ದಲ್ಲಿ ಈ ತೆರವಾಗಿ ವ್ಯವಸ್ಥೆ ಮಾಡಿದ್ದರೂ, ಪರಿಪಂಥಿಗಳನ್ನು ಇಲ್ಲಿಯ ತನಕ ಬರಗೊಡಲೇ ಇಲ್ಲ. ಜಡ್ಜರು ಮಹಾತ್ಮರ ಸ್ವಯಂಸೇವಕರೊಂದಿಗೆ ಕರಾಡಿಯಿಂದ ಹೊರಡುವಾಗ, ಶ್ರೀ. ಕಸ್ತೂರಬಾಯಿ ಮತ್ತು ಶ್ರೀ ಕಮಲಾಬಾಯಿ ಚಟ್ಟೋಪಾಧ್ಯಾಯಿಯವರಿದ್ದರು. ಇವರು ಊರು ಬಿಟ್ಟು ಜೊತೆಗೆ ಬಂದರು. ಕೂಡಲೆ ಮ... ರು ಪೋಲೀಸರೊಂದಿಗೆ ಅಧಿಕಾರಿಗಳು ಬಂದು, ಇವರನ್ನು ಮತ್ತು ನಟ್ಟಿದರು. ... ಹ್ಯಾಂಟಿಯರಿಗೆ ನೀವು ಹಿಂದಕ್ಕೆ ಸರಿದರೆ ನಿಮ್ಮನ್ನು ಹಿಡಿಯುವದಿಲ್ಲೆಂದು ... ಅದಕ್ಕೆ ಒಪ್ಪದಾಗ - ಪೋಲೀಸರು ಅವರು ಸಹಿತವಾಗಿ ಜಡ್ಜಸಾಹೇಬರನ್ನು ಹಿಡಿದು, ಸವಸಾಗಿ ಕರಕೊಂಡು ಹೋದರು. ಆಗ ಶ್ರೀ ಕಸ್ತೂರಬಾಯಿ ಮತ್ತು ಶ್ರೀ. ಕಮಲಾದೇವಿಯವರು ತಮ್ಮನ್ನೂ ಹಿಡಿಯಬೇಕೆಂದು ಪೋಲೀಸರ ಎದುರಿಗೆ ... ಸ್ತ್ರೀಯರಿಗೆ ಯೋಗ್ಯವಾದ ರೀತಿಯಿಂದ ... ಪೋಲೀಸರು ನಿಮ್ಮನ್ನು ಹಿಡಿಯುವದಿಲ್ಲೆಂದು ಹೇಳಿ, ಮಾರೀ ಹಿಡಿದರು. ನವಸಾರಿಯಲ್ಲಿ ಮ್ಯಾಜಿಸ್ಟ್ರೇಟರ ... ಸಿದ್ಧರಾಗಿಯೇ ನಿಂತಿದ್ದರು. ಈಗಿನ ನ್ಯಾಯ ವಿಚಾರ ... ಎಲ್ಲಿಗೆ ... ಹಸ್ತವದಕ್ಕಿಂತ ... ಕರಿಸಿ ... ಮ್ಯಾಜಿಸ್ಟ್ರೇಟರು ಎಪ್ಪತ್ತು ವರ್ಷದ ಮುದುಕರಾದ ಜಡ್ಜರಿಗೆ ಆರು ತಿಂಗಳ ಹಾಗು ೫೮ ಹ್ಯಾಂಟಿಯರಿಗೆ ಮೂರು ಮೂರು ತಿಂಗಳ ಸಕ್ತ ... ಶಿಕ್ಷೆ ವಿಧಿಸಿದರು. ಉಳಿದ ಜನರಿಗೆ ತಕರಾರು ಮಾಡದೆ ಬಿಟ್ಟು ಬಿಟ್ಟರು.

ಪುಣೆಯ ಗುಪ್ತ ಪೋಲೀಸನು ಸತ್ಯಾಗ್ರಹಿಯಾದನು.

ಪುಣೆಯಲ್ಲಿ ಇನಾಮದಾರನೆಂಬವನು ಗುಪ್ತ ಪೋಲೀಸ ಕೆಲಸದಲ್ಲಿ ಹವಾಲದಾರನಾಗಿದ್ದನು. ಆತನು ರಾಜೀನಾಮೆ ಕೊಟ್ಟು ಸತ್ಯಾಗ್ರಹಿಯಾಗಿದ್ದಾನೆ. ಪುಣೆಯಲ್ಲಿಯ ಎಲ್ಲ ಶಕ್ತಿ ಬಾದಶಾಹಿಗಳನ್ನು ಕೊಡಿಹಾಕಿ, ಬ್ರಿಟಿಶರ ಕೂಡ ಯುದ್ಧಕ್ಕೆ ಸಿದ್ಧರಾಗಿರೆಂದು ಅಲ್ಲಲ್ಲಿ ಕೆಂಪ ಮಸಿಯಿಂದ ಮುದ್ರಿಸಿದ ಹಸ್ತಪತ್ರಿಕೆಗಳನ್ನು ಹಚ್ಚಿದ್ದನು. ಇದರ ಕೆಳಗೆ ಹಿಂದುಸ್ಥಾನದ ಸ್ವಾತಂತ್ರ್ಯದ ಸೇನಾಧಿಪತಿ ಎಂದು ಸಹಿಯುಂಟು. ಪೋಲೀಸರು ಇವುಗಳ ಫೋಟೋ ತಕ್ಕೊಂಡರು. ಜನರು ಉಳಿದವನ್ನು ಹರಿದು ಹಾಕಿದರು.

ಶ್ರೀ. ಕಮಲಾದೇವಿಗೆ ಶಿಕ್ಷೆ.

ಧಾರವಾಡದ ಪಕ್ಕದ ದೇವಿ ಸಗೋಜನಿ ಮನೆಯನ್ನು ... ನೀರಿಲ್ಲದೆ ಕೆಂಡದ ... ನ್ನಾಗ, ಮುಂಬಯಿಯಲ್ಲಿ ಪೋಲೀಸರು ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯರವರನ್ನು ಹಿಡಿದು, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಇವರಿಗೆ ಆರು ತಿಂಗಳು ಸಾದಾ ಕೈದು, ... (೧೫೦ ರೂಪಾಯಿ) ದಂಡದ ಶಿಕ್ಷೆ ವಿಧಿಸಿದರು.

ಹಸ್ತಿ ಕೊಡಬಾರದೆಂದು ಬಾಗಡೋಲಿ ರೈತರ ಸತ್ಯಪ್ರತಿಜ್ಞೆ.

"ಸಂಕಾರದವರು ತಮಗೆ ಬೇಕಾದ್ದಕ್ಕಿಂತ ಹೆಚ್ಚು ಪ್ರಿಯರಾದಂಥ ಸರದಾರ ವಲ್ಲಭಭಾಯಿ ಪಟೇಲರನ್ನು ತುರಂಗದಲ್ಲಿ ಹಾಕಿದರು. ಬಾರಡೋಲಿ ತಾಲೂಕಿನ ಅನೇಕ ಪವಿತ್ರಾತ್ಮಗಳನ್ನು ಸೆರೆಯಲ್ಲಿಟ್ಟಿದ್ದಾರೆ. ಅನೇಕ ಮುಖಂಡರು ಬಂದಿವಾಸ ಅನುಭವಿಸುತ್ತಿದ್ದಾರೆ. ಹಿಂದುಸ್ಥಾನದ ಹೃದಯ, ಜಿ. ವಾಕ್ಕ ಮತ್ತು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠರಾದ ಮಹಾತ್ಮರನ್ನು ಹಿಡಿದು ಹಾಕಿದರು. ಇವೆಲ್ಲ ಅನ್ಯಾಯಗಳನ್ನು ನಾವು ಬಾರಡೋಲಿಯ ರೈತರು ಸಹನ ಮಾಡಲಾರೆವು. ಆದುದರಿಂದ ನಾವು ಇಂದು ಕೂಡಿದ ಸಭೆಯಲ್ಲಿ ಸಂಕಾರದ ಹಸ್ತಿಯನ್ನು ಕೊಡಬಾರದೆಂದು ಭೀಷ್ಮಪ್ರತಿಜ್ಞೆ ಮಾಡುತ್ತೇವೆ. ಈ ಪ್ರತಿಜ್ಞೆಯಲ್ಲಿ ಸರಕಾರದ ಜಮಲದಾರರು ನಮಗೆ ತರುವ ಎಲ್ಲ ಕಷ್ಟನಷ್ಟ ತಾಪಗಳನ್ನು ಸಹನ ಮಾಡುವೆವು. ತುರಂಗದಲ್ಲಿ ಹಾಕಿದರೆ ಸ್ವಾನದ ಜಂ ಪ ಜಂಗೆಯನ್ನು ಜಪ್ತ ಮಾಡಿದರೆ, ಅಥವಾ ಜೀವ ಹೋಗುವ ಪ್ರಸಂಗ ಬಂದರೆ ಎಲ್ಲಕ್ಕೂ ಸಿದ್ಧರಾಗಿದ್ದೇವೆ. ಸರದಾರ ಪಟೇಲ ಅಥವಾ ಮಹಾತ್ಮರು ಹಸ್ತಿ ಕೊಡಬೇಕೆಂದು ಹೇಳಿದರೆ ಮಾತ್ರ ಕೊಡುವೆವು. ಅಳಿಯರ ದಬ್ಬಾಳಿಕೆಗೆ ಹೆದರಿ ಎಂದೆಂದಿಗೂ ಕೊಡತಕ್ಕವರಲ್ಲೆಂದು ರೈತರು ಶನಿವಾರ ಹತ್ತನೆಯ ತಾರೀಖಿನ ದಿವಸ ಬಾರಡೋಲಿಯಲ್ಲಿ ಸ್ವರಾಜ್ಯಾಶ್ರಮದಲ್ಲಿ ಮಹಾತ್ಮರ ತರುವಾಯ ದಳಪತಿಯಾದ ಶ್ರೀ. ಅಬ್ಬಾಸ ತಯಾಬಜಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಠರಾವು ಮಾಡಿದ್ದಾರೆ."

ಸರಕಾರೀ ಶಾಮೀದಾರರನ್ನು

ವಾಳಿ ಮಾಡುವರು.

ರೈತರು ಸತ್ಯಾಗ್ರಹದ ವೀರಪ್ರತಿಜ್ಞೆ ಮಾಡಿದಾಗ ಸರಕಾರೀ ಶಾಮೀದಾರರು ಕೆಲಸದಲ್ಲಿರುವದರಿಂದ, ಪ್ರಜಾರನ್ನು ಕೊಂದರೆ ಪಡಸಲು ದ-ರಿಯಾಗುತ್ತದೆ. ಆದ್ದರಿಂದ ಇಂಥ ಸಂಕಟದ ಪರಿಸ್ಥಿತಿಯಲ್ಲಿ ಕಾನಪೇಗ ಸ್ನ ಪಾರ್ಟಿಯ, ತಾಲೂಕಿನ ಎಲ್ಲ ಶಾನುಭೋಗರು ರಾಜೀನಾಮೆ ಕೊಡಬೇಕು. ಪ್ರತಿಯೊಂದು ಹಳ್ಳಿಯ ವ-ು, ಜಾತಿ ಜಾತಿಗಳ ಪಂಚರು, ಮುಖ್ಯ ಜನರು ಈ ಜನರಿಗೆ ಮುಂದಾಗಿ ತಾಕೀದು ಕೊಡತಕ್ಕದ್ದು. ಈ ಎಚ್ಚರಿಕೆಗೆ ಅವರು ಸೊಪ್ಪು ಹಾಕದಾದರೆ ಅವರನ್ನು ಕುಲದಿಂದ ಹೊರಗೆ ಇಟ್ಟು, ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲ್ಪಡುವದು.

ರೈತರಿಗೆ ಶ್ರೀ. ತಯ್ಯಬಜಿಯವರ ಉಪದೇಶ.

ಅಧ್ಯಕ್ಷರಾದ ಶ್ರೀ. ತಯ್ಯಬಜಿಯವರು ರೈತರಿಗೆ ಉ ದೇಶ ಮಾಡಿದ್ದೇನಂದರೆ-

ರೈತರು ತಮ್ಮ ಹೊಲಗಳ ದೆಸೆಯಿಂದಲೂ ಸತ್ಯಾಗ್ರಹದ ಶಿಕ್ಷಣ ಪಡೆಯುವದು ಅವಶ್ಯವಾಗಿರುತ್ತದೆ. ಶಿಸ್ತ ಹಣ (ಹಸ್ತಿ) ಉಳಿಸಿಕೊಳ್ಳುವದಕ್ಕಾಗಿ ಈ ಮೊದಲು ಸತ್ಯಾಗ್ರಹದ ತಾಲೀಮು ನಾಡಿದ್ದೀರಿ. ಸಂಕಾರವು ಏನೇನು ಮಾಡಲು ಸಮರ್ಥವಾಗಿರುತ್ತದೆಂಬದನ್ನು ನೀವು ಬಲ್ಲಿರಿ. ಸಂಕಾರದವರು ನಿಮ್ಮ ಹೊಲಗಳನ್ನು ಭಾಗ ಪಟ ಮಾಡಿದರೆ ಅದು ಕಾಗದದಲ್ಲಿ ಮಾತ್ರ ಉಳಿಯುವದು. ನಿಮ್ಮ ಹೊಲಗಳನ್ನು ಲಿಲಾವಿಗೆ ಹಚ್ಚಿದರೆ ಯಾವನೂ ಸವಾಲು ಮಾಡಲಾರನು. ಯಾವನೊಬ್ಬನು ಸವಾಲು ಮಾಡಿ, ಕಕ್ಕೊಂಡರೆ ಅದನ್ನು ಹರಗಿ ಬಿತ್ತುವ ರೈತನು ದೊರೆಯಲಾರನು. ಈ ಠರಾವಿನ ವಿರುದ್ಧ ಯಾವನಾದರೂ ನಡೆದರೆ ಅವನನ್ನು ಕುಲದಿಂದ ಹೊರಗೆ ಇಡತಕ್ಕದ್ದು.

ಖೇಡ ಜಿಲ್ಹೆಯಲ್ಲಿಯೂ ಹಸ್ತಿ ಕೊಡ

ಬಾರದೆಂಬ ಚಳವಳಿಯು

ಶ್ರೀ. ದಾದುಭಾಯಿ ದೇಸಾಯಿಯವರು ಕೌನ್ಸಿಲ ಮೆಂಬರಾಗಿದ್ದರು. ಅವರು ದಸ್ತಾವೇಜಿಯನ್ನು ನಿಷೇಧಿಸಿ ರಾಜೀನಾಮೆ ಕೊಟ್ಟದ್ದು, ಕರಬಂದಿಯ ಚಳವಳಿಯಲ್ಲಿ ಪ್ರಮುಖ ಭಾಗ ತಕ್ಕೊಂಡಿದ್ದಾರೆ. ಇವರು ಖೇಡ ಜಿಲ್ಹೆಯ ಪ್ರಮುಖ ಜನರ ಪರಿಷತ್ತನ್ನು ಬೇಗನೆ ಕೂಡ್ರಿಸಿ, ಇಡೀ ಜಿಲ್ಹೆಯ ರೈತರು ಹಸ್ತಿ ಕೊಡಬಾರದೆಂಬ ಕೋಲಾಹಲವನ್ನೆಬ್ಬಿಸಬೇಕೆಂದಿದ್ದಾರೆ.

ಜಂಬೂಸರವು ಬಾರಡೋಲಿಯನ್ನು

ಹಿಂಬಾಲಿಸಿತು.

ಬಡೋದೆ ಜಿಲ್ಹೆಗೆ ಸೇರಿದ ಜಂಬೂಸರ ತಾಲೂಕಿನ ನೂರುವತ್ತು ಗ್ರಾಮಗಳ ರೈತರು ಸರಕಾರೀ ಹಸ್ತಿ ಕೊಡಬಾರದೆಂಬ ಠರಾವ ಮಾಡಿದ್ದಾರೆ. ಹಸ್ತಿ ಕೊಡಬಾರದೆಂಬ ಬೇಗೆಯು ಇಡೀ ಗುಜರಾಥದಲ್ಲಿ ಹಬ್ಬುವದೆಂದು ಈ ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

ಶ್ರೀ. ಹೊಸಮನೆಯ ಸಿದ್ದಪ್ಪನವರ

ಮಹತ್ವದ ಭಾಷಣವು.

ಬೆಳಗಾವಿಯಲ್ಲಿ ಸೇರಿದ ಬ್ರಾಹ್ಮಣೇತರ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಹೊಸಮನೆಯ ಸಿದ್ದಪ್ಪನವರು ಮಹತ್ವದ ಭಾಷಣ ಮಾಡಿದ್ದು ಅದರ ಮುಖ್ಯಾಂಶಗಳನ್ನು ಇದರಡಿ ಕೊಡುತ್ತೇವೆ.

೧ ಪ್ರತಿಯೊಂದು ಜನಾಂಗದಲ್ಲಿ ಸಾಕಷ್ಟು ಜಾಗ್ರತಿಯಾಗಿರುವದರಿಂದ ಇನ್ನು ಮುಂದೆ ಬ್ರಾಹ್ಮಣೇತರವೆಂಬ ಹೆಸರು ನಿರರ್ಥಕವು.

೨ ಬ್ರಾಹ್ಮಣೇತರವೆಂದರೆ ಬ್ರಾಹ್ಮಣರನ್ನು ಬಿಟ್ಟು ಬ್ರಾಹ್ಮಣೇತರ ಇದರ ಅರ್ಥವನ್ನು ನಿಶ್ಚಿತವಾಗಿ ಇಂಥದೇ ಎಂದು ಹೇಳುವಂತಿಲ್ಲ. ಇದನ್ನು ರೂಢಿಯಲ್ಲಿ ತರುವದೆಂದರೆ ರಾಜಕಾರಣದಲ್ಲಿ ಜಾತಿಭೇದವನ್ನು ಒಪ್ಪಿದ ಹಾಗಾಗುತ್ತದೆ. ರಾಜ್ಯಾಡಳಿತ ಪುನರುಜ್ಜೀವನಕ್ಕಾಗಿ ಪ್ರತಿಯೊಬ್ಬ ಹಿಂದೂ ಪುತ್ರನು ಜಾತಿಭೇದದ ಭಾವನೆಯನ್ನು ಮೂಲೆಗೊತ್ತುವ ಸಮಯ ಬಂದಿದೆ. ಆದ್ದರಿಂದ ಕರ್ನಾಟಕ ಪ್ರಜಾಪಕ್ಷವೆಂದು ಕರೆದುಕೊಳ್ಳುವದು ಹೆಚ್ಚು ಸಮಂಜಸವೆಂದು ನನಗೆ ತೋರುವದು.

೩ ಇಲ್ಲಿಯ ವರೆಗೆ ಜಾತಿಭೇದದ ತಪ್ಪು ತಿಳುವಳಿಕೆಯಲ್ಲಿ ನಾವು ವ್ಯರ್ಥ ಹೋರಾಡಿದೆವು. ಔದ್ಯೋಗಿಕ ದೇಶಗಳಲ್ಲಿ ಶ್ರೀಮಂತ, ಸಾಹುಕಾರ, ಕೂಲಿಕಾರ ಹೀಗೆ ಜಾತಿಭೇದಗಳಿಗೆ ಅಸ್ಪದವಿದ್ದರೂ, ಒಕ್ಕಲತನದಿಂದ ಜೀವಿಸುವ ಭರತಖಂಡದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಭೇದವನ್ನು ಸಹಜವಾಗಿ ಇಲ್ಲದಂತೆ ಮಾಡಬಹುದು.

೪ ಮಾಂಟೆಗ್ಯು- ಚೆಮ್ಸಫೋರ್ಡ ಸುಧಾರಣೆಗಳನ್ನು ಸ್ವೀಕರಿಸಿ, ಮಹಾರಾಜರೂ, ಬ್ರಾಹ್ಮಣೇತರರೂ ಗುದ್ದಾಡಿ ತಪ್ಪು ಮಾಡಿದರೆಂದು ನನಗೆ ಅನಿಸುತ್ತದೆ. ಇವು ಹೆಚ್ಚು ಬೆಣ್ಣೆವನ್ನು ರೈತನ ಮೇಲೆ ಹೇರಿ, ಅವನ ಹಿತವನ್ನು ಬಿಟ್ಟು ಎಲ್ಲವನ್ನು ಬಯಸುವಂಥವು. ವಿದ್ಯಾಖಾತೆಯ ಮಂತ್ರಿಯು ಮದ್ಯಪಾನ ಪ್ರತಿಬಂಧ ಮಾಡಬೇಕೆಂದರೆ ಶಿಕ್ಷಣ ಖಾತೆಯನ್ನು ಬಂದು ಮಾಡಬೇಕು. ಮಾಂಟೆಗ್ಯು ಸುಧಾರಣೆಗಳು ದೇಶಕ್ಕೆ ತಂದು ಕೊಟ್ಟಂಥ ಹಿತದ ಇದೊಂದು ಮಾದರಿಯು.

೫ ೧೯೧೯ ರಲ್ಲಿಯ ಸುಧಾರಣೆಗಳಲ್ಲಿಯ ಅಂತರ್ಗತವಾದ ಕುಂದುಗಳು ಬ್ರಾಹ್ಮಣೇತರರಿಗೂ ಮುಂದ ಪಕ್ಷದವರಿಗೂ ನಾವು ಒಪ್ಪಲೇಬೇಕು. ಜವಾಬ ಹೀಗು ಸ್ವಲ್ಪಾದರೂ ಸಾಧಿಸಬಹುದೆಂಬ ಆಸೆಯಿಂದ ಜನತೆಯ ವಿರೋಧವನ್ನು ಲೆಕ್ಕಿಸದೆ, ಸರಕಾರಕ್ಕೆ ಸಂಪೂರ್ಣ ಬೆಂಬಲವನ್ನು ಕೊಟ್ಟೆವು. ಆದರೇನು? ಸುಧಾರಣೆಯ ಸುಖವು ಹೀಗೆ ಸಿಕ್ಕಿತು.

೬ ದಂಡಿನ ಖಾತೆಗೆ ಅನವಶ್ಯಕವಾಗಿ ಹೆಚ್ಚಾಗಿ ವಿನಿಯೋಗಿಸಲ್ಪಡುವ ಹಣವನ್ನು ಮತ್ತು ಕಲೆಕ್ಟರ ಮೊದಲಾದ ಜನರ ಸಂಬಳವನ್ನು ಕಡಿಮೆ ಮಾಡಬೇಕೆಂದು ನಮ್ಮ ಬಲವಾದ ಇಚ್ಛೆ ಇದ್ದರೂ ಇವುಗಳ ಬಗ್ಗೆ ನಮಗೆ ವಿಷಯ ಮಾಡಲಿಕ್ಕೆ ಬರುವದಿಲ್ಲ. ಏಕೆಂದರೆ ಇವು ರಾಖೀವ ಖಾತೆಗಳು.

೭ ಯುರೋಪಿಯನ್ನರು ಅವೇಳಿಕೆಯ ಪ್ರತಿಕರಂದಬೇಡಿಯಾಗಿ ರಾಜ್ಯಸೂತ್ರವನ್ನು ನಡಿಸಲು ಸಮರ್ಥರಾದಂತೆ ಉಚ್ಚ ಸಂಸ್ಕೃತಿಯುಳ್ಳ ಹಿಂದೀಯರು ರಾಜ್ಯಭಾರವನ್ನು ಹೊರಲು ಅಸಮರ್ಥರಿರುವರೆಂದು ಸಾರುವದು ಶುದ್ಧ ತಪ್ಪು. ಬಹುಕಾಲದ ಗುಲಾಮಗಿರಿಯಿಂದ ಇಂಗ್ಲೆಂಡಿಗೆ ಇಂದ ಪರೆಯಿಂದ ಮಾದ ಪಕ್ಷದವರು ಪೂರ್ಣ ಸ್ವಾತಂತ್ರ್ಯವು ಭಯಾನಕವೆಂದು ಸಾರಿ ಸಾಮಂತ ಸ್ವರಾಜ್ಯವನ್ನು ದೊರಕಿಸಬಹುದೆಂದು ತಿಳಿಯುತ್ತಾರೆ.

೮ ಈಗಿನ ಆಳಿಕೆಯು ಬದಲಾದ ಹೊರ್ತು ಜನತೆಗೆ ಆರ್ಥಿಕ ಸುಖದ ಸಂಭವವೇ ಇಲ್ಲ. ತಾರಣ ಸದ್ಯದ ರಾಜ್ಯಕಾರಭಾರವು ಬಡ ರೈತನ ಮೇಲೆ ಹೊರಲಾರದಷ್ಟು ಕಂದಾಯದ ಭಾರವನ್ನು ಹೇರಿದೆ

೯ ಹಿಂದುಸ್ಥಾನಕ್ಕೆ ಸಾಮಂತ ಸ್ವರಾಜ್ಯವು ಬೇಗ ಸಿಗುವ ಯಾವ ತರದ ಚಿಹ್ನವೂ ಇರುವದಿಲ್ಲ. ಹತ್ತು ವರ್ಷಗಳ ಹಿಂದೆ ೧೯೩೦ರಲ್ಲಿ ಸಿಗುವದೆಂದು ಬಲವಾದ ಆಶೆಯಿತ್ತು. ಅದು ಈಗ ಮೊದಲಿನಷ್ಟು ಇಲ್ಲವೆ ಅದಕ್ಕೂ ಹೆಚ್ಚು ದೂರ ಸರಿದದೆಂದು ಅನಿಸುತ್ತಿದೆ. ಬಡ ರೈತರು ಮಾತ್ರ ದಿನೇ ದಿನೇ ಸಣ್ಣಾಗುತ್ತಿದ್ದಾರೆ.

೧೦ ಕೆಲವು ಜನರು ಸಾಮಂತ ಸ್ವರಾಜ್ಯ ಹಾಗು ಪೂರ್ಣ ಸ್ವರಾಜ್ಯದಲ್ಲಿ ಕಾಣಬರುವಷ್ಟು ಅಭ್ಯಂತರವಿಲ್ಲೆಂದು ಪ್ರತಿಪಾದಿಸುವರು. ಇಂದಿನವರೆಗೆ ಬ್ರಿಟಿಶರೊಡನೆ ಬೆರೆತ ಅರಿತ ಅನುಭವದಿಂದ ದಾಸ್ಯ ಮತ್ತು ಸ್ವಾತಂತ್ರ್ಯ ಇವುಗಳ ನಡುವೆ ಇರುವಷ್ಟೇ ಭೇದವು ಸಾಮಂತ ಮತ್ತು ಪೂರ್ಣ ಸ್ವರಾಜ್ಯಗಳ ನಡುವೆ ಕಂಡುಬರುತ್ತದೆ

೧೧ ಅಸ್ಪೃಶ್ಯರು ಸಾಮಾಜಿಕ ದೃಷ್ಟಿಯಿಂದ ಮತ್ತು ಹಿಂದೂ ಸಮಾಜವೇ ರಾಜಕೀಯ ದೃಷ್ಟಿಯಿಂದ ಬ್ರಿಟಿಶರಿಗೆ ಅಸ್ಪೃಶ್ಯವಾಗಿದೆ ಅಸ್ಪೃಶ್ಯ, ಮುಸಲಮಾನ ಶೀಖ ಮೊದಲಾದವರು ಕಾಂಗ್ರೆಸಿನ ಕೂಡ ಸಹಕಾರ್ಯ ಮಾಡಿದರೆ ಹಿಂದುಸ್ಥಾನವು ಬ್ರಿಟಿಶರಿಗಿಂತ ಹೆಚ್ಚು ಉದಾರ ಮನಸ್ಸಿನಿಂದ ಅವರ ಸುಖದುಃಖಗಳನ್ನು ನೋಡುವದರಲ್ಲಿ ಸಂದೇಹವಿಲ್ಲ.

೧೨ ಮೇಲಿನ ಸಂಗತಿಗಳನ್ನು ಸಾಂಗೋಪಾಂಗವಾಗಿ ವಿಚಾರಿಸಲಾಗಿ, ನಮಗೆ ಕಾಂಗ್ರೆಸಿನ ಧ್ಯೇಯವನ್ನೇ ಅನುಸರಿಸದೆ ಗತ್ಯಂತರವಿಲ್ಲ. ಮಂದ ಪಕ್ಷದವರು ಏನೇ ಹೇಳಲಿ. ನಾನು ಮಾತ್ರ ಸಂಪೂರ್ಣ ವಿಚಾರದಿಂದ ಕಾಂಗ್ರೆಸಿನ ಧ್ಯೇಯವೇ ಸ್ವೀಕರಿಸಲು ಸಮಂಜಸವಾದುದೆಂದು ಮನಗಂಡಿರುವೆನು

೧೩ ಕರ್ನಾಟಕ ಮಾತೆಯ ಸುಪುತ್ರರಾದ ಶಂಕರ, ರಾಮಾನುಜ, ಬಸವ ಮಧ್ವ ಮತ್ತು ವಿದ್ಯಾರಣ್ಯರ ಹೆಸರಿಗೆ ಕಳಂಕ ತರದಂತೆ ನೀವೆಲ್ಲರೂ ಒಕ್ಕಟ್ಟಾಗಿ ಸ್ವಾತಂತ್ರ್ಯಕ್ಕೆ ಸಿದ್ಧರಾಗ ಬೇಕೆಂದು ಬಲವಾಗಿ ಆಶಿಸುವೆನು.

ಬೆಳಗಾವಿಯಲ್ಲಿ ಕಂಡುಬಂದ ಎರಡು

ಮನೋಜ್ಞಗಳು.

ಹ್ವಾಲಂಟಿಯರರು ಗೆದ್ದು ಗೆದ್ದರು.

ರಾ. ಬ. ಅಂಗಡಿಯವರ ಸ್ವರೂಪ ಪರೀಕ್ಷೆ.

ಕರ್ನಾಟಕದಲ್ಲೆಲ್ಲ ಅದರಂತೆ ಬೆಳಗಾವಿಯಲ್ಲಿಯೂ ೧೧ನೆಯ ತಾರೀಖಿನ ದಿವಸ ವಿಲಂಬಿತಿಯ ಅರಿವೆಯ ಪ್ರದರ್ಶನ ಹೋರಿಸಲಾಯಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಕೆಗಿದ ಜಾಹೀರನಾಮೆ ಬಂದ ಸಾರ್ವಜನಿಕ ಬೀದಿಗಳಲ್ಲಿ ಅರಿವೆಯನ್ನು ಸುಡಲಿಕ್ಕೆ ಬರುವಂತಿಲ್ಲ. ಹ್ವಾಲಂಟಿಯರರು ಈ ಅನ್ಯಾಯದ ಹುಕುಮನ್ನು ಮನ್ನಿಸಲಿಚ್ಛಿಸಲಿಲ್ಲ. ಎರಡು ಕಡೆಗೆ ಸುಡಲಿಕ್ಕೆ ಮಾಡಬೇಕೆಂದು ಗೊತ್ತು ಮಾಡಿದರು. ಪೋಲೀಸ ಅಧಿಕಾರಿಗಳು ಮುಖಂಡರನ್ನು ಕಂಡು, ನೀವು ಹೀಗೇಕೆ ಮಾಡಬೇಕು; ಗುಂಡು ಹಾಕುವ ತೊಂದರೆ ಬರುವದೆಂದು ಬೆದರಿಸಿದರು. ಸ್ವಯಂಸೇವಕ ಬಂಟರು ಇದಕ್ಕೆ ಹೆದರದೆ, ಹೋಳಿಯ ಸಿದ್ಧತೆ ಮಾಡಿದರು. ಪ್ರಚಂಡ ಜನಸಮೂಹ ಕೂಡಿತು. ಬೆಂಕಿ ಹತ್ತಿತು. ಪೋಲೀಸರು ಬಂದರು. ಇವರು ಅರಿಸಬಾರದೆಂದು ಸ್ವಯಂಸೇವಕರು ಒಕ್ಕೀ ಕಟ್ಟಿ ಸುತ್ತಲು ನಿಂತರು. ಆಗ ಇವರಲ್ಲಿ ೩೦ ಜನರನ್ನು ಹಿಡಕೊಂಡು ಹೋಗಿ, ಕೆಲ ಹೊತ್ತಿನ ನಂತರ ೩೧ ಜನರನ್ನು ಬಿಟ್ಟರು. ಈ ಸಂಗತಿಯು ಸಂಭವಿಸಿದ ನಂತರ, ಎರಡನೆಯ ಕಡೆಗೆ ದೊಡ್ಡದಾದ ಹೋಳಿ ಮಾಡಿದರು. ಪೋಲೀಸರು ಇಲ್ಲಿಯವರನ್ನು ತಡವಲೇ ಇಲ್ಲ. ಹೀಗೆ ಹ್ವಾಲಂಟಿಯರರು ಪೋಲೀಸರ ಮೇಲೆ ಗೆದ್ದು ಗೆದ್ದರು.

ಬ್ರಾಹ್ಮಣೇತರ ಸಭೆಗೆ ಬಂದಿದ್ದ ಸೂಕ್ಷ್ಮದ ಪ್ರತಿನಿಧಿಗಳಿಗಾಗಿ ಕಿಲ್ಲೆಯಲ್ಲಿ ಉಳಿವದ ವ್ಯವಸ್ಥೆ ಮಾಡಿದ್ದರು. ಅಲ್ಲಿ ಗಾಂಧೀ ಟೊಪ್ಪಿಗೆ ಹಾಕಿದವರನ್ನು ಒಳಗೆ ಬಿಡಬಾರದೆಂದು ಪೋಲೀಸರ ಕಾವಲವು. ೧೦ ಪ್ರತಿನಿಧಿಗಳು ಒಳೇ ಗಾಂಧೀ ಟೊಪ್ಪಿಗೆಯಿಟ್ಟ ಕಸ್ಸಲ್ಲಿ ರಾಷ್ಟ್ರೀಯ ನಿಶಾನೆ ಹಿಡಿದ್ದರು. ಒಂದೇ ವೇಳೆಯಲ್ಲಿ ಎರಡು ಬಂಡಿಗಳ ಲಾಡ್ಡಿನಿಂದ ಪೋಲೀಸರು ಇವರಿಗೆ ಮಜ್ಜಾದ ಮಾಡಿದರು. ಅಷ್ಟರಲ್ಲಿ ರಾ. ಬ. ಅಂಗಡಿಯವರು ಅಲ್ಲಿಗೆ ಬಂದರು. ನಡೆದ ಸಮಾಚಾರ ಕೇಳಿ, ರಾಷ್ಟ್ರೀಯ ಪ್ರತಿನಿಧಿಗಳಿಗೆ ಬಂದು ಬಗಲಲ್ಲಿ ಟೊಪ್ಪಿಗೆ ಹಿಡಿಯಿರಿ; ಇನ್ನಿಂದ ಬಗಲಲ್ಲಿ ರೇಲ್ವೆಯ ಪಾಯಿಂಟ್ಸಮನ್ನರಂತೆ ನಿಶಾನೆ ಸುತ್ತಿ ಹಿಡಕೊಂಡು ಒಳಗೆ ಹೋಗಿರೆಂದು ಇವರಿಗೆ ಬುದ್ಧೀ ಹೇಳಿದರು. ಹಾಗು ಪೋಲೀಸರಿಗೆ ಇವರನ್ನು ಬಿಡಬೇಕೆಂದೂ ಸೂಚಿಸಿದರು. ರಾ. ಬ. ಯವರಿಗೆ, ಎಮ್ ಎಲ್ ಸಿ ಯವರು, ಸಹಕಾರವಾದಿಗಳು. ಪೋಲೀಸರಿಗೆ ಹುಕುಮ ಮಾಡುವ ಅಧಿಕಾರವೆಲ್ಲಿಂದ ? ಪೋಲೀಸರು ಇವರಿಗೆ ನಿಮ್ಮ ಮಾತು ಕೇಳುವದಿಲ್ಲೆಂದು ಬಿಚ್ಚ ಮಾತಿನಿಂದ ಹೇಳಿದರು. ಯೋಗಾಯೋಗವು ಎಂಥದ್ದಾದದ್ದು. ಇದೇ ಸಮಯದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ, ಪೋಲೀಸ ಸಾಹೇಬರೂ ಅಲ್ಲಿಗೆ ಬಂದರು. ಪೋಲೀಸ ಮತ್ತು ರಾ. ಬ. ಸಾಹೇಬರವರಿಗೆ ನಡೆದ ಜಗಳ್ಳಾದ ಕೇಳಿ, ರಾ. ಬ. ಸಾಹೇಬರೆ ನೀವು ನಾನ-ಕೋ-ಆಪರೇಟರಿಗೆ ಅಷ್ಟು ಹಾಕ ಶ್ರೀರಾ ಎಂದು ಪ್ರಶ್ನೆ ಮಾಡಲು. ಹಾಗೇನಿಲ್ಲ. ಅವರು ನಮ್ಮ ಸ್ನೇಹಿತರಿದ್ದಾರೆ. ಅವರಿಗೂ ನಮಗೂ ರಾಜಕೀಯ ಮತಭೇದವು. ಟ. ಎಂಬದಾಗಿ ವಿನಯದಿಂದ ಹೇಳಿಕೊಂಡರೂ ಸಾಹೇಬರು ನೋ ಎಂದು ತಮ್ಮ ಹಟ ಬಿಡಲಿಲ್ಲ. ಹ್ವಾಲಂಟಿಯರರು ಇದೊಂದು ಪಾಂಡವರ ವನವಾಸವೆಂದು ತಿಳಕೊಂಡು, ಅಲ್ಲೇ ಉಳಿದ ತಂಗಿದ್ದರು, ಗಿಡದ ಬುಡಕ್ಕೆ ಕೂತು ಊಟ ಮಾಡಿ ಸಭೆಗೆ ದ ಯ ಮಾ ಡಿ ಸಿ ದ ರು. ತ ಮ್ಮ ದೊಡ್ಡಸ್ಥಿತಿ ನಡೆಯಲಿಲ್ಲೆಂದು ಅಂದುಕೊಂಡು, ರಾ. ಬ. ಯವರು ವಿಷಾದಗೊಂಡು ಊರ ದಾರಿ ಹಿಡಿದರು. ಈ ಸಂಗತಿಯಿಂದ ರಾ. ಬ. ಯವರಿಗೆ ಸರಕಾರದಲ್ಲಿ ತಮ್ಮ ಸಹಕಾರಿತ್ವಕ್ಕಾಗಿ ಎಷ್ಟು ಗೌರವವಿರುತ್ತದೆಂಬುದನ್ನು ತಿಳಕೊಂಡು ಸ್ವಜನರ ಮುಂದಾದ ಅಪಮಾನದ ಮೌಲ್ಯವೆಂದು ರಾವಬಹಾದ್ದೂರ ಮತ್ತು ಕೌನ್ಸಿಲ ಪದಕ್ಕೆ ರಾಜೀನಾಮೆ ಕೊಟ್ಟು ತಮ್ಮ ಮರ್ಯಾದೆ ಕಾಯ್ದುಕೊಳ್ಳಬೇಕೆಂದು ಸೂಚಿಸುವದು ಎಷ್ಟೂ ಅಪ್ರಸ್ತುತವಾಗುವದಿಲ್ಲ.

ಶ್ರೀ. ಹೊಸಮನೆಯ ಸಿದ್ದಪ್ಪನವರ

ಬಹುಮಾನ

ಬೆಳಗಾವಿಯ ಬ್ರಾಹ್ಮಣೇತರ ಸಭೆಯ ಅಧ್ಯಕ್ಷರಾಗಿ ಬ್ರಾಹ್ಮಣೇತರರು ಕಾಂಗ್ರೆಸನ್ನು ಕೂಡಿಕೊಳ್ಳಬೇಕೆಂದು ಗೊತ್ತುಮಾಡಿದನಂತರ ಶ್ರೀ. ಸಿದ್ದಪ್ಪನವರು ಮಂಗಳವಾರ ದಿವಸ ಹುಬ್ಬಳ್ಳಿಗೆ ಬಂದರು ಅಂದು ಸಾಯಂಕಾಲದಲ್ಲಿ ಸಾರ್ವಜನಿಕ ಸಭೆಯಾಗಿ, ಅವರ ಹಾಗು ಬೇರೆ ಬ್ರಾಹ್ಮಣೇತರರ ಬಹುಮಾನ ಮಾಡಲ್ಪಟ್ಟಿತು. ಆಗ ಶ್ರೀ. ಸಿದ್ದಪ್ಪನವರಿಗೆ ಶ್ರೀ. ಸಾಲಿ ರಾಮಚಂದ್ರರಾಯರು ರಚಿಸಿದ ರಾಷ್ಟ್ರಧ್ವಜದ ಪದ್ಯಾವಲಿಯು ಬಹುಮಾನವಾಗಿ ಅರ್ಪಿಸಲ್ಪಟ್ಟಿತು. ಇದೇ ಪ್ರಕಾರ ಕಾಂಗ್ರೆಸ ಕಚೇರಿಯಲ್ಲಿ ಕರ್ನಾಟಕ ಪ್ರಾಂತಿಕ ಕಮೀಟಿಯ ಪಕ್ಷದಿಂದ ಬಹುಮಾನ ಮಾಡಲ್ಪಟ್ಟಿತು. ಶ್ರೀ. ಕೌಜಲಗಿ ಶ್ರೀನಿವಾಸರಾಯರು ಶ್ರೀ. ಹೊಸಮನಿಯವರ ರಾಷ್ಟ್ರೀಯತ್ವದ ವಿಚಾರವನ್ನು ಹೇಳಿ, ಅವರ ಅಭಿನಂದನ ಮಾಡಿ, ಪುಷ್ಪಮಾಲೆಯಿಂದ ಸನ್ಮಾನಿಸಿದರು. ಈ ಸನ್ಮಾನಕ್ಕೆ ಉತ್ತರ ಕೊಡುವಾಗ ಶ್ರೀ. ಹೊಸಮನಿಯವರಿಗೆ ಕುತ್ತಿಗೆ ರಿತ ಉಬ್ಬಿಬಂದು, ಏವಾರು ನಿಮಿಷಗಳವರೆಗೆ ಮಾತಾಡಲಿಕ್ಕೇ ಬರಲಿಲ್ಲ. ಕಣ್ಣಿಗಳಿಂದ ದಳ ದಳ ನೀರಿಳಿದವು. ತರು ಅವರು ಹೇಳಿದರು. "ನಾನು ಮೊದಲಿನಿಂದಲೂ ರಾಷ್ಟ್ರೀಯನೇ ಇದ್ದೇನೆ. ಅದರ ಹಿಂದುಳಿದಿಲ್ಲ. ನನಗೆ ಬೆಳಗಾವಿಯ ಸಭೆಯು ಬಲ ಕೊಟ್ಟಿತು. ಈ ಕಠಾಣ ಸಂದರ್ಭದಲ್ಲಿ ನಾನು ಕಾಂಗ್ರೆಸದ ಯಾವದೊಂದು ಕೆಲಸವನ್ನು ಸಾಧಾರಣ ಸ್ವಯಂಸೇವಕನಂತೆ ಮಾಡಲು ಸಿದ್ಧನಿದ್ದೇನೆಂದು." ಆಶ್ವಾಸನ ಕೊಟ್ಟು ಭಾಷಣ ಮಾಡಿದರು.

ವಕೀಲರ ಖಾದೀ ಮತ್ತು ರಾಷ್ಟ್ರೀಯತ್ವ.

ಕಾರವಾರದಲ್ಲಿ ಸಿಂಧಪ್ರಾಂತದ ವಕೀಲರ ಸಭೆಯು ಸೇರಿ, ಆಗಿನ ದಸ್ತಾವೇಜ, ಮಹಾತ್ಮರ ದಸ್ತಗಿರಿ ಮತ್ತು ಪೆ- ನಾನ್ನನ್ನು ಖಂಡಿಸಿದರು. ಈ ಸಭೆಗೆ ಬಂದ್ದ ವಕೀಲರು ಸಂಪೂರ್ಣ ಖಾದಿಯ ಉಡಿಗೆ ತೊಡಿಗೆ ಮಾಡಿದ್ದಲ್ಲದೆ, ಅಲ್ಲಿರುವಲ್ಲಿ ಕಾಪು ಕಾತ ಪದ್ಯಗಳನ್ನು ರಾಷ್ಟ್ರೀಯ ನಿ ನೆಗಳಿಂದ ಸಿಂಗರಿಸಿದ್ದರು.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಿಕ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ ಮಹಾತ್ಮಾ ವೇಮನ್ನ ಎಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರೆಡ್ಡಿ ಕಂಪನಿ ಲಿಮಿಟೆಡ್

ಎಂಬ ನಾಮಧೇಯದಿಂದ ಒಂದು ಅಂಗಡಿಯನ್ನು ಗದಗ ಶಹರದಲ್ಲಿ ಇದೇ ವರ್ಷ [illegible] ಏಪ್ರಿಲ್ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯು [illegible] ಕಡೆಯಷ್ಟು ದೊಡ್ಡ ಜವಾಬದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಸಲ್ಪಡುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿ (ಕೃಷಿ) ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿವೃದ್ಧಿಯನ್ನು ಬೆಳೆಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಖಾರೀಚೇಲ, ಪತ್ರೀಕಾಳು, ಜಿಮಿಣಿಎಣ್ಣಿ ಕಿರಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೋವಿಯಿಂದ ಕೊಂಡುಕೊಳ್ಳಬೇಕಾಗಿ ವಿನಂತಿಯು. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು, ಹುಂಚಿ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭಕರವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟ ಬಳಿಯಿಂದ ಖರೀದಿ ಮಾಡಲಿಕ್ಕೆ ಕೀಸದಲ್ಲಿ ಯೋಗ್ಯದರದಿಂದ [illegible] ಬರುವದು ಈ ಸಂಬಂಧಿಯನ್ನು ಪ್ರಕರಣಕ್ಕೆ ಬೇಕಾದ ವಿನಂತಿ ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳಿ, ಗೋದಿ, ಜೋಳ, ಶೇಂಗಾ ವಗೈರೆ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂದೂ ಮತ್ತು ಕಾರ್ಯ ಲಾಭಪಡೆಯಬೇಕೆಂದೂ ಇಚ್ಛಿಸುತ್ತೇವೆ.

ಗದಗ. ತಮ್ಮ

ಅಂಗಡಿ ನಂ ೧೭೩೩ — ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ,

ಕಾಟನ್ ಮಾರ್ಕೇಟ ರೋಡ — ಲಕ್ಷ್ಮಣಪ್ಪಾ ಗೋಣೆಪ್ಪಾ ಸಾಹುಕಾರ ವೈಸಚೇರಮನ್ನ,

ವೆಂಕರೆಡ್ಡಿ ಕೃಷ್ಣರೆಡ್ಡಿ ಅರಹುಣಸಿ ಅನುಂಡಿ, ಗದಗ — ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ಪ್ಲೀಡರ,

ಹನುಮರೆಡ್ಡಿ ತಿಮ್ಮರೆಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ — ಧಾರವಾಡ

ಸೂಚನೆ:— ಮಾಲು ಕಳಿಸುವಲ್ಲಿ ಮಾಲಿನ ಮೇಲೆ ಒಕ್ಕಲಿಗರ ವಿಳಾಸವನ್ನು ಬರೆದು ಕೊಡುವದರಲ್ಲಿ ಬರುವದು. ಹೀಗೆ ಒಬ್ಬ ಹಣಕ್ಕೆ ೧೦೦ಕ್ಕೆ ೧ ಕಂಗಳಿಗೆ ೧ ರೂಪಾಯಿಗಿಂತ [illegible] ಬಡ್ಡಿ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ಮಾಲದಲ್ಲಿ [illegible] ಕೇ ಬೆಲೆಯು ಇಲ್ಲವೆ ಗದಗ ಕಾಟನ್ ಮಾರ್ಕೇಟ ಅಸೋಸಿಯೇಶನ್ನದ ಮುಖಾಂತರವಾಗಿ [illegible] ನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸದಲ್ಲಿ ತಿಳಕೊಳ್ಳ ಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ.

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ನೌಕರಿ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಗಾಮಸಾಲ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಅಗಸರ, ಹಡಪದ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ ತಿಳಿಸಲಾದ ಅವಲಂಬಿ ಮೊದಲಾದ ವಿಶ್ವಿಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯೇ ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ನೈತಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸಮಾಜಗಳ ಮುಖಂಡರ ವಿಶ್ವಾಸ ಸಂಪಾದನೆ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲಿಕ್ಕೆ ಮಾಡುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಬಂದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಯೋಗ್ಯತೆ, ಅರ್ಹತೆ, ಅನುಕೂಲತೆ, ಕುಂದುಕೊರತೆಗಳನ್ನು ಬೆಳಗಿಸಲಾದ ಈ ಸಂಘದ ಧೋರಣವು ಮೊಂಬರು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನುಡಿಯುವ ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಹಾಗೂ ನಿಜಾಮ ಪ್ರಾಂತ ಮೊದಲಾದ ಬ್ರಿಟಿಷ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಮೇಲ್ಪಟ್ಟವರು ಸಭಾಸದರು [illegible] ಆಯಾ ತರಗತಿಯ ವಂತಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರು ಆಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವವರು.

ದಾತೃಗಳು. — ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು:— ಮೂವರು. ೧ ನೇ ತರಗತಿ:— ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ

೨ ನೇ ತರಗತಿ:— ಕನಿಷ್ಠ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.

೩ ನೇ ತರಗತಿ:— ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.

೪ ನೇ ತರಗತಿ:— ಕನಿಷ್ಠ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಯಾವತ್ತು ಬಂಧುಭಗಿನಿಯರು ಅವಶ್ಯಕತೆಯಿಂದ ಸಂಘದ ಸಭಾಸದರಾಗಬೇಕೆಂದು ಒಳ್ಳೆ ಆಗ್ರಹದ ವಿನಂತಿಯದೆ.

ದೇವನಗೌಡ ಲಿಂಗನಗೌಡ ಪಾಟೀಲ,

ಬಿ. ಎ. ಎಲ್‌ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ

ಸೆಕ್ರೆಟರಿ.

ಭಕ್ತ ಕಿರಿಗಳು ಈ ಪತ್ರದ ವರ್ಗಣಿದಾರರಿಗಾಗಿ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೇಡಿಯಂ ಲಿವ್ಹರ ವಾಚ



ಮೊದಲಿನ ಕಿಮ್ಮತ್ತು. ರೂ. ೧೫ — ಕೊಡುವ ಕಿಮ್ಮತ್ತು. ರೂ. ೭॥

ಇವುಗಳ ಕಿಮ್ಮತ್ತಿನ ಶಿವಾಯ ಟ. ಖ. ಬೇರೆ

ಒಮ್ಮೆಲೇ ೩ ವಾಚ ಖರೀದಿದರೆ. ಟ. ಖ. ಮಾಫ. ಒಮ್ಮೆಲೇ ೬ ವಾಚ ಕರೀದಿದರೆ ೧ ವಾಚ ಹೆಚ್ಚು. ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು. ಈ ಮಾಜುಗಳು ರಿಲೆಂಡರ ಅಲ್ಲ ಲಿವ್ಹರ ಇರುವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ

ಪೋಸ್ಟ ಬಾಕ್ಸ ನಂ. ೨೩ [illegible]

THE UNITED KARNATAK INSURANCE COMPANY LTD. DHARWAR

ಜನನ ಪ್ರತಿಷ್ಠೆ ಕಾಳಜಿ ತೆಗೆದುಕೊಳ್ಳಬೇಡಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಏಳನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಲೋಕಮಾನ್ಯ ಶ್ರೀನಿವಾಸರಾವ ಕೌಜಲಗಿ ಬಿ. ಎ. ಎಲ್‌ಎಲ್. ಬಿ. ಸರಕಾರಿ ವಕೀಲ ಪಬ್ಲಿಕ್ ಪ್ರಾಸಿಕ್ಯೂಟರ ಧಾರವಾಡ ಚೇರಮನ

೨ ದಾ॥ ವಾಸುದೇವರಾವ ಶ್ರೀನಿವಾಸ ಸಂಜೀವ [illegible] ಎಲ್. ಎಮ್. ಅ್ಯಂಡ ಎಸ್ ಗದಗ

೩ ಮಿ॥ ಶ್ರೀನಿವಾಸರಾವ ಕೆ ಗೋವಿಂದರಾವ ಮುಂಡಲಗಿ ದೇಸಾಯಿ ಬಿ. ಎ. ಅಣ್ಣಿಗೇರಿ

೪ ಮಿ॥ ರಾಮಣ್ಣ [illegible] ಹಳೆ ಹುಬ್ಬಳ್ಳಿ

೫ ಮಿ॥ ಕೃಷ್ಣರಾವ [illegible] ಬಿ. ಎ. ಎಲ್‌ಎಲ್. ಬಿ. ವಕೀಲ ಗದಗ

೬ ಮಿ॥ [illegible] ಬೈಲಹೊಂಗಲ

೭ ಮಿ॥ ಅನಂತರಾವ [illegible] ಬಿ. ಎ. [illegible] ವಕೀಲ ಹುಬ್ಬಳ್ಳಿ

೮ ಮಿ॥ ರಾಮರಾವ [illegible] ಎಲ್. ಎಲ್. ಬಿ. ವಕೀಲ ಧಾರವಾಡ

೯ ಮಿ॥ [illegible] ವ್ಯಾಪಾರಿ ಗದಗ

[illegible] ಈ ಕಂಪನಿಯು [illegible] ಹೊರಗೆ ಕಳಿಸ [illegible] ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ [illegible]

[illegible] ಲಾಭಕರವಾಗಿ [illegible]

K. G. Hulgolkar.

ಸೆಕ್ರೆಟರಿ

ಯು. ಕ. ಇ. ಕಂ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೧ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೧ ರಿಂದ ೧ ರ ವರೆಗೆ

ಚಾಲೂ ಖಾತೆಗಳು — ಖಾಸ [illegible]

ಸೇವಿಂಗ್ಸ ಬ್ಯಾಂಕು — ಒಬ್ಬರ ಹೆಸರಿಂದ ತೆಗೆಯಲ್ಪಡುವದು. ಬಡ್ಡಿಯ ದರ ೩ ರೂ.

ಮುದತಿ ಠೇವುಗಳು — ಒಂದು ವರ್ಷದ ಮುದತಿಯಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡಿಯ ದರ [illegible]

ನೋಟ — [illegible] ಕೊಡಲ್ಪಡುವದು. ಬಡ್ಡಿಯ ದರ [illegible] ನೋಟುಗಳ [illegible] ಕೊಡಲ್ಪಡುವದು. [illegible] ಆಯಾ [illegible] ಮೇರೆಗೆ [illegible] ಕರ್ಜು [illegible] ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವ [illegible] ಮಾಡುವದರಲ್ಲಿಯೂ ಬರುವದು.

[illegible] ಅಧಿಕಾರವಿರುವದು. [illegible] ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಚ್. ರಿಕಾರ್ಡ.

ಏಜಂಟರು.

ತೀವ್ರ ಜ್ವರದ ಭಾಗ ಕ್ಷಯ ರೋಗಗಳು [illegible] ಮನುಷ್ಯನಿಗೆ ಮಧ್ಯ ವಯಸ್ಸಿನಲ್ಲಿಯೇ [illegible] ಮನುಷ್ಯನ [illegible] ತಮ್ಮ [illegible] ಕೇವಲ [illegible]

ಶಕ್ತಿಕಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಪವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ತಧಾತು ಪುಷ್ಟಿ, ನಿರ್ಬಲ ಶರೀರ, ನಿಸ್ತೇಜ ಮನಸ್ಸು ಮಾಂದ್ಯ, ಅಜೀರ್ಣ, ಅಶಕ್ತತೆ, ಆಲಸ್ಯ, ಜುಲಾಬು, ಮೂತ್ರಪ್ರಮೇಹ, ನಿದ್ರಾನಾಶ, ಶಿರೋವೇದನೆ, ನರದೌರ್ಬಲ್ಯ, ಉದರವ್ಯಾಧಿ, ಪಾಂಡು, ಕೆಮ್ಮು, ಉಬ್ಬಸ, ಗ್ರಹಣಿ, ಮೂಲವ್ಯಾಧಿ ಇವೆಲ್ಲ ದೂರವಾಗಿ ಅದರ ಪರಿಣಾಮದಿಂದ ಶರೀರ ಪುಷ್ಟವಾಗುವದು. ಮುಖದ ಕಾಂತಿ, ಬುದ್ಧಿ, ತೇಜಸ್ಸು, ಮನಸ್ಸಿನ ಉತ್ಸಾಹ ಇವೆಲ್ಲ ಹೆಚ್ಚುವವು. [illegible] ಇದರಿಂದ ನಿಜವಾದ ಸುಖಸಾಧನೆಯು ಸಿಗುತ್ತದೆ. ಬೆಂಗಡದ ಮಕ್ಕಳಿಗೂ, ಹೆಂಗಸರಿಗೂ, ಬಾಲಂತಿಯರಿಗೂ ದೊಡ್ಡವರಿಗೂ [illegible] ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧಟೀಕೆ ಮತ್ತು ಸಂಜೆಗೆ ಅರ್ಧಟೀಕೆ ಹಾಲಿನ ಕೂಡ ಅಥವಾ ನೀರಿನ ಕೂಡ ೧೧ ದಿವಸದ ವರೆಗೆ ತೆಗೆದುಕೊಳ್ಳಬೇಕು. ಹತ್ತುದಿನದ ಟಿಕಳಿ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಸ್ವಷ್ಟ. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ.

ಎಲ್ಲ ವೇಳೆಯಲ್ಲಿ ಎಲ್ಲರೂ ದೊಡ್ಡವರಲ್ಲ.

ಬೆಳಗಾವಿಯಲ್ಲಿ ಕೂಡಿದ ಬ್ರಾಹ್ಮಣೇತರ ಸಭೆಗೆ ...

ಬೆಳಗಾವಿಯಲ್ಲಿ ...

ಬೆಳಗಾವಿಯಲ್ಲಿ ...

ಮುದಿವೆಯ ... ಯಿತು

ಹುಟ್ಟುವ ಮಕ್ಕಳಿಗೇತಕ್ಕೆ ವಿಷಪಾನ ಮಾಡಿಸುವಿರಿ?

೨೪ ತೊಲೆಯ ಬಾಟ್ಲಿ ಜೀವದ್ರವ್ಯಸಿ				೬-೦-೦
೧೨	,,	,,	,,	೩-೦-೦
೨೪	,,	,,	ಅಷ್ಟರ	೫-೮-೦
೧೨	,,	,,	,,	೩-೦-೨

ಔಷಧಗಳಲ್ಲಿ ಗುಣವಿಲ್ಲೆಂದು ದೃಢಪಡಿಸಿದವರಿಗೆ ೧೦೦೦ ರೂಪಾಯಿ ಬಹುಮಾನ ಕೊಡಲ್ಪಡುವದು

ನಮ್ಮ ಜೀವದ್ರವ್ಯಸಿಯು ... ಆರೋಗ್ಯವನ್ನುಂಟುಮಾಡಿದೆ ...

... (Diabetes) ...

ಬೆಂಗಳೂರ ಸಿಟಿ ... ಚಿಕ್ಕಮಂಗಳೂರ ...

ನವೀನ ತರದ ಬಯಲಾಟಕ್ಕೆ ಮರುಳಾಗಬೇಡಿರಿ

...

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ

...

ಶ್ರೀ ದತ್ತ ಪ್ರೆಸಿಂಗ್ ಮಿಲ್ ಹುಬ್ಬಳ್ಳಿ.

—(೧)—

—(೭)—

...

WANTED

A Qualified Sanitary Inspector, who has passed the Sanitary Surveyor's Examination to serve under the Byadgi Municipality on a salary of Rs 40-60 per mensem. Candidates should apply with copies of testimonials so as to reach the undersigned on or before the 31st May 1930. Preference will be given to Kanarese knowing Candidates.

Byadgi, 1st May 1930 — M C Shettar, President, Byadgi Municipality

---

ಮೈಸೂರು ಊದುಬತ್ತಿ

...

ದೇವಿ ಸರೋಜಿನಿಯವರ ಹೊಗ ಳುವಂಥ ಧೈರ್ಯಸ್ಥೈರ್ಯ.

ದೇವಿ ಸರೋಜನಿಯವರು ಮಹಾತ್ಮರಂತೆ, ಜಗತ್ಪ್ರಸಿದ್ಧರಾಗಿದ್ದಾರೆ. ಇವರು ಹಿಂದೂ, ಮುಸಲಮಾನ, ಕ್ರಿಶ್ಚನ್ನ, ಬುದ್ಧ ಮೊದಲಾದ ಎಲ್ಲ ಜನಾಂಗಗಳಲ್ಲಿಯೂ, ಎಲ್ಲ ಖಂಡಗಳಲ್ಲಿಯೂ ಮಾನ್ಯರಾಗಿದ್ದಾರೆ. ಕೇವಲ ಒಬ್ಬ ಹೆಣ್ಣು ಮಗಳು ಸತ್ಯಾಗ್ರಹದಲ್ಲಿ ಸೇರಿದಳೆಂದು ನಾಟಕ ಮಾಡಿ ತೋರಿಸಲು ಮಹಾತ್ಮರು ಇವರಿಗೆ ತಮ್ಮ ಶಿಬಿರದ ಕಾಯದೆಭಂಗದ ಅಧಿಕಾರ ಕೊಡಲಿಲ್ಲ. ಜಗತ್ಪ್ರಸಿದ್ಧರಾದಂಥವರು ಈ ಚಳವಳಿಯಲ್ಲಿ ಸೇರಿದ್ದು, ಇವರ ಕೃತ್ಯವು ನ್ಯಾಯವಾದದ್ದೆಂದು ತೋರಿಸುವದಕ್ಕಾಗಿ ಇವರನ್ನು ಸೇರಿಸಿಕೊಂಡಿದ್ದಾರೆ. ದೇವಿಯವರೂ ಮಹಾತ್ಮರಂತೆ ಹಿಂದುಸ್ಥಾನವು ಸಂಪೂರ್ಣ ಸ್ವಾತಂತ್ರ್ಯ ಹೊಂದಬೇಕೆಂಬ ಮತದವರೇ ಆಗಿರುವದರಿಂದ, ಪಾರತಂತ್ರ್ಯವನ್ನು ಕಳೆಯಲು ಇವರು ಬೇಕಾದ ತಾಪಗಳನ್ನು ಸಹಿಸಲು ಸಿದ್ಧರಾಗಿದ್ದಾರೆ.

ದೇವಿಯವರು ೫೦ ಜನ ವ್ಹಾಲಂಟಿಯರರನ್ನು ಕರಕೊಂಡು ಧಾರಾಸಣಕ್ಕೆ ಹೋಗುವಾಗ ಉತ್ತಂಡಿಯ ನಿವಾಸಿಗಳು ಇವರನ್ನು ಬಹು ಸಮಾರಂಭದಿಂದ ಸಾಗಗಳಿಸಿದರು. 'ರಾಷ್ಟ್ರಗೀತ ರಾಷ್ಟ್ರಧ್ವಜವಂದನೆಯಾಗಿ ಪರಸ್ಪರ ವಂದನೆಗಳಾದವು. ಗುಜರಾಥದ ಪೋಲಿಸರು ಕಾಳಗಿಟ್ಟಿದ್ದಾರೆ. ದೇವಿಯವರಿಗಾಗಲಿ, ಸ್ವಯಂಸೇವಕರಿಗಾಗಲಿ ಹೊಡತ ಬಡತ ಕಾತು ಘಾಯವಾದರೆ- ಅವರ ಪ್ರಥಮ ಚಿಕಿತ್ಸೆಗಾಗಿ ಅಹಮದಾಬಾದಿನಿಂದ ಡಾಕ್ಟರ, ಕಂಪೌಂಡರ ಮತ್ತು ನರ್ಸರನ್ನು ಕಳಿಸಿದ್ದರು. ಘಾಯವಾಯವಾಗಲಿಲ್ಲ, ಅದಕ್ಕೂ ಹೆಚ್ಚಿನ ಹಿಂಸೆಯಾಯಿತು. ಪೋಲಿಸರು ಅಥವಾ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹಿಂಸೆಗೆ ಪ್ರತ್ಯಕ್ಷ ಕಾರಣರಾದರೂ ಇಲಿಯ ಪೆಟ್ಟು ಗಣಪತಿಗೆನ್ನುವಂತೆ, ಇದರ ಅಪಕೀರ್ತಿಯು, ಇದರ ಕರೇ ಡಾಂಬರಿನಂಥ ಕಲಂಕವು ಬ್ರಿಟಿಶ ಸಾಮ್ರಾಜ್ಯಕ್ಕೇ ಬಂತೆಂದು ತರ್ಕಿಸಲ್ಪದ ಹೆದರಿಕೆ ಇಲ್ಲದೇ ಹೇಳಬಹುದು.

ಪೋಲಿಸರು ಮಧ್ಯರಾತ್ರಿಯ ಶಾಂತವೇಳೆಯಲ್ಲಿ ಮಹಾತ್ಮರನ್ನು ಹಿಡಿದರು. ಅವರ ಕರುಣಾಯಾ ಜಡ್ಜ ತಯಾಚಿಸುವದನ್ನು ಹಿಡದವರೇ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ, ಆರು ತಿಂಗಳ ಶಿಕ್ಷೆ ವಿಧಿಸಿ, ತುರಂಗಕ್ಕೆ ಕಳಿಸಿದರು. ಇದೇ ಮೇರೆಗೆ ದೇವಿ ಮತ್ತು ಅವರ ವ್ಹಾಲಂಟಿಯರರಿಗೆ ಶಿಕ್ಷೆ ವಿಧಿಸಿದ್ದರೆ- ಯಾರೂ ಆಕ್ಷೇಪ ತಕ್ಕೊಳ್ಳುತ್ತಿದ್ದಿಲ್ಲ ದೋಷ ಕೊಡುತ್ತಿದ್ದಿಲ್ಲ. ಆದರೆ ಅವರನ್ನು ಕಲ್ಪೆದಿಬಿಂದ ನಡಿಸಿಕೊಂಡ ರೀತಿಯೇ ಬೇರೆಯಾಯಿತು. ಧಾರಾಸಣಗಿಂದ ಒಂದ ತಾರಿನ ವರ್ತಮಾನವು ಏನು ಹೇಳುತ್ತದೆಂಬದನ್ನು ನೋಡಿರಿ.

"ದೇವಿ ಸರೋಜನಿಯವರು ೫೦ ಜನ ಸ್ವಯಂಸೇವಕರೊಂದಿಗೆ ಇಡೀ ದಿವಸ ಪೋಲಿಸರು ಅಡ್ಡಗಟ್ಟಿದಲ್ಲಿಯೇ ಇದ್ದರು. ದೇವಿ ಮತ್ತು ಸ್ವಯಂಸೇವಕರಿಗೆ ಇಡೀ ದಿವಸ ಅನ್ನ ಇಲ್ಲವೆ ನೀರು ಸಹ ಸಿಗಲಿಲ್ಲ. ಮತ್ತಿಗೆಯ ಹೊರಗಿದ್ದ ಸ್ವಯಂಸೇವಕರೂ, ಪ್ರೇಕ್ಷಕರೂ ಇವರಿಗೆ ಅನ್ನ ನೀರು ತಂದು ಕೊಡಬೇಕೆಂದರು. ಆದರೆ ಪೋಲಿಸರು ಬಂದು ಮಾಡಿದರು." ಇದು ನಿರ್ದಯತನವೆನಿಸುದದಿಲ್ಲವೇ? ಆರೋಪಿಯು ಸರಕಾರದ ವಶವಾದ ಕೂಡಲೆ, ಆತನಿಗೆ ಅಶನವಸನ ಕೊಡುವ ಹಾಗು ಮಲಮೂತ್ರ ವಿಸರ್ಜನೆಯ ವ್ಯವಸ್ಥೆಯ ಜವಾಬದಾರಿಯು ಕಾಯದೆಯಿಂದಲೇ ಸರಕಾರದ ಮೇಲುಂಟು. ಕಲೇಕ್ಟರ ಮತ್ತು ಪೋಲೀಸಸಾಹೇಬರು ಈ ಜವಾಬದಾರಿಯನ್ನು ಯೋಗ್ಯ ಮತ್ತು ನ್ಯಾಯ ಪದ್ಧತಿಯಿಂದ ಹೇಗೆ ನಿರ್ವಹಿಸದೆಂಬದನ್ನು ಕೇಳಿಸ ಸುದ್ದೀದಾರರು ಹಿಂದುಸ್ಥಾನದಲ್ಲಿ ... ಎಂಬ ಪ್ರಶ್ನೆವು ಸಹಜವಾಗಿ ಹೊಂದುತ್ತದೆ.

ಅನ್ನ ನೀರು ಕೊಡದೆ, ಬಿಸಲು, ಗಾಳಿ, ಇರುಳು ಎಂಬ ವಿಚಾರ ಮಾಡದೆ ಪರಿಸರಿಯೊಂದ ನಿರ್ದಯವೆನಿಸುವಷ್ಟು ತಾಪಕೊಟ್ಟರೂ ಸತ್ಯಾಗ್ರಹಿಗಳು ಎಷ್ಟೂ ಎದೆಗುಂದಲಿಲ್ಲ. ಹುಟ್ಟಿದವರಿಗೆ ಮರಣವುಂಟು. ದೇಶಕಾರ್ಯದಲ್ಲಿ ಅನಾಯಾಸವಾಗಿ ಮರಣ ಒಂದರೆ ಏನಾಯಿತೆಂಬವೂ, ಏಲ ಸ್ವರ್ಗ ಪ್ರಾಪ್ತವಾಗುವದೆಂದೂ ದೃಢವಾದ ತಿಳುವಳಿಕೆಯಿಂದ ದೇವಿಯವರು ಆ ದಿವಸವೆಲ್ಲ ಅಲ್ಲೇ ಅ... ಕೂತರು. ನೀ

ವು ನಮ್ಮ ಕಣಬಿಟ್ಟು ಹೋಗಿರಿ. ತಿರುಗಿ ಮಾತ್ರ ಬರಬೇಡಿರಿ. ಅಂದರೆ ನಿಮ್ಮನ್ನು ಹಿಡಿಯುವದಿಲ್ಲೆಂದು ಪೋಲಿಸರು ಇವರ ವ್ರತಭಂಗಮಾಡುವಂಥ ಶಕುನಿ ನೀತಿಯನ್ನು ಉಪದೇಶಿಸಿದರು. ಈ ಮಾಯಾಜಾಲದಲ್ಲಿ ಇವರು ಸಿಲುಕಲೇ ಇಲ್ಲ. ಪೋಲೀಸರ ಕಲ್ಪನೆಗೆ ಹರಿಯದಂಥ ಖಂತತುಂಡಿನ ಉತ್ತರ ಕೊಟ್ಟರು. ಅವರು ಅಂದದ್ದೇನಂದರೆ-

"ನಾವು ಇಲ್ಲಿಂದ ಕದಲುವದಿಲ್ಲ. ನಮ್ಮ ಹೆಣ ಒಯ್ಯಬೇಕು. ಹಿಡಕೊಂಡು ಹೋಗಬೇಕು ಇಲ್ಲವೆ ಘಾಯವಾದಬಳಿಕ ಹೋಗಬೇಕು. ಅಲ್ಲಿಯತನಕ ಇಲ್ಲೇ ನೆಲ ಹಿಡಿದು ಕೂಡುವೆವು."

ಈ ಉತ್ತರದಿಂದ ಪೋಲಿಸರು ಚಕಿತರಾದರು. ಆದರೆ ಇವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಲಿಲ್ಲ. ಆ ಪ್ರಕಾರ ಗವ್ಹರ್ನರಸಾಹೇಬರ ಹುಕುಮು ಇರಲಿಕ್ಕಿಲ್ಲ. ಅದೇ ದಿವಸ ಪಂಜರದೊಳಗಿನ ಹುಲಿಯಂತೆ ಅಥವಾ ತಗ್ಗಿನಲ್ಲಿ ಕೆಡವಿದ ಕಾಡಾನೆಯಂತೆ ಅನ್ನನೀರಿಲ್ಲದೆ ಬಳಲಿಸಿ, ರಾತ್ರಿಯಲ್ಲಿ ತಾವು ಅನ್ನನೀರಿನ ವ್ಯವಸ್ಥೆ ಮಾಡುವದರ ಬದಲು ಉತ್ತಂಡಿಯವರಿಂದ ಮಾಡಿಸಿದ್ದು ಗರ್ಹಣೀಯವೇ ಗರ್ಹಣೀಯವು. ಇದು ಮೊದಲನೆಯ ದಿವಸದ ವರ್ತನ ಕಥೆಯಾಯಿತು. ಎರಡನೆಯ ದಿವಸದ್ದು ಇನ್ನಂತರ ತಿಳಿಯಬೇಕಾಗಿದೆ.

ಪೋಲಿಸರ ಪಶ್ಚಾತ್ತಾಪ-

ನಡು ರಾತ್ರಿಯ ತನಕ ಅನ್ನ ನೀರು ಕೊಡದ್ದಕ್ಕೆ ಧಾರಾಸಣದ ಪೋಲೀಸರು ದೇವಿಸರೋಜನಿಯವರ ಕ್ಷಮೆ ಬೇಡಿಕೊಂಡರೆಂದೂ ಮರುದಿವಸ ತಾವು ಉಪವಾಸದಿಂದ ಬಳಲಬಾರದೆಂದು ವ್ಹಾಲಂಟಿಯರರು ತಮ್ಮ ಅನ್ನ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡರೆಂದೂ ಪ್ರಸಿದ್ಧವಾಗಿರುತ್ತದೆ.

ಮಂತ್ರಿ ಹರಿಲಾಲ ದೇಸಾಯಿಯವರಿಗೆ ಬಂದ ಪೀಕಲಾಟ

ಶ್ರೀ. ಹರಿಲಾಲ ದೇಸಾಯಿಯವರು ಮುಂಬಯಿ ಸರಕಾರದ ಮಂತ್ರಿಯಾಗಿದ್ದಾರೆ. ದಬ್ಬಾಳಿಕೆ, ಪೋಲಿಸ ಹಿಂಸೆ, ಮುಂತಾದವುಗಳ ದೆಸೆಯಿಂದ ಅಹಮದಾಬಾದಿನವರು ಇವರಿಗೆ ರಾಜೀನಾಮೆ ಕೊಡದಿದ್ದರೆ- ಸಾರ್ವಜನಿಕ ಸಭೆಕೂಡಿಸಿ, ಇವರ ವರ್ತನೆಯನ್ನು ನಿಷೇಧಿಸುವ ಠರಾವು ಪಾಸ ಮಾಡುವರು. ಮತ್ತು ಇವರನ್ನು ಮೆಂಬರರಾಗಿ ಆರಿಸಿದ ಭಾಗದವರು ನಿಮ್ಮಲ್ಲಿ ನಮ್ಮ ವಿಶ್ವಾಸವಿಲ್ಲ, ರಾಜೀನಾಮೆ ಕೊಡಿರೆಂದು ಆಗ್ರಹದಿಂದ ಹೇಳುವರು. ದೇಸಾಯರು ಅಧಿಕಾರದಲ್ಲಿರಬೇಕೆಂಬ ಆಶೆ ಪಡುವರು. ಆದರೆ ಲೋಕಮತದ ವಿರುದ್ಧ ನಡೆಯುವದು ಶಕ್ಯವಿಲ್ಲ.

ಸರಕಾರೀ ಕಾಮದಾರರಿಗೆ ಸರಬರಾಯಿ ಮಾಡಬೇಕೆಂದು ಕಾಯದೆ ಇಲ್ಲ.

ಧಾರವಾಡ ಜಿಲ್ಲೆಯಲ್ಲಿಯೂ ಸರಕಾರೀ ಕಾಮದಾರರಿಗೆ ಸರಬರಾಯಿ ಮಾಡಬಾರದೆಂಬ ಚಳವಳಿ ನಡೆದಿದೆ. ಹಿರೇಕೇರೂರ ತಾಲೂಕ ಚಿಕ್ಕಬಾಸೂರಿಗೆ ಹಾಂಸ್ಥಾನಿಯ ಫೌಜದಾರರು ಹೋದಾಗ, ಅವರಿಗೆ ಚಹಾಕ್ಕೆ ಹಾಲು ಸಿಗಲಿಲ್ಲ ಊಟಕ್ಕೆ ಅನ್ಯ ಪದಾರ್ಥಗಳು ಸಿಗಲಿಲ್ಲ. ಹಾನಗಲ್ಲಿನ ಮಾಮಲೇದಾರರು ಕೆಲೂರಕೊಪ್ಪಕ್ಕೆ ಹೋದರು. ಹಾಲು ಮೊಸರು ಬೆಣ್ಣೆ ಸಿಗಲಿಲ್ಲ. ಮಾಮಲೇದಾರರು ವ್ಹಿಜಿಟ ಪುಸ್ತಕದಲ್ಲಿ ಹೀಗೆ ಬರೆದು ಹೋದರು. ಅನಂತರ ಅಲ್ಲಿಗೆ ಇಲಾಖೆ ಸಾಹೇಬರು ಹೋದರು. ವ್ಹಿಜಿಟ ಪುಸ್ತಕದಲ್ಲಿ ಮಾಮಲೇದಾರರು ಬರೆದದ್ದನ್ನು ಓದಿ, "ಅಧಿಕಾರಿಗಳಿಗೆ ಸರಬರಾಯಿ ಮಾಡಬೇಕೆಂದು ಕಾಯದೆ ಇಲ್ಲೆಂದು ಅದಕ್ಕೆ ಅದೇ ವ್ಹಿಜಿಟ ಪುಸ್ತಕದಲ್ಲಿ ಉತ್ತರ ಬರೆದು ಹೋದರು. ಈಗಿನ ಚಳವಳಿಯಲ್ಲಿ ಕಾಮದಾರರಿಗೆ ಯಾವ ತರದ ಸಹಾಯ ಮಾಡಬಾರದೆಂಬವರಿಗೆ ಇದೊಂದು ಬ್ರಹ್ಮಾಸ್ತ್ರವೇ ದೊರೆದಂತಾಯಿತು.

ಬಾಗಿಲ ಹಾಕಿಕೊಂಡು ಗುಪ್ತ ಠರಾವು.

ಪ್ರಸ್ತುತದ ಕಾಯದೆಭಂಗದಲ್ಲಿ ಮುಂದಾವ ಕೃತಿಕಾರ್ಯವನ್ನು ಮಾಡಬೇಕೆಂದು ವಿಚಾರಿಸಲೋಸುಗ ಅಲ್ಲಾಹಾಬಾದಿನಲ್ಲಿ ಕಾಂಗ್ರೆಸದ ವರ್ಕಿಂಗ ಕಮಿಟಿ ಕೂಡಿತ್ತು. ಕಮಿಟಿಯ ಕೆಲಸವು ಅತ್ಯಂತ ಗುಪ್ತವಾಗಿ ನಡೆಯಿತು. ಠರಾವುಗಳನ್ನು ಬರೆದು ಓದುವಾಗ, ಹೊರಗೆ ಯಾರಾದರೂ ಕದ್ದು ಕೇಳುವರೇ ಹೇಗೆಂದು ನೋಡಿದರು. ಗಿಡಗಳಲ್ಲಿ ಸಹ ತಪಾಸು ಮಾಡಿದರು. ಹೀಗೆ ಸದ್ಯದಲ್ಲಿ ಠರಾವುಗಳು ಬಹಳ ಗುಪ್ತವಾಗಿರುತ್ತವೆ.

ಶ್ರೀ ದೇವಿ ಸರೋಜಿನಿಯವರನ್ನು ತಾವಾಗಿ ಬಿಟ್ಟರು.

ಇಡೀ ಒಂದು ದಿವಸ ದೇವಿ ಸರೋಜಿನಿಯವರನ್ನು ಬಂದೋಬಸ್ತಿನಲ್ಲಿಟ್ಟ ನಂತರ ಪೋಲಿಸ ಮತ್ತು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಇವರ ಹತ್ತರ ಬಂದು, ಹೆಣ್ಣು ಮಕ್ಕಳು ಈ ಗೊಂದಲದಲ್ಲಿ ಬಿದ್ದದ್ದರಿಂದ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗಿದೆ. ನೀವು ನಿಮ್ಮ ಬುದ್ಧಿಸಾಮರ್ಥ್ಯವನ್ನು ರಾವುಂಡ ಟೇಬಲದಲ್ಲಿ ಉಪಯೋಗಿಸಬೇಕೆಂದು ಉಪದೇಶಮಾಡಿ ಹೋದರು. ಇವರ ಮಾತಿಗೆ ದೇವಿಯವರು ಮರುಳಾಗಲೇ ಇಲ್ಲ. ತುಸು ಹೊತ್ತಿನ ನಂತರ ಪುನಃ ಪೋಲಿಸರು ಒಂದು ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆಂದು ಹೇಳಿ, ಇಬ್ಬಿಬ್ಬರನ್ನೇ ದಾವಣೆಯಿಂದ ಹೊರಗೆ ತೆಗೆದರು. ಎಲ್ಲರೂ ಹೊರಗೆ ಬಂದ ನಂತರ ನಿಮ್ಮನ್ನು ಬಿಟ್ಟು ಬಿಟ್ಟಿದ್ದೇವೆಂದು ಹೇಳಿದರು. ಹೀಗೆ ಬಂಧಮುಕ್ತರಾದ ನಂತರ ಇವರು ಉತ್ತಂಡಿಗೆ ಹೋದರು.

ಅಲ್ಲಿ ಮಹಾತ್ಮರ ಪತ್ನಿಯವರೂ ಮೊದಲಾದವರೂ ಇವರ ಸ್ವಾಗತ ಮಾಡಿದರು. ದೇವಿಯವರು ಮುಂಬಯಿಗೆ ಬಂದು ಮುಂದಿನ ಕಾರ್ಯಕ್ರಮವನ್ನು ಗೊತ್ತುಪಡಿಸುವರು.

ಪೋಲಿಸರ ಎದುರಿಗೇ ನೂರು ಮಣ ಉಪ್ಪಿನ ವಿಲ್ಲೇವಾರಿ

ಶಿರೋಡದಲ್ಲಿ ಬೇಕಾದಷ್ಟು ಪೋಲಿಸ ಕಾವಲಿದ್ದರೂ, ಸ್ವಯಂಸೇವಕರು ಅವರೆದುರಿನಲ್ಲಿಯೇ ನೂರು ಮಣ ಉಪ್ಪನ್ನು ತಂದು, ಬಿಲ್ಲಿಗೆ ಶೇರನಂತೆ ಮಾರಿದರು. ಇದೇ ಪ್ರಕಾರ ಗೋವೆಯ ಹದ್ದಿನಿಂದ ಕಾರವಾರೀ ಸ್ವಯಂಸೇವಕರು ಉಪ್ಪು ತಂದು ಕಾರವಾರದಲ್ಲಿ ಬಿಲ್ಲಿಗೆ ಶೇರಿನಂತೆ ಮಾರಿದರು.

ಶಿರೋಡಿಯಲ್ಲಿ ಪೋಲೀಸರು ಸುಮಾರು ಇನ್ನೂರು ಸ್ವಯಂಸೇವಕರನ್ನು ಹಿಡಿದರು. ಆದರೆ ಇವರ ಊಟದ ಮತ್ತು ವಾಸದ ವ್ಯವಸ್ಥೆ ಮಾಡುವದು ಶಕ್ಯವಾಗಿರಲಿಲ್ಲ. ಏಕಂದರೆ- ಊರೇ ಇವರಿಗೆ ಬಹಿಷ್ಕಾರ ಹಾಕಿರುತ್ತದೆ. ಆದ್ದರಿಂದ ಫೌಜದಾರಸಾಹೇಬರು ತಲೆಗೆ ಐದಾಣೆಯಂತೆ ಕೊಟ್ಟು, ಇವರನ್ನು ಸತ್ಯಾಗ್ರಹದ ಶಿಬಿರಕ್ಕೇ ಊಟಕ್ಕೆ ಕಳಿಸಿಕೊಟ್ಟರು. ಇವರು ತಾವು ತಮ್ಮವರ ಕೂಡ ಉಂಡದ್ದಲ್ಲದೆ, ಫೌಜದಾರರಿಗೂ ಅನ್ನ ತಂದು ಕೊಟ್ಟರು. ಇಲ್ಲವಾದರೆ- ಸಾಹೇಬರಿಗೆ ಅನ್ನ ಸಿಗುವದೇ ದುರೋಪಾಸ್ತವಾಗಿತ್ತು.

ರತ್ನಾಗಿರಿ ಜಿಲ್ಲೆಯ ಕಾಮದಾರರಿಗೆ ಒಂದ ಗೋಳು

ರತ್ನಾಗಿರಿ ಜಿಲ್ಲೆಯಲ್ಲಿಯ ಕಾಮದಾರರ ಗೋಳನ್ನು ಬಲ್ಲವರೇ ಬಲ್ಲರು. ಸಾವಂತವಾಡಿ ಸಂಸ್ಥಾನದಿಂದ ಕಾಳುಕಡಿ ತರಿಸುತ್ತಿದ್ದರು. ಅಲ್ಲಿಯವರೂ ಇವರಿಗೆ ಬಹಿಷ್ಕಾರ ಹಾಕಿದರು. ಕೊಲ್ಹಾಪೂರಕ್ಕೆ ಮೊರೆ ಇಡಬೇಕಾಯಿತು. ಆಗ ಧಾನ್ಯ ದೂರಯಿತು. ಕಟ್ಟಿದ ಬುತ್ತಿ ಎಷ್ಟು ದಿವಸ ಪೂರೈಸುವದು?

ಫೌಜದಾರರು ರಾಜೀನಾಮೆ ಕೊಟ್ಟು ಸತ್ಯಾಗ್ರಹಿಯಾದರು.

ಬಂಗಾಲದಲ್ಲಿ ಕೃಷ್ಣನಗರದ ಸಬ್ ಇನ್ಸಪೇಕ್ಟರರಾದ ತಾರಾಪದಮುಖರಜಿಯವರು ಮಹಾತ್ಮರನ್ನು ಹಿಡಿದ ಬಗ್ಗೆ ನಿಷೇಧವೆಂದು ರಾಜೀನಾಮೆ ಕೊಟ್ಟು ಸತ್ಯಾಗ್ರಹದಲ್ಲಿ ಸೇರಿದನು. ಇವರ ಕೂಡ ಹೆಡ್ಡ ಕಾನ್ಸಟೇಬಲು ಸರದಾರ ಪ್ರಸಾದನೂ ರಾಜೀನಾಮೆ ಕೊಟ್ಟಿರುತ್ತಾನೆ.

ದಾರಿಯಲ್ಲಿಯೇ ದಸ್ತಗಿರಿ-

ಅಲ್ಲಹಾಬಾದಿನಲ್ಲಿ ಮೇಲಿನ ಠರಾವುಗಳು ಪಾಸಾದನಂತರ ಲಾಹೋರಿನ ಪ್ರತಿನಿಧಿಗಳು ತಿರುಗಿ ಹೋಗುತ್ತಿದ್ದಾಗ ದಾರಿಯಲ್ಲಿಯೇ ಶೀಖರ ಪ್ರಮುಖರಾದ ಸರದಾರ ಸರದುಲಸಿಂಗರನ್ನು ಹಿಡಿದಿದ್ದಾರೆ.

ಶ್ರೀ. ಗುಲವಾಡಿ ಶಂಕರರಾಯರ ಬಿಡುಗಡೆ

ಕಾರವಾರದ ಡಿ॥ ಮ್ಯಾಜಿಸ್ಟ್ರೇಟರ ವಾರಂಟಿನಿಂದ ಶ್ರೀ. ಗುಳವಾಡಿ ಶಂಕರರಾಯರನ್ನು ಹುಬ್ಬಳ್ಳಿಯಲ್ಲಿ ಹಿಡಿದು, ಧಾರವಾಡಕ್ಕೆ ತಂದು, ಮೊನ್ನಿನ ದಿವಸ ಸ್ಪೇಶಲ ಮೋಟಾರಿನಿಂದ ಕಾರವಾರಕ್ಕೆ ಕರಕೊಂಡು ಹೋದರು.

THE ANKALGI BANK LTD

Head Office

Kamanlatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT.

Dharwar 3-1-1927 | K. B. ANKALGI Managing Director

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೆಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಾಯಿ ಎಂಟು ಲಕ್ಷದ ಮೇಲಿಂಟು ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಡಿಟ ಇಟ್ಟುಕೊಳಲಾಗುದು. ದರವನ್ನು ಸಾಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗಿನೆಗಳನ್ನು ಮತ್ತೆ ಇಟ್ಟುಕೊಳುವ ಒಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ

ಮೋಟಾರ ನಡಿಸುವದನ್ನು

ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸಳವು.

ಮೋಟರ ಡ್ರ್ಯಾಯ್ಹರ ವಿದ್ಯ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿವು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳು ... ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ... ತೊಂದರೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

ಮಾನಸರೋವರನಹತ್ತರ, ಧಾರವಾಡ

ಈ ಪತ್ರವನ್ನು ಲಕ್ಷ್ಮಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಧಾರವಾಡ ಜಿಲ್ಲಾ ಮುರಾರಿ (ನೇ ಪರಿಷತ್ತು ತಾರೀಖು ೧೮-೫-೧೮೯೦ನೇ ದಿವಸ ಮಾಡಬೇಕೆಂದು ಈ ಮೊದಲೇ ಠರಾಯಿಸಿದ್ದು ಸದರಿ ತರಪಕ್ಷನ್ನು ಕೆಲವು ಕಾರಣಗಳ ಮೂಲಕ ಮುಂದೆ ಹಾಕಲ್ಪಟ್ಟಿರುತ್ತದೆ ಹಿಂದಿನಿಂದಾ ತಾರೀಖು ತಿಳಿಸುವದುಲ್ಲಿ ಬರುವದು

ಒನರರ್ ಶಿಕ್ರೆಟರಿ

— —

ಜಾಹೀರ ನೋಟೀಸ

ಪುಬ್ಲಿಕ್ಯದಿಂದ ಕೆಳಗೆ ಸಹಿ ಮಾಡಿದವರು ಈ ನೋಟೀಸಿನಿಂದಾ ತಿಳಿಸುವದೇನಂದರೆ ನಮ್ಮ ಅಂಗಡೀ ಲೆಕ್ಕಾ ವಗೈರೇ ಬರಿಯೋ ತಾ ಹನುಮಂತ ಬಿನ್ ಕೆಂಚಪ್ಪಾ ಒನಕ ಕಂದಿ ಪಟ್ಟಣ ಶೆಟ್ಟಿಗಾರ ಹಾಗೂ ಮತ್ತು ಮಡಿವಾಳಯ್ಯಾ ಬಿನ್ ರುದ್ರಯ್ಯಾ ಮುನವಳ್ಳಿಮಠ ಸಾ॥ ಹುಬ್ಬಳ್ಳಿ ಇವರು ಉಭಯತರು ನಮ್ಮಲ್ಲಿ ಇದ್ದು ಇವರು ನಮ್ಮ ಕೆಲಸ ಬಿಟ್ಟ ತೆಗೆದು ನಮ್ಮ ದ್ವೇಷಿಕರ ಜಿತಾವನಿಗೆ ಬಿದ್ದು ನಮ್ಮ ಅಂಗಡೀ ಲೆಕ್ಕಾ ಬರಿಯುವದು ಮತ್ತು ತಾವು ಬರೆದ ಹಿಂದಿನ ಲೆಕ್ಕಾ ವಗೈರೆ ತೆಗೆದು ಲೆಕ್ಕಾ ಶುದ್ಧ ಮಾಡಿಕೊಡಬೇಕು ತಾರೀಖು ೧೧-೫-೯೦ನೇ ದಿವಸ ಹನುಮಂತಪ್ಪಾ ಮತ್ತು ೧೫-೫-೯೦ನೇ ದಿವಸ ಮಡಿವಾಳಯ್ಯಾ ಬಿಟ್ಟು ಹೋಗಿರುತ್ತಾರೆ ಆದರೆ ಇವರು ಈ ಅಂಗಡಿ ಬರೆದ ಲೆಕ್ಕಗಳಲ್ಲಿ ಆಸಾಮಿಗಳಿಂದಾ ವಿಲಕ್ಷಣ ತಕರಾರುಗಳು ಒದಗಿಕ್ಕೆ ಹತ್ತಿರುತ್ತವೆ ಈ ಬಗ್ಗೆ ನಿಕಾಲೆ ಮಾಡಿ ಲೆಕ್ಕ ಒಪ್ಪಿಸಿಕೊಡಲಿಕ್ಕೆ ಅನೇಕ ಸಾರೆ ಕರೆದರೂ ಬರಲಿಲ್ಲ ಆದ್ದರಿಂದ ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸಿನಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ ಸದರೀ ಹನುಮಂತಪ್ಪಾ ಪಟ್ಟಪ್ಪಾ ಇತನು ತಾ॥ ೧೧-೫-೯೦ನೇ ಇಸ್ವಿಯಿಂದಾ ಮತ್ತು ಮಡಿವಾಳಯ್ಯಾ ಈತನು ತಾ॥ ೧೫-೫-೯೦ನೇ ಇಸ್ವಿಯಿಂದಾ ನಮ್ಮ ಕಾರಕೂನರಿರೋದಿಲ್ಲ ಆದ್ದರಿಂದ ಸದರೀಯವರು ಕೂಡ ನಮ್ಮ ಹೆಸರಿನ ಮೇಲೆ ಯಾವ ವೆವಹಾರ ಆಗಲಿ ಕೊಡ ತೆಗೆಯುವದು ಮಾಡಬಾರದು ಜರ ಮಾಡಿದಲ್ಲಿ ಅಂಥಾ ವೆವಹಾರಕ್ಕೆ ನಾನು ಬದ್ಧನಿರೋದಿಲ್ಲ ಮತ್ತು ಇದಲ್ಲದೆ ತಾವು ಬರೆದ ಲೆಕ್ಕದಲ್ಲಿ ಏನಾದರೂ ಯಾವ ತರಿಂದಾದರೂ ಆಸಾಮಿವಾರ ವಿಲಕ್ಷಣ ತಕರಾರುಗಳು ಸಂಭವಿಸಿದಲ್ಲಿ ಆ ತಕರಾರು ದೂರಮಾಡಿಕೊಡುವ ಬಗ್ಗೆ ಮತ್ತು ಇದಾಚೆ ಅಂಥಾದ್ದರಿಂದಲಾಗಬಹುದಾದ ನುಕ್ಸಾನ ಭರಾಯಿಸಿಕೊಳ್ಳುವ ಬಗ್ಗೆ ಸಹಾ ಅವರ ಮೇಲೆ ಇಲಾಜ ಮಾಡುವದರಲ್ಲಿ ಪ್ರಸಂಗವಶಾತ್ ಒಂದರೂ ಬಂದಿರುವದು ಇದಲ್ಲದೆ ತಾವು ತಪ್ಪಿಗೆ ಬೇಕಾದ ವೇಳೆಯಲ್ಲಿ ಬೇ

ಕಾದಷ್ಟು ಬಡ್ಡಿ ಹಾಕಿ ತಗೊಂಡದ್ದರ ಬಾಬತ್ತು ಖಾತೆಬಾಕಿ ಆಗುತ್ತಿದ್ದು ಅದರ ವಸೂಲ ಸಹಾ ಒಂದರೊಳಲ್ಲಾ ಆ ವಸೂಲೀ ಬಗ್ಗೆ ಇಲಾಜ ಮಾಡುತ್ತೇನೆ ತಿಳಿಯುವದು ತಾ॥ ೯-೫-೯೦

Siddappa Nagappa Lkkimarad
Hubli

— —

ನೋಟೀಸು

ರಾ॥ ಈರಪ್ಪಾ ಬಿನ್ನ ನಾಗಪ್ಪಾ ಹಡಪದ ಸಾ॥ ಕೊಂಡಿಕೊಪ್ಪ ತಾಲೂಕ ನವಲಗುಂದ ಇವರಿಗೆ

ಕೆಳಗೆ ಸಹಿ ಮಾಡಿದವಳು ತಿಳಿಸುವದೇನಂದರೆ ನೀನು ನನ್ನ ಮಾವಿಂದ ಗಂಡನಿದ್ದು ಈಗ ಅಜಮಾಸು ೩-೪ ವರ್ಷದಹಿಂದೆ ನನ್ನ ಮೈಮೇಲಿ ಇದ್ದ ದಾಗೀನೆ ಅಜಮಾಸು ಎರಡು ನೂರು ರೂಪಾಯಿ ಕಿಮ್ಮತ್ತಿನವು ಜಬರಿಯಿಂದಾ ತಗೊಂಡು ನನ್ನನ್ನು ತವರ ಮನೆಗೆ ಕಳುಹಿಸಿ ಆ ದಾಗಾಯಿ ನೀನು ಎರಡನೇದವಳಿಗೆ ಇಟ್ಟುಕೊಂಡು ಬಾಳ್ವೆ ಮಾಡುತ್ತಿರುವದರಿಂದಾ ನನ್ನನ್ನು ಕರಕೊಂಡು ಹೋಗಿ ಪ್ರಪಂಚ ಮಾಡಲಿಕ್ಕೆ ಪುಷ್ಕಳ ಸಾರೆ ಹೇಳಿಕಳಿಸಿದಾಗ್ಯು ನೀನು ಒಂದು ಇವತ್ತಿನವರೆಗೂ ನನ್ನನ್ನು ಕರಕೊಂಡು ಹೋಗಲಿಲ್ಲ ಆದ್ದರಿಂದಾ ಈಗ ೩-೪ ವರ್ಷಗಳಿಂದಾ ನನ್ನ ವ ನನ್ನ ಮಗಳ ಹೊಟ್ಟೆಗೆ ಎರಡ ದವರಲ್ಲಿ ಎರಡು ನೂರು ರೂಪಾಯಿ ಸಾಲಾ ತಂದು ಉಪಜೀವನ ಮಾಡಿಕೊಂಡಿರುತ್ತೇನೆ ಆದ್ದರಿಂದಾ ಈ ನೋಟೀಸು ಮುಟ್ಟಿದ ಒಂಟೀ ದಿವಸಗಳಲ್ಲಿ ನೀನು ನನ್ನ ದಾಗೀನೆ ಬಾಬತ್ತು ಎರಡು ನೂರು ರೂಪಾಯಿ ಮತ್ತು ನನ್ನ ಮಗಳ ವ ನನ್ನ ಹೊಟ್ಟೆ ಖರ್ಚಿಗೆ ಸಾಲವಾಗಿ ತಂದ ಎರಡು ನೂರು ರೂಪಾಯಿ ಅಂತು ನಾಲ್ಕು ನೂರು ರೂಪಾಯಿ ನನಗೆ ಕೊಟ್ಟು ನನ್ನನ್ನು ಕರಕೊಂಡು ಹೋಗಿ ಬಾಳ್ವೆ ಮಾಡಬೇಕು ಇಲ್ಲವಾದರೆ ಮೇಲೆ ಬರೆದ ರಕಮಿನ ಬಗ್ಗೆ ನಿನ್ನ ಮೇಲೆ ಇಲಾಜ ನಡಿಸುವದಲ್ಲದೆ ಮುಂದೆ ನನ್ನ ವ ಜೀವನಪ್ರಕಾರ ನನಗೆ ಬೇಕಾದವರಿಗೆ ಉಡ್ಕಿ ಮಾಡಿಕೊಂಡು ಉಪಜೀವನ ಸಾಗಿಸಿಕೊಳ್ಳುತ್ತೇನೆ ಅನಂತರ ನನ್ನ ಮೇಲೆ ವ ನನ್ನ ಉಡ್ಕಿ ಆದವನ ಮೇಲೆ ಮತ್ತು ನನ್ನ ಮಗಳ ಮೇಲೆ ಸಹಿತಾ ನಿನ್ನ ಹಕ್ಕು ಯಾವರೀತಿಯಿಂದಾನೂ ಉಳಿಯುವದಿಲ್ಲಾ ಇದೇ ನೋಟೀಸಿ ಅಂತಾ ತಿಳಿಯತಕ್ಕದ್ದು ತಿಳಿಯುವದು ತಾ॥ ೨೧-೫-೯೦

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಸಾವಕ್ಕಾ ಕೋಂ ಈರಪ್ಪಾ ಹಡಪದ ಮುಕ್ಕಾಮ ನವಲಗುಂದ ಇವರದು ಇದೆ

— —

ನೋಟೀಸು

ಚೆನ್ನಪ್ಪಾ ಕೋಮ ಗುರುಸಿದ್ದಪ್ಪಾ ನಾಲ್ಕುರುವ್ವಿ ಸಾ॥ ಹುಬ್ಬಳ್ಳಿ ಹಾಲಿವಸ್ತಿ ಶಿರೂರ ಪೇಠಾ ನವಲಗುಂದ ಇವಳಿಗೆ

ಕೆಳಗೆ ಎಡಗೈ ಹೆಬ್ಬೆಟ್ಟಿನ ಗುರ್ತಾ ಮಾಡಿದ ಲಿಂಗಪ್ಪಾ ಸಕ್ರೆಪ್ಪಾ ನಾಲ್ಕುರುವ್ವಿ ಸಾ॥ ಹುಬ್ಬಳ್ಳಿ ನಾನು ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ ನಿನ್ನ ಕರ್ತೃಮಯನಾದ ಅಣ್ಣನಾದ ನಾಗಪ್ಪಾ ಆದ್ದರಿಂದ ಎಂಬುವವನು ನಿನ್ನ ತಂದೆ ಮುದ್ರಪ್ಪಾನಾದ ಚನ್ನಪ್ಪಾ ಎಂಬುವನನ್ನು ಉಡ್ಕಿ ಮಾಡಿಕೊಂಡನು ಅವನಿಂದಾ ನಿನ್ನ ತಂದೆ ಯಾದ ಭರಮಪ್ಪಾ ಆದ್ದರಿಂದ ಅಂಬುವನು ಹುಟ್ಟಿನನು ಅನಂತರ ನಿನ್ನ ತಂದೆಯು ಹುಬ್ಬಳ್ಳಿ ಗ್ರಾಮದ ಗುರಪ್ಪಾ ಶರಣಬಿ ಅವನ ಮಗಳಿಂದ ಒನಪ್ಪಾ ನಂಬಾಕೆಯು ಅ ತಂಗಿಯ ಒಸಗೆ ಇದ್ದವನನ್ನು ಉಡ್ಕಿ ಮಾಡಿಕೊಂಡನು ಅಕೆಯು ಉಡ್ಕಿಯಾದ ೧ ತಿಂಗಳಲ್ಲಿ ಗಂಡು ಕೂಸನ್ನು ಹಡೆದಳು ಈ ಪ್ರಕಾರ ಇದ್ದು ಅಂದರೆ ನಮ್ಮ ಜಾತಿಯಲ್ಲಿ ಬಿದ್ದ ಕೂಸಿಕ್ಕೆ ಬಿದ್ದಂಥಾ ಕೂಸನ್ನು ದತ್ತಕ ತೆಗೆದುಕೊಂಡದ್ದು ಶಾಸ್ತ್ರ ವಿರುದ್ಧವಾಗಿರುತ್ತದೆ ಮತ್ತು ಹುಬ್ಬಳ್ಳಿಯು ಗ್ರಾಮದಲ್ಲಿ ವ ಶಿರೂರ ಗ್ರಾಮದಲ್ಲಿ ನೀನು ಆ ಹುಡುಗನನ್ನು ದತ್ತಕ ತೆಗೆದುಕೊಂಡದ್ದಕ್ಕೆ ಗುರುಹಿರಿಯರಿಗೂ ವ್ಯವಹಾರಗೂ ಜಾತಿ ಧರ್ಮದ ಪದ್ಧತಿ ನಡಸಲಿಲ್ಲ ಉಚಾ ವಗೈರೆ ಯಾವದನ್ನೂ ಕೊಟ್ಟಿರುವದಿಲ್ಲದ್ದರಿಂದ ಈ ದತ್ತಕ ತೆಗೆದುಕೊಂಡದ್ದು ಗೈರಕಾಯ್ದೆ ಆಗಿರುತ್ತದೆ ಇದಲ್ಲದೆ ನೀನು ಉಪ್ಪಿಯ ಇರುವಾಗಲೇ ನಿನ್ನ ಗಂಡನು ವ್ಯಕಾಟ್ಟಿದ್ದರಿಂದಾ ನೀನು ನಮ್ಮ ಮನೆಗೆ ಎಂದೂ ಬಾರದೆ ನಿನ್ನ ಮೈಮೇಲೆ ಇದ್ದ ದಾಗೀನೆ ಅಂದರೆ ಭಂಗಾರದ ಸರಿಗಿ ೧ ಅಜಮಾಸ ತೊಲಿ ೭ ಅಜಮಾಸ ಕಿಮ್ಮತ್ತು ರೂಪಾಯಿ ೧೮೦ ಭಂಗಾರದ ಒಳಿ ಜೋಡು ೧ ಅಜಮಾಸ ತೊಲಿ ೭ ಕಿಮ್ಮತ್ತು ರೂಪಾಯಿ ೧೫೦ ಭಂಗಾರದ ಮುರುಟೀ ಕಿ ೧ ಅಜಮಾಸ ಕಿಮ್ಮತ್ತು ರೂಪಾಯಿ ೬೦ ಭಂಗಾರದ ಬುಗಡಿ ಕಡ್ಡಿ ಜೋಡು ೧ ಅಜಮಾಸ ಕಿಮ್ಮತ್ತು ರೂಪಾಯಿ ೧೨ ಭಂಗಾರದ ಬೆಂಡವಾಲಿ ಜೋಡು ೧ ಅಜಮಾಸ ಕಿಮ್ಮತ್ತು ರೂಪಾಯಿ ೮ ಬೆಳ್ಳಿ ಪಟ್ಟಿ ೧ ಅಜಮಾಸ ಕಿಮ್ಮತ್ತು ರೂಪಾಯಿ ೧೨ ಬೆಳ್ಳಿ ಚೌಕ ೧ ಅಜಮಾಸ ಕಿ॥ ರೂಪಾಯಿ ೧೦ ಈ ಪ್ರಕಾರ ದಾಗೀನೆಗಳು ಸಹಿತ ನಿನ್ನ ತವರುಮನೆಯಲ್ಲಿಯೇ ಇರುತ್ತಿವೆ ಸದರಿ ಆಸ್ತಿಯು ಮೊದಲಿನಂತೆ ನನ್ನ ತಾಬಾದಲ್ಲಿಯೇ ಇರುತ್ತದೆ ತಿಳಿಯುವದು ತಾ॥ ೧೬ ಮೇ ೧೮೯೦ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಲಿಂಗಪ್ಪಾ ಸಕ್ರೆಪ್ಪಾ ನಾಲ್ಕುರುವ್ವಿ ಸಾಕಿನ ಹುಬ್ಬಳ್ಳಿ ಈತ ಮಾಡಿದ್ದು ಇದೆ

ಈ ಪತ್ರವನ್ನ ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೨೩ ನೇ ಮೇ ೧೯೩೦ (ಸಂಖ್ಯೆ ೧೧೬

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to.-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಹಿತಕರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ವಾಯಿದೆಯ ಪಾಲಿಸಿಯ ಯೋಜನೆ ಒಂದಫಲವು	ಖಾತ್ರಿಯಾದ ಬೋನಸಗಳ ಯೋಜನೆಗಳು ಅನುಕೂಲವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ನೋಟೀಸು

ಶ್ರೀ ಶಾಹು ಛತ್ರಪತಿ ಮರಾಠಾ ಸ್ಟೂಡೆಂಟ್ಸ ಬೋರ್ಡಿಂಗ ಧಾರವಾಡ ಈ ಸಂಸ್ಥೆಯಿಂದ ಇಂಗ್ಲಿಷ ಕಲಿಯುತ್ತಿರುವ ಕೇವಲ ಒಡವಂಬಡ ಧಾರವಾಡ ಜಿಲ್ಲೆಯ ಮರಾಠಾ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವದೇನಂದರೆ-

ಈ ವರ್ಷ ಬೋರ್ಡಿಂಗಿನಲ್ಲಿ ಸೇರಲಿಚ್ಛಿಸುವವರು ತಾರೀಖು ೫-೬-೧೯೩೦ರವರೆಗಾಗಿ ಕಲ್ಪಿಸಿದಂತೆ ಸಂಸ್ಥೆಯ ವಿಳಾಸಕ್ಕೆ ತಮ್ಮ ಅರ್ಜಿಗಳನ್ನು ಕಳಿಸತಕ್ಕದ್ದು. ಅವಧಿಯನ್ನು ಮಿಕ್ಕಿ ಬಂದ ಅರ್ಜಿಗಳ ವಿಚಾರವಾಗಲಾರದು. ಅರ್ಜಿಯ ನಮೂನೆಗಳು ಸಂಸ್ಥೆಯಲ್ಲಿ ಉಚಿತವಾಗಿ ದೊರೆಯುತ್ತವೆ. ಅವನ್ನು ಸಮಕ್ಷಮ ಬಂದು ಇಸಕೊಳ್ಳಬಹುದು ಅಥವಾ ಪೋಸ್ಟದ್ವಾರಾ ಒಂದು ಆಣೆಯ ಟಿಕೇಟು ಕಳಿಸಿ ತರಿಸಿಕೊಳ್ಳಬಹುದು. ಕೈ ಬರಹದ ಅರ್ಜಿಗಳ ಬಗ್ಗೆ ಸಂಸ್ಥೆಯು ಜವಾಬದಾರಿಯಾಗಲಾರದು. ಈ ಮೊದಲು ಸಂಸ್ಥೆಯಲ್ಲಿದ್ದ ವಿದ್ಯಾರ್ಥಿಗಳು ಸಹ ಅರ್ಜಿಗಳನ್ನು (ನಮೂನೆಯ ಫಾರ್ಮಿನಲ್ಲಿ ತುಂಬಿ) ಕಳಿಸತಕ್ಕದ್ದು. ತಾವು ಮೊದಲು ಇದ್ದವರೆಂದು ಅರ್ಜಿ ಮಾಡಿಕೊಳ್ಳಲು ತಪ್ಪಿದವರಿಗೆ ಸ್ಥಳವು ದೊರೆಯಲಾರದು.

ಸಹಿ ಬಸವಂತರಾವ ಭೀಮರಾವ ಜಾಧವ
ಆನರರಿ ಶೆಕ್ರೆಟರಿ ಮರಾಠಾ ವಿದ್ಯಾ
ಪ್ರಸಾರಕ ಮಂಡಳಿ ಧಾರವಾಡ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ಮ್ಯಾ. ವಿಜಯ. ಧಾರವಾಡ

ಮಹಾತ್ಮರನ್ನು ಬಂಧಮುಕ್ತ ಮಾಡಿರಿ.

ರಾಜಕೀಯ ಕೈದಿಗಳಿಗೆ ಕ್ಷಮೆ ಕೊಡಿರಿ.

ವಸಾಹತಿನ ಸ್ವರಾಜ್ಯ ಕೊಟ್ಟಿದ್ದೇವೆಂದು ಜಗತ್ತಿಗೆ ಸಾರಿರಿ.

ಹಿಂದುಸ್ಥಾನವನ್ನು ಹೇಗೆ ಉಳಿಸಿಕೊಳ್ಳಬೇಕೆಂಬದು ಬ್ರಿಟಿಶ ಜನತೆಯ ಮುಂದೆ ಗಹನವಾದ ಪ್ರಶ್ನವಾಗಿರುತ್ತದೆ. ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಲಂಡನಕ್ಕೆ ಹೋಗಿದ್ದಾರಷ್ಟೇ; ಇವರು ಯಾವ ರಾಮಬಾಣ ಉಪಾಯ ಹೇಳುವರೆಂದು ಕೇಳಲು ಮೇಜವಾನಿಯ ಸೇವನ ಮಾಡಿ, ಇವರನ್ನು ಊಟಕ್ಕೆ ಕರೆದರು. ಪಾರ್ಲಮೆಂಟದ ೧೫೦ ಜನ ಮೆಂಬರರು ಹೆಂಡರು ಮಕ್ಕಳನ್ನು ಕರಕೊಂಡು ಊಟಕ್ಕೆ ಹೋದರು. ಊಟಕ್ಕೆ ರುಚಿಯು ಉಪ್ಪಿನ ಕಾಯಿಯಾಗಿಲ್ಲಿಲ್ಲ. ನಾಮದಾರ ಶಾಸ್ತ್ರಿಯವರ ಬಾಯಿಯಿಂದ ಹೊರಡುವ ಶಬ್ದಗಳು ಹಿಂದುಸ್ಥಾನ ದೃಷ್ಟಿಯಿಂದ ರುಚಿಯು ಕೂಡ ಪಕ್ಷಕ್ಕೇ ಬೀಳುವಂತಹವೂ ಆಗಿದ್ದವು. ಶಾಸ್ತ್ರಿಯವರು ಸ್ಪಷ್ಟವಾಗಿ ಭಾಷಣ ಮಾಡಿದರು. ಯಥಾರ್ಥವಾದಿ ಬಹುಜನ ಗೌರವಾಯಸ್ಥರಿಗೆ ವಿರೋಧಿಯಾಗುವಂಥ ಮಾತು ಹೇಳಿದರು. ಮಂತ್ರಿಗಳು, ಲಾರ್ಡ ಇರ್ವಿನ್, ಸಾಹೇಬರ ಕೌನ್ಸಿಲರು ಗುಪ್ತಮಸಲತ್ತು ಮಾಡಿ, ಮಹಾತ್ಮರನ್ನು ಹಿಡಿದರು. ದಬ್ಬಾಳಿಕೆಯ ಪಂಜು ಹಚ್ಚಿದರು. ಇವೆಂದನ್ನು ನಿಷೇಧಿಸಿದಂಥ ದರ್ಶಿಸಿದಂಥ ಮಾತನ್ನೇ ನಾಮದಾರ ಶಾಸ್ತ್ರಿಯವರು ಹೇಳಿದರು. ಅವುಗಳ ಸೂತ್ರವು ತಿರೋಲೇಖದಲ್ಲಿ ಕೊಟ್ಟಂತಿರುತ್ತವೆ. ಹಿಂದುಸ್ಥಾನದಲ್ಲಿದ್ದ ಉರಿಯು ಸಾಮಾನ್ಯವಲ್ಲ. ನೀವು ಅಂತಗ ಬಂದರ ಬಾಗ ಹೊಡೆದರೂ ಆರುವದಿಲ್ಲ. ಸಮುದ್ರದ ನೀರೆಲ್ಲ ಚಿಮ್ಮಿಸಿದರೂ ನಂದುವದಲ್ಲ. ಅದಕ್ಕೆ ಮಾಡಬೇಕಾದ ಉಪಾಯವೆಂದರೆ- ಹಿಂದುಸ್ಥಾನದ ರಾಜಕೀಯ ಮಹತ್ವಾಕಾಂಕ್ಷೆಯನ್ನೇ ಪೂರ್ಣ ಮಾಡುವದಾಗುತ್ತದೆ. ಅಂದರೆ ನೀವು ದರ್ಪ, ಪ್ರತಿಷ್ಠೆ ದೊಡ್ಡಸ್ತಿಕೆ ಎನ್ನದೆ- ನಿರ್ಮಲ ಮನಸ್ಸಿನಿಂದ

೧ ಮಹಾತ್ಮರನ್ನು ಬಂಧಮುಕ್ತ ಮಾಡಿರಿ.

೨ ರಾಜಕೀಯ ಕೈದಿಗಳಿಗೆ ಕ್ಷಮಾದಾನ ಕೊಡಿರಿ.

೩ ವಸಾಹತಿನ ಸ್ವರಾಜ್ಯ ಕೊಟ್ಟಿದ್ದೇವೆಂದು ಜಾಹೀರ ಮಾಡಿರಿ.

ಅಂದರೆ- ಈ ಉರಿಯು ಆರುವದೆಂದು ನಿರ್ಭಿಡೆಯಿಂದ ಹೇಳಿದ್ದಾರೆ. ನಾಮದಾರರು ಯಾವಾಗಲು ಆಳರಸ ಹಿತೈಷಿಗಳು ಮಿವಾಳರು. ರಾಜನಿಷ್ಠರು. ಇವರಿಗೆ ಕೂಡ, ಹಿಂದುಸ್ಥಾನದ ಆಳವಳಿಯು ಅಟೋಪ ಮೀರಿದ್ದೆನಿಸಿ, ನಿಮಗೆ ಸಾಳೀಕ್ಯ ಸ್ವತ್ತು ಹಿಂದುಸ್ಥಾನದಲ್ಲಿ ಬೇಕೆಂದೆನಿಸಿದರೆ- ಮೇಲಿನ ಮೂರು ಶರ್ತುಗಳಂತೆ ನಡೆಯಿರೆಂದಿದ್ದಾರೆ. ನಾಮದಾರರು ಸ್ಪಷ್ಟವಾಗಿ ಆಡಿದ ನುಡಿಯು ಬಹುಜನರಿಗೆ ಒಪ್ಪಿಗೆಯಾಗಿದ್ದು ವರ್ತಮಾನಪತ್ರಗಳು ಇವರಿಗೆ ಬೆಂಬಲ ಕೊಟ್ಟಂಥ ಉದ್ಗಾರ ತೆಗೆಯಲಾರಂಭಿಸಿವೆ.

ಇದೇ ವೇಳೆಯಲ್ಲಿ ಸರ ರವೀಂದ್ರನಾಥ ಟಾಗೋರರೂ ಲಂಡನಕ್ಕೆ ಹೋಗಿದ್ದಾರೆ. ಇವರು ಧಾರಿಯಲ್ಲಿ ಮಾರ್ಸೇಲಿಸದಲ್ಲಿದ್ದಾಗ್ಯೆ ಹಿಂದುಸ್ಥಾನದ ಕಾಯದೆಭಂಗದ ಬಗ್ಗೆ ನಿಮ್ಮ ಮತವೇನೆಂದು ಇವರಿಗೆ ಪ್ರಶ್ನ ಮಾಡಿದರು. ನನಗೆ ಅದರಲ್ಲಿ ಆಸಕ್ತಿಯಿಲ್ಲ. ಚಿತ್ರಕಲೆಯ ಅಭ್ಯಾಸ ಮಾಡುತ್ತಿದ್ದೇನೆಂದು ಹಾರಿಸಿಕೊಂಡ ಉತ್ತರ ಕೊಟ್ಟಿದ್ದರು. ಏಕೆಂದರೆ ಇದು ಪರಕೀಯರ ದೇಶವು. ಲಂಡನಕ್ಕೆ ಹೋದ ಬಳಿಕ ಉತ್ತರ ಕೊಡುವ ಅಗತ್ಯವೇ ಉಂಟಾಯಿತು. ಜನರು ಒತ್ತಾಯ ಮಾಡಿಸಲಾರಂಭಿಸಿದರು. ಆಗ ಅವರು ನಾಮದಾರ ಶಾಸ್ತ್ರಿಯವರಿಗಿಂತ ಒಂದೆರಡು ಮಾತುಗಳನ್ನು ಹೆಚ್ಚಾಗಿಯೇ ಹೇಳಿದರು. ಹಿಂದುಸ್ಥಾನದ ಸ್ವಾತಂತ್ರ್ಯದ ಪ್ರಶ್ನವು ಹಿಂದುಸ್ಥಾನದ ಮಟ್ಟಿಗೆ ಇರುವದಿಲ್ಲ. ಆಶಿಯಾ ಖಂಡದ ಸ್ವಾತಂತ್ರ್ಯವನ್ನೇ ಅವಲಂಬಿಸಿರುತ್ತದೆ. ಕಾರಣ ಆಶಿಯಾಖಂಡದ ಬೇರೆ ಬೇರೆ ದೇಶಗಳ ಪ್ರತಿನಿಧಿಗಳ ಪರಿಷತ್ತು ಕೂಡಿಸಿರಿ; ಮತ್ತು

೧ ಮಹಾತ್ಮರ ಅಪಮಾನವಾಗುವಂಥ ಕೃತ್ಯ ಮಾಡಬೇಡಿರಿ.

೨ ಗಾಂಧೀ ಟೊಪ್ಪಿಗೆಯನ್ನು ಕಿತ್ತು ಮಾಡಬೇಡಿರಿ;

ಎಂದು ಹೇಳಿದ್ದಾರೆ. ಗಾಂಧಿ ಮತ್ತು ಗಾಂಧಿ ಟೊಪ್ಪಿಗೆಯು ಭಾವೋದ್ರೇಕ ಪ್ರಶ್ನವಾಗಿದ್ದು ಮಹಾತ್ಮರ ಹಾಗು ಮಹಾತ್ಮರ ಹೆಸರಿನಿಂದ ಪ್ರಚಾರವಾಗಿರುವ ಟೊಪ್ಪಿಗೆಯ ಅಪಮಾನವೆಂದರೆ- ಹಿಂದಿಯರ ಅಂತಃಕರಣಕ್ಕೆ ಬರೀ ಕೊಟ್ಟು ಅವರಲ್ಲಿ ಹಿಡಿಸಲಾರದಷ್ಟು ಸಂತಾಪವನ್ನು ಉಂಟುಮಾಡುವಂತಹದಾಗುತ್ತದೆ. ಆದ್ದರಿಂದ ವಿಚಾರದಿಂದ ನಡೆಯಿರಿ. ಲೋಕಮತವನ್ನು ಶಾಂತ ಪಡಿಸಿರೆಂದು ನಿಕ್ಷೂಣ್ಣವಾಗಿ ಹೇಳಿದ್ದಾರೆ. ನಾಮದಾರ ಶಾಸ್ತ್ರಿಯವರೂ, ಸರ ಟಾಗೋರರೂ ಸರಕಾರಕ್ಕೆ ಅತ್ಯಂತ ಪ್ರಿಯರಾದ ಗೃಹಸ್ಥರಾಗಿದ್ದು, ಅವರ ಹಿತೋಕ್ತಿಯನ್ನು ಉಪೇಕ್ಷೆ ಮಾಡುವದೆಂದರೆ- ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಳ್ಳುವಂತಾಗುತ್ತದೆ.

ಪಂಡಿತಪ್ಪಾ ಚಿಕ್ಕೋಡಿಯವರ ಪಾಂಡಿತ್ಯ ಪ್ರದರ್ಶನ.

ನರಿಯ ಕೂಗು ಸ್ವರ್ಗಕ್ಕೆ ಕೇಳಿಸುವದೇ?

ಬೆಳಗಾವಿ ಲೋಕಲ ಬೋರ್ಡಿನ ಅಧ್ಯಕ್ಷರಾದ ಶ್ರೀ ಚಿಕ್ಕೋಡಿ ಪಂಡಿತಪ್ಪನವರು, ವಿಜಯದಲ್ಲಿ ಈ ಮುಂಚೆ ಪ್ರಸಿದ್ಧವಾದ ಮೇರೆಗೆ ಮಿ. ಕಲೆಕ್ಟರ ಸಾಹೇಬರ ಸನ್ನಿಧಾನಕ್ಕೆ ಹೋಗಿ ರಾಜನಿಷ್ಠೆಯ ಪ್ರದರ್ಶನ ಮಾಡಿ, ಈ ಸಂಕಟ ಸಮಯದಲ್ಲಿ ಬ್ರಿಟಿಶ ಸರಕಾರಕ್ಕೆ ಬೇಕಾದಂಥ ಸಹಾಯ ಮಾಡುತ್ತೇವೆಂದು ಪ್ರತಿಜ್ಞೆಯಿಂದ ವಚನ ಕೊಟ್ಟಿದ್ದು, ಸಾಹೇಬರು ಆ ಬಗ್ಗೆ ಶ್ರೀ. ಪಂಡಿತಪ್ಪನವರ ಶ್ಲಾಘನೆ ಮಾಡಿದ್ದಾರೆ. ಈ ಗೃಹಸ್ಥರು ತಮ್ಮ ಪ್ರತಿನಿಧಿಗಳಲ್ಲೊಂದು ಸಂಕೇಶ್ವರ ಬೈಲಹೊಂಗಲ, ನಿಪ್ಪಾಣಿ ಮುಂತಾದ ದೊಡ್ಡ ದೊಡ್ಡ ಊರುಗಳ ಜನರು ಸಭೆಮಾಡಿ, ಜಾಹೀರ ಮಾಡಿದ್ದು, ಕಲೆಕ್ಟರ ಸಾಹೇಬರಿಗೆ ಅರಿಯದಂಥ ಮಾತಲ್ಲ. ಆದರೂ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಅಧ್ಯಕ್ಷರೆಂಬ ದೊಡ್ಡ ಅಧಿಕಾರದ ಹೆಸರಿನಿಂದ ಇವರ ಹೇಳಿದ ವಚನವನ್ನು ಬಾಬಾ ವಾಕ್ಯ ಪ್ರಮಾಣ ಮಾಡಿಕೊಂಡಿದ್ದಾರೆ. ಇಂಥವರೇ ಅವಸಾನ ಘಾತುಕರೆಂದು ಗೌರವಾಯಸ್ಥರು ಖಂಡಿತವಾಗಿ ತಿಳಿಯಬೇಕು. ನಾಮದಾರ ಶ್ರೀನಿವಾಸಶಾಸ್ತ್ರಿ, ಸರ ರವೀಂದ್ರನಾಥ ಟಾಗೋರರಂಥ ಜಗದ್ವಂದ್ಯರಾದಂಥವರು ಸ್ಪಷ್ಟ ಮತ ಹೇಳುತ್ತಿರುವದನ್ನೂ, ಇವರ ಹುರುಳಿಲ್ಲದ ರಾಜನಿಷ್ಠೆಯ ಡಾಂಭಿಕತನವನ್ನೂ ತುಲನೆ ಮಾಡಿದರೆ- ನರಿಯ ಕೂಗು ಸ್ವರ್ಗಕ್ಕೆ ಮುಟ್ಟಲಾರದೆಂದು ಹೇಳುವಂತಾಗುತ್ತದೆ.

ಈ ಜನರು ಬೇಕಾದಂಥ ಬುಬ್ಬುಣಚಾರ ಸುರಿಸುತ್ತಾರೆ. ಆದರೆ ಚಳವಳಿಯನ್ನು ಮುರಿಯಲು ಪ್ರತ್ಯಕ್ಷವೆನಿಸುವಂಥ ಯಾವ ಕೆಲಸವನ್ನೂ ಮಾಡುವದಿಲ್ಲೆಂಬ: ಇಂಗ್ರೇಜಿ ಪತ್ರಕಾರರು ಕೇಳಿರಬಹುದು... ಇವರು ಬ್ರಿಟಿಶರ ಓಲಗದಲ್ಲಿ ಉತ್ತರಕುಮಾರರಾದರೆ- ಜನತೆಯಲ್ಲಿ ಬೃಹಸ್ಪತಿಗಳಾಗುವರೆಂತು! ಇವರಿಗೆ ಲೋಕಮತದ ಹಿಂಬಲವೇ ಇಲ್ಲ. ಮತ್ತು ಯಾವದೊಂದು ಸ್ವಾರ್ಥತ್ಯಾಗದಿಂದ ಸಂಪಾದಿಸಿದ ಪುಣ್ಯಾಂಶದ ಆತ್ಮಬಲವೂ ಇಲ್ಲ. ಇವರಲ್ಲಿ ಅಂಥ ಗಟ್ಟಿಗರಿದ್ದರೆ-ಜನಬಲವಿದ್ದರೆ- ಸ್ವರಾಜ್ಯ ಸ್ವಾತಂತ್ರ್ಯವಾದಿಗಳಿಗೆ ವಿರುದ್ಧವಾಗಿ ಪ್ರತಿಯೊಂದು ಪಟ್ಟಣ ಪಳ್ಳಿಯಲ್ಲಿ ಸಭೆಮಾ

ದಿ, ತಮ್ಮ ನಾಂಡಿತ್ಯದ ಪ್ರಭಾವ ತೋರಿಸುತ್ತಿದ್ದರು. ಆ ಪಾಂಡಿತ್ಯದ ಬದಲು ತಮಗೆ ಅರಣ್ಯ ಸಂಡಿತರೆಂಬ ಬಿರುದು ದೊರೆಯುವದೆಂಬ ಹೆದರಿಕೆಯಿಂದಲೇ ಈ ತೆರವಾಗಿ ಕರ್ತವ್ಯನಿರತರಾಗದೆ, ಪಾರ್ಕಿಯರ ಮುಂದೆ ಬುಬ್ಬುಣಿಚಾಂಪವನ್ನು ಸುರಿಸುತ್ತಿದ್ದಾರೆ. ಇಂಥವರಲ್ಲಿ ತುಸುವಾದರೂ ನಂಬಿಗೆ ಇಡಬಾರದೆಂದು ಗೌರಕಾಮ ಅಧಿಕಾರಿಗಳಿಗೆ ನಾವು ಸಾರಿ, ಸಾರಿ ಹೇಳುತ್ತೇವೆ.

ರಾಷ್ಟ್ರೀಯ ನಿಶಾನೆಗೆ ಹಾವ.ಧಾರ ಗವ್ಹರ್ನರಸಾಹೇಬರ ಸಲಾಮು.

—— (೦) ——

ಪ.ಖಾಂಡೇಶ್ವರದಲ್ಲಿ ಪಾಂಡಗಣ ಎಂಬದೊಂದು ಉಪನಗರವುಂಟು ಅಲ್ಲಿಯ ಹಾಯಸ್ಕೂಲಿನ ಇನ ಮಿನ ಸಮಾರಂಭಕ್ಕಾಗಿ ನಾಮದಾರ ಗವ್ಹರ್ನರ ಸಾಹೇಬರು ಬರತಕ್ಕವರಿದ್ದರು. ಅದರ ಮುಂದೇ ಕಾಂಗ್ರೆಸ ಕಚೇರಿ ಇದ್ದು, ಅಲ್ಲಿ ರಾಷ್ಟ್ರೀಯ ನಿಶಾನೆ ಮೆರೆಯುತ್ತಿತ್ತು. ಈ ನಿಶಾನೆಯಿಂದ ಸಾಹೇಬರ ಅಪಮಾನವಾಗುವದಾದ ಕಾರಣ ಇದನ್ನು ತೆಗೆಯಬೇಕೆಂದು ಅಧಿಕಾರಿಗಳು ಕಾಂಗ್ರೆಸದವರಿಗೆ ಹೇಳಿದರು. ಪೋಲಿಸರೂ ಬಿಗಾಂತುಕತನ ಮಾಡುವಂತೆ ತೋರಿತು. ಕಾಂಗ್ರೆಸ ಕಮೀಟಿಯವರು ಇದರ ಲಕ್ಷಣೆಗಾಗಿ ಸ್ವಯಂಸೇವಕರು ಸಿದ್ಧರಾಗಬೇಕೆಂದು ಘಂಟೆಗಟ್ಟಿ ಹೊಡಿಸಿದರು. ಐನೂರು ಸ್ವಯಂಸೇವಕರು ನೆರೆದರು. ಎತ್ತ ನೋಡಿದತ್ತ ಗಾಂಧಿ ಟೊಪ್ಪಿಗೆ ಮತ್ತು ರಾಷ್ಟ್ರಧ್ವಜ ಸಂರಕ್ಷಣೆಯ ಹುರುಪು!! ಸಾವಿರಾರು ಜನ ಪ್ರೇಕ್ಷಕರೂ ಕೂಡಿದರು. ಅಷ್ಟರಲ್ಲಿ ಸಾಹೇಬರ ಮೋಟಾರ ಬಂತು. ಜನಸ್ತೋಮ ಕಂಡು, ನಡೆದ ವೃತ್ತಾಂತ ಕೇಳಿಕೊಂಡು, ಮೋಟಾರದಿಂದಿಳಿದು, ಟೊಪ್ಪಿಗೆ ತೆಗೆದು, ರಾಷ್ಟ್ರಧ್ವಜಕ್ಕೆ ವಂದನೆ ಮಾಡಿ ಶಾಲೆಗೆ ಹೋದರು. ರಾಷ್ಟ್ರೀಯ ಧ್ವಜವಂದನೆ, ರಾಷ್ಟ್ರೀಯ ಧ್ವಜಾರೋಹಣವೆಂದ ಕೂಡಲೆ, ಗವರ್ನರ ಪುಕ್ಕರು ಇದ್ದಾದರೂ ತಮ್ಮಲ್ಲಿ ತುಸುವಾದರೂ ಪುರುಷಾರ್ಥವಿರುತ್ತದೆಂದು ತೋರಿಸುವಂತೆ ಸಾಹೇಬರು ದಾರೀ ತೋರಿಸಿದಂತಾಯಿತು.

ಶ್ರೀ ನರಿಮನ್ನರನ್ನು ಪುನಃ ಹಿಡಿದರು.

—— (೦) ——

ಮುಂಬಯಿ ಕಾಂಗ್ರೆಸ ಕಮಿಟಿಯವರು ಹೊರಡಿಸುತ್ತಿದ್ದ ಪತ್ರಿಕೆಗಳನ್ನು ಸರಕಾರದವರು ಬಂದು ಮಾಡಿರೆಂದು ಹೇಳಿದರು. ಆದರೂ ಆ ಪತ್ರಿಕೆಗಳು ಪ್ರಸಿದ್ಧವಾದ್ದರಿಂದ ಸರಕಾರದವರು ಕಾಂಗ್ರೆಸ ಕಮಿಟಿ ಅಧ್ಯಕ್ಷ ನರಿಮನ್, ಡಾ. ಚೊಕಸಿ ಹಾಗೂ ಗಗ್ಗೇಶ ಅಯ್ಯಂಗಾರರನ್ನು ಹಿಡಿದಿದ್ದಾರೆ.

ಸಾಹೇಬರ ಕರೆಯ ಬಂಡಿಯನ್ನು ಹಗಲೇ ಸುಟ್ಟರು.

—(೦)—

ವೈಮನಸಿಂಗದಲ್ಲಿ ಗೋಳಿಬಾರಾದ ಸುದಿಯನ್ನು ಈ ಮೊದಲು ಬರೆದಿದ್ದೇವೆ. ಗುಂಡಿನ ಪ್ರಸಾದದಿಂದ ನೂರಾರು ಜನರು ಘಾಯವಾದರೂ, ಜನರ ಗುಂಡಿನ ಹಾಗು ಮರಣದ ಹೆದರಿಕೆಯು ಹಿಂದಾಯಿತು. ಡರ ಪಿಚ್ಛಾರಹೆ ಎಂದು ಕಮಾಲನು ಹೇಳಿದಂತೆ!! ನಡುಮಧ್ಯಾನ್ಹ ಸ್ಟೇಶನದಿಂದ ಯುರೋಪಿಯನ್ನರ ಕ್ಲಬ್ಬಿಗಾಗಿ ಬ್ರಾಂಡಿಯು ಮತ್ತು ಸಿಗರೆಟ್ಟಿನ ಪೆಟ್ಟಿಗಗಳೂ, ಪರದ್ಯದ ಬೇರೆ ಪದಾರ್ಥಗಳ ಪೆಟ್ಟಿಗೆಗಳೂ ತುಂಬಿದಂಥ ಒಂದು ಬಂಡಿ ಬರುತ್ತಿತ್ತು. ಆರೇಳುನೂರು ಜನರು ಸೇರಿ ಬಂಡಿಯನ್ನು ತರುಬಿ ಪೆಟ್ಟಿಗೆಗಳನ್ನು ಕೆಡವಿ, ಒಡೆದು, ಗುರೀ ಹಚ್ಚಿ, ಸುಟ್ಟು ಹಾಕಿದರು. ಈ ಅನಾಹುತವು ಸ್ಟೇಶನ ಮತ್ತು ಪೋಲಿಸ ಸ್ಟೇಶನದ ಸಮೀಪದಲ್ಲಿ ಆಗಿ ಸಾವಿರಾರು ಜನರು ನೋಡುತ್ತಿರುವಾಗಲೇ ನಿರ್ಭಯದಿಂದ ನಡೆಸಿದರು. ಪೋಲಿಸರು ಬರುವದರೊಳಗಾಗಿ, ಕೆಲಸವಾಯಿತೆಂದು ತಂತಮ್ಮ ಸ್ಥಳಕ್ಕೆ ಹೋದರು.

ಸಾಹೇಬರಿಗೆ ನೀರು ಸಹ ದುರ್ಲಭವಾಯಿತ

ಭೀಷ್ಮಾಚಾರ್ಯರು ಶರ ಪಂಜರದಲ್ಲಿ ಇದ್ದರು; ನೀರಡಿಕೆಯಾಯಿತು ಕೌರವರು ನೀರು ತರಲು ಆಳು ಕಳಿಸಿದರು. ಆದರೆ ಅರ್ಜುನನು ಭೂತಲ್ಲೇ ಬಾಣ ಹೊಡೆದು ನೀರು ತರಿಸಿದನು ಮಹಾಭಾರತದಲ್ಲಿ ಹೇಳಿದೆ ಅಂಥ ಯೋಗ್ಯತೆಯು ಈಗಿನ ಆಳುವರಲ್ಲಿಲ್ಲವಂತೆ? ಇವರು ಧರಾಸಾನದಲ್ಲಿ ಇಪ್ಪತ್ತು ಸ್ವಯಂಸೇವಕರನ್ನು ಹಿಡಿದರು. ಸ್ವಯಂಸೇವಕರೇನರ ಬೇಡರೂ, ಕೂಲಿಕಾರರೂ, ಕೀಳ ಕುಲದವರೂ ಆಗಿ ಎರಡೆಂಟು ದಿನ ಸ್ನಾನ ಕಾಣದವರಾದಂಥವರಲ್ಲ. ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಡಾಕ್ಟರ ಭಾಟ್ನವಾಲಾ ಇವರ ಮಗನಿಂದ ಪ್ರಾರಂಭಿಸಿ, ಕೋಟ್ಯಧೀಶ, ಲಕ್ಷಾಧೀಶರಾದಂಥವರ ಮಕ್ಕಳು. ಇವರು ತಮಗೆ ದಿನಾಲು ಉತ್ತಮ ಊಟ ಬೇಕು. ಸ್ನಾನಕ್ಕೆ ನೀರು ಬೇಕು. ಇಲ್ಲವಾದರೆ- ನಿಮ್ಮ ಅನ್ನವೇ ಬೇಡೆಂದು ಕಲೆಕ್ಟರ ಮತ್ತು ಪೋಲಿಸಸಾಹೇಬರ ಮುಂದೆ ಹೇಳಿ ಉಪವಾಸದ ಸತ್ಯಾಗ್ರಹ ಮಾಡಲುದ್ಯುಕ್ತರಾದರು. ಸಾಹೇಬರಿಗೆ ದೊಡ್ಡ ಚಿಂತೆ ಬಿತ್ತು. ಧರಾಸಾನಗೇ ನೀರು ಸಿಗುವದಿಲ್ಲ. ಊರವರು ತಮ್ಮ ಬಾವೀ ಮುಟ್ಟಗೊಡುವದಿಲ್ಲ. ಹತ್ತತ್ತು ಹರದಾರಿಯು ಮೇಲಿಂದ ಮೋಟಾರ ಲಾರಿಯಿಂದ ನೀರು ತರಿಸುತ್ತೇವೆ ನಿಮಗೆಲ್ಲಿಂದ ನೀರೆಂದು ಧೈರ್ಯದಿಂದ ಹೇಳಿದರು. ಆದರೂ ಸ್ವಯಂಸೇವಕರು ನೀರಿನ ವ್ಯವಸ್ಥೆಯಾದ ಹೊರ್ತು ಅನ್ನ ಗ್ರಹಣ ಮಾಡುವದಿಲ್ಲೆಂದು ಪಂಥ ತೊಟ್ಟರು. ಆ ಸಂಕಟ ಕ್ಕೊಳಪಟ್ಟವರಂತೆ ಎಲ್ಲಿಂದಲೋ ನೀರು ತರಿಸುವ ವ್ಯವಸ್ಥೆ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ನೀರಿನ ಅರಬು ಆದಾಗ ರೇಲ್ವೆ ಕಂಪನಿಯವರು ಕರಬಗಿಯ ಹತ್ತರ ಹರಿಯುತ್ತಿರುವ ವರದಾ ಹೊಳೆಯಿಂದ ನೀರು ತರುತ್ತಿದ್ದಂತಿರಬಹುದು.

ತುರಂಗದಲ್ಲಿ ಮಹಾತ್ಮರು ಮೂರು ತಾಸು ಅದೃಶ್ಯರಾಗಿದ್ದರು!!

—— (೦) ——

ಮಹಾತ್ಮರು ಯರವಡೆಯ ತುರಂಗದಲ್ಲಿ ಒಂದು ದಿವಸ ಅದೃಶ್ಯರಾಗಿದ್ದರು. ಅವರ ಕೋಣೆ ಅವರ ಪರಿವಾರದಲ್ಲಿರುವ ಬೇರೆ ಕೋಣೆಗಳಲ್ಲೆಲ್ಲ ಹುಡುಕಿದರೂ ಕಾಣಿಸಲಿಲ್ಲ. ಮುಂದೆ ಮೂರು ತಾಸಿನ ನಂತರ ಇದ್ದಲ್ಲಿಯೇ ಇದ್ದರು. ಈ ಮೂರು ತಾಸು ಇವರು ಸಾಬರಮತಿಗೆ ಹೋಗಿ, ತಮ್ಮ ಜನರ ಯೋಗಕ್ಷೇಮ ನೋಡಿಕೊಂಡು ಬಂದರೆಂದು ಗುಜರಾಥೀ ಪತ್ರಗಳಲ್ಲಿ ಒಂದು ಮನೋರಂಜಕ ಸುದ್ದಿಯು ಪ್ರಕಟವಾಗಿದೆ. ಇದೊಂದು ದಂತಕಥೆಯೇ ಸರಿ.

ಸೊಲ್ಲಾಪೂರದಲ್ಲಿ ಛಟಕೀ ಶಿಕ್ಷೆ.

—— (೦) ——

ಲಷ್ಕರೀ ಕಾಯದೆಯ ಪ್ರಕಾರ ಈ ಕೆಳಗಿನ ಹಾಲ್ವರು ಹುಡುಗರಿಗೆ ಛಟಕೀ ಶಿಕ್ಷೆಯನ್ನು ವಿಧಿಸಿದ್ದಾರೆ.

೧ ಬಂಡೋಕೃಷ್ಣ ವಯ ೧೫ ಹತ್ತು ಛಟಕಿ
೨ ವಿಶ್ವನಾಥ ಬಾಳಕೃಷ್ಣ ವಯ ೧೫ ಹದಿನೈದು ಛಟಕಿ.
೩ ತಿಪ್ಪಪ್ಪ ಕೃಷ್ಣಪ್ಪ ವಯ ೧೫ ಹದಿನೈದು ಛಟಕಿ;
೪ ರಾಮಾ ಜೀವಪ್ಪಾ ವಯ ೧೫, ೧೫ ಛಟಕಿ.

ಮೊದಲಿನ ಮೂವರಿಗೆ ಬೆತ್ತದಿಂದ ಮತ್ತು ಕಡೆಯವನಿಗೆ ಬರಲಿನಿಂದ ಹೊಡೆಯುವರು.

ಮಹಾತ್ಮರ ಮಗನನ್ನು ಹಿಡಿದರು.

—— (೦) ——

ಧರಾಸಾನಾದಲ್ಲಿ ಮಹಾತ್ಮರ ಎರಡನೆಯ ಮಗ ಶ್ರೀ ಮಣಿಲಾಲರನ್ನು ಹಿಡಿದಿದ್ದಾರೆ.

ರನ್ನು ಹಿಡಿದದ್ದಕ್ಕೆ ವಿರೋಧಸೂಚಕವಾಗಿ ಜಿಲ್ಲಾ ಲೋಕಲ್‌ಬೋರ್ಡ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತೇನೆ.

ನಿಮ್ಮ

ಹಾವೇರಿ ಎಸ್. ಬಿ. ಹಿರೇಮಠ

೭-೫-೩೦

ಶಿಕ್ಷೆ-

ಬೆಳಗಾವಿಯ ಶ್ರೀ ಲಿಂಗದೇವರಿಗೆ ಆರು ತಿಂಗಳ ಶಿಕ್ಷೆ ಮತ್ತು ನೂರು ರೂಪಾಯಿ ದಂಡ; ದಂಡ ಕೊಡದಿದ್ದರೆ ಮೂರು ತಿಂಗಳ ಹೆಚ್ಚಿಗೆ ಶಿಕ್ಷೆ. ಇವರು ಶಹಾಪೂರದ ಪ್ರಸಿದ್ಧ ಸಾರ್ವಜನಿಕ ಕಾರ್ಯಕರ್ತರೂ, ಹಿಂದುಸ್ಥಾನಿ ಸೇವಾದಳದ ಪ್ರಚಾರಕರೂ ಆದಂತೆ ರಾಷ್ಟ್ರಭಕ್ತರು. ಈ ವಾರದಲ್ಲಿ ಶ್ರೀ ಗಂಗಾಧರರಾವ ದೇಶಪಾಂಡೆಯವರಿಗೆ ಒಂದು ವರ್ಷದ ಸಾದಾ ಶಿಕ್ಷೆಯಾಯಿತು. ಇವರು ಒಳ್ಳೆ ರೀತಿಯಿಂದ ಭಾಷಣ ಮಾಡಿದ್ದರಿಂದ, ಕರ್ನಾಟಕ ಜಿಲ್ಲೆಯ ಜಾಗೃತಿಯ ಶ್ರೇಯಸ್ಸು ಬಹಳಮಟ್ಟಿಗೆ ಇವರಿಗೆ ಇರುತ್ತದೆ.

ಕರಾಚಿಯಲ್ಲಿ ... ಸಭೆ-

... ಉಪ್ಪಿನ ಕಾಯದೆಯಲ್ಲಿ ... ಯ ಟೋಪಿ ... ಸರಕಾರದಿಂದ ಬಹಿಷ್ಕೃತವಾದಂಥ ಪುಸ್ತಕಗಳನ್ನೋದುವ ಕ್ರಮ ನಡೆಸಿ ಹೋದ ಸೋಮವಾರ ದಿವಸ ಈ ಪುಸ್ತಕದ ಮಹತ್ವದ ಭಾಗಗಳನ್ನೋದಲು ೨೦ ಸಾವಿರ ಜನರದೊಂದು ಪ್ರಚಂಡ ಸಭೆ ಸೇರಿತ್ತು. ಮೂರು ಸಾವಿರ ಸ್ತ್ರೀಯರೇ ಸೇರಿದ್ದರು. ಒಬ್ಬನು ಆಕ್ಷೇಪದ ವಾಕ್ಯ ಓದುವನು. ಎಲ್ಲರೂ ಅದನ್ನು ಅನ್ನುವರು. ಈ ಮೇರೆಗೆ ೨೦ ಸಾವಿರ ಜನರು ಕಾಯದೆಭಂಗ ಮಾಡಿದರು.

ಶ್ರೀ ಹೊಸಮನಿಯವರ ಬಹುಮಾನ-

ಶ್ರೀ. ಹೊಸಮನಿಯವರು ಬೆಳಗಾವಿಯ ಕಾಂಗ್ರೆಸ ಪಕ್ಷದ ಸಭೆಯನ್ನು ಮುಗಿಸಿಕೊಂಡು ಮರಳಿ ಹಾವೇರಿಗೆ ಹೋದ ದಿವಸ ನಾಗರಿಕರು ಇವರ ಸ್ವಾಗತ ಮಾಡಿ, ಮೆರವಣಿಗೆ ತೆಗೆದರು. ಸಾಯಂಕಾಲದಲ್ಲಾದ ಸಭೆಯಲ್ಲಿ ಇವರ ಕೊರಳೊಳಗೆ ಹಾಕಿದ ರೂಪಾಯಿಯ ಮಾಲೆಯು ಹರಾಜವಾಗಿ ೧೧ ರೂಪಾಯಿ ಬಂದವು.

ಮನೆಗೊಂದು ಖಾದಿಯ ಮಗ್ಗ-

ಗದಗ ಕಾಂಗ್ರೇಸ ಮುಖಂಡರು ಮನೆಗೊಂದರಂತೆ ಖಾದಿಯ ಮಗ್ಗ ಹಚ್ಚಬೇಕೆಂದು ನಿಶ್ಚಯ ಮಾಡಿದ್ದಾರೆ. ನೂಲಿನ ಬಸಿಯಿಂದ ಸುತ್ತಲಿನ ಹಳ್ಳಿಗಳಲ್ಲಿ ಚರಕಿಯನ್ನು ಕೊಟ್ಟಿದ್ದು, ಇದರ ವ್ಯವಸ್ಥೆಗಾಗಿ ಎರಡು ಸಾವಿರದ ಫಂಡು ಕೂಡಿಸಿದ್ದಾರೆ. ಬೀದಿ ಬೀದಿಗೆ ಮಗ್ಗಗಳನ್ನು ನೇಮಿಸಿ, ಖಾದಿತನವನ್ನು ನಿಲ್ಲಿಸುವ ಉಪಾಯ ಕೈಕೊಂಡಿದ್ದಾರೆ

ಅಂಕೋಲೆಯಲ್ಲಿ ಪೋಲಿಸರ ದಬ್ಬಾಳಿಕೆ.

(ಅಂಕೋಲೆಯ ಪ್ರಕಟನಾ-ಖಾತೆಯಿಂದ)

—(೮)—

ನಿನ್ನೆ ಸಂಜೆ ಸುಮಾರು ಆರು ಘಂಟೆ ವೇಳೆಯಲ್ಲಿ ಹಿಚ್ಕಡ ಗ್ರಾಮದ ಎತ್ತಿನ ಗಾಡಿಯವನು ಹೊಂ... ಕ್ಯಾಂಪಿನ ಮಾರ್ಗವಾಗಿ ಬರುತ್ತಿರಲಾಗ ಒಬ್ಬ ಪೋಲೀಸ ಸಿಪಾಯಿಯು ಅವನನ್ನು ತಡೆದು ಉಪ್ಪನ್ನು ಏಕೆ ಒಯ್ಯುತ್ತಿರುವಿ ಎಂದು ಕೇಳಿದನು. ಅದಕ್ಕೆ ಅವನು ಉಪ್ಪನ್ನು ಗಾಡಿಗೆ ಕಟ್ಟಿದ್ದರೆ ದೋಷ ಏನು? ... ಗಾಡಿ ಇಲ್ಲದೆ ಉತ್ತುಗಳನ್ನು ಮಾತ್ರ ಹಿಡಿದುಕೊಂಡು ಹೋಗುತ್ತಿರುವಾಗ ಉಪ್ಪನ್ನು ಹಚ್ಚಿಕೊಂಡು ಹೋಗುವ ನಿಮ್ಮ ಮನೆತನಗೆ ತಿಳಿಯದೇನು ... ದಕ್ಕೆ ಸಿಪಾಯಿಯು ನೀನು ಅಲ್ಲವೇ ಉಪ್ಪು ಮಾರುವವನು. ನಿನಗೆ ತಕ್ಕ ಶಿಕ್ಷೆಯನ್ನು ಮಾಡಬೇಕು. ಎಂದವನಾಗಿ ಹೇಳಿ ಬೆತ್ತ ಕೋಲಿನಿಂದ ಹೊಡೆಯ ಹೋದನು. ಹಾದಿಕಾರರು ಬಂದು ಬಿಡಿಸಿದರು. ಇದರ ಪರಿಣಾಮವಾಗಿ ಈ ದಿನ ತೋರಕೆಯಲ್ಲಿ ಅವನ ಜಾತಿಯ ಜನರ ಸಭೆಸೇರಿ ಇನ್ನು ಮುಂದೆ ಸರಕಾರೀ ಅಧಿಕಾರಿಗಳು ತಮ್ಮ ಜಾತಿಯವರಾರನ್ನಾದರೂ ಅಪಮಾನಗೊಳಿಸಿದರೆ ತಮ್ಮ ಜಾತಿಯವರನ್ನೆಲ್ಲಾ ಅಪಮಾನಗೊಳಿಸಿದರೆಂದು ತಿಳಿದು ಕೆಲಸವನ್ನು ಮಾಡತಕ್ಕದ್ದೆಂದು ಠರಾಯಿಸಿದರು. ಈ ವರೆಗೆ ಸುಮ್ಮನಿದ್ದ ಪೋಲಿಸರು ಈಗ ತಮ್ಮ ದರ್ಪವನ್ನು ತೋರಿಸಹತ್ತಿದ್ದಾರೆ.

ಈಚಿನ ನಾಣೆಗಟ್ಟೆಗೆ ಕಾರವಾರದಿಂದ ೨೦ ಮಂದಿ ಸಶಸ್ತ್ರ ಪೋಲೀಸರು ಹೊಸದಾಗಿ ಹೋಗಿರುತ್ತಾರೆ.

ಧಾರವಾಡ-

ನಿನ್ನಿನ ದಿವಸ ಮೆ. ಕಲೆಕ್ಟರ ಸಾಹೇಬರು ನರೇಂದ್ರಕ್ಕೆ ಹೋಗಿ ಅಲ್ಲಿ ಉಳಿದಿದ್ದ ಕಡಿಯುತ್ತಿದ್ದ ಇಬ್ಬರು ಅಂಟಿಯವರನ್ನು ಮೋಟಾರ ಗಾಡಿಯಲ್ಲಿ ಕುಳ್ಳಿರಿಸಿಕೊಂಡು, ಧಾರವಾಡಕ್ಕೆ ತರೆದು ಬಿಟ್ಟುಬಿಟ್ಟರು. ಇವರು ಬಾಕಿಗೀಡ ಗಿಡಗಳನ್ನೇ ಕಡಿಯುತ್ತಿದ್ದರು.

ಧಾರವಾಡದಲ್ಲಿ
ಮೋಟಾರ ನಡಿಸುವದನ್ನು
ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸಂಸ್ಥೆ.

ಮೋಟಾರ ಡ್ರಾಯ್ವರ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಅದಕ್ಕೆ ನೂರಾರು ರೂಪಾಯಿ ವೆಚ್ಚ ಮಾಡಬೇಕಾಗುತ್ತಿತ್ತು. ಬರುತ್ತಿರುವ ಈ ವೆಚ್ಚವನ್ನು ತಪ್ಪಿಸುವ ಮೂಲಕ ... ಡ್ರಾಯ್ವಿಂಗ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಮ್ಮ ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತೆಗೆದುಕೊಳ್ಳುವದರಿಂದ ಕಲಿಯುವವರ ರಾಶಿಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಪಠ್ಯ ಜನರನ್ನು ತಕೊಳ್ಳುವದರಿಂದ ಬೇಗನೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

ಮೋನಸಪ್ಪ ಕೋರ್ಟಿನ ಹತ್ತರ, ಧಾರವಾಡ

ನೋಟೀಸಿನ ದರಗಳು

—(೧)—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆಗು ಆಣೆ ಡಬಲ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧] ಧಾರವಾಡ ಶನಿವಾರ ತಾರೀಖು ೨೪ ನೇ ಮೇ ೧೯೩೦ [ಸಂಚಿಕೆ ೧೧೭

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

THE ... ... BONUS PLA

AGENTS WANTED ON LIBERAL TERMS

For further particulars apply to—

Chief representative for Karnatak and South India.

N. T. Khona B. A. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ಸಾತ್ರೈಸಿಕ ಬೋನಸ ಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಹಣ್ಣಾಗಿ ರದ್ದಾಗದ ವಾಯಿದೆಯ ಪಾಲಿಸಿಯ ಯೋಜನೆ ಒಂದೇ ಒಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ- ಆಪರೇಟಿವ ಕ್ರೆಡಿಟ ಸೊಸಾಯಿಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಇಂಡಿಗೆಯು ಒಂದು ಲಕ್ಷದ ಮೇಲೆ ಇದೆ. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುದು. ದರವನ್ನು ಸಾಕ್ಷಾತ್ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕರಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಕಾರ್ಯಾಲಯ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೪ ವೈಶಾಖ ವದ್ಯ ೧೧

ಆ ವಿಜಯಂ ಶ್ರೀಪತಿಯು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ||
ದೀ "ವಿಜಯಂ" ಶ್ರೀಕರದಿಂ ।
ನಾವಿಹಿತಂಗಳ ನಿವಾರಿಸಲಿ ಪ್ರಸಾದಂ ||

ಉಪ್ಪಿನ ಸಂಕ್ರಾಂತಿಯು ಈಚಲದ ಮೇಲೆ ಬರಲಿ

—:○:—

ಮಳೆಗಾಲ ಪ್ರಾರಂಭವಾಯಿತೆಂದರೆ ಸಮುದ್ರದ ದಂಡೆಗುಂಟ ಸತತಧಾರವಾಗಿ ಎರಡು ತಿಂಗಳ ತನಕ ಮಳೆಯು ಸುರಿಯುವದರಿಂದ, ಅಲ್ಲಿಯ ವ್ಯವಹಾರವೆಲ್ಲ ಕಟ್ಟಾಗಿ ಹೋಗುತ್ತದೆ. ಪಡಗಗಳು ಸಹ ನಿಂತು ಹೋಗುತ್ತವೆ. ಆದ್ದರಿಂದ ಅಲ್ಲಿ ಉಪ್ಪಿನ ಕಾಯದೆಭಂಗ ಮಾಡಲು ಯಾವ ಅನುಕೂಲತೆಯೂ ಇರುವದಿಲ್ಲ. ಈ ಎರಡು ತಿಂಗಳಲ್ಲಿ ಪೋಲೀಸರಿಗೆ ವಿಶ್ರಾಂತಿಯು. ಆದರೆ ಸ್ವಯಂಸೇವಕರಿಗೆ ಮಾತ್ರ ಇರುವದಿಲ್ಲ. ಏಕಂದರೆ ಬಂದಿಲ್ಲ ವಿಶ್ರಾಂತಿಯೆಂದು ಕೆಲಸವು ಇವರ ಬೆನ್ನಿಗೆ ಕಟ್ಟಿರುತ್ತದೆ. ಅವುಗಳಲ್ಲಿ ಮುಖ್ಯವಾದಂಥವು ಮೂರಿವೆ.

೧ ಈಚಲ ಗಿಡದ ಸಮೂಲ ನಾಶಮಾಡುವದು.

೨ ಪರದೇಶಿ ಅರಿವೆಗೆ ಬಹಿಷ್ಕಾರ.

೩ ಗಡಂಗಗಳ ಮುಂದೆ ಪಿಕೆಟಿಂಗ.

ಈಚಲ ಗಿಡಗಳಲ್ಲಿ ಎರಡು ಭಾಗವುಂಟು. ಒಂದು ಸರಕಾರೀ. ಎರಡನೇ ಖಾಸಗೀ. ಸರಕಾರೀ ಗಿಡಗಳನ್ನು ಬಿಟ್ಟು, ಖಾಸಗೀ ಗಿಡಗಳನ್ನು ಬೇರು ಸಹಿತ- ಅವು ಮುಂದೆ ಬೆಳೆಯದಂತೆ- ಕಡಿದು, ಕಿತ್ತಿಹಾಕಲಿಕ್ಕೆ ಅನಿರ್ಬಂಧವುಂಟು. ಖಾಸಗೀ ಗಿಡಗಳನ್ನು ಕಡಿಯಲಿಕ್ಕೆ ಯಾವದೇನೂ ಅಡ್ಡಿಯಿಲ್ಲೆಂದು ಸರಕಾರದವರೇ ಒಪ್ಪಿದ್ದು, ಧಾರವಾಡದ ಕಲೆಕ್ಟರಸಾಹೇಬರು ಈ ಪ್ರಕಾರ ಸರಕ್ಯೂಲರನ್ನೂ ತೆಗೆದಿದ್ದಾರೆ. ಧಾರವಾಡ ಜಿಲ್ಹೆಯಲ್ಲಿ ಇಂಥ ಗಿಡಗಳು ಲಕ್ಷ ಸಂಖ್ಯೆಯಿಂದಿರಬಹುದು. ಇವುಗಳ ಧ್ವಂಸವೆಂದರೆ ಕುಡುಕರ ದ್ರವ್ಯ ಪೂರೈಸುವಂತಾಗುತ್ತದೆ. ಗುಜರಾಥ ಮುಂತಾದಲ್ಲಿ; ಮುಂಬಯಿ ಕರ್ನಾಟಕದಲ್ಲಿ ಸಹ ಒಂದು ತಿಂಗಳಲ್ಲಿ ೧೫-೨೦ ಸಾವಿರ ಗಿಡಗಳು ಭೂಮಿಗುರುಳಿರುತ್ತವೆ. ಮುಂದೆ ತಿಂಗಳೊಪ್ಪತ್ತಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಇವುಗಳ ಧ್ವಂಸವಾಗಿ, ಆ ಗ್ರಾಮದವರು ಕುಡುಕರ ಮೇಲೆ ಮಹದುಪಕಾರ ಮಾಡಿದ ಶ್ರೇಯಸ್ಸನ್ನು ಪಡೆಯುವರೆಂದು ಆಶಿಸುತ್ತೇವೆ. ಸತ್ಯಾಗ್ರಹಕ್ಕೆ ಹೊರಡುವ ಸ್ವಯಂಸೇವಕರ ಮೆರವಣಿಗೆ ಹೊರಟಂತೆ ಧಾರವಾಡದಲ್ಲಿ ಈ ಗಿಡಗಳ ನಾಶಮಾಡಲು ಹೊರಡುವ ಸ್ವಯಂಸೇವಕರ ಮೆರವಣಿಗೆಯೂ ಆಗತಕ್ಕದ್ದುಂಟು. ಇದೇ ಪ್ರಕಾರದ ಉತ್ಸವವನ್ನು ಪ್ರತಿಯೊಂದು ಊರವರು ಮಾಡುವದು ಒಂದು ಕರ್ತವ್ಯವೇ ಆಗುತ್ತದೆ.

ಒಂದೆರಡು ತಿಂಗಳಲ್ಲಿ ಪರಶುರಾಮನ ಅವತಾರ ಕಾರ್ಯದ ಉತ್ಕೃಷ್ಟ ಪೂರ್ಣವಾದ ಮೇಲೆ ವಿಲಾಯತಿಯ ಅರಿವೆಯ ವ್ಯಾಪಾರದ ಅಂಗಡಿ ಪೇಟೆಯ ಬಜಾರಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಬಹುದು. ಅಷ್ಟರಲ್ಲಿ ಈ ಎರಡೂ ಕೆಲಸಗಳ ದಾರಿಯು ಅರ್ಧಕ್ಕಿಂತ ಹೆಚ್ಚು ಸುಗಮ ಸುಸ್ಪಷ್ಟ ಸುರಕ್ಷಿತವಾಗುವದು. ನಮ್ಮ ಪ್ರಾಂತಕ್ಕೆ ಮುಂಬಯಿಯು ಸಮೀಪದಲ್ಲಿರುವದು. ಅದರ ತರುವಾಯ ಹುಬ್ಬಳ್ಳಿಯು. ಇವೆರಡೂ ಪಟ್ಟಣದವರು ವಿಲಾಯತಿಯ ಜವಳೀ ತರಿಸಬಾರದೆಂದು ನಿರ್ಧಾರ ಮಾಡಿದ್ದಾರೆ. ಮೊನ್ನೆ ದಿವಸ ಹುಬ್ಬಳ್ಳಿಯ ಅಂಗಡಿಕಾರರು ಸಭೆ ಮಾಡಿ, ವಿಲಾಯತಿಯ ಬಟ್ಟೆಯನ್ನು ತರಿಸಬಾರದೆಂದೂ, ತರಿಸಿ, ಮಾರಿ ಮಾಡಿದ ಮಾಲಿಗೆ ದಂಡ ಕಟ್ಟಬೇಕೆಂದೂ ಠರಾವು ಮಾಡಿದ್ದಾರೆ. ಇಂಗ್ರೇಜರು ವ್ಯಾಪಾರದಿಂದಲೇ ಹಿಂದುಸ್ಥಾನವನ್ನು ಗೆದ್ದರು. ಮತ್ತು ವ್ಯಾಪಾರದ ದೆಸೆಯಿಂದಲೇ ಹಿಂದುಸ್ಥಾನವನ್ನು ಹಿಡಿಯಲ್ಲಿ ಹಿಡಿದಿದ್ದಾರೆ. ಆ ವ್ಯಾಪಾರ ಪ್ರಾಣಗುಚ್ಛದಮೇಲೇ ಆಕ್ರೋಶ ನಡೆಸಿದ್ದಾರೆ. ಇಂಗ್ಲಿಷರಂತೆ ಹಿಂದೀ ವರ್ತಕರೂ ಮುಳ್ಳಿನಿಂದ ಮುಳ್ಳು ತೆಗೆಯುವಂತೆ ಮಾಡಿದರಾಯಿತು. ಯುರೋಪಿಯನ್ನರು ಶಾಶ್ವತವಾಗಿ ಸ್ವರಾಜ್ಯ ಕೊಟ್ಟು, ಮೇಲೆ ಹೇಳಿದಂತೆ ಕೇಳುವರು. ಇಂಗ್ಲಂಡದ ಅರಿವೆ, ಕಾಚು-ಕಬ್ಬಿಣ ಕಾಗದ ಮುಂತಾದ ಪ್ರತಿಯೊಂದು ಪದಾರ್ಥಕ್ಕೂ ಬಹಿಷ್ಕಾರ ಹಾಕಿ ನೋಡಿರಿ. ಯಕ್ಷಿಣಿಯ ಮಹಿಮೆಯು ಹೇಗಿರುತ್ತದೆಂದು ಕಂಡುಬರುವದು. ಯಕ್ಷಿಣಿಯು ಪ್ರಸನ್ನಳಾದಳಾಯಿತು. ತಿಪ್ಪೆ ಉಪ್ಪರಿಗೆ, ಉಪ್ಪರಿಗೆ ತಿಪ್ಪೆಯಾಗುವದು.

ಗಡಂಗಗಳ ಮುಂದೆ ಪಿಕೆಟಿಂಗ ಮಾಡುವ ಕೆಲಸವನ್ನು ಸ್ತ್ರೀಯರಿಗೇ ಹೇಳಬೇಕೆಂದು ಮಹಾತ್ಮರ ಮತವು. ಆ ಮೇರೆಗೆ ಮುಂಬಯಿ, ಅಹಮದಾಬಾದಗಳಲ್ಲಿ ನಡೆದಿದೆ. ಈ ಕೆಲಸವನ್ನು ಕುಡುಕರಾಗಿರುವಂಥ ಮನೆಯವರು ಮಾಡದೆ, ಕುಡುಕರ ಕುಲದವರೇ ಮಾಡಬೇಕು. ಅಂದರೆ ತಮ್ಮ ಬೀಗರು ಬಿಜ್ಜರು, ಅಕ್ಕ ತಂಗಿಯರು ಹೆಂಡರು ಮಕ್ಕಳು ಇವರ ಮುಂದೆ ಗಡಂಗದಲ್ಲಿ ಹೋಗಲಿಕ್ಕೆ ನಾಚಿಕೆಪಟ್ಟು, ತಾವಾಗಿಯೇ ದಾರಿಗಲೇ ಸರಕೊಳ್ಳುವರು. ರುಶಿಯಾದಲ್ಲಿ ಸರಕಾರದವರು ಮಾಸ್ಕೋದ ಪ್ರಜರ ಮೇಲೆ ಸೈನ್ಯ ಕಳಿಸಿದರು. ಪ್ರಜರು ಸೋಲ್ಜರರ ಹೊಡತ ಸಹಿಸಲೇ ಮುಂದೆ ನಿಲ್ಲಲು, ಸೋಲ್ಜರರು ಸೇನಾಧಿಪತಿಯ ಹುಕುಮನ್ನು ಅನಾದರ ಮಾಡಿ, ಶುಂಭರಂತೆ ನಿಂತರು. ಇದೇ ಪ್ರಕಾರ ಕುಡುಕರನ್ನು ಅವರವರ ಮನೆಯವರೇ ಅಡ್ಡಗಟ್ಟಿದರೆ- ಪಿಕೆಟಿಂಗವು ನಿರಾಯಾಸವಾಗಿ ಯಶಸ್ವಿಯಾಗುವದು.

ಮೆ. ಪೆಸ್ಸಾಹೇಬರ ಹುಡುಗತನ.

—()—( ) ()—

ಧಾರವಾಡದ ಕಲೆಕ್ಟರರಾದ ಮೆ. ಅಬಜ ಸಾಹೇಬರು ಹಳೇ ಎತ್ತನ್ನು ಹೊಳೆಯಲ್ಲಿ ಹೊಡೆಯುವಂಥವರಾಗಿದ್ದು, ಬೆಳಗಾವಿಯ ಅಸಿಸ್ಟಂಟ ಕಲೆಕ್ಟರರಾದ ಮೆ. ಪೆಸ್ಸಾಹೇಬರು ಹೊಸ ಬಿಸಿಯ ಅನನುಭವಿಕ ಮೆಜಿಸ್ಟ್ರೇಟರಾಗಿ, ಹೋರಿಯನ್ನು ಹೊಳೆಯಲ್ಲಿ ಹೊಡೆಯುಬಾರದೆಂಬ ಅವಸ್ಥೆಯವರಾಗಿದ್ದಾರೆ. ಇವರು ತಮ್ಮ ಪ್ರಾಂತದಲ್ಲಿ ಕಾಯದೆಭಂಗದ ಮಾತು ಹುಟ್ಟದ್ದರಿಂದಲೂ ಸಲ್ಲದು. ಇವರು ಮೋಟಾರಿನ ಸಹಾಯದಿಂದ ಎಲ್ಲಿ ಬೇಕಾದಲ್ಲಿಗೆ ಸಪ್ಪನೆ ಹೋಗುವರು. ಮನಸ್ಸಿಗೆ ಬಂದದ್ದನ್ನು ಮಾಡುವರು. ಅದರಿಂದ ಲೋಕರ ಮನಸ್ಸು ಅತ್ಯಂತವಾಗಿ ಕೆರಳಿಸಿ, ಆ ಜಿಲ್ಹೆಯ ವಾತಾವರಣವೇ ಕೆಟ್ಟು ಹೋಗಿರುತ್ತದೆ. ಇವರೊಬ್ಬರಿಂದಲೇ ಹಿಂಡಲಗಿಯ ತುರಂಗ ತುಂಬಿ, ಅಂಥ ಹಲವು ತುರಂಗ ಬೇಕಾದೀತು. ಮುಂಬಯಿಯಲ್ಲಿ ತೆರವಾದ ಚಾಳಗಳಲ್ಲಿ ಸತ್ಯಾಗ್ರಹಿಗಳನ್ನಿಡುವಂತೆ, ಇಲ್ಲಿಯೂ ಹೈಸ್ಕೂಲು, ಕಾಲೇಜುಗಳನ್ನು ತುರಂಗ ಮಾಡಬೇಕಾಗಿದೆ.

ಸಾಹೇಬರು ಬೈಲಹೊಂಗಲದಿಂದ ಐದು ಮೈಲುಗಳ ಮೇಲಿರುವ [illegible] ಎಂಬ ಗ್ರಾಮಕ್ಕೆ ಹೋಗಿ, ಈಚಲ ಮರಗಳನ್ನು ಕಡಿದವರೆಂದು ಕೆಲ ಜನರನ್ನು ಹಿಡಿದರು. ಇವರನ್ನು ಮೋಟಾರದಲ್ಲಿ ಹಾಕಿಕೊಂಡು ಹೋಗುವಾಗ ಹೆಣ್ಣು ಮಕ್ಕಳು ಮೋಟಾರಗಳ ಮುಂದೆ ಅಡ್ಡ ಬಿದ್ದು, ಸತ್ಯಾಗ್ರಹ ಮಾಡಿದರು. ಸಾಹೇಬರು ಇವರನ್ನು ಎತ್ತಿ ಹಿಡಿದು, ದೂರ ಸರಿಸಿ ಮೋಟಾರು ಸಾಗಿಸಿದರು. ಆಗ ಒಬ್ಬ ಮುದುಕಿಯು ಇವರ ಮಾನವನ್ನೂ ಉಳಿಸಲಿಲ್ಲೆಂದು ಕೇಳಿದಾಳಂತೆ!! ಸಾಹೇಬರು ಅಲ್ಲಿ ಜನರನ್ನು ಹೆದರಿಸಿ ಹಿಂತಿರುಗಿದರು. ಆ [illegible] ಆರೋಪಿಗಳ ಆಸ್ತಿಯ ಮೇಲೆ [illegible] ಕರಕೊಂಡು ಹೋದರು. ಆ ವಕೀಲನಿಗೆ ಬ್ಯಾರಿ ಕಳಿಸಿದರು.

ಈ ವಕೀಲನು ಚಿಕ್ಕವನು. ನಾವು ಹೋಗೋಣವೆಂದು ನ್ಯಾ. ಮದಾರ. ಬೇವಿ ಪ್ರಭೃತಿಗಳು ಸೇರಿ ಬೇಟೂರದಲ್ಲಿ ಕೂತು ಹೋದರು. ಸಾಹೇಬರು ಇವರಿಗೆ ಬೈಯುತ್ತಿದ್ದರೂ, ಆರೋಪಿಗಳು ನಿಮ್ಮ ಮೋರೆ ನೋಡುವದಿಲ್ಲೆನ್ನುತ್ತಾರೆಂದು ಉತ್ತರ ಕೊಟ್ಟು ಕಳಿಸಿದರು. ಪ್ರತಿಷ್ಠಿತರೆಂಬವರು ಬಂದ ಹಾದಿಗೆ ಸುಂಕವಿಲ್ಲೆಂದು ಹಿಂದಿರುಗಿದರು. ಈಗೀಗ ಇವರು ಹಾಯಕೋರ್ಟಿನ ಮುಂದೆ ಸಾಹೇಬರ ವಿರುದ್ಧ ದೂರಿಕೊಳ್ಳಬೇಕೆಂದಿದ್ದಾರೆ. ಇವರು ಹಾಯಕೋರ್ಟನ್ನು ಆಳಾಡಿಸುವಷ್ಟರಲ್ಲಿ ಆರೋಪಿಗಳ ಶಿಕ್ಷೆ ಮುಗಿಸಿ, ಮನೆಗೆ ತಿರುಗಿ ಬರಬಹುದು. ಒಟ್ಟಿನಿಂದ ಸಾಹೇಬರ ನಿರಂಕುಶ ದೊರೆತನವು ತ್ರಾಸದಾಯಕವಾದರೂ, ರಾಷ್ಟ್ರೀಯ ಜಾಗೃತಿಗೆ ಪೋಷಕವಾಗಿರುತ್ತದೆ. ಇಂಥ ಸಾಹೇಬರು ಪ್ರತಿಯೊಂದು ಜಿಲ್ಲೆಯಲ್ಲಿದ್ದರೆ- ನಿಂತಲ್ಲಿ ಕೂತಲ್ಲಿ ಸ್ವರಾಜ್ಯವು ಪ್ರಾಪ್ತವಾಗಿ ಬರುವದು.

ಘ್ಲಾಲಂಬಿಯರ ವಿಠ್ಠಲದಾಸರ ಮರಣ ಮತ್ತು ಸ್ಮಶಾನಯಾತ್ರೆ.

ಎರಡು ಲಕ್ಷ ಜನರ ಮೆರವಣಿಗೆ, ಪಟ್ಟಣದ ತುಂಬ ಹರತಾಳ.

—:(೦):—

ಮುಂಬಯಿಯಲ್ಲಿ ಸ್ವಯಂಸೇವಕನಾಗಿದ್ದ ವಿಠ್ಠಲದಾಸ ಜಂಜನದಾಸ ಮಲ್ಲಧನೆಂಬ ಹದಿನೆಂಟು ವರ್ಷದ ಒಬ್ಬ ಚಿಕ್ಕ ಹುಡುಗನು ವಡಾಲಾದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾಗ, ಒಬ್ಬ ಸಾರ್ಜಂಟನಿಂದ ಮೈಮೇಲೆ ಪೆಟ್ಟು ತಿಂದು, ರಕ್ತಬಂಬಾಳಾದನು. ಆಸ್ಪತ್ರೆಯಲ್ಲಿ ಆರೈಕೆ ಹೊಂದಿ, ತುಸ ಗುಣವಾದ ಬಳಿಕ, ಪುನಃ ಸತ್ಯಾಗ್ರಹ ಮಾಡಲು- ಉಗಿಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅಕಸ್ಮಾತ್ತಾಗಿ ಮಹಾಲಕ್ಷ್ಮಿಯ ಬಳಿ ಬಿದ್ದು, ಆ ಕ್ಷಣವೇ ಸ್ವರ್ಗಸ್ಥನಾದನು. ದೇಶಕಾರ್ಯಕ್ಕಾಗಿ ದೇಹಸಾರ್ಥಕ್ಯವನ್ನೂ ಪ್ರಾಣದ ವಿಚಾರವನ್ನೂ ಮಾಡದೆ, ಆತ್ಮಾರ್ಪಣೆ ಮಾಡಿದಂಥ ವಿಠ್ಠಲದಾಸನ ಸ್ಮಶಾನಯಾತ್ರೆಯ ದೊಡ್ಡ ಮೆರವಣಿಗೆಯನ್ನು ಕಾಂಗ್ರೆಸ್ ಕಮಿಟಿಯವರು ತೆಗೆದರು. ಈತನ ಮೃತ್ಯುವಿನ ಶೋಕವೆಂದು ಪಟ್ಟಣಿಗರು ಹರತಾಳ ಮಾಡಿದರು. ಎಲ್ಲ ಅಂಗಡಿಗಳು ಬಂದಾದವು. ಎರಡು ಲಕ್ಷ ಜನರು ಇದರಲ್ಲಿ ಸೇರಿದರು. ಲೋಕಮಾನ್ಯರ ಸ್ಮಶಾನಯಾತ್ರೆಯಲ್ಲಿ ಸಹ ಇಷ್ಟು ಜನರು ಸೇರಿದ್ದಿಲ್ಲ. ಬೇರೆ ಯಾವಂಥ ದೊಡ್ಡ ಗೌರವಾರ್ಹ ಅಧಿಕಾರಿ ಸತ್ತರೂ ಇಷ್ಟು ಜನರು ನೆರೆಯಲಾರರು. ಇದೊಂದು ಅಭೂತ ಮತ್ತು ಅದ್ಭುತ ಸಂಗತಿಯೇ ಆಯಿತು. ಇದೊಂದೇ ಸಂಗತಿಯಿಂದ ಸಹಕಾರಿಗಳೆಂಬವರು ತಮಗೆ ದೇಶದಲ್ಲಿ ಮಾರಾಟವಿಲ್ಲೆಂದು ಬುದ್ಧಿಗಲಿಯುವಂತಿದೆ.

ದೇವಿ ಸರೋಜಿನಿಯವರ ದಸ್ತಗಿರಿ.

—(೦)—

ಧಾರಾಸಣದಲ್ಲಿ ೨೧ನೆಯ ತಾರೀಖಿನ ದಿವಸ ಸುಮಾರು ಎರಡು ಸಾವಿರ ಸ್ವಯಂಸೇವಕರು ಉಪ್ಪಿನ ಉಗ್ರಾಣದ ಮೇಲೆ ದಾಳಿಯಿಟ್ಟು ಹೋದರು. ಆಗ ದೊಡ್ಡ ಯುದ್ಧವೇ ಆಯಿತು. ಸ್ವಯಂಸೇವಕರು ಕಯ್ಯಲ್ಲಿ ಒಂದು ಕೋಲು ಇಲ್ಲದಂಥ ನಿಃಶಸ್ತ್ರರು; ಪೋಲೀಸ ಜವಾನರು, ಕತ್ತಿ, ಬಂದೂಕು ಮುಂತಾದ ಎಲ್ಲ ತರದ ಜೀವಕ್ಷಯ ಆಯುಧಗಳುಳ್ಳವರು. [illegible] ಮೋಸದ ಯುದ್ಧ ನ್ನಾರಂಭಿಸಿದರು. ಆದರೆ ಪೋಲೀಸರು ಇವರಂತೆ ತಮ್ಮ ಯುದ್ಧ ನಡೆಸದೆ ಬಡಿಗೆಗಳ ಹೊಡೆತಕ್ಕೆ ಪ್ರಾರಂಭಿಸಿದರು. ಇವರ ಹೊಡೆತದಿಂದ ನೂರಾರು ಜನ ಸ್ವಯಂಸೇವಕರಿಗೆ ಭಯಂಕರ ಹೊಡೆತ ಬಿದ್ದಿದ್ದು, ಕೆಲವರಂತೂ ರಕ್ತಬಂಬಾಳರಾಗಿದ್ದಾರೆ. ಮಹಾತ್ಮರ ಚಿ|| ಮಣಿಲಾಲರೂ ಬಲೂ ಘಾಯವಾಗಿದ್ದಾರೆ. ಇದೇ ಸಮಯದಲ್ಲಿ ಪೋಲೀಸ ಅಧಿಕಾರಿಗಳು ದೇವಿ ಸರೋಜಿನಿಯವರನ್ನು ಬದಿಗೆ ಕರೆದು ನಿಮ್ಮನ್ನು ಹಿಡಿದಿರುತ್ತೇವೆಂದು ಹೇಳಿದರು. ಇದೇ ಸಮಯದಲ್ಲಿ ಶ್ರೀ. ವಿಠ್ಠಲಭಾಯಿ ಪಟೇಲ ಮತ್ತು ಶ್ರೀ. ದಾದುಭಾಯಿ ದೇಸಾಯಿಯವರು ಬಂದರು ಪೋಲೀಸರು ಇವರಿಗೂ, ದೇವಿಯವರಿಗೂ ಭೆಟ್ಟಿ ಮಾಡಗೊಡಲಿಲ್ಲ.

ಸಹಕಾರಿಗಳ ಸಭೆಯು ಅಸಹಕಾರಿಗಳದಾಯಿತು.

—(೨)—

ಲಖನೌದಲ್ಲಿ ನವಾಬರ ವಂಶಸ್ಥನಾದ ಸಾಹೇಬಜಾದಾ ಒಬ್ಬರಲ್ಲಿ ಮಿರಜಾಸ ಬೇಗನು ಸರಕಾರದ ಕೂಡ ಅಸಹಕಾರ ಮಾಡುವದೆಂದು ಸಾರ್ವಜನಿಕ ಸಭೆ ಕೂಡಿಸಿದನು. ಸಭೆಯಲ್ಲಿ ಸಹಕಾರಿಗಳು [illegible] ನಿಂದಿಸುವಷ್ಟು ಜನರಾಗಿ, ಸಹಕಾರಿಗಳ ಸಂಖ್ಯೆಯೇ ದೊಡ್ಡದಾಯಿತು. ಹೀಗೆ ಸಾಹೇಬಜಾದಾ [illegible]ವದೆಂದು ಬಗೆದರೆ.. ದೇವರೊಂದು ಬಗೆದನು.

ಶ್ರೀ ನರೀಮಾನರಿಗೆ ನಾಲ್ಕು ತಿಂಗಳ ಸಾದಾ ಶಿಕ್ಷೆಯಾಯಿತು.

ರಾಜಿಗೆ ಮಹಾತ್ಮರ ಸಿದ್ಧತೆ.

—(೦)—

ಮಹಾತ್ಮರು ಈ ಕೆಳಗಿನ ಐದು ಶರತ್ತುಗಳಿಗೆ ಇಂಗ್ಲಿಷರು ಒಡಂಬಟ್ಟರೆ ರಾಜಿಗೆ ಸಿದ್ಧರಿರುತ್ತಾರೆ-

೧ ಸಂಪೂರ್ಣ ವಸಾಹತಿನ ಸ್ವರಾಜ್ಯ ಕೊಡುವಂಥ ಸ್ವರಾಜ್ಯಯೋಜನೆ-
೨ ಉಪ್ಪಿನ ಕರ ರದ್ದು ಮಾಡುವದು.
೩ ಮದ್ಯಪಾನ ಪ್ರತಿಬಂಧಕ.
೪ ಪರದೇಶಿ ಬಟ್ಟೆಗಳಿಗೆ ಬಹಿಷ್ಕಾರ.
೫ ಎಲ್ಲ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡುವದು.

ಹಾವೇರಿಯ ಶ್ರೀ. ಹಿರೇಮಠರ ರಾಜೀನಾಮೆ.

—(೦)—

ರಾ. ಬ. ಕಂಬಳಿಯವರಿಗೆ ಬರೆದ ಪತ್ರ.

—(೦)—

ಹಾವೇರಿ ತಾಲೂಕಿನಿಂದ ಡಿ|| ಲೋ|| ಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟ ಶ್ರೀ ಹಿರೇಮಠರವರು ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟು, ರಾಜೀನಾಮೆಯ ಪತ್ರವನ್ನು ಅಧ್ಯಕ್ಷರಾದ ರಾ. ಬ. ಕಂಬಳಿಯವರ ಕಡೆಗೆ ಕಳಿಸಿ, ಅದರಲ್ಲಿ ರಾಜೀನಾಮೆಗೆ ಉಂಟಾದ ಕಾರಣವನ್ನು ಮುಂದೆ ಕೊಟ್ಟಂತೆ ಹೇಳಿದ್ದಾರೆ.

ಸ್ವಾಮೀ,

ಈಗಿನ ಹಿಂದುಸ್ಥಾನದ ಪರಿಸ್ಥಿತಿಯೊಳಗೆ ವಿವೇಕಬುದ್ಧಿಯುಳ್ಳ ಯಾವನೇ ಮನುಷ್ಯನಾದರೂ ದೇಶದಲ್ಲಿ ನಡೆಯುತ್ತಿರುವ ವಿಷಯಗಳನ್ನು ನೋಡಿ ಸುಮ್ಮನಿರುವದಕ್ಕಾಗುವದಿಲ್ಲ. ಪರದೇಶದವರು ನಮ್ಮ ಹಿಂದುಸ್ಥಾನವನ್ನು ಸೂರೆ ಮಾಡುತ್ತಿರುವಾಗ ಜಿಲ್ಲಾ ಲೋಕಲ್‌ಬೋರ್ಡಿನಂತಹ ಸಂಸ್ಥೆಗಳ ಮೂಲಕ ದೇಶಸೇವೆಯನ್ನು ಮಾಡುವುದು ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಭಾರತ ಮಾತೆಯ ಅನೇಕ ಪುತ್ರರೂ, ಪುತ್ರಿಯರೂ ದೇಶೋದ್ಧಾರ ಕಾರ್ಯದಲ್ಲಿ ಕಂಕಣಬದ್ಧರಾಗಿ ನಿಂತಿದ್ದಾರೆ. ಅವರ ಸರಕಾರದವರು ಅವರ ಮೇಲೆ ದಬ್ಬಾಳಿಕೆಯನ್ನು ನಡೆಸಿದ್ದಾರೆ. ಮಹಾತ್ಮಾ ಗಾಂಧಿಯವರಾದಿಯವರೂ ಕೂಡ ಈ ದಬ್ಬಾಳಿಕೆಗೆ ತುತ್ತಾಗಿದ್ದಾರೆ.

ಇಂತಹ ಜುಲುಮಿಯ ಧೋರಣವನ್ನು ವಿರೋಧಿಸುವದು ಹಿಂದೂ ದೇಶದ ಪ್ರತಿಯೊಬ್ಬನ ಕರ್ತವ್ಯವಾಗಿದೆ. ನಾನಾದರೋ ಮಹಾತ್ಮಾಜಿಯವ

— ಸವರ ವಿಚಾರಣೆ—

ದೇವಿ ಸರೋಜಿನಿ ಮಣಿಲಾಲ ಗಾಂಧಿ, ಪ್ಯಾರಿಲಾಲ ಮೆಹತಾ ಇಮಾಮ ಸಾಹೇಬ ಇವರಿಗೆ ಜಾಮೀನು ಕೊಡಲಿಕ್ಕೆ ಅಧಿಕಾರಿಗಳು ಹೇಳಿದರು. ಇವರು ಜಾಮೀನು ಕೊಡಲಿಲ್ಲ. ವಿಚಾರಣೆಯನ್ನು ಒಂದು ವಾರಕ್ಕೆ ಮುಂದೆ ಹಾಕಿದ್ದಾರೆ.

———

ವಿಜಾಪೂರದ ಕರ್ನಾಟಕ ವೈಭವಕ್ಕೆ ಒಂದು ಸಾವಿರ ರೂಪಾಯಿಯ ಜಾಮೀನು ಬೇಡಿದ್ದಾರೆ.

———

ಸೊಲ್ಲಾಪೂರದ ಊರು ಹಾಳು ಸುರಿಯುತ್ತಿದ್ದು, ರೂಪ ಯ.ಯ.ಲ್ಲಿ ೧೨ ಜಣೆಯಷ್ಟು ಜನರು ಊರು ಬಿಟ್ಟಿದ್ದಾರೆ

———

ದಬ್ಬಾಳಿಕೆಯ ನಿಷೇಧವೆಂದು ನಿಪ್ಪಾಣಿಯಲ್ಲಿ ಒಬ್ಬ ಪೋಸ್ಟಮನ್ನನು ಕೆಲಸ ಬಿಟ್ಟನು.

———

ನೋಟೀಸು

ಮಾತೋಶ್ರೀ ಶಾರದಾಬಾಯಿ ಭ್ರತಾರ ಹಣಮಂತರಾವ ಸಬನೀಸ ಸಾಕೀನ ಶಿವಳ್ಳಿ ತಾಲೂಕ ಧಾರವಾಡ ಹಾಲಿವಸ್ತಿ ಅಣ್ಣೀಗೇರಿ ಇವರಿಗೆ—

ಕಳಗೆ ಸಹಿಮಾಡುವ ನಿಮ್ಮ ಚಿ|| ತಿಮ್ಮಾಜಿ ಹಣಮಂತ ಸಬನೀಸ ಈತನು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ.

ನಾನು ನಿಮ್ಮ ಖಾಸ ಮಗನಾಗಬೇಕು. ನಾನು ಸರಕಾರೀ ಕೆಲಸದ ಮೇಲೆ ಇರುವಾಗ ನಾನು ಸವಣೂರಿಯಲ್ಲಿದ್ದಾಗ ನಮ್ಮ ತಂದೆಯು ಅಣ್ಣೀಗೇರಿಯಲ್ಲಿ ಸಂಬೋಕವಾಸಿಯಾದನು. ನೀವು ನನ್ನ ಗೈರ ಹಾಜರಿಯಲ್ಲಿ ಪೂರಾ ಮುಪ್ಪಿನ ನನ್ನ ತಂದೆಗೆ ಇಲ್ಲದ ಭುಲಾವು ಕೊಟ್ಟು, ಪಿತ್ರಾರ್ಜಿತವಾಗಿರುವ ನಮ್ಮ ಮಾಲಕಿಯ ಎರಡೂ ಜಮೀನುಗಳನ್ನು ನೀವು ನಿಮ್ಮ ಹೆಸರಿನಿಂದ ಬರಸಿಕೊಂಡಿರಿ. ಕಾಯದೆಶೀರ ವಾರಸದಾರ ನಾತೇದಿಂದ ನಾನೇ ಮಾಲಕನಿರುತ್ತೇನೆ. ಆದರೆ ನೀವು ನನಗೆ ಠಗದವೇ ಮತ್ತು ಗೈರ ಮಿಲಾಫಿಯಿಂದ ಸದರ ಎರಡೂ ಜಮೀನುಗಳನ್ನು ಕಡಿಮೆ ಲಾವಣಿಗೆ ಮಾಡಿಸಿ ನನ್ನನ್ನು ಒ ಧ್ಯಾಪೂರ್ವಕ ಮುಣಗಿಸುವ ಇರಾದೆ ಮಾಡಿದ್ದೀರಿ. ನೀವು ಕೇವಲ ಪೋಟಗಿಗ ಮಾಲೀಕರಿದ್ದೀರಿ ಆ ಪ್ರಕಾರ ನೀವು ಪೋಟಗಿ ತಕ್ಕೊಂಡು, ಉಳಿದ ಉತ್ಪನ್ನವನ್ನು ನಾನು ತಕ್ಕೊಳ್ಳುತ್ತೇನೆ. ಮತ್ತು ಯೋಗ್ಯವಾದ ರೀತಿಯಿಂದ ಲಾವಣಿ ಮಾಡಿಸುತ್ತೇನೆಂದು ಪಂಚರ ಸಮಕ್ಷಮ ಮೂರು ದಿವಸಗಳ ಹಿಂದೆ ನಿಮಗೆ ಬೇಕಾದಷ್ಟು ಹೇಳಿದರೂ ನೀವು ಕಬೂಲ ಮಾಡಲಿಲ್ಲ. ಕಾರಣ್ಯಾ ನಿರುಪಾಯವಾಗಿ ನಿಮ್ಮ ಮೇಲೆ ಈ ನೋಟೀಸು ಕೊಡಬೇಕಾಯಿತು. ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನಾಲ್ಕು ಜನ ತಿರಾಯಿತ ಪಂಚರು ಹೇಳಿದಂತೆ ನೀವು ನಡೆಯಬೇಕು. ಇದಕ್ಕೆ ನೀವು ಕಬೂಲ ಮಾಡದಿದ್ದರೆ ನಿಮ್ಮ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುವೆನು. ಆ ಸಂಬಂಧಿ ಬಿತ್ತುವ ಯಾವತ್ತು ಖರ್ಚಿನ ಬೋಜಾ ನಿಮ್ಮ ಮೇಲಿರುತ್ತದೆ. ನಮ್ಮ ತಂದೆಯವರು ೮೦ ವರ್ಷದ ಮುದುಕರಾಗಿ, ಹುಚ್ಚು ಮುಪ್ಪಿನಲ್ಲಿ ತೀರಿಕೊಂಡಿದ್ದಾರೆ ಅವರಿಂದ ಬರಿಸಿಕೊಂಡ ಕಾಗದವು ರದ್ದ ಬಾತಲ ಇದ್ದು, ನೀವು ಸದರ ಎರಡೂ ಜಮೀನುಗಳೆಂದರೆ— ಧಾರವಾಡ ತಾಲೂಕ ಶಿವಳ್ಳಿ ಗ್ರಾಮದಲ್ಲಿರುವದು ರಿ|| ಸ|| ನಂಬರ ೧೦, ಪೋಟ ನಂಬರ ೨, ಎಕರೆ ೧೧-೧೮ ಗುಂಟೆ ತರಮು ರೂಪಾಯಿ ೩೬ ಮತ್ತು ನವಲಗುಂದ ಗ್ರಾಮದಲ್ಲಿರುವ ಜಮೀನು ಇದರ ರಿ|| ಸ|| ನಂಬರ ೩೫೧, ಎಕರೆ ೯-೨೧ ಗುಂಟೆ ತರಮು ರೂಪಾಯಿ ೧೬ ಇವನ್ನು ಯಾರಿಗೂ ಪರಾಧೀನ ಮಾಡಬಾರದು ಹಾಗೆ ಮಾಡಿದರೆ ಪರಾಧೀನ ಹೊಂದಿದವರೂ ಲುಕಸಾನಕ್ಕೆ ಪಾತ್ರರಾಗುವರು. ಮತ್ತು ಈ ಬಗ್ಗೆ ನಿಮ್ಮ ಮೇಲೆ ಕಡಿಮೆ ಲಾವಣಿ ಕಾಗದ ಮಾಡಿಕೊಟ್ಟಂಥ ಗೈರ ಮೇಲೆ ಇಲಾಜ ನಡಿಸುವೆನು ತಿಳಿಯುವದು ಈ ನೋಟೀಸಿನ ಖರ್ಚ ನಿಮ್ಮ ತಲೆಯ. ಮೇಲುಂಟು ತಾ|| ೨೩ ಮೇ ೧೯೩೦ ನೇ ಇಸವಿ

ಸಹಿ ತಿಮ್ಮಾಜಿ ಹಣಮಂತ ಸಬನೀಸ

———

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೊಲಿಯ ಉಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇಸಿಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದಲ್ಲ ಕೇವಲ ವನಸ್ಪತಿಗಳ ಅಲೌಕಿಕ ಪ್ರತಾಪ! ವೈದ್ಯರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆವೆಚ್ಚವಿಲ್ಲ ಆ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಈ ... ಔಷಧ ಬೇಡುವಾಗ್ಗೆ ... ವರ್ತಮಾನಪತ್ರದ ... ಹೆಸರನ್ನು ... ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂಬಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮಿಸಸಫರಖಾನ ನಹರ್ಕೂರ, ಧಾರವಾಡ

———

ಈ ಪತ್ರವನ್ನು ... ಬಾಳಾಚಾರ್ಯ ... ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ...

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಕ್ಕೇರಿ,

ವರ್ಷ ೧೧ ಧಾರವಾಡ ರವಿವಾರ ತಾರೀಖು ೨೫ ನೇ ನೋ ೧೯೩೦ (ಸಂಚಿಕೆ ೧೧೮

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLAN

AGENTS WANTED ON LIBERAL TERMS

For further particulars apply to:-

Chief representative for Karnatak and South Karra.

N. T. Khona. P. B. 34. *Hubli*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ	ಖಂಡಿತವಾದ ಬೋನಸಗಳ
ಫಾಯದೇವಾದ ಕರಾರುಗಳ ಮೇಲೆ	ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ	ಯೋಜನೆಗಳು ಫಾಯದೇವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಒಂದ ಫಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಕೋಣಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ದ.ಮರಾಠಾ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿನ ಬಂಡವಲು ಎಂಟು ಲಕ್ಷದ ಮೇಲೆ ಇದೆ. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳಲಾಗುವದು. ದರವನ್ನು ಪ್ರತ್ಯಕ್ಷ ವಿಚಾರಿಸಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಶಿ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಇಂಗ್ರೇಜಿ ಸರಕಾರಕ್ಕೂ ಮಹಾತ್ಮರಿಗೂ ಒಡಂಬಡಿಕೆಯಾಗುವ ಶುಭಚಿನ್ಹ

ಇಂಗ್ರೇಜಿ ಸರಕಾರದವರು ಮಹಾತ್ಮರನ್ನ ರೆಗ್ಯುಲೇಶನ ಕಾಯಿದೆಯ ಪ್ರಕಾರ ಹಿಡಿದು ಹಾಕಿದ್ದ ಬಗೆಯ ರೀತಿಯಿಂದ ದಿಟದಲ್ಲಿ ಸುಖವಾಗಿರುತ್ತದೆ. ಶಿಕ್ಷೆ ಹೊಂದಿದ ಕೈದಿಯಾಗಿದ್ದರೆ- ಅವರಿಗೆ ತುರುಂಗದ ಕೆಲ ನಿಯಮಗಳಾದರೂ ಬಾಧಿಸುತ್ತಿದ್ದವು. ರಾಜಕೀಯ ಕೈದಿಯಾದ್ದರಿಂದ, ಅವರು ಅಲ್ಲಿ ಶ್ರೀಮಂತರಂತಿದ್ದಾರೆ. ಶ್ರೀಮಂತರಾಗಲಿ, ಬಡವರಾಗಲಿ, ಯಾವ ಅವಸ್ಥೆಯಿಂದಿದ್ದರೂ ಅವರ ಯೋಗ್ಯತೆಯು ಕಡಿಮೆಯಾಗಿರುವದಿಲ್ಲ. ಇಂಗ್ರೇಜಿ ಸರಕಾರದವರೂ, ಇಂಗ್ರೇಜಿ ಪ್ರಜರೂ ಇದನ್ನು ಪೂರಾ ತಿಳಿದವರಾಗಿದ್ದಾರೆ. ಶ್ರೀ ವಿಠ್ಠಲಭಾಯಿ ಪಟೇಲರು ಇದೇ ಸರಕಾರಕ್ಕೆ ಮೊನ್ನೆ ಮೊನ್ನೆ ಒಂದು ಉತ್ತಮ ಸರ್ಟಿಫಿಕೇಟು ಕೊಟ್ಟಿದ್ದಾರೆ. ಬ್ರಿಟಿಶ ರಾಜ್ಯ ಹೋಗಿ ಲಾಠೀ ರಾಜ್ಯ ಬಂತೆಂಬದೇ! ಲಾಠೀ ರಾಜ್ಯವು ಕಡೆತನಕ ಪೂರೈಸುವದೇ? ಅದರ ಪರಿಣಾಮವು ರಾಜಾ ಪ್ರಜರೀರ್ವರಿಗೂ ಅನಿಷ್ಟಕಾರವಾದದ್ದೇ. ಹೆಚ್ಚೇಕೆ ಸಂಕಟ ಮುಳ್ಳಾ ಕತ್ತಿಯ ಮ್ಯಾಲೆ ಹಾಕಿಕೊಳ್ಳಬಂತೆ ಈ ಅವಿಚಾರವನ್ನು ಮಾಡುವದು ಮುಳ್ಳದ್ದಿಗೆ ಎಂದೂ ಸರಿದೋರದಂಥ ವಿಷಯವು. ಆದ್ದರಿಂದ ಒಂದು ಕಯ್ಯಲ್ಲಿ ಬಡಿಗೆ ಹಿಡಿದರೆ- ಮತ್ತೊಂದು ಕಯ್ಯಲ್ಲಿ ಬೆಣ್ಣೆಯನ್ನು ಹಿಡಿಯಬೇಕಾಗುತ್ತದೆ. ಕೊನೆಯಲ್ಲಿ ಬೆಣ್ಣೆಯದೇ ಜಯವಾಗಿ ಬಡಿಗೆಯು ಹೆಗಲಿಗೆ ಅಂತರಾಳದಲ್ಲಿ ತೂಗಾಡುತ್ತಾ ಜೋಲಬೀಳುತ್ತದೆ. ಹಿಂದೀ ಜನರಿಗೆ ಬೇಗನೆ ಸ್ವರಾಜ್ಯ ಸ್ವಾತಂತ್ರ್ಯವೆಂಬ ಬೆಣ್ಣೆಯು ಬೇಗನೆ ದೊರೆಯುವದೆಂಬ ಶುಭಚಿನ್ಹವು ಈ ವಾರದಲ್ಲಾಗುತ್ತಿದೆ.

ಮಿ. ಜಾರ್ಜ ಸ್ಲೋಕೊಂಬ ಎಂಬ ಹೆಸರಿನ ಸಾಹೇಬರು ಈ ದೇಶಕ್ಕೆ ಬಂದಿದ್ದಾರೆ. ಇವರು ಸಾಮಾನ್ಯರಲ್ಲ. ಪತ್ರಕರ್ತರು. ಇವರು ಈ ದೇಶಕ್ಕೆ ಬಂದದ್ದು ಡೇಲಿ ಹೆರಾಲ್ಡ ಪತ್ರಿಕೆಯ ಸ್ಪೇಶಲ ಸುದ್ದಿಗಾರರೆಂದು. ಡೇಲಿ ಹೆರಾಲ್ಡವು ಇಲ್ಲಿಯ ಮಂತ್ರಿಗಳ ಮುಖ್ಯ ಪತ್ರವಾಗಿದೆ; ಇದು ಇವರ ಒಣಗ ಮುಖ್ಯ ಪತ್ರವು. ಈ ಪತ್ರದ ಪ್ರತಿನಿಧಿಯಾಗಿ ಬರುವದೆಂದರೆ- ಮಂತ್ರಿಗಳ ಪ್ರತಿನಿಧಿಯಾಗಿ ಬರುವಂತೆಯೇ ಸೈ. ಇವರು ರಾಜಕಾರಣ ಪಟುಗಳಾಗಿದ್ದಾರೆ. ಫ್ರಾನ್ಸ ಮತ್ತು ಇಂಗ್ಲಂಡಕ್ಕೆ ಕಲಹ ಬಂದಾಗ ಜಿನೇವಾದಲ್ಲಿ ಇವರೇ ಕೃಷ್ಣಶಿಷ್ಟಾಯಿ ಮಾಡಿ, ಫ್ರಾನ್ಸದ ಮಿ. ಬ್ರಾಯಿಂಡ ಮತ್ತು ಇಂಗ್ಲಂಡದ ಮಿ. ಸ್ನೋಡನಸಾಹೇಬರಿಗೆ ಒಪ್ಪಂಬಡಿಕೆ ಮಾಡಿಸಿದರು. ಹೀಗೆ ರಾಜೀ ಪ್ರವರ್ತಕರೆಂದು ಇವರ ಖ್ಯಾತಿಯುಂಟು. ಇವರು ಇದೇ ತೆರವಾಗಿ ಸಧ್ಯದಲ್ಲಿಯೂ ಉಪಯೋಗಿಸಿದ್ದಾರೆ. ಇಂಗ್ರೇಜಿ ಸರಕಾರ ಮತ್ತು ಹಿಂದೀ ಜನತೆಯ ಕೂಡ ಯಾವ ತರಹದ ಒಡಂಬಡಿಕೆ ಮಾಡಿಸಬೇಕೆಂಬ ವಿಚಾರವಾಗಿಯೇ ಇವರು ಯರವಡೆಯ ತುರುಂಗಕ್ಕೆ ಹೋಗಿ, ಎರಡು ಸಾರೆ ಮಹಾತ್ಮರ ಕೂಡ ಮಾತನಾಡಿದರು. ಇವರ ಕೂಡ ಪುಣೆಯ ಕಲೆಕ್ಟರರು, ಜೇಲ ಖಾತೆಯ ಇನ್ಸಪೆಕ್ಟರ ಜನರಲರು ಮತ್ತು ಜೇಲ ಸುಪರಿಂಟೆಂಡೆಂಟರು ಇದ್ದು ನಾಲ್ಕೈದು ತಾಸುಗಳ ತನಕ ಮಹಾತ್ಮರ ಕೂಡ ಸಂಭಾಷಣ ಮಾಡಿದರು. ಆ ಸಂಭಾಷಣೆಯಲ್ಲಿ ನಡೆದ ವಿದ್ಯಮಾನಗಳನ್ನು ಆಗಿಂದಾಗ್ಗೆ ಟಾಚಣ ಮಾಡಿಸಿ, ಅದರ ಮೇಲೆ ಮಹಾತ್ಮರ ಸಹೀ ಕೂಡ ತೆಗೆದುಕೊಂಡಿದ್ದಾರೆ. ಈ ಸಂಭಾಷಣೆಯಲ್ಲಿ ಮಹಾತ್ಮರು ರಾಜಿಗೆ ಸಿದ್ಧರಿದ್ದಾರೆಂದು ಮಿ. ಸ್ಲೋಕೊಂಬ ಸಾಹೇಬರಿಗೆ ಮನವರಿಕೆಯಾಗಿದ್ದು, ಅವರು ಈ ನಂತರ ಆ ತೆರವಾಗಿ ಲಾರ್ಡ ಆಯರ್ವಿನ ಮತ್ತು ಬ್ರಿಟಿಶ ಮಂತ್ರಿಗಳ ಕೂಡ ಸಮಕ್ಷಮ ಮಾತಾಡಬಹುದು. ಈ ಪೂರ್ವದಲ್ಲಿ ಈ ಸಂಗತಿಯನ್ನು ಮಹಾತ್ಮರ ಶರ್ತಗಳನ್ನು ತಾರಿನಿಂದ ಸಮಗ್ರವಾಗಿ ವಿಲಾಯತಿಗೆ ತಿಳಿಸಿರುತ್ತಾರೆ.

ರಾಷ್ಟ್ರೀಯ ಸ್ವಾತಂತ್ರ್ಯವೆನಿಸುವಂಥ ೧೧ ಕಲಮುಗಳ ಒಂದು ಪತ್ರವನ್ನು ಮಹಾತ್ಮರು ಲಾರ್ಡ ಆಯರ್ವಿನಸಾಹೇಬರಿಗೆ ಬರೆದಿರುತ್ತಾರಷ್ಟೇ; ಅವುಗಳಲ್ಲಿ ಸಧ್ಯ ಏಳು ಕಲಮುಗಳ ವಿಚಾರವನ್ನು ಹಿಂದಿಟ್ಟು, ನಾಲ್ಕೇ ಕಲಮುಗಳ ಬಗ್ಗೆ ಒಡಂಬಡಿಕೆಯಾಗಬೇಕೆಂದು ತಾವು ಬರಕೊಟ್ಟ ರಾಜೀ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅವೇನಂದರೆ:-

೧ ರಾವುಂಡ ಟೇಬಲಿನ ಕಾರ್ಯಕ್ಷೇತ್ರದಲ್ಲಿ ಹಿಂದುಸ್ಥಾನಕ್ಕೆ ದೊರೆಯಬೇಕಾದ ಪೂರ್ಣ ಸ್ವಾತಂತ್ರ್ಯವಿರುವಂಥ ರಾಜ್ಯ ಘಟನೆಯನ್ನು ಮುಟ್ಟುವದಿರತಕ್ಕದ್ದು.

೨ (ಅ) ಉಪ್ಪಿನ ಕರ ರದ್ದು ಮಾಡಬೇಕು: (ಬ) ಮದ್ಯಪಾನ ಸಂಪೂರ್ಣ ಹೋಗಬೇಕು (ಕ) ಪರದೇಶಿ ಅರಿವೆಗೆ ಬಹಿಷ್ಕಾರ ವಿಧಿಬೇಕು. ಎಂಬೀ ಮೂರು ಕಲಮುಗಳನ್ನು ಅಮಲಿನಲ್ಲಿ ತರಬೇಕು.

೩ ಕಾಯದೆಭಂಗದ ಚಳವಳಿಯ ಎಲ್ಲ ಕೈದಿಗಳನ್ನು ಬಂಧಮುಕ್ತ ಮಾಡಬೇಕು.

೪ ಮೊದಲು ಹೇಳಿದ ೧೧ ಬೇಡಿಕೆಗಳಲ್ಲಿ ಉಳಿದಿರುವ ನಾಲ್ಕು ಕಲಮುಗಳ ವಿಚಾರವು ರಾವುಂಡ ಟೇಬಲಿನಲ್ಲಾಗಬೇಕು.

ಈ ಬೇಡಿಕೆಯು ಯೋಗ್ಯವಾಗಿರುತ್ತವೆಂದು ಇಂಗ್ರೇಜಿ ಮತ್ತು ಮವಾಳ ಪತ್ರಿಕೆಗಳು ಅಭಿಪ್ರಾಯಪಟ್ಟಿರುತ್ತಾರೆ. ಮಹಾತ್ಮರು ಯಾವಾಗಲು ಯಾವದೊಂದನ್ನು ಸ್ಪಷ್ಟವಾಗಿ ಹೇಳತಕ್ಕವರಿದ್ದಾರೆ. ರಾಜ್ಯತಂತ್ರದಲ್ಲಿ ಹಿಂದೀ ಜನರಿಗೆ ಸ್ವಾತಂತ್ರ್ಯವಿರಬೇಕೆಂಬುದನ್ನು ಒತ್ತೊತ್ತಿ ಹೇಳುವದಕ್ಕೆ ಈಗಿನ ಪದ್ಧತಿಯನ್ನು ಬಹುವಾಗಿ ಹಳಿದಿರುತ್ತಾರೆ. ಮಹಾತ್ಮರ ಅಂತರಂಗವನ್ನು ಮಿ. ಸ್ಲೋಕೊಂಬಿಯವರು ತಮ್ಮ ಶಬ್ದಗಳಲ್ಲಿ ಮುಂದೆ ಕೊಟ್ಟಂತೆ ಹೇಳುತ್ತಾರೆ.

ಮಹಾತ್ಮರ ಪ್ರೇಮವು ಅಖಿಲ ಮಾನವ ಜಾತಿಯ ಮೇಲಿರುವಂತೆ ಹಿಂದುಸ್ಥಾನದ ಮೇಲಂತೂ ಉಂಟು. ಇದೇ ಪ್ರಕಾರ ಹಿಂದುಸ್ಥಾನದಲ್ಲಿರುವ ಬ್ರಿಟಿಶರ ವರ್ಚಸ್ಸು ಅತ್ಯಂತವಾಗಿ ಕೆಟ್ಟದ್ದೂ ಪಾಪದ್ದೂ ಆಗಿರುತ್ತದೆಂದು ತಿಳಿದು, ಅದನ್ನು ತೀರಸ್ಕರಿಸುತ್ತಾರೆ. ಹಿಂದುಸ್ಥಾನಕ್ಕೆ ಬಂದಿರುವ ಇಂಗ್ಲಿಷರು ಅತ್ಯಂತ ಜುಲುಮೆಯಿಂದ ರಾಜ್ಯಕಾರಭಾರ ಮಾಡತಕ್ಕವರಿದ್ದು, ಇದರಿಂದ ಆಳಿಕೆಯು ಅತ್ಯಂತವಾಗಿ ಕೆಟ್ಟದ್ದಾಗಿ ಹಿಂದೀ ಜನತೆಯು ದುಃಖದಲ್ಲಿ ಮುಣುಗಿರುತ್ತದೆಂದು ಅವರ ಸ್ಪಷ್ಟವಾದ ಮತವಾಗಿದೆ. ಆದರೆ ವ್ಯಕ್ತಿಶಃ ಯಾವ ಇಂಗ್ಲಿಷ ಮನುಷ್ಯನ ದ್ವೇಷಮಾಡುವದಿಲ್ಲ. ಪ್ರತಿಯೊಬ್ಬ ಇಂಗ್ಲಿಷ ಮನುಷ್ಯನ ವಿಷಯವಾಗಿ ಆದರಪಡುವರು. ಲಾರ್ಡ ಆಯರ್ವಿನಸಾಹೇಬರ ವಿಷಯವಾಗಿಯೂ ಅವರಲ್ಲಿ ಆದರವುಂಟು. ಹಿಂದುಸ್ಥಾನಕ್ಕೆ ಒಮ್ಮೆ ಸ್ವಾತಂತ್ರ್ಯ ದೊರೆಯಿತೆಂದರೆ- ಇಂಗ್ಲಂಡಕ್ಕೆ ಹಿಂದುಸ್ಥಾನದಲ್ಲಿ ಮಹಾತ್ಮರಂಥ ನಿಃಸೀಮ ಗೆಳೆಯರು ದೊರೆಯರು. ಒಮ್ಮೆ ಹಿಂದುಸ್ಥಾನಕ್ಕೆ ಬ್ರಿಟಿಶ ರಾಷ್ಟ್ರಸಂಘದಲ್ಲಿ ಸ್ವಾತಂತ್ರ್ಯ ಕೊಡಿರಿ. ಆನಂತರ ಮಹಾತ್ಮರು ಹಿಂದೀ ರಾಷ್ಟ್ರಕ್ಕೆ ಹೇಗೆ ವಂದನೀಯರಾಗಿರುತ್ತಾರೆ, ಹಾಗೆಯೇ ಬ್ರಿಟಿಶ ರಾಷ್ಟ್ರಕ್ಕೂ ವಂದ್ಯರಾದಂಥ ದೊಡ್ಡ ಮನುಷ್ಯರಾಗುವರು.

ಮಿ. ಸ್ಲೋಕೊಂಬಿ ಸಾಹೇಬರ ಕಡೆಯ ವಾಕ್ಯಗಳು ಆಶಾಜನಕವಾಗಿರುತ್ತವೆ. ಮಹಾತ್ಮರು ಕಳೆದ ನಾಲ್ವತ್ತು ವರ್ಷಗಳಿಂದ ಸತ್ಯಾಗ್ರಹ ಮಾಡುತ್ತಾ, ಯಾತನೆ ಸಹನೆ ಮಾಡುತ್ತಾ ಬಂದಿದ್ದಾರೆ. ಅಪಯಶವೆಂಬುದಂತೂ ಅವರಿಗೆ ಗೊತ್ತೇ ಇಲ್ಲ. ಈ ಚಳವಳಿಯಲ್ಲಂತೂ, ಸ್ವಾತಂತ್ರ್ಯ ತೆಗೆದುಕೊಂಡೇ ತುರುಂಗದಿಂದ ಹೊರಬೀಳುವೆವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಿ. ಸ್ಲೋಕೊಂಬಿಸಾಹೇಬರು ಅನೇಕ ರಾಜನಿಷ್ಠ ಮತ್ತು ಮವಾಳರ ಕೂಡ ಸಂಭಾಷಣೆ ಮಾಡಿದ್ದು, ಅವರೆಲ್ಲರೂ ಮಹಾತ್ಮರ ಹೊರತು, ಬೇರೆಯು ಆಗಲಾರದೆಂದು ಸ್ಪಷ್ಟ

ವಾಗಿ ಹೇಳಿದ್ದಾರೆ. ಆದ್ದರಿಂದ ಆತನ ರಾಜ್ಯ ಹೋಗಿ ಪರಜಾತಿಯ ಸ್ವರಾಜ್ಯ ಸ್ವಾತಂತ್ರ್ಯದ ಹಿಂದುಸ್ಥಾನವಾಗಬೇಕಾದರೆ- ಮಹಾತ್ಮರೊಬ್ಬರೇ ಮುಖ್ಯ ಪುರುಷರಾಗಿದ್ದಾರೆ. ಮಂತ್ರಿಗಳು ರಾಜೀನಾಮೆ ಕೊಡುವದು ಹೊತ್ತುಗಳೆಯುವ ಕಾರಣವೆಂದು ನಮ್ಮ ಬಲವಾದ ನಂಬಿಗೆ.

ಸಾಹೇಬರು ಮಹಾತ್ಮರನ್ನು ಕಾಣಲಿಕ್ಕೆ ಹೋದಾಗ ಕಂಡ ನೋಟವು.

——(೦)——

ಮಹಾತ್ಮರ ಕೋಣೆಯ ಮುಂದೆ ಒಂದು ದೊಡ್ಡ ಒಳಾಂಗಣವುಂಟು. ಇವರ ಕೋಣೆಯ ಮಧ್ಯದಲ್ಲಿರುವ ಕಟ್ಟೆಯ ಮೇಲೆ ಉಚ್ಚ ಸ್ಥಾನದಲ್ಲಿ ಖಾಟೆಯುಂಟು. ಅವರ ಹಾಸಿಗೆಯ ಹತ್ತರವೇ ಇಂಗ್ರೇಜೀ ಗ್ರಹಸ್ಥನಾದ ಬನಿಯನ್ನನಾಹೇಬನು ಬರೆದ ಯಾತ್ರೆಯ ಪ್ರಗತಿ ಎಂಬ ಹೆಸರಿನ ಪುಸ್ತಕವಿತ್ತು. ಈ ಸಾಹೇಬರು ಸೆರೆಮನೆಯಲ್ಲಿದ್ದಾಗಲೇ ಬರೆದ ಪುಸ್ತಕವು. ಮಹಾತ್ಮರು ಇದನ್ನು ಆಗಾಗ್ಗೆ ಓದುತ್ತಿರಬಹುದು. ಮಹಾತ್ಮರು ದಿನಾಲು ನಸುಕಿನಲ್ಲೆದ್ದು ನೂಲುತ್ತಾ ಕೂಡುತ್ತಾರೆ. ಮತ್ತು ನಡನಡವೆ ಏಕಾಗ್ರ ಚಿತ್ತದಿಂದ ಕೊಡುಕೊಳ್ಳುತ್ತಾರೆ. ಹಿಂದುಸ್ಥಾನದ ಕೋಟ್ಯಾವಧಿ ಜನರು ಯಾರಿಗೆ ಮಹಾತ್ಮರೆನ್ನುತ್ತಾರೆ; ಆ ಮಹಾತ್ಮರ ನಿತ್ಯ ಕ್ರಮವು ಈ ಪ್ರಕಾರ ಇರುತ್ತದೆ. ನಾನು ಅವರ ಕೋಣೆಯ ಹತ್ತರ ಹೋದ ಕೂಡಲೆ, ಅವರು ನನ್ನನ್ನು ಕಾಣಲಿಕ್ಕೆ ಬಂದರು. ಅವರು ನನ್ನ ಕೂಡ ಸ್ವಾಭಾವಿಕವಾಗಿ ನಗೆಮೊಗದವರಾಗಿದ್ದರು. ಇವರು ತಮ್ಮ ಯಾವಾಗಿನ ಪದ್ಧತಿಯಂತೆ ಚಕ್ಕಳಿಮಕ್ಕಳಿ ಹಾಕಿಕೊಂಡು ಕೂಡ್ರದೆ, ಬೆತ್ತದ ಖುರ್ಚಿಯ ಮೇಲೆ ಕಾಲ ಮೇಲೆ ಕಾಲು ಹಾಕಿಕೊಂಡು ಕೂತಿದ್ದರು. ಪದ್ಧತಿಯಂತೆ ಬರಿಮೈಯಿಂದಿದ್ದರು, ಸೊಂಟಕ್ಕೆ ಖಾದಿಯ ಒಂದು ತುಂಡು ಬಟ್ಟೆಯ ಹೊರ್ತು ಮೈಮೇಲೆ ಏನೂ ಇದ್ದಿಲ್ಲ. ನಡುನಡುವೆ ಅವರ ಮುಗುಳ್ನಗೆಯು ಸಪ್ಪಳವಾಗುತ್ತಿತ್ತು.

ಶ್ರೀ ಕೇಳಕರರ ಕೂಡ ವಿಚಾರ-

ಮಿ ಸ್ಲೊಕೊಂಬ ಸಾಹೇಬರು ಮಹಾತ್ಮರನ್ನು ಕಂಡು ಬಂದ ಬಳಿಕ, ಊರೊಳಗೆ ಸರ್ವಂಟ ಆಫ್ ಇಂಡಿಯಾ ಸೊಸಾಯ್ಟಿಗೆ ಬಂದು ಶ್ರೀ ಕೇಳಕರ ಮೊದಲಾದವರೊಂದಿಗೆ ಸದ್ಯಸ್ಥಿತಿಯನ್ನು ಕುರಿತು ಸಂಭಾಷಣೆ ಮಾಡಿದರು.

ಕರ್ನಾಟಕ ಸತ್ಯಾಗ್ರಹ.

ಕಾರವಾರ ಜೇಲಿನಲ್ಲಿ ರಾಜಕೀಯ ಕೈದಿಗಳ ಪರಿಸ್ಥಿತಿ ಬಹಳ ಕೆಟ್ಟಿದೆ. ಶ್ರೀ, ಶಂಕರರಾವ ಗುಳವಾಡಿ ಇವರ ವಿಚಾರಣೆ ನಡೆಯುತ್ತಿರುವಾಗ ಅವರನ್ನು ಕಾರವಾರ ಜೇಲಿನಲ್ಲಿಯೇ ಇಟ್ಟಿದ್ದರು. ಆಗ ಅಲ್ಲಿಯ ರಾಜಕೀಯ ಕೈದಿಗಳ ವಿಷಯಗಳನ್ನು ಕುರಿತು ಈ ರೀತಿ ತಿಳಿಸಿರುತ್ತಾರೆ "ಸ್ವಾಮಿ ವಿದ್ಯಾನಂದಜೆಯವರು ೬ ಪೌಂಡುಗಳು, ಶ್ರೀ. ಹನುಮಂತರಾವ ಕೌಜಲಗಿ ೪ ಪೌಂಡುಗಳು, ಶ್ರೀ. ಎಂ. ಸಿ. ನಾಡಕರಣಿ ೧೦ ಪೌಂಡುಗಳು ತೂಕ ಕಡಿಮೆಯಾಗಿದ್ದಾರೆ. ಸರಿಯಾದ ಊಟ ಸಿಗುವದಿಲ್ಲೆಂಬುದೇ ಕಾರಣ. ರಾಜಕೀಯ ಸಿ ದರ್ಜೆ ಕೈದಿಗಳಿಗೆ ಸರಿಯಾದ ಆಹಾರ ಸಿಗುವದಿಲ್ಲ. ಮತ್ತು ಅವರನ್ನು ಇತರ ಕೈದಿಗಳಂತೆಯೇ ನಡಿಸುತ್ತಾರೆ ಕೈದಿಗಳಿಗೆ ಉಡಿಗೆ ಇಲ್ಲ. ಹಳೇ ಬಟ್ಟೆಗಳನ್ನು ಬೇಡಿಕೊಂಡು ಇಲ್ಲವೇ ಜೇರೆಯವರದು ಕಸಕೊಂಡು ಇವರಿಗೆ ಕೊಡುತ್ತಾರೆ. ಟಿನ್ ಪಾತ್ರೆಗಳು ಸಾಕಷ್ಟು ಇಲ್ಲ. ಇತರ ದರ್ಜೆಯ ಕೈದಿಗಳ ಪಾತ್ರೆಗಳನ್ನು ಕಸಕೊಂಡು ರಾಜಕೀಯ ಕೈದಿಗಳಿಗೆ ಕೊಟ್ಟು ಅವರಿಗೆ ಮಣ್ಣಿನ ಪಾತ್ರೆಗಳನ್ನು ಕೊಡುತ್ತಾರೆ. ಸಿ ದರ್ಜೆಯ ಸಾದಾ ಶಿಕ್ಷೆಯ ಕೈದಿಗಳನ್ನು ಏಕಾಂತವಾಸದಲ್ಲಿ ಇಟ್ಟಿದ್ದಾರೆ. ಸ್ವಾಮಿ ವಿದ್ಯಾನಂದಜೆಯವರು ಉಪವಾಸ ವ್ರತವನ್ನು ಕೈಕೊಳ್ಳುವ ವಿಚಾರದಲ್ಲಿದ್ದಾರೆ. ಕಾರವಾರ ಕೈದಿಗಳಿಗೆ ಅನ್ನದ ಅಭ್ಯಾಸವಿದ್ದು ದಿನಂಪ್ರತಿ ಅನ್ನ ಕೂಡ ಸಿಗುವದಿಲ್ಲ.

ಸತ್ಯಾಗ್ರಹ ಶಿಬಿರ ಅಂಕೋಲಾ ೨೭-೪-೩೦

ಚಂ. ಮೂರ್ತಿ ಪ್ರಕಟನಾಕಾರ್ಯಾಧಿಕಾರಿ

ಎರಡು ಲಕ್ಷ ಜನರ ಮೆರವಣಿಗೆ.

—(೦)—

ಪೋಲೀಸರ ಪ್ರತಿಬಂಧ

ಮುಂಬಯಿಯ ವ್ಯಾಪಾರಸ್ಥರು ಎರಡು ಲಕ್ಷ ಜನರದೊಂದು ಪ್ರಚಂಡ ಮೆರವಣಿಗೆ ತೆಗೆದಿದ್ದರು. ಅದನ್ನು ಪೋಲೀಸರು ಅಡ್ಡ ಕಟ್ಟಿ ನಿಲ್ಲಿಸಿದ್ದರಿಂದ ವ್ಯಾಪಾರಸ್ಥರಲ್ಲಿ ಭಯಂಕರ ಕ್ಷೋಭೆಯುಂಟಾಗಿರುತ್ತದೆ.

ಬಿಸನಾಳದವರು ಮಳೆಗಾಲದ ಮೊದಲೇ ಉಪ್ಪಿನ ಕಾಯದೆಭಂಗವನ್ನು ರಹಿತ ಪಡಿಸಿ, ಕಾಲಗಳ ಮೇಲೆ ದಾಳೀ ಎಬ್ಬಿಸುವರು.

ಗಾಂಧೀ ಟೊಪ್ಪಿಗೆಯ ಅಪಮಾನದ ಮಾನ ಸಂಪಾದನೆ

—(೦)—

ಸೋಲ್ಲಾಪೂರದ ರಾ. ಬ. ಸಾಠೆ ಮತ್ತು ಕೆಲವು ಕೆಲ ಸದ್ಗೃಹಸ್ಥರು ಸೊಲ್ಲಾಪೂರದಲ್ಲಿ ಗಾಂಧೀ ಟೊಪ್ಪಿಗೆ ಹಾಕಿ, ರಾಷ್ಟ್ರೀಯ ನಿಶಾನೆ ಹಿಡಕೊಂಡು ಊರೊಳಗೆ ಹೋಗುವರು. ಹೀಗೆ ಬರುವೆವೆಂದು ರಾ. ಬ. ಸಾಠೆಯವರು ಮುಂದಾಗಿ ಅಲ್ಲಿಯ ಅಮಲದಾರರಿಗೆ ತಿಳಿಸಿದ್ದಾರೆ.

ಮಹತ್ವದ ಸುದ್ದಿಗಳು.

——(೦)——

ರಾಜೀನಾಮೆ-

ಮುಂಬಯಿಯ ನರ ಪುರುಷೋತ್ತಮದಾಸ ಮತ್ತು ಶ್ರೀ. ಲಾಲಜಿ ನಾರಾಯಣಜಿಯವರು ಅಸೆಂಬ್ಲಿ ಮತ್ತು ಕೌನ್ಸಿಲಕ್ಕೆ ರಾಜೀನಾಮೆ ಕೊಟ್ಟರು. ಇವರು ಅಲ್ಲಿಯ ಹಿಂದೂ ವರ್ತಕ ಸಂಘದ ಪರಿಯಿಂದ ಮೆಂಬರರಿದ್ದು, ಈ ಸಂಘದವರು ಮಹಾತ್ಮರನ್ನು ಬಿಟ್ಟು ರಾವುಂಡ ಟೇಬಲಕ್ಕೆ ಬರಲಾರೆವೆಂದು ಠರಾವು ಮಾಡಿದ್ದಾರೆ.

ನಿಜಾಮರ ಪ್ರತಿನಿಧಿಗಳು-

ವೈಸರಾಯರಂತೆ ನಿಜಾಮಸಾಹೇಬರೂ ರಾವುಂಡ ಟೇಬಲಕ್ಕೆ ತಮ್ಮ ಪರಿಯಿಂದ ಪ್ರತಿನಿಧಿಗಳನ್ನು ಕಳಿಸುವ ವಿಚಾರದಲ್ಲಿ ತೊಡಗಿದ್ದಾರೆ. ನೀಲಗಿರಿಯ ತಂಪು ಹವೆಗಾಗಿ ಹೋಗಿದ್ದ ದೊಡ್ಡ ದೊಡ್ಡ ಕಾಮದಾರರನ್ನು ತಾರಿನಿಂದ ಕರಸಿಕೊಂಡಿದ್ದು, ರೆಸಿಡೆಂಟರ ಸಹಾಯದಿಂದ ಯಾರನ್ನು ಕಳಿಸಬೇಕೆಂಬ ವಿಚಾರ ನಡೆಸಿದ್ದಾರೆ.

ಧಾರಾಸಾನದ ಕಥೆ ಮುಗಿಯಿತು-

ಪೋಲೀಸರು ಮತ್ತು ದಂಡಿನವರು ಸೇರಿ, ಧಾರಾಸಾನದ ಸತ್ಯಾಗ್ರಹ ಶಿಬಿರವನ್ನು ನಿರ್ಜನ ಮಾಡಿದರು. ಈ ಗುಡಿಸಲುಗಳನ್ನು ನೆಲಸಮ ಮಾಡಿದರು. ಪೋಲೀಸರಿಂದ ೩೦೦ ಜನ ಸ್ವಯಂಸೇವಕರು ಕೂಡಿ ತಿಂದಿದ್ದು, ಇವರಲ್ಲಿ ಒಬ್ಬನು ಸತ್ತನು.

ಸುರತದಲ್ಲಿ ಹರತಾಳ-

ಧಾರಾಸಾನದಂತೆ ಸುರತಕ್ಕೂ ದಂಡು ಹೋಗಿದೆ. ತೋಪು, ಮಶೀನ ಗನ್ನಗಳನ್ನೂ ಸ್ಟೈನಿಂದ ಬಂದವು. ದಂಡಿನ ಆಗಮನವನ್ನು ಭಯಸೂಚಕವೆಂದು ಬಗೆದು, ನಾಗರಿಕರು ಹರತಾಳ ಮಾಡಿ, ಎಲ್ಲ ವ್ಯವಹಾರವನ್ನೂ ನಿಲ್ಲಿಸಿದ್ದಾರೆ.

...ನು ಕೊಡದ, ಪತ್ರವನ್ನು ಒಂದಡಬೇಕೆಂದ್ ... ದಿವಾಕರರು ತಮ್ಮನ್ನು ಕಾಣಲಿಕ್ಕೆ ಬಂದಿದ್ದ ... ತಮ್ಮ ತಮ್ಮ ಮತ್ತು ಬೀಗರಮುಂದೆ ಹೇಳಿರುತ್ತಾರೆ.

PUBLIC NOTICE.

Know all men by these presents that my client Mr. Moreshwar Ramachandra Tikare of Dharwar has been living seperately in food and worship and is so doing with the express intention of living as a divided member of the lately existant joint family consisting of the said Moreshwar and his uncle Mr. Gopalrao Krishnaji Tikare. The said two persons are now seperate in interest from this day. The joint family property will be held for the present by these two persons as tenants in common until the same is divided into two shares by metes and bonds.

My client will not be responsible for any transaction that may be entered into by the other tenant Mr. Gopalrao Tikare, without the express consent of my client. Those who deal with the said Mr. Gopalrao will do so henceforward, in his individual capacity and not as representing the joint family which stands desolved from this day.

Dharwar 25-5-1930. } R V. Bhandiwad *Pleader.*

ನೋಟೀಸಿನ ದರಗಳು

ಸಿಂಗಲ್ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದೂವರ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದಾಣೆ ಸರಕಾರ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ, ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಭಾಷಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು... ಡಬಲ್ ಕಾಲಮಿನ ಪಳಿಗೆ ಇಮ್ಮಡಿ ದರ ವ್ಯಾಪಾರ ಕಾಯಂ ಜಾಹಿರಾತುಗಳನ್ನು ಕೊಡುವವರು ... ಪತ್ರವ್ಯವಹಾರ ಮಾಡಬೇಕು.

[illegible] ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! [illegible] ಅನೇಕ ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ. ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ
C/o [illegible] ಧಾರವಾಡ

[illegible] ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ [illegible]

ನೋಟೀಸು.

———(೧)———

ಸಾ. ಮೆ. ಇಮಾಮಸಾ॥ ವ॥ ರಾಜೆಸಾ॥ ಬುಡನಖಾನವರ ಸಾ. ವಿ ಸ್ರಿಕೋಟಿ ತಾ. ಕಲಘಟಗಿ ಇವರಿಗೆ—

ಕೆಳಗೆ ಸಹಿ ಮಾಡುವ ರಾಜಬಿ ಕೋಂ ಇಮಾಮಸಾ॥ ಬುಡಣಖಾನವರ ಈ ಲೇಖದ ಮೇಲಿಂದ ನೋಟೀಸ ಕೊಡುವದರಲ್ಲಿ ಬರುತ್ತದಲ್ಲಾ ನೀವು ನನ್ನ ಲಗ್ನದ ಗಂಡನಿದ್ದು ಈಗ ಎರಡು ವರ್ಷ ಸುಂಕೀರ್ತ ಪ್ರಪಂಚ ಮಾಡಿದಿರಿ ಈಗ ದುಷ್ಟ ಜನರ ಮಾತು ಕೇಳಿ ಹೊಡದು ಬಡದು ಮಾಡಲಿಕ್ಕೆ ಹತ್ತಿರುತ್ತೀರಿ ಸರಿಯಾಗಿ ಪ್ರಪಂಚ ಮಾಡವಲ್ಲಿರಿ ಮತ್ತು ದುಷ್ಟ ಜನರ ಚಿತಾವಣಿ ಮೇಲಿಂದ ಪುನಃ ಲಗ್ನ (ನಿಕಾ) ಮಾಡಿಕೊಳ್ಳುವ ಆಲೋಚನೆಯಲ್ಲಿ ಇದ್ದಂತೆ ತಿಳಿಸಿದೆ ಅದರಂತೆ ನೀವು ಮಾಡಿಕೊಳ್ಳಬಾರದು ಅದರಿಂದ ನಿಮಗೆ ಬಹಳ ನುಕಸಾನ ಆಗೇತು ಒಂದು ವೇಳೆ ಮಾಡಿಕೊಳ್ಳುವದಾದರೆ ನನ್ನ ಅನ್ನ ವಸ್ತ್ರದ ತಜವೀಜ ಮೊದಲು ಮಾಡಬೇಕು ಮತ್ತು ಮಹಾರ ವ ದಿನಾರ ಬಾ॥ (೫೩೫) ಐದುನೂರಾ ಮೂವತ್ತೈದು ರುಪಾಯಿ ನನಗೆ ರೋಖ ಕೊಡಬೇಕು ಹೀಗೆ ಮಾಡದೆ ಹೊಸ ಲಗ್ನ ಮಾಡಿಕೊಂಡರೆ ಮೇಲೆ ಹೇಳಿದ ಹಣದ ಬಗ್ಗೆ ಗೈರೆ ನಿಮ್ಮ ಮೇಲೆ [illegible] ನಡಸಬೇಕಾಗುವದು ಇದರ ಖರ್ಚಿ ಬಗ್ಗೆ ಜಪ್ತಿ ವಗೈರೆ ಪೂರ್ವೋಪಾಯ ತಜವೀಜ ಸಹ ಮಾಡಬೇಕಾಗುತ್ತದೆ ಈ ಯಾವತ್ತರ ಖರ್ಚು ನಿಮ್ಮ ಮೇಲೆ ಬೀಳುವದು ಇದರಿಂದ ನಿಮಗೆ ಎಷ್ಟು ಕಷ್ಟ ಆಗೇತು ನೀವೇ ವಿಚಾರ ಮಾಡಿಕೊಳ್ಳಬೇಕು ನಾನಂತು ನಿಮ್ಮ ಅಪ್ಪಣೆಯ ಪ್ರಕಾರ ನಡಕೊಂಡು ಬಾಳ್ವೆ ಮಾಡಲಿಕ್ಕೆ ಕಬೂಲ ಇದ್ದೇನೆ ಯಾವತ್ತು ಹಕೀಕತ ಪೂರ್ಣ ವಿಚಾರ ಮಾಡಿಕೊಂಡು ಮುಂದಿನ ಕೆಲಸ ಮಾಡಬೇಕು ತಿಳಿಯುವದು ತಾರೀಖು ೨೪-೫-೧೯೩೦ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ರಾಜಬಿ ಕೋಂ ಇಮಾಮಸಾ॥ ಈಕೆದು ಅದೆ.

ಸುಸಮಯ

——(೦)——

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಜಟ್ಟಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೨೬ ಸೇ ಮೇ ೧೯೩೦ (ಸಂಚಿಕೆ ೧೧೯

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

GENTS WANTED ON LIBERAL TERMS

For further particulars apply to—

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ	ಖಂಡಿತವಾದ ಬೋನಸಗಳ
ಧಾರಾಳವಾದ ಕರಾರುಗಳ ಮೇಲೆ	ಹಾನಾಗಿ ರದ್ದಾಗದ ನಾದರಿಯ ಪಾಲಿಸಿಯ ಯೋಜನೆ	ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರ ಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ್ತು ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೪-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾ. ವಿಜಯ ಧಾರವಾಡ

ಧಾರವಾಡದ ಮಿ. ಕಲೆಕ್ಟರಸಾಹೇಬರಿಗೂ ವಿಜಯದ ಸಂಪಾದಕರಿಗೂ ಮಹತ್ವದ ಸಂಭಾಷಣೆ.

ಮೊನ್ನಿನ ದಿವಸ ಮಧ್ಯಾಹ್ನದಲ್ಲಿ ವಿಜಯದ ಸಂಪಾದಕರಿಗೆ ಧಾರವಾಡದ ಕಲೆಕ್ಟರರಾದ ಮಿ. ಅಬಾಟಸಾಹೇಬರನ್ನು ಕಾಣುವ ಸಮಯ ಬಂದಿತು. ಈಗಿನ ಚಳವಳಿಯಲ್ಲಿ ನಾನಾ ತರದ ಹಾರಾ ಸುದ್ದಿಗಳು ಹುಟ್ಟುತ್ತವೆ. ಬೇರೆ ಬೇರೆ ಜನರು ಇಲಿ ಹರಿಯಿತೆಂದರೆ ಹುಲಿ ಹರಿಯಿತೆಂದು ಹೇಳುವ ಸುದ್ದೀ ಸೂರಪ್ಪರಾಗುತ್ತಾರೆ. ವರ್ತಮಾನಪತ್ರಗಳಲ್ಲಿ ಬರುವ ಎಲ್ಲ ಸುದ್ದಿಗಳು ನಿಜವಾಗಿರುವದಿಲ್ಲ. ಆದ್ದರಿಂದ ಧಾರವಾಡ ಜಿಲ್ಲೆಯ ವರ್ತಮಾನಪತ್ರಕಾರರು ಯಾವದೊಂದು ಸುದ್ದಿಯು ಮೊದಲು ನಿಜವಿರುತ್ತದೆಂದು ಖಂಡಿತ ಮಾಡಿಕೊಂಡು, ಅದನ್ನು ಮುದ್ರಿಸಬೇಕೆಂದು ವಿಜಯದ ಸಂಪಾದಕರ ಮುಖಾಂತರ ಹೇಳುವದೇ ಸಾಹೇಬರ ಮುಖ್ಯೋದ್ದೇಶವಾಗಿತ್ತು. ಸುಳ್ಳು ಸುದ್ದಿ ಮತ್ತು ನಂಬದಂಥ ಸುದ್ದಿಗಳೆಂದು ಸಾಹೇಬರು ಕೆಲ ಉದಾಹರಣೆಗಳನ್ನು ಹೇಳಿದರು. ಮಹಾತ್ಮರನ್ನು ಹಿಡಿದ ದಿವಸ ತಾವು ಅಬಟಸಾಹೇಬರು ಆತ್ಮರಕ್ಷಣೆಗಾಗಿ ತುರಂಗದಲ್ಲಿ ಹೋಗಿ ಮಲಗಿರೆಂಬದೂ ಯಾರವಡೆಯ ತುರಂಗದಲ್ಲಿ ಮಹಾತ್ಮರು ಮೂರು ತಾಸು ಅದೃಶ್ಯರಾಗಿದ್ದರೆಂಬದೂ, ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನಿಗೆ ಸಲಾಮು ಮಾಡಿದ್ದರೆಂಬದೂ, ಸರ್ವಥಾ ನಿಜವಲ್ಲ. ನಂಬುವಂಥದಲ್ಲ. ತಾವು ಹೆದರಿಕೆಯಿಂದ ಜೇಲಿಗೆ ಮಲಗಲು ಹೋಗಿಲ್ಲ. ಕಾರಣವೂ ಇದ್ದಿಲ್ಲ. ನಮ್ಮನ್ನು ಕೇಳಿದ್ದರೆ ನಾವು ಸಹಜವಾಗಿ ನಿಜವನ್ನು ಹೇಳಬಹುದಾಗಿತ್ತು. ಹಾಗೆ ಕೇಳದೆ ಬೀದಿಯ ಮಾತು ಕೇಳಿ ಬರೆಯುವದು ತೀರ ಗೌಣವು. ಮಹಾತ್ಮರು ಜೇಲಿನಲ್ಲಿ ಅದೃಶ್ಯರಾಗಿದ್ದರೆಂಬದೂ ಅಶಕ್ಯವು. ಇಂಗ್ರೇಜಿ ಗೃಹಸ್ಥರಿಂದಲೇ ನಡಿಸಲ್ಪಡುವ ಡೇಲಿ ಮೇಲ ಪತ್ರದಲ್ಲಿ ಈ ಸುದ್ದಿಯು ಬಂದಿರಬಹುದು. ಒಬ್ಬರು ತಪ್ಪು ಮಾಡಿದರೆಂದು ಮತ್ತೊಬ್ಬರು ಮಾಡಬಾರದು. ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನೆಗೆ ಸಲಾಮು ಮಾಡಲಾರರು. ಹಿಂದೂ ಜನರು ಸಾಹೇಬರ ಬಂಗ್ಲೆಗೆ ಬರುವಾಗ ಕಾಲ್ಗುದುರೆಯನ್ನು ಹೊರಗೆ ಬಿಟ್ಟು ಬರುವಂತೆ, ಸಾಹೇಬರು ಯಾರೊಬ್ಬರ ಮನೆಯಲ್ಲಿ ಹೊಗುವಾಗ ತಲೆಯ ಮೇಲಿನ ಟೊಪ್ಪಿಗೆ ತೆಗೆಯುವರು. 'ಇದೇ ತೆರವಾಗಿ' ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನೆಯ ಸಕ್ಕಂ ನೆರೆದ ಜನರ ಗೌರವಕ್ಕಾಗಿ ಟೊಪ್ಪಿಗೆಯನ್ನು ಎತ್ತಿ ಹಿಡಿದಿರಬಹುದು. ಇಷ್ಟರಿಂದ ಸಾಹೇಬರು ರಾಷ್ಟ್ರೀಯ ನಿಶಾನೆಗೆ ಸಲಾಮು ಮಾಡಿದರೆಂದು ತಪ್ಪು ತಿಳುವಳಿಕೆಯ ಬರಹಗಳನ್ನು ಬರೆಯಬಾರದು. ಯಾರು ಏನೇ ಹೇಳಬಹುದು; ವರ್ತಮಾನಪತ್ರಕಾರರು ವಿಲಕ್ಷಣ ಸುದ್ದೀ ಮುದ್ರಿಸಬಹುದು. ಮೈಮೇಲೆ ಪುರಾವೆಯ ಪ್ರಸಂಗ ಬಂತೆಂದರೆ ಅವರು ಉಳಿಸಿಕೊಳ್ಳಲಿಕ್ಕೆ ಬರಲಾರರು. ಸರಕಾರದ ಆರ್ಡಿನನ್ಸ ಕಾಯದೆಯು ಬಹಳ ಸುಸ್ಪಷ್ಟವಾಗಿರುತ್ತದೆ. ಕಾರಣ ಮೈತುಂಬ ಕಣ್ಣುಳ್ಳವರಾಗಿರಿ. ಯಾವದೊಂದು ಸಂಗತಿಯನ್ನು ಬರೆಯುತ್ತಾ ಹೋದರೆ ಈಗಿನ ಕ್ಷುಬ್ಧವಾದ ವಾತಾವರಣದಲ್ಲಿ ಧಾರವಾಡ ಜಿಲ್ಲೆಯು ಈ ವರೆಗಿನಂತೆ ಮುಂದಾದರೂ ಶಾಂತವಾಗಿರುವದೆಂದು ಸಾಹೇಬರು ಹೇಳಿದ್ದಾರೆ.

(೨) ಜನರ ಮಾಲಕೀಯ ಈಚಲ ಗಿಡಗಳನ್ನು ಕಡಿಯಬಹುದು. ಕಡಿಯುವ ಮೊದಲು ಮಾಲಕರ ಬಾಯಿ ಮಾತಿನ ಪರವಾನಗಿಗಿಂತ ಅವರಿಂದ ಲೇಖಬರಿಸಿಕೊಳ್ಳುವದು ಸ್ವಯಂಸೇವಕರಿಗೆ ಕ್ಷೇಮವೆಂದು ಹೇಳುವದು ಸಾಹೇಬರ ಎರಡನೆಯ ಉದ್ದೇಶವಾಗಿತ್ತು. ಸಾಹೇಬರು ಮೂರು ನಾಲ್ಕು ದಿವಸಗಳ ಹಿಂದೆ ಧಾರವಾಡದಿಂದ ಮೂರು ಮೈಲುಗಳ ಮೇಲಿರುವ ನರೇಂದ್ರ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಸ್ವಯಂಸೇವಕರು ಗಿಡ ಕಡಿಯುತ್ತಿದ್ದರು. ಆದರೆ ಮಾಲೀಕರ ಪರಮಿಟ್ಟು ಅವರ ಹತ್ತರ ಇದ್ದಿಲ್ಲ. ಯಾವನೊಬ್ಬ ಮಾಲೀಕನು ತನ್ನನ್ನು ಕೇಳದೆ ಗಿಡ ಕಡಿದಿರುತ್ತಾರೆಂದು ಫಿರ್ಯಾದಿ ಮಾಡಿದರೆ ಸ್ವಯಂಸೇವಕರು ವ್ಯರ್ಥವಾಗಿ ಸಂಕಟದಲ್ಲಿ ಬೀಳುತ್ತಾರೆ. ಫಿರ್ಯಾದಿ ಹಿಡಿಯುವದೂ ವಿಚಾರಣೆ ಮಾಡುವದೂ ಸರಕಾರದ ಕರ್ತವ್ಯಕರ್ಮವು. ವಿಚಾರಣೆಯ ಪ್ರಸಂಗದಲ್ಲಿ ಶಿಕ್ಷೆಯಾದರೆ ಕಾಂಗ್ರೆಸದವರು ಸರಕಾರದ ನೆತ್ತಿ ಕುಕ್ಕುವರು. ಫಿರ್ಯಾದಿಯು ಬದಿಗಾಗುವನು. ಆದ್ದರಿಂದ ಮುಂದಾಗಿ ಸ್ಪಷ್ಟವಾಗಿ ಬರಿಸಿಕೊಳ್ಳುವದು ಉತ್ತಮ. ಇಲ್ಲವಾದರೆ ಯಾವನೊಬ್ಬನ ಹೊಲದಲ್ಲಿ ಹೋಗುವ ಅತಿಕ್ರಮಣ ಮೊದಲು ಮಾಡಿಕೊಂಡು ಕಳವಿನ ಆರೋಪದ ತನಕ ಅಪರಾಧಿಯು ಎರಡು ವರ್ಷಗಳತನಕ ಶಿಕ್ಷೆಯನ್ನು ಹೊಂದುವನು. ಧಾರವಾಡ ಜಿಲ್ಲೆಯಲ್ಲಿ ಹತ್ತು ಲಕ್ಷ ಸಂಖ್ಯೆಯಿಂದ ಈಚಲ ಗಿಡಗಳುಂಟು. ಅವುಗಳಲ್ಲಿ ಮಾಲೀಕರ ಗಿಡಗಳನ್ನು ಕಡಿದರೆ ಮಾಲೀಕರ ಹಾನಿಯಾಗುತ್ತದೆ. ಸರಕಾರದ ಹಾನಿಯಾಗುವದೇ ಇಲ್ಲ. ಈ ಬಗ್ಗೆಯಾಗಿಯೂ ವಿಚಾರ ಮಾಡಬೇಕು.

ಜನ ಶಿಂದೀ ಕುಡಿಯುವದನ್ನು ಬಿಡಿಸಿದರೆ ಬ್ರ್ಯಾಂಡಿ, ವ್ಹಿಸ್ಕಿ, ಅಲ್ಕೋಹಾಲ ಮುಂತಾದ ಪೇಯಗಳನ್ನು ಕುಡಿಯುವರು. ಇವೆಲ್ಲ ಪರದೇಶಿ. ಶಿಂದಿಯ ರೊಕ್ಕವು ಹಿಂದುಸ್ಥಾನದಲ್ಲೇ ಉಳಿದು, ಸ್ಥಾನಿಕ ಸ್ವರಾಜ್ಯ, ಸ್ಯಾನಿಟೇಶನ, ಆಸ್ಪತ್ರೆ ಮುಂತಾದ ಕೆಲಸಗಳಿಗೆ ಈ ದ್ರವ್ಯದ ಉಪಯೋಗವಾಗುತ್ತದೆ. ಲೋಕಲಬೋರ್ಡಿನವರೇ ಲೈನವಾರಿಗಳ ದೆಸೆಯಿಂದ ಲಕ್ಷ ರೂಪಾಯಿ ಕೇಳಿದ್ದಾರೆ. ಎಲ್ಲಿಂದ ಈ ದುಡ್ಡು ತರಬೇಕು? ಬ್ರ್ಯಾಂಡಿಯು ಪರದೇಶದಿಂದ ಬರುತ್ತದೆ. ಪರಕೀಯರಿಗೆ ದುಡ್ಡು ಹೋಗಬಾರದೆಂದು ನಾನು ಈ ಜಿಲ್ಲೆಗೆ ಬಂದನಂತರ ಬ್ರ್ಯಾಂಡಿ ತರಿಸದಂತೆ ಅದನ್ನು ವ್ಯವಸ್ಥೆಗೊಳಿಸಿದ್ದೇನೆ. ನಾನು ರಾಷ್ಟ್ರೀಯನಾಗಿದ್ದೇನೆ. ಯಾವ ಪಕ್ಷಕ್ಕೂ ಸೇರಿದವನಲ್ಲ. ನನಗೆ ಯೋಗ್ಯವೆನಿಸುವದನ್ನೇ ಮಾಡುತ್ತೇನೆ. ಮತ್ತು ಹೇಳುತ್ತೇನೆ. ಇದರ ವಿಚಾರವನ್ನು ಕಾಂಗ್ರೆಸವು ಅಗತ್ಯವಾಗಿ ಮಾಡತಕ್ಕದ್ದು.

(೩) ಇಂಗ್ಲಿಷ ಜನರ ಸ್ವಭಾವವೆ ಒಂದು ತರಹವಾಗಿರುವದು. ಅವರ ಮೇಲೆ ಬಲವಂತಿಕೆ ನಡೆಸಿದರೆ ಅವರೆಂದೂ ಯಾರಿಗೂ ಹಣಿಯರು. ಜರ್ಮನಿಯು ಇಂಗ್ಲಂಡದ ಮೇಲೆ ಬಲವಂತಿಕೆ ಮಾಡಬೇಕೆಂದಿತು, ಇಂಗ್ಲಂಡವು ಜರ್ಮನಿಯನ್ನು ಬಗ್ಗು ಒಡೆಯಿತು. ಕಾಂಗ್ರೆಸದವರು ಇಂಗ್ಲಿಷ ಜನರ ಕೂಡ ಪ್ರೀತಿಯಿಂದ ನಡೆದಿದ್ದರೆ ಉಪ್ಪಿನ ಕರವು ಎಂದೋ ಕಡಿಮೆಯಾಗುತ್ತಿತ್ತು. ಈಗ ಹಟಕ್ಕೆ ಬಿದ್ದಿರುವದರಿಂದ, ಈ ಕರವನ್ನು ರದ್ದು ಮಾಡಲು ಎಷ್ಟೂ ಉದ್ದೇಶವಿಲ್ಲೆಂದು ಸರಕಾರದವರು ಜಾಹೀರ ಮಾಡಿದ್ದಾರೆ. ಕಾರಣ ಪರಸ್ಪರ ವಿಶ್ವಾಸದಿಂದಲೇ ನಡೆಯುವದು ಉತ್ತಮವೆಂದು ಸಾಹೇಬರು ಹೇಳಿ, ವಿಜಯದ ಸಂಪಾದಕರು ಆಗಾಗ್ಗೆ ತಮಗೆ ಭೆಟ್ಟಿಯಾಗುತ್ತಾ ಹೋಗಬೇಕೆಂಬ ಆಶೆಯನ್ನು ವ್ಯಕ್ತಪಡಿಸಿ ನಿರೋಪ ಕೊಟ್ಟರು.

ಈ ಸಂಭಾಷಣೆ ನಡೆದಾಗ ನಡುನಡುವೆ ಸಂಪಾದಕರು ಸಾಹೇಬರಿಗೆ ಉತ್ತರ ಕೊಡುತ್ತಿದ್ದರು. ಬಹುಶಃ ಪ್ರಶ್ನೋತ್ತರ ರೂಪದಿಂದಲೇ ಸಂಭಾಷಣೆ ನಡೆಯಿತು, ಡೇಲಿ ಹೆರಾಲ್ಡದ ಶ್ರೀ. ಸ್ಲೋಕೊಂಬಿಯವರು ಮಹಾತ್ಮರನ್ನು ಕಂಡದ್ದನ್ನೂ, ಮಹಾತ್ಮರು ಯಾವ ರೀತಿಯಿಂದ ರಾಜಿಯಾಗಲು ಸಿದ್ಧ

ಶಿಕ್ಷ್ಯರೆಂಬದನ್ನೂ ಸಂಪಾದಕರು ಮುಖ್ಯವಾಗಿ ಸಾಹೇಬರ ದೃಷ್ಟಿಪಥಕ್ಕೆ ತಂದು ಕೊಟ್ಟರು. ಈ ಭೆಟ್ಟಿಯು ಖಾಸಗೀ ಸ್ವರೂಪದ್ದಾದರೂ, ಧಾರವಾಡ ಜಿಲ್ಲೆಯ ಎಲ್ಲ ವರ್ತಮಾನಪತ್ರಕಾರರನ್ನುದ್ದೇಶಿಸಿರುವದರಿಂದ, ಇದನ್ನು ಇಂದು ವಿಜಯದಲ್ಲಿ ಮುದ್ರಿಸಬೇಕಾಗಿದೆ. ಪತ್ರಕಾರರು ಈ ಸಂಭಾಷಣೆಯು ಯೋಗ್ಯ ವಿಚಾರ ಮಾಡಿ ಹಂಸಕ್ಷೀರ ನ್ಯಾಯದಂತೆ ವರ್ತಿಸುವರೆಂದು ಆಶಿಸುತ್ತೇವೆ.

ಶಿರೋಡ ಮತ್ತು ಧಾರಾಸಾನದ ಕಾಯದೆಭಂಗ ನಿಂತಿತು.

ಇದೇನು ಭೀಮಜರಾಸಂಧ ಯುದ್ಧವಾಗಲಿಲ್ಲ.

ಇಂಗ್ರೇಜಿ ಸರಕಾರದವರು ಅಹಿಂಸೆಯ ಸತ್ಯಾಗ್ರಹಿಗಳ ಮೇಲೆ ಪ್ರಾಣ ತಕ್ಕೊಳ್ಳುವಂಥ ಹಿಂಸೆಯ ಉಪಾಯಗಳನ್ನು ಮಾಡಿ, ಶಿರೋಡ ಮತ್ತು ಧಾರಾಸಾನದ ಸತ್ಯಾಗ್ರಹದ ಸತ್ವವನ್ನು ನಿಃಸತ್ವ ಮಾಡಿ, ಅವುಗಳ ಬೇರು ಸಹ ಕಿತ್ತುಗೆದರು. ಶಿರೋಡದಲ್ಲಿ ನೂರಾರು ಜನರು ತಲೆಯೊಡಕೊಂಡರು ಧಾರಾಸಾನದಲ್ಲಿ ಇವರ ಮುಮ್ಮಡಿ ಜನರು ತಲೆಯೊಡಕೊಂಡು, ಕಾಲು ಮುರಕೊಂಡು, ಆಸ್ಪತ್ರಿಯಲ್ಲಿ ನರಳುತ್ತಿರುವರಲ್ಲದೆ, ಒಬ್ಬನು ವೀರ ಸ್ವರ್ಗಾರೋಹಣ ಮಾಡಿದನು. ನಿಃಶಸ್ತ್ರಧಾರಿಗಳ ಮೇಲೆ ಶಸ್ತ್ರ ಹಿಡಿದಿದ್ದರಿಂದ, ವ್ಯರ್ಥವಾಗಿ ಜನಲಯವಾಗಬಾರದೆಂದು ಈ ಸತ್ಯಾಗ್ರಹ ಸಂಗ್ರಾಮವನ್ನು ನಿಲ್ಲಿಸಿದರು. ಮತ್ತು ಪೋಲೀಸರು ಇದೇ ಸಮಯವೆಂದು ಧಾರಾಸಾನದಲ್ಲಿರುವ ಸತ್ಯಾಗ್ರಹ ಶಿಬಿರದ ಎಲ್ಲ ಪದಾರ್ಥಗಳನ್ನು ಧ್ವಂಸ ಮಾಡಿ, ಅದನ್ನು ಸಹರಾ ಅರಣ್ಯದಷ್ಟು ಭಯಾನಕವಾಗಿ ಮಾಡಿದ್ದಾರೆ. ಈಗೊಂದು ಗುಬ್ಬಿ ಕೂಡ ಹೋಗದಷ್ಟು ಆ ಪ್ರದೇಶವು ಭಯಾನಕವಾಗಿ ರಣಗುಟ್ಟುತ್ತಿರುವದು.

ಒಂದೇ ವಾರದ ಹಿಂದೆ ಧಾರಾಸಾನದ ಯುದ್ಧವು ಪರಸ್ಪರ ಪ್ರೇಮಭಾವದಿಂದಲೇ ನಡೆದಿರುತ್ತದೆಂದು ಇಂಗ್ರೇಜಿ ಪತ್ರಕಾರರು ವರ್ಣನೆ ಮಾಡಿದರು. ಆಗ ನಾವು ಇದೊಂದು ಪೌರಾಣಿಕ ಕಾಲದ ಭೀಮ ಜರಾಸಂಧರ ಯುದ್ಧವೆಂದೇ ಭಾವಿಸಿದೆವು. ಭೀಮ ಮತ್ತು ಜರಾಸಂಧರು ಗರಡೀಮನೆಯಲ್ಲಿ ವೈರಿಯಂತೆ ಹೋರಾಡುವರು. ಮಧ್ಯಾನ್ಹದ ತನಕ ಯುದ್ಧಮಾಡಿ, ಊಟಕ್ಕೆಂದು ಮನೆಗೆ ಬಂದಾಗ ಇಬ್ಬರೂ ಒಡಹುಟ್ಟಿದವರಂತೆ ಹತ್ತರ ಕೂತುಕೊಂಡು ಊಟಮಾಡುವರು. ಶಿರೋಡದಲ್ಲಿ ಸ್ವಯಂಸೇವಕರು ಒಂದೊಂದು ದಿವಸ ಪೋಲಿಸರಿಗೆ ಅನ್ನ ತಂದು ಕೊಟ್ಟರು. ಅಂಥ ಪ್ರಕಾರವು ಧಾರಾಸಾನದಲ್ಲಿ ಕಂಡು ಬರಲಿಲ್ಲ. ಹೆಸರು ಗಳಿತನದ್ದಾಯಿತು. ಬಿದ್ದವು ಗಟ್ಟಿ ...ಳಗದ ಪೆಟ್ಟು. ಹೀಗೆ ಬಲವಂತರಿಗೂ ದುರ್ಬಲರಿಗೂ ಯುದ್ಧವಾಗಿ, ಬಲಿಷ್ಠರು ಗೆದ್ದರು. ಆಳರಸರು ಹೊಡತದಿಂದ ಯುದ್ಧ ಗೆದ್ದರು. ಆದರೆ ನಿಜವಾದ ಜಯ ಸಂಪಾದನೆ ಮಾಡಲಿಲ್ಲ. ಪ್ರಜರ ಮನಸ್ಸು ಗೆದ್ದರೆ ಯುದ್ಧದಲ್ಲಿ ಜಯಶಾಲಿಯಾದಂತಾಗುತ್ತದೆ.

ದೇವಿ ಸರೋಜಿನಿಯವರಿಗೆ ಒಂಭತ್ತು ತಿಂಗಳ ಸಾದಾ ಶಿಕ್ಷೆ.

—(೦)—

ದೇವಿ ಸರೋಜಿನಿ ಮತ್ತು ಅವರ ಕೂಡ ಹಿಡಿದ ಇತರರ ವಿಚಾರಣೆಯನ್ನು ಒಂದು ವಾರ ಮುಂದೆ ಹಾಕಿದಂತೆ ಸುದ್ದಿಯು ಹೊರಗೆ ಪ್ರಕಟವಾಗುತ್ತಿದ್ದಾಗ, ಧಾರಾಸಾನದಲ್ಲಿಯೇ ರಾತ್ರಿಯಲ್ಲಿ ಇವರ ವಿಚಾರಣೆ ಮಾಡಿ, ದೇವಿಯವರಿಗೆ ಒಂಭತ್ತು ತಿಂಗಳ ಶಿಕ್ಷೆ ವಿಧಿಸಿದರು. ದೇವಿಯವರೂ ಉಳಿದವರೂ ವಿಚಾರಣೆಯಲ್ಲಿ ಯಾವ ಭಾಗವನ್ನೂ ತಕ್ಕೊಳ್ಳಲಿಲ್ಲ. ಉಳಿದವರಿಗಾದ ಶಿಕ್ಷೆ- ಶ್ರೀ. ಪ್ಯಾರಲಾಲ ಶ್ರೀ ಮಣಿಲಾಲ ಗಾಂಧಿ ಇವರಿಗೆ ಒಂದೊಂದು ವರ್ಷ ಶಿಕ್ಷೆ ಮತ್ತು ಮೂವರು ಪ್ರಾಂಟಿಯರಿಗೆ ಆರಾರು ತಿಂಗಳ ಶಿಕ್ಷೆ ವಿಧಿಸಿದರು.

ಗಾಂಧಿ ಇಲ್ಲದ ಹೂವು ನಿರ್ಗಂಧ.

—(೦)—

ರಾಮನಾಮವಿಲ್ಲದಂಥ, ರಾಮನ ... ನವಿಲ್ಲದಂಥ ಪದಾರ್ಥವು ಹನುಮಂತನಿಗೆ ನಿಃ ಯೋಗ ವಸ್ತುವಾಯಿತು. ಸೀತಾದೇವಿಯು ಕೊಟ್ಟ ಹಾರು ಮೌಲ್ಯವಾದ ಮುತ್ತಿನ ಹಾರವು ಪುಡಿಗಲ್ಲಾಯಿತು. ಇದೇ ಪ್ರಕಾರ ಇಂದು ಗಾಂಧಿ ಇಲ್ಲದ ಹಿಂದುಸ್ಥಾನದ ರಾಜಕಾರಣವು ನಿರ್ಗಂಧವಾಗುತ್ತದೆ. ಗಾಂಧಿ ಎಂದರೆ- ಕಾಂಗ್ರೆಸ; ಕಾಂಗ್ರೆಸವೆಂದರೆ ಗಾಂಧಿ. ಗಾಂಧಿಯಿಲ್ಲದೆ, ರತ್ನವೆಂಥ ಟೇಬಲವು ಮೊಬ್ಬಟ್ಟಿನ ಜೇಬವಾಗುವದು! ಈ ಸಂಗತಿಯನ್ನು ಎಲ್ಲಕ್ಕೂ ಮೊದಲು ಸ್ಥೋಕೊಂಬಿನಾಹೇಬರು ಅರಿತದ್ದಕ್ಕೆ ಅವರ ಅಭಿನಂದನ ಮಾಡುತ್ತೇನೆ. ಆರೆಂಟು ವರ್ಷಗಳಿಂದ ಇದೇ ಸಂಗತಿಯನ್ನು ನಾನು ಲಾರ್ಡ ಆಯರ್ವಿನಸಾಹೇಬರಿಗೆ ಹೇಳುತ್ತಾ ಬಂದೆನು. ಅವರು ಅದನ್ನು ಲಕ್ಷ್ಯಕ್ಕೆ ತಂದುಕೊಳ್ಳಲಿಲ್ಲವೆಂದು ಶ್ರೀ ಪಟೇಲರು ಅಂದಿರುತ್ತಾರೆ.

ಕಾಂಗ್ರೆಸದಲ್ಲಿ ಮುಖ್ಯರನ್ನು ಕಾಣಲು ಸ್ಥೋಕೊಂಬಿಸಾಹೇಬರಿಗೆ ಹಾಗಲು ಅಪ್ಪಣೆ ಕೊಟ್ಟದ್ದು ಹಿಂದುಸ್ಥಾನ ಸರಕಾರದ ಅವಿಚಾರವಾಯಿತೆಂದು ಲಂಡನ ಟೈಮ್ಸ ಪತ್ರಿಕೆನ್ನುತ್ತದೆ

ಪುಣೆಯಲ್ಲಿ ಶ್ರೀ ಕೇಳಕರರು ರಾಜದ್ರೋಹದ ಬರಹಗಳನ್ನೋದಿದರು.

—(೦)—

ನಾಗಪೂರದ ಡಾಕ್ಟರ ಮುಂಜೆ ಮತ್ತು ಬ್ಯಾರಿಸ್ಟರ ಅಭ್ಯಂಕರರಂತೆ ಪುಣೆಯಲ್ಲಿಯೂ ಬ್ರಿಟಿಶ ಸರಕಾರದವರು ರಾಜದ್ರೋಹವೆಂದು ಎಲ್ಲಿಯೂ ದೊರೆಯದಂತೆ ಬಂದೋಬಸ್ತು ಮಾಡಿದ ಪುಸ್ತಕದೊಳಗಿನ ಮುಖ್ಯ ಮುಖ್ಯ ಅವತರಣಗಳನ್ನು ಓದಿ, ಬ್ರಿಟಿಶ ಸರಕಾರದ ಕಾಯದೆಭಂಗ ಮಾಡಿ, ಸ್ವತಃ ರಾಜದ್ರೋಹಿಯಾದರು. ಇದೇ ವಿಷಯವಾಗಿ ಟಿಳಕ ಮಂದಿರದಲ್ಲಿ ಸಭೆಗೂಡಿದರು. ಶ್ರೀ. ಕೇಳಕರರು ಅಧ್ಯಕ್ಷರಾಗಿದ್ದರು. ಶ್ರೀ. ಜನ್ನಾಪೇಶ್ವರಮಠ, ಭಾಊರಾವ ಭಿಡೆ, ಡಾಕ್ಟರ ಪಳಸುಳೆ, ಸ್ವತಃ ಶ್ರೀ ಕೇಳಕರರು, ಇ , ಸರಕಾರದ ಕೃತ್ಯವನ್ನು ನಿಷೇಧಿಸಿದರು.

ಮುಂಬಯಿ ವ್ಯಾಪಾರಸ್ಥರು ಸತ್ಯಾಗ್ರಹದಿಂದ ಜಿದ್ದು ಗೆದ್ದರು.

—(೦)—

ಮುಂಬಯಿ ವರ್ತಕರು ಎಂಟು ಲಕ್ಷ ಜನರದೊಂದು ಮೆರವಣಿಗೆ ತೆಗೆದದ್ದನ್ನೂ ಪೋಲೀಸರು ಅದನ್ನು ತಡೆದದ್ದನ್ನೂ ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಪೋಲೀಸರು ತಮ್ಮನ್ನು ತಡೆದರೂ ಎಲ್ಲಾ ಜನರು ದಾರಿಯಲ್ಲಿಯೇ ಕೂತರು. ಇದು ಒಳ್ಳೇ ಕೂಟಿನಲ್ಲಾದ್ದರಿಂದ ಎಲ್ಲ ವ್ಯವಹಾರ ಕಟ್ಟಾಯಿತು. ರಾತ್ರಿ ಎಂಟರ ತನಕ ಈ ಸತ್ಯಾಗ್ರಹ ನಡೆಯಿತು. ಕೆಲ ವ್ಯಾಪಾರಸ್ಥರ ಮಧ್ಯಸ್ಥಿಕೆಯಿಂದ ಪೋಲೀಸರು ದಾರೀ ಕೊಟ್ಟರು. ಹೀಗೆ ವ್ಯಾಪಾರಸ್ಥರು ಸತ್ಯಾಗ್ರಹದ ಜಿದ್ದು ಗೆದ್ದರು.

ಮುಸಲಮಾನರು ಕಾಯದೆಭಂಗದಲ್ಲಿ ಸೇರಬೇಕು.

—(೦)—

ಮುಂಬಯಿಯಲ್ಲಿ ಮೌಲ್ವಿ ಅಬ್ದುಲ ರಹಿಮಾನ, ಅಬ್ದುಲ ರಜಾಕ, ಉಮರ ಕಾಶೀಮ ಇವರೇ ಮೊದಲಾಗಿ ಇಪ್ಪತ್ತು ಜನ ಪ್ರಮುಖರು ಈ ಸಮಯದಲ್ಲಿ ಮುಸಲಮಾನರು ಕಾಯದೇಭಂಗದಲ್ಲಿ ಸೇರಬೇಕೆಂಬ ಜಾಹೀರ ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಧಾರವಾಡ—

ಈ ವಾರದಲ್ಲಿ ಮೂರು ದಿವಸ ಜನ್ನಾಗಿ ಮಳೆಯಾಗಿ ಚಿಕ್ಕ ಹುಟ್ಟಿ ಕೆರೆಕುಂಟೆಗಳು ತುಂಬಿಹೋಗಿವೆ.

ಕರ್ನಾಟಕ ಪತ್ರಿಕೆ ಜ. ವಿ.ನು ಕೇಳಿದ

R. N. B 1443

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ಧಾರವಾಡ ಮಂಗಳವಾರ ತಾರೀಖು ೨೧ ನೇ ಮೇ ೧೯೩೦ (ಸಂಚಿಕೆ ೧೯

ಪ್ರತಿ ಸರಕಾರಕ್ಕೂ ಮಹಾತ್ಮರಿಗೂ ಒಡಂಬಡಿಕೆಯಾಗುವ ಶುಭಚಿನ್ಹ.

ಸರಕಾರದವರು ಮಹಾತ್ಮರನ್ನು ಹಿಡಿದು, ಪ್ರಕಾರ ಹಿಡಿದು ಹಾಕಿಯಿಂದ ದಕ್ಷಿಣದಲ್ಲಿ ಸಮಾಧಾನ ಕ್ಕೆ ಹೊಂದಿದ ಕ್ರಿಯಿಯಾಗಿದ್ದರೂ— ಗದ ಕೆಲ ನಿಯಮಗಳ ದಹಿ ಬಾ ರಾಜಕೀಯ ಕ್ರಿಯೆಯಾದ್ದರಿಂದ, ಪ್ರಮಾಣದಿಂದ ಪ್ಪರೆ. ಶ್ರೀ ವಿ. ಜೆ. ಪಟೇಲ, ಯಾವ ಅವಸ್ಥೆಯಲ್ಲಿದ್ದರೂ ಅವರ ಯೋಗ್ಯತೆಯು ಕಡಿಮೆ ಯಾಗಲಾರದಿಲ್ಲ. ಇಂಗ್ಲೆಂಡ ಸಂಕಲನದವರೂ, ಇಂಗ್ರೇಜಿ ಪ್ರಜರೂ ಅದನ್ನು ಪೂರಾ ತಿಳಿದವರಾಗಿದ್ದಾರೆ. ಶ್ರೀ ಪಟೇಲರು ಇದೇ ಸಂಕಲನಕ್ಕೆ ವೇಷ್ಟೆ ವೆ ಒಂದು ಉತ್ತಮ ಸರ್ಟಿಫಿಕೇಟು ಕೊಟ್ಟಿದ್ದಾರೆ. ಬ್ರಿಟಿಶ ರಾಜ್ಯ ಹೋಗಿ ರಾಮ ರಾಜ್ಯ ಬರುವದೇ! ಅರಿ ರಾಜ್ಯವು ಕಡೆತನಕ ಪ್ರವೃತ್ತವದೇ? ಆದರ ಸ ಹಾವವು ರಾಜ್ಯ ಪ್ರಜರೀರವರಿಗೂ ಅಸಿಷ್ಟಕಾರವಾದದ್ದೇ ... ಕಟ ... ಕಡಿತ. ಸೈನೋಲೆ ಹಾಕಿಕೊಳ್ಳ ವಂತೆ ಈ ಅಧಿಕಾರವಕ್ಕೆ ಮಾತ ದವು ಮುಸ್ಸಿದ್ದಿಗೆ ಎಂದೂ ಒಂದೇರದು ... ವಿಷಯವು ... ದ್ದರಿಂದ ಒಂದು ಕಯ್ಯಲ್ಲಿ ಬಡಿಗೆ ಹಿಡಿದರೆ— ನು ಕಯ್ಯಲ್ಲಿ ಬೆಣ್ಣೆಯನ್ನು ಹಿಡಿ ಸುಳೀಪೆ ತಾ ಗುತ್ತದೆ. ... ಸಿಯಲ್ಲಿ ಬೆಣ್ಣೆ ... ಬಡಿಗೆ ... ಹೊಳಿಗೆ ... ದಲ್ಲಿ ತಲಗಾಣುತ್ತಾ ಚೆ ... ಹಿಂದೀ ಜನರಿಗೆ ಬೇಗನೆ ಸ್ವರಾಜ್ಯ ಸ್ವಾತಂತ್ರ್ಯವೆಂಬ ಬೆಣ್ಣೆಯು ಬೇಗನೆ ದೊರೆಯುವದೆಂಬ ಶುಭಚಿನ್ಹವು ಈ ವಾರ ...

ಮಿ. ಜಾರ್ಜ ಸ್ಲೋಕೊಂಬಿ ಎಂಬ ... ನ ಸಾಹೇಬರು ಈ ದೇಶಕ್ಕೆ ಒಂದಿದ್ದಾರೆ. ಇವರು ಸಾಮಾನ್ಯರಲ್ಲ. ಘನವಂತರು. ಇವರು ಈ ದೇಶಕ್ಕೆ ಒಂದದ್ದು ಹೆಂಲ್ಡ ಹೆರಾಲ್ಡ ಪತ್ರಿಕೆಯು ಸ್ಪೇಶಲ ಸುದ್ದಿಗಾರರೆಂದು ಡೈಲಿ ಹೆರಾಲ್ಡವು ಇಂದು ಮಂತ್ರಿಗಳ ಮುಖ್ಯ ಪತ್ರವಾಗಿದೆ. ಇದು ಇಂಗ್ಲೆಂಡದ ಮುಖ್ಯ ಪತ್ರವು ಈ ಪತ್ರದ ಪ್ರತಿನಿಧಿಯಾಗಿ ಬರುವದೆಂದರೆ— ಮಂತ್ರಿಗಳ ಪ್ರತಿನಿಧಿಯಾಗಿ ಬರುವದೇ ಸೈ. ಇವರು ರಾಜಕಾರಣ ಪಟುಗಳಾಗಿದ್ದಾರೆ. ಫ್ರಾನ್ಸ ಮತ್ತು ಇಂಗ್ಲಂಡಕ್ಕೆ ಕಲಹ ಬಂದಾಗ ಜಿನೀವಾದಲ್ಲಿ ಇವರೇ ಶೃಷ್ಟಿಮಾಡಿ, ಫ್ರಾನ್ಸದ ಮಿ. ಬ್ರಾಯಂಡ ಮತ್ತು ಇಂಗ್ಲಂಡದ ಮಿ. ಸ್ನೋಡನ ಸಾಹೇಬರಿಗೆ ಒಡಂಬಡಿಕೆ ಮಾಡಿಸಿದರು. ಹೀಗೆ ರಾಜ್ಯ ಪ್ರವರ್ತಕರೆಂದು ಇವರ ಖ್ಯಾತಿಯುಂಟು. ಇವರು ಇಷ್ಟೇ ತೀವ್ರವಾಗಿ ಸದ್ಯದಲ್ಲಿಯೂ ಉದ್ಯೋಗಿಸಿದ್ದಾರೆ. ಇಂಗ್ರೇಜಿ ಸರಕಾರ ಮತ್ತು ಹಿಂದೀ ಜನತೆಯ ಕೂಡ ಯಾವ ತರಹದ ಒಡಂಬಡಿಕೆ ಮಾಡಿಸಬೇಕೆಂಬ ವಿಚಾರವಾಗಿಯೇ ಇವರು ಯರವಡೆಯ ಬುರಂಗಕ್ಕೆ ಹೋಗಿ, ಎರಡು ಸಾರೆ ಮಹಾತ್ಮಾಜಿಯವರ ಕೂಡ ಮಾತಾಡಿದರು. ಇವರ ಕೂಡ ಪುಣೆಯ ಕಲೆಕ್ಟರರು, ಜೇಲ ಖಾತೆಯ ಇನ್ಸಪೆಕ್ಟರ ಜನರಲರು ಮತ್ತು ಜೇಲು ಸುಪರಿಂಟೆಂಡೆಂಟರು ಇದ್ದು ನಾಲ್ಕೈದು ತಾಸುಗಳ ತನಕ ಮಹಾತ್ಮರ ಕೂಡ ಸಂಭಾಷಣಾ ಮಾಡಿದರು. ಆ ಸಂಭಾಷಣೆಯಲ್ಲಿ ನಡೆದ ವಿಷಯಗಳನ್ನು ಆ ಅಧಿಕಾರಿಗಳು ಟಾಯಿಪ ಮಾಡಿಸಿ, ಅದರ ಮೇಲೆ ಮಹಾತ್ಮರ ಸಹೀ ಕೂಡ ತೆಗೆದುಕೊಂಡಿದ್ದಾರೆ. ಈ ಸಂಭಾಷಣೆಯಲ್ಲಿ ಮಹಾತ್ಮರು ರಾಜಿಗೆ ಸಿದ್ಧರಿದ್ದಾರೆಂದು ಮಿ. ಸ್ಲೋಕೊಂಬಿ ಸಾಹೇಬರಿಗೆ ಮನವರಿಕೆಯಾಗಿದ್ದು, ಅವರು ಈ ಸಂತರ ಆ ಕೆರವಾಗಿ ಲಾರ್ಡ ಆಯರ್ವಿನ ಮತ್ತು ಬ್ರಿಟಿಶ ಮಂತ್ರಿಗಳ ಕೂಡ ಸಮಕ್ಷಮ ಮಾತಾಡಬಹುದು. ಈ ಪ್ರವಾಸದಲ್ಲಿ ಈ ಸಂಗತಿಯನ್ನೂ ಮಹಾತ್ಮರ ಶರತ್ತುಗಳನ್ನೂ ತಾರಿನಿಂದ ಸಮಗ್ರವಾಗಿ ವಿಲಾಯತಿಗೆ ತಿಳಿಸಿರುತ್ತಾರೆ.

ರಾಷ್ಟ್ರೀಯ ಸ್ವಾತಂತ್ರ್ಯದ ನಿಸಿಕೆಯಿಂದ ೧೧ ಕಲಮುಗಳ ಒಂದು ಪತ್ರವನ್ನು ಮಹಾತ್ಮರು ಲಾರ್ಡ ಆಯರ್ವಿನರ ಕಡೆಗೆ ಕಳಿಸಿರುತ್ತಾರಷ್ಟೆ, ಅವುಗಳಲ್ಲಿ ನಮ್ಮ ಏಳು ಕಲಮುಗಳ ಪ್ರತಿ ವಿವರವನ್ನು ಹಿಡಿದು, ನಾಲ್ಕೇ ಕಲಮುಗಳ ಬಗ್ಗೆ ಒಡಂಬಡಿಕೆಯಾಗಬೇಕೆಂದು ತಾವು ಬರಕೊಟ್ಟ ರಾಜೀ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅವೆ ಸಂದರ್ಭ

೧ ರಾಷ್ಟ್ರೀಯ ಟೇಬಲಿನ ಕಾರ್ಯಕ್ಷೇತ್ರದಲ್ಲಿ ಹಿಂದುಸ್ಥಾನಕ್ಕೆ ದೊರೆಯಬೇಕಾದ ಪೂರ್ಣ ಸ್ವಾತಂತ್ರ್ಯವಿರುವಂದ ರಾಜ್ಯ ಪದ್ಧತಿಯನ್ನು ಮಂಡಿಸತಕ್ಕದ್ದು.

೨ (ಅ) ಉಪ್ಪಿನ ಕರ ರದ್ದು ಮಾಡಬೇಕು.
( ) ಮದ್ಯಪಾನ ಸಂಪೂರ್ಣ ಹೋಗಬೇಕು.
(ಕ) ಪರದೇಶಿ ಅರಿವೆಗೆ ಬಹಿಷ್ಕಾರ ಹಾಕಬೇಕು. ಎಂಬೀ ಮೂರು ಕಲಮುಗಳನ್ನು ಆಮಲಿನಲ್ಲಿ ತರಬೇಕು.

೩ ರಾಜಕೀಯದ ಚಳವಳಿಯ ಎಲ್ಲ ಕೈದಿಗಳನ್ನು ಬಂಧಮುಕ್ತ ಮಾಡಬೇಕು,

೪ ಮೊದಲು ಹೇಳಿದ ೧೧ ಬೇಡಿಕೆಗಳಲ್ಲಿ ಉಳಿಯುವ ನಾಲ್ಕು ಕಲಮುಗಳ ವಿಚಾರವು ರಾಷ್ಟ್ರೀಯ ಟೇಬಲಿನಲ್ಲಾಗಬೇಕು

ಈ ಬೇಡಿಕೆಯು ಯೋಗ್ಯವಾಗಿರುತ್ತವೆಂದು ಇಂಗ್ರೇಜಿ ಮತ್ತು ಮವಾಳ ಪತ್ರಿಕೆಗಳ ಅಭಿಪ್ರಾಯವಿದ್ದಿರುತ್ತದೆ. ಮಹಾತ್ಮರು ಯಾವಾಗಲೂ ಯಾವದೊಂದನ್ನು ಸ್ಪಷ್ಟವಾಗಿ ಹೇಳತಕ್ಕವರಿದ್ದಾರೆ. ರಾಜ್ಯಕ್ರಮದಲ್ಲಿ ಹಿಂದೀ ಜನರಿಗೆ ಸ್ವಾತಂತ್ರ್ಯವಿರದೆ ... ತಮ್ಮ ಅಭಿಪ್ರಾಯವನ್ನು ಹೇಳುವದಕ್ಕೆ ಅವರು ಸದ್ದತಿಯನ್ನು ಒಯುವಾಗಿ ಹೇಳುತ್ತಾರೆ. ಮಹಾತ್ಮರ ಅಂತಃಕರಣವನ್ನು ಮಿ. ಸ್ಲೋಕೊಂಬಿಯವರು ತಮ್ಮ ಶಬ್ದಗಳಲ್ಲಿ ಹೀಗೆ ಕೊಟ್ಟಂತೆ ಹೇಳುತ್ತಾರೆ.

ಮಹಾತ್ಮರ ಪ್ರೇಮವು ... ನಾಗರಿಕತೆ ಮೇಲಿನ ... ಹಿಂದುಸ್ಥಾನದ ಮೇಲೂ ಉಂಟು. ಇದೇ ಪ್ರಕಾರ ಹಿಂದುಸ್ಥಾನದಲ್ಲಿಯ ಬ್ರಿಟಿಶರ ಸಹವಾಸ ಅತ್ಯಂತವಾಗಿ ಕೆಟ್ಟದ್ದೂ ನಾಶದ್ದೂ ಆಗಿರುತ್ತವೆಂದು ತಿಳಿದು, ಅದನ್ನು ತಿರಸ್ಕರಿಸುತ್ತಾರೆ. ಹಿಂದುಸ್ಥಾನಕ್ಕೆ ಒಂದಿರುವ ಇಂಗ್ಲಿಷರು ... ಬಲವಿಯಿಂದ ರಾಜ್ಯಕಾರಭಾರ ನಡೆಸತಕ್ಕವರಿದ್ದು, ಇದರಿಂದ ಅವಕಳಿಕೆಯು ಅತ್ಯಂತವಾಗಿ ಕೆಟ್ಟದ್ದಾಗಿ ಹೋಗಿ ಜನತೆಯ ದಶಿಯವಲ್ಲ ... ಅವರ ಸ್ಪಷ್ಟ ... ವಾಗಿದೆ. ಆದರೆ ವ್ಯಕ್ತಿಶಃ ಯಾವ ಇಂಗ್ಲಿಷ ಮನುಷ್ಯನ ದ್ವೇಷವನ್ನು ಮಾಡುವದಿಲ್ಲ. ಪ್ರತಿಯೊಬ್ಬ ಇಂಗ್ಲಿಷ ಮನುಷ್ಯನ ವಿಷಯವಾಗಿ ಆದರವಿದೆ. ಲಾರ್ಡ ಆಯರ್ವಿನ ಸಾಹೇಬರ ವಿಷಯವಾಗಿಯಂತೂ ಅವರಲ್ಲಿ ಆದರವುಂಟು. ಹಿಂದುಸ್ಥಾನಕ್ಕೆ ಒಮ್ಮೆ ಸ್ವಾತಂತ್ರ್ಯ ದೊರೆತುಕೊಂಡರೆ— ಇಂಗ್ಲಂಡಕ್ಕೆ ಹಿಂದುಸ್ಥಾನದಲ್ಲಿ ಮಹಾತ್ಮರಂಥ ನಿಕಟ ಮಿತ್ರರು ಯಾರೂ ದೊರೆಯರು. ಒಮ್ಮೆ ಹಿಂದುಸ್ಥಾನಕ್ಕೆ ಬ್ರಿಟಿಶ ರಾಷ್ಟ್ರಸಂಘದಲ್ಲಿ ಸ್ವಾತಂತ್ರ್ಯ ಕೊಡಿರಿ. ಆ ನಂತರ ಮಹಾತ್ಮರು ಹಿಂದೀ ರಾಷ್ಟ್ರಕ್ಕೆ ಯೋಗ್ಯ ವಂದನೀಯರಾಗಿರುತ್ತಾರೆ, ಹಾಗೆಯೇ ಬ್ರಿಟಿಶ ರಾಷ್ಟ್ರಕ್ಕೂ ವಂದ್ಯರಾಗಿರುವರೆಂದು ನನ್ನ ಮನ ಸ್ಫುರಿಸುತ್ತದೆ.

ಮಿ. ಸ್ಲೋಕೊಂಬಿ ಸಾಹೇಬರ ಕಡೆಯ ವಾಕ್ಯಗಳು ಆಶಾಜನಕವಾಗಿರುತ್ತವೆ. ಮಹಾತ್ಮರು ಕಳೆದ ನಾಲ್ವತ್ತು ವರ್ಷಗಳಿಂದ ಸತ್ಯಾಗ್ರಹ ಮಾಡುತ್ತಾ, ಯಶಸಂಪಾದನೆ ಮಾಡುತ್ತಾ ಬಂದಿದ್ದಾರೆ. ಅಪಯಶವೆಂಬದಂತೂ ಅವರಿಗೆ ಗೊತ್ತೇ ಇಲ್ಲ. ಈ ಚಳವಳಿಯಲ್ಲಂತೂ, ಸ್ವಾತಂತ್ರ್ಯ ತೆಕ್ಕೊಂಡೇ ಬುರಂಗದಿಂದ ಹೊರಬೀಳುವೆವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಿ. ಸ್ಲೋಕೊಂಬಿ ಸಾಹೇಬರು ಅನೇಕ ರಾಜನಿಷ್ಠ ಮತ್ತು ಮವಾಳರ ಕೂಡ ಸಂಭಾಷಣೆ ಮಾಡಿದ್ದು, ಅವರೆಲ್ಲರೂ ಮಹಾತ್ಮರ ಹೊರ್ತು, ಬೇಗೆಯು ಅರಿಯಲಾರೆವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಬೇರೀ ರಾಜ್ಯ ಹೋಗಿ ವಸಾಹತಿನ ಸ್ವರಾಜ್ಯ ಸ್ವಾತಂತ್ರ್ಯದ ಹಿಂದುಸ್ಥಾನವಾಗಬೇಕಾದರೆ— ಮಹಾತ್ಮರೊಬ್ಬರೇ ಮುಖ್ಯ ಪುರುಷರಾಗಿದ್ದಾರೆ. ಮಂತ್ರಿಗಳು ರಾಜೀಮಾಡಿಕೊಳ್ಳಲು ಹೊತ್ತುಗಳೆಯಲಾರರೆಂದು ನಮ್ಮ ಬಲವಾದ ನಂಬಿಗೆ.

ಸಾಹೇಬರು ಮಹಾತ್ಮರನ್ನು ಕಾಣಲಿಕ್ಕೆ ಹೋದಾಗ ಕಂಡ ನೋಟವು.

ಮಹಾತ್ಮರ ಕೋಣೆಯ ಮುಂದೆ ಒಂದು ದೊಡ್ಡ ಒಳಂಗಳವುಂಟು. ಇವರ ಕೋಣೆಯ ಮಧ್ಯದಲ್ಲಿರುವ ಕಟ್ಟೆಯ ಮೇಲೆ ಉಚ್ಚ ಸ್ಥಾನದಲ್ಲಿ ರಾಟಿಯುಂಟು. ಅವರ ಹಾಸಿಗೆಯ ಹತ್ತರವೇ ಇಂಗ್ರೇಜೀ ಗೃಹಸ್ಥನಾದ ಬನಿಯನ್ನ ಸಾಹೇಬನು ಬರೆದ ಯಾತ್ರಿಯ ಪ್ರಗತಿ ಎಂಬ ಹೆಸರಿನ ಪುಸ್ತಕವಿತ್ತು. ಇದು ಈ ಸಾಹೇಬರು ಬುರಂಗದಲ್ಲಿದ್ದಾಗಲೇ ಬರೆದ ಪುಸ್ತಕವು. ಮಹಾತ್ಮರು ಇದನ್ನು ಆಗಾಗ್ಗೆ ಓದುತ್ತಿರಬಹುದು. ಮಹಾತ್ಮರು ದಿನಾಲು ನಸುಕಿನಲ್ಲೆದ್ದು ನೂಲುತ್ತಾ ಕೂಡ್ರುತ್ತಾರೆ. ಮತ್ತು ನಡುನಡುವೆ ಏಕಾಗ್ರ ಚಿತ್ತದಿಂದ ಕೂತುಕೊಳ್ಳುತ್ತಾರೆ. ಹಿಂದುಸ್ಥಾನದ ಕೋಟ್ಯಾವದಿ ಜನರು ಯಾರಿಗೆ ಮಹಾತ್ಮರೆನ್ನುವರೋ; ಆ ಮಹಾತ್ಮರ ನಿತ್ಯಕ್ರಮವು ಈ ಪ್ರಕಾರ ಇರುತ್ತದೆ. ನಾನು ಅವರ ಕೋಣೆಯ ಹತ್ತರ ಹೋದ ಕೂಡಲೆ, ಅವರು ನನ್ನನ್ನು ಕಾಣಲಿಕ್ಕೆ ಬಂದರು. ಅವರು ನನ್ನ ಕೂಡ ಮಾತಾಡುವಾಗ ನಗಮೊಗದವರಾಗಿದ್ದರು. ಇವರು ತಮ್ಮ ಪ್ರತಿ ನಿತ್ಯ ಪದ್ಧತಿಯಂತೆ ಚಕ್ಕಳಿಮುಕ್ಕಳಿ ಹಾಕಿಕೊಂಡು ಕೂತ್ರು, ಬೆತ್ತದ ಖುರ್ಚಿಯ ಮೇಲೆ ಕಾಲ ಮೇಲೆ ಕಾಲು ಹಾಕಿಕೊಂಡು ಕೂತಿದ್ದರು. ಪದ್ಧತಿಯಂತೆ ಬರಿಮೈಯಿಂದಿದ್ದರು. ಟೊಂಕಕ್ಕೆ ... ಒಂದು ತುಂಡು ಒಟ್ಟೆಯ ಹೊರ್ತು ವ್ಯಸನೋತ್ತೆ ಏನೂ ಇದ್ದಿಲ್ಲ. ನಡುನಡುವೆ ಅವರ ಹಿಡಿ ... ಸಪ್ಪಳವಾಗುತ್ತಿತ್ತು.

ಶ್ರೀ ಕೇಳಕರರ ಕೂಡ ಚರ್ಚೆ-

ಮಿ. ಸ್ಲೋಕೊಂಬಿ ಸಾಹೇಬರು ಮಹಾತ್ಮರನ್ನು ಕಂಡು ಒಂದು ಬಳಿಕ, ಊರೊಳಗೆ ಸರ್ವಂಟ ಆಫ ಇಂಡಿಯಾ ಸೋಸಾಯಿಟಿಗೆ ಬಂದು ಶ್ರೀ ಕೇಳಕರ ಮೊದಲಾದವರೊಡನೆ ಸದ್ಯಸ್ಥಿತಿಯನ್ನು ಕುರಿತು ಸಂಭಾಷಣೆ ಮಾಡಿದರು.

ಎರಡು ಲಕ್ಷ ಜನರ ಮೆರವಣಿಗೆ.

ಪೋಲೀಸರ ಪ್ರತಿಬಂಧ

ಮುಂಬಯಿಯ ವ್ಯಾಪಾರಸ್ಥರು ಎರಡು ಲಕ್ಷ ಜನರೊಂದು ಪ್ರಚಂಡ ಮೆರವಣಿಗೆ ತೆಗೆದಿದ್ದರು. ಅದನ್ನು ಪೋಲೀಸರು ಅಡ್ಡ ಕಟ್ಟಿ ನಿಲ್ಲಿಸಿದ್ದರಿಂದ, ವ್ಯಾಪಾರಸ್ಥರ ಸಮುದಾಯ ಕ್ಷೋಭೆಯುಂಟಾಗಿರುತ್ತದೆ.

ಹಾವೇರಿಯ ಶ್ರೀ. ಹಿರೇಮಠರ ರಾಜೀನಾಮೆ.

ರಾ. ಬ. ಕಂಬಳಿಯವರಿಗೆ ಬರೆದ ಪತ್ರ.

ಹಾವೇರಿ ತಾಲೂಕಿನಿಂದ ಡಿ|| ಲೋ|| ಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟ ಶ್ರೀ ಹಿರೇಮಠರು ಮೆಂಬರ ಕೆಲಸಕ್ಕೆ ರಾಜೀನಾಮೆಕೊಟ್ಟು, ರಾಜೀನಾಮೆಯ ಪತ್ರವನ್ನು ಅಧ್ಯಕ್ಷರಾದ ರಾ. ಬ. ಕಂಬಳಿಯವರ ಕಡೆಗೆ ಕಳಿಸಿ, ಅದರಲ್ಲಿ ರಾಜೀನಾಮೆಗೆ ಉಂಟಾದ ಕಾರಣವನ್ನು ಮುಂದೆ ಕೊಟ್ಟಂತೆ ಹೇಳಿದ್ದಾರೆ.

ಸ್ವಾಮೀ,

ಈಗಿನ ಹಿಂದುಸ್ಥಾನದ ಪರಿಸ್ಥಿತಿಯ ಬಗ್ಗೆ ವಿವೇಚನಾ ಜ್ಞಾನವುಳ್ಳ ಯಾವನೇ ಮನುಷ್ಯನಾದರೂ ದೇಶದಲ್ಲಿ ನಡೆಯುತ್ತಿರುವ ವಿಷಯಗಳನ್ನು ನೋಡಿ ಸುಮ್ಮನಿರುವುದಕ್ಕಾಗುವುದಿಲ್ಲ. ಪರದೇಶದವರು ನಮ್ಮ ಹಿಂದುಸ್ಥಾನವನ್ನು ಸೂರೆ ಮಾಡುತ್ತಿರುವಾಗ ಜಿಲ್ಹಾ ಲೋಕಲ್‌ಬೋರ್ಡಿನಂಥ ಸಂಸ್ಥೆಗಳ ಮೂಲಕ ದೇಶಸೇವೆಯನ್ನು ಮಾಡುವದು ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಭಾರತ ಮಾತೆಯ ಅನೇಕ ಪುತ್ರರೂ, ಪುತ್ರಿಯರೂ ದೇಶೋದ್ಧಾರ ಕಾರ್ಯದಲ್ಲಿ ಕಂಕಣಬದ್ಧರಾಗಿ ನಿಂತಿರುವರೆ ಆದರೆ ಸರಕಾರದವರು ಅವರ ಮೇಲೆ ... ಕ್ಷಸೀ ದಬ್ಬಾಳಿಕೆಯನ್ನು ನಡೆಸಿದ್ದಾರೆ. ಮಹಾತ್ಮಾ ಗಾಂಧಿಯವರಂಥವರೂ ಕೂಡ ಈ ದಬ್ಬಾಳಿಕೆಗೆ ತುತ್ತಾಗಿದ್ದಾರೆ.

ಇಂಥಹ ಜುಲುಮಿಯ ಧೋರಣವನ್ನು ವಿರೋಧಿಸುವದು ಹಿಂದೂ ದೇಶದ ಪ್ರತಿಯೊಬ್ಬನ ಕರ್ತವ್ಯವಾಗಿದೆ. ನಾನಾದರೋ ಮಹಾತ್ಮಾಜಿಯವರನ್ನು ಹಿಡಿದದ್ದಕ್ಕೆ ವಿರೋಧ ಸೂಚಕವಾಗಿ ಜಿಲ್ಹಾ ಲೋಕಲ್‌ಬೋರ್ಡ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತೇನೆ.

ನಿಮ್ಮ

ಹಾವೇರಿ — ಎಸ್. ಬಿ. ಹಿರೇಮಠ

೭-೫-೩೦

ಗಾಂಧೀ ಟೊಪ್ಪಿಗೆಯ ಅಪಮಾನದ ಮಾನ ಸಂಪಾದನೆ

ಸೊಲ್ಲಾಪೂರದ ರಾ. ಬ. ಸಾಠೆ ಮತ್ತು ಪುಣೆಯ ಕೆಲ್ಕರವರು ಸೊಲ್ಲಾಪೂರದಲ್ಲಿ ... ಗಾಂಧಿ ಟೊಪ್ಪಿಗೆ ಹಾಕಿ, ರಾಷ್ಟ್ರೀಯ ನಿಶಾನೆ ಹಿಡಿದು ಊರೊಳಗೆ ಹೋಗುವರು. ಹೀಗೆ ಬರುವದು ರಾ. ಬ. ಸಾಠೆಯವರು ನಮ್ಮಂದಾಗಿ ಲಷ್ಕರೀ ಅಮಲದಾರರಿಗೆ ತಿಳಿಸಿದ್ದಾರೆ.

ಶ್ರೀ ನರಿಮನ್ನರನ್ನು ಪುನಃ ಹಿಡಿದರು

ಮುಂಬಯಿ ಕಾಂಗ್ರೆಸ ಕಮಿಟಿಯವರು ... ರಡಿಸುತ್ತಿದ್ದ ಪತ್ರಿಕೆಗಳನ್ನು ಸರಕಾರದವರು ಬಂದು ಮಾಡಿರೆಂದು ಹೇಳಿದರು. ಆದರೂ ಆ ಪತ್ರಿಕೆ ... ಪ್ರಸಿದ್ಧವಾದ್ದರಿಂದ ಸರಕಾರದವರು ಕಾಂಗ್ರೆಸ ಕಮಿಟಿ ಅಧ್ಯಕ್ಷ ನರಿಮನ್, ಡಾ. ಚೊಕಸಿ ಹಾಗೂ ಗಣೇಶ ಅಯ್ಯರರನ್ನು ಹಿಡಿದಿದ್ದಾರೆ.

ಶ್ರೀ ಹೊಸಮನಿಯವರ ಬಹುಮಾನ-

ಶ್ರೀ ಹೊಸಮನಿಯವರು ಬೆಳಗಾವಿಯ ಕಾಂಗ್ರೆಸ ಪಕ್ಷದ ಸಭೆಯನ್ನು ಮುಗಿಸಿಕೊಂಡು ಮರಳಿ ಹಾವೇರಿಗೆ ಹೋದ ದಿವಸ ನಾಗರಿಕರು ಇವರ ಸ್ವಾಗತ ಮಾಡಿ, ಮೆರವಣಿಗೆ ತೆಗೆದು ಸಾಯಂಕಾಲದಲ್ಲಾದ ಸಭೆಯಲ್ಲಿ ಇವರ ಕೊರಳಿಗೆ ಹಾಕಿದ ಖಾದಿಯ ಮಾಲೆಯು ಕಿಲೊ... ೧೮ ರೂಪಾಯಿ ಬಂದವು.

ಧಾರವಾಡದ ಮಿ. ಕಲೆಕ್ಟರಸಾಹೇಬರಿಗೂ ವಿಜಯದ ಸಂಪಾದಕರಿಗೂ ಮಹತ್ವದ ಸಂಭಾಷಣೆ.

ಮೊನ್ನಿನ ದಿವಸ ಮಧ್ಯಾಹ್ನದಲ್ಲಿ ವಿಜಯದ ಸಂಪಾದಕರಿಗೆ ಧಾರವಾಡದ ಕಲೆಕ್ಟರರಾದ ಮಿ. ಅಬಾಟಸಾಹೇಬರನ್ನು ಕಾಣುವ ಸಮಯ ಬಂದಿತು. ಈಗಿನ ಚಳವಳಿಯಲ್ಲಿ ನಾನಾ ತರದ ಹಾರ ಸುದ್ದಿಗಳು ಹುಟ್ಟುತ್ತವೆ. ಬೇರೆ ಬೇರೆ ಜನರು ಇಲೀ ಹರಿಯಿತೆಂದರೆ ಹುಲೀ ಹರಿಯಿತೆಂದು ಹೇಳುವ ಸುದ್ದೀ ಸೂರಸ್ಪರಾಗುತ್ತಾರೆ. ವರ್ತಮಾನಪತ್ರಗಳಲ್ಲಿ ಬರುವ ಎಲ್ಲ ಸುದ್ದಿಗಳು ನಿಜವಾಗಿರುವದಿಲ್ಲ. ಆದ್ದರಿಂದ ಧಾರವಾಡ ಜಿಲ್ಹೆಯ ವರ್ತಮಾನಪತ್ರಕಾರರು ಯಾವದೊಂದು ಸುದ್ದಿಯು ಮೊದಲು ನಿಜವಿರುತ್ತದೆಂದು ಖಚಿತ ಮಾಡಿಕೊಂಡು, ಅದನ್ನು ಮುದ್ರಿಸಬೇಕೆಂದು ವಿಜಯದ ಸಂಪಾದಕರ ಮುಖಾಂತರ ಹೇಳುವದೇ ಸಾಹೇಬರ ಮುಖ್ಯೋದ್ದೇಶವಾಗಿತ್ತು. ಸುಳ್ಳು ಸುದ್ದಿ ಮತ್ತು ನಂಬದಂಥ ಸುದ್ದಿಗಳೆಂದು ಸಾಹೇಬರು ಕೆಲ ಉದಾಹರಣೆಗಳನ್ನು ಹೇಳಿದರು. ಮಹಾತ್ಮರನ್ನು ಹಿಡಿದ ದಿವಸ ತಾವು ಅಬಾಟಸಾಹೇಬರು ತಪ್ಪಿಸಿಕೊಳ್ಳಲಿಕ್ಕಾಗಿ ತುರಂಗದಲ್ಲಿ ಹೋಗಿ ಮಲಗಿದರೆಂಬದೂ ಯರವಡೆಯ ತುರಂಗದಲ್ಲಿ ಮಹಾತ್ಮರು ಮೂರು ತಾಸು ಅದೃಶ್ಯರಾಗಿದ್ದರೆಂಬದೂ, ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನಿಗೆ ಸಲಾಮು ಮಾಡಿದರೆಂಬದೂ, ಸರ್ವಥಾ ನಿಜವಲ್ಲ, ನಂಬುವಂಥವಲ್ಲ. ತಾವು ಹೆದರಿಕೊಂಡು ಜೇಲಿಗೆ ಮಲಗಲು ಹೋಗಲಿಲ್ಲ, ಕಾರಣವೂ ಇದ್ದಿಲ್ಲ. ನನ್ನನ್ನು ಕೇಳಿದ್ದರೆ ನಾವು ಸಹಜವಾಗಿ ನಿಜವನ್ನು ಹೇಳಬಹುದಾಗಿತ್ತು. ಹಾಗೆ ಕೇಳದೆ ಬೀದಿಯ ಮಾತು ಕೇಳಿ ಬರೆಯುವದು ತೀರ ಗೌಣವು. ಮಹಾತ್ಮರು ಜೇಲಿನಲ್ಲಿ ಅದೃಶ್ಯರಾಗಿದ್ದರೆಂಬದೂ ಅಶಕ್ಯವು. ಇಂಗ್ರೇಜಿ ಗೃಹಸ್ಥರಿಂದಲೇ ನಡೆಸಲ್ಪಡುವ ಡೇಲಿ ಮೇಲ ಪತ್ರದಲ್ಲಿ ಈ ಸುದ್ದಿಯು ಬಂದಿರಬಹುದು. ಒಬ್ಬರು ತಪ್ಪು ಮಾಡಿದರೆಂದು ಮತ್ತೊಬ್ಬರು ಮಾಡಬಾರದು. ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನಿಗೆ ಸಲಾಮು ಮಾಡಲಿಲ್ಲ. ಹಿಂದೂ ಜನರು ಸಾಹೇಬರ ಬಂಗ್ಲೆಗೆ ಬರುವಾಗ ಕಾಲ್ಮರಿಯನ್ನು ಹೊರಗೆ ಬಿಟ್ಟು ಬರುವಂತೆ, ಸಾಹೇಬರು ಯಾರದೊಬ್ಬರ ಮನೆಯಲ್ಲಿ ಬರುವಾಗ ತಲೆಯ ಮೇಲಿನ ಟೊಪ್ಪಿಗೆ ತೆಗೆಯುವರು. ಇದೇ ತೆರವಾಗಿ ನಾಮದಾರ ಗವ್ಹರ್ನರಸಾಹೇಬರು ರಾಷ್ಟ್ರೀಯ ನಿಶಾನೆಯ ಪಕ್ಕಕ್ಕೆ ನೆರೆದ ಜನರ ಗೌರವಕ್ಕಾಗಿ ಟೊಪ್ಪಿಗೆಯನ್ನು ಎತ್ತಿ ಹಿಡಿದಿರಬಹುದು. ಇಷ್ಟರಿಂದ ಸಾಹೇಬರು ರಾಷ್ಟ್ರೀಯ ನಿಶಾನಿಗೆ ಸಲಾಮು ಮಾಡಿದರೆಂದು ತಪ್ಪು ತಿಳುವಳಿಕೆಯ ಬರಹಗಳನ್ನು ಬರೆಯಬಾರದು. ಯಾರು ಏನೇ ಹೇಳಬಹುದು; ವರ್ತಮಾನಪತ್ರಕಾರರು ವಿಲಕ್ಷಣ ಸುದ್ದೀ ಮುದ್ರಿಸಬಾರದು. ವೈಮೋಶಿ ಪ್ರಸಂಗ ಬಂತೆಂದರೆ ಅವರು ಉಳಿಸಿಕೊಳ್ಳಲಿಕ್ಕೆ ಬರಲಾರ. ಸರಕಾರದ ಆರ್ಡಿನನ್ಸ ಕಾಯಿದೆಯು ಬಹಳ ಸಕ್ತವಾಗಿರುತ್ತದೆ. ಕಾರಣ ವೈಕುಂಠ ಕಣ್ಣಿನವರಾಗಿದೇ ಯಾವದೊಂದು ಸಂಗತಿಯನ್ನು ಬರೆಯುತ್ತಾ ಹೋದರೆ ಈಗಿನ ಪ್ರಕ್ಷುಬ್ಧವಾದ ವಾತಾವರಣದಲ್ಲಿ ಧಾರವಾಡ ಜಿಲ್ಹೆಯು ಈ ವರೆಗೆ ಅಸಂತೆ ಮುಂದಾದರೂ ಶಾಂತವಾಗಿರುವದೆಂದು ಸಾಹೇಬರು ಹೇಳಿದ್ದಾರೆ.

(೨) ಜನರ ಮಾಲಕೀಯ ಈಚಲ ಗಿಡಗಳನ್ನು ಕಡಿಯಬಹುದು. ಕಡಿಯುವ ಮೊದಲು ಮಾಲಕರ ಬಾಯಿ ಮಾತಿನ ಪರವಾನಗಿಗಿಂತ ಅವರಿಂದ ಲೇಖ ಬರಸಿಕೊಳ್ಳುವದು ಸ್ವಯಂಸೇವಕರಿಗೆ ಶ್ರೇಯವೆಂದು ಹೇಳುವದು ಸಾಹೇಬರ ಎರಡನೆಯ ಉದ್ದೇಶವಾಗಿತ್ತು. ಸಾಹೇಬರು ಮೂರು ನಾಲ್ಕು ದಿವಸಗಳ ಹಿಂದೆ ಧಾರವಾಡದಿಂದ ಮೂರು ಮೈಲಗಳ ಮೇಲಿನ ನರೇಂದ್ರ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಸ್ವಯಂಸೇವಕರು ಗಿಡ ಕಡಿಯುತ್ತಿದ್ದರು. ಆದರೆ ಮಾಲೀಕರ ಪರವಾನ್ಗಿ ಅವರ ಹತ್ತರ ಇದ್ದಿಲ್ಲ. ಯಾವನೊಬ್ಬ ಮಾಲೀಕನು ತನ್ನ ಕೇಳದೆ ಗಿಡ ಕಡಿದಿರುತ್ತಾರೆಂದು ಫಿರ್ಯಾದಿ ಮಾಡಿದರೆ ಸ್ವಯಂಸೇವಕರು ವ್ಯರ್ಥವಾಗಿ ಸಂಕಟದಲ್ಲಿ ಬೀಳುತ್ತಾರೆ. ಫಿರ್ಯಾದಿ ಹಿಡಿಯುವದೂ ವಿಚಾರಣೆ ಮಾಡುವದೂ ಸರಕಾರದ ಕರ್ತವ್ಯಕರ್ಮವು. ವಿಚಾರಣೆಯ ಪರಿಣಾಮದಲ್ಲಿ ಶಿಕ್ಷೆಯಾದರೆ ಕಾಂಗ್ರೆಸದವರು ಸರಕಾರದ ನೆತ್ತಿ ತುಳಿಯುವರು. ಫಿರ್ಯಾದಿಯು ಬಡಿಗಾಗುವನು. ಆದ್ದರಿಂದ ಮುಂದಾಗಿ ಸ್ವಚ್ಛವಾಗಿ ಬರಸಿಕೊಳ್ಳುವದು ಉತ್ತಮ. ಇಲ್ಲವಾದರೆ ಯಾವನೊಬ್ಬನ ಹೊಲದಲ್ಲಿ ಹೋಗುವ ಅತಿಕ್ರಮಣ ಮೊದಲು ಮಾಡಿಕೊಂಡು ಕಳವಿನ ಆರೋಪದ ತನಕ ಅಪರಾಧಿಯು ಎರಡು ವರ್ಷಗಳ ತನಕ ಶಿಕ್ಷೆಯನ್ನು ಹೊಂದುವನು. ಧಾರವಾಡ ಜಿಲ್ಹೆಯಲ್ಲಿ ಹತ್ತು ಲಕ್ಷ ಸಂಖ್ಯೆಯಿಂದ ಈಚಲ ಗಿಡಗಳುಂಟು. ಅವುಗಳಲ್ಲಿ ಮಾಲೀಕರ ಗಿಡಗಳನ್ನು ಕಡಿದರೆ ಮಾಲೀಕರ ಹಾನಿಯಾಗುತ್ತದೆ. ಸರಕಾರದ ಹಾನಿಯಾಗುವದೇ ಇಲ್ಲ. ಈ ಬಗ್ಗೆ ಯಾಗಿಯೂ ವಿಚಾರ ಮಾಡಬೇಕು.

ಜನರು ದೇಶೀ ಕುಡಿಯುವದನ್ನು ಬಿಡಿಸಿದರೆ ಬ್ರ್ಯಾಂಡಿ, ವ್ಹಿಸ್ಕಿ, ಆಲ್ಕೋಹೋಲ ಮುಂತಾದ ಪೇಯಗಳನ್ನು ಕುಡಿಯುವರು. ಇವೆಲ್ಲ ಪರದೇಶಿ. ಶೇಂದಿಯ ರೊಕ್ಕವು ಹಿಂದುಸ್ಥಾನದಲ್ಲೇ ಉಳಿದು, ಸ್ಥಾನಿಕ ಸ್ವರಾಜ್ಯ, ಸ್ಯಾನಿಟೇಶನ, ಆಸ್ಪತ್ರೆ ಮುಂತಾದ ಕೆಲಸಗಳಿಗೆ ಈ ದ್ರವ್ಯದ ಉಪಯೋಗವಾಗುತ್ತದೆ. ಲೋಕಲಬೋರ್ಡಿನವರೇ ಲೈಸನ್ಸದಾರರಿಂದ ಲಕ್ಷ ರೂಪಾಯಿ ಕೇಳಿದ್ದಾರೆ. ಎಲ್ಲಿಂದ ಈ ದುಡ್ಡು ತರಬೇಕು? ಬ್ರ್ಯಾಂಡಿಯು ಫ್ರಾನ್ಸ ದೇಶದಿಂದ ಬರುತ್ತದೆ. ಪರಕೀಯರಿಗೆ ದುಡ್ಡು ಹೋಗಬಾರದೆಂದು ನಾನು ಈ ಜಿಲ್ಹೆಗೆ ಬಂದನಂತರ ಬ್ರ್ಯಾಂಡಿ ತರಿಸದಂತೆ ಅದಷ್ಟು ವ್ಯವಸ್ಥೆಗೊಳಿಸಿದ್ದೇನೆ. ನಾನು ರಾಷ್ಟ್ರೀಯನಾಗಿದ್ದೇನೆ. ಯಾವ ಪಕ್ಷಕ್ಕೂ ಸೇರಿದವನಲ್ಲ. ನನಗೆ ಯೋಗ್ಯವೆನಿಸುವದನ್ನೇ ಮಾಡುತ್ತೇನೆ. ಮತ್ತು ಹೇಳುತ್ತೇನೆ. ಇದರ ವಿಚಾರವನ್ನು ಕಾಂಗ್ರೆಸದವರು ಅಗತ್ಯವಾಗಿ ಮಾಡತಕ್ಕದ್ದು.

(೩) ಇಂಗ್ಲಿಷ ಜನರ ಸ್ವಭಾವವು ಒಂದು ತರಹವಾಗಿರುವದು. ಅವರ ಮೇಲೆ ಬಲವಂತಿಕೆ ನಡೆಸಿದರೆ ಅವರೆಂದೂ ಯಾರಿಗೂ ಹಣಿಯರು. ಜರ್ಮನಿಯು ಇಂಗ್ಲಂಡದ ಮೇಲೆ ಬಲವಂತಿಕೆ ಮಾಡಬೇಕೆಂದಿತು. ಇಂಗ್ಲಂಡವು ಜರ್ಮನಿಯನ್ನು ಬಗ್ಗು ಬಡೆಯಿತು. ಕಾಂಗ್ರೆಸದವರು ಇಂಗ್ಲಿಷ ಜನರ ಕೂಡ ಪ್ರೀತಿಯಿಂದ ನಡೆದಿದ್ದರೆ ಉಪ್ಪಿನ ಕರವು ಎಂದೋ ಕಡಿಮೆಯಾಗುತ್ತಿತ್ತು. ಈಗ ಹಟಕ್ಕೆ ಬಿದ್ದಿರುವದರಿಂದ, ಈ ಕರವನ್ನು ರದ್ದು ಮಾಡಲು ಎಷ್ಟು ಉದ್ದೇಶವಿಲ್ಲೆಂದು ಸರಕಾರದವರು ಜಾಹೀರ ಮಾಡಿದ್ದಾರೆ. ಕಾರಣ ಪರಸ್ಪರ ವಿಶ್ವಾಸದಿಂದಲೇ ನಡೆಯುವದು ಉತ್ತಮವೆಂದು ಸಾಹೇಬರು ಹೇಳಿ, ವಿಜಯದ ಸಂಪಾದಕರು ಆಗಾಗ್ಗೆ ತಮಗೆ ಭೆಟ್ಟಿಯಾಗುತ್ತಾ ಹೋಗಬೇಕೆಂಬ ಆಶೆಯನ್ನು ವ್ಯಕ್ತಪಡಿಸಿ ನಿರೋಪ ಕೊಟ್ಟರು.

ಈ ಸಂಭಾಷಣೆ ನಡೆದಾಗ ನಡುನಡುವೆ ಸಂಪಾದಕರು ಸಾಹೇಬರಿಗೆ ಉತ್ತರ ಕೊಡುತ್ತಿದ್ದರು. ಬಹುಶಃ ಪ್ರಶ್ನೋತ್ತರ ರೂಪದಿಂದಲೇ ಸಂಭಾಷಣೆ ನಡೆಯಿತು. ಡೇಲಿ ಹೆರಾಲ್ಡದ ಶ್ರೀ. ಸ್ಲೋಕೊಂಬಿಯವರು ಮಹಾತ್ಮರನ್ನು ಕಂಡನಂತರ, ಮಹಾತ್ಮರು ಯಾವ ರೀತಿಯಿಂದ ರಾಜಿಯಾಗಲು ಸಿದ್ಧರಿದ್ದರೆಂಬದನ್ನೂ ಸಂಪಾದಕರು ಮುಖ್ಯವಾಗಿ ಸಾಹೇಬರ ದೃಷ್ಟಿಪಥಕ್ಕೆ ತಂದು ಕೊಟ್ಟರು. ಈ ಭೆಟ್ಟಿಯು ಬಹಳೇ ಸ್ವರೂಪದ್ದಾದರೂ, ಧಾರವಾಡ ಜಿಲ್ಹೆಯ ಎಲ್ಲ ವರ್ತಮಾನಪತ್ರಕಾರರನ್ನುದ್ದೇಶಿಸಿರುವದರಿಂದ, ಇದನ್ನು ಇಂದು ವಿಜಯದಲ್ಲಿ ಮುದ್ರಿಸಬೇಕಾಗಿದೆ. ಪತ್ರಕಾರರು ಈ ಸಂಭಾಷಣೆಯ ಯೋಗ್ಯ ವಿಚಾರ ಮಾಡಿ ಹಂಸಕ್ಷೀರ ನ್ಯಾಯದಂತೆ ವರ್ತಿಸುವರೆಂದು ಆಶಿಸುತ್ತೇವೆ.

ಬೆಸನ್ನಾಳದವರು ಮಳೆಗಾಲದ ಮೂಲಕ ಉಪ್ಪಿನ ಕಾನೂನುಭಂಗವನ್ನು ರಹಿತ ಪಡಿಸಿ, ಈಚಲ ಗಿಡಗಳ ಮೇಲೆ ದಾಳೀ ಎಬ್ಬಿಸುವರು.

ಉಪ್ಪಿನ ಸಂಕ್ರಾಂತಿಯು ಈಚಲದ ಮೇಲೆ ಬಂತು

ಮಳೆಗಾಲ ಪ್ರಾರಂಭವಾಯಿತೆಂದರೆ ಸಮುದ್ರದದಂಡೆಗುಂಟ ಸಂತತ್ರೀದ್ಧಾರವಾಗಿ ಎರಡು ತಿಂಗಳ ತನಕ ಮಳೆಯು ಸುರಿಯುವದರಿಂದ, ಅಲ್ಲಿಯ ವ್ಯವಹಾರವೆಲ್ಲ ಕಟ್ಟಾಗಿ ಹೋಗುತ್ತದೆ. ಹಡಗಗಳು ಸಹ ನಿಂತು ಹೋಗುತ್ತವೆ. ಆದ್ದರಿಂದ ಅಲ್ಲಿ ಉಪ್ಪಿನ ಕಾಯದೆಭಂಗ ಮಾಡಲು ಯಾವ ಅನುಕೂಲತೆಯೂ ಇರುವದಿಲ್ಲ; ಈ ಎರಡು ತಿಂಗಳಲ್ಲಿ ಪೋಲೀಸರಿಗೆ ವಿಶ್ರಾಂತಿಯು. ಆದರೆ ಸ್ವಯಂಸೇವಕರಿಗೆ ಮಾತ್ರ ಇರುವದಿಲ್ಲ. ಏಕೆಂದರೆ ಒಂದಿಲ್ಲ ಮತ್ತೊಂದು ಕೆಲಸವು ಇವರ ಬೆನ್ನಿಗೆ ಕಟ್ಟಿರುತ್ತದೆ. ಅವುಗಳಲ್ಲಿ ಮಹತ್ವವಾದಂಥವು ಮೂರಿವೆ.

೧ ಈಚಲ ಗಿಡದ ಸಮೂಲ ನಾಶಮಾಡುವದು.

೨ ಪರದೇಶಿ ಅರಿವೆಗೆ ಬಹಿಷ್ಕಾರ.

೩ ಗಡಂಗಗಳ ಮುಂದೆ ಪಿಕೆಟಿಂಗ.

ಈಚಲ ಗಿಡಗಳಲ್ಲಿ ಎರಡು ಭಾಗವುಂಟು. ಒಂದು ಸರಕಾರೀ. ಎರಡು ಖಾಸಗೀ. ಸರಕಾರೀ ಗಿಡಗಳನ್ನು ಬಿಟ್ಟು, ಖಾಸಗೀ ಗಿಡಗಳನ್ನು ಬೇರು ಸಹಿತ ಅವು ಮುಂದೆ ಬೆಳೆಯದಂತೆ ಕಡಿಯ, ಕಿತ್ತಿಹಾಕಲಿಕ್ಕೆ ಅನಿರ್ಬಂಧವುಂಟು. ಖಾಸಗೀ ಗಿಡಗಳನ್ನು ಕಡಿಯಲಿಕ್ಕೆ ತಮ್ಮದೇನೂ ಅಡ್ಡಿಯಿಲ್ಲೆಂದು ಸರಕಾರದವರೇ ಒಪ್ಪಿದ್ದು, ಧಾರವಾಡದ ಕಲೆಕ್ಟರಸಾಹೇಬರು ಈ ಪ್ರಕಾರ ಸರಕ್ಯುಲರನ್ನೂ ತೆಗೆದಿದ್ದಾರೆ. ಧಾರವಾಡ ಜಿಲ್ಹೆಯಲ್ಲಿ ಇಂಥ ಗಿಡಗಳು ಲಕ್ಷ ಸಂಖ್ಯೆಯಿಂದಿರಬಹುದು. ಇವುಗಳ ಧ್ವಂಸವೆಂದರೆ ಕುಡುಕರ ದ್ರವ್ಯವುಳಿಸುವಂತಾಗುತ್ತದೆ. ಗುಜರಾಥದಂತಿರಲಿ; ಮುಂಬಯಿ ಕರ್ನಾಟಕದಲ್ಲಿಯೇ ಕಳೆದೊಂದು ತಿಂಗಳಲ್ಲಿ ೧೫-೨೦ ಸಾವಿರ ಗಿಡಗಳು ಭೂಶಾಯಿಗಳಾಗಿರುತ್ತವೆ. ಮುಂದೆ ತಿಂಗಳೊಪ್ಪತ್ತಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಇವುಗಳ ಧ್ವಂಸವಾಗಿ, ಆ ಗ್ರಾಮದವರು ಕುಡುಕರ ಮೇಲೆ ಮಹದುಪಕಾರ ಮಾಡಿದ ಶ್ರೇಯಸ್ಸನ್ನು ಪಡೆಯುವರೆಂದು ಆಶಿಸುತ್ತೇವೆ. ಸತ್ಯಾಗ್ರಹಕ್ಕೆ ಹೊರಡುವ ಸ್ವಯಂಸೇವಕರ ಮೆರವಣಿಗೆ ಹೊರಟಂತೆ ಧಾರವಾಡದಲ್ಲಿ ಈ ಗಿಡಗಳ ನಾಶ ಮಾಡಲು ಹೊರಡುವ ಸ್ವಯಂಸೇವಕರ ಮೆರವಣಿಗೆಯೂ ಆಗತಕ್ಕದ್ದುಂಟು. ಇದೇ ಪ್ರಕಾರದ ಉತ್ಸವವನ್ನು ಪ್ರತಿಯೊಂದು ಊರವರು ಮಾಡುವದು ಒಂದು ಕರ್ತವ್ಯವೇ ಆಗುತ್ತದೆ.

ಒಂದೆರಡು ತಿಂಗಳಲ್ಲಿ ಪರಶುರಾಮನ ಅವತಾರ ಕಾರ್ಯದ ಉದ್ದಿಷ್ಟ ಪೂರ್ಣವಾದ ಮೇಲೆ ವಿಲಾಯತಿಯ ಅರಿವೆಯ ವ್ಯಾಪಾರದ ಅಂಗಡಿ ಮತ್ತು ಶರೆಯ ಗಡಂಗಗಳ ಮುಂದೆ ಪಿಕೆಟಿಂಗ ಪ್ರಾರಂಭಿಸಬಹುದು. ಅಷ್ಟರಲ್ಲಿ ಈ ಎರಡೂ ಕೆಲಸಗಳ ದಾರಿಯು ಅರ್ಧಕ್ಕಿಂತ ಹೆಚ್ಚು ಸುಗಮ ಮತ್ತು ಸುರಕ್ಷಿತವಾಗುವದು. ನಮ್ಮ ಪ್ರಾಂತಕ್ಕೆ ಮುಂಬಯಿಯು ಪಡಿಮೂಲಿಯು. ಅದರ ತರುವಾಯ ಹುಬ್ಬಳ್ಳಿಯು. ಇವೆರಡೂ ಪಟ್ಟಣದವರು ವಿಲಾಯತಿಯ ಜವಳೀ ತರಿಸಬಾರದೆಂದು ನಿರ್ಧಾರ ಮಾಡಿದ್ದಾರೆ. ಮೊನ್ನಿನ ದಿವಸ ಹುಬ್ಬಳ್ಳಿಯ ಅಂಗಡಿಕಾರರು ಸಭೆ ಮಾಡಿ, ವಿಲಾಯತಿಯ ಬಟ್ಟೆಯನ್ನು ತರಿಸಬಾರದೆಂದೂ, ತರಿಸಿ, ಮಾರಿದವರಿಗೆ ದಂಡ ಕಟ್ಟಬೇಕೆಂದೂ ಠರಾವು ಮಾಡಿದ್ದಾರೆ. ಇಂಗ್ರೇಜರು ವ್ಯಾಪಾರದಿಂದಲೇ ಹಿಂದುಸ್ಥಾನವನ್ನು ಗೆದ್ದರು ಮತ್ತು ವ್ಯಾಪಾರದ ದೆಸೆಯಿಂದಲೇ ಹಿಂದುಸ್ಥಾನವನ್ನು ಹಿಡಿಯಲ್ಲಿ ಹಿಡಿದಿದ್ದಾರೆ. ಆ ವ್ಯಾಪಾರ ಮುಣಗುಬಾರದೆಂತಲೇ ಆಕಾಂಕ್ಷೆ ನಡೆಸಿದ್ದಾರೆ. ಇಂಗ್ಲಿಷರಂತೆ ಹಿಂದೀ ಪರ್ವತರೂ ವ್ಯಾಪಾರದಿಂದ ಮುಳ್ಳು ತೆಗೆಯುವಂತೆ ಮಾಡಿದನಾಯಿತು, ಯುರೋಪಿಯನ್ನರು ತಾವಾಗಿ ಸ್ವರಾಜ್ಯ ಕೊಟ್ಟು ಮೇಲೆ ಹೇಳಿದಂತೆ ಕೇಳುವರು. ಇಂಗ್ಲಂಡದ ಅರಿವೆ, ಕಾಬೂಲಬ್ಬಣ ಕಾಗದ ಮುಂತಾದ ಪ್ರತಿಯೊಂದು ಪದಾರ್ಥಕ್ಕೂ ಬಹಿಷ್ಕಾರ ಹಾಕಿ ನೋಡಿರಿ. ಯಕ್ಷಿಣಿಯ ಮಹಿಮೆಯು ಹೇಗಿರುತ್ತದೆಂದು ಕಂಡುಬರುವದು. ಯಕ್ಷಿಣಿಯು ಪ್ರಸನ್ನಳಾದರಾಯಿತು. ತಿಪ್ಪೆ ಉಪ್ಪರಿಗೆ, ಉಪ್ಪರಿಗೆ ತಿಪ್ಪೆಯಾಗುವದು.

ಗಡಂಗಗಳ ಮುಂದೆ ಪಿಕೆಟಿಂಗ ಮಾಡುವ ಕೆಲಸವನ್ನು ಸ್ತ್ರೀಯರಿಗೇ ಹೇಳಬೇಕೆಂದು ಮಹಾತ್ಮರ ಮತವು. ಆ ಮೇರೆಗೆ ಮುಂಬಯಿ, ಅಹಮದಾಬಾದಗಳಲ್ಲಿ ನಡೆದಿದೆ. ಈ ಕೆಲಸವನ್ನು ಕುಲೀನರಾಗಬೇಕಂಥ ಮನೆಯವರು ಮಾಡದೆ, ಕುಡುಕರ ಕುಲದವರೇ ಮಾಡಬೇಕು. ಅಂದರೆ ತಮ್ಮ ಬೀಗರು ಬಿಜ್ಜರು, ಅಕ್ಕ ತಂಗಿಯರು ಹೆಂಡರು ಮಕ್ಕಳು ಇವರ ಮುಂದೆ ಗಡಂಗದಲ್ಲಿ ಹೋಗಲಿಕ್ಕೆ ನಾಚಿಕೆಬಟ್ಟು, ತಾವಾಗಿಯೇ ದೂರಿಂದಲೇ ಸರಕೊಳ್ಳುವರು. ಘೋರಕಪಿಯಲ್ಲಿ ಸರಕಾರದವರು ಮಾಸ್ಕೋದ ಪ್ರಜರ ಮೇಲೆ ಸೈನ್ಯ ಕಳಿಸಿದರು. ಪ್ರಜರು ಸೋಲ್ಜರರ ಹೆಂಡರು ಮಕ್ಕಳನ್ನೇ ಮುಂದೆ ನಿಲ್ಲಿಸಲು, ಸೋಲ್ಜರರು ಸೇನಾಧಿಪತಿಯ ಹುಕುಮನ್ನು ಅಮಾನ್ಯ ಮಾಡಿ, ಸುಮ್ಮನೆ ನಿಂತರು. ಇದೇ ಪ್ರಕಾರ ಕುಡುಕರನ್ನು ಅವರವರ ಮನೆಯವರೇ ಅಡ್ಡಗಟ್ಟಿದರೆ ಪಿಕೆಟಿಂಗವು ನಿರಾಯಾಸವಾಗಿ ಯಶಸ್ವಿಯಾಗುವದು.

ಶಿರೋಡ ಮತ್ತು ಧಾರಾಸಾನದ ಕಾಯದೆಭಂಗ ನಿಂತಿತು.

ಇದೇನು ಭೀಮಜರಾಸಂಧ ಯುದ್ಧವಾಗಲಿಲ್ಲ.

ಇಂಗ್ರೇಜಿ ಸರಕಾರದವರು ಅಹಿಂಸೆಯ ಸತ್ಯಾಗ್ರಹಿಗಳ ಮೇಲೆ ಪ್ರಾಣ ತೆಗೆಯುವಂಥ ಹಿಂಸೆಯ ಉಪಾಯಗಳನ್ನು ಮಾಡಿ, ಶಿರೋಡ ಮತ್ತು ಧಾರಾಸಾನದ ಸತ್ಯಾಗ್ರಹದ ಸತ್ವವನ್ನು ನಿಃಸತ್ವ ಮಾಡಿ, ಅವುಗಳ ಬೇರು ಸಹ ಕಿತ್ತಿಗೆದರು. ಶಿರೋಡದಲ್ಲಿ ನೂರಾರು ಜನರು ತಲೆಯೊಡಕೊಂಡರು. ಧಾರಾಸಾನದಲ್ಲಿ ಇವರ ಮುಪ್ಪಟ್ಟು ಜನರು ತಲೆಯೊಡಕೊಂಡು, ಕಾಲು ಮುರಕೊಂಡು, ಆಸ್ಪತ್ರೆಯಲ್ಲಿ ನರಳುತ್ತಿರುವರಲ್ಲದೆ, ಒಬ್ಬನು ವೀರ ಸ್ವರ್ಗಾರೋಹಣ ಮಾಡಿದನು. ಶಸ್ತ್ರಧಾರಿಗಳ ಮೇಲೆ ಶಸ್ತ್ರ ಹಿಡಿದಿದ್ದರಿಂದ, ವ್ಯರ್ಥವಾಗಿ ಜನಲಯವಾಗಬಾರದೆಂದು ಈ ಸತ್ಯಾಗ್ರಹ ಸಂಗ್ರಾಮವನ್ನು ನಿಲ್ಲಿಸಿದರು. ಮತ್ತು ಪೋಲೀಸರು ಇದೇ ಸಮಯವೆಂದು ಧಾರಾಸಾನದಲ್ಲಿರುವ ಸತ್ಯಾಗ್ರಹ ಶಿಬಿರದ ಎಲ್ಲ ಪದಾರ್ಥಗಳನ್ನು ಧ್ವಂಸ ಮಾಡಿ, ಅದನ್ನು ಸಹರಾ ಅರಣ್ಯದಷ್ಟು ಭಯಾನಕವಾಗಿ ಮಾಡಿದ್ದಾರೆ. ಈಗೊಂದು ಗುಪ್ಪಿ ಕೂಡ ಹೋಗದಷ್ಟು ಆ ಪ್ರದೇಶವು ಭಯಾನಕವಾಗಿ ಕಾಣುತ್ತಿರುವದು.

ಒಂದೇ ವಾರದ ಹಿಂದೆ ಧಾರಾಸಾನದ ಯುದ್ಧವು ಪರಸ್ಪರ ಪ್ರೇಮಭಾವದಿಂದಲೇ ನಡೆದಿರುತ್ತದೆಂದು ಇಂಗ್ರೇಜಿ ಪತ್ರಕಾರರು ವರ್ಣನೆ ಮಾಡಿದರು. ಆಗ ನಾವು ಇದೊಂದು ಪೌರಾಣಿಕ ಕಾಲದ ಭೀಮ ಜರಾಸಂಧ ಯುದ್ಧವೆಂದೇ ಭಾವಿಸಿದೆವು. ಭೀಮ ಮತ್ತು ಜರಾಸಂಧರು ಗರಡೀಮನೆಯಲ್ಲಿ ವೈರಿಯಂತೆ ಹೋರಾಡುವರು. ಮಧ್ಯಾಹ್ನದ ತನಕ ಯುದ್ಧವಾಡಿ, ಊಟಕ್ಕೆಂದು ಮನೆಗೆ ಬಂದಾಗ ಇಬ್ಬರೂ ಜತೆಗೂಡಿದವರಂತೆ ಹತ್ತರ ಕೂತುಕೊಂಡು ಊಟಮಾಡುವರು. ಶಿರೋಡದಲ್ಲಿ ಸ್ವಯಂಸೇವಕರು ಒಂದೆರಡು ದಿವಸ ಪೋಲೀಸರಿಗೆ ಅನ್ನ ತಂದು ಕೊಟ್ಟರು. ಅಂಥ ಪ್ರಕಾರವು ಧಾರಾಸಾನದಲ್ಲಿ ಕಂಡು ಬರಲಿಲ್ಲ. ಹೆಸರು ಗಳಿಕನದ್ದಾಯಿತು ಬಿದ್ದವು ಗಟ್ಟಿ ಕಳಗದ ಪಟ್ಟು. ಹೀಗೆ ಬಲವಂತರಿಗೂ ದುರ್ಬಲರಿಗೂ ಯುದ್ಧವಾಗಿ, ಬಲಿಷ್ಠರು ಗೆದ್ದರು. ಆಳರಸರು ಹೊಡೆದಾಗ ಯುದ್ಧ ಗೆದ್ದರು. ಆದರೆ ನಿಜವಾದ ಜಯ ಸಂಪಾದನೆ ಮಾಡಲಿಲ್ಲ. ಪ್ರಜರ ಮನಸ್ಸು ಗೆದ್ದರೆ ಯುದ್ಧದಲ್ಲಿ ಜಯಶಾಲಿಯಾದಂತಾಗುತ್ತದೆ.

ಕಿತ್ತೂರ ಚೆನ್ನಮ್ಮನ ಪ್ರಯೋಗಕ್ಕೆ ಪ್ರತಿಬಂಧ.

ಅಬ್ಬೀಗೇರಿಯ ನಾಟಕ ಮಂಡಲದವರು ವಿಜಾಪೂರಕ್ಕೆ ಹೋಗಿದ್ದು, ಅಲ್ಲಿ ಕಿತ್ತೂರ ಚೆನ್ನಮ್ಮನ ಮೊದಲನೆಯ ಪ್ರಯೋಗವಾಯಿತು. ಆದರೆ ಅಧಿಕಾರಿಗಳು ಇವರಿಗೆ ಈ ಪ್ರಯೋಗವನ್ನು ಪುನಃ ಮಾಡದಂತೆ ಪ್ರತಿಬಂಧ ಮಾಡಿದಂತೆ ತಿಳಿಯುತ್ತದೆ.

ಹುನಶಾಳ—

ಮಹಾತ್ಮರ ಕೂಡ ಇದ್ದ ಮೊದಲನೆಯ ಜತ್ಥದ ಕಡುಗಲಿಯಾದ ಮೋಟೇಬೆನ್ನೂರಿನ ಶ್ರೀ. ಮಹಾದೇವ ಮೈಲಾರನಿಗೆ ಒಂದು ವರ್ಷದ ಶಿಕ್ಷೆಯಾದ್ದರಿಂದ, ನಿನ್ನಿನ ದಿವಸ ಮೋಟೇಬೆನ್ನೂರಲ್ಲಿ ಸಂತೆ ಇದ್ದರೂ ಹರತಾಳವಾಯಿತು.

ಮಹಾತ್ಮರನ್ನು ಬಂಧಮುಕ್ತ ಮಾಡಿರಿ.

ರಾಜಕೀಯ ಕೈದಿಗಳಿಗೆ ಕ್ಷಮೆ ಕೊಡಿರಿ.

ವಸಾಹತಿನ ಸ್ವರಾಜ್ಯ ಕೊಟ್ಟಿದ್ದೇವೆಂದು ಜಗತ್ತಿಗೆ ಸಾರಿರಿ.

"ಹಿಂದುಸ್ಥಾನವನ್ನು ಹೇಗೆ ಉಳಿಸಿಕೊಳ್ಳಬೇಕೆಂಬದು ಬ್ರಿಟಿಶ ಜನತೆಯ ಮುಂದೆ ಗಹನವಾದ ಪ್ರಶ್ನವಾಗಿರುತ್ತದೆ. ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಲಂಡನಕ್ಕೆ ಹೋಗಿದ್ದಾರಷ್ಟೇ; ಇವರು ಯಾವ ರಾಮಬಾಣ ಉಪಾಯ ಹೇಳುವರೆಂದು ಕೇಳಲು ಮೇಜವಾನಿಯ ಸಮಯ ಮಾಡಿ, ಇವರನ್ನು ಊಟಕ್ಕೆ ಕರೆದರು ಪಾರ್ಲಮೆಂಟಿನ ೧೫೦ ಜನ ಮೆಂಬರರು ಹೆಂಡರು ಮಕ್ಕಳನ್ನು ಕರಕೊಂಡು ಊಟಕ್ಕೆ ಹೋದರು. ಊಟಕ್ಕೆ ರುಚಿಯು ಉಪ್ಪಿನ ಕೊರತೆಯಾಗಲಿಲ್ಲ. ನಾಮದಾರ ಶಾಸ್ತ್ರಿಯವರ ಬಾಯಿಯಿಂದ ಹೊರಟುವ ಶಬ್ದಗಳು ಹಿಂದುಸ್ಥಾನದ ದೃಷ್ಟಿಯಿಂದ ರುಚಿಯ ಕಡೆಗೆ ಪಥ್ಯಕ್ಕೆ ಬೀಳುವಂಥವು ಆಗಿದ್ದವು. ಶಾಸ್ತ್ರಿಯವರು ಸ್ಪಷ್ಟವಾಗಿ ಭಾಷಣ ಮಾಡಿದರು. ಯಥಾರ್ಥವಾದಿ ಬಹುಜನ ಗೌರವಕ್ಕೆ ಯೋಗ್ಯರಿಗೆ ವಿರೋಧವಾಗುವಂಥ ಮಾತು ಹೇಳಿದರು. ಮಂತ್ರಿಗಳು, ಲಾರ್ಡ ಆರ್ವಿನ್‌ಸಾಹೇಬರ ಶೌರ್ಯ, ಲಂಡನ ಗುಪ್ತನುಸಲತ್ತು ಮಾಡಿ, ಮಹಾತ್ಮರನ್ನು ಹಿಡಿದರು. ದಬ್ಬಾಳಿಕೆಯು ಹೆಚ್ಚಿದಂತೆ ಜನರ ಮನಸ್ಸು ಸಮಾಧಾನಗೊಳ್ಳದಂಥ ಗತಿಸಿಸಿದಂಥವಾಗಿತ್ತೆಂದು ನಾಮದಾರ ಶಾಸ್ತ್ರಿಯವರು ಹೇಳಿದರು. ಅವುಗಳ ಸೂತ್ರವು ಶಿವೋಲೇಖದಲ್ಲಿ ಕೊಟ್ಟಂತಿರುತ್ತವೆ. ಹಿಂದುಸ್ಥಾನದಲ್ಲಿದ್ದ ಉರಿಯು ಸಾಮಾನ್ಯವಲ್ಲ. ಸಾವಿರ ಬಂಕರ ಬಾಗ ಹೊಡೆದರೂ ಆರುವದಿಲ್ಲ; ಸಮುದ್ರದ ನೀರೆಲ್ಲ ಚೆಲ್ಲಿಸಿದರೂ ನಂದುವದಿಲ್ಲ. ಅದಕ್ಕೆ ಮಾಡಬೇಕಾದ ಉಪಾಯವೆಂದರೆ- ಹಿಂದುಸ್ಥಾನದ ರಾಜಕೀಯ ಮಹತ್ವಾಕಾಂಕ್ಷೆಯನ್ನೇ ಪೂರ್ಣ ಮಾಡುವದಾಗುತ್ತದೆ. ಅಂದರೆ ಸಿವಿಲ ದರ್ಜಿ, ಪ್ರತಿಷ್ಠಿತ ಡೊಮಿನಿಯನ ಎನ್ನದೆ- ಸಿವಿಲ ಮನಸ್ಸಿನಿಂದ

೧ ಮಹಾತ್ಮರನ್ನು ಬಂಧಮುಕ್ತ ಮಾಡಿರಿ.

೨ ರಾಜಕೀಯ ಕೈದಿಗಳಿಗೆ ಕ್ಷಮಾದಾನ ಕೊಡಿರಿ.

೩ ವಸಾಹತಿನ ಸ್ವರಾಜ್ಯ ಕೊಟ್ಟಿದ್ದೇವೆಂದು ಜಾಹೀರ ಮಾಡಿರಿ.

ಅಂದರೆ- ಈ ಉರಿಯು ಆರುವದೆಂದು ನಿರ್ಭಿಡೆಯಿಂದ ಹೇಳಿದ್ದಾರೆ. ನಾಮದಾರರು ಯಾವ ನೆಲ ಅರಸ ಹಿತ್ಯಮಿಗಳು; ಮವಾಳರು. ರಾಜನಿಷ್ಠರು. ಇವರಿಗೆ ಕೂಡ ಹಿಂದುಸ್ಥಾನದ ಆಳ್ವಿಕೆಯು ಆಟೋಕ್ರಟಿ ಎಂದು ಅನಿಸಿ, ನಿಮಗೆ ನಾಳೆಕ್ಕೆ ಎಷ್ಟು ಹಿಂದುಸ್ಥಾನದಲ್ಲಿ ಬೇಕಾದ್ದನಿಸಿದರೆ- ಮೇಲಿನ ಮೂರು ಶರ್ತುಗಳಂತೆ ನಡೆಯಿರೆಂದಿದ್ದಾರೆ. ನಾಮದಾರರು ಸ್ಪಷ್ಟವಾಗಿ ಆಡಿದ ನುಡಿಯು ಬಹು ಜನರಿಗೆ ಒಪ್ಪಿಗೆಯಾಗಿದ್ದು ವರ್ತಮಾನಪತ್ರಿಗಳು ಅವರಿಗೆ ಬೆಂಬಲ ಕೊಟ್ಟಂಥ ಉದ್ಗಾರ ತೆಗೆಯಹತ್ತಿವೆ.

ಇದೇ ವೇಳೆಯಲ್ಲಿ ಸರ ರವೀಂದ್ರನಾಥ ಟಾಗೋರರೂ ಲಂಡನಕ್ಕೆ ಹೋಗಿದ್ದಾರೆ. ಇವರು ದುಬಿಯು ಸಂಚೀನದಲ್ಲಿದ್ದಾಗ- ಹಿಂದುಸ್ಥಾನದ ಈಗಿನ ಆಂದೋಲನದ ಬಗ್ಗೆ ನಿಮ್ಮ ಮತವೇನೆಂದು ಇವರಿಗೆ ಪ್ರಶ್ನೆ ಮಾಡಿದರು. ನನಗೆ ಅದರಲ್ಲಿ ಆಸಕ್ತಿಯಿಲ್ಲ. ಚಿತ್ರಕಲೆಯ ಅಭ್ಯಾಸ ಮಾಡುತ್ತಿದ್ದೇನೆಂದು ಸಾರಿಸಿಕೊಂಡ ಉತ್ತರ ಕೊಟ್ಟಿದ್ದರು. ಏಕೆಂದರೆ ಇದು ವರ್ಗೀಯರ ದೇಶವು. ಲಂಡನಕ್ಕೆ ಹೋದ ಬಳಿಕ ಉತ್ತರ ಕೊಡುವ ಅಗತ್ಯವೇ ಉಂಟಾಯಿತು. ಜನರು ಒತ್ತಾಯ ಮಾಡಲು ಆರಂಭಿಸಿದಾಗ ಅವರು ನಾಮದಾರ ಶಾಸ್ತ್ರಿಯವರಿಗಿಂತ ಬೇರೆಂದು ಮಾತುಗಳನ್ನು ಹೇಳಿದ್ದಾಗಿಯೇ ಹೇಳಿದರು. ಹಿಂದುಸ್ಥಾನದ ಸ್ವಾತಂತ್ರ್ಯದ ಪ್ರಶ್ನವು ಹಿಂದುಸ್ಥಾನದ ಮಟ್ಟಿಗೆ ಇರುವದಿಲ್ಲ. ಏಶಿಯಾ ಖಂಡದ ಸ್ವಾತಂತ್ರ್ಯವನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ಏಶಿಯಾಖಂಡದ ಬೇರೆ ಬೇರೆ ದೇಶಗಳ ಪ್ರತಿನಿಧಿಗಳ ಪರಿಷತ್ತು ಕರೆಯಿಸಿರಿ; ಮತ್ತು

೧ ಮಹಾತ್ಮರ ಅಪಮಾನವಾಗುವಂಥ ಕೃತಿ ಮಾಡಬೇಡಿರಿ.

೨ ಗಾಂಧೀ ಟೋಪಿಗೆಯನ್ನು ಹುಚ್ಚ ನಾಶ ಬೇಡಿರಿ.

ಎಂದು ಹೇಳಿದ್ದಾರೆ. ಗಾಂಧಿ ಮತ್ತು ಗಾಂಧಿ ಟೊಪ್ಪಿಗೆಯು ಭಾರತೋದ್ಧಾರಕ ಪ್ರತೀಕವಾಗಿದ್ದ ಮಹಾತ್ಮರ ಹಾಗು ಅವರ ಹೆಸರಿನಿಂದ ಪ್ರಖ್ಯಾತವಾಗಿರುವ ಟೊಪ್ಪಿಗೆಯು ಅಪಮಾನವೆಂದರೆ- ಹಿಂದಿಯರ ಅಂತಃಕರಣಕ್ಕೆ ಬರೆ ಕೊಟ್ಟು ಅವರಲ್ಲಿ ಕಡೆಯವರಾದವನ್ನು ಸಂತಾಪವನ್ನು ಉಂಟುಮಾಡುವಂತಹದಾಗುತ್ತದೆ. ಆದ್ದರಿಂದ ಪಿತಾಂಬರದ ನಡೆಯಿರಿ. ಲೋಕಮತವನ್ನು ತಾಂತ್ರಿಕ ಪಡಿಸಿರೆಂದು ನಿಶ್ಚಯವಾಗಿ ಹೇಳಿದ್ದಾರೆ. ನ ಮದಾರ ಶಾಸ್ತ್ರಿಯವರೂ, ಸರ ರವೀಂದ್ರನಾಥರೂ ಇಂಗ್ಲಂಡ ಪ್ರಿಯರಾದ ಸ್ನೇಹಸ್ಥರಾಗಿದ್ದು, ಅವರ ಹಿತೋಕ್ತಿಯನ್ನು ಉಪೇಕ್ಷೆ ಮಾಡುವದೆಂದರೆ- ತಪ್ಪು ಕಾಲಮೇಲೆ ತಾವೇ ಕಲ್ಲು ಹಾಕಿಕೊಳ್ಳುವಂತಾಗುತ್ತದೆ.

ಪಂಡಿತಪ್ಪ ಚಿಕ್ಕೋಡಿಯವರ ಸಾಂದರ್ಭಿಕ ಪ್ರದರ್ಶನ

ಸರಿಯು ಕೂಡು ಸ್ವರ್ಗಕ್ಕೆ ಕೇಳಿಸುವದೇ?

ಬೆಳಗಾವಿ ಲೋಕಲ ಬೋರ್ಡಿನ ಅಧ್ಯಕ್ಷರಾದ ಶ್ರೀ ಚಿಕ್ಕೋಡಿ ಪಂಡಿತಪ್ಪನವರು, ವಿಜಯದಲ್ಲಿ ಈ ಮುಂಚೆ ಪ್ರಸಿದ್ಧವಾದ ಮೇರೆಗೆ ಮೆ. ಕಲೆಕ್ಟರ ಸಾಹೇಬರ ಸನ್ನಿಧಾನಕ್ಕೆ ಹೋಗಿ ರಾಜನಿಷ್ಠೆಯ ಪ್ರದರ್ಶನ ಮಾಡಿ, ಈ ಸಂಕಟ ಸಮಯದಲ್ಲಿ ಬ್ರಿಟಿಶ ಸರಕಾರಕ್ಕೆ ಬೇಕಾದಂಥ ಸಹಾಯ ಮಾಡುತ್ತೇವೆಂದು ಪ್ರತಿಜ್ಞೆಯಿಂದ ವಚನ ಕೊಟ್ಟಿದ್ದು, ಸಾ ಹೇ ಬ ರು ಆ ಬ ಗ್ಗೆ ಶ್ರೀ. ಪಂಡಿತಪ್ಪನವರ ಶ್ಲಾಘನೆ ಮಾಡಿದ್ದಾರೆ. ಈ ಧ್ವಜಧಾರಿಗಳು ತಮ್ಮ ಪ್ರತಿನಿಧಿಗಳೆಂದು ಸಂಕೀರ್ತಿಸಿಕೊಂಡ ಜಿಲ್ಲಾಬೋರ್ಡಿಗಳ, ಸಿವ್ಹಾಣೆ ಮೊದಲಾದ ದೊಡ್ಡ ದೇಶದ ಊರುಗಳ ಜನರು ಸಭೆ ಮಾಡಿ, ಜಾಹೀರ ಮಾಡಿದ್ದು, ಕಲೆಕ್ಟರ ಸಾಹೇಬರಿಗೆ ಅರಿಯದಂಥ ಮಾತಲ್ಲ. ಆದರೂ ಚಿಕ್ಕೋಡಿ ಲೋಕಲ ಬೋರ್ಡಿನ ಅಧ್ಯಕ್ಷರೆಂಬ ದೊಡ್ಡ ಅಧಿಕಾರದ ಹೆಸರಿಂದ ಇವರ ಹೇಳಿದ ವಚನವನ್ನು ಬಹಳ ದೊಡ್ಡ ಪ್ರಮಾಣ ಮಾಡಿಕೊಂಡಿದ್ದಾರೆ. ಇಂಥವರೇ ಅವಸಾನ ಘೋಷಕರೆಂದು ಗೌರವಾಯುಕ್ತರು ಮುಂದೆ ಬೇಗ ತಿಳಿಯಬೇಕು. ನಾಮದಾರ ಶ್ರೀನಿವಾಸಶಾಸ್ತ್ರಿ, ಸರ ರವೀಂದ್ರನಾಥ ಟಾಗೋರರಂಥ ಜಗದ್ವಂದ್ಯರಾದಂಥವರು ಸ್ಪಷ್ಟ ಮಾತು ಹೇಳುತ್ತಿರುವದನ್ನು, ಇವರ ಹುರುಳಿಲ್ಲದ ರಾಜನಿಷ್ಠೆಯ ಘೋಷಣೆಯನ್ನು ಕುಲಸಿ ಮಾಡಿದರೆ- ಸರಿಯು ಕೂಗು ಸ್ವರ್ಗಕ್ಕೆ ಮುಟ್ಟಲಾರದೆಂದು ಹೇಳುವಂತಾಗುತ್ತದೆ.

ಈ ಜನರು ಬೇಕಾದಂಥ ಬಹುಪ್ರಚಾರ ನುಡಿಸುತ್ತಾರೆ. ಆದರೆ ಇವರವರನ್ನು ಬುದ್ಧಿಯುಳ್ಳ ಪ್ರತ್ಯಕ್ಷವೆನಿಸುವಂಥ ಯಾವ ಕೆಲಸವನ್ನೂ ಮಾಡುವದಿಲ್ಲೆಂದು ಕಾಂಗ್ರೆಸ್ ಪಕ್ಷದವರು ಕೇಳಿರುತ್ತಾರೆ. ಇವರು ಪ್ರತಿವರ್ಷ ಹೊಗಳಿದರೆ ಉತ್ತರ ಕುಮಾರರಾದರೆ- ಜನತೆಯಲ್ಲಿ ಪ್ರತಿಷ್ಠಿತರೆನಿಸುವರೆಂದು! ಇವರಿಗೆ ಲೋಕಮತದ ಹಿಂಬಲವೇ ಇಲ್ಲ. ಮತ್ತು ಯಾವದೊಂದು ಸ್ವಾರ್ಥತ್ಯಾಗದಿಂದ ಸಂಪಾದಿಸಿದ ಪುಣ್ಯಾಂಶದ ಅಲ್ಪ ಬಲವೂ ಇಲ್ಲ. ಇವರಲ್ಲಿ ಅಂಥ ಗಟ್ಟಿಗತನವಿದ್ದರೆ ಜನಬಲವಿದ್ದರೆ- ಸ್ವದೇಶ ಸ್ವಾತಂತ್ರ್ಯವಾದಿಗಳಿಗೆ ವಿರುದ್ಧವಾಗಿ ಪ್ರತಿಯೊಂದು ಪಟ್ಟಣ ಹಳ್ಳಿಯಲ್ಲಿ ಸಭೆ ಮಾಡಿ, ತಮ್ಮ ನೀತಿಯ ಪ್ರಭಾವ ತೋರಿಸುತ್ತಿದ್ದರು. ಆ ಪ್ರಾಬಲ್ಯದ ಬದಲು ಇವರಿಗೆ ಅಧ್ಯಕ್ಷ ಸ್ಥಾನದ ಮೇಲೆ ಬರುವುದು ದೊರೆಯುವದೇನು ನೋಡಿರಿ. ಸಮಯದಲ್ಲೇ ಇತರರಾಗಿ ಕರ್ತವ್ಯ ನಿರ್ವಹಣೆ, ಪರಕೀಯರ ಮುಂದೆ ಬುದ್ಧಿವಂತರೆನ್ನಿಸಿಕೊಳ್ಳುತ್ತಿದ್ದಾರೆ. ಇಂಥವರಲ್ಲಿ ಕಾಂಗ್ರೆಸವಾದಿಗಳಿಗೆ ಜನಬಲದೆಂದು ಗೌರವಾಯುಕ್ತ ಅಧಿಕಾರಿಗಳಿಗೆ ಸಂಪೂರ್ಣ ಸಾರಿ, ಸಾರಿ ಹೇಳುತ್ತೇವೆ.

ಪ್ರೊ. ನರೀಮನ ಸ್ವರಿಗೆ ಸಾದಾ ತಿಂಗಳ ಸಾದಾ ಶಿಕ್ಷೆಯಾಯಿತು.

ರಾಷ್ಟ್ರೀಯ ನಿಶಾನಿಗೆ ನಾಮದಾರ ಗವ್ಹರ್ನರಸಾಹೇಬರ ಸಲಾಮು.

ಮಹಾಬಳೇಶ್ವರದಲ್ಲಿ ಪಾಂಚಗಣಿ ಎಂಬದೊಂದು ಉಪನಗರವುಂಟು. ಅಲ್ಲಿಯ ಹಾಯಸ್ಕೂಲಿನ ಇನಾಮಿನ ಸಮಾರಂಭಕ್ಕಾಗಿ ನಾಮದಾರ ಗವ್ಹರ್ನರ ಸಾಹೇಬರು ಬರತಕ್ಕವರಿದ್ದರು. ಆದರ ಮುಂದೇ ಕಾಂಗ್ರೆಸ ಕಚೇರಿ ಇದ್ದು, ಅಲ್ಲಿ ರಾಷ್ಟ್ರೀಯ ನಿಶಾನೆ ಮೆರೆಯುತ್ತಿತ್ತು. ಈ ನಿಶಾನೆಯಿಂದ ಸಾಹೇಬರ ಅಪಮಾನವಾಗುವದಾದ ಕಾರಣ ಇದನ್ನು ತೆಗೆಯಬೇಕೆಂದು ಅಧಿಕಾರಿಗಳು ಕಾಂಗ್ರೆಸದವರಿಗೆ ಹೇಳಿದರು. ಪೋಲೀಸರೂ ಆಗಾಂತುಕರತನ ಮಾಡುವಂತೆ ತೋರಿತು. ಕಾಂಗ್ರೆಸ ಕಮೀಟಿಯವರು ಇದರ ರಕ್ಷಣೆಗಾಗಿ ಸ್ವಯಂಸೇವಕರು ಸಿದ್ಧರಾಗಬೇಕೆಂದು ಡಂಗುರ ಹೊಡಿಸಿದರು. ಐನೂರು ಸ್ವಯಂಸೇವಕರು ಬಂದರು. ಎತ್ತ ನೋಡಿದರತ್ತ ಗಾಂಧಿ ಟೋಪಿಗೆ ಮತ್ತು ರಾಷ್ಟ್ರಧ್ವಜ ಸಂರಕ್ಷಣೆಯ ಜಯಘೋಷ!! ಸಾವಿರಾರು ಜನ ಪ್ರೇಕ್ಷಕರೂ ಕೂಡಿದರು. ಅಷ್ಟರಲ್ಲಿ ಸಾಹೇಬರ ಮೋಟಾರು ಬಂತು. ಜನಸ್ತೋಮ ಕಂಡು, ನಡೆದ ವಿದ್ಯಮಾನ ಕೇಳಿಕೊಂಡು, ಕೆಳಗಿಳಿದು ಟೋಪಿಗೆ ತೆಗೆದು, ರಾಷ್ಟ್ರಧ್ವಜಕ್ಕೆ ವಂದನೆ ಮಾಡಿ, ಶಾಲೆಗೆ ಹೋದರು. ರಾಷ್ಟ್ರೀಯ ಧ್ವಜವಂದನೆ, ರಾಷ್ಟ್ರೀಯ ಧ್ವಜಾರೋಹಣವನ್ನು ಕೂಡಲೆ, ಗವರ್ನರ ಸ್ಪರ್ಶ ಇದ್ದಾದರೂ ತಮ್ಮಲ್ಲಿ ನಿಮಿಷದರೂ ಪೂರ್ವ ಸಾರ್ವಭೌಮತ್ವವೆಂದು ತೋರಿಸುವಂತೆ ಸಾಹೇಬರು ದಾರಿ ತೋರಿಸಿದಂತಾಯಿತು.

ಸಾಹೇಬರ ಕರೆಯ ಬಂಡಿಯನ್ನು ಹಗಲೇ ಸುಟ್ಟರು.

ವೈಮನಸಿಂಗದಲ್ಲಿ ಗೋಳಿಬಾರಾದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ಗುಂಡಿನ ಪ್ರಸಾದದಿಂದ ನೂರಾರು ಜನರು ಘಾಯಾಳುಗಳಾದರೂ, ಜನರ ಗುಡಿನ ಹಾಗು ಮರಣದ ಹೆದರಿಕೆಯು ಹಿಂದಾಯಿತು. ಹರ ಹಿಸ್ಸರಿ ಎಂದು ಕವಿಗಾಳರು ಹೇಳಿದಂತೆ!! ನಡುಮಧ್ಯಾಹ್ನ ಸ್ಟೇಶನದಿಂದ ಯುರೋಪಿಯನ್ನರ ಕ್ಲಬ್ಬಿಗಾಗಿ ಬ್ರಾಂಡಿಯ ಮತ್ತು ಸಿಗರೇಟಿನ ಪೆಟ್ಟಿಗೆಗಳೂ, ಹಾದ್ಯದ ಬೇರೆ ಪದಾರ್ಥಗಳ ಪೆಟ್ಟಿಗೆಗಳೂ ತುಂಬಿದಂಥ ಒಂದು ಬಂಡಿ ಬರುತ್ತಿತ್ತು. ಅರೇಳುನೂರು ಜನರು ಸೇರಿ ಬಂಡಿಯನ್ನು ತಡೆದು ಪೆಟ್ಟಿಗೆಗಳನ್ನು ಕೆಡವಿ, ಒಡೆದು, ಊರೀ ಹಚ್ಚಿ, ಸುಟ್ಟು ಹಾಕಿದರು. ಈ ಅನಾಹುತವು ಸ್ಟೇಶನ ಮತ್ತು ಪೋಲೀಸ ಸ್ಟೇಶನದ ಹತ್ತಿರವೇ ಆಗಿ ಸಾವಿರಾರು ಜನರು ನೋಡುತ್ತಿದ್ದಾಗಲೇ ನಿರ್ಭಯದಿಂದ ನಡೆಯಿತು. ಪೋಲೀಸರು ಬರುವದರೊಳಗಾಗಿ, ಕೆಲಸವಾಯಿತೆಂದು ತಂತಮ್ಮ ಸ್ಥಳಕ್ಕೆ ಹೋದರು.

ಸಾಹೇಬರಿಗೆ ನೀರು ಸಹ ದುರ್ಲಭವಾಯಿತು.

ಧೀರಹೃದಯರು ಶತ ಪಂಜರದಲ್ಲಿ ಒದ್ದರು; ನೀರಡಿಕೆಯಾಯಿತು. ಕ್ವೇಟದವರು ನೀರು ತರಲು ಆಳು ಕಳಿಸಿದರು. ಆದರೆ ಅಜ್ಞಾನನು ಕೂಡ ಕಲ್ಲೇ ಬಾಣ ಹೊಡೆದು ನೀರು ತರಿಸಿದನೆಂದು ಮಹಾಭಾರತದಲ್ಲಿ ಹೇಳಿದೆ. ಅಂಥ ಯೋಗ್ಯತೆಯು ಇವರ ಬಳಿಯಲ್ಲಿಲ್ಲವಲ್ಲ? ಇವರು ಧಾರವಾಡ ಸಾಲ್ಲಿ ಇದ್ದವು ಸ್ವಯಂಸೇವಕರನ್ನು ಹಿಡಿದರು. ಸ್ವಯಂಸೇವಕರೇನು ಜೀವದೊ, ಕಪಲೀಶ್ವರರೋ, ಕೇಳ ಕುಲದವರೂ ಆಗಿ ಎರಡು ದಿನ ಪ್ರಾನ ತಾಸಾದವರಾದಂಥವರಲ್ಲ. ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಡಾಕ್ಟರ ಬಟ್ಲಿವಾಲಾ ಇವರ ಮಗನಾದ ಸ್ವಿಂಘೆ, ಕೊರ್ಟ್ಟನಿ, ಅಕ್ಷಾಧೀಶರಾದಂಥವರ ಮಕ್ಕಳು, ಇವರು ತಮಗೆ ದಿನಾಲು ಉತ್ತಮ ಊಟ ಬೇಕು. ಸ್ವಚ್ಛ ನೀರು ಬೇಕು. ಇಲ್ಲವಾದರೆ ನಿಮ್ಮ ಅನ್ನವೇ ಬೇಡೆಂದು ಅಲಿಕ್ಷಿತ ಮತ್ತು ಪೋಲೀಸರ ಅನ್ಯಾಯದ ಪರ ಉಪವಾಸದ ಸತ್ಯಾಗ್ರಹ ಮಾಡಬೇಕೆಂದರು. ಸಾಹೇಬರಿಗೆ ದೊಡ್ಡ ಚಿಂತೆ ಹತ್ತಿ, ನಮಗೇ ನೀರು ಸಿಗುವದಿಲ್ಲ. ಊರವರು ತಮ್ಮ ಬಾವಿ ಮುಟ್ಟಗೊಡುವದಿಲ್ಲ. ಪಟ್ಟಣ ಹದಿನಾರು ಮೈಲಿಂದ ಮೋಟಾರಿನ ಅಡ್ಡ ಒಂದು ಸೀಸೆ ತರಿಸುತ್ತೇವೆ. ನಿಮಗೆಲ್ಲಿಂದ ನೀರು ತರುವದು ಎಂದು ದೈನ್ಯದಿಂದ ಹೇಳಿದರು. ಆದರೂ ಸ್ವಯಂಸೇವಕರು ನೀರಿನ ವ್ಯವಸ್ಥೆಯಾದ ಹೊರತು ಅನ್ನ ಗ್ರಹಣ ಮಾಡುವದಿಲ್ಲೆಂದು ಪಟ್ಟ ಹಿಡಿದರು. ಆ ನಂತರ ಕಲೆಕ್ಟರರಂತೆ ಎಲ್ಲಿಂದಲೋ ನೀರು ತರಿಸುವ ವ್ಯವಸ್ಥೆ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ನೀರಿನ ಅರಿಬು ಆದಾಗ ರೇಲ್ವೆ ಕಂಪನಿಯವರು ತಡೆಯಲು ಗಿರಿಯ ಹತ್ತಿರ ಹರಿಯುತ್ತಿರುವ ವರದಾ ಹೊಳೆಯಿಂದ ನೀರು ತರುತ್ತಿದ್ದಂತಿರಬಹುದು.

ತುರಂಗದಲ್ಲಿ ಮಹಾತ್ಮರು ಮೂರು ತಾಸು ಅಸ್ವಸ್ಥರಾಗಿದ್ದರು!!

ಮಹಾತ್ಮರು ಯರವಡೆಯ ತುರಂಗದಲ್ಲಿ ಒಂದು ದಿವಸ ಅಸ್ವಸ್ಥರಾಗಿದ್ದರು. ಅವರ ಕೋಣೆ ಅವರ ಪರಿವಾರದಲ್ಲಿರುವ ಬೇರೆ ಕೋಣೆಗಳಲ್ಲಿಯ ಹುಡುಕಿದರೂ ಕಾಣಲಿಲ್ಲ. ಮುಂದೆ ಮೂರು ತಾಸಿನ ನಂತರ ಇದ್ದಲ್ಲಿಯೇ ಇದ್ದರು. ಈ ಮೂರು ತಾಸು ಇವರು ಸಾಬರಮತಿಗೆ ಹೋಗಿ, ಅಲ್ಲಿಯ ಜನರ ಯೋಗಕ್ಷೇಮ ನೋಡಿಕೊಂಡು ಬಂದರೆಂದು ಗುಜರಾಥೀ ಪತ್ರಿಕೆಗಳಲ್ಲಿ ಒಂದು ಮನೋರಂಜಕ ಸುದ್ದಿಯು ಪ್ರಕಟವಾಗಿದೆ. ಇದೊಂದು ದಂತಕಥೆಯೇ ಸರಿ.

ಸೋಲಾಪೂರದಲ್ಲಿ ಛಡಿಕೇ ಶಿಕ್ಷೆ.

ಲಷ್ಕರೀ ಕಾಯದೆಯ ಪ್ರಕಾರ ಈ ಕೆಳಗಿನ ನಾಲ್ವರು ಹುಡುಗರಿಗೆ ಛಡಿಕೇ ಶಿಕ್ಷೆಯನ್ನು ವಿಧಿಸಿದ್ದಾರೆ.

೧ ಬಂಡೋಪಂತ್ನ ವಯ ೧೫ ಹನ್ನೆ ಛಡಿಕ

೨ ವಿಶ್ವನಾಥ ಬಾಳಕೃಷ್ಣ ವಯ ೧೫ ಹದಿನೈದು ಛಡಿಕೆ.

೩ ಶಿವಪ್ಪಾ ಕೃಷ್ಣಪ್ಪಾ ವಯ ೧೫ ಹದಿನೈದು ಛಡಿಕೆ;

೪ ರಾಮಾ ಶೇಷಪ್ಪಾ ವಯ ೧೫, ೧೫ ಛಡಿಕೆ.

ಮೊದಲಿನ ಹುಡುಗನಿಗೆ ಬೆತ್ತದಿಂದ ಮತ್ತು ಕಡೆಯವನಿಗೆ ಬರಲಿನಿಂದ ಹೊಡೆಯುವರು.

ಅಂಕೋಲೆಯಲ್ಲಿ ಪೋಲೀಸರ ದಬ್ಬಾಳಿಕೆ.

(ಅಂಕೋಲೆಯ ಪ್ರಕಟನಾಪತ್ರ-ಧಿರ-ದಿಯಿಂದ)

ನಿನ್ನೆ ಸಂಜೆ ಸುಮಾರು ೮ ಘಂಟೆ ವೇಳೆಯಲ್ಲಿ ಒಬ್ಬ ಸ್ವಯಂ ಎತ್ತುಗಳನ್ನು ಹೊಡಕೊಂಡು ಪಟ್ಟಣದ ಮಾರ್ಗವಾಗಿ ಬರುತ್ತಿರುವಾಗ ಒಬ್ಬ ಪೋಲೀಸ ಸಿಪಾಯಿಯು ಅವನನ್ನು ತಡೆದು ನೀನವನ್ನು ಏಕೆ ಹಿಡಿದುಕೊಂಡು ಹೋಗುತ್ತಿದ್ದಿಯೆಂದು ಕೇಳಿದನು. ಅದಕ್ಕೆ ಅವನು ಎತ್ತನ್ನು ಗಾಡಿಗೆ ಕಟ್ಟುವದಕ್ಕೆ ದೀಪದ ಅವಶ್ಯಕತೆಯುಂಟು. ಗಾಡಿ ಇಲ್ಲದೆ ಎತ್ತುಗಳನ್ನು ಮಾತ್ರ ಹಿಡಿದುಕೊಂಡು ಹೋಗುತ್ತಿರುವಾಗ ದೀಪವನ್ನು ಹಚ್ಚಿಕೊಂಡು ಹೋಗುವ ನಿಯಮವು ತನಗೆ ತಿಳಿಯದೆಂದನು. ಆದಕ್ಕೆ ಸಿಪಾಯಿಯು ನೀನೇ ತಪ್ಪಿದೇ ಉಪ್ಪು ಮಾಡುವವನು. ನಿನಗೆ ತಕ್ಕ ಶಿಕ್ಷೆಯನ್ನು ಮಾಡಬೇಕು. ಎಂದವನಿಗೆ ಹೇಳಿ ಎಷ್ಟು ಕಾಲಿನಿಂದ ಹೊಡೆಯ ಹೋದನು. ಹಾದಿಕಾರರು ಬಂದು ಬಿಡಿಸಿದರು. ಅದರ ಪರಿಣಾಮವಾಗಿ ಈ ದಿನ ಠಾಣೆಯಲ್ಲಿ ಅವನ ಜಾತಿಯ ಜನರ ಸಭೆಯನ್ನು ಮಾಡಿ ಸರಕಾರೀ ಅಧಿಕಾರಿಗಳು ತಮ್ಮ ಜಾತಿಯವರಿಗಾಗಿದ್ದ ಈ ಅಪಮಾನಗೊಳಿಸಿದ ತಮ್ಮ ಜಾತಿಯವರನ್ನೆಲ್ಲ ಅವಮಾನಗೊಳಿಸಿದರೆಂದು ತಿಳಿದು ಕೆಲಸವನ್ನು ಮಾಡತಕ್ಕದ್ದೆಂದು ತಿಳಿಯಿಸಿದರು. ಈ ಬಗೆ ಸುಮ್ಮನಿದ್ದ ಪೋಲೀಸರು ಈಗ ತಮ್ಮ ದರ್ಪವನ್ನು ತೋರಿಸಹತ್ತಿದ್ದಾರೆ.

ಹಿಡಿದ ನಾಗೇಗಟ್ಟಿಗೆ ಕಾರವಾರದಿಂದ ಒಂದು ಮಂದಿ ಸಿದ್ಧ ಪೋಲೀಸರು ಮೂರುದಿವಸ ಬರುತ್ತಾರೆ.

ಶಿಕ್ಷೆ-

ಬೆಳಗಾವಿಯ ಶ್ರೀ. ಲಿಂಗದೇಯವರಿಗೆ ಆರು ತಿಂಗಳ ಶಿಕ್ಷೆ ಮತ್ತು ನೂರು ರೂಪಾಯಿ ದಂಡ; ದಂಡ ಕೊಡದಿದ್ದರೆ- ಮೂರು ತಿಂಗಳ ಹೆಚ್ಚಿಗೆ. ಇವರು ಶಹಾಪೂರಿನ ಪ್ರಸಿದ್ಧ ಸಹಕಾರ ವ್ಯಾಪಾರಸ್ಥರೂ, ಹಿಂದುಸ್ಥಾನೀ ಸೇವಾದಲದ ಪ್ರಚಾರಕರೂ ಆದಂಥ ದೊಡ್ಡ ಗೃಹಸ್ಥರು. ಇಂದೂರಿನವರಲ್ಲಿ ಶ್ರೀ. ಶಂಕರರಾವ ಗಂಗಾವತಿಯವರಿಗೂ ಒಂದು ವರ್ಷದ ಸಕ್ತಿನ ಶಿಕ್ಷೆಯಾಯಿತು. ಇವರು ಒಳ್ಳೇ ಕಳಕಳಿಯಿಂದ ಭಾಷಣ ಮಾಡಿದ್ದು, ಕಾರವಾರ ಜಿಲ್ಲೆಯ ಜಾಗ್ರತಿಯ ಶ್ರೇಯಸ್ಸು ಬಹು ಮಟ್ಟಿಗೆ ಇವರಿಗೆ ಇರುತ್ತದೆ.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರಡ್ಡಿ ಕಂಪನಿ ಲಿಮಿಟೆಡ್.

ನೆಂಬ ನಾಮದ ಬಟ್ಟೆ ಅಂಗಡಿಯನ್ನು ಗದಗ ಶಹರದಲ್ಲಿ ಇದೇ ವರ್ಷ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ಒಳ್ಳೆ ದೊಡ್ಡ ಜವಾಬದಾರ ಮತ್ತು ವ್ಯವಹಾರಜ್ಞರಾದ ಸುಶಿಕ್ಷಿತ ಜನರಿಂದಲೇ ನಡೆಯುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಜಂಪೀಟಿಲ, ಹತ್ತೀಕಾಳು, ಚಿಮಣಿಎಣ್ಣಿ ಶಿಲಾಣಿ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೇವಿಸುವದರಿಂದ ಕೊಂಡುಕೊಳ್ಳಬೇಕೆಂಬದಾಗಿ ವಿನಂತಿ. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತೀಕಾಳು, ಜುಮುಕ ವಗೈರೆ ಮಾಲನ್ನು ಸಂಗ್ರಹ ಮಾಡುವದು ಹೆಚ್ಚು ಲಾಭವಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟು ಲೇಖಿಯಿಂದ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಮಾಡಿ ಇಡುವದರಲ್ಲಿ ಬರುವದು ಈ ಸುಸಂಧಿಯನ್ನು ವ್ಯರ್ಥಗಳೆಯಕೂಡದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಗೋದಿ, ಜೋಳ, ಶೇಂಗಾ ವಗೈರೆ ಉದಾ ವಸ್ತು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂದೂ ಮತ್ತು ಲಾಭಪಡೆಯಬೇಕೆಂದೂ ಇಚ್ಛಿಸುತ್ತೇವೆ.

ತಮ್ಮ

ಗದಗ.	ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ.
ಅಂಗಡಿ ನಂ ೧೭೨೨	ಲಕ್ಷ್ಮಪ್ಪಾ ಗೋಣೆಪ್ಪಾ, ಸಾಹುಕಾರ ಮೈದೂರ ಅಂತರವಳ್ಳಿ
ಕಾಟನ್ ಮಾರ್ಕೆಟ ರೋಡ	
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ	ದ್ಯಾವನಗೌಡಾ ಪಾಟೀಲ, ಹಾಯಕೋರ್ಟ ವಕೀಲ
ಹನಮರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ	ಧಾರವಾಡ

ಸೂಚನೆಃ— ವಿಮೆ ಇಳಿಸಿದಲ್ಲಿ ಮಾಲಿನ ಮೇಲೆ ೭೫ ಟಕ್ಕೆಕ್ಕಿಂತ ಹೆಚ್ಚಿಲ್ಲದಷ್ಟು ರಕಮು ಆಗ ಪ್ರಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ ಮೀರದಷ್ಟು ಬಡ್ಡಿ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ಮಿಯಾದದಲ್ಲಿ ಖಾಸಗಿ ರಿ ಲಿಲಾವು ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ.

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲರ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಅವನತಿ, ಅಡಚಣಿ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು ಮೊದಲಾದವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ಸೋಲ್ಹಾಪೂರ ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ನಿಧಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು—	ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡುವಂಥವರು.
ದಾತೃಗಳು.	ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.
ಅಜೀವ ಸಭಾಸದರು—	ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.
ಸಾಧಾರಣ ಸಭಾಸದರು—	೧ ನೇ ತರಗತಿಃ— ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ ಕೊಡುವವರು.
	೨ ನೇ ತರಗತಿಃ— ಕನಿಷ್ಠ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
	೩ ನೇ ತರಗತಿಃ— ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
	೪ ನೇ ತರಗತಿಃ— ಕನಿಷ್ಠ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಯೂವತ್ತೂ ಬಂಧುಭಗಿನಿಯರು ಆದಷ್ಟು ತೀವ್ರ ಸಂಘದ ಮೆಂಬರರಾಗಬೇಕೆಂದು ಒಳ್ಳೆ ಆಗ್ರಹದ ವಿನಂತಿಯದೆ.

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್‌ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಫಕ್ತ ೩ ತಿಂಗಳು ಈ ಪತ್ರದ ವರ್ಗಣಿದಾರರಿಗೆ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೇಡಿಯಂ ಲಿವ್ಹರ ವಾಚ



ಮೊದಲಿನ ಕಿಮ್ಮತ್ತು.	ಈಗ ಕೊಡುವ ಕಿಮ್ಮತ್ತು.
ರೂ. ೧೫	ರೂ. ೭½

ಇವುಗಳ ಕಿಮ್ಮತ್ತಿನ ಹೊರತು ವಿ. ಪಿ. ಬೇರೆ

ಒಮ್ಮೆಲೇ ೩ ವಾಚ ತರಿಸಿದರೆ. ವಿ. ಪಿ. ಮಾಫ. ಒಮ್ಮೆಲೇ ೬ ವಾಚ ತರಿಸಿದರೆ ೧ ವಾಚ ಹೆಚ್ಚು. ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು. ಈ ವಾಚುಗಳು ಸಿಲೆಂಡರ ಅಲ್ಲಾ ಲಿವ್ಹರ ಇರುವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ
ಪೋಸ್ಟ ಬನವಾಸಿ (ಉ. ಕಾ

THE UNITED KARNATAK INSURANCE COMPANY
LTD. DHARWAR

ಸುಸಂಧಿ ಸ್ವರಿವಮಾಡಿರಿ ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಬೋಧರಾವ ಶ್ರೀನಿವಾಸರಾವ ಪಾವಟೆ ಬಿ ಎ ಎಲ್‌ಎಲ್ ಬಿ ಸರಕಾರಿ ವಕೀಲ ವ ತ್ತ ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಚೇರಮನ

೨ ಡಾ|| ವಾಸುದೇವರಾವ ಶ್ರೀನಿವಾಸರಾವ ಉಮರ್ಜಿ ಎಲ್ ಎಮ್ ಎಂಡ ಎಸ್ ಗದಗ

೩ ಮಿ|| ಶ್ರೀನಿವಾಸರಾವ ಕೆ ಷಗಿರಿರಾವ ನಾಡಕರ್ಣಿ ಕಮಿಶನರು ಬಿ ಎ ಅಣ್ಣಿಗೇರಿ

೪ ಮಿ|| ರಾಮಚಂದ್ರ ವಂಗೋ ಸಾವಕಾರ ಪತನವಾರ ಹಳೇಹುಬ್ಬಳ್ಳಿ

೫ ಮಿ|| ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್‌ಎಲ್ ಬಿ ವಕೀಲ ಗದಗ

೬ ಮಿ|| ರಾಘವೇಂದ್ರರಾವ ಬಾಳಕೃಷ್ಣರಾವ ಗಿಣಡಪಳ್ಳಿ ವಕೀಲ ಮೈಲಹೊಂಗಲ

೭ ಮಿ|| ಅನಂತರಾವ ವೆಂಕಾಜಿ ದೇಸಾಯಿ ಬಿ ಎ ಎಲ್‌ಎಲ್ ಬಿ ವಕೀಲ ಹುಬ್ಬಳ್ಳಿ

೮ ಮಿ|| ರಾಮರಾವ ಪಿ ಫಂಡಿವಾಡ ಬಿ. ಎ. ಎಲ್. ಎಲ್ ಬಿ ವಕೀಲ ಧಾರವಾಡ

೯ ಮಿ|| ಅಬ್ದುಲ ಕರಿಮ ಅಮೀನ ಸಾ|| ಪಾಣಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊರಟ ಇನ್‌ಶ್ಯೂರನ್ಸ ಕಂಪನಿಯು ಇದೊಂದೇ ಮೊದಲನೇದು. ಈ ಕಂಪನಿಯ ದಾಯರೆಕ್ಟರರೂ ಮತ್ತು ಕೆಲಸ ನಡೆಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶಿ ಕಂಪನಿಗಳಿಗೆ ಏಜಂಟರಾಗಿ ದುಡಿಯುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ ಹೆಸರು ಪಡೆಯುತ್ತಿರುವ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಎಪ್ರಿಲ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗಿರುವದು. ಶೇರುಗಳನ್ನು ಮಾರುವದಕ್ಕೂ ಮತ್ತು ವಿಮೆಯ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲಾ ದೊಡ್ಡದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಏಜನ್ಸಿ ಕರಾರುಗಳು ಸಾಕಷ್ಟು ಸವಲತ್ತುಗಳು ವಿಪುಲ ಮತ್ತು ಕಮಿಶನ ದರಗಳು ಲಾಭಕಾರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:—	ಮುಂಜಾನೆ ೧೧ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೧ ರಿಂದ ೧ ರ ವರೆಗೆ.
ಚಾಲೂ ಖಾತೆಗಳು:—	ಮಕ್ತೆಯಾಗಿ ತೆಗೆಯಲ್ಪಡುವವು.
ಸೇವ್ಹಿಂಗ್ಸ ಬ್ಯಾಂಕು.—	ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.
ಮುದತಿ ಠೇವುಗಳು:—	ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩½ ರೂ.
ದೇಣಃ—	ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಹತ್ತಿ ಮತ್ತು ಧಾನ್ಯಗಳ ಅಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಪ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಆಯಾ ಜಾಗೆಗೆ ಒಮ್ಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತು ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಜಕ್ಕು ಹುಂಡಿಗಳನ್ನು ಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಟ.
ಏಜಂಟರು.

ಹಿಳಿಯದೇ ರಾಕ್ಷಸರವಾಗಿ ಕ್ಷೀಣ ಶಕ್ತಿಗಳೂ ಆದ ಮನುಷ್ಯರಿಗೆ ಮುಪ್ಪಿನಾರುಣ್ಯದಲ್ಲಿಯೇ ನಿಜವಾಗಿ ಸಂಸಾರ ಸುಖವು, ದೊರೆಯದೇ ನಿರುತ್ಸಾಹ ನಿರಾಶೆಗಳು ಮುತ್ತುತ್ತ... ಇಂಥ ಮನುಷ್ಯರ ಧಾತುಕ್ಷಯರೋಗವು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡುವಂಥವನ್ನು, ವೈದ್ಯರಾಜ ಶ್ರೀ. ಕೇಶವ ಶಾಸ್ತ್ರಿ ವಿರಚಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಮ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಪುರುಷತ್ವಹೀನ ದೇಹ, ಅಸ್ಥಿರ ಸ್ವಭಾವ, ನಿಸ್ತೇಜತನವನ್ನೂ, ಮೈಬಿಳಿಚಿಕೆಯನ್ನೂ, ಅಂಜುಬುರುಕತನ, ಅಕಾಲಮುಪ್ಪು, ಸ್ವಪ್ನಾವಸ್ಥೆ, ವೀರ್ಯದ ನೀರು, ಆಲಸ್ಯ, ಕಣ್ಣು ಕೈಕಾಲುಗಳುರಿಯೋಣ, ಉರಿಮೂತ್ರ, ಇಂದ್ರಿಯದ ಉರಿ ಪಿತ್ತವಿಕಾರ, ಅಗ್ನಿಮಾಂದ್ಯ, ನಿದ್ರಾನಾಶ, ಮಲಬದ್ಧತೆ, ಟೊಂಕನೋವು, ಸೊಂಟನೋವು, ಎಲುಬಿನ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ವಾಸಿಯಾಗಿ, ರಸ, ರಕ್ತ, ಅಸ್ಥಿ ಮಜ್ಜಾವೀರ್ಯ ಮೊದಲಾದ ಏಳು ಧಾತುಗಳು ವೃದ್ಧಿಯಾಗಿ ಇಂದ್ರಿಯ ದಾರ್ಢ್ಯತೆಯು ನವವಾಗಿ ದೇಹದಲ್ಲಿ ಶಕ್ತಿಯೂ ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟುತೊಂದರೆ. ಕೆಂಪು. ಬಿಳೆ ಬಿಳಿಪ್ರದರ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸ ದೃಢವಾಗುತ್ತದೆ. ಈ ಅಮೃತಸಿಂಧುವನ್ನು ನಸುಕಿನಲ್ಲಿ ಅರ್ಧತೊಲೆ ಮತ್ತು ಸಂಜೆಗೆ ಅರ್ಧತೊಲೆ ತೊಗೊಂಡ ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೊಗೋಬೇಕು. ಹನ್ನೆರಡು ದಿವಸಕ್ಕೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಕಟ್ಟುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ.
(ನಿಪ್ಪಾಣಿ ಜಿ. ಬೆಳಗಾವಿ

ದೇವಿ ಸರೋಜಿನಿಯವರಿಗೆ ಒಂಭತ್ತು ತಿಂಗಳ ಸಾದಾ ಶಿಕ್ಷೆ-

ದೇವಿ ಸರೋಜಿನಿ ಮತ್ತು ಅವರ ಕೂಡ ಹಿಡಿದ ಆರ್ಜರ ವಿಚಾರಣೆಯನ್ನು ಒಂದು ವಾರ ಮುಂದೆ ಹಾಕಿದಂತೆ ಸುದ್ದಿಯು ಹೊರಗೆ ಪ್ರಕಟವಾಗುತ್ತಿದ್ದಾಗ, ಭಾರತಸಾನದಲ್ಲಿಯೇ ರಾತ್ರಿಯಲ್ಲಿ ಇವರ ವಿಚಾರಣೆ ಮಾಡಿ, ದೇವಿಯವರಿಗೆ ಒಂಭತ್ತು ತಿಂಗಳ ಶಿಕ್ಷೆ ವಿಧಿಸಿದರು. ದೇವಿಯವರೂ ಉಳಿದವರೂ ವಿಚಾರಣೆಯಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಲಿಲ್ಲ. ಉಳಿದವರಿಗಾದ ಶಿಕ್ಷೆ- ಶ್ರೀ. ಪ್ಯಾರೇಲಾಲ ಮತ್ತು ಮಣಿಲಾಲ ಗಾಂಧಿ ಇವರಿಗೆ ಒಂದೊಂದು ವರ್ಷ ಸಕ್ತ ಶಿಕ್ಷೆ ಮತ್ತು ಮೂವರು ಹ್ವಾಲಂಟಿಯರರಿಗೆ ಆರಾರು ತಿಂಗಳ ಶಿಕ್ಷೆ ವಿಧಿಸಿದರು.

ಗಾಂಧಿ ಇಲ್ಲದ ಕೂಟ ನಿರ್ಗಂಧವು.

ರಾಮನಾಮವಿಲ್ಲದಂಥ, ರಾಮ ದರ್ಶನವಿಲ್ಲದಂಥ ಪದಾರ್ಥವು ಹನುಮಂತನಿಗೆ ನಿರುಪಯೋಗವೆನ್ನಿಸಿತು. ಸೀತಾದೇವಿಯು ಕೊಟ್ಟ ಒಡವೆ ಮೌಲ್ಯವಾದ ಮುತ್ತಿನ ಹಾರವು ಧೂಳಿಗಲ್ಲಾಯಿತು. ಅದೇ ಪ್ರಕಾರ ಇಂದು ಗಾಂಧಿ ಇಲ್ಲದ ಹಿಂದುಸ್ಥಾನದ ರಾಜಕಾರಣವು ನಿರ್ಗಂಧವಾಗುತ್ತದೆ. ಗಾಂಧಿ ಎಂದರೆ- ಕಾಂಗ್ರೆಸ, ಕಾಂಗ್ರೆಸವೆಂದರೆ ಗಾಂಧಿ. ಗಾಂಧಿಯಿಲ್ಲದ, ರಾಷ್ಟ್ರೀಯ ಸಭೆಯು ಜೊಳ್ಳುಟ್ಟಿನ ಚೀಲವಾಗುವದು. ಈ ಸಂಗತಿಯನ್ನು ಎಲ್ಲಕ್ಕೂ ಮೊದಲು ಸ್ವೀಕರಿಸಬೇಕಾದವರು ಅರಿತದುದಕ್ಕೆ ಅವರ ಅಭಿನಂದನ ಮಾಡುತ್ತೇನೆ. ಕಳೆದ ವರುಷದಿಂದ ಇದೇ ಸಂಗತಿಯನ್ನು ನಾನು ಅಹರ್ನಿಶಿ ಆಯರ್ಲಂಡ ಹೇಳುತ್ತಿದ್ದೇನೆ. ಅವರು ಅದನ್ನು ಲಕ್ಷಿಸಲಿಲ್ಲೆಂದು ಶ್ರೀ ಪಟೇಲರು ಅಂದಿರುತ್ತಾರೆ.

ಕುರಂಗದಲ್ಲಿ ಮಹಾತ್ಮರನ್ನು ಕಾಣಲು ವಿಸ್ಲೇಡೆಂಬುವರಿಗೆ ಹೋಗಲು ಅಪ್ಪಣೆ ಕೊಟ್ಟದ್ದು ಹಿಂದುಸ್ಥಾನ ಸರಕಾರದ ಅವಿವೇಕವಾಯಿತೆಂದು ಲಂಡನ ಟಾಯಿಮ್ಸ ಪತ್ರವೆನ್ನುತ್ತದೆ.

ಪುಣೆಯಲ್ಲಿ

ಶ್ರೀ ಕೇಳಕರರು ರಾಜದ್ರೋಹದ ಬರಹಗಳನ್ನೋದಿದರು.

ನಾಗಪೂರದ ಡಾಕ್ಟರ ಮುಂಜೆ ಮತ್ತು ಬ್ಯಾರಿಸ್ಟರ ಅಭ್ಯಂಕರರಂತೆ ಪುಣೆಯಲ್ಲಿಯೂ ಬ್ರಿಟಿಶ ಸರಕಾರದವರು ರಾಜದ್ರೋಹವೆಂದು ಎಲ್ಲಿಯೂ ದೊರೆಯದಂತೆ ಬಂದೋಬಸ್ತು ಮಾಡಿದ ಪುಸ್ತಕದೊಳಗಿನ ಮುಖ್ಯ ಮುಖ್ಯ ಅವತರಣಗಳನ್ನು ಓದಿ, ಬ್ರಿಟಿಶ ಸರಕಾರದ ಕಾಯದೆಭಂಗ ಮಾಡಿ, ಸ್ವತಃ ರಾಜದ್ರೋಹಿಯಾದರು. ಇದೇ ವಿಷಯವಾಗಿ ಟಿಳಕ ಮಂದಿರದಲ್ಲಿ ಸಭೆಗೂಡಿದರು. ಶ್ರೀ. ಕೇಳಕರರು ಅಧ್ಯಕ್ಷರಾಗಿದ್ದರು. ಶ್ರೀ ಜ್ಞಾನೇಶ್ವರಯತಿ, ಬಾಬರಾವ ಭಿಡೆ, ಡಾಕ್ಟರ ಪಳಸೂಳೆ, ಸ್ವತಃ ಶ್ರೀ ಕೇಳಕರರು ಓದಿ, ಸರಕಾರದ ಕೃತ್ಯವನ್ನು ನಿಷೇಧಿಸಿದರು.

ಮುಂಬಯಿ ವ್ಯಾಪಾರಸ್ಥರು ಸತ್ಯಾಗ್ರಹದಿಂದ ಗೆದ್ದು ಗೆದ್ದರು.

ಮುಂಬಯಿ ವರ್ತಕರು ಎರಡು ಲಕ್ಷ ಜನರದೊಂದು ಮೆರವಣಿಗೆ ತೆಗೆದದ್ದನ್ನು ಪೋಲೀಸರು ಅದನ್ನು ತಡೆದದ್ದನ್ನೂ ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಪೋಲೀಸರು ತಮ್ಮನ್ನು ತಡೆದರೂ ಎಲ್ಲಾ ಜನರು ದಾರಿಯಲ್ಲಿಯೇ ಕೂತರು. ಇದು ಒಳ್ಳೇ ಕೂಟಿನದ್ದಾದ್ದರಿಂದ ಎಲ್ಲ ವ್ಯವಹಾರ ಕಟ್ಟಾಯಿತು. ರಾತ್ರಿ ಎಂಟರ ತನಕ ಈ ಸತ್ಯಾಗ್ರಹ ನಡೆಯಿತು. ಕೆಲ ವ್ಯಾಪಾರಸ್ಥರ ಮಧ್ಯಸ್ಥಿಕೆಯಿಂದ ಪೋಲೀಸರು ದಾರೀ ಕೊಟ್ಟರು. ಹೀಗೆ ವ್ಯಾಪಾರಸ್ಥರು ಸತ್ಯಾಗ್ರಹದ ಹೆದ್ದು ಗೆದ್ದರು.

ಮುಸಲಮಾನರು ಕಾಯದೆಭಂಗದಲ್ಲಿ ಸೇರಬೇಕು.

ಮುಂಬಯಿಯಲ್ಲಿ ಮೌಲ್ವಿ ಅಬ್ದುಲ ಕಹಿಮಾನ, ಅಬ್ದುಲ ರಹಿಮ, ಉಮರ ಶಾಹಿಮ ಇವರೇ ಮೊದಲಾಗಿ ಇಪ್ಪತ್ತು ಜನ ಪ್ರಮುಖರು ಈ ಸಮಯದಲ್ಲಿ ಮುಸಲಮಾನರು ಕಾಯದೇಭಂಗದಲ್ಲಿ ಸೇರಬೇಕೆಂಬ ಜಾಹೀರ ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಮಹತ್ವದ ಸುದ್ದಿಗಳು.

ರಾಜೀನಾಮೆ-

ಮುಂಬಯಿಯ ನರ ಭೂಲಾಭಾಯಿ ದೇಸಾಯಿ ಮತ್ತು ಶ್ರೀ. ಲಾಲಜಿ ನಾರಾಯಣಜಿಯವರು ಅಸೆಂಬ್ಲಿ ಮತ್ತು ಕೌನ್ಸಿಲಕ್ಕೆ ರಾಜೀನಾಮೆ ಕೊಟ್ಟರು. ಇವರು ಅಲ್ಲಿಯ ಹಿಂದೂ ವರ್ತಕ ಸಂಘದ ಪರಿಯಿಂದ ಚುನಾಯಿತರಿದ್ದು, ಈ ಸಂಘದವರು ಮಹಾತ್ಮರನ್ನು ಬಿಟ್ಟು ರಾಷ್ಟ್ರೀಯ ಸಭೆಯಲ್ಲಿ ಬರಲಾರೆವೆಂದು ಠರಾವು ಮಾಡಿದ್ದಾರೆ.

ನಿಜಾಮರ ಪ್ರತಿನಿಧಿಗಳು-

ಮೈಸೂರಿನಂತೆ ನಿಜಾಮಸಾಹೇಬರೂ ಗೋಲ ಮೇಜಿನ ಪರಿಷತ್ತಿಗೆ ತಮ್ಮ ಪರಿಯಿಂದ ಪ್ರತಿನಿಧಿಗಳನ್ನು ಕಳಿಸುವ ವಿಚಾರದಲ್ಲಿ ತೊಡಗಿದ್ದಾರೆ. ನೀಲಗಿರಿಯ ತಂಪು ಹವೆಗಾಗಿ ಹೋಗಿದ್ದ ದೊಡ್ಡ ದೊಡ್ಡ ಕಾಮದಾರರನ್ನು ತಾರಿನಿಂದ ಕರೆಸಿಕೊಂಡಿದ್ದು, ರೆಸಿಡೆಂಟರ ಸಹಾಯದಿಂದ ಯಾರನ್ನು ಕಳಿಸಬೇಕೆಂಬ ವಿಚಾರ ನಡೆಸಿದ್ದಾರೆ.

ಸೂರತದಲ್ಲಿ ಹರತಾಳ-

ಧಾರಾಸಣದಂತೆ ಸೂರತಕ್ಕೂ ದಂಡು ಹೋಗಿದೆ. ತೋಪು, ಮಶಿನ ಗನ್ನುಗಳನ್ನೂ ಒಯ್ದಿರುವರು. ದಂಡಿನ ಆಗಮನವನ್ನು ಭಯಸೂಚಕವೆಂದು ಬಗೆದು, ನಾಗರಿಕರು ಹರತಾಳ ಮಾಡಿ, ಎಲ್ಲ ವ್ಯವಹಾರವನ್ನೂ ನಿಲ್ಲಿಸಿದ್ದಾರೆ.

ಸೊಲ್ಲಾಪೂರದಲ್ಲಿ ಫಟಕೀ ಶಿಕ್ಷೆ.

ಲಷ್ಕರೀ ಕಾಯದೆಯ ಪ್ರಕಾರ ಈ ಕೆಳಗಿನ ನಾಲ್ವರು ಹುಡುಗರಿಗೆ ಫಟಕೀ ಶಿಕ್ಷೆಯನ್ನು ವಿಧಿಸಿದ್ದಾರೆ.

೧ ಬಂಡೆಪ್ಪ ವಯ ೧೫ ಹತ್ತು ಫಟಕಿ
೨ ವಿಶ್ವನಾಥ ಬಾಳಕೃಷ್ಣ ವಯ ೧೫ ಹದಿನೈದು ಫಟಕಿ.
೩ ಶಿದ್ದಪ್ಪ ಕೃಷ್ಣಪ್ಪ ವಯ ೧೫ ಹದಿನೈದು ಫಟಕಿ;
೪ ರಾಮಾ ಬೇಪಣ್ಣಾ ವಯ ೧೫, ೧೫ ಫಟಕಿ.

ಮೊದಲಿನ ಮೂವರಿಗೆ ಬೆತ್ತದಿಂದ ಮತ್ತು ಕಡೆಯವನಿಗೆ ಬರಲಿನಿಂದ ಹೊಡೆಯುವರು.

ವಿಜಾಪೂರದ ಕರ್ನಾಟಕ ವೈಭವಕ್ಕೆ ಒಂದು ಸಾವಿರ ರೂಪಾಯಿಯ ಜಾಮೀನು ಬೇಡಿದ್ದಾರೆ.

ಸೊಲ್ಲಾಪೂರದ ಊರು ಹಾಳು ಸುರಿಯುತ್ತಿದ್ದು, ಛಾವಣಿಯಲ್ಲಿ ೧೨ ಆಗೆಯಷ್ಟು ಜನರು ಊರು ಬಿಟ್ಟಿದ್ದಾರೆ.

ದಬ್ಬಾಳಿಕೆಯು ನಿಷೇಧವೆಂದು ನಿಪ್ಪಾಣಿಯಲ್ಲಿ ಒಬ್ಬ ಪೋಲೀಸನು ಕೆಲಸ ಬಿಟ್ಟನು.

ಧಾರವಾಡ-

ಶುಕ್ರವಾರ ದಿವಸ ಮೆ. ಕಲೆಕ್ಟರ ಸಾಹೇಬರು ನರೇಂದ್ರಕ್ಕೆ ಹೋಗಿ ಅಲ್ಲಿ ಈಚಲಗಿಡ ಕಡಿಯುತ್ತಿದ್ದ ವ್ಹಾಲಂಟಿಯರರನ್ನು ಮೋಟಾರ ಲಾರಿಯಲ್ಲಿ ಕೂಡ್ರಿಸಿಕೊಂಡು, ಧಾರವಾಡಕ್ಕೆ ತರಿಸಿಕೊಂಡು ಬಿಟ್ಟುಬಿಟ್ಟರು. ಇವರು ಹಾಗೇ ಗಿಡಗಳನ್ನೇ ಕಡಿಯುತ್ತಿದ್ದರು.

ಈ ವಾರದಲ್ಲಿ ಮೂರು ದಿವಸ ಚನ್ನಾಗಿ ಮಳೆಯಾಗಿ ಚಿಕ್ಕ ಪುಟ್ಟ ಕೆರೆಕುಂಟೆಗಳು ತುಂಬಿ ಹೋಗಿವೆ.

ಕರ್ಮವೀರ ಪತ್ರಕ್ಕೆ ಜಾಮೀನು ಕೇಳಿದರೆ ಜಾಮೀನು ಕೊಡದೆ, ಪತ್ರವನ್ನು ಬಂದಿಡಬೇಕೆಂದು ಶ್ರೀ ದಿವಾಕರರು ತಮ್ಮನ್ನು ಕಾಣಲಿಕ್ಕೆ ಬಂದಿದ್ದ ತಮ್ಮ ತಮ್ಮ ಮಿತ್ರ ಬೇಗರವರಿಂದ ಹೇಳಿರುತ್ತಾರೆ.

ಮನೆಗೊಂದು ಖಾದಿಯ ಮಗ್ಗ-

ಗದಗ ಬೆಟಗೇರಿಯ ನಿಯಮಕಾರರು ಮನೆಗೊಂದರಂತೆ ಖಾದಿಯ ಮಗ್ಗ ಹಾಕಬೇಕೆಂದು ನಿಶ್ಚಯ ಮಾಡಿದ್ದಾರೆ. ನೂಲಿನ ಬೆಸೆಯಿಂದ ಸುತ್ತಲು ಹಳ್ಳಿಗಳಲ್ಲಿ ಹಂಜಿಯನ್ನು ಕೊಟ್ಟಿದ್ದು, ಇದರ ವ್ಯವಸ್ಥೆಗಾಗಿ ಎರಡು ಸಾವಿರದ ಫಂಡು ಕೂಡಿಸಿದ್ದಾರೆ. ಬೀದಿ ಬೀದಿಗೆ ಪಂಚರನ್ನು ನೇಮಿಸಿ, ಕುಡಿತವನ್ನು ನಿಲ್ಲಿಸುವ ಉಪಾಯ ಕೈಕೊಂಡಿದ್ದಾರೆ.

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS-LA

GENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T Khona P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಖಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

THE ANKALGI BANK LTD

Head Office

Kamanlatta Dharwar

Branches

Ranebennur & Haveri

5%

Interest allowed on

ANNA SAVINGS BANK

DEPOSIT.

Dharwar 3-1-1927 | K. B. ANKALGI Managing Director

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬೆಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುವದು. ಕಾಯಿಮ ಮತ್ತು ಬೇರೆ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—(೦)—

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಸಿ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದರಿಂದ ಆ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹರಿಂದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೇರಿ ದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದಕಾರಣ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಚ್. ಇಟಗಿ.

ಮುನಸಿಪಲ ಕಾರ್ಪೊರೇಶನ, ಧಾರವಾಡ

ವಿಜಯದ ವರ್ಗಣಿ ದರ

—(೦)—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ		ರೂ. ೧೨-೮-೦
೬	,,	೭-೦
೩	,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ		೩-೦-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾ. ವಿಜಯ ಧಾರವಾಡ.

ವ್ಹಾಲಂಟಿಯರರ ವಿಠ್ಠಲದಾಸರ ಮರಣ ಮತ್ತು ಸ್ಮಶಾನಯಾತ್ರೆ.

ಎರಡು ಲಕ್ಷ ಜನರ ಮೆರವಣಿಗೆ, ಪಟ್ಟಣದ ಹಂಟು ಹರತಾಳ

ಮುಂಬಯಿಯಲ್ಲಿ ಸ್ವಯಂಸೇವಕನಾಗಿದ್ದ ವಿಠ್ಠಲದಾಸ ಜಂದನದಾಸ ವ್ಯಾಪಾರಿ ಹದಿನೆಂಟು ವರ್ಷದ ಒಬ್ಬ ಚಿಕ್ಕ ಹುಡುಗನು ವಡಾಲಾದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾಗ, ಒಬ್ಬ ಸಾರ್ಜಂಟ ನಿಂದ ಹೊಟ್ಟೆಯ ಮೇಲೆ ಪೆಟ್ಟು ತಿಂದು ರಕ್ತ ಒಸರುತ್ತಿದ್ದನು. ಆಸ್ಪತ್ರೆಯಲ್ಲಿ ಅವನಿಗೆ ಹೊಲಿಗೆ ಹಾಕಿದರು, ತನ್ನ ಗುಣವಾದ ಬಳಿಕ, ಪುನಃ ಸತ್ಯಾಗ್ರಹ ಮಾಡಲು ಉಗಿಬಂಡಿಯಲ್ಲಿ ಈತನು ಪ್ರಯಾಣ ಮಾಡುತ್ತಿದ್ದಾಗ ಅಶಕ್ತತೆಯ ಮೂಲಕ ಮೇಲಿಂದ ಬಿದ್ದು, ಬಿದ್ದು, ಆ ಕ್ಷಣವೇ ಸ್ವರ್ಗಸ್ಥನಾದನು. ದೇಶಕಾರ್ಯಕ್ಕಾಗಿ ದೇಹ ಸೌಖ್ಯವನ್ನು ಪ್ರಾಣದ ವಿಚಾರವನ್ನು ಮಾಡದೆ, ದೇಹಾರ್ಪಣೆ ಮಾಡಿದ್ದರಿಂದ ವಿಠ್ಠಲದಾಸನ ಸ್ಮಶಾನಯಾತ್ರೆಯ ದೊಡ್ಡ ಮೆರವಣಿಗೆಯನ್ನು ಕಾಂಗ್ರೆಸ ಕಮೀಟಿಯವರು ತೆಗೆದರು. ಈತನ ವೃತ್ತ್ಯುವಿನ ಶೋಕವೆಂದು ಪಟ್ಟಣಿಗರು ಹರತಾಳ ಮಾಡಿದರು. ಎಲ್ಲ ಅಂಗಡಿಗಳು ಬಂದಾದವು. ಎರಡು ಲಕ್ಷ ಜನರು ಇದರಲ್ಲಿ ಸೇರಿದ್ದರು. ಲೋಕಮಾನ್ಯರ ಸ್ಮಶಾನಯಾತ್ರೆಯಲ್ಲಿ ಸಹ ಇಷ್ಟು ಜನರು ನೆರೆದಿದ್ದಿಲ್ಲ. ದೇಶಕಾರ್ಯದ ದೊಡ್ಡ ಗೌರವಕ್ಕಾಗಿ ಅಧಿಕಾರಿ ಸತ್ತರೂ ಇಷ್ಟು ಜನರು ನೆರೆಯಲಾರರು. ಇದೊಂದು ಅದ್ಭುತ ಮತ್ತು ಅದುತ ಸಂಗತಿಯೇ ಆಯಿತು. ಇದೊಂದೇ ಸಂಗತಿಯಿಂದ ಸಹಕಾರಿಗಳೆಂಬವರು ತಮಗೆ ದೇಶದಲ್ಲಿ ಮಾನಾಟವಿಲ್ಲೆಂದು ಬುದ್ಧಿಗಲಿಯುವಂತಿದೆ.

ವೆ ವೆಲ್ಸಸಾಹೇಬರ ಹುಡುಗತನ.

ಧಾರವಾಡದ ಕಲೆಕ್ಟರರಾದ ಮಿ. ಅಬಟ ಸಾಹೇಬರು ಪಾಳೇ ಎತ್ತನ್ನು ಹೊಲದಲ್ಲಿ ಹೊಡೆಯಬೇಕೆಂಬ [illegible] ಬೆಳಗಾವಿಯ ಅಸಿಸ್ಟಂಟ ಕಲೆಕ್ಟರರಾದ ಮಿ. ವೆಲ್ಸಸಾಹೇಬರು ಹೊಸ ಬಿಸಿಯ ಅನನುಭವಿಕ ಯೋಗ್ಯತೆಯವರಾಗಿ, ಹೋರಿಯನ್ನು ಹೊಳೆಯಲ್ಲಿ ಹೊಡೆಯುವಾಂತೆಂಬ ಅವಸ್ಥೆಯವರಾಗಿದ್ದಾರೆ. ಇವರು ತಮ್ಮ ಪ್ರಾಂತದಲ್ಲಿ ಕಾಯಿದೆಭಂಗದ ಪಂಜು ಪಚ್ಚಿ [illegible] ಸಲ್ಲುವದು. ಇವರು ಮೋಟಾರಿನ ಸಹಾಯದಿಂದ ಎಲ್ಲಿ ಬೇಕಾದಲ್ಲಿಗೆ ಸರ್ರನೆ ಹೋಗುವರು. ಮನಸ್ಸಿಗೆ ಬಂದದ್ದನ್ನು ಮಾಡುವರು. ಅದರಿಂದ ಊರ ಈ ವರವು ಅತ್ಯಂತವಾಗಿ ಕೆರಳಿಸಿ, ಆ ಜಿಲ್ಲೆಯ ವಾತಾವರಣವೇ ಕಲ್ಲು ಹೋಗಿರುತ್ತದೆ. ಇವರು ಬಂದಲೇ ಹಿಂಡಲಗಿಯ ತುರಂಗ ತುಂಬಿ, ಅಂಥ ಹಲವು ತುರಂಗ ಕಟ್ಟಬೇಕಾದೀತು. ಮುಂಬಯಿಯಲ್ಲಿ ತುಂಬಾದ ಜಾಗಗಳಲ್ಲಿ ಸತ್ಯಾಗ್ರಹಿಗಳ ಸ್ಥಿತಿವಂತಿ, ಶಾಲೆಯ ಹಾಯಿಸ್ಕೂಲ, ಕಾಲೇಜುಗಳನ್ನು ತುರಂಗ ಮಾಡಲಾಗುವದಾಗಿದೆ.

ಸಾಹೇಬರು ಬೈಲಹೊಂಗಲದಿಂದ ಐದು ಮೈಲುಗಳ ಮೇಲಿರುವ ನಾಗನೂರ ಮೋಟ ಗ್ರಾಮಕ್ಕೆ ಹೋಗಿ, ಅವರ ಮುರಗೆಗಳನ್ನು ಕಡಿದವರೆಂದು ಕೆಲ ಜನರನ್ನು ಹಿಡಿದರು. ಇವರನ್ನು ಮೋಟಾರದಲ್ಲಿ ಹಾಕಿಕೊಂಡು ಹೋಗುವಾಗ ಹೆಣ್ಣು ಮಕ್ಕಳು ಮೋಟಾರಗಳ ಮುಂದೆ ಅಡ್ಡ ಬಿದ್ದು, ಸತ್ಯಾಗ್ರಹ ಮಾಡಿದರು. ಸಾಹೇಬರು ಇವರನ್ನು ಬಿಟ್ಟೆ ಹಿಡಿದು, ದೂರ ಸರಿಸಿ ಮೋಟಾರ ಸಾಗಿಸಿದರು. ಆಗ ಒಬ್ಬ ವಯಸ್ಕಳು ಅವರ ವಾಹನವನ್ನು ತಡೆಯಲು [illegible] ಸಾಹೇಬರು ತಿರು ಜನರನ್ನು ಹಿಡಕೊಂಡು ಹಿಂಡಲಗಿಗೆ ಒಯ್ದರು. ಅಲ್ಲಿ ಆರೋಪಿಗಳ ಪರವಾಗಿ ವಕೀಲರನ್ನು ಕರಕೊಂಡು ಹೋದರು. ಆ ವಕೀಲನಿಗೆ ಬೈದು ಕಳಿಸಿದರು. ಈ ವಕೀಲನು ಚಿಕ್ಕವನು. ನಾವು ಹೇಳಿದ್ದೇನೆಂದು ವಾದದಿಂದ ದೌಡಿ ಪ್ರಶ್ನೆಗಳು ಸೇರ ಮೋಟಾರದಲ್ಲಿ ಕೂತು ಹೋದರು. ಸಾಹೇಬರು ಇವರಿಗೆ ಬೈಯುತ್ತಿದ್ದರು, ಆರೋಪಿಗಳು ನಿಮ್ಮ ಕೋರ್ಟ ಬೇಕಾಗುವದಿಲ್ಲೆನ್ನುತ್ತಾರೆಂದು ಉತ್ತರ ಕೊಟ್ಟು ಕಳಿಸಿದರು. ಪ್ರತಿಸ್ಪರ್ಧಿ ಒಂದು ಹಾದಿಗ ಸಂಶಯವಿಲ್ಲೆಂದು ಹಿಂದಿರುಗಿದರು. ಈಗಿನ್ನೊಮ್ಮೆ ಇವರು ಬೇಕಾಯಿತೋ ಬೇಡ ಮುಂದೆ ನಾವೇ ಏರ ವಿಚಾರ ರಾಶಿ ಕಳಿಸುವೆವೆಂದಿದ್ದಾರೆ. ಇವರು ಹಾಯಿದಂತೆ ನಮ್ಮ ಆ ಕಾಗದಿಸುವವರಲ್ಲಿ ಆರೋಪಿಗಳ ವಿಚಾರ ಮಾಡಿಸಿ, ಮನೆಗೆ ತಿರುಗಿ ಬರುವವರು [illegible]

ದಾಯಕವಾದರೂ, ರಾಷ್ಟ್ರೀಯ ಜಾಗೃತಿಗೆ ಪೋಷಕವಾಗಿರುತ್ತದೆ. ಇಂಥ ಸಹೋದರು ಪ್ರತಿಯೊಂದು ಜಿಲ್ಲೆಯಲ್ಲಿದ್ದರೆ ಸ್ವಲ್ಪ ಕಾಲದಲ್ಲಿ ಸ್ವರಾಜ್ಯವು ತಾನಾಗಿ ಬರುವದು.

ದೇವಿ ಸರೋಜಿನಿಯವರ ದಸ್ತಗಿರಿ.

ಧರಾಸಾನದಲ್ಲಿ ಎರಡನೆಯ ತಾರೀಖಿನ ದಿವಸ ಸುಮಾರು ಎರಡು ಸಾವಿರ ಸ್ವಯಂಸೇವಕರು ಉಪ್ಪಿನ ಉಗ್ರಾಣದ ಮೇಲೆ ದಾಳಿಯಿಟ್ಟು ಹೋದರು. ಆಗ ದೊಡ್ಡ ಯುದ್ಧವೇ ಆಯಿತು. ಸ್ವಯಂಸೇವಕರು ಕಯ್ಯಲ್ಲಿ ಬಡಿಗೆ ಕೂಡ ಇಲ್ಲದಂದ ನಿರ್ಬಲರು, ಪೋಲೀಸರ ಡೊಣ್ಣೆ, ಕತ್ತಿ, ಬಂದೂಕ ಮುಂತಾದ ಎಲ್ಲ ಕೂಡ ಹಿಂಸಕತ್ವವು ಆಯುಧಗಳಿದ್ದವರು. ವ್ಹಾಲಂಟಿಯರರು ಶಿವಾಜಿಯ ಕೌಶಲ್ಯಗೇಟದ ಕೂಡ ದಾಡಿದಿಂದ ವತಿ ಮೋಸದ ಯುದ್ಧ ಪ್ರಾರಂಭಿಸಿದರು. ಆದರೆ ಪೋಲೀಸರು ಇವರಂತೆ ತಮ್ಮ ಯುದ್ಧ ನಡಿಸದೆ ಒಡಿಗೆಗಳ ಹೊಡತಕ್ಕೆ ಪ್ರಾರಂಭಿಸಿದರು. ಇವರ ಹೊಡತದಿಂದ ನೂರಾರು ಜನ ಸ್ವಯಂಸೇವಕರಿಗೆ ಭಯಂಕರ ಹೊಡತ ಬಿದ್ದಿದ್ದು, ಕೆಲವರಂತೂ ರಕ್ತ ಒಸರಿ ಕಳಗಾಗಿದ್ದಾರೆ. ಮಣ ಸ್ಮರಣೆ ಮಣಿಲಾ ಅವರೂ ಗಾಯವಾಗಿದ್ದಾರೆ. ಇದೇ ಸಮಯದಲ್ಲಿ ಪೋಲೀಸ ಅಧಿಕಾರಿಗಳು ದೇವಿ ಸರೋಜಿನಿಯವರನ್ನು ಬಡಿಗೆ ಕಲಿದು ನಿಮ್ಮನ್ನು ಹಿಡಿಯುತ್ತೇವೆಂದು ಹೇಳಿದರು. ಇದೇ ಸಮಯದಲ್ಲಿ ಶ್ರೀ. ವಿಠ್ಠಲಭಾಯಿ ಪಟೇಲ ಮತ್ತು ಶ್ರೀ ದಾದುಬಾಯಿ ದೇಸಾಯಿಯವರು ಒಂದರು. ಪೋಲೀಸರು ಇವರಿಗೂ, ದೇವಿಯವರಿಗೂ ಬಿಟ್ಟ ಮಾಡಗೊಡಲಿಲ್ಲ.

ಕರ್ನಾಟಕ ಸತ್ಯಾಗ್ರಹ

ಕಾರವಾರ ಜೇಲಿನಲ್ಲಿ ರಾಜಕೀಯ ಕೈದಿಗಳ ಪರಿಸ್ಥಿತಿ ಒಹಳ ಕೆಟ್ಟಿದೆ. ಶ್ರೀ. ಶಂಕರರಾವ ಗುಳವಣಿ ಇವರ ವಿಚಾರಣೆಯಾಗುತ್ತಿರುವಾಗ ಅವರನ್ನು ಕಾರವಾರ ಜೇಲಿನಲ್ಲಿಯೇ ಇಟ್ಟಿದ್ದರು. ಆಗ ಅಲ್ಲಿಯ ರಾಜಕೀಯ ಕೈದಿಗಳ ವಿಷಯಗಳನ್ನು ಕುರಿತು ಈ ರೀತಿ ತಿಳಿಸಿರುತ್ತಾರೆ. "ಸ್ವಾಮಿ ವಿದ್ಯಾನಂದತೀರ್ಥರವರು ೩ ಪೌಂಡುಗಳು, ಶ್ರೀ ಹನುಮಂತರಾವ ಕೌಜಲಗಿ ೮ ಪೌಂಡುಗಳು, ಶ್ರೀ ಎಂ. ಸಿ. ನಾಡಕರ್ಣಿ ೧೦ ಪೌಂಡುಗಳು ತೂಕ ಕಡಿಮೆಯಾಗಿದ್ದಾರೆ. ಸರಿಯಾದ ಊಟ ಸಿಗುವದಿಲ್ಲ. ಒಬ್ಬರೇ ಕೇಳಿದ ರಾಜಕೀಯ 'ಸಿ' ದರ್ಜೆ ಕೈದಿಗಳಿಗೆ ಸರಿಯಾದ ಆಹಾರ ಸಿಗುವದಿಲ್ಲ. ಮತ್ತು ಅವರನ್ನು ಇತರ ಕೈದಿಗಳಂತೆಯೇ ನಡಿಸುತ್ತಾರೆ. ಕೈದಿಗಳಿಗೆ ರಾಡಿಗೆ ಇಲ್ಲ. ಹಳೇ ಬಟ್ಟೆಗಳನ್ನು ಬೇಡಿಕೊಂಡು ಇಲ್ಲಿಯೇ ತೀರಿಸುವರು. ಕಾಸದೊಂಡು ಇವರಿಗೆ ಕೊಡುತ್ತಾರೆ. ಟೀ ಪಾತ್ರೆಗಳು, ಸಾಕಷ್ಟು ಇಲ್ಲ. ಇತರ ದರ್ಜೆಯ ಕೈದಿಗಳ ಪಾತ್ರೆಗಳನ್ನು ತರಕೊಂಡು ರಾಜಕೀಯ ಕೈದಿಗಳಿಗೆ ಕೊಟ್ಟು ಅವರಿಗೆ ಮಲ್ಲಿನ ಪಾತ್ರೆಗಳನ್ನು ಕೊಡುತ್ತಾರೆ. ಸಿ ದರ್ಜೆಯ ಸಹ ಶಿಕ್ಷೆಯು ಕೈದಿಗಳನ್ನ ಏಕಾಂತವಾಸದಲ್ಲಿ ಇಟ್ಟಿದ್ದಾರೆ. ಸ್ವಾಮಿ ವಿದ್ಯಾನಂದರವರು ಉಪವಾಸ ಪ್ರಾರಂಭವನ್ನ ಕೈಕೊಳ್ಳುವ ವಿಚಾರದಲ್ಲಿದ್ದಾರೆ. ಕಾವಾರ ಕೈದಿಗಳಿಗೆ ಅನ್ನದ ಅಲ್ಪ ವಿದ್ದು ವಿಸ್ತರಿಸತಕ್ಕ ಊತ ತಿಗುವದಿಲ್ಲ.

ಸತ್ಯಾಗ್ರಹ ಪಿಲಿ — ಜಿ. ಮೂರ್ತಿ

ಅಂಕೋಲಾ — ಪ್ರ [illegible] ಪ್ರಕಾರಿ

೩೦ — ೧೦

ಸಹಕಾರಿಗಳೆ ನರೆನು

ಅಸಹಕಾರಿಗಳದೀಯ ಕಿ.

ಒಮ್ಮೆ ಲಿಯಲ್ಲಿ ನಮ್ಮೂರ ಪ್ರತಿಷ್ಠಿತರಾದ ಸಾಹುಕಾರರು ಒಬ್ಬರಲ್ಲಿ ಮಿಲಿಟರಿ ಸಮೇತ ಕಲೆಕ್ಟರರು [illegible] ಸಹಕಾರ ಮಾಡುವವರೊಂದು ಸಾರ್ವಜನಿಕ ಸಭೆ ಕೂಡಿಸಿದನು. ಸಭೆಯಲ್ಲಿ ಸಹಕಾರಿಗಳು ಕೈದೊಳ್ಳಿನಿಂದೇನಸುವಷ್ಟು ಒಬ್ಬರಾಗಿ, ಅಸಹಕಾರಿಗಳ ಸಂಖ್ಯೆಯೇ ಹೆಚ್ಚಾದಾಗ ತುಂಬಿಗೆ ಸಾಹೇಬ ಜಾಡಾ ಒಟ ಬೈಯುವದೊಂದು ಬಗೆದರು. ಪ್ರೇಕ್ಷಕರಿಂತ ಒಗೆದನು.

ಹುಟ್ಟುವ ಮಕ್ಕಳಿಗೇತಕ್ಕೆ ವಿಷಪಾನ ಮಾಡಿಸುವಿರಿ?



ಈ ಕಲೆಯ ದವ ಮಾರ್ಗದರ್ಶಿನಿ		೩-೦-೬
೧೨ ,, ,,	,,	೩-೦-೬
೬೪ ,, ,,	ಲಸ್ಟರ	೫-೮-೬
೧೨ ,, ,,	,,	೩-೦-೬

ಔಷಧಗಳಲ್ಲಿ ಗುಣವಿಲ್ಲೆಂದು ದೃಢಪಡಿಸಿದವರಿಗೆ ೧೦೦೦ ರೂಪಾಯಿ ಬಹುಮಾನ ಕೊಡಲ್ಪಡುವದು

ನಮ್ಮ ಮೋಹದ್ರವ್ಯಸಿನಿಯು ೩೫ ವರ್ಷದ ಕಾಯಿಲೆಯನ್ನು ದೂರಮಾಡಿ, ಧಾತು ಸ್ರಾವವನ್ನು ನಿಲ್ಲಿಸಿ ಕೋಟಿ ಆರೋಗ್ಯವನ್ನುಂಟುಮಾಡಿದೆ. ಈ ಔಷಧಿಯ ಸೇವನೆಯಿಂದ ದಾತುಸ್ರಾವ, ಅಜೀರ್ಣ, ಚರ್ಮರೋಗ, ಬೀಳು ಕೆಂಪುಮೂತ್ರ, ಕೃತ್ಯ ಮೇಹಜ್ವರ, ಸ್ತ್ರೀಯರ ಪ್ರದರ ರೋಗ, ಹೊಟ್ಟೆನೋವು ನಾಶವಾಗುವವು. ನೀವು ವಿಷ್ಣು ಸ್ವರ್ಥವಾಗಿ ಕೇಳಿದ ಗುಣಹೊಂದದೆ ನರಳುತ್ತಿದ್ದರೆ ಮುಲ್ಲ ಕೂಡಲೇ ನಮ್ಮ ಔಷಧಿಯನ್ನು ಸೇವಿಸಿ ದೃಢಕಾಯರಾಗಿರಿ.

ಬಹಳ ಭಯಂಕರವಾದ ಬಹುಮೂತ್ರ ರೋಗವು (Diabetes) ಸಹಾ ಇದರ ಸೇವನೆಯಿಂದ ನಿರ್ನಾಮವಾಗುವದು. ಈ ಔಷಧಿಯನ್ನು ಉಪಯೋಗಿಸಿದ ನಂತರ "ಲಸ್ಟರ" ಅಥವಾ ಶಕ್ತಿವರ್ಧಕವನ್ನು ನೀವು ಸೇವಿಸಿದರೆ, ನೀವು ರಕ್ತದಲ್ಲಿ ಪರಾಕ್ರಮಶಾಲಿಗಳಾಗುವಿರಿ. ಕೃಶಿಸಿದ ದೇಹವು ದೃಢಕಾಯವಾಗುವದು. ವೃದ್ಧನು ಯೌವನಸ್ಥನಾಗುವನು. ಶರೀರದ ಜಾಡ್ಯಗಳೆಲ್ಲ ನಿವಾರಣೆಯಾಗಿ ನೀವು ಹೊಸ ಮನುಷ್ಯರೇ ಆಗುವಿರಿ. ಜರಗದೆಗೂ ಕೈನಿಂದ ನರಳತಕ್ಕವರಿಗೂ, ನಿರ್ಬಲರಿಗೂ ಅತ್ಯುತ್ತಮವಾದದ್ದು. ಒಂದುಸಲ ಸೇವಿಸಿದಲ್ಲಿ ನಿಮಗೆ ತಿಳಿಯುವದು. ಇದು ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಇದರ ಸೇವನೆಯಿಂದ ಉಬ್ಬಸ ಸಹಾ ನಿರ್ಮೂಲವಾಗುತ್ತೆ.

ಎಲ್ಲಾ ಡಿಸ್ಟ್ರಿಕ್ಟಿನಲ್ಲಿಯೂ ಏಜಂಟರು ಬೇಕಾಗಿದೆ. ವಿಶಾಸದಾರರಿಗೆ ಬರದು ತಿಳಿದುಕೊಳ್ಳಿ.

ಬ್ರಾಂಚು ಸೇತುರಾಂ ರೋಡ, ಬೆಂಗಳೂರ ಸಿಟಿ — ದಿ ಲಸ್ಟರ ಫ್ಯಾಕ್ಟರಿ ಕಂಪನಿ, ಚಿಕ್ಕಮಗಳೂರ ಮೈಸೂರ ಪ್ರಾಂತ್ಯ

ತ್ವರೆಮಾಡಿ ! — ನೋಡಿ ಆನಂದ ಪಡಿ ! — ನೋಡಿ ಹೇಳಬೇಡಿ !!!

ನವೀನ ತರದ ಬಯಲಾಟಕ್ಕೆ ಮರುಳಾಗಬೇಡಿರಿ

ಮಹಾಶಯರೇ!

ನೀವು ನಿಜವಾಗಿಯೂ ಗಂಧದ ತತ್ತ್ವ ಸುಗಂಧ ದ್ರವ್ಯಗಳಿಂದ ಆನಂದ ಪಡೆಯಬೇಕೆಂದಿದ್ದರೆ ದಿನದಿನಕ್ಕೆ ಹಾಗೆಂದರೆ ಈಗಿನ ಸ್ಥಿತಿಗೆ [illegible] ಮತ್ತು ಮೇಲ್ಮೆ ನಿರಂತರ ತಮ್ಮವರ ಪ್ರಸಿದ್ಧಿಪಡಿಸುವ [illegible] ಸುವಾಸನೆಯ ಸುಗಂಧ ದ್ರವ್ಯಗಳಿಂದ ದೂರಾಗಿರಿ. ಸುವಾಸನೆಯ ಸುಗಂಧ ಆನಂದಪಡಲು ಅಪೇಕ್ಷೆ ಇದ್ದರೆ, ನಮ್ಮಲ್ಲಿ ಪೂರ್ವದಿಂದಲೂ ಪ್ರಸಿದ್ಧವಾದ ರಾಜಾಸ್ಥಾನಗಳಿಂದಲೂ ದೊಡ್ಡ ದೊಡ್ಡ ಸಸ್ತಗಸ್ಥರಿಂದಲೂ ಹೊಗಳಿಸಿ ಸರ್ಟಿಪಿಕೇಟುಗಳನ್ನು ಪಡೆದು ಹೆಸರುವಾಸಿಯಾಗಿರುವ ನಮ್ಮ ಅಂಥ ಕಡ್ಡಿ ಸುಗಂಧ ದ್ರವ್ಯಗಳನ್ನು ಒಮ್ಮೆ ಕರಿಸಿ ಪರೀಕ್ಷಿಸಿ ನೋಡಿದರೆ ನಿಮಗೆ ವ್ಯಕ್ತವಾಗುವದು.

ಮತ್ತು ನಾವು ಸರ್ವ ಶಿರೋವೇದನೆಗೂ ಮತ್ತು ಪ್ರತಿದಿನದ ಉಪಯೋಗಕ್ಕೂ ಕಾಮಧೇನುವಿನಂತೆ ಹೊಚ್ಚ ಹೊಸ ಸುವಾಸನೆಯ ಸ್ನೋಗಳನ್ನು ಮತ್ತು ಸರ್ವ ಚರ್ಮರೋಗವನ್ನು ನಿವಾರಿಸುವ ರಾಜ ತೈಲವನ್ನು ಹೊಸದಾಗಿ ಬಹು ಶ್ರಮದಿಂದ ಕಂಡು ಹಿಡಿದು ಎಷ್ಟೋ ಸಸ್ತಗಸ್ಥರಿಗೆ ಸಪ್ಲೈ ಮಾಡುತ್ತಾ ಅವರಿಂದ ಸರ್ಟಿಪಿಕೇಟು ಪಡೆದಿರುತ್ತೇವೆ. ಪ್ರಯೋಜನ ಈ ಸುಸಮಯವನ್ನು ಕಳೆದುಕೊಳ್ಳದೆ, ತ್ವರೆಮಾಡಿ ಕರಿಸಿ ಆನಂದವನ್ನು ಹೊಂದುವದಲ್ಲದೆ, ಸರ್ಕಾರೀ ಕಾರ್ಖಾನೆಗಳಿಂದಲೂ ಮುಕ್ತರಾಗಲು ದಾಪು ಸಿ ಬನ್ನಿ.

ಹೆಚ್ಚು ವಿವರಗಳನ್ನು ಕಂಪನಿಯ ದಾಗಲಿ ಇಲ್ಲವೆ ನಮ್ಮ ಹರಿಹರ ಏಜಂಟರಾದ ದಸ್ತಾವೇಜ ದ ಪುರಾಣಿಕ ಇವರಿಂದಾಗಲಿ ತಿಳಿದುಕೊಳ್ಳಬಹುದು

ಪಿ ದತ್ತಾತ್ರರಾವ, ಪರಿಮಳ್ಯಮ ಅಂಬುಬತ್ತಿ ಪ್ಯಾಕರಿ ವ್ಯವಸ್ಥಾಪಕ ಸ್ಟೇಟ ರಾಣೇಬೆನ್ನೂರ Camp ಹರಿಹರ — ಎಂ ಎಸ್ ಮಹಮ್ಮದ ದಸ್ತಗೀರ ಅತ್ತಾರ, ಪರಿಮಳ್ಯಮ ಅಂಬುಬತ್ತಿ ಫ್ಯಾಕ್ಟರಿ, ನರ್ಸಿಂಹಕೃಷ್ಣಪೇಟ ಮೈಸೂರು

ಸ್ವಲ್ಪ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ವಾರ್ಗೆ ಜಿನ ಮೇಲೆ

ಗಿರಣಿಯ (ಗೇನರ) ಮತ್ತು ದಿ ಬ್ಯಾಂಕ ಆಫ ಬಾರೋಡಾ ಲಿಮಿಟೆಡ (ಶೇರುಗಳು) ಸಿಗುವವು. ಪ್ರತ್ಯಕ್ಷ ಕಲವಿಗೆ ಬಂದು ಅಥವಾ ಪೋಸ್ಟ ಸ್ಟಾಂಪು ಕಳಿಸಿ ಕೊಡ್ರಿ. ದೊಡ್ಡ ದೊಡ್ಡ ರಕಮುಗಳಲ್ಲಿ ಪುನಃ ವಿಚಾರಿಸಬೇಕು. [illegible]

ಸಹಿ — ಮಸಿರುವ

ಟೆಲಿಫೋನ, — ಶ್ರೀಯುತ ಮ. [illegible] ಪಾಂಡೆ (ಬಿ

ಹೊಸ ನಗರ — ಕೇಸರಬಾಗ ಗೋಲ್ಡ ಮೋಹ ದ ಮ

ಪೋಸ್ಟ ಬಾಕ್ಸ ನಂಬರ ೫೨೬,

ದಾದರ ಬೊಂಬಾಯಿ

(೧) ರಾಣೇಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿಗೆ ಸಂಬಂಧಿಸಿದ [illegible] ಇವರನ್ನು ನಾವು ಏಜಂಟರನ್ನಾಗಿ ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ಜನರು ಇವರ ಹತ್ತಿರ ವ್ಯವಹರಿಸಬೇಕು. ಹೆಚ್ಚು ಇಲ್ಲ

WANTED

A Qualified S... ty Inspector who has passed the Sanitary Surveyor's Examination to serve under the Byadgi Municipality on a salary of Rs 4..-60 per mensem. Candidates should apply with copies of testimonials so as to reach the undersigned on or before the 31st May 1930. Preference will be given to Kanarese knowing Candidates.

Byadgi — M C Shettar
1st May 1930 — President,
Byadgi Municipality

ಮೈಸೂರ ಊದಿನಬತ್ತಿ

ಪಚ್ಚೆ ಅಂಬರಬತ್ತಿ ಬಹಳ ಸುವಾಸನೆಯುಳ್ಳದ್ದು. ಎಷ್ಟು ಹೇಳಿದರೂ ವರ್ಣನೆ ಮಾಡಲಿಕ್ಕೆ ಆಗುವದಿಲ್ಲ. ಲಗ್ನ ಮುಂಜಿ ಕಾರ್ಯಗಳ ಮತ್ತು ಪ್ರತಿದಿನದ ಮನೆಯಲ್ಲಿ ಪೂಜೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ದೊಡ್ಡ ಕಟ್ಟೆಯ ಸೇರು (ಪೈ ೧-೦-೦) ಕೃಷ್ಣರಾಜಿತ ಚಿಕ್ಕ ಸೇರು ೮-೦-೦ [illegible] — ವ್ಯಾಪಾರಿ ಸ್ಟ್ರೀಟ, ಜಿರಾಯಿಯವರ ಗಲ್ಲಿ, ಹುಬ್ಬಳ್ಳಿ

ಶ್ರೀ — ಪತ್ರಿಕೆ — ಕಿಂ

ಶ್ರೀದತ್ತ ವ್ಹೀವಿಂಗ್ ಮಿಲ್

ಹುಬ್ಬಳ್ಳಿ

ಇನ್ನೂ ಕಿಕ್ಕಟ್ಟಿಲ್ಲ. ವೈಕುಂಠ ಧಂಧೆ ನಡುಗುತ್ತಿದ್ದಾರೆ.

ಅಲ್ಲಿಯ ರೇಹಾಯ ಕುಲಕರ್ಣಿಯ ಮನೆತನಕ್ಕೆ ಸೇರಿದ್ದ ಶ್ರೀ. ವಾಳ್ವೇಕರ ಕೃಷ್ಣರಾಯರು ಬಿಪ್ಪೇದೊಪ್ಪ ಉಸುರು ಒಂದಾಗಿ ಸ್ವೈರಂ ರವಾನಿಸಲಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ವಿಜಾಪೂರ ಜಿಲ್ಲಾ ಬೀಳಗಿಯ ಪೋಲೀಸರು ಕುಂದರಗಿಯಲ್ಲಿ ಆ ಪ್ರಾಂತದಲ್ಲಿ ಪ್ರಸಿದ್ಧ ಅಪರಾಧಿಯಾಗಿರುವ ಶ್ರೀ ಶಂಕರಗೌಡಾ ತಿಮ್ಮನಗೌಡಾ ಪಾಟೀಲ ಇವರನ್ನು ಹಿಡಿದು ಜೇಲಿಗೆಗೆ ಕಳಿಸಿದ್ದಾರೆ.

ಚೇಳಿನ ಔಷಧ

ಚೇಳಿನ ಕಡಿತಕ್ಕೆ ಔಷಧವಿಲ್ಲೆಂದು ಬಹು ಜನರು ಹೇಳುತ್ತಾರೆ. ಆದರೆ ನೂತನಕಾಲಿನ ತುಂಬಿನಿಂದ ಬರುವ ರಸವನ್ನು ಒಂದು ಬಾಟ್ಲಿಯಲ್ಲಿ ಸಂಗ್ರಹಿಸಿಕೊಂಡು ಕಡಿದ ಜಾಗೆಯಲ್ಲಿ ಹಚ್ಚಿದರೆ ವಿಷವು ಇಳಿದು ಸಂಪೂರ್ಣ ಗುಣವಾಗುತ್ತದೆ. ಬೇಕಾದವರು ಇದರ ಅನುಭವ ತೆಗೆದುಕೊಂಡು ನೋಡಬೇಕು. ನಾವು ಇದರ ಅನುಭವ ತೆಗೆದುಕೊಂಡು ಗುಣವಾದ್ದರಿಂದ ಪ್ರಕಟಿಸಿದ್ದೇವೆ.

ರಾ. ಬಿ. ದೇಶಪಾಂಡೆ.

ಧಾರವಾಡದಲ್ಲಿ ಮೋಟಾರು ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇನ್ನೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ಶಿಕ್ಷಣಾರ್ಥಿಗಳು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವದರ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತೆಗೆದುಕೊಳ್ಳಬೇಕಾಗಿದ್ದರಿಂದ ಕಲಿಯುವವರ ಹೆಸರುಗಳನ್ನು ಮುಂದಾಗಿ ಈ ಜಾಹೀರಾತು ಕೊಟ್ಟಿದೆ. ಹೆಚ್ಚಿನ ವಿವರಕ್ಕಾಗಿ ಹತ್ತಿರ ಬರಬೇಕು. ಇದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ಹೆಚ್ಚಿನ ವಿವರವು ಸಮಕ್ಷಮ ಅಥವಾ ಪತ್ರದ್ವಾರ ತಿಳಿಸಲಾಗುವದು.

ಶರೇ, ಶಿಂದೀ ಮಕ್ತೇದಾರರಿಗೆ ವಿನಂತಿ.

ಹಾನಿಯನ್ನು ಮಾಡಿಕೊಳ್ಳಬೇಡಿರಿ.

ಮಹಾಶಯರೇ,

ನಿಮ್ಮ ಶಿಂದೀ ಗಿಡಗಳ ಮಕ್ತೆಗಳು ಇದೇ ಜೂನ ತಿಂಗಳಲ್ಲಿ ಮುಗಿಯುವವೆಂದು ಕೇಳಿದ್ದೇವೆ. ಆ ನಂತರ ತಿರುಗಿ ಹೊಸ ಮಕ್ತೆಗಳನ್ನು ಹಿಡಿಯಬಹುದು. ಈ ಸಂದರ್ಭದಲ್ಲಿ ನಿಮಗೆ ಕೆಲವು ಮಾತುಗಳನ್ನು ಹೇಳುವದು ಅವಶ್ಯವೆಂದು ಅನಿಸಿದ್ದರಿಂದ ನಾವು ಈಗ ದಯಮಾಡಿ ಬರೆಯುತ್ತೇವೆ.

ನಶೆಯುಳ್ಳ ಪದಾರ್ಥಗಳ ಮಾರಾಟವನ್ನು ಕಡಿಮೆ ಮಾಡಿ, ಬಡ ಕುಟುಂಬಗಳ ಉದ್ಧಾರ ಮಾಡುವದಕ್ಕೋಸ್ಕರ, ಸದ್ಯಕ್ಕೆ ಅತ್ಯಂತ ಶಾಂತಯುತವಾಗಿ ನಡೆಸುತ್ತಿರುವ ಈ ಮಾದಕ ಪದಾರ್ಥಗಳ ಬಹಿಷ್ಕಾರವನ್ನು ಮುಂದುವರಿಸಿ ಅವರ ಉಳಿಯುವನ್ನು ಕಡಿಮೆ ಮಾಡುವದಕ್ಕೆಂದೂ, ಈಗ ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯು ಹಬ್ಬಿಕೊಂಡಿದೆ. ಸರಕಾರವು ತನ್ನ ಕಲಮಿನಲ್ಲಿದ್ದ ಗಿಡಗಳನ್ನು ತಾನೇ ಒಕ್ಕಲ ಸಮಾಜಭಕ್ತರಿಂದಿಗೆ ನಿಲಿಸದು. ಬೆಳಗಾವಿ, ಧಾರವಾಡ, ವಿಜಾಪೂರ ಜಿಲ್ಲೆಗಳಲ್ಲಿ ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯು ಜೋರಿನಿಂದ ನಡೆದಿದೆ. ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಬೈಲಹೊಂಗಲ ತಾಲೂಕಿನಲ್ಲಿ ಎರಡು ಮೂರು ಸಾವಿರ ಗಿಡಗಳನ್ನು ಕಡಿದಿರುವದಾಗಿಯೂ ನಿಮಗೆ ಚನ್ನಾಗಿ ತಿಳಿದಿರಬಹುದು.

ಈ ಚಳವಳಿಯು ಹೀಗೆಯೇ ಮುಂದೆ ಸಾಗುವದೆಂಬುದನ್ನು ಲಕ್ಷದಲ್ಲಿಟ್ಟು, ಜೂನ ತಿಂಗಳ ಹೊಸ ಮಕ್ತೆಗಳನ್ನು ಹಿಡಿಯುವಾಗ ನೀವು ಈ ಸಂಗತಿಯ ಕಡೆಗೆ ಲಕ್ಷ್ಯ ಕೊಡಬೇಕು. ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯಿಂದಾಗಿ ಯಾರ ಗಿಡಗಳನ್ನು ಕಡಿಯಲಾಗುವದೋ ಅವರ ಲುಕಸಾನು ಭರಿಸಿ ಕೊಡಲಿಕ್ಕೆ ಸರಕಾರದವರು ಒಪ್ಪುವದಿಲ್ಲ; ಗಿಡಗಳನ್ನು ಕಡಿಯುವ ಸ್ಥಳದಲ್ಲಿ ಅವರು ತಕ್ಕ ಬಂದೋಬಸ್ತು ಮಾಡಲು ಎಂದಿಗೂ ಇಲ್ಲ. ಆದ್ದರಿಂದ ಗಿಡಗಳನ್ನು ಕಡಿಯುವ ಪ್ರಸಂಗದಲ್ಲಿ ಮಕ್ತೆದಾರರ ಹಾನಿ ತಪ್ಪುವದಿಲ್ಲ. ಈ ವಿಷಯವನ್ನು ಚೆನ್ನಾಗಿ ವಿಚಾರಮಾಡಿ ಮಕ್ತೆಗಳನ್ನು ಹಿಡಿದರೆ, ಆಗಬಹುದಾದ ಹಾನಿಗೆ ನೀವೇ ಜವಾಬದಾರರು. ಕಾರಣ ನೀವು ಹೊಸ ವರ್ಷದ ಮಕ್ತೆಗಳನ್ನು ಸರ್ವಥಾ ಹಿಡಿಯಬಾರದೆಂದು ನಾವು ಈ ಮೂಲಕ ನಿಮ್ಮನ್ನು ವಿನಂತಿಸಿ ಬೇಡಿಕೊಳ್ಳುತ್ತೇವೆ.

ಇದಲ್ಲದೆ ನಿಮಗೆ ಇನ್ನೊಂದು ಮಾತು ಹೇಳಬೇಕಾಗಿದೆ. ಶಿಂದೀ ಗಿಡಗಳನ್ನು ಕಡಿಯುವ ಚಳವಳಿಯಿಂದ, ಕಡಿದ ಗಿಡಗಳ ಮುಂದೆ ನಿಮ್ಮ ಕುಟುಂಬಕ್ಕೆ ಉಪಜೀವಿಕೆಯ ಸಾಧನವಿಲ್ಲದಂತಾಗುವ ಸಂಭವವು ಇದೆ. ಹೀಗೆ ನಿಮಗೆ ಹಾನಿ ಆಗುವ ಪ್ರಸಂಗದಲ್ಲಿ ನೀವು ಎಚ್ಚರಿಕೆ ತಕ್ಕೊಳ್ಳತಕ್ಕದ್ದು. ಇನ್ನು ಮುಂದಿನ ತಿಂಗಳ ಹೊಸ ಮಕ್ತೆಗಳನ್ನು ಹಿಡಿದರೆ ನಿಮಗೆ ಬರುವ ವರ್ಷದಲ್ಲಿ ಬಹಳ ಹಾನಿಯಾಗುವ ಸಂಭವವುಂಟು. ಆದ್ದರಿಂದ ಈ ಸಂಗತಿಯನ್ನು ಲಕ್ಷದಲ್ಲಿಟ್ಟು, ಜೂನ ತಿಂಗಳ ಲಿಲಾವಿನಲ್ಲಿ ನೀವು ಎಂದೂ ಭಾಗ ತೆಗೆದುಕೊಳ್ಳಬಾರದೆಂದು ನಾವು ತಮಗೆ ವಿನಂತಿ ಮಾಡಿಕೊಳ್ಳುತ್ತೇವೆ.

ಕರ್ನಾಟಕ ಪ್ರಾಂತಿಕ ಯುದ್ಧ ಸಮಿತಿ ಧಾರವಾಡ. ೨೪-೬-೩೦	ರಾ. ಶ್ರೀ. ಹುಕ್ಕೇರಿಕರ ಬ. ಪ. ಕೆರಮುಡಕರ

ಸೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಂಕ್ತಿಗೆ ಒ. ರೂ ಮೇಲಿನ ಇಸ್ಲಿಪ ಪ್ರತಿಯೊಂದು ಸಾಲಿಗೆ ಎಂಬ ದರ. ಸರಕಾರಿ, ಮ್ಯುನಿಸಿಪಲ ಲೋಕಲಬೋರ್ಡ, ಕೋರ್ಟ ಜಾಹೀರ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸರಕಾರಿ ದರದಿಂದ ಇಂಗ್ಲಿಷಿನಿಂದ ಅವಾರಿಕೆ ಕನ್ನಡದಲ್ಲಿ ಹಾಕುವದಿದ್ದರೆ ಅದು ಸಿಂಗಲ ಕಾಲಮಿನ ಪಂಕ್ತಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹೀರಾತುಗಳನ್ನು ಕೊಡುವವರು ನಮ್ಮ ಪತ್ರಕ್ಕೆ ಬರೆದು ದರ ಗೊತ್ತುಪಡಿಸಬೇಕು.

ಸುಸಮಯ

—(೦)—

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಯಿರಿ.

ಈ ಪತ್ರವನ್ನು ಕೃಷ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಛಾಪಖಾನೆಯಲ್ಲಿ ಮುದ್ರಿಸಿ ಪ್ರಸಿದ್ಧ

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧: ಧಾರವಾಡ ಬುಧವಾರ ತಾರೀಖು ೨೮ ನೇ ಮೇ ೧೯೩೦ (ಸಂಖ್ಯೆ ೧೨೦

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability Clauses

FUNDS INVESTED IN INDIA.

TRIENNIAL BONUSES. GUARANTEED BONUSES

AGENTS WANTED ON LIBERAL TERMS

For further particulars apply to:-

Chief representative for Karnatak and South Marata

N. T. Khona P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರ ಆದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ್ ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ	ನಿಶ್ಚಿತವಾದ ಬೋನಸಗಳ
ಫಾಯದೆಶೀರವಾದ ಕರಾರುಗಳ	ತಾನಾಗಿ ರದ್ದಾಗದ ಮಾದರಿಯ	ಯೋಜನೆಗಳು
ಮೇಲೆ	ಪಾಲಿಸಿಯ ಯೋಜನೆ	ಫಾಯದೆಶೀರವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ದಕ್ಷಿಣ ಮರಾಠಾ)

ಪೋ. ಬಾ. ನಂ ೩೪

ಠಿಕಾಣ ಹುಬ್ಬಳ್ಳಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಇದು ಸರಕಾರದಿಂದ ಕ್ರೆಡಿಟ ಸೊಸಾಯಿಟಿಯು ಆಗಿ

ವ್ಯಾಪಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ

ಶ್ರೇಷ್ಠವಾದ ಸ್ಥಾನ.

ಕೆಂದ್ರಗೆಯು ಎಲ್ಲ ಪ್ರಕಾರದ ಮೇಲೆಯೂ, ಹಳೆ ಹೊಸ ರೀತಿಯಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವನ್ನು ಮಾಡಲ್ಪಡುವದು. ಠೇವಿಯ ಮತ್ತು ಬೇರೆ ತರದ ಹಿಡುವಳಿಗೆ ಯೋಗ್ಯ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಜ್ಯಪ್ಪನ ಬಿ. ಇನಾಮತಿ.
ಮ್ಯಾನೇಜಿಂಗ ಡೈರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತ ಕರಾರಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೪-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ವೈಶಾಖ ವದ್ಯ ೩೦

ಆ ವಿಜಯಂ ಶ್ರೀಕವಿಗ/ರು
ಡೀ ನಪುಮತಿಯ ನರಿಸಿರೆ ಸುಹೃತಕರಿತೆಗಳಿಂ ॥
ದೀ "ವಿಜಯಂ" ಶ್ರೀಶರಣ।
ನಾ ವಿಹಿತರ್ಗೆ ವಿಮಲನಪ್ಪುದು ಕಾರ್ಗ॥

ಕಂಪ್ಲಿ ದೇವರಿಗೆ ಕೈಮುಗಿದರೆ ಪುಂಡಲೀಕ ಒಲಿಯುವನೆ?

—(೦)—

ಹಿಂದುಸ್ಥಾನ ಮತ್ತು ಇಂಗ್ಲಾಂಡ ಸರಕಾರದವರು ಈಗಿನ ಚಳವಳಿಗೆ ವಿರುದ್ಧವಾಗಿ ಮತ್ತು ಅದನ್ನು ಮುರಿಯಲು ತಮಗೆ ಸಹಾಯ ಮಾಡುವಂತೆ ನಂಬಿಗೆಯಿಂದ ನೆರವಾಗಲು ಸಿದ್ಧರಾಗಿರುವ ಜನರಿಂದ ಬಂದ ಪತ್ರಗಳನ್ನು ಬಹು ದೊಡ್ಡ ಆಧಾರ ಮಾಡಿಕೊಂಡು, ಅವುಗಳನ್ನು ಆಗಾಗ್ಗೆ ಪ್ರಸಿದ್ಧಪಡಿಸುತ್ತಿದ್ದಾರೆ. ಬೆಳಗಾವಿಯ ಶ್ರೀ ಚಿಕ್ಕೋಡಿಯ ಪಂಡಿತಪ್ಪನವರು ಮೊ. ಕಮೀಶನರಸಾಹೇಬರ ಮುಂದೆ ರಾಜನಿಷ್ಠೆಯ ಆಶ್ವಾಸನ ಕೊಟ್ಟಂಥ ಉದ್ಗಾರ ತೆಗೆದದ್ದಿಂದೇ ತಡ. ಇವರ ಅಭಿನಂದನ ಮಾಡಿದ ಸಂದೇಶವು ಸಾಮದಾರ ಗವ್ಹರನರಸಾಹೇಬರಿಂದ ಬಂದಿತು. ಸರಕಾರದಲ್ಲಿ ಜನರಿಗೆ ನಿಜವೆಂದು ಏಕಪಕ್ಷೀಯ ಸುದ್ದಿಗಳನ್ನು ಹೇಳುವ ಮತ್ತು ಸಾರುವ ಒಬ್ಬ ಸ್ಪೇಶಲ ಅಮಲದಾರನೇ ಇದ್ದಾನೆ. ಆತನು ಸರಕಾರ ಪಕ್ಷ ಮತ್ತು ಪ್ರಜಾ ಪಕ್ಷದ ಎರಡೂ ಸುದ್ದಿಗಳನ್ನು ಸರಿಯಾಗಿ ಹೇಳುತ್ತಾ ಹೋದರೆ- ದೇಶದ ತುಂಬ ನಡೆದ ಚಳವಳಿಯು ಹಾಗು ಯಾರಿಗೆ ಎಷ್ಟು ಹಿಂಬಲ ದೊರಕಲಿಕ್ಕೆ ಹತ್ತಿದೆಯೆಂಬುದು ಪ್ರತ್ಯಕ್ಷ ಪ್ರಮಾಣವಾಗಿ ತಿಳಿಯುವದು. ಮಹಾತ್ಮರನ್ನು ಹಿಡಿದ ಬಗ್ಗೆ ಹಿಂದುಸ್ಥಾನದಲ್ಲೆಲ್ಲ ಊರುಗಳಲ್ಲಿ ಹಾಂತಾಳವಾಯಿತು. ವಿಲಾಯತಿಯ ಬಟ್ಟೆಯನ್ನು ಬೆಂಕಿಯಲ್ಲಿ ಹಾಕುವದಾಯಿತೆಂಬ ಲೆಖ್ಖವನ್ನು ಈ ಸುದ್ದಿ ಸುರಪ್ಪನು ಸಪ್ರಮಾಣವಾಗಿ ಹೇಳುವನಾದರೆ- ಸಹಕಾರಿಗಳೆಂಬವರು ಉಳಿದಿರುವ ಕೆಲ ಜನಗಳಾಗುತ್ತಾರೆಂದು ಜಗತ್ತಿನ ನಿದರ್ಶನಕ್ಕೆ ಬರುವದು. ಸಹಕಾರಿಯು ಬೀದಿಯಲ್ಲಿಯೇ ನೋಡಿರಿ. ಈತನೊಬ್ಬನೇ ಭಾಲದಾರಿಯವನಾಗಿ ಎಲ್ಲರೂ ಕಾಂಗ್ರೆಸ ಪಕ್ಷದವರೆಂಬ ಕಂಡುಬರುವದು. ಇವನು ಒಬ್ಬನಾದರೆ- ಇವನಿಗೆ ಪ್ರತಿಪಕ್ಷಿಯಾಗಿ ಸಾವಿರ ಜನರು ಹೊರಡುವರು. ಯುದ್ಧ ಮಾಡುವಂಥವರು ವಿರುದ್ಧ ಪಕ್ಷದ ಸೈನ್ಯದ ಸಂಖ್ಯೆ ಮತ್ತು ಸಾಮರ್ಥ್ಯ ತಿಳಕೊಂಡು, ತನ್ನ ಸೇನೆಯು ಪ್ರೋತ್ಸಾಹಗಟ್ಟುವದುಂಟು. ಆ ಪ್ರಕಾರ ಈ ಶಾಂತತಾಮಯ ಯುದ್ಧದಲ್ಲಿ ಪೋಲಿಸರು ಲಾಠಿ ಛಾರ್ಜು ಮಾಡಿ ಹೇಗೆ ಸಾಧಿಸಿದರೂ ಮುಂದುವರಿದ ಸಂಖ್ಯೆಯ ವಿವರವನ್ನು ಕಂಡು ಹೇಳಿದರೂ, ಲೋಕಮತದ ದಿಗ್ದರ್ಶನವಾಗುವದುಂಟು.

ಜನರು ರಾಜನಿಷ್ಠರು ಪಾರಮಾರ್ಥಿಕವರ ಮಾಡುತ್ತಾರೆ. ಆದರೆ ರಾಷ್ಟ್ರೀಯರಂತೆ ಊರೂರಿಗೆ ಹೋಗಿ, ಜನರ ಮನಸ್ಸನ್ನು ಸಹಕಾರ ಹಾಗು ಸರಕಾರದ ಕಡೆಗೆಳೆದ ಕೆಲಸ್ಯವಿಲ್ಲೆಂದು ಇಂಗ್ಲೀಷ ಪತ್ರಗಳು ಇವರ ಮೇಲೆ ಟೀಕೆ ಹೊರಿಸುತ್ತವೆ. ಇವರು ನಿಜವಾದ ಸಹಕಾರಿಗಳಾಗಿರಬಹುದು. ಆದರೆ- ಹಿಂಗಾಲಿಕಲ್ಲಿ ಕಸವಿಲ್ಲದಂತವರು ಇವರ ಪರೀಕ್ಷೆಯು ಮುಕ್ತಾಯಿಟ್ಟ ಇವರಾಯಿತು. ಆಗಲು ಹಿಡಿದರೆ- ಅನ್ನಪಾನವನ್ನು ತಳಿಯುವದುಂಟು. ಅದೇ ಪ್ರಕಾರ ಒಂದು ಮುಸ್ಲಿಮಪತ್ರದಿಂದ ಎಲ್ಲ ಕಡೆಯವರ ಸ್ವರೂಪ ನಿರ್ಣಯವಾಗುವಂತಿದೆ. ಅಲ್ಲಿಯ ಕಲೆಕ್ಟರಸಾಹೇಬರು ಪ್ರತಿಷ್ಠಿತರೆಂಬ ಮೂವತ್ತು ಸಹಕಾರಿ ಮತ್ತು ರಾಜನಿಷ್ಠರನ್ನು ಕರೆಯಿಸಿ, ನೀವು ಸ್ವರಾಜ್ಯ ಸ್ವಾತಂತ್ರ್ಯವಾದಿಗಳ ವಿರುದ್ಧ ದೇವರ ತುಂಬ ಚಳವಳಿ ಮಾಡಿರೆಂದು ಕಿವಿಮಂತ್ರ ಹೇಳಿದರು. ಸಾಹೇಬರನ್ನು ಕಾಣಲು ಇವರು ಝಗಝಗಿಸುವಂಥ ಬೂಟು. ಪಾಟಲೋಣು ಹಾಕಿಕೊಂಡು, ಓರೆಟೊಪ್ಪಿನ ಜರದ ರುಮಾಲು ಸುತ್ತಿಕೊಂಡು ಹೋದವರೇನೋ ನಿಜ. ಆದರೆ ಅವರಿಗೆ ಸಹಕಾರಿಗಳ ವಿರುದ್ಧ ಚಳವಳಿಯನ್ನೆಬ್ಬಿಸುವದಕ್ಕೆ ಮಾತ್ರ ಎದೆಯು ಢಗಿಲ್ ಢಗಿಲ್ ಎಂದಿತು. ಸಾಹೇಬರೇ ನೀವು ಇಂಥ ಗೊಂದಲಕ್ಕೆ ಮಾತ್ರ ಹೋಗಬೇಡಿರಿ. ಆದರಿಂದ ಪರಿಸ್ಥಿತಿಯು ಮತ್ತಿಷ್ಟು ಕೆಟ್ಟು, ಮೊದಲೇ ಮಳೆ ಮೇಲೆ ಕಾಳಿಯಾಗುವದೆಂದು ಸ್ಪಷ್ಟವಾಗಿ ಹೇಳಿದರು. ಇವರು ನಿಜಸ್ಥಿತಿಯನ್ನೇ ಹೇಳಿದರೆನ್ನುವಂತಾಗಿದೆ ಸಹಕಾರಿಯಾದರೂ ಇಷ್ಟು ಗಟ್ಟಿಗತನ ತೋರಿಸಿದ್ದಕ್ಕಾಗಿ ಇವರ ಅಭಿನಂದನವನ್ನೂ ಮಾಡಬೇಕಾಗುತ್ತದೆ.

ತೈಲಂಗಣ ಮತ್ತು ಕರ್ನಾಟಕದ ಚಳವಳಿಯಲ್ಲಿ ಭಾವ ಅಭ್ಯಂತರವೂ ಇರುವದಿಲ್ಲ. ಕರ್ನಾಟಕದ ಸಹಕಾರಿಗಳ ಪರೀಕ್ಷೆಯೂ ಹೀಗೇ ಆಗುವದುಂಟು. ಆದರೆ ಮುಸ್ಲಿಮಪತ್ರದವರಂತೆ ಇವರು ಸ್ಥಾನಿಕ ಅಧಿಕಾರಿಗಳ ಮುಂದೆ ಸ್ಪಷ್ಟವಾದ ಮತ್ತು ನಿಜವಾದ ಸಂಗತಿಯನ್ನು ಹೇಳಲಾರರು. ಏಕೆಂದರೆ- ಅವರಲ್ಲಿ ಅಂಥ ನೈತಿಕ ಧೈರ್ಯವೇ ಇರುವದಿಲ್ಲ. ನಾವು ಲಿಂಗಾಯತರು ರಾಜನಿಷ್ಠೆಯಿಂದ, ಸರಕಾರಕ್ಕೆ ಸಹಾಯ ಮಾಡುವಂಥವರೆಂದು ಶ್ರೀ. ಪಂಡಿತಪ್ಪನವರು ಜಾಹೀರ ಮಾಡಿದ್ದಾರೆ, ಆ ಪ್ರಕಾರ ಕೆಲ ಜನರನ್ನು ಕೂಡಿಕೊಂಡು ಹೋಗಿ ಹೇಳಲು ಲಿಂಗಾಯತ ಸಮಾಜವು ಅವರಿಗೆ ತಾಮ್ರಪಟ ಬರಕೊಟ್ಟಿರುವದಿಲ್ಲ. ಏನೆಂದರೆ- ಎಲ್ಲ ಲಿಂಗಾಯತರು ಹೇಳಿದಂತೆ ಅವರಾಗುವದಿಲ್ಲ. ಹಾಗೆ ಹೇಳುವದಾದರೆ ಮೊದಲು ಸಾರ್ವಜನಿಕ ಪರಿಷತ್ತು ಕೂಡಿಸಿ, ಠರಾವು ಮಾಡಬೇಕಾಗಿತ್ತು. ಇಂಥ ಬಂಟನನ್ನು ಈ ಯುಗದಲ್ಲಿಯೇ ಬಂದಂತೆ ಪಂಡಿತರ ಅನಿಷ್ಟ ಮಾಡುತ್ತಿದೆ. ಕಾರಣ ಸರಕಾರದವರು ಇಂಥವರನ್ನು, ಇದೇ ರೀತಿ ನಡಿಗೆ ಹಬ್ಬಳಿಸಿಯ ಮಾತುಗಳನ್ನು ಹೇಳುವಂಥವರನ್ನು ಎಷ್ಟು ಮಾತ್ರಕ್ಕೂ ನಂಬಬಾರದು. ಇವರಿಂದ ಯಾವ ಪ್ರಯೋಜನವೂ ಆಗಲಾರದು. ಕಂಪ್ಲಿ ದೇವರಿಗೆ ಕೈಮುಗಿದರೆ- ಪುಂಡಲೀಕ ಒಲಿಯುವನೆಂಬಂತೆ ಈ ಎಡಬಿಡಂಗಿಗಳು ದೈಹಿಕ ಅವಸ್ಥೆಯಾಗಿರುತ್ತದೆಂದು ರಾಜ್ಯಕರ್ತರ ನಿದರ್ಶನಕ್ಕೆ ತಂದುಕೊಡುವದೇ ಈ ಲೇಖನದ ಉದ್ದೇಶವಾಗಿರುತ್ತದೆ.

ಯಾರ ಪ್ರಮಾಣಿಕೆ?

—: :*: :—

ಸಿ ರಾಮಾನಂದ ಪ್ರಾಣ ಚಿಕಿತ್ಸ ವಿಚಾರಣೆ.

——(೦)——

ಪೇಶಾವರದಲ್ಲಾದ ಹಿಂಸೆ, ಕೊಲೆ ಮತ್ತು ಅತ್ಯಾಚಾರಗಳ ಪಾಪವು ಯಾರ ತಲೆಯ ಮೇಲೆ ಕೂಡ್ರುವದೆಂಬದರ ವಿಚಾರಣೆ ಮಾಡಲು- ಹಿಂದುಸ್ಥಾನ ಸರಕಾರದವರು ಒಬ್ಬ ಯುರೋಪಿಯನ್ನ ಮತ್ತು ಒಬ್ಬ ಮುಸಲಮಾನ ಹೀಗೆ ಇಬ್ಬರು ಜಾಯಿಂಟಿನ ಜಡ್ಜರ ಕಮಿಟಿ ನೇಮಿಸಿದ್ದಾರೆ. ಜಡ್ಜರು ಹಿಗಂಗರೆ ಅಲ್ಲಿಗೆ ಹೋಗಿದ್ದು, ವಿಚಾರಣೆಯು ಪೂರ್ತಸಿದ್ಧತೆ ನಡೆಸಿದ್ದಾರೆ. ದಂಗೆಯ ಸಂಬಂಧವಾಗಿ ಸಾಕ್ಷೀ ಹೇಳಬೇಕೆನ್ನುವಂಥವರು ಮ್ಯಾಜಿಸ್ಟ್ರೇಟರ ಮುಂದೆ ತಮ್ಮ ಜವಾಬ ಬರಿಸಬೇಕು, ಅವು ಯಾರ ಮೇಲೆ ಎಂಥ ಆರೋಪ ಹೊರಿಸಿದ್ದರೂ, ಆ ಬಗ್ಗೆ ಅವರ ಮೇಲೆ ಖಟ್ಲೆ ಮಾಡಲಾರದು. ಸಂಪೂರ್ಣ ಮಾಫಿಯು ಇರುತ್ತದೆಂದು ಜಾಹೀರ ಮಾಡಿದ್ದಾರೆ. ಸರಕಾರದವರು ಇಷ್ಟು ನಿಃಪಕ್ಷಪಾತ ತೋರಿಸಿದರೂ, ಖಿಲಾಫತ ಕಮೀಟಿಯವರು ಇದಕ್ಕೆ ಸಂಪೂರ್ಣ ಬಹಿಷ್ಕಾರ ಹಾಕಬೇಕೆಂದು ಠರಾವು ಮಾಡಿದ್ದಾರೆ. ಆದ್ದರಿಂದ ಈ ಕಮೀಟಿಯ ಮುಂದಾಗುವ ವಿಚಾರಣೆಯು ಏಕಪಕ್ಷೀಯವಾಗಲಿದೆಯೆಂದು ಕಾರಣವಾಗಿ ಸ್ಪಷ್ಟವಾಗುತ್ತದೆ.

ಸರಕಾರದಂತೆ ಕಾಂಗ್ರೆಸ ಪಕ್ಷದವರೂ ತಮ್ಮ ಕಮೀಟಿ ನೇಮಿಸಬೇಕೆಂದು ಗೊತ್ತು ಮಾ

ದಿ, ಈ ಕೆಲಸವನ್ನು ಅಸೆಂಬ್ಲಿಯ ಅಧ್ಯಕ್ಷರಾಗಿದ್ದ ಶ್ರೀ. ಪಟೇಲರಿಗೆ ಒಪ್ಪಿಸಿದ್ದರು. ಆದರೆ ಸರಕಾರದವರು ಇವರಿಗೆ ಅಲ್ಲಿಗೆ ಬರಲು ಪ್ರತಿಬಂಧ ಮಾಡಿದರು. ಆದರೂ ಶ್ರೀ. ಪಟೇಲರು ಪೇಶಾವರಕ್ಕೆ ಸನಿಹವಾದ ಒಂದು ಗ್ರಾಮಕ್ಕೆ ಹೋಗಿ ಅಲ್ಲಿ ಕೂತು ವಿಚಾರಣೆಯನ್ನು ಪ್ರಾರಂಭಿಸಿದರು. ವಿಚಾರಣೆ ಮುಗಿಯಿತು; ಪಂಡಿತ ಮಾಲವೀಯರವರು ಅಲ್ಲಿಗೆ ಹೋಗಿ, ರೋಗಿಗಳ ಆರೈಕೆ ಮತ್ತು ಸಂಕಟದಲ್ಲಿ ಸಿಕ್ಕವರಿಗೆ ಸಹಾಯ ಮಾಡಲು ಹೋಗಬೇಕೆಂದರು. ಆದರೂ ಸರಕಾರದವರು ಹೋಗಗೊಡಲಿಲ್ಲೆಂದರು. ಪಂಡಿತ ಮಾಲವೀಯರು ದಾಂಧಲೆಗೆ ಒಳಗಾದ ಪರಿಸ್ಥಿತಿಯನ್ನು ನೋಡಲಿಕ್ಕೆ ಅನಂತ ಕಷ್ಟದಿಂದ ಸರಕಾರದಿಂದ ಪರವಾನಿಗೆ ಕೇಳಿದರು. ಸರಕಾರದವರು ಅದಕ್ಕೆ ಬಹಿಷ್ಕಾರ ಹಾಕಿದ್ದು ಯೋಗ್ಯವೇ ಆಯಿತು.

ಪಂಡಿತ ಮಾಲವೀಯರವರು

ಕಾಯದೆಭಂಗ ಮಾಡುವರು.

—:(೨): —

ಸರಕಾರದವರು ಪಂಡಿತ ಮಾಲವೀಯರವರಿಗೆ ಪೇಶಾವರದಲ್ಲಿ ಬರಕೂಡದೆಂದು ಹುಕುಮು ಮಾಡಿದ್ದಾರಷ್ಟೇ; ಈ ಅನ್ಯಾಯದ ಹುಕುಮು ಮುರಿದು, ಅಲ್ಲಿಗೆ ಹೋಗಲು ಪಂಡಿತರು ಗಂಡಗಟ್ಟಿ ಹಾಕಿದ್ದಾರೆಂದು ಸಿಮ್ಲೆ ಪ್ರಾಯೋಗಾಲಯದಲ್ಲಿ ತಾರದ ವರ್ತಮಾನ ಬಂದಿದೆ.

ತುರಂಗದಲ್ಲಿ ಮಹಾತ್ಮರ ಕಾರ್ಯಕ್ರಮ.

——(೨)——

ಮಹಾತ್ಮರು ದಿನಾಲು ನಾಲ್ಕೈದು ತಾಸು ನೂಲು ಅಥವಾ ಅದರುಂಡಿಗೆಯ ಮೇಲೆ ನೂಲು ತೆಗೆಯುವರು. ಓದಲು ಟೈಮ್ಸ ಮತ್ತು ಕ್ರಾನಿಕಲ ಪತ್ರ ಕೊಡುವರು. ಬರೆಯುವ ಯಾವ ಸ್ವಾತಂತ್ರ್ಯ ಕೈಕೊಂಡಿಲ್ಲ. ಆಡಿನ ಹಾಲು ಉತ್ತುತ್ತಿ, ದ್ರಾಕ್ಷೆ ಮತ್ತು ಕಿತ್ತಳೆಹಣ್ಣು ಇವರ ಸಿಕ್ಕುವ ಆಹಾರಗಳಾಗಿವೆ. ಮಹಾತ್ಮರ ಪತ್ನಿಯವರು ಇವರನ್ನು ಕಾಣಲಿಕ್ಕೆ ಹೋಗಿದ್ದರು. ನೀವು ಮೂರು ತಾಸು ಅಗ್ರಸ್ಯರಾಗಿದ್ದೀರಾ ಎಂದು ಇವರು ಪ್ರಶ್ನೆ ಮಾಡಲು ಮಹಾತ್ಮರು ನಕ್ಕರು. ಈ ಮೂರು ತಾಸಿನಲ್ಲಿ ಬೇರೊಂದು ಸ್ಥಳದಲ್ಲಿ ಮಹಾತ್ಮರಿಗೂ, ಗವ್ಹರ್ನರಸಾಹೇಬರಿಗೂ ಸಂಭಾಷಣೆ ನಡೆಯಿತೆಂದು ಕ್ರಾನಿಕಲ ಪತ್ರದಲ್ಲಿ ಬರೆದಿದೆ. ಸಟ್ಟಿದಿಳವನ್ನು ಸರಕಾರದ ಸುದ್ದೀಸವರಪ್ಪನು ಹೇಳುವನೆಂದು ಅನಿಸುತ್ತೇವೆ. ವಿ. ಸ್ಲೋಕೊಂಬಿಸಾಹೇಬರು ಪುನಃ ಮಹಾತ್ಮರನ್ನು ಕಾಣಲಿಕ್ಕೆ ಹೋಗಿದ್ದರು.

ಬಾರಡೋಲಿಗೆ ದಂಡಿನ ಪ್ರಯಾಣ.

—()—( )—()—

ಪಟ್ಟಿ ಕೊಡಬಾರದೆಂದು ರೈತರ ಸತ್ಯಾಗ್ರಹ.

——(೨)——

ಬಾರಡೋಲಿಯ ರೈತರು ಪಟ್ಟಿ ಕೊಡಬಾರದೆಂಬ ತಮ್ಮ ಪ್ರತಿಜ್ಞೆಯನ್ನು ತೀವ್ರವೇ ಕೃತಿಯಿಂದ ಪ್ರಾರಂಭಿಸಿದರು. ಎಲ್ಲ ಗ್ರಾಮದ ರೈತರು ತಮ್ಮ ದಸ್ತಐವಜಗಳನ್ನು ಮಾಮಲೇದಾರ ಕಚೇರಿಗೆ ಕಳಿಸಿ, ರಾಜೀನಾಮೆ ಕೊಟ್ಟರು. ಸರಕಾರದ ಕಾಯದೆ ಪ್ರಕಾರ ಜಮೀನು ಜಪ್ತ ಮಾಡಲು ಸರಕಾರಕ್ಕೆ ಹಕ್ಕು ಇದ್ದರೂ ಪರವಾನಿಗೆ ಒಳಪಡುವದಿಲ್ಲ. ಗ್ರಾಮಸ್ಥರು ಸರಕಾರದವರಿಗೆ ಸಹಾಯ ಮಾಡುತ್ತಾರೆಂದು ಕಂಡು ಒಂದಕ್ಕೆ ಅವರಿಗೂ ಬಹಿಷ್ಕಾರ ಹಾಕುವರು.

ಪೋಲೀಸ ಮತ್ತು ಗೌಡರ ಕಣ್ಣಿಗೆ

ಒಬ್ಬನೂ ಬೀಳಲಿಲ್ಲ.

ರಾಜವಾಡೀ ಸ್ವರಾಜ ಎಂಬ ಗ್ರಾಮಕ್ಕೆ ಪೋಲೀಸ ಸಬ್ ಇನ್ಸಪೆಕ್ಟರನೂ ಗೌಡನೂ ಪಟ್ಟಿ ಕೊಡದವರ ಹೊಲಗಳನ್ನು ಜಪ್ತ ಮಾಡಲು ಹೋದರು. ಅದರೆ ಅಲ್ಲಿ ಕಣ್ಣಿಗೆ ಒಬ್ಬ ಮನುಷ್ಯನೂ ಕಾಣಿಸಲಿಲ್ಲ. ಎಲ್ಲ ಬಾಗಿಲು ಹಾಕಿಕೊಂಡು ಕೂತಿದ್ದರು.

ದಂಡಿನ ಪ್ರಯಾಣ-

ಸುರತದಲ್ಲಿ ರಾಹುತ ಪಡೆಯಲ್ಲಿಯ ೧೫ ಸ್ವಾರರು ಬಾರಡೋಲಿಗೆ ಹೋದರು. ಇವರು ಪ್ರತಿಯೊಂದು ಹಳ್ಳಿಯಲ್ಲಿ ಗಸ್ತೀ ಹಾಕಿ ಬರುವರು. ದಂಡಿನವರು ಹೀಗೆ ಬಂದ ಕಾರಣ ಮತ್ತು ಯಾರೂ ಹೋಗಬಾರದೆಂದು ಊರಿಗೆ ಮುತ್ತಿಗೆ ಅಧಿಕಾರಿಗಳು ಮುಂಜಾಗ್ರತೆಯ ನೋಟೀಸು ಹಚ್ಚಿದ್ದಾರೆ.

ಪೋಲೀಸರ ಸತ್ಯಾಗ್ರಹ-

ಬಂಗಾಲಕ್ಕೆ ಸೇರಿದ ಪಬನಾದ ಪೋಲೀಸ ಖಾತೆಯ ಸುಪ್ರಿಂಟೆಂಡೆಂಟ ಮಿ. ಐಸನು ಶಿಪಾಯರಿಗೆ ಸಿಕ್ಷೆ ಕೊಟ್ಟನು. ಈ ಬಗ್ಗೆ ಶಿಪಾಯರು ಪೋಲೀಸಸಾಹೇಬರ ಕಡೆಗೆ ಹೋಗಿ ದೂರಿಕೊಂಡರು. ಸಾಹೇಬರು ವಿಚಾರಣೆ ಮಾಡುತ್ತಿರುವಷ್ಟರಲ್ಲಿ ಇನ್ಸಪೆಕ್ಟರ ಜನರಲರು ಬಂದು, ಕೆಲ ಶಿಪಾಯರಿಗೆ ಸಸ್ಪೆಂಡ ಮಾಡಿದರು. ಶಿಪಾಯರು ಈ ಅನ್ಯಾಯವನ್ನು ಸಹನ ಮಾಡಲಾರದೆ, ತಮ್ಮ ಯುನಿಫಾರ್ಮು, ಟ್ರಂಕು ಮತ್ತು ಪೋಲೀಸಖಾತೆಯ ಬೇರೆ ಸಾಮಾನುಗಳನ್ನು ಹೆಸೆತ್ತಿಕೊಂಡು, ಒಬ್ಬೇ ವ್ಯಾ

ಯಿಂದ ಕಲೆಕ್ಟರರ ಬಂಗ್ಲೆಗೆ ಹೋಗಿ, ಸಾಹೇಬರ ಮುಂದೂ ದೂರ ಹೇಳಿಕೊಂಡರು. ಆದರೆ ಇಲ್ಲಿಯೂ ಇವರಿಗೆ ನಿರಾಶೆ ಸಿಕ್ಕಿತು. ದೂರ ಕೇಳುವದಂತಿರಲಿ; ಪೋಲೀಸಖಾತೆಯ ಶಿಸ್ತು ಮುರಿದರೆಂಬ ಆರೋಪದಿಂದ ಇವರ ಮೇಲೆ ಖಟ್ಲೆ ಹಾಕಿದ್ದಾರೆ.

ಸವದತ್ತಿಯಲ್ಲಿ ಸರಕಾರೀ

ಕಾಡಿನ ಗಿಡ ಕಡಿದವರು ಖಟ್ಲೆ.

ಸವದತ್ತಿಯಲ್ಲಿ ಶಿಂದೀ ಗಿಡಗಳನ್ನು ಕಡಿದರೆಂದು ಪೋಲೀಸರು ಜನರನ್ನು ಹಿ|| ಕ|| ೧೪೪, ೪೪೭ ಮತ್ತು ೪೨೭ ಕಲಮು ಪ್ರಕಾರ ಹಿಡಿದಿದ್ದಾರೆ. ಅವರು-

೧ ಜಂಬುಲಿಂಗಪ್ಪ ಶಂಕರೆಪ್ಪ ತೆಗ್ಗಿನಮನಿ
೨ ಶ್ರೀನಿವಾಸ ರಾಮಚಂದ್ರ ಸಂಗಾದ
೩ ಬಾಳಪ್ಪ ಗಡೇಕಾರ
೪ ಅಷ್ಟೆಪ್ಪ
೫ ತಮ್ಮಣ್ಣಭಟ್ಟ ರಾಮಭಟ್ಟ ಜೋಶಿ
೬ ಫಾಲಾಕ್ಷಪ್ಪ, ಕೃಷ್ಣ ಬ ಘೋಡಕ
೭ ಮುಸೆನ ಸಾಹೇಬ ಜಮಾದಾರ ಹುಬ್ಬಳ್ಳಿ

ಇವರಲ್ಲದೆ ಇನ್ನು ಕೆಲವರ ಮೇಲೂ ಖಟ್ಲೆ ನಡಿಸುವರೆಂದು ದಟ್ಟ ವರ್ತಮಾನವುಂಟು. ಸುಮಾರು ಇನ್ನೂರು ಜನರು ಗಿಡ ಕಡಿಯಲಿಕ್ಕೆ ಹೋಗಿದ್ದರು. ಅವರಲ್ಲಿ ಏಳು ಜನರ ಮೇಲೆ ಮಾತ್ರ ಖಟ್ಲೆ ಬಂದಿದೆ.

ಈ ತಾಲೂಕಿಗೆ ಸೇರಿದ ಅಸುಂಡಿ, ಮುಗಳಿ, ಶಿರಗುಪ್ಪಿ, ಗೊರವನಕೊಳ್ಳ, ಗುರ್ಲಹೊಸೂರ, ಬಡ್ಲಿ, ಯಕ್ಕುಂಡಿ, ಧೂಪದಾಳ, ಮುಲ್ಲೂರ, ಬೋರಟಿಹಳ್ಳಿ, ಬೆನವಾಳ, ಗುಡನಾದಕೊಪ್ಪ, ಕಡಿಹಳ್ಳಿ, ಪಟ್ಟನಾಳ ಮುಂತಾದ ಗ್ರಾಮಗಳಲ್ಲಿಯ ಶಿಂದೀ ಗಿಡಗಳನ್ನು ಕಡಿದು ಧ್ವಂಸ ಮಾಡಿದ್ದಾರೆ. ಶಿಂದಿಯ ಮೂಲವೇ ಕಡಿದು ಹೋದ್ದರಿಂದ ಶಿಂದಿಯ ಬಹುತೇಕ ಅಂಗಡಿಗಳು ಬಂದಾಗಿರುತ್ತವೆ.

ಈ ಜಿಲ್ಹೆಯಲ್ಲಿ ರಾಟಿಗಳ ಪ್ರಸಾರವು ಬಹಳ ರಭಸದಿಂದ ನಡೆದಿದೆ. ಸವದತ್ತಿ ಮತ್ತು ಉಗರಗೋಳದಲ್ಲಿ ನೂಲುವ ಮತ್ತು ನೇಯುವ ಮಧ್ಯಸ್ಥಳಗಳಾಗಿವೆ.

ಸಿಡ್ಲಿನಿಂದ ಭಯಂಕರ ಮರಣ ಮತ್ತು

ಪರಿಣಾಮ

—(೦)—

ಮೊನ್ನಿನ ದಿವಸ ಈ ಊರಲ್ಲಿ ಸಾಯಂಕಾಲದಲ್ಲಿ ಶುಕ್ರವಾರ ಪೇಟೆಯಲ್ಲಿರುವ ಗಚ್ಚಿನ ಭಾವಿಯ ಹತ್ತಿರ ಸಿಡ್ಲು ಬಿದ್ದು, ಒಬ್ಬನು ಆಕ್ಷಣವೇ ಸತ್ತನು. ಮೂವರು ಎಚ್ಚರದಪ್ಪಿದ್ದಾರೆ. ಇನ್ನು

ನೋಟೀಸು

ವ. ದಾರನಸಾಬ ವಲ್ದ ಫಕ್ಕೀರಸಾಬ ರ. ವ್ಯಾಗನೂರ ತಾಲ್ಲೂಕ ನವಲಗುಂದ ಜಿಲ್ಲಾ ಧಾರವಾಡ ಈತನಿಗೆ–

ಕೆಳಗೆ ಸಹಿ ಮಾಡಿದವಳು ಈ ನೋಟೀಸಿನಿಂದ ತಿಳಿಯ ಪಡಿಸುವದೇನಂದರೆ– ನಾನು ನಿನ್ನನ್ನು ಉಡಿಕೆ ಮಾಡಿಕೊಂಡು ಅಜಮಾಸು ಮೂರು ವರ್ಷದ ಮೇಲೆ ಆಗಿಹೋದವು. ನಿನ್ನ ಮನೆಗೆ ನಾನು ಬಂದು ೩ ತಿಂಗಳು ಸರಾಸರಿ ನಿನ್ನ ಕೂಡ ಬಾಳುವೆ ಮಾಡಿದೆ. ಇತ್ತಲಾಗಿ ನನ್ನ ಗಂಡನ ಬಾಳುತ್ತ ನನ್ನ ಹೊಟ್ಟೆಯಲ್ಲಿ ೧ ಹೆಣ್ಣು ಹುಡಿಗಿ ನನ್ನ ಸಂಗಡ ಇದ್ದು ಇಂಥ್ಯಾ ಅನ್ನಾ ಹಾಕದಿಲ್ಲ. ಆ ಹುಡಿಗಿ ಹುಟ್ಟಿದ ನಿನ್ನ ಕೂಡ ಬಾಳ್ವೆ ಮಾಡದೇನ ಅಂಥಾ ನ್ಯಾಯಾ ತಗದು ನನ್ನ ಮೈಮೇಲೆ ಇದ್ದ ದಾಗೀನೆಗಳು ಕೆಳಗೆ ಬರೆದ ಪ್ರಕಾರ

೧	ಬೆಳ್ಳಿ ಪಟ್ಟಿ ಅಜಮಾಸ ಕಿಮ್ಮತ್ತು	೨೫
೨	ಬೆಳ್ಳಿ ಅಗಲಿ ,, ,,	೮
೩	ಬೆಳ್ಳಿ ಕಂಕಣ ೧ ಜತಿ	೮
೪	ಬಂಗಾರದ ಟೀಕಿ	೫೦
೫	ಬಂಗಾರದ ಬುಗಡಿ ಜತಿ ೧	೧೬
೬	ಬಂಗಾರದ ಗುಂಡಿನ ಸತ್ತು	೬
೭	ಬಂಗಾರದ ಬೂಲಾಕ	೩
೮	ಬಂಗಾರದ ಗಿಲ್ಸರಿ	೫
೯	ಬಂಗಾರದ ಹೂವು	೫
೧೦	ಒಳ್ಳೆದ ಸೀರಿ	೪೦
೧೧	ಬಂಗಾರದ ಪುಲ್ಲಿ	೩

ಈ ಪ್ರಕಾರ ಸಾಮಾನುಗಳನ್ನು ಕಸಕೊಂಡು ಬಿಟ್ಟಿ ಇದಲ್ಲದೆ ನಾನು ಸಮಾಧಾನ ಮಾಡಿ ನಿನ್ನ ಮನೆಯೊಳಗೆ ಇದ್ದರೂ ಕೂಡಾ ಹೊಟ್ಟೆಗೆ ಉಪಜೀವನವಾಗುವ ಕಾಳು ವಗ್ಯೆರೆ ಪ್ರಪಂಚದ ಸಾಮಾನುಗಳನ್ನು ಕೊಡದೆ ಇಲ್ಲದಂತೆ ಮಾಡಿದಿ. ಕಾರಣ ಮೊದಿ ಮನಿಯಲ್ಲಿ ಹೋಗಿ ಕೆಲವು ದಿವಸ ಕಟ್ಟಿ ಸಾಗಿಸಿಕೊಂಡು ಊರಲ್ಲಿ ಇರುವ ಸಂಭಾವಿತ ಜನರಿಗೆ ತಿಳಿಸಿದೆ. ಅವರು ಪುಷ್ಕಳ ಯೋಗ್ಯ ರೀತಿಯಿಂದ ಪ್ರಪಂಚ ಮಾಡಿಕೊಂಡು ಹೋಗಲಿಕ್ಕೆ ಬುದ್ಧಿ ಹೇಳಿದರು. ಕೇಳಲಿಲ್ಲಾ ನಾನು ನಿರುಪಾಯಕಾಗಿ ನನ್ನ ತಂದೆಯ್ಯ ಮನಿಗೆ ಬಂದೆ ನನ್ನ ತಂದಿಯವರು ಸಿಮ್ಮವರು ಬಹಳ ಬಡವರು ಇರುವ ಮೂಲಕಾ ನನ್ನ ಹೊಟ್ಟಿಗೆ ಹಾಕುವ ಮಾರ್ಗವಿಲ್ಲಾ. ಕಾರಣ ನಾನು ಎರಡನೇ ಕಡಿಗೆ ಉಡಿಕಿ ಮಾಡಿಕೊಳ್ಳತಕ್ಕವಳಿದ್ದೇನೆ. ಈ ನೋಟೀಸಿನ ತಾರೀಖಿನಿಂದ ೧ ತಿಂಗಳೊಳಗಾಗಿ ನೀನು ಬಂದು ನನ್ನ ತಂದೆ ಮಕ್ತು ಮಡ್ಲೂರ ಗ್ರಾಮದ ಮನಿಸಲ ದಾನ ಪೈಸದವರಿಗೆ ಯೋಗ್ಯ ರೀತಿಯಿಂದ ಬಾಳಿವೆ ಮಾಡಿಕೊಂಡು ಹೋಗುವಂತೆ ಖಾತ್ರಿ ಮಾಡಿ ಕೊಟ್ಟು ಮೇಲೆ ಕಂಡ ದಾಗೀನೆಗಳನ್ನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು. ಇಲ್ಲದೆ ಇದ್ದರೆ ಇದೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು. ಆ ಮೇಲೆ ನನ್ನ ಮೇಲೆ ಮತ್ತು ನನ್ನ ಉಡಿಕಿ ಗಂಡನ ಮೇಲೆ ಯಾವ ರೀತಿಯಿಂದಲೂ ಇಲಾಜ ನಡಿಯಲಾರದು. ಮತ್ತು ನನ್ನ ಜಾಜುತು ತಗೊಂಡ ದಾಗಿನೆಗಳು ಕೊಡದೆ ಇದ್ದರೆ ನಿನ್ನ ಮೇಲೆ ಇಲಾಜ ನಡೆಸಲಾದೀತು ತಿಳಿಯದು

ತಾ|| ೭೮-೫-೧೯೩೦

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಖಾದರಬಿ ಕೋಂ ವ. ದಾರನಸಾಬ ಸಂಗಡ ಸಾ|| ಮಡ್ಲೂರ ತಾ|| ಕೋಡ ಸಹಿ ಮಾಡಿದ್ದು ಅದೆ

ನೋಟೀಸು

ದರಿಯಪ್ಪಾ ತಂದಿ ಈರಪ್ಪಾ ಸುಣಗಾರ ಸಾಕೀನ ಕುಂಕುರ ತಾಲ್ಲೂಕ ಬಂಕಾಪೂರ ಇವನಿಗೆ–

ಕೆಳಗೆ ಸಹಿ ಮಾಡುವವಳು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ–

ನೀನು ನನ್ನನ್ನು ಲಗ್ನ ಮಾಡಿಕೊಂಡು ಅಜಮಾಸ ೮-೯ ವರ್ಷವಾಯಿತ್ತು ಲಗ್ನವಾದನಂತರಾ ನಾಲ್ಕು ವರ್ಷ ಬಾಳ್ವೆ ಮಾಡಿತಾ ಒಂದ್ವೆ ಅದರೆ ನೀನು ನನಗೆ ಇತ್ತಲಾಗಿ ಕೂಡದು ಒಡದು ಮಾಡುತ್ತಿದ್ದರಿಂದಾ ನಾನು ಹಲೋರ ರೀತಿ ಇದ್ದರೂ ನನ್ನ ಹೊಟ್ಟೆಲಿ ಇದ್ದ ಹುಡುಗನ್ನು ವ ನನ್ನನ್ನು ಈಗ ಅಜಮಾಸ ೪ ವರ್ಷದ ಹಿಂದೆ ನನ್ನ ಮೈಮೇಲಿನ ಲಗ್ನದ ಕಾಲಕ್ಕೆ ಇಟ್ಟ ದಾಗೀನಗಳ ಸಹಿತಾ ಕಸಗೊಂಡು ಹೊರಗೆ ಹಾಕಿರುತ್ತೀದಿ ಆದರೆ ಈ ವರಿಗೂ ನನ್ನ ವ ನನ್ನ ಮಗನ ಪ್ರಪಂಚ ಪೋಷಣಾರ್ಥವಾಗಿ ನಾಲ್ಕುನೂರು ರೂಪಾಯಿಗಳು ಎರಡನೆ ಕಡಿಗೆ ದೇಣೆ ಮಾಡಿ ಹೊಟ್ಟಿಗೆ ತಿಂದಿರುತ್ತೇನೆ. ಈ ವರಿಗೂ ನನ್ನನ್ನು ಕರಕೊಂಡು ಹೋಗಲಿಲ್ಲಾ. ಕಾರಣಾ ಈ ನೋಟೀಸ ಮುಟ್ಟಿದ ೭ ದಿವಸದಲ್ಲಿ ನನ್ನ ಸಾಲ ಫೆಡ ಮಾಡಿ ನನ್ನನ್ನು ಕರಕೊಂಡು ಹೋಗಬೇಕು. ಇಲ್ಲದೆ ಇದ್ದರೆ ಇದೇ ಸೋಡಪತ್ರ ಎಂದು ತಿಳಿಯಬೇಕು. ನನಗೆ ಸಾಲಗಾರರ ಉಪದ್ರ ಬಹಳ ಇದ್ದದ್ದರಿಂದಾ ನಾನು ಎರಡನೆ ಕಡಿಗೆ ವೃದ್ಧಿ ಮಾಡಿಕೊಳ್ಳುತ್ತೇನೆ. ಅನಂತರಾ ನಿನ್ನ ಹಕ್ಕು ನನ್ನ ಮೇಲೆ ಉಳಿಯುವದಿಲ್ಲಾ. ಈ ನೋಟೀಸಿನ ಖರ್ಚು ನಿನ್ನ ತಲಿ ಮೇಲೆ ಅದೆ ತಿಳಿಯುವದು. ತಾರೀಖು ೧೭-೫-೧೯೩೦ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಗಂಗವ್ವಾ ಕೋಂ| ದರಿಯಪ್ಪಾ ಸುಣಗಾರ ಸಾಕೀನ ಕುಂಕುರ ಈ ಸಹಿ ಮಾಡಿದ್ದು ಅದೆ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸಂಸ್ಥೆ.

ಮೋಟಾರ ಡ್ರಾಯವ್ಹರ ಹಿರಿಯರೆಲ್ಲ ಜನರು ಕಾರಿನ ಪೂಜೆ, ಬೇಗಾರಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ಕೊಟ್ಟು ಕಲಿಕೊಳ್ಳುವದು ಬಹಳ ಆ ಕಷ್ಟ ಉಳ್ಳವು ಸಾಧ್ಯವಲ್ಲ, ದಾರಿಯಿಂದ ಅದನ್ನು ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದು, ಆಗಾಗ ಅನೇಕರು ಶಿಕ್ಷಣ ಪಡೆದಿದ್ದಾರೆ. ಪ್ರತಿ ತಿಂಗಳು ಹೊಸಬ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಾಗಿದ್ದರಿಂದ ಆ ಜನರ ಪಾಲಿಯಾಗ ಬೇಕೆಂದು ನಮ್ಮ ದಾರಿ ಈ ಜಾಹಿರಾತು ಕೊಟ್ಟಿದ್ದೇವೆ. ಮೇಲ್ಪಟ್ಟರೆ ದೊರೆತನ ಕಾಲು ಬರೆದು ಕೇಳಬಹುದು. ಬದಲಿಗೆ ಕೂಡಲೆ ಅರ್ಜಿ ಹಾಕಿ, ಸ್ಥಳ ಕಾಯ್ದಿಟ್ಟುಕೊಳ್ಳಬೇಕು. ವಿಶೇಷ ಮಾಹಿತಿಗಾಗಿ ನಮ್ಮ ಆಫೀಸಿಗೆ ಪತ್ರದ್ವಾರದಿಂದ ಕೇಳಬೇಕು.

ಪ್ರೊ. ಶ್ರೀ. ಎಸ್. ಜಿ.
ಮೋಟಾರ ಡ್ರಾಯವ್ಹಿಂಗ ಸ್ಕೂಲ, ಧಾರವಾಡ

ನೋಟೀಸಿನ ದರಗಳು

—— (೦)——

ಸಿಂಗಲ ಕಾಲಮಿನ ಹತ್ತು ಪಂಕ್ತಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ. ಜಾಹೀರಾತು ಬರೆದು ಕಳಿಸಿದ ಕಾಲಕ್ಕೆ ಮನಿ ಆರ್ಡರ ಮೂಲಕ ಕಳಿಸಬೇಕು. ಉಡಿಕೆ ಸೋಡಚೀಟಿ ವಗ್ಯೆರೆ ನೋಟೀಸುಗಳಿಗೆ ನಾಲ್ಕಾಣೆ ಕಡಿಮೆ ಮಾಡಿ ದರ ಕೆಳಗಿನಂತೆ ಇದ್ದು ದರ ಅದರಂತೆ ಹಾಕಬಹುದು. ಆರು ಆಣೆ ಪಟ್ಟಿ ಕಾಲಮಿನ ಜಾಹೀರಾತುಗಳನ್ನು ಕೊಡುವವರು ಕಳಿಸಿ ಪತ್ರಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಶ್ರೀನಿವಾಸಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೨೯ ನೇ ಮೇ ೧೯೩೦ (ಸಂಚಿಕೆ ೧೨೧

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯ ಯೋಜನೆ ಬಂಡವಲವು	ಖಚಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆದುಕೊಳ್ಳಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟೀಜು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಪಕ್ಕಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ [illegible] ಜೇಷ್ಠ ಶುದ್ಧ ೧

ಆ ವಿಜಯಂ ಶ್ರೀಕಪ್ಯಳು
ಶ್ರೀ ವಸುಮತಿಯು ನರಿಸಿತೆ ಸುಹಿತ ಕರಿತೆಗಳಿಂ ದಿ
ದ " ವಿಜಯಂ " ಶ್ರೀಕರರುಣ ।
ನಾ ವಿಹಿತಂಗಳ ವಿನಾಶನರಿತ್ರದು ಸಾಹ್ಯ

ಪಂಡಿತ ಮಾಲವಿಯಾಯವರ ದಸ್ತಗಿರಿ.

ಪಂಡಿತ ಮದನಮೋಹನ ಮಾಲವಿಯಾಯ. ನಾಂವ ಸಜ್ಜನರು ಈಗ ಬ್ರಿಟಿಶ ಸರಕಾರದ ಕಾವಲಿಗೆ ಆಹುತಿ ಬಿದ್ದರು. ಪೇಶಾವರಕ್ಕೆ ಹೋಗಿ ಅಲ್ಲಿಯ ನಿಜಸ್ಥಿತಿಯನ್ನು ಅರಿತುಕೊಂಡು, ವಿಪದ್ಗ್ರಸ್ತರಿಗೆ ಕೈಲಾದ ಮಟ್ಟಿಗೆ ಸಹಾಯಮಾಡಬೇಕೆಂದು ಅಪೇಕ್ಷಿಸಿದರು. ಇದರಲ್ಲಿ ಪಂಡಿತರ ತಪ್ಪೇನೂ ಇಲ್ಲ. ಹೇತುವಂತೂ ಭೂತದಯಾ ಪ್ರೇರಿತವಾದದ್ದು. ಆದರೆ ಸರಕಾರಕ್ಕೆ ಇವರ ಬರುವಿಕೆಯು ಎಷ್ಟು ಹಿತವೆನಿಸಲಿಲ್ಲ. ಅಲ್ಲಿಯ ನಾನಾತರದ ಕೃತ್ಯಗಳು ಹೊರಬೀಳುವವೆಂಬ ಹೆದರಿಕೆ ಇರಬೇಕೆಂತಲೇ ಇವರಿಗೆ ಅಲ್ಲಿಗೆ ಬರಲು ಪ್ರತಿಬಂಧ ಮಾಡಿದರು. ದಂಗೆಯ ವಿಚಾರಣೆ ಮಾಡಲು ಹೊರಗಿನ ಇಬ್ಬರು ಜಡ್ಜರನ್ನು ನೇಮಿಸಿದರು. ಆ ಜಡ್ಜರು ಅಲ್ಲಿಗೆ ಬಂದದ್ದೂ ಆಗಿದೆ. ಜಡ್ಜರಂತೆ ಪಂಡಿತರಿಗೂ ಏಕೆ ಬರಗೊಡಬಾರದು? ಇದು ಹೇಳಿ ಕೇಳಿ ನೋಡುವಂಥ ಪಕ್ಷಪಾತವಾಗುತ್ತಿದ್ದಲ್ಲವೇ? ಅಳರಸರು ಶತ್ರುಗೆ ಹೋಗಗೊಡದ್ದರ ಬಗ್ಗೆ ಏನಾದರೂ ಇಂಗಿತವಿರಬೇಕೆಂದು ಪಂಡಿತರು ತಿಳಕೊಂಡು, ತಾವಾಗಿ ಹೋಗುವ ಸಿದ್ಧತೆ ಮಾಡಿದರು. ಹೀಗೆ ಕೈಮೀರಿ ಕಲಕತ್ತೆಯಲ್ಲಿ ಕಾಯದೆ ಭಂಗ ಮಾಡಿ, ಪೋಲೀಸರ ಹುಕ್ಕೆಯನ್ನು ಮುರಿದಿದ್ದರು. ನೋಟೀಸು ಸಮನ್ಸು ಇದ್ದರೂ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಲಿಲ್ಲ. ಸರಕಾರದವರು ಇವರ ಮೇಲೆ ಯಾವ ಇಲಾಜೂ ಮಾಡಲಿಲ್ಲ. ಅದರಂತೆ ಈಗಾದರೂ ತಾವು ಪತ್ರದಿಂದ ಮಾಡಬಹುದೆಂದು ಪಂಡಿತರು ಬಗೆದು, ಸಂಗಡ ಕೆಲವರನ್ನು ಕರಕೊಂಡು ಲಾಹೋರಿನಿಂದ ಪೇಶಾವರದ ಕಡೆ ದಾರಿ ಹಿಡಿದರು. ಇವರು ಪೇಶಾವರದ ಹತ್ತರದಲ್ಲಿರುವ ಕ್ಯಾಂಬಲಪೂರವೆಂಬಲ್ಲಿಗೆ ಹೋಗುವದೊಂದೇ ತಡ ಪೋಲೀಸರು ಇವರಿಗೆ ವಾರಂಟು ತೋರಿಸಿ, ಬಂಧಿಯಿಂದಿಳಿಸಿಕೊಂಡು, ದಸ್ತಗಿರ ಮಾಡಿಕೊಂಡು ಹೋದರು. ಎಲ್ಲಿಗೆ ಹೋದರೆಂಬುದು ತಿಳಿದಿಲ್ಲ. ಯಾವ ಆರೋಪ ಹೊರಿಸಿದ್ದಾರೆಂಬದೂ ಎಷ್ಟು ದಿವಸ ಶ್ರೀ. ಕೃಷ್ಣಜನ್ಮಸ್ಥಾನದಲ್ಲಿ ವಾಸವಾಗಿರಬೇಕೆಂಬದೂ ಈ ನಂತರ ತಿಳಿಯುವದು.

ಮುಂಬಯಿಯಲ್ಲಿ

ಪೋಲೀಸ ಮತ್ತು ಮುಸಲಮಾನರ ದಂಗೆ

ಇಬ್ಬರು ಸತ್ತರು; ಅನೇಕರು ಘಾಯವಾದರು.

—: :*: :—

ಪುರಾಣದಲ್ಲಿ ವಧು ಬಿಂದು ಕಲಹವೆಂದು ಹೇಳಿದೆ. ನಾರದನು ಈ ಕಲಹದ ಮೂಲ ಪ್ರವರ್ತಕನಾಗಿ ಇಡೀ ದ್ವಾರಕೆಯಲ್ಲಿ ಹೊಡೆದಾಟವೆಬ್ಬಿಸಿದನು. ಅದೇ ಪ್ರಕಾರ ಮುಂಬಯಿಯಲ್ಲಿ ಮುಸಲಮಾನ ಮತ್ತು ಪೋಲೀಸ ದಂಗೆ ಯಾಯಿತು. ಅಲ್ಲಿಯ ಭೆಂಡೀ ಬಾಜಾರದಲ್ಲಿ ಯುರೋಪಿಯನ್ನ ಸಾರ್ಜಂಟ ಮತ್ತು ಕೆಲ ಪಠಾಣರ ನಡುವೆ ಒಂದು ನಾಯಿಯ ದೆಸೆಯಿಂದ ಜಗಳ ಬಂದಿತು. ಜಗಳವು ದೀರ್ಘಕ್ಕೆ ಹೋಗಲು ಸಾರ್ಜಂಟನು ತೆರೆದ ಜನರ ಮೇಲೆ ಗುಂಡು ಹಾಕಿದನು. ಗುಂಡು ಹಾಕುವಾಗ ಎರಡು ಮೂರು ಸಾವಿರ ಜನ ಕೂಡಿತ್ತು. ಗುಂಡು ಹಾರಿದ ವರ್ತಮಾನ ಕೇಳಿದ ಕೂಡಲೆ, ಪೋಲೀಸರು ತಂಡತಂಡವಾಗಿ ಬಂದರು. ಗುಂಡು ಹಾರಿತೆಂದು ಜನರು ಹೆದರದೆ, ಅವರೂ ಅಲ್ಲಿಗೆ ಗುಂಪುಗುಂಪಾಗಿ ಬಂದರು. ಬಂದು ಪೋಲೀಸರು ಸಾರ್ಜಂಟನ ಅವತಾರವನ್ನೇ ಧಾರಣ ಮಾಡಿದರು. ಇವರೂ ಗುಂಡು ಹಾಕಲು ಅಲ್ಲಿಯ ಪರಿಸ್ಥಿತಿಯು ಮತ್ತಷ್ಟು ಕೆಟ್ಟಿತು. ಮುಸಲಮಾನರಂತೂ ಭಯಂಕರವಾಗಿ ಕೋಪಗೊಂಡರು. ಈ ಭಯಂಕರ ಪ್ರಸಂಗದಲ್ಲಿ ಪಾಯಧುಣಿಯಿಂದ ಕ್ರಾಫರ್ಡ ಮಾರ್ಕೆಟದ ತನಕ ಟ್ರಾಮು ಬಂದಾದವು. ಅಂಗಡಿ ಬಂದಾದವು. ಈ ಗೊಂದಲವು ಸಾಯಂಕಾಲದಿಂದ ಮಧ್ಯರಾತ್ರಿಯ ತನಕ ಸತತವಾಗಿ ನಡೆಯಿತು. ಪೋಲೀಸರು ತಮ್ಮ ಕಾನೂನಿಗೆ ದಂಡವನ್ನು ತರಿಸಿದರು. ದಂಡು ಬಂದು, ಕಾಟ, ಕೋಟೆಗೆ ಬಂದೂಕು ಹಿಡಕೊಂಡು ನಿಂತಿತು. ದಂಡೂ ಬಂತು, ರಾತ್ರಿಯೂ ಆಯಿತು. ಹೀಗೆ ಆಗಿನ ದಂಗೆಗಳು ಶಾಂತವಾಗಿ, ಬೆಳಗಾದ ಕೂಡಲೆ ಮರ್ತಕಳಸಿತು. ಕೂಡಿದ ಜನರು ಪೋಲೀಸರ ಮೇಲೆ ಕಲ್ಲೆಸೆಯಲಾರಂಭಿಸಲು ಪೋಲೀಸರು ಪುನಃ ಗುಂಡು ಹಾಕಿದರು. ಆಗಂತೂ ಅನೇಕರು ಭಯಂಕರವಾಗಿ ಘಾಯವಾದರು. ಈ ಗೊಂದಲದಲ್ಲಿ ಇಬ್ಬರು ಸತ್ತರು. ೩೦ ಜನರು ಘಾಯವಾಗಿದ್ದಾರೆ. ಘಾಯವಾದವರ ಆರೈಕೆಯು ಕಾಂಗ್ರೆಸದ ಇಸ್ಪತ್ರಿಯಲ್ಲಿ ನಡೆದಿದೆ. ೧೫ ಜನ ಡಾಕ್ಟರರು ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸದ ಭೂತದಯೆಯನ್ನು ಕಂಡು, ಆಗಿಂದಾಗ ರೋಗಿಗಳ ಆಹಾರೋಪಚಾರಗಳ ಜಿಕಿರಿಯಿಂದ ಕೂಡಿದ ಜನರು ಐನೂರು ರೂಪಾಯಿಗಳನ್ನು ಕೂಡಿಸಿಕೊಟ್ಟರು.

ಬಾರಡೋಲಿಯ ಸರಕಾರೀ ಬಂಗಲೆಯ ಹತ್ತರ ಹೋದರೆ ಗುಂಡು !!

—(೦)—

ಬಾರಡೋಲಿಯಲ್ಲಿರುವ ಸರಕಾರೀ ಬಂಗಲೆಯ ಹತ್ತರ ಯಾರೂ ಹೋಗಬಾರದು. ಸ್ಪೈಶರ ಕಾವಲಿನ ಅಳತೆಯಲ್ಲಿ ಹೋದರೆ ಆಸಿಮಿಸಿ ನೋಡದೆ ಗುಂಡು ಹಾಕಲ್ಪಡುವದೆಂದು ಅಲ್ಲಿಯ ಮಾಮಲೇದಾರರು ಊರಲ್ಲಿ ಡಂಗುರ ಹೊಡಿಸಿದ್ದಾರೆ.

ಸರಕಾರಕ್ಕೆ ನಿಜವಾದ ಬಹಿಷ್ಕಾರ ಬಿತ್ತು.

—(೦)—

ಮುಂಬಯಿಯ ಮುನಿಸಿಪಾಲಿಟಿಯ ಪತಿಯಿಂದ ಕೌನ್ಸಿಲ ಮೆಂಬರರಾಗಿದ್ದ ಆ್ಯಡಹೋಕೇಟ ಮುನಸಿಯವರಿಗೆ ಶಿಕ್ಷೆಯಾದ್ದರಿಂದ, ಈ ಸ್ಥಳದ ಚುನಾವಣೆಯಾಗಬೇಕೆಂದು ಸರಕಾರದವರು ಜಾಹೀರನಾಮೆ ಹಚ್ಚಿದರು. ಮಿ. ಪಾಟಕ ಎಂಬ ಉಮೇದವಾರರು ಫಾರ್ಮ ತುಂಬಿ ಗೃಹಸ್ಥರು ತಾವು ಉಮೇದವಾರರೆಂದು ಅರ್ಜಿ ಕೊಟ್ಟರು. ದಬ್ಬಾಳಿಕೆಯಲ್ಲಿ ತಾವು ಮೆಂಬರರಾಗುವದು ಒಳಿತಲ್ಲೆಂಬ ನಾಚಿಕೆ ಹುಟ್ಟಿ ಮರು ದಿವಸ ರಾಜೀನಾಮೆ ಕೊಟ್ಟರು. ಹೀಗೆ ಈ ಸ್ಥಳವು ತೆರವಾಗಿಯೇ ಉಳಿದು, ಸುಶಿಕ್ಷಿತರು ಸರಕಾರಕ್ಕೆ ಪ್ರತ್ಯಕ್ಷ ಬಹಿಷ್ಕಾರ ಹಾಕಿದಂತೆ ಸ್ಪಷ್ಟವಾಗುತ್ತದೆ.

ಹಿಂದುಸ್ಥಾನದ ಸ್ವರಾಜ್ಯದ ಭಾವೀ ಆಸೆ.

—(೦)—

ಮಿ. ಬೆನ್ನ ಸಾಹೇಬರ ಅಡಿಕೆ !!

ಪಾರ್ಲಮೆಂಟ ಸಭೆಯಲ್ಲಿ ಸ್ಟೇಟ ಸೇಕ್ರೆಟರಿಯಾದ ಮಿ. ಬೆನ್ನ ವೆಜ್ಜವುಡ್ಡ ಸಾಹೇಬರು—

" ಹಿಂದುಸ್ಥಾನವು ಹಿಂದುಸ್ಥಾನದ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಹೊಂದುವದೇ ಇಂಗ್ಲಿಷ ಸರಕಾರದ ಅಪೇಕ್ಷೆಯು. ದಾರಿಯಲ್ಲಿ ಅನೇಕ ಅಡಚಣಿಗಳಿರುವವು. ಅವೇನೂ ನೀಗದವಲ್ಲ. ಆದರೆ ಇವುಗಳ ಪರಿಹಾರ ಮಾಡಿಕೊಳ್ಳುವದು ಮುಖ್ಯವಾಗಿ ಹಿಂದೀ ಜನರ ಕೈಯಲ್ಲಿಯೇ ಇರುವದು. ಒಮ್ಮೆಯಾದರೊಂದು ಒಡಂಬಡಿಕೆಯಾಯಿತೆಂದರೆ ಯಾವ ಬ್ರಿಟಿಶ ಸರಕಾರವೂ ಆದರ ಸ್ವರಾಜ್ಯ ವಿಷಯಕವಾದ ಧ್ಯೇಯವು ಪೂರ್ಣವಾಗುವದನ್ನು ತಡೆಯಲು ಸಮರ್ಥವಾಗಲಾರದು. "

ಎಂಬ ಭಾಷಣ ಮಾಡಿದ್ದಾರೆ.

ಕರಜಗಿಯ ಗೌಡನ ಗುಂಡತನ.

—(೦)—

ಊರ ಉಸಾಬರಿ ಮಾಡಿ ಉಣದೆ ಕೆಡಬಾರದು,

—(೦)—

ಈ ಜಿಲ್ಹೆಯು ಶಾಂತವಾಗಿದೆ-ಯೆಂದು ಜಿಲ್ಹಾಧಿಕಾರಿಗಳಾದ ಕಲೆಕ್ಟರಸಾಹೇಬರು ಪ್ರತಿಯೊಬ್ಬರ ಕೂಡ ಶಾಂತ ರೀತಿಯಿಂದ ನಡೆಯುತ್ತಿರುವಾಗ ಗ್ರಾಮ ಕೀಟಕರು ಕಳ್ಳೀ ಎಬ್ಬಿಸುವದು ಬಹುವಾಗಿ ಗರ್ಹಣೀಯವೇ ಸರಿ. ಕರಜಗಿಯ ಗೌಡನು ಗೊಂದಲವೆಬ್ಬಿಸಿ ಬುದ್ಧಿಗಲಿತದ್ದು ವರ್ತಮಾನಪತ್ರದಲ್ಲಿ ಪ್ರಸಿದ್ಧವಾಗಿದೆ. ಈ ಸಂಗತಿಯಿಂದ ಎಲ್ಲ ಕುಲಕರ್ಣಿ ಗೌಡರು ಬುದ್ಧಿಗಲಿಯತಕ್ಕದ್ದು. ಇದಕ್ಕೆ ಕಾರಣ ವಿರುದ್ಧವಾಗಿ ಕರಜಗಿಯ ಗೌಡನು ಆಚರಿಸಿದ್ದು, ವ್ಯಸನಪಡುವಂಥ ಸಂಗತಿಯು. ಈ ಗೌಡರು ತಮಗೇನೂ ಸಂಬಂಧವಿಲ್ಲದ ಹೋರಿ ಮಾಡಿದ್ದು ಅನುಚಿತವೇ ಸರಿ. ಸಭೆಯಾಗುವದೆಂದು ಒಬ್ಬನು ಹಲಿಗೆಯನ್ನು ಬಾರಿಸುತ್ತ ಹೋಗುತ್ತಿದ್ದನು. ಗೌಡರು ಸುಮ್ಮನೆ ಕೂಡ್ರುವರೇ ? ಆ ಹಲಿಗೆಯವನನ್ನು ಕರೆದು, ಅದನ್ನು ಕಸಕೊಂಡು, ಹರಿದು ಹಾಕಿದರು. ಒಂದು ಹಲಿಗೆ ಹರಿದು ಹಾಕಿದರೆ- ಎಲ್ಲ ಹಲಿಗೆಗಳ ನಿರ್ನಾಶವಾಗಲಿಲ್ಲ. ಹುಡುಗನು ಸತ್ಯಾಗ್ರಹಿಯು. ಬಕೆಟ್ಟೊಂದು ತಂದು, ಡುಮಡುಮುಕ, ಸಭೆಯಾಗುತ್ತದೆಂದು ಸಾರುತ್ತಾ ನಡೆದನು. ಗೌಡರು ಇದನ್ನು ಕೇಳಿಯೂ ಕೈಲಾಗದವರಂತೆ ಕೂತರು. ಊರವರು ಸಾಮಾಜಿಕ ಬಹಿಷ್ಕಾರ ಹಾಕುವರೆಂದು ಹೆದರಿರಬಹುದು. ಎರಡನೆಯ ಸಾರೆ ಹೊಡೆದ ಹಲಿಗೆಯು ಊರ ತುಂಬ ಚಳೋಚಳವಳಿ ಮಾಡಿತು. ಸಾಯಂಕಾಲದಲ್ಲಿ ಗೌಡರ ಹೆದರಿಕೆ ಇಲ್ಲದೆ ಸಭೆಯಾಯಿತು. ಶ್ರೀ. ಪರಮಣ್ಣವರು ಗೌಡರ ಸಮಾಚಾರವನ್ನು ಚನ್ನಾಗಿ ತಕೊಂಡು, ಅವರ ಕೃತ್ಯವನ್ನು ನಿಷೇಧಿಸಿದರು. ಗೌಡರು ತಮಗೆ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಹಾಗಾಗಿ ಉಲಕೋಚಕತನ ಮಾಡಿದರೆ- ಊರ ಉಸಾಬರಿ ಮಾಡಿ ಉಣದೇ ಕೆಟ್ಟರೆಂಬಂತೆ ತಮ್ಮ ಅವಸ್ಥೆಯಾಗುವದೆಂದು ಈ ಬಿಕ್ಕಟ್ಟಿನ ಕಾಲದಲ್ಲಿ ಚನ್ನಾಗಿ ತಿಳಿಯತಕ್ಕದ್ದು.

೧೮೦೦ ಗೌಡಕಾನಭೋಗರ ರಾಜೀನಾಮೆ.

—()—(೦)—()—

ಗುಜರಾಥದಲ್ಲಿ ಈವರೆಗೆ ೧೮೦೦ ಜನ ಗೌಡ ಕುಲಕರ್ಣಿಯರು ರಾಜೀನಾಮೆ ಕೊಟ್ಟರೆಂದು ಅಲ್ಲಿಯ ಕಾಂಗ್ರೆಸ ಕಮೀಟಿಯವರು ಪ್ರಸಿದ್ಧ ಮಾಡಿದ್ದಾರೆ.

ಪೃಥ್ವಿಯ ಪ್ರದಕ್ಷಿಣೆ ಹಾಕಿದ ಫಾರ್ಸಿಯ ಕಾಯದೆಭಂಗ

—(೦)—

ಮುಂಬಯಿಯಲ್ಲಿ ಕಾಂಗ್ರೆಸ ಕಮೀಟಿಯವರು ವಡಾಲಾದ ಉಪ್ಪಿನ ಉಗ್ರಾಣದ ಮೇಲೆ ದೊಡ್ಡ ಹಲ್ಲೆ ಮಾಡಿದರು. ಸಾಯಂಕಲ್ಲಿನ ವೇಳೆ ಕೂಡ ಭೂಮಂಡಲವನ್ನೇ ಪ್ರದಕ್ಷಿಣೆ ಹಾಕಿದ ಫಾರ್ಸಿ ತರುಣರಾದ ಶ್ರೀ. ಭಾವನಗರವಾಲಾನವರು ಇದರ ಕಪ್ತಾನರಾಗಿದ್ದಾರೆ. ಈ ದಾಳಿಯನ್ನು ಧಾರಾಸಾನದಂತೆ ನಡೆಯಬೇಕೆಂದು ಪೋಲಿಸರು ಪೂರ್ಣ ಸಿದ್ಧತೆ ಮಾಡಿದ್ದರು. ದಿನ್ನೆಯ ಮೇಲಿಂದ ತಮಗೆ ಬೆಂಬಲಬೇಕಾದ ಕೂಡಲೆ ತಿಳಿಸುವಂತೆ ಸಿಗ್ನಲದ ವ್ಯವಸ್ಥೆ ಮಾಡಿದ್ದರು. ಸ್ವಾರ, ಸಾರ್ಜಂಟ, ಸಿಪಾಯರಿಗೆಂತೂ ಲೆಖ್ಖವೇ ಇದ್ದಿಲ್ಲ. ಪೋಲಿಸರಿಂದ ಹೊಡತ ಬಿದ್ದವರ ಘಾಯ ಕಟ್ಟುವದಕ್ಕಾಗಿ, ಕಾಂಗ್ರೆಸದ ವತಿಯಿಂದ ಡಾಕ್ಟರ, ನರ್ಸ ಮೊದಲಾದವರು ಸಿದ್ಧರಾಗಿದ್ದರು. ಪೋಲಿಸರ ಹೊಡತದಿಂದ ೫೦ ಜನರು ಘಾಯವಾಗಿದ್ದಾರೆ. ಮೂವರ ಎಚ್ಚರ ತಪ್ಪಿತ್ತು. ಈ ಮಲ್ಲಯುದ್ಧವನ್ನು ನೋಡಲಿಕ್ಕೆ ಹೋದ ಜನರು ಕೂಡ ಹುರುಪು ಬಂದವರಾಗಿ, ಉಗ್ರಾಣದ ಮೇಲೆ ಹಲ್ಲೆ ಮಾಡಿ, ಬೇಕಾದಷ್ಟು ಉಪ್ಪು ಹೊತ್ತುಕೊಂಡು ಬಂದರು. ೧೧೫ ಜನರನ್ನು ಹಿಡಿದಿದ್ದು, ಇವರಲ್ಲಿ ಒಂಭತ್ತು ಜನರು ಫಾರ್ಸಿಯರಾಗಿದ್ದಾರೆ.

ಮುಂಬಯಿಯ ಸ್ಥಿತಿಯು ಚಿಂತಾಜನಕವಾಗಿದೆ.

—(೦)—

ಮೇಲೆ ಹೇಳಿದ ಸಂಗತಿಯು ಆದಿತ್ಯವಾರ ಪ್ರಾತಃಕಾಲದಲ್ಲಾಯಿತು. ಪುನಃ ಸಾಯಂಕಾಲದಲ್ಲಿ ಸಾವಿರಾರು ಜನರು ಉಗ್ರಾಣದ ಮೇಲೆ ಅಭಿಯೋಗ ಮಾಡಿದರು. ಆಗ ಚಳೋ ಹೋರಾಟವಾಗಿ, ಒಬ್ಬ ಯುರೋಪಿಯನ ಸಾರ್ಜಂಟನು ಕಲ್ಲುಗಳಿಂದ ಘಾಯವಾದನು. ಉಪ್ಪಿನಯಾತ್ರೆಯ ಮೂವರು ಸಿಪಾಯರು ಬಹುವಾಗಿ ಪೆಟ್ಟು ತಿಂದಿದ್ದಾರೆ. ಈ ಸಂಗತಿಯಿಂದ ಮುಂಬಯಿಯ ಸ್ಥಿತಿಯು ಚಿಂತಾಜನಕವಾಗಿರುತ್ತದೆ.

ದಂಗೆಯಲ್ಲಿ ಅಸಿಸ್ಟಂಟ ಪೋಲಿಸಸಾಹೇಬರ ಕೊಲೆ.

—:(೦):—

ಸಿಮಲಾದ ಹತ್ತರಿರುವ ಮಾರದಾನ ಗುಜರಗಡಿ ಎಂಬ ಗ್ರಾಮದಲ್ಲಾದ ದಂಗೆಯನ್ನು ಮುರಿಯಲು ಹೋದ ಅ|| ಪೋ|| ಸು|| ರಾದ ಮಿ. ಮರ್ಫಿಸಾಹೇಬರ ಕೊಲೆಯಾಯಿತೆಂಬ ವರ್ತಮಾನ ಬಂದಿರುತದೆ.

ಸತ್ಯಾಗ್ರಹದ ಮಹಿಮೆ !!

—(೦)—

ಹುಡುಗನು ಹುಡುಗರ ಉಪದೇಶಿಯಾದನ

—(೦)—

ಪುಣೆಯಲ್ಲಿ ಗಡಂಗಗಳ ಮುಂದೆ ಕಾವಲುಗಾರನಾಗಿದ್ದೋರ್ವ ಪರಾಣನು ಪಿಕೆಟಿಂಗದವರು ತನ್ನನ್ನು ಹೊಡೆದರೆಂದು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದಿ ಮಾಡಿದನು. ಹೊಡೆದವರೆಂಬವರು ಸ್ವಯಂಸೇವಕರಾಗಿದ್ದರಿಂದ, ಪದ್ಧತಿ ಪ್ರಕಾರ ವಿಚಾರಣೆ ನಡೆಯಿತು. ಹೊಡೆದಂತೆ ಪೂರ್ಣ ಪಕ್ಷದಿಂದ ಸಿದ್ಧವಾಗುತ್ತದೆಂದು ಮ್ಯಾಜಿಸ್ಟ್ರೇಟರು ಇವರ ಮೇಲೆ ಚಾರ್ಜ ಇಟ್ಟರು. ಆಗ ಅಗಾಧವಾದ ದೇವತಾ ಚಮತ್ಕಾರವಾಯಿತು. ಫಿರ್ಯಾದಿ ಪರಾಣನು ಕೋರ್ಟಿನಲ್ಲಿ ಎದ್ದು ನಿಂತವನೇ- ನಾನು ಫಿರ್ಯಾದಿ ತಕ್ಕೊಂಡಿದ್ದೇನೆಂದು ಹೇಳಲು- ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ರದ್ದು ಮಾಡಿದರು. ಪರಾಣನು ಹೊರಗೆ ಬಂದ ಕೂಡಲೆ, ನೆರೆದ ಜನರು ಈತನ ಕೊರಳೊಳಗೆ ಹೂವಿನ ಮಾಲೆ ಹಾಕಿದರು. ಆಗ ಈತನು ತನಗಾದ ಸನ್ಮಾನದ ಕೃತಜ್ಞತೆಯೆಂದು ತಾನೂ ಈ ನಂತರ ಶೆರೆ ಕುಡಿಯುವದಿಲ್ಲೆಂದು ಆಣೆಮಾಡಿ, ಎರಡನೆಯವರೂ ಕುಡಿಯದಂತೆ ಉಪದೇಶ ಮಾಡುವೆನೆಂದು ಪ್ರತಿಜ್ಞೆ ಮಾಡಿದನು.

ವಿಸಾಪೂರದಲ್ಲಿ ಮೊದಲನೆಯ ದಸ್ತಗಿರಿ.

—(೦)—

ಒಂದು ಮೈಲುದ್ದ ಮೆರವಣಿಗೆ.

—(೦)—

ನಂದವಾಡದ ಶ್ರೀ ಹನುಮಂತನಾಯಕರ ಚಿ|| ಭೀಮರಾಯರು ಅಥಣೀ ತಾಲೂಕ ವಿಸಾಪೂರದಲ್ಲಿರುತ್ತಾನೆ. ತಂದೆಗಿಂತ ಮಗನು ಹೆಚ್ಚೆನ್ನುವಂತೆ ಶ್ರೀ. ಭೀಮರಾಯನೂ ಈ ಚಳವಳಿಯಲ್ಲಿ ಸೇರಿದ್ದಾನೆ. ಸರಕಾರದವರು ಕಡೆಗೆ ಹೋದ ಶನಿವಾರ ದಿವಸ ಈತನನ್ನು ಹಿಡಿದು ಅಥಣಿಗೆ ಒಯ್ದರು. ಇವನನ್ನು ತುರಂಗಕ್ಕೆ ಕರಕೊಂಡು ಹೋಗುವಾಗ ತೆಗೆದ ಮೆರವಣಿಗೆಯು ಒಂದು ಮೈಲು ಉದ್ದವಿತ್ತು. ಸುತ್ತಲಿನ ಗ್ರಾಮಗಳ ಜನರೂ ಮೆರವಣಿಗೆಯಲ್ಲಿ ಸೇರಿದ್ದರು.

ಳು ಕಡಿಯಲ್ಪಟ್ಟವು. ಇದೇ ಗ್ರಾಮಕ್ಕೆ ಸನಿಯ ವಾಗಿರುವ ಗೋವನಕೊಪ್ಪದಲ್ಲಿ ಶ್ರೀ. ಕರಮೋಶ ಕರ ವ್ಯಾಖ್ಯಾನವಾಗಿ, ಗೋವನಕೊಪ್ಪ, ಬುದ್ರಕಟ್ಟಿ, ಬೆಳ್ಳಕಟ್ಟಿ, ಜೋಗಿವಾಡದ ಜನರು ಸುಮಾರು ಮುನ್ನೂರು ಗಿಡಗಳನ್ನು ಕಡಿದರು. ಒಟ್ಟು ಈ ಸೀಮಾಂತರದಲ್ಲಿ ಮೂರು ದಿವಸಗಳಲ್ಲಿ ಒಂದು ಸಾವಿರ ಗಿಡಗಳು ಬಿದ್ದವು.

ನೋಟೀಸು

—(೦)—

ರಾ|| ರಾ|| ನಾಗಪ್ಪಾ ಪೇಟ್ಪಾ ಲಕ್ಷ್ಮೇಶದ ಹುಬ್ಬಳ್ಳಿ ಇವರಿಗೆ-

ನಾನು ಕೆಳಗೆ ಸಹಿ ಮಾಡಿದ ಕೆಂಚಪ್ಪಾ ಶಿವಪ್ಪಾ ಲಂಬಿ ಸಾ|| ಶಿವಳ್ಳಿ ತಾಲ್ಲುಕ ಧಾರವಾಡ ಈ ನೋಟೀಸಿನಿಂದಾ ತಿಳಿಸುವದೇನಂದ್ರೆ-

ಈಗ ಅಜಮಾಸ ೩ ವರ್ಷಗಳ ಹಿಂದೆ ನನಗೆ ಸಾಲ ಬೇಕಾದ್ದರಿಂದ ನಿನಗೆ ಕೇಳಲು ಹೆಚ್ಚಿಗೆ ರಕಮಿಗೆ ಬರಕೊಡಬೇಕೆಂದು ನೀನು ಹೇಳಿದ್ದರಿಂದ ನಮ್ಮ ನಿಮ್ಮ ನಡುವೆ ೧೨೦೦ ರೂಪಾಯಿಗಳನ್ನು ತಕ್ಕೊಂಡು ೧೫೦೦ ರೂಪಾಯಿಕ್ಕೆ ತೋರಪತ್ರಿ ಕಾಗದಾ ಬರಕೊಡಬೇಕೆಂದು ಗೊತ್ತಾಯಿತು ನಂತರ ಕರಾರದ ಅನ್ವಯ ೧೫೦೦ ರೂಪಾಯಿದ ತೋರಪತ್ರಿ ಕಾಗದಾ ಬರಿಸಿಕೊಂಡು ಸಬ್‌ರಜಿಸ್ಟ್ರರ ಸಮಕ್ಷಮ ೧೫೦೦ ರೂಪಾಯಿಗಳನ್ನು ಕೊಟ್ಟಂತೆ ಮಾಡಿ ೩೦೦ ರೂಪಾಯಿ ಪರತ ತೆಗೆದುಕೊಂಡಿ ಅಂದರೆ ನನಗೆ ಒಟ್ಟಿಯು ಬಾಬತ್ತು ೧೨೦೦ ರೂಪಾಯಿ ಮುಟ್ಟಿದವು ನಮ್ಮ ನಿಮ್ಮ ನಡುವೆ ಒಡ್ಡಿ ಕರಾರು ನೂರಕ್ಕೆ ತಿಂಗಳಿಗೆ ೧ ರೂಪಾಯಿದಂತೆ ಗೊತ್ತಾಗಿತ್ತು ಆದರೆ ಕಾಗದದಲ್ಲಿ ೧।೧೨ ರೂಪಾಯಿ ಕಾಣಿಸಬೇಕೆಂತಾ ಗೊತ್ತಾದ ಪ್ರಕಾರ ಅದರಲ್ಲಿ ಹಾಗೆ ಕಾಣಿಸಿರುತ್ತದೆ ಮುಂದೆ ನಾನು ಸದ್ರಿ ಕಾಗದದ ಬಾಬತ್ತು ೧೯೨೮ನೇ ಇಸ್ವಿಯಲ್ಲಿ ೫೦೦ ರೂಪಾಯಿ ಮತ್ತು ೧೯೨೯ನೇ ಇಸ್ವಿಯಲ್ಲಿ ೪೫೦ ರೂಪಾಯಿಗಳನ್ನು ಈ ಪ್ರಕಾರ ಪರತ ಕೊಟ್ಟಿದ್ದೆಂಟು ಅವುಗಳ ಬಾಬತ್ತು ನೀನು ಪಾವತಿ ಕೊಟ್ಟಿರುತ್ತೀದಿ ಮುಂದೆ ಈಗ ಅಜಮಾಸ ೨ ತಿಂಗಳಗಳ ಹಿಂದೆ ೪೫೦ ರೂಪಾಯಿಗಳನ್ನು ಪರತ ಕೊಟ್ಟೆನು ಮತ್ತು ಒಹ.ತೇಕ ನಿನ್ನ ಹಣ ಮುಟ್ಟಿದಂತಾಯಿತು ನನ್ನ ಕಾಗದಾ ಪರತ ಕೊಡು ಅಂತಾ ಕೇಳಿದೆನು ಅದಕ್ಕೆ ನೀನು ರೂ ಮತ್ತು ಲೆಖ್ಖಾ ಮಾಡಿ ಎಷ್ಟಾಗುತ್ತದೆಂಬದನ್ನು ನೋಡಿ ನಿನ್ನ ಕಾಗದಾ ಪರತ ಕೊಡತೇನಿ ೪ ದಿವಸ ಬಿಟ್ಟು ಬಾ ಅಂತಾ ಹೇಳಿದಿ ನಂತರ ೪೫೦ ರೂಪಾಯಿಗಳ ಬಗ್ಗೆ ಪಾವತಿಯನ್ನಾದರೂ ಕೊಡು ಅಂತಾ ಕೇಳಿದರೆ ಅದಕ್ಕೆ ನಿನ್ನ ಕಾಗದವನ್ನೇ ಕೊಟ್ಟು ಬಿಡುತ್ತೇವೆ ಪಾವತಿ ಏನೂ ಅವಶ್ಯವಿಲ್ಲಾ ಅಂತಾ ಅಂದಿ ಮುಂದೆ ನಾನು ಈ ವಳಗಾಗಿ ೪-೬ ಸಾರೆ ಒಂದು ಸನ್ನ ಲೆಖ್ಖಾ ಮಾಡಿ ನಿನಗೆ ಬರತಕ್ಕದ್ದನ್ನು ತಗೊಂಡು ನನ್ನ ಕಾಗದಾ ಪರತ ಕೊಡಲಿಕ್ಕೆ ಕೇಳಿದರೆ- ಇನ್ನೂ ವರೆಗೆ ಕೊಡಲಿಲ್ಲಾ ಅದ್ದರಿಂದಾ ಈ ನೋಟೀಸು ಕೊಡುವ ಭಾಗ ಬಿತ್ತು ಈ ನೋಟೀಸು ಮುಟ್ಟಿದ ೭ ದಿವಸಗಳಲ್ಲಿ ನಿನಗೆ ಏನಾದರೂ ಬರತಕ್ಕ ಹಣಾ ಇದ್ದರೆ ತಗೊಂಡು ನನಗೆ ಅಥವಾ ನನ್ನ ತರ್ಫೆ ಎಂ. ಎನ್. ಆರ್. ಪಾಟೀಲ ವಕೀಲ ಹುಬ್ಬಳ್ಳಿ ಇವರಿಗೆ ನಾನು ಬರಕೊಟ್ಟ ಕಾಗದಾ ಬರಫಾಯಿ ಮಾಡಿ ಕೊಡಬೇಕು ಇದಕ್ಕೆ ತಪ್ಪಿದರೆ ಕಾಯದೆಪ್ರಕಾರ ಇಲಾಜ ಮಾಡಲಾಗುವದು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇರುತ್ತದೆ ತಿಳಿಯೋದು ತಾರೀಖು ೭೮-೫-೧೯೩೦ನೇ ಇಸ್ವಿ

ಸಹಿ- ಕೆಂಚಪ್ಪಾ ಶಿವಪ್ಪಾ ಲಂಬಿ

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂ ವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜ್ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು ಬಿಳಿ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ರಾಮಬಾಣವು. ಈ ಔಷಧವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅಮೃತ ಪ್ರಭಾವ! ಪ್ರತ್ಯಕ್ಷ ಅನೇಕ ಪ್ರಸಂಗಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆವೆಚ್ಚ ಬೇರೆ. ೩ ರೂಪಾಯಿಗಳನ್ನು ಮನಿಆರ್ಡರದಿಂದ ಕಳಿಸಿ, ವ್ಹೀ.ಪ್ಹೀ. ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಡಾ. [illegible] ದೀಕ್ಷಿತ
C/o ಮುಕ್ತಾಂಬರ ಧಾರವಾಡ.

[illegible]

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಯರು ಜನರತ ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿವು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿ ತಿಂಗಳ ಸ್ಥಳಾ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೋ ಅಪ್ಪಿಡಿ ದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಿಗಿ.
ಪುನಸಘರಕಾರ್ಖಾನೆ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧) ಧಾರವಾಡ ಶುಕ್ರವಾರ ತಾರೀಖು ೩೦ ನೇ ಮೇ ೧೯೩೦ (ಸಂಚಿಕೆ ೧೩೨

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

GENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆದುಕೊಳ್ಳಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲ್ಪಟ್ಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಜತಾಪಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟಿಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಜೇಷ್ಠ ಶುದ್ಧ ೩

ಆ ವಿಜಯಂ ಶ್ರೀಕರಮಕ್ಕು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ಶ
ರ್ದ "ವಿಜಯಮಂ" ಶ್ರೀಕರಮುಂ ।
ಸಾವಿಹಿತಂಗಳ ವಿಷಯಗಳವತ್ಯಸಿ ಸಾಮ್ರಾ||

ಭಾರತಮಂತ್ರಿ

ಮಿ. ಬೆನ್ನ ವೆಜ್ವುಡ್ಡಸಾಹೇಬರ ನಿರಾಶೆಯ ಭಾಷಣ.

ಸೋಮವಾರ ದಿವಸ ಪಾರ್ಲಮೆಂಟ ಸಭೆಯಲ್ಲಿ ಭಾರತಮಂತ್ರಿ ಮಿ. ಬೆನ್ನ ವೆಜ್ವುಡ್ಡಸಾಹೇಬರು ಹಿಂದುಸ್ಥಾನದ ಪ್ರಸ್ತುತದ ಚಿಂತಾಜನಕವಾದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡುವರೆಂದು ಪ್ರಸಿದ್ಧವಾಗಿತ್ತು. ಭಾಷಣ ಕೇಳಲು-ಪಾರ್ಲಮೆಂಟಿನ ಬೆಂಚಿನಲ್ಲಿ ಅಲ್ಲಿರುವ ಹಿಂದೀ ಮಂಡಳಿ ಬಹು ಆತುರರಾಗಿ ಕೂಡಿದರು. ಸಾಹೇಬರ ಭಾಷಣ ಕೇಳಿ, ಯುರೋಪಿಯನ್ನರು ಆನಂದಪಟ್ಟರು. ಹಿಂದೀ ಜನರು ನಿರಾಶೆಯ ಉದ್ಗಾರ ತೆಗೆದರು. ಆಂಗ್ಲ ಸಭೆಯು ಸ್ವಾತಂತ್ರ್ಯದ ಚಳುವಳಿಯನ್ನು ಹತ್ತಿಕ್ಕುವದರಿಂದ, ಹಿಂದುಸ್ಥಾನವು ತಮ್ಮ ಕೈಬಿಟ್ಟು ಹೋಗುವದೆಂದೇ ಬಹು ಜನ ಯುರೋಪಿಯನ್ನರು ತಿಳಿಯುತ್ತಿದ್ದಾರೆ. ಕ್ರಾಂತಿಗೆ ಯಾವ ಕಾರಣವೂ ಇಲ್ಲೆಂದು ಮಂತ್ರಿಯವರು ಇವರಿಗೆ ನಂಬಿಗೆಯನ್ನು ಹೇಳಿದ್ದಾರೆ. ಹಿಂದುಸ್ಥಾನದಲ್ಲಿ ಪ್ರಕ್ಷೋಭವು ಸ್ವಲ್ಪ ಗುಜರಾಥದಲ್ಲಿ ಮಾತ್ರ ಅಸಂತೋಷವುಂಟು. ಪಟ್ಟಣಗಳಲ್ಲಿ ದೊಂಬಿ ಆಗುತ್ತಿರುವವು. ಸೈನ್ಯದ ಪ್ರಾಂತದ ಹೊರತು ಎಲ್ಲಿಯೂ ಲಷ್ಕರಿ ಕಾಯದೆಯನ್ನು ಜಾಹೀರ ಮಾಡಲಿಲ್ಲ. ದೇಶವೆಲ್ಲ ಶಾಂತವಾಗಿರುತ್ತದೆ ಇಷ್ಟೇ ಅಲ್ಲದೆ, ಮುಸಲ್ಮಾನರೂ ಸಾಮಾನ್ಯವಾಗಿ ಹಳ್ಳಿಗಳ ಜನರೂ ಸರಕಾರಕ್ಕೆ ಅನುಕೂಲವಾಗಿಯೇ ಇದ್ದಾರೆ. ದೇಶೀ ಸಂಸ್ಥಾನದವರೂ ಪೋಲೀಸರೂ ಸರಕಾರಕ್ಕೆ ಸಹಾಯವಾಗಿ ಬಹಳ ಧೈರ್ಯದಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಹಿಂದುಸ್ಥಾನವು ಕೈಬಿಟ್ಟು ಹೋಗುವದೆಂದು ಭಯದ ಕಾರಣವೇ ಇರುವದಿಲ್ಲ. ಸರಕಾರದವರು ಪ್ರಯೋಗಿಸಿದ ದಬ್ಬಾಳಿಕೆಯ ಉಪಾಯಗಳು ಅವಶ್ಯಕ್ಕಿಂತ ಹೆಚ್ಚಾಗಿರುವದೇ ಇಲ್ಲ. ಈ ದಬ್ಬಾಳಿಕೆಯ ಕಾಯದೆಯನ್ನು ಆದಷ್ಟು ಬೇಗನೆ ರದ್ದು ಮಾಡಬೇಕೆಂದು ನಮ್ಮ ಅಪೇಕ್ಷೆಯುಂಟು. ಇದರ ಎಲ್ಲ ಭಾರವು ಚಳವಳಿ ಮಾಡುವವರ ತಲೆಯ ಮೇಲೆಯೇ ಉಂಟು. ಏಕೆಂದರೆ ಕಾಯದೆಭಂಗದ ಚಳವಳಿಯನ್ನು ಬಂದು ಮಾಡುವ ಕೆಲಸವು ನಮ್ಮದಲ್ಲ. ಚಳವಳಿಗಾರರದೇ ಇರುತ್ತದೆ. ದಂಗೆ ಮತ್ತು ದಬ್ಬಾಳಿಕೆಯ ಕಟ್ಟು ಹೊರಟ ಕೂಡಲೆ- ಸ್ವತಂತ್ರ ಪಕ್ಷದ ಕೂಲಿಕಾರ ಮೆಂಬರರು "ಕೂಲಿಕಾರ ಸರಕಾರದ ಕರ್ತವ್ಯವೇನೆಂದು" ಪ್ರಶ್ನೆ ಮಾಡಲು, ಮಿ. ಬೆನ್ನಸಾಹೇಬರಿಗೆ ಬಹಳ ಸಿಟ್ಟು ಬಂತು. ರಾಜ್ಯಕಾರಭಾರ ಮಾಡುವದು ಕೂಲಿಕಾರ ಸರಕಾರದ ಕರ್ತವ್ಯವಾಗಿರುತ್ತದೆಂದು ಬಿಗಿದ ಉತ್ತರ ಕೊಟ್ಟರು. ಹಾಗೂ, ಮುಸಲ್ಮಾನ, ಅಲ್ಪ ಸಂಖ್ಯಾತ ಮತದವರ ಹಕ್ಕುಗಳ ಸಂರಕ್ಷಣೆ ಮಾಡಬೇಕೆಂದೂ, ಈ ನಿರ್ಣಯವಾದ ಹೊರತು ಸ್ವರಾಜ್ಯ ಯೋಜನೆಯು ಕೊನೆಯ ನಿರ್ಣಯ ಹೊಂದಲಾರದೆಂದೂ ಸಾಹೇಬರು ಹಾಡಿದ್ದನ್ನೇ ಹಾಡಿ, ಹಿಂದುಸ್ಥಾನಕ್ಕೆ ಆಶೆ ಹುಟ್ಟುವಂಥ ಮುಂದಿನ ಉದ್ಗಾರ ತೆಗೆದರು.

"ಹಿಂದುಸ್ಥಾನವು ವಸಾಹತಿಕ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಹೊಂದುವದೇ ಇಂಗ್ಲಿಷ ಸರಕಾರದ ಅಪೇಕ್ಷೆಯು. ದಾರಿಯಲ್ಲಿ ಅನೇಕ ಅಡಚಣಿಗಳಿರುವವು. ಅವೇನೂ ನೀಗದವಲ್ಲ. ಅವುಗಳ ಪರಿಹಾರ ಮಾಡಿಕೊಳ್ಳುವದು ಮುಖ್ಯವಾಗಿ ಹಿಂದೀ ಜನರ ಕಯ್ಯಲ್ಲಿಯೇ ಇರುವದು. ಒಮ್ಮತವಾದ ಒಂದು ಒಡಂಬಡಿಕೆಯಾದ ಕೂಡಲೆ- ಯಾವ ಬ್ರಿಟಿಶ ಸರಕಾರವೂ ಅವರ ಸ್ವರಾಜ್ಯ ವಿಷಯಕವಾದ ಧ್ಯೇಯವು ಪೂರ್ಣವಾಗುವದನ್ನು ತಡೆಯಲು ಸಮರ್ಥವಾಗಲಾರದು."

ನೋಡತಕ್ಕವರಿಗೆ ಈ ಉದ್ಗಾರವು ಅತ್ಯಂತವಾಗಿ ಆಶಾಜನಕವಾಗಿ ತೋರುವದು. ಆದರೆ ಇದು ವಚನಕ್ಕೆ ಬಹುತರವಾದ್ದು ಎಂಬಾತ ಈವರೆಗೆ ಬಂದ ಅನುಭವವಾಗಿದೆ. ಹಿಂದೀ ಜನರು ರಾವುಂಡ ಟೇಬಲಕ್ಕೆ ಹೋಗಬೇಕೆಂದು ತಿಳಿಯುವರು- ಆದರೆ ಸ್ವರಾಜ್ಯ ಸಂಪಾದಿಸಿಕೊಂಡೇ ಬರುವರೆಂದು ಯಾರು ನಂಬಿಗೆಯಿಂದ ಭವಿಷ್ಯ ಹೇಳುವರು? ಇಟ್ಟರದವರು ಲಂಡನಕ್ಕೆ ಹೋಗಿ ಬಂದರು. ಅವರ ಅನುಭವ ನೋಡಿರಿ; ಹೋಗುವದಕ್ಕಿಂತ ಕೊನೆಯೇ ಶ್ರೇಷ್ಠವೆಂದು ತಿಳಿಕೊಂಡಿದ್ದಾರೆ. ಆದ್ದರಿಂದ ಭಾವೀ ಪರಿಸ್ಥಿತಿಯ ದೆಸೆಯಿಂದ ದೊಡ್ಡ ಆಶೆ ಮಾಡುವಂತಿರುವದೇ ಇಲ್ಲ. ಆದ್ದರಿಂದಲೇ ಮಹಾತ್ಮರು ಸ್ವಾತಂತ್ರ್ಯವೆನಿಸುವಂಥ ಹಕ್ಕಿನ ವಿಷಯ ಕೇಳಿದರು. ಅನಂತರ ಉಳಿದ ವಿಷಯಗಳ ವಿಚಾರವನ್ನು ಆಗ ಪ್ರಸಂಗವಾಗಿ ಮಾಡಿರೆಂದು ಹೇಳುವದು ತಿಳುವಳಿಕೆಯಲ್ಲವೆ? ಸತ್ಯಾಗ್ರಹದವರು ತೃಪ್ತರಾಗುತ್ತಾರೆ. ಸಾಹೇಬರ ಭಾಷಣವಿದು ಪಾರ್ಲಮೆಂಟಿನಲ್ಲಿ ಕುಳಿತಿರುವ ಹಿಂದುವಾಳರ ನಿರಾಶೆಯನ್ನುಂಟು ಮಾಡಿದಂತೆ, ಈ ದೇಶದ ಮುಖಂಡರೂ ನಿರಾಶೆಗೊಂಡಿದ್ದಾರೆ. ಈ ನಿರಾಶೆಯು ಕಡೆಗೆ ನಿಜವಾಗಿ ಖಂಡಿತವಾದ ಮತ್ತೆ ಕೊಟ್ಟರೆ ನ್ಯಾಯತಿಗೆ ಬರುವರೆಂದು ಹೇಳಬೇಕು. ಈ ಸ್ವರಾಜ ಇವರೂ ಗಟ್ಟಿ ಹಿಡಿದರೆ- ದಬ್ಬಾಳಿಕೆ ಹೋಗುವದು. ಪೋಲೀಸರ ಶಿಸ್ತಿನ ಪ್ರಯೋಗ ಹೋಗುವದು. ಸ್ವರಾಜ್ಯ ಸಿಗುವದು.

ವಿಲಾಯತಿಯ ಬಟ್ಟೆಗೆ ಬಹಿಷ್ಕಾರ.

—(೮)—

ಈ ದೇಶದಲ್ಲಿ ನಡೆದ ಬಹಿಷ್ಕಾರದ ದೆಸೆಯಿಂದ ಮಿ. ಬೆನ್ನಸಾಹೇಬರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವೇನೆಂದರೆ-

"ಸಾಮ್ರಾಜ್ಯದೊಳಗಿನ ಒಂದು ದೇಶವು ಮತ್ತೊಂದು ದೇಶವನ್ನು ಕುರಿತ ಬಹಿಷ್ಕಾರದ ಅಧಿಕಾರವುಂಟೆ? ಹಿಂದುಸ್ಥಾನದ ಜನರು ನಡೆಸಿದ ಪರದೇಶಿ ಬಟ್ಟೆಗಳ ಮೇಲಿನ ಬಹಿಷ್ಕಾರವನ್ನು ಶಕ್ತಿಯಿಂದ ಮುರಿಯುವದು ಶಕ್ಯವಿಲ್ಲ. ಸರಕಾರವು ಬೇಕಾದಷ್ಟು ಬಲಾಢ್ಯವಿದ್ದರೂ, ನೀವು ವಿಲಾಯತಿ ಸರಕನ್ನೇ ಕೊಳ್ಳಬೇಕೆಂಬ ಬಲವಂತಿಕೆಯನ್ನು ಹಿಂದುಸ್ಥಾನದವರ ಮೇಲೆ ಹೇಗೆ ಮಾಡಬೇಕು? ಹಿಂದುಸ್ಥಾನಕ್ಕೆ ವಸಾಹತಿಕ ಸ್ವರಾಜ್ಯ ದೊರೆತರೂ ವ್ಯಾಪಾರದೃಷ್ಟಿಯಿಂದ ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ದಕ್ಕುವ ಲಾಭಕ್ಕೆ ಬಾಧೆ ಬರಲಾಗುತ್ತದೆಂಬ ನಿಯಮವಿಲ್ಲ. ಸಾಮೋಪಚಾರ ಮತ್ತು ಸ್ನೇಹದಿಂದಲೇ ವ್ಯಾಪಾರದ ಅಭಿವೃದ್ಧಿಯಾಗುತ್ತದೆಂಬುದನ್ನು ಬ್ರಿಟಿಶರು ಲಕ್ಷ್ಯದಲ್ಲಿಡಬೇಕು."

ಹಿಂದುಸ್ಥಾನದ ತಲೆಯ ಮೇಲೆ ಬಂದು ಬೀಳುತ್ತಿರುವ ಸ್ಥಿತಿಯಿಂದ ತಾವು ಬೇಗನೆ ಅರಿಯಲಾರದವರೆಂಬುದನ್ನು ಸ್ವತಃ ಬೆನ್ನಸಾಹೇಬರು ಸ್ಪಷ್ಟವಾಗಿ ಒಪ್ಪಿರುತ್ತಾರೆಂಬುದು ಸಮಾಧಾನದ ಸಂಗತಿಯು. ಈಗಿನ ಚಳವಳಿಯು ಪಟ್ಟಣಗಳಲ್ಲುಂಟು. ಹಳ್ಳಿಯಲ್ಲಿರುವದಿಲ್ಲೆಂದು ಸಾಹೇಬರು ತಿಳಿದುಕೊಂಡು ಮನಸಿಗೆ ಸಮಾಧಾನ ಹಚ್ಚಿಕೊಂಡಿದ್ದಾರೆ. ಚಳವಳಿಯು ಪಟ್ಟಣಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚಿದ್ದು, ವಿಲಾಯತಿಯ ವ್ಯಾಪಾರವನ್ನು ಸಂಪೂರ್ಣಕ್ಕೆ ತರಲು ಹಳ್ಳಿಗಳೇ ಮುಂದೊರೆದಿರುತ್ತವೆ. ಸಾಹೇಬರು ವ್ಯಾಪಾರ ದೃಷ್ಟಿಯಿಂದ ಹಿಂದೀ ಜನರ ಕೂಡ ಸಾಮೋಪಚಾರದಿಂದ ನಡೆಯಬೇಕೆಂದು ಉಪದೇಶ ಮಾಡಿದ ಹಾಗೆ, ರಾಜಕೀಯ ಜನರ ಕೂಡ ಸಾಮೋಪಚಾರದಿಂದೇಕೆ ನಡೆಯಬಾರದು? ದಬ್ಬಾಳಿಕೆಯ ಭೂತವನ್ನೇಕೆ ಆಶ್ರಯಿಸಬೇಕು?

ಸರಕಾರದಿಂದಾದದ್ದೊಂದು ಆಶ್ಚರ್ಯ !!

—(೦)—

ಮಿ. ಸ್ಲೇಕೋಂಬ ಸಾಹೇಬರು ತುರಂಗದಲ್ಲಿ ಮಹಾತ್ಮರನ್ನು ಕಂಡು, ಅವರ ಕೂಡ ರಾಜಕೀಯ ವಾದ ಒಡಂಬಡಿಕೆಯು ಒಗ್ಗಿ ಮಾಡಿದ ಭಾಷಣಕ್ಕೆ ಹಿಂದಿನ ಸರಕಾರದವರು ಕೊಟ್ಟ ಅಪ್ಪಣೆಯು ಆಶ್ಚರ್ಯಕಾರಕ; ಇಂಥ ಅನುಚಾರವನ್ನು ಈನಂತರ ಮಾಡಲಾಗದೆಂದು ಮಿ. ಬೆನ್ವುಡ್ ಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಹೇಳಿದ್ದಾರೆ. ಗುಗಲ ಶಾ ಚ್ಛಾನನ್ನು ಜದ್ದಿನಾರ ಮಾಡಿ, ಜೇಲ್ಖಾನೆಯಲ್ಲಿ ಟ್ಟಿರುವಾಗ ಅವರ ಕೂಡ ಸಂಧಿಯ ಸಂಧಾನ ಹಚ್ಚಿದ್ದು ಇತಿಹಾಸ ಪ್ರಸಿದ್ಧವಿದೆ. ಸರಕಾರದವರು ಹೀಗೆ ಮಾಡಿದುದು ಹೊಸ ಸಂಗತಿಯೇನೂ ಇಲ್ಲ. ಆದರೆ ಅದನ್ನು ವರ್ತಮಾನಪತ್ರಗಳಲ್ಲಿ ಪ್ರಸಿದ್ಧ ಮಾಡಿದ್ದು ಮಾತ್ರ ಆಶ್ಚರ್ಯಕಾರಕವಾಯಿತೆಂದು ಯಥಾ ಪ್ರಕಾರ ಹೇಳಬಹುದು.

ಕೈದಿಗಳನ್ನು ಹೇಗೆ ನಡಿಸಿಕೊಳ್ಳಬೇಕು ?

—: :*: :—

ಕಾಯದೆಭಂಗದ ಚಳವಳಿಯಲ್ಲಿ ಹಿಡಿದ ಜನರನ್ನು ರಾಜಕೀಯ ಕೈದಿಗಳೆಂದೇ ಹಿಡಿಯಬೇಕು. ಮತ್ತು ಅವರನ್ನು ಆ ರೀತಿಯಾಗಿ ನಡಿಸಿಕೊಳ್ಳಬೇಕು. ಬೇರೆ ಕೈದಿಗಳು ತುರಂಗದಿಂದ ಓಡಿ ಹೋಗದಂತೆ ಮಾಡುವಂಥ ಕಠಿಣ ಉಪಾಯಗಳನ್ನು ಇವರ ಮೇಲೆ ಮಾಡಲಿಕ್ಕಾಗದೆಂದು ಕರ್ನಲ ವೆಜ್‌ವುಡ್ ಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಭಾಷಣ ಮಾಡಿದ್ದಾರೆ. ಇದಕ್ಕೆ ತೀರ ವಿರುದ್ಧವಾಗಿ ನಡೆದಿರುತ್ತದೆಂದು ದಿನಾಲು ಕಾಣುತ್ತಿರುವ ಸಂಗತಿಯಾಗಿದೆ.

ಹಾನಗಲ್ಲಿನಲ್ಲಿಯೂ ಈಚಲದ ಸಂಕ್ರಾಂತಿ.

—(೦)—

ಈಚಲ ಗಿಡ ಮುಟ್ಟಿದವರು, ಅವರ ನೆರಳಿಗೆ ಹೋದವರು ಸಹ ಗಿಡಗಳ ಧ್ವಂಸದಲ್ಲಿ ಸಂಪೂರ್ಣವಾಗಿ ತೊಡಗಿದ್ದಾರೆ. ಹಾನಗಲ್ಲಿನಲ್ಲಿ ಶ್ರೀ. ಅನಂತಭಟ್ಟ ಕುಂದಾಪೂರ ಇವರು ಸ್ವಯಂಸೇವಕರನ್ನೂ ಊರ ಜನರನ್ನೂ ಕೂಡಿಕೊಂಡು ಶಿಂದೀ ಗಿಡಗಳನ್ನು ಕಡಿಯಲಿಕ್ಕೆ ಪ್ರಾರಂಭಿಸಿದ್ದಾರೆ. ಕೇವಲ ತಾಲೂಕಿನ ಭೀಮನ ಹೊಲಕ್ಕೆ ಸರಕಾರದ ಕರು ದಾರಿಗುಂಟ ಬಿದ್ದಂತೆ, ಎತ್ತ ನೋಡಿದತ್ತ ನೂರಾರು ಶಿಂದಿ ಗಿಡಗಳು ದಿನಕ್ಕೆ ಡಾಗಿ ಸತ್ತು ಬಿದ್ದಿರುತ್ತವೆ. ಇವುಗಳ ನಾಶದ ಕ್ರಮವು ನಿತ್ಯದಲ್ಲಿ ನಡೆದಿರುತ್ತದೆ.

ಮುಂಬಯಿ ದಂಗೆಯ ಅನಾಹುತಿ.

—(೦)—

ಪೋಲೀಸ ಚೌಕಿ ಸುಟ್ಟರು; ಸಾಹೇಬರ ಮೋಟಾರ ಸುಟ್ಟರು.

—(೦)—

ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಬೇಕಾದಷ್ಟು ದಂಡಿನ ಮತ್ತು ಪೋಲೀಸ ಬಂದೋಬಸ್ತು ಇದ್ದರೂ, ದಂಗೆಗಾರರು ಒಂದು ಪೋಲೀಸ ಚೌಕಿಯನ್ನು ಸುಟ್ಟರು. ಮತ್ತು ಒಬ್ಬ ಸಾಹೇಬನನ್ನು ಮೋಟಾರದಿಂದ ಕೆಳಗಿಳಿಸಿ, ಮೋಟಾರ ಸುಟ್ಟರು. ಕಾಂಗ್ರೆಸ ವ್ಹಾಲಂಟಿಯರರು ಸಾಹೇಬನನ್ನು ಸುರಕ್ಷಿತವಾಗಿ ಅವನನ್ನು ಮನೆಗೆ ಮುಟ್ಟಿಸಿದರು.

ದಂಗೆಯ ನಿಷೇಧ; ಹಿಂದೂ ಮುಸಲಮಾನ ಸಭೆ

—()—( )—()—

ರೇನಾಲ್ಡ ಸಾಹೇಬರ ಸರಕಾರದ ಕೃತ್ಯದ ನಿಷೇಧ

ದಂಗೆ, ಮತ್ತು ಅದರಿಂದಾದ ಗುಂಡಿನ ಮಳೆ ಮತ್ತು ಜನಲಯವನ್ನು ನಿಷೇಧಿಸುವದಕ್ಕಾಗಿ ಹಿಂದೂ ಮುಸಲಮಾನರ ಸಭೆಯು ಕೂಡಿತ್ತು. ವೆಸ್ಲೀನಾ ಮಠಮುದಲ್ಲಿಯವರೂ ಸಭೆಗೆ ಬಂದಿದ್ದರು. ಆದರೆ ಭಾಷಣ ಮಾಡಲಿಲ್ಲ. ಮುಸಲಮಾನರು ಸಾಬರನಾತಿಯ ಫಕೀರರ ಭಾವಣೆಯಲ್ಲಿ ನೀರು, ಅವನ ಹುಕುಮು ಮನ್ನಿಸಬೇಕೆಂಬ ಭಾಷಣ ಮಾಡಿದರು. ವಿಲಾಯತಿಯಿಂದ ಬಂದಿರುವ ರೇನಾಲ್ಡ್ಸ ಸಾಹೇಬರು ಭಾಷಣವ ಮಾಡಿದರು. ಅವರ ಮಾತು ನೆರೆದ ಜನರ ಮೇಲೆ ಬಹಳೇ ಪರಿಣಾಮಕಾರಕವಾಯಿತು. ಇವರು "ಬ್ರಿಟಿಶ ರಾಜ್ಯದೊಳಗಿನ ಅನೀತಿಯ ಪ್ರಕಾರವನ್ನು ವರ್ಣಿಸಿ, ಈಗಿನ ಪರಿಸ್ಥಿತಿಯ ಜವಾಬದಾರಿಯು ಮುಖ್ಯಮಂತ್ರಿ, ಭಾರತ ಮಂತ್ರಿ ಮತ್ತು ಲಾರ್ಡ ಆಯರ್ವಿನ ಸಾಹೇಬರ ಮೇಲುಂಟೆಂದು ಸ್ಪಷ್ಟವಾಗಿ ಹೇಳಿದರು.

ಬಿರುಗಾಳಿಯಿಂದ ಉಗಿಬಂಡಿ ಬಿತ್ತು.

ಇಬ್ಬರು ಸತ್ತರು; ನಾಲ್ವರು ಘಾಯವಾದರು.

ಬಹಾರ ಪ್ರಾಂತದಲ್ಲಿ ಎಕ್ಸ್‌ಪ್ರೆಸ ಬಂಡಿಯು ಹೋಗುತ್ತಿದ್ದಾಗ, ಬಿರುಗಾಳಿಯಲ್ಲಿ ಸಿಕ್ಕಿತು. ಇಡೀ ಬಂಡಿಯು ರೂಳು ಬಿಟ್ಟು ಸರಿಯಿತು. ಎರಡು ರಬ್ಬಿಗಳಂತೂ ಬೋರ್ಲ ಬಿದ್ದವು. ಈ ಅಪಘಾತದಿಂದ ಇಬ್ಬರು ಸತ್ತರು; ನಾಲ್ವರು ಘಾಯವಾಗಿದ್ದಾರೆ.

ಪಂಡಿತ ಮಾಲವಿಯಾಯವರ ಪರಾಕ್ರಮ

—:(೦):—

ಪಂಡಿತ ಮಾಲವಿಯಾಯವರನ್ನು ಪೇಶಾವರದ ದಾರಿಯಲ್ಲಿ ಕ್ಯಾಂಬಲಪುರದಲ್ಲಿ ಹಿಡಿದಿದ್ದಾರಷ್ಟೇ; ಸರಹದ್ದಿನ ಕಾಯದೆಯು ನಮಗೆ ಹತ್ತುವದೇ ಇಲ್ಲ. ಅಪ್ರಸಿದ್ಧ ಬದಮಾಷ ಜನರ ಮಟ್ಟಿಗೆ ಇರುತ್ತದೆ. ನನಗೆ ಪೇಶಾವರಕ್ಕೆ ಹೋಗಲು ಯಾವ ಅಡ್ಡಿಯೂ ಇರುವದಿಲ್ಲೆಂದು ಇವರು ಹೇಳಿ, ಕ್ಯಾಂಬಲಪೂರದಲ್ಲಿ ಸ್ವಜನರೊಂದಿಗೆ ಮುಂದಿನ ವಿಚಾರ ಮಾಡುತ್ತಿದ್ದಾರೆ.

ಅಧ್ಯಕ್ಷ ಪಟೇಲರ ಸ್ವಾಗತ.

—(೦)—

ಲಕ್ಷ ಜನರ ಪ್ರಚಂಡ ಸಭೆ.

—(೦)—

ಅಧ್ಯಕ್ಷ ಪಟೇಲರು ಲಾಹೋರಿಗೆ ಹೋಗಿದ್ದಾರೆ. ಅಲ್ಲಿಯವರು ಅಪೂರ್ವವಾಗಿ ಇವರ ಸ್ವಾಗತ ಮಾಡಿದರು. ಮೆರವಣಿಗೆಯಲ್ಲಿ ಅಸಂಖ್ಯವಾಗಿ ಪತಾಕೆಗಳನ್ನು ಹಾರಿಸಿದರು. ಸಾಯಂಕಾಲದಲ್ಲಾದ ಸಭೆಗೆ ಲಕ್ಷ ಜನ ಕೂಡಿತ್ತು. ಶ್ರೀ. ಪಟೇಲರು—

"ಕಾಯದೆಯಿಂದ ರಾಜ್ಯ ಮಾಡುವ ಸರಕಾರವು ಎಂದೋ ಲಯವಾಗಿದ್ದು ಇದರ ಬದಲು ಹೊಡ್ಡಿ, ಗುಂಡು ಮತ್ತು ಆರ್ಡಿನನ್ಸ ಮೊದಲಾದ ಕಾಯದೆಯು ರಾಜ್ಯಭಾರ ನಡೆಸುತ್ತದೆಂದು

ಭಾಷಣ ಮಾಡಿದ್ದಾರೆ.

ತಡಕೋಡದ ಸುತ್ತಲು ಸಾವಿರ ಶಿಂದೀಗಿಡಗಳ ಧ್ವಂಸ.

—(೦)—

(ಬರೆದು ಬಂದದ್ದು)

ಕಳೆದ ೧೫ ದಿವಸಗಳಿಂದ ಧಾರವಾಡ ತಾಲೂಕ ತಡಕೋಡ ಮತ್ತು ಅದರ ಸುತ್ತಲಿನ ಗ್ರಾಮಗಳಲ್ಲಿ ಸ್ವದೇಶೀ ಜಾಗ್ರತಿಯು ಹೆಚ್ಚಾಗಿರುತ್ತದೆ. ಶ್ರೀ. ಕರಮರಕರ ವಕೀಲ, ಡಾಕ್ಟರ ಕಬ್ಬೂರ, ಶ್ರೀ. ಭೀಮರಾವ ಬೇಪೂರ, ಶ್ರೀ. ದೇವಪಿ ಬಾಬು ಮುತಾಲಿಕ ದೇಸಾಯಿ ಮುಂತಾದವರು ಬಂದು ವ್ಯಾಖ್ಯಾನಗಳ ಮೇಲೆ ವ್ಯಾಖ್ಯಾನ ಕೊಡಹತ್ತಿದ್ದರಿಂದ ಮೇಲಿನ ಬದಿಯು ಹಾರಿ ಹೋಯಿತು. ಶ್ರೀ. ಗೌಡಪ್ಪಗೌಡಾ ಲಿಂಗನಗೌಡಾ ಪಾಟೀಲ ಭಾವೀಮನಿ ಇವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯಾಗಿ, ವತನದಾರರೂ ರೈತರೂ ಖಾದೀ ಧಾರಣ; ಮತ್ತು ಶರಾಬು ಶಿಂದಿಯ ಮಾದಕ ಪದಾರ್ಥಗಳ ಪ್ರತಿಬಂಧ ಕಾರ್ಯವನ್ನು ಕೈಕೊಂಡಿದ್ದಾರೆ. ಇದೇ ಸಭೆಯಲ್ಲಿ ಶ್ರೀ. ಶಂಕರರಾವ ದೇಶಪಾಂಡೆ, ಶ್ರೀ. ರಾಮರಾವ ಹೇರಗಿವಾಲ ಮತ್ತು ಶ್ರೀ. ದೇವಪಿ ಬಾಬು ಇವರ ಪರಿಣಾಮಕಾರಕವಾದ ವ್ಯಾಖ್ಯಾನವಾಗಿ ಸೋಮವಾರ ಮತ್ತು ಮಂಗಳವಾರ ಈ ಎರಡೇ ದಿವಸಗಳಲ್ಲಿ ಇನ್ನೂರು ಈಚಲ ಗಿಡಗ

ಕೆಗ್ಗ ದನಗಳು ಅರಣ್ಯದಲ್ಲಿಯೇ ಛತ್ರಿ ಕೊಡಲಾರದೆ ಛಿಸಿದ್ದಾರೆ. ಕುರಂಗದ ರಾಜಕೀಯ ಕೈದಿಗಳಿಗೂ ಹೀಗೆ ಅವರವರ ಯೋಗ್ಯತೆಯ ಪ್ರಕಾರ ಛತ್ರಿ ಕೊಟ್ಟು, ಹೀಗೆ ಉಡು ಒಪ್ಪಿರೆಂದೇಕೆ ಹೇಳಬಾರದು ?

ಪುಣೆಯಲ್ಲಿ ಶ್ರೀ. ಕೇಳ್ಕರರು ಕಾಯದೆಭಂಗದ ಬಿಡಿ ಉಪ್ಪಿನ ಪುಡಿಕೆಯನ್ನು ನೂರು ರೂಪಾಯಿ ಕೊಟ್ಟು ಕೊಳ್ಳುಂಡು ಪುನಃ ಕಾಯದೆಭಂಗ ಮಾಡಿದರು. ಆದರೂ ಸರಕಾರದವರು ಇವರನ್ನು ಹಿಡಿಯಲೊಲ್ಲರು !!

ನೋಟೀಸಿಗೆ ಉತ್ತರಾ

ಚಿ। ರಾ। ರಾ। ಶಿವರುದ್ರಯ್ಯಾ ವೀರಭದ್ರಯ್ಯಾ ಮುಂಡರಗಿಮಠ ಸಾಕೀನ ಕುರ್ತಕೋಟಿ ತಾಲೂಕ ಗದಗ ಇವರಿಗೆ–

ಕೆಳಗೆ ಸಹಿ ಮಾಡಿದವರು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ–

ನೀನು ತಾರೀಖು ೨೪ ಜನವರಿ ೧೯೩೦ ನೇ ಇಸ್ವಿಯ ತರುಣ ಕರ್ನಾಟಕ ಪತ್ರದಲ್ಲಿ ಜಾಹೀರ ನೋಟೀಸು ಕೊಟ್ಟಿದ್ದು ಅದರೊಳಗಿನ ಯಾವತ್ತೂ ಮಜಕೂರು ಖೊಟ್ಟಿ ಇರುತ್ತದೆ ನೀನು ಇನ್ನೂ ಅಜ್ಞಾನ ಇದ್ದು ನಿನ್ನ ಮಾವನಾದ ನಿಜಲಿಂಗಯ್ಯಾ ವೀರಯ್ಯಾ ಹಿರೇಮಠ ಸಾಕೀನ ಲಿಂಗಧಾಳ ಹಾಲಿ ವಸ್ತಿ ಕುರ್ತಕೋಟಿ ಈತನ ಚಿತಾವಣಿಯಿಂದಲೂ ಮತ್ತು ನಿನ್ನ ದ್ವೇಷಿಕರ ದುರ್ಬೋಧನೆಯಿಂದಲೂ ಸದರ ನೋಟೀಸನ್ನು ನೀನು ಕೊಟ್ಟಿರುತ್ತೀ ನನ್ನ ಯಾವತ್ತೂ ಸ್ಥಾವರ ಜಂಗಮ ಆಸ್ತಿಯು ಸ್ವಸಂಪಾದಿತ ಆಸ್ತಿ ಇದ್ದು ಅದರ ಮೇಲೆ ನಿನ್ನದು ಅಗರ ನ್ನಿತ್ತಾರ್ಯರದೂ ಯಾವ ತರದ ಹಕ್ಕು ಸಂಬಂಧವಿರುವದಿಲ್ಲಾ ನೀನು ಮತ್ತು ನಿನ್ನ ಇಬ್ಬರು ತಪ್ಪಂದಿರು ನನ್ನ ಖಾಸ ಅಲ್ಪವಯ ಮಕ್ಕಳಿದ್ದು ನಿಮ್ಮ ಹಿತಚಿಂತನೆ ದೃಷ್ಟಿಯಿಂದ ನಾನು ವಸುಪ್ಪಿನವನಿದ್ದ ಮೂಲಕ ನಿನ್ನ ಮಾವನಾದ ಬಸಯ್ಯಾ ಪ್ರಭಯ್ಯಾ ಪ್ರಭಯ್ಯನವರ ಇವನು ಕೇವಲ ನಿಮ್ಮ ಹಿತಚಿಂತಕನಿದ್ದ ಮೂಲಕ ಸದ್ರಿಯವನನ್ನು ನಿಮ್ಮ ಆಸ್ತಿ ಬಚಾವಿನ ಬಗ್ಗೆ ಟ್ರಸ್ಟೀ ಎನ್ನಾಗಿ ನೇಮಿಸಿಕೊಂಡು ಅವನ ಹೆಸರಿಗೆ ಟ್ರಸ್ಟ ಪತ್ರವನ್ನು ಸಹ ಬರಕೊಟ್ಟಿರುತ್ತೇನೆ ಸದರ ಬಸಯ್ಯನನ್ನು ಟ್ರಸ್ಟೀಯನ್ನಾಗಿ ನೇಮಿಸಿಕೊಂಡ ಲಾಗಾಯತು ಈ ವರೆಗೂ ಸದ್ರಿಯವನ ತಾಬಾಕ್ಕೆ ಸ್ಥಾವರ ಅಗರ ಜಂಗಮ ಆಸ್ತಿಯನ್ನು ಕೊಡದೆ ನಿನ್ನ ಮಾವನಾದ ನಿಜಲಿಂಗಯ್ಯನ ಖಾಸ ಮಿಲಾಫಿಯಾಗಿ ಅವನ ದುರ್ಬೋಧನೆಗೆ ಕಿವಿಗೊಟ್ಟು ಅವನೂ ನೀನೂ ಕೂಡಿ ನನ್ನ ಯಾವತ್ತೂ ಜಂಗಮ ಆಸ್ತಿಯನ್ನು ಮ ಮೋಲದಿಂದ ಬಂದ ಉತ್ಪನ್ನವನ್ನು ಅಪರಾತಪರಾ ಮಾಡಲಿಕ್ಕೆ ಹತ್ತಿರುತ್ತೀರಿ ಎಂದನೆಯವದರಿಂದ ನನಗೆ ಬರತಕ್ಕ ದೇಣೆ ಮಾಲು ಬಗ್ಗೆ ದಾವಾ ಮಾಡಲಿಕ್ಕೆ ಮತ್ತು ಮನಿ ಖರ್ಚಿನ ದೃಷ್ಟಿಯಿಂದ ನಾನು ಎಂದನೇದವರಲ್ಲಿ ದೇಣೆ ಮಾಡಿರುತ್ತೇನೆ ನೀವು ನನ್ನನ್ನು ಹಲೋ ರೀತಿಯಿಂದ ಸತಿಸಿಕೊಳ್ಳದ್ದರಿಂದ ನಾನು ಗದಗಿನಲ್ಲಿಯೇ ಇರಲಿಕ್ಕೆ ಹತ್ತಿ ೩ ವರ್ಷ ಆಯಿತು ನಾನು ಸದರ ಬಸಯ್ಯನ ಹೆಸರಿಗೆ ಬರಕೊಟ್ಟ ಟ್ರಸ್ಟ ಪತ್ರವು ಪೋಕಳ ಇರದೆ ನಾನು ನಿಮ್ಮೆಲ್ಲರ ಹಿತಚಿಂತನೆ ದೃಷ್ಟಿಯಿಂದ ಬರಕೊಟ್ಟದ್ದು ಇರುತ್ತದೆ ಈ ನೋಟೀಸು ಮುಟ್ಟಿದ ೩ ದಿವಸಗಳಲ್ಲಿ ನೀನೂ ಮತ್ತು ನಿನ್ನ ಮಾವನಾದ ನಿಜಲಿಂಗಯ್ಯನೂ ಮತ್ತು ನನ್ನ ತಮ್ಮಂದಿರೂ ನನ್ನ ಯಾವತ್ತೂ ಸ್ಥಾವರ ಜಂಗಮ ಜಿಂದಗಿಯನ್ನು ನನ್ನ ತಾಬಾಕ್ಕೆ ಒಪ್ಪಿಸಿ ನನ್ನ ಮನೆಯನ್ನು ಬಿಟ್ಟು ಹೋಗಬೇಕು ಹೋಗದಿದ್ದರೆ ಇದಕ್ಕೆ ತಪ್ಪಿದರೆ ನಿಮ್ಮೆಲ್ಲರ ಮೇಲೂ ನನ್ನ ಸ್ಥಾವರ ಜಂಗಮ ಆಸ್ತಿಯ ಬಗ್ಗೆ ಮತ್ತು ನನ್ನ ಮನೆಯಿಂದ ನಿಮ್ಮೆಲ್ಲರನ್ನು ಹೊರಗೆ ಹಾಕುವ ಬಗ್ಗೆ ಫೌಜದಾರಿಯಲ್ಲಿಯಾಗಲಿ ದಿವಾಣಿಯಲ್ಲಾಗಲಿ ಕೆಲ್ಸ ನಡಿಸಲಾಗುವದು. ತಿಳಿಯೋದು

ತಾರೀಖು ೩೦ ಜನವರಿ ೧೯೩೦ ನೇ ಇಸ್ವಿ

ಸಹಿ– ವೀರಭದ್ರಯ್ಯಾ ಮುಂಡರಗಿಮಠ
ಸಾ॥ ಕುರ್ತಕೋಟಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ... ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂ... ರಾಮಬಾಣ ಔಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ... ವಾಗುವದು. ಇದೆಲ್ಲ ... ವನಸ್ಪತಿಗಳ ಅ... ಪ್ರತಾಪ! ... ವರ್ಷಗಳ ಅನುಭವ!! ಬೆಲೆ ಎರಡು ರೂಪಾಯಿ, ಅಂಚೆವೆಚ್ಚ ... ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರ...ಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ...ಬಾಯಿ ದೀಕ್ಷಿತ
C/o ... ಧಾರವಾಡ

... ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ... ಈ ಜಾಹಿರಾತನ್ನು ನೋಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸೋಯಿ.

ಮೋಟಾರ ಡ್ರಾಯ್ವರ ಆಗಬಯಸುವ ಜನರು ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾ... ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆರೆದು, ಆಗಲೇ ಅನೇಕರು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿ ತಿಂಗಳಿಗೆ ನಿಯಮಿತ ಜನರನ್ನು ತೆಗೆದುಕೊಳ್ಳುತ್ತಿರುವದರಿಂದ ಬರುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಆಖೈರದೊಳಗಾಗಿ ಹತ್ತು ಜನರು ಬೇಕಾಗಿದ್ದಾರೆ. ... ರಿಂದ ಈಗಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ... ಪತ್ರದ್ವಾರಾ ತಿಳಕೊಳ್ಳಬೇಕು.

ಶ್ರೀ. ... ಎಸ್. ಇ...
... ಧಾರವಾಡ

ಈ ... ಬಾಲ್ಯವಿವಾಹ ... ವನ್ನು ಧಾರವಾಡದಲ್ಲಿ ... ಮುದ್ರಿಸಿ ಪ್ರಸಿದ್ಧ ... ಪಡಿಸಿದರು.

ನಿತ್ಯ ಪತ್ರ # ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶನಿವಾರ ತಾರೀಖು ೩೧ ನೇ ಮೇ ೧೯೩೦ (ಸಂಖ್ಯೆ ೧೨೩

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLAN

GENTS WANTED ON LIBERAL TERMS

For further particulars apply to:-

Chief representative for Karnatak and South Marata.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿ ನಿಯಮಿತನಾಗಿ ರದ್ದಾಗದ ಪಾಲಿಸಿಯ ಆದರ್ಶ ಯೋಜನೆ ಒಂದಪಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ದಕ್ಷಿಣ ಮರಾಠಾ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಎಂಟು ಲಕ್ಷದ ಮೇಲಿರುತ್ತದೆ. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಟಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟು ಇಟ್ಟುಕೊಳ್ಳಲಾಗುದು. ದರವನ್ನು ಸಾಕ್ಷಾತ್ತಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪೆಟ್ಟಿಗೆ ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎಂ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ಶುದ್ಧ ೩

ಆ ವಿಜಯಂ ಶ್ರೀಶಪ್ರದು
ಶ್ರೀ ವಸುಮತಿಯು ನಲಿಸಿತಿ ಸುಹಿತಕರಿತೆನಗೆಂ ಬ
ದೀ "ವಿಜಯಂ" ಕೈಶಕಧುಣ।
ನಾ ವಿಹಿತಂಗೆ ವಿನುತಕರಿತ್ರಿಯು ಕಾಣ್ಯಾ।

ಪೇಶಾವರದ ಪುಂಡಾಟಿಕೆಯ

ನಿಜ ಸುದ್ದಿ ಬೈಲಿಗೆ ಬಂತು.

ದೇವರು ಮ್ಯಾಜಿಸ್ಟ್ರೆಟರ ಬಾಯಿಯಿಂದಲೇ ಸತ್ಯ ಹೇಳಿಸಿದನು.

—(೦)—

ಸಿಟಿ ಮ್ಯಾಜಿಸ್ಟ್ರೇಟರಾದ ಮಿ. ಸದುಲ್ಲಾಖಾನರು ಪೇಶಾವರದ ಜನ್ಸರ ಮುಂದೆ ಕೆಳಗೆ ಕೊಟ್ಟಂತೆ ಜವಾಬು ಕೊಟ್ಟಿದ್ದಾರೆ.

ಕಾಂಗ್ರೆಸದ ೧೧ ಜನರ ಮೇಲೆ ವಾರಂಟು ಹೊರಟಿರುತ್ತವೆಂದು ೨೩ನೆಯ ತಾರೀಖಿನ ಪ್ರಾತಃಕಾಲದಲ್ಲಿ ಕೇಳಿದೆನು. ಇವರಲ್ಲಿ ಇಬ್ಬರ ದಸ್ತಗಿರಿಯಾಗಿದ್ದಿಲ್ಲ. ಕಲೆಕ್ಟರರು ನನಗೆ ಕಾಬೂಲ ಅಗಸಿಯ ಚಾವಡಿಗೆ ಬರಲಿಕ್ಕೆ ಹೇಳಿದರು. ಅಲ್ಲಿ ಅಜಮಾಸು ೯೦ ಜನರು ನಮ್ಮ ಕಡೆಗೆ ಬರುವದನ್ನು ಕಂಡೆನು. ಅವರು ಬಂದಕೂಡಲೇ ಹೊರಟುಹೋದರು. ಯಾವ ಗದ್ದಲವೂ ಇರಲಿಲ್ಲ. ಅನಂತರ ಹತ್ತು ಗಂಟೆಯ ಸಮಯದಲ್ಲಿ ಇದಕ್ಕೂ ದೊಡ್ಡದಾದ ಆರುನೂರು ಜನರದೊಂದು ಗುಂಪು ಬಂತು. ಇವರಲ್ಲಿ ಇನ್ನೂರು ಜನರು ಹೊರಟು ಹೋದರು. ನಾಲ್ಕುನೂರು ಜನರು ಅಲ್ಲೇ ಕೂತರು. ಪೋಲೀಸರಿಗೆ ಬೇಕಾದಂಥ ಉಳಿದ ಇಬ್ಬರು ಈ ಗುಂಪಿನಲ್ಲಿದ್ದಾರೆಂದು ನನಗೆ ಹೇಳಿದರು. ನಾನು ಅವರನ್ನು ಕರೆದೆನು. ಅವರು ತಾವಾಗಿ ನಮ್ಮ ವಶವಾಗಲು ಆಗ ನಾನು ಡೆಪುಟಿ ಕಮೀಶನರರಿಗೆ ದಂಡು ತರಿಸುವ ಅಗತ್ಯವಿಲ್ಲೆಂತಲೂ ದಂಡು ಬಂದರೆ ಗೊಂದಲವೇಳುವದೆಂದೂ ಹೇಳಿದೆನು. ಪೋಲಿಸಸಾಹೇಬರಿಗಂತೂ ಇದೇ ಇದೇ ಹೇಳುತ್ತಾ ಇದ್ದನು. ಆದರೂ ದಂಡು ಹೊರಟಿತೆಂಬ ಸುದ್ದಿ ಬಂತು. ನಾನು ಚಾವಡಿಯ ಮಾಳಿಗೆಯ ಮೇಲೆ ಹತ್ತಿದ್ದೆನು. ಅ॥ ಪೊ॥ ಸ॥ ಸಾಹೇಬರು ಕುದುರೆಯ ಮೇಲಿಂದ ಬರುತ್ತಿರುವದನ್ನು ಕಂಡೆನು. ಕೆಲವರು ಅವನ ಮುಖೋರ್ ಕೂಗುತ್ತಿದ್ದರು. ಆದರೆ ಕಲ್ಲೊಗೆಯುತ್ತಿದ್ದಿಲ್ಲ. ಕೂಡಲೆ ನಾನು ಕೆಳಗಿಳಿದು ಬಂದು ಕಲೆಕ್ಟರಸಾಹೇಬನನ್ನು ಕಂಡು, ಅ॥ ಪೊ॥ ಸಾಹೇಬನು ಹೇಳುವದನ್ನು ನಂಬಬೇಡಿರಿ. ಕಲ್ಲೊಗೆದರೆಂಬ ಆರೋಪ ಸುಳ್ಳೆಂದು ಹೇಳಲು ಟೆಲಿಫೋನಿನ ಹತ್ತರ ಹೋದೆನು. ಆವರೆ ಅವರು ಎಲ್ಲಿದ್ದಾರೆಂಬ ತಪಾಸು ಹತ್ತಲಿಲ್ಲ. ಕುರು ಹೊತ್ತಿನ ನಂತರ ಸಾಹೇಬರು ದಂಡು ಸಹಿತ ಬಂದರು. ಚಾವಡಿಯ ಕೆಳಗಿಳಿದೆನು. ಮೂರು ಕವಚದ ಬಂಡಿಗಳನ್ನೂ ಸಾಹೇಬರನ್ನೂ ಕಂಡೆನು. ಬಂಡಿಯ ಬುಡದಲ್ಲಿ ಇಬ್ಬರು ಹುಡುಗ ಜನರು ಸಿಕ್ಕಿದ್ದರು. ಕವಚದ ಬಂಡಿ ಸರಿಸಿರಿ. ಜನರನ್ನು ಹೊರಗೆ ತೆಗೆಯುತ್ತೇವೆಂದು ಜನರು ಕೂಗಿದರು. ಬಂಡಿ ತೆಗೆಯುದಾಗಲು ಕೂಡಿದ ಜನರು ಕಲ್ಲೊಗೆಯಲಾರಂಭಿಸಿದರು. ಒಂದು ಕಲ್ಲು ಕಲೆಕ್ಟರರಿಗೆ ಬಡಿಯಿತು. ಇ[illegible]ನ್ನು ಚಾವಡಿಯಲ್ಲಿ ಕರೆತಂದರು. ನಂತರ ಜನರನ್ನು ಚದರಿಸಲು ಇಂಗ್ರೇಜಿ ಸೈನ್ಯದೊಂದಿಗೆ ಜನ ಹೊರಟೆನು. ಸೈನ್ಯ ತೆಗೆಯಿರಿ. ನಾವು ಹೋಗುತ್ತೇವೆಂದು ಜನರು ನನಗೆ ಉತ್ತರ ಕೊಟ್ಟರು. ಅಷ್ಟರಲ್ಲಿ ಕವಚದ ಬಂಡಿ ಬಂದು, ಗುಂಡು ಹಾರಿಸಿತು. ಪ್ರಾರಂಭದಲ್ಲಿ ಜನರ ಗುಂಪು ಯಾವ ಸ್ಥಾವರ ಜಂಗಮ ಆಸ್ತಿಯನ್ನು ನಾಶಪಡಿಸಲಿಲ್ಲ. ಮತ್ತು ಜೆಕಾಯದೇಶೀರವಾಗಿ ಗುಂಡ ಪುಂಡತನದಿಂದ ನಡೆಯಲಿಲ್ಲ. ಸೈನ್ಯ ಬರುವ ಮೊದಲು ಜನರು ಶಾಂತ ಮತ್ತು ಸಮಾಧಾನವೃತ್ತಿಯುವರಾಗಿದ್ದರು. ಇಬ್ಬರ ಮೇಲೆ ಕವಚದ ಬಂಡಿ ಹಾದದ್ದರಿಂದಲೇ ಜನರು ಸಂತಾಪಗೊಂಡರು. ಮಾಳಿಗೆಗಳ ಮೇಲಿಂದ ಕಲ್ಲು ಇಟ್ಟಂಗಿಗಳು ಬರಲಿಲ್ಲ. ಸಂದಿಗಳಿಂದ ಬರುತ್ತಿದ್ದವು.

ಸೊಲ್ಲಾಪೂರದ ಲಷ್ಕರೀ ಕಾಯದೆ

ಕಾಯದೆಭಂಗ.

—:(೦):—

ಸೊಲ್ಲಾಪೂರದಲ್ಲಿ ರಾಷ್ಟ್ರೀಯ ನಿಶಾನೆ ಹಿಡಕೊಂಡು ಹೋದ ಪುಣೆಯ ಮೂವರಿಗೆ ಆರಾರು ತಿಂಗಳ ಶಿಕ್ಷೆಯಾಯಿತು. ಇವರ ನಂತರ ಮುಂಬಯಿ ಮೊದಲು ಮಾಡಿಕೊಂಡು, ಅನೇಕ ಸ್ಥಳಗಳಿಂದ ಕರುಣ ಸ್ವಯಂಸೇವಕರು ಲಷ್ಕರೀ ಕಾಯದೆಯ ಹುಕುಮನ್ನು ಮುರಿಯಲು ಅಲ್ಲಿಗೆ ಪ್ರಯಾಣ ಮಾಡುತ್ತಿದ್ದಾರೆ. ಮೊನ್ನಿನ ದಿವಸ ಮುಂಬಯಿಯಿಂದ ೩೩ ಜನರು ಸೊಲ್ಲಾಪೂರಕ್ಕೆ ಹೋದರು.

ಪಾರ್ಲಮೆಂಟ ಸಭೆಯಲ್ಲಾದ ಭಾಷಣಗಳೂ, ಅವುಗಳ ಮೇಲೆ ಅಭಿಪ್ರಾಯಗಳೂ

—(೨)—

ಮಿ. ಬ್ರಾಕವೇ–

ಹಿಂದುಸ್ಥಾನದಲ್ಲಿ ನಡೆದ ದಬ್ಬಾಳಿಕೆಯನ್ನು ಅತ್ಯಂತವಾಗಿ ನಿಷೇಧಿಸುತ್ತೇನೆ. ರಶಿಯನರು ಹಿಂದುಸ್ಥಾನದಲ್ಲಿ ಅಸಂತೋಷವನ್ನು ಹಬ್ಬಿಸಲಿಕ್ಕೆ ಕಾರಣವೇ ಇಲ್ಲ. ಏಕೆಂದರೆ– ಮಾಸ್ಕೋಕ್ಕಿಂತ ಹೆಚ್ಚಾಗಿ ಹಿಂದುಸ್ಥಾನದಲ್ಲಿಯೇ ಅಸಂತೋಷವುಂಟು. ಗಾಂಧಿಯಂಥ ಜಗತ್ತಿನಲ್ಲಿ ಶ್ರೇಷ್ಠ ಪುರುಷರನ್ನು ತುರಂಗದಲ್ಲಿ ಹಾಕಿದ ಸರಕಾರವನ್ನು ಎಷ್ಟು ಹಳಿದರೂ ಅಷ್ಟು ಕಡಿಮೆಯೇ. ಸರಕಾರವು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟು ಬಿಡಬೇಕು. ಅದರ ಘಟನೆ ಮಾಡುವ ಮಟ್ಟಿಗೆ ತಾತ್ಪುರತ ಬೇರೆ ಪರಿಷತ್ತನ್ನು ಕೂಡಿಸಬೇಕು. ಎಲ್ಲ ರಾಜಕೀಯ ಕೈದಿಗಳಿಗೆ ಮಾಫೀ ಕೊಡಬೇಕೆಂಬುದನ್ನೇ ಪೇಶಾವರದ ದಂಗೆಯ ಸಂಬಂಧವಾಗಿ ಕಾಂಗ್ರೆಸ ಕಮೀಟಿಯವರು ಪ್ರಸಿದ್ಧ ಮಾಡಿದ ಬಾತ್ಮೀದ ಪತ್ರಿಕೆಯನ್ನೋದಿದರು. ಆಗ ಮಿ. ಬೆನ್ನ ಸಾಹೇಬರು– ಈ ರಿಪೋರ್ಟು ನಿಜವೆಂದು ಭಾವಿಸುತ್ತೀರಾ?

ಮಿ. ಬ್ರಾಕವೆ–

ಸರಕಾರದ ಪತ್ರಿಕೆಯು ಕೂಡ, ಪ್ರಜಾಪಕ್ಷದ [illegible] ಅಂಟೋಣವೂ ಏನಿರುತ್ತದೆಂದು ತಿಳಿಯುವದು ಅವಶ್ಯವಾಗಿರುತ್ತದೆ. ಬೆನ್ನಸಾಹೇಬರ ಸಂಬಳವನ್ನು ಕಡಿಮೆ ಮಾಡಬೇಕೆಂಬ ಸೂಚನೆಯನ್ನು ಇಂದು ತರದೆ, ಮುಂದೆ [illegible] ತರುವೆನು. ಹಿಂದೀ ಜನರ ಸ್ವಾತಂತ್ರ್ಯಕ್ಕಾಗಿ ನಡೆಯುವ ಸಂಗ್ರಾಮದಲ್ಲಿ ನನ್ನ ಪೂರ್ಣ ಸಹಾನುಭೂತಿಯುಂಟು.

ಮಿ. ಬಿಕಟ–

ಮಿ. ಬ್ರಾಕವೇ ಸಾಹೇಬರು ಓದಿದ ಕಾಂಗ್ರೆಸದ ರಿಪೋರ್ಟಿನ ಸತ್ಯತೆಯಲ್ಲಿ ನಿಮ್ಮ ನಂಬಿಗೆಯುಂಟೇನೆಂದು ಭಾರತ ಮಂತ್ರಿಯವರು ಕೇಳುತ್ತಾರೆ. ಸ್ವತಃ ಸಾಹೇಬರ ಸರಕಾರೀ ರಿಪೋರ್ಟಿನಲ್ಲಿ ನಂಬಿಗೆಯಾಗಿರುವದಷ್ಟೇ; ಕಾಂಗ್ರೆಸದ ರಿಪೋರ್ಟಿನಲ್ಲಿ ನಮ್ಮ ನಂಬಿಗೆಯುಂಟು. ದಬ್ಬಾಳಿಕೆಯನ್ನು ಮತ್ತಿಷ್ಟು ಬಲಿಸುವದಕ್ಕಾಗಿಯೇ ಮಿ ಬೆನ್ನ ಸಾಹೇಬರು ಏನಾದರೂ ನೆವನ ಹುಡುಕುತ್ತಿರಬಹುದು.

ಮಿ. ಬೇಲ–

ಸರಕಾರದವರು ಗಾಂಧಿಯವರ ಕೂಡ ಒಡಂಬಡಿಕೆ ಮಾಡಿಕೊಳ್ಳದಿದ್ದರೆ– ಹಿಂದುಸ್ಥಾನದಲ್ಲಿ ಭಯಂ

ಕರ ಪರಿಸ್ಥಿತಿಯುತ್ಪನ್ನವಾಗಿ, ಹಿಂದುಸ್ಥಾನದಲ್ಲಿ ಬಂಡಾಯವಾಗುವದೆಂಬುದನ್ನು ಲಕ್ಷ್ಯದಲ್ಲಿಡಿರಿ. ಮಿ. ಬ್ರಾಕವೇ ಸಾಹೇಬರು ಕೊಟ್ಟ ಎಚ್ಚರಿಕೆಯನ್ನು ಲಕ್ಷ್ಯದಲ್ಲಿಡಿರಿ.

ಮಿ. ಬಾಲ್ಡ್ವಿನ-

ಹಳೇ ಮುಖ್ಯ ಮಂತ್ರಿಯಾಗಿದ್ದ ಮಿ. ಬಾಲ್ಡ್ವಿನ್ನ ಸಾಹೇಬರು ಇಂಗ್ಲಿಷ ಜನರನ್ನುದ್ದೇಶಿಸಿ, ಅನ್ನುವದೇನೆಂದರೆ-

ಹಿಂದುಸ್ಥಾನದಲ್ಲಿ ರಾಜ್ಯವಾಳುತ್ತಿರುವಂಥ ನಮ್ಮ ಜನರಲ್ಲಿ ಸಂಪೂರ್ಣ ವಿಶ್ವಾಸವಿಡಿರಿ. ಶಾಂತಚಿತ್ತರಾಗಿ, ಹಿಂದೀ ಜನರು ರಾಜ್ಯಸೂತ್ರ ನಡೆಸುತ್ತಿರುವಾಗ- ನಾವು ಅವರ ಕೂಡ ಸಹಕಾರಿತೆಯಿಂದ ಕೆಲಸ ಮಾಡಬೇಕಾಗಿರುತ್ತದೆ. ನಮ್ಮ ಮತ್ತು ಹಿಂದುಸ್ಥಾನದ ವ್ಯಾಪಾರ ನಡೆದು, ಜಗತ್ತಿನ ಬೇರೆ ವ್ಯಾಪಾರಗಳಿಗಿಂತ ಹಿಂದುಸ್ಥಾನವು ನಮಗೆ ಹೆಚ್ಚು ಸಮೃದ್ಧಿ ಕೊಡುವದೆಂದು ಭಾವಿಸತಕ್ಕದ್ದು. ಬ್ರಿಟಿಶ ಸಾಮ್ರಾಜ್ಯದ ಎಲ್ಲ ಭಾಗಗಳ ಕೂಡ ನಾವು ಸಂಪೂರ್ಣ ಸಹಕಾರಿತೆಯಿಂದ ನಡೆಯತಕ್ಕದ್ದು. ಹಿಂದುಸ್ಥಾನವು ಒಂದು ಭಾಗವಾಗಿರುತ್ತದೆಂದು ತಿಳಿಯತಕ್ಕದ್ದು. ಹಿಂದುಸ್ಥಾನವು ವಸಾಹತಿನ ಸ್ವರಾಜ್ಯದ ಕರ್ತವ್ಯ ಮಾಡುವಾಗ- ಆ ರಾಜ್ಯದಾಡಳಿತೆಯ ಜವಾಬದಾರಿಯನ್ನೂ ಹೊರತಕ್ಕದ್ದು.

ಸರ ಯಂಗ ಹಸ್ಬಂಡ-

ಹಿಂದುಸ್ಥಾನವು ತನ್ನ ರಾಜ್ಯವನ್ನು ಬೇಗನೇ ಆಳಲಿಕ್ಕೆ ಪ್ರಾರಂಭಿಸುವಷ್ಟು ಒಳಿತು. ಏಕೆಂದರೆ- ಹಿಂದುಸ್ಥಾನವು ತನ್ನ ರಾಜ್ಯವಾಳಲಾರಂಭಿಸಿತೆಂದರೆ- ಅದರ ವಿಷಯಕವಾದ ನಮ್ಮ ಚಿಂತೆಯೇ ದೂರಾಗುವದು. ಇದು ತನ್ನ ದೊರೆತನ ನೋಡಿಕೊಳ್ಳಲಿಕ್ಕೆ ಹತ್ತಿತೆಂದರೆ- ಇದಕ್ಕೆ ಬೇಕಾದರೆ- ಬ್ರಿಟಿಶ ಸಾಮ್ರಾಜ್ಯದಲ್ಲಿರು. ಅಥವಾ ಬೇಡಾದರೆ- ಬಿಡೆಂದು ಹೇಳುವ ಸ್ವಾತಂತ್ರ್ಯ ಕೊಡಬಾರದೆ? ಹಿಂದುಸ್ಥಾನವು ಇಂಗ್ಲಂಡದ ಸಂಬಂಧ ಕಡಕೊಂಡರೆ- ಅದರ ಅವಸ್ಥೆಯು ಕಾಬೂಲ ಅಥವಾ ಚೀನದಂತಾಗುವದು. ಅದ್ದರಿಂದ ಅದು ತನ್ನ ಸುಖ ಶಾಂತಿಯ ದೆಸೆಯಿಂದ ನಮಗಿಂತ ಹೆಚ್ಚು ವಿಚಾರ ಮಾಡತಕ್ಕದ್ದಾಗುತ್ತದೆ. ಕಡೆತನಕ ನಾವೇ ಹಿಂದುಸ್ಥಾನವನ್ನು ಆಳುತ್ತೇವೆಂದು ಆಗ್ರಹ ಹಿಡಿದರೆ- ಬಂಡಾಯವಾಗುವದು. ರಾಜ್ಯ ಚಕ್ರವು ಅರ್ಧಾಂಗವಾಯುವಿನಂತೆ ನಿಃಶಕ್ತವಾದರೂ ಆಗುವದು.

ಮುಂಬಯಿಯ ವ್ಯಾಪಾರಿಗಳ ಮತಗಳು

ಮಿ. ಮೋದಿ-

ಮಿ. ಬೆನ್ನ ಸಾಹೇಬರ ಭಾಷಣದಿಂದ ವರ್ತಮಾನ ಪರಿಸ್ಥಿತಿಯಲ್ಲಿ ಏನೂ ಬದಲಾಗುವಂತಿಲ್ಲ.

ಸರ ಚುನಿಲಾಲ ಮೇಹ್ತಾ-

ಸಾಹೇಬರ ಭಾಷಣವು ಅತೃಪ್ತಿಕರವಾದ ಪರಿಸ್ಥಿತಿಯಲ್ಲಿ ಲೇಶವಾದರೂ ಸುಧಾರಣೆ ಹೊಂದಲಾರದು.

ಸರ ಕವಸಜಿ ಜಹಾಂಗೀರ-

ಮಿ. ಬೆನ್ನ ಸಾಹೇಬರು ನಮಗೆ ಈ ಮೊದಲು ತಿಳಿಯದಂಥ ಯಾವ ಸಂಗತಿಯನ್ನೂ ಹೇಳಲಿಲ್ಲ. ಮತ್ತು ಅವರ ಭಾಷಣವು ನಿರಾಶಜನಕವಾದದ್ದೇ ಇರುತ್ತದೆ.

ಸರ ಫಿರೋಜ ಸೇಠನಾ-

ಬೆನ್ನ ಸಾಹೇಬರು ಕಾಂಗ್ರೆಸದ ಜನರನ್ನು ರೌಂಡ ಟೇಬಲಕ್ಕೆ ಕರೆದಿದ್ದರೆ- ಅದೊಂದು ದೊಡ್ಡ ಫಾಯದೆ ಆಗುತ್ತದೆ. ಮಹಾತ್ಮರ ಷರತ್ತುಗಳನ್ನು ಅಂಗೀಕರಿಸದಿದ್ದರೆ- ದೇಶದಲ್ಲಿ [illegible] ಜವಾಬದಾರಿ ತಪ್ಪು ಹಿಂದೀ ಜನರ ಮೇಲೆ ಹೊರಿಸಲಾರದು.

ಇಬ್ಬರು ಡೆಪ್ಯುಟಿ ಕಲೆಕ್ಟರರ ರಾಜೀನಾಮೆ.

—(೦)—

ಸ್ವದೇಶಿಯರಿಗೆ ಶಿಕ್ಷೆ ಕೊಡುವದಕ್ಕೆ ಕಷ್ಟವಾಗಿ, ಓಕರಿಕೆ ಬಂತು.

—(೦)—

ಗುಜರಾಥದಲ್ಲಿ ಡೆಪ್ಯುಟಿ ಕಲೆಕ್ಟರರಾದ ಶ್ರೀ ದುರ್ಲಭಭಾಯಿ ದೇಸಾಯಿ ಮತ್ತು ಶ್ರೀ ಪಿ. [illegible] ದೇಸಾಯಿ ಈ ಇಬ್ಬರು ಡಿ. ಡಿ. ಕಲೆಕ್ಟರರು ಸರಕಾರೀ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಇವರ ಅಭಿನಂದನ ಮಾಡಲು ಸೂರತದಲ್ಲಿ ಪ್ರಚಂಡ ಜಾಹೀರ ಸಭೆ ಕೂಡಿತ್ತು. ಸಭೆಯಲ್ಲಿ ಶ್ರೀ ದುರ್ಲಭಭಾಯಿಯವರು-

ಕಳೆದೆರಡು ತಿಂಗಳಲ್ಲಿ ನಾನೊಬ್ಬನೇ ೩೫ ಜನ ಸೇವಾಭಿಮಾನಿಗಳಿಗೆ ಶಿಕ್ಷೆ ಕೊಟ್ಟಿದ್ದೇನೆ. ಶಿಕ್ಷೆ ಕೊಡುವಾಗ ನನಗೆಷ್ಟು ಸಂತಾಪ ಮತ್ತು ದುಃಖವಾಗುತ್ತಿರಬೇಕೆಂಬುದನ್ನು ದೇವರೇ ಬಲ್ಲನು. ದೇಶದ್ರೋಹಿಯಾಗಿ ದೇಶ ಹಿತದ ವಿರುದ್ಧ ನಾನು ಕೆಲಸ ಮಾಡುತ್ತೇನೆಂದು ನನ್ನ ಎದೆಯಲ್ಲಿ ಕಿಚ್ಚು ಹತ್ತಿತು. ಆ ದ್ರೋಹದ ಭಾರ ಹೆಚ್ಚಾಗಿ ಕೊನೆಯಲ್ಲಿ ರಾಜೀನಾಮೆ ಕೊಟ್ಟೆನು. ರಜೆ ತಕ್ಕೊಳ್ಳಿರಿ. ಅಥವಾ ಪೇನಶನ ತಕ್ಕೊಳ್ಳಿರಿ. ರಾಜೀನಾಮೆ ಮಾತ್ರ ಕೊಡಬೇಡಿರೆಂದು ಸರಕಾರದವರು ನನಗೆ ಪರಿಪರಿಯಿಂದ ಹೇಳಿದರು. ವಿರಮಗಾಮನ ನಿರಪರಾಧಿ ಭಗಿನಿಯರ ಮೇಲೆ ಪೋಲೀಸರು ನಡೆಸಿದ ಲಾಠೀರಾಜ್ಯವನ್ನು ನೋಡಿ ಸಹಿಸಲಾರದೆ ರಾಜೀನಾಮೆ ಕೊಟ್ಟಿದ್ದೇನೆ. ವಿರಮಗಾಮದಂತೆ ಆನಂದ, ಉಮರೇಠ, ಡಕೋರ ಮತ್ತು ಬೇರೆ ಸ್ಥಳಗಳಲ್ಲಿ ಲಾಠೀ ರಾಜ್ಯವಾಯಿತು. ಈ ಅಸಹ್ಯದ ದೆಸೆಯಿಂದಲೇ ಸರಕಾರೀ ಕೆಲಸವನ್ನು ಧಿಕ್ಕರಿಸಿದೆನು.

ಎಂಬುದಾಗಿ ತಮ್ಮ ಅಂತಃಕರಣ ಬಿಚ್ಚಿ ಹೇಳಿದ್ದಾರೆ. ಇವರಂತೆ ಬೇರೆ ಡೆಪ್ಯುಟಿ ಕಲೆಕ್ಟರರೂ ಸ್ವದೇಶಿಯರಿಗೆ ಶಿಕ್ಷೆ ಕೊಡುವ ಮ್ಯಾಜಿಸ್ಟ್ರೇಟರೂ ತಮ್ಮ ಎದೆಯಲ್ಲೇನು ಬರೆದಿರುತ್ತದೆಂಬುದನ್ನು ನೋಡುವರೇ?

ಬ್ಯಾರಿಸ್ಟರ ಅಭ್ಯಂಕರರ ದಸ್ತಗಿರಿ.

—()—()—()—

ನಾಗಪೂರದ ಸುಪ್ರಸಿದ್ಧ ಸತ್ಯಾಗ್ರಹಿಯಾದ ಬ್ಯಾರಿಸ್ಟರ ಮೋರೋಪಂತ ಅಭ್ಯಂಕರರನ್ನು ರಾಜದ್ರೋಹದ ಆರೋಪದಿಂದ ದಸ್ತಗೀರ ಮಾಡಿದ್ದಾರೆ.

ಮುನಸಿಪಾಲ ಕೌನ್ಸಿಲ ಮೆಂಬರರಿಗೆ ಒಂದು ತಿಂಗಳ ಶಿಕ್ಷೆ.

—(೦)—

[illegible]ದಲ್ಲಿ ಕೌನ್ಸಿಲ ಮೆಂಬರರಾದ ಮಿ. [illegible] ಸಾಹೇಬರು [illegible] ಕಾನೂನು ಭಂಗದ ಹುಕುಮನ್ನು ಮುರಿದದ್ದಕ್ಕಾಗಿ ಒಂದು ತಿಂಗಳು ಸಾದಾ ಕೈದು ಮತ್ತು ೧೦೦ ರೂ. ದಂಡದ ಶಿಕ್ಷೆಗೆ ಗುರಿಯಾದರು.

ವಿವಿಧ ವರ್ತಮಾನಗಳು.

—(೦)—

ಸೊಲ್ಲಾಪೂರದ ಲಷ್ಕರೀ ಕಾಯಿದೆಯ ಕೈದಿಗಳನ್ನು ಎ ಕ್ಲಾಸಿನಲ್ಲಿಡಬೇಕೆಂದು ಮುಂಬಯಿ ಸರಕಾರದವರು ಹುಕುಮು ಮಾಡಿದ್ದಾರೆ.

ವಿಜಾಪೂರದಲ್ಲಿ ಶ್ರೀ. ಧನಶೆಟ್ಟಿ ಶಂಕರಪ್ಪನವರು ಈಗಿನ ಚಳವಳಿಯು ಯಶಸ್ವಿಯಾಗಲೆಂದು ಐದು ದಿವಸ ಉಪವಾಸದ ವ್ರತ ಹಿಡಿದಿದ್ದಾರೆ.

ಕರ್ನಾಟಕದಲ್ಲಿ ಸತ್ಯಾಗ್ರಹದಿಂದ ಶಿಕ್ಷೆ ಹೊಂದಿದವರ ಸಂಖ್ಯೆ.

ಬೆಳಗಾವಿ ೭೨, ಕಾರವಾರ ೪೧, ಮಂಗಳೂರು ೨೬, ಧಾರವಾಡ ೭ ಮತ್ತು ವಿಜಾಪೂರ ೧೫.

ಸರಕಾರದವರು ಧಾರಾಸಾನದಲ್ಲಿ ಹಿಡಿದ ವ್ಹಾಲಂಟಿಯರರಿಗೆ ಊಟಕ್ಕೆ ಹಾಕಲಾರದೆ, ಅವ

ವಿಜಯ ನಿತ್ಯ ಪತ್ರಿಕೆ (೧೨· ಜೂನ್

ರವಿವಾರ	1·6·1930
ಸೋಮವಾರ	2·6·1930
ಮಂಗಳವಾರ	3·6·1930
ಬುಧವಾರ	4·6·1930
ಗುರುವಾರ	5·6·1930
ಶುಕ್ರವಾರ	6·6·1930
ಶನಿವಾರ	7·6·1930
ಮಂಗಳವಾರ	10·6·1930
ಬುಧವಾರ	11·6·1930
ಗುರುವಾರ	12·6·1930
ಶುಕ್ರವಾರ	13·6·1930
ಶನಿವಾರ	14·6·1930
ರವಿವಾರ	15·6·1930
ಸೋಮವಾರ	16·6·1930
ಮಂಗಳವಾರ	17·6·1930
ಗುರುವಾರ	19·6·1930
ಶನಿವಾರ	21·6·1930
ಮಂಗಳವಾರ	24·6·1930

WANTED

WANTED:- Candidates desiring to serve in Government Railway and Canal Departments. Full particulars and Railway Fare Certificate on 2 annas stamps; apply to:-

IMPERIAL TELEGRAPH COLLEGE, Nai Sarak, DELHI.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ ಇದೊಂದೇ ಶಿಕ್ಷಣದ ಸೌಲತ್ತು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಗಳು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು ಡ್ರಾಯವ್ಹಿಂಗ ದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ವ ಬಯಸುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖ್ಯೆರಿದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದಕಾರಣ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟನಹತ್ತರ, ಧಾರವಾಡ

ನೋಟೀಸಿನ ದರಗಳು

ತಿಂಗಳ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ. ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡಾಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ. ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರುವಾಣೆ ದಟ್ಟ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ. ಕಾಯಮ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಏಶಿಯನ್ ವಿಮೆ ಕಂಪನಿಯು

ಬೋರ್ಡ ಆಫ್ ಡಾಯರೆಕ್ಟರ್ಸ ಕಡಿಂದಾ

ಏಶಿಯನ್ ಕಂಪನಿಯ ವಿಮೆದಾರರಲ್ಲಿ ಸತ್ಯಾಗ್ರಹದ ಚಳವಳಿಯಲ್ಲಿ ಯಾರಿಗಾದರೂ ಶಿಕ್ಷೆಯಾಗಲು ಕೆಳಗೆ ಕೊಟ್ಟ ಸವಲತ್ತುಗಳು ಅವರಿಗೆ ಸಿಗುವವು:—

ನಮ್ಮ ವಿಮೇದಾರರು ಸ್ವದೇಶದ ಹಿತದ ಸಲುವಾಗಿ ವಿಮೆ ಇಳಿಸಿರುವದರಿಂದ ಹಾಗೂ ಅವರು ಹಿಂದೀಯರಿರುವರೆಂಬ ಸಂಗತಿಯನ್ನು ಲಕ್ಷಿಸಿ ಅವರಿಗೆ ಮುಂದೆ ಕಾಣಿಸಿದ ಸವಲತ್ತುಗಳನ್ನು ಕೊಟ್ಟಿದ್ದೇವೆ

೧ ವಿಮೆದಾರನಿಗೆ ಶಿಕ್ಷೆಯಾದ ದಿವಸದಿಂದಾಗಲೀ ಅದಕ್ಕೂ ಮುಂಚಿತವಾಗಲೀ ವಿಮೆ ಇಳಿಸಿರಲು, ಸದರಿ ಪಾಲಿಸಿಯ ಕಂತದ ಮುದ್ದತು ಮುಗಿದರೂ ಕೂಡ ಅದು ಮುಂದೆ ಆರು ತಿಂಗಳುಗಳ ವರೆಗೆ ತಾನೇ ಚಾಲ್ತಿಯಲ್ಲಿ ಉಳಿಯುವದು.

೨ ಶಿಕ್ಷೆಯಾದ ದಿವಸದಿಂದಾಗಲೀ ಅದಕ್ಕೂ ಮುಂಚಿತವಾಗಲೀ ಪಾಲಿಸಿ ಒಂದು ವರುಷದ ವರೆಗೆ ಚಾಲ್ತಿಯಲ್ಲಿ ಇದ್ದ ಪಕ್ಷಕ್ಕೆ ಮುಂದೆ ಮುದ್ದತು ತೀರಿದರೂ ಒಂದು ವರುಷದ ವರೆಗೆ ತಾನೇ ಚಾಲ್ತಿಯಲ್ಲಿ ಅವರ ಪಾಲಿಸಿಯು ಉಳಿಯುವದು. ಈ ಮುದ್ದತಿಗೆ ಬಡ್ಡಿ ಆಕರಣೆ ಮಾಡುವದಿಲ್ಲ. ಇಂಥ ಶಿಕ್ಷೆ ಹೊಂದಿದ ಪಾಲಿಸಿದಾರರ ಆಪ್ತೇಷ್ಟರು ವ ಮಿತ್ರರು ಕಂಪನಿಗೆ ಇದರ ಜರೂರಿ ಮಾಹಿತಿ ತಿಳಿಸಬೇಕಾಗಿ ನಮ್ಮ ವಿನಂತಿ ಅದೆ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ನಿವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತ ನೋಡಿದೆ ಈ ಬೇಡಿಕೆಯನ್ನು ಮಾಡಿರುವಿರುವದನ್ನು ಬರೆಯಬೇಕು.

ಮೈಸೂರ ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೨ಳ ತೊಲೆಯ ಸೇರು ೧ಕ್ಕೆ ೬—೦—೦
ಕೃಷ್ಣಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯-೧೧-೨೯ ಮೈಸೂರ ಸ್ಟೋರ,
ಬೆಳಗಾವಿಯವರ ಗಲ್ಲಿ
ಹುಬಳ್ಳಿ

ಸುಸಮಯ

———(೦)———

ಎ. ರ್. ಶ್ರೀನಿವಾಸಯ್ಯಂಗಾರ್, ಗೌಡವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕಸಭಾ [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಜನಾರ್ದನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಜೋಶೀ.

ವರ್ಷ ೨೧) ಧಾರವಾಡ ರವಿವಾರ ತಾರೀಖು ೧ ನೇ ಜೂನ ೧೯೩೦ (ಸಂಚಿಕೆ ೧೨೪

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ್

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಮಾದರಿಯ ಪಾಲಿಸಿಯು ಯೋಜನೆ ಬಂಡವಲವು	ಹಮಿಪಿನವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ;

ಇವರಿಗೆ ಬರೆದುಕೊಳ್ಳಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ್ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ತಿಳಕೊಳ್ಳ ಬೇಕು.

ಮಾಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೩ ,,	೪-೨-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೇಳಿಗೆ ವಿಳಾಸಕ್ಕೆ ಬರೆದು ತಿಳಕೊಳರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ಶುದ್ಧ ೪

ಆ ವಿಜಯಂ ಶ್ರೀಶಬ್ದಂ
ಶ್ರೀ ವಸುಮತಿಯು ನಲಿಸಿತಿ ಸುಹಿತಚರಿತೆಗಳಿಂ ತ
ಜ್ಞ " ವಿಜಯಂ " ಶ್ರೀಕರಮಣ ।
ಶ್ರೀ ವಿಹಿತಂಗಳ ಎವರು ಸಲಿಸುತು ಕಾರ್ಯಂ ॥

ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ನಿಶಾನೆಯ ಗಲಭೆ.

—(೦)—

ಧಾರವಾಡದಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚಲಿ; ನಾವೂ ಹಚ್ಚಬಹುದೆಂದು ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ. ಬ. ಕಂಬಳಿಯವರು ಈ ವಿಷಯವಾಗಿ ತಮ್ಮನ್ನು ಕಾಣಲಿಕ್ಕೆ ಹೋದ ಗೃಹಸ್ಥರ ಮುಂದೆ ಹೇಳಿದರೆಂದು ಈ ಮೊದಲು ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿದೆ. ರಾ. ಬ. ಕಂಬಳಿಯವರು ಕಳೆದೊಂದು ತಿಂಗಳು ಮಹಾಬಳೇಶ್ವರದ ತಂಪು ಹವೆಯಲ್ಲಿದ್ದರು. ಊರು ಸುಟ್ಟರೂ, ಹನುಮಪ್ಪ ಹೊರಗೆ ಎನ್ನುವಂಥ ವರ್ತಮಾನ ಕಾಲದಲ್ಲಿ ಮಹಾಬಳೇಶ್ವರವಾಗಿರುತ್ತದೆ, ಆ ಮಹಾಬಳೇಶ್ವರದಿಂದ ರಾ. ಬ. ಕಂಬಳಿಯವರು ಹುಬ್ಬಳ್ಳಿಗೆ ಬಂದಿದ್ದಾರೆ. ನೀರೊಳಗಿಂದ ತೆಗೆದು ಉರಿಯಲ್ಲಿ ಹಾಕಿದಂತಾಗಿರಬಹುದು. ಏಕೆಂದರೆ- ತಂಪು ಹವೆಯ ಬದಲಾಗಿ ಹುಬ್ಬಳ್ಳಿಯಲ್ಲಿ ಧಗಧಗ ಉರಿಯುವ ಬಿಸಲು ಉಳಿದವರಂತೆ ಅವರನ್ನೂ ಸಳಮಳ ತಳಮಳಿಸುತ್ತಿರಬಹುದು. ಅದರ ಕೂಡ ರಾಷ್ಟ್ರೀಯ ನಿಶಾನೆಯ ಗೊಂದಲವೂ ಅವರಿಗೆ ಕಸಿವಿಸಿ ಮಾಡಿರಬಹುದು. ಆದರೆ ಊರ ಜನರೆಲ್ಲಿ ಕೇಳುತ್ತಾರೆ? ರಾವಬಹಾದ್ದೂರರೇ, ಹಿಂದಿನ ಮಾತನ್ನು ಸ್ಮರಣೆಗೆ ತನ್ನಿರಿ; ಜೂನ ತಿಂಗಳ ೧ನೇ ಯ ತಾರೀಖಿನೊಳಗಾಗಿ ಮ್ಯುನಿಸಿಪಾಲಿಟಿಯ ಮೇಲೆ ನಿಶಾನೆ ಹಚ್ಚಿರೆಂದು ಅವರನ್ನು ಒತ್ತಾಯ ಪಡಿಸುತ್ತಲಿದ್ದಾರೆ. ವರ್ತಮಾನಪತ್ರಗಳಲ್ಲಿ ಸೂಚನೆಗಳೂ, ಟೀಕೆಗಳೂ ಬರುತ್ತಿರುವವು. ಬಹುಶಃ ಮುಂದಿನ ೮ ನೇ ತಾರೀಖಿನ ದಿವಸ ಮ್ಯುನಿಸಿಪಾಲಿಟಿಯ ಮೇಲೆ ಧ್ವಜವನ್ನು ಜನರು ಹಚ್ಚುವರು. ಇದಕ್ಕೆ ರಾ. ಬ. ಅಥವಾ ಜನರಲ ಕಮಿಟಿಯು ಮಂಜೂರಿ ಕೊಡಬೇಕಾಗಿಲ್ಲ. ಅದು ಸರ್ವಥಾ ನಿಶ್ಚಿತವಾಗಿರುತ್ತದೆ. ರಾಷ್ಟ್ರೀಯ ನಿಶಾನೆಗೆ ಮಾತ್ರ ಪೋಲೀಸರ ಬಂಧಿಸುತ್ತದೆ. ರಾ. ಬ. ಕಂಬಳಿಯವರು ಮಾನವನ್ನು ಮಾಡಿದರೆ ಅದರ ಬೆಲೆ ಏನೆಂದರೆ- ಅರ್ಧ ರಾಜ್ಯವೆನ್ನುವಂತೆ ಅರಮನೆಯ ಮೇಲೆ ನಿಶಾನೆ ಹತ್ತಿ ಹೋಗುವದು. ಕೆಲಸವು ಇಷ್ಟು ಸೂಕ್ಷ್ಮವಾಗಿದ್ದರೂ, ಮೂಗಿಲ್ಲದವಳ ಮದುವೆಗೆ ಸಾವಿರ ವಿಘ್ನವೆಂದು ಮರಾಠಿಯಲ್ಲಿ ಹೇಳುವಂತೆ ವರ್ತಮಾನ ಪರಿಸ್ಥಿತಿಯಾಗಿರುತ್ತದೆ. ಹುಬ್ಬಳ್ಳಿಯು ಕರ್ನಾಟಕದ ಮೂಗು! ಅದರ ಮೂಗು ಕೊಯ್ಯಲಿಲ್ಲ. ಮೂಗು ಮೇಲೆ ಮಾಡಿಕೊಂಡೇ ಉಳಿಯುವಂತೆ ರಾ. ಬ. ಕಂಬಳಿಯವರು ಪ್ರತ್ಯಕ್ಷ ಕೃತಿಯಿಂದ ತೋರಿಸುವರೆಂದು ಆಶಿಸುತ್ತೇವೆ.

ಗೌಡರು ಕಾಯದೆಭಂಗದ ಕಡೆಗೆ ತಿರುಗಿದರು.

—()—( )—()—

ಬಾಗಲಕೋಟೆ ತಾಲೂಕಿಗೆ ಸೇರಿದ ಗಲಗಲಿ ಮತ್ತು ಗಣಿಗ್ರಾಮಗಳು ಕೆಲವು ದಿನ ಬಾರಡೋಲಿಯಾಗಿರುತ್ತವೆ. ವಿಜಾಪೂರ ಜಿಲ್ಲೆಯಲ್ಲಿ ಸತ್ಯಾಗ್ರಹಕ್ಕಾಗಿ ಶಿಕ್ಷೆ ಹೊಂದಿದವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಈ ನೆಟ್ಟಿನವರಾಗಿದ್ದಾರೆ. ಇವರಲ್ಲಿ ಶ್ರೀ ಬಾಬೂರಾವ ಗಣೆಯವರನ್ನು ಹಿಡಿದು ಶಿಕ್ಷೆ ಮಾಡಿದರಷ್ಟೇ; ಇವರನ್ನು ಹಿಡಿಯುವ ಮೊದಲು ಗಲಗಲಿಯಲ್ಲಿ ದೊಡ್ಡ ಸಮಾರಂಭವಾಯಿತು. ಸಭೆಯಾಯಿತು. ಸಭೆಯಲ್ಲಿ ಶ್ರೀ. ಬಾಬೂರಾಯರು ತಮ್ಮ ಅಧಿಕಾರವನ್ನು ಶ್ರೀ. ಪಾಟೀಲ ಮಲ್ಲನಗೌಡರಿಗೆ ಒಪ್ಪಿಸಿದರು. ಗೌಡರೂ ತಮ್ಮದೊಂದು ಕಾಲು ತಿರಂಗದಲ್ಲಿದೆಂದು ಭಾವಿಸಿದ್ದಾರೆ. ಒಂದು ವೇಳೆ ಶ್ರೀ. ಮಲ್ಲಣಗೌಡರಿಗೆ ತುರುಂಗವಾಸ ಪ್ರಾಪ್ತವಾದರೆ- ತಾವು ಅವರ ಕೆಲಸ ಕೈಕೊಳ್ಳುವಂತೆ ಶ್ರೀ. ಪಾಟೀಲ ತಮ್ಮಣಗೌಡರು ಜಾಹೀರ ಮಾಡಿದ್ದಾರೆ. ಒಬ್ಬರ ತರುವಾಯ ಒಬ್ಬರು ಮುಂದೆ ಸರಿದು ಬರುವದೂ, ಅದರಲ್ಲಿ ಗೌಡರ ಮನೆತನದವರೇ ಮುಂದುವರೆಗೊಳ್ಳುವದೂ ಪ್ರಶಂಸನೀಯವಾದದ್ದು.

ಮಹಾಬಳೇಶ್ವರದಲ್ಲಿ ಸ್ವರಾಜ್ಯ ಸಂಧೀ ಸಂಭಾಷಣೆ.

——(೦)——

ಮುಂಬಯಿ ವರ್ತಕ ಸಂಘದ ಪ್ರತಿಯಿಂದ ಕೌನ್ಸಿಲ ಮೆಂಬರರಾಗಿರುವ ಶ್ರೀ. ಲಾಲಜಿಯವರು ಮಹಾಬಳೇಶ್ವರದಲ್ಲಿ ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋಗಿದ್ದರು. ಮಹಾತ್ಮರನ್ನು ಹಿಡಿದದ್ದರಿಂದ ಮತ್ತು ಉಳಿದವರ ಕಾಯದೆಭಂಗದಿಂದ ಹುಟ್ಟಿದ ಪ್ರಜಾಕ್ಷೋಭೆ ಮತ್ತು ಸ್ವರಾಜ್ಯ ಸ್ವಾತಂತ್ರ್ಯದ ಬಗ್ಗೆ ಸಾಹೇಬರಿಗೂ ಇವರಿಗೂ ಸ್ನೇಹಸ್ಪದ ಸಂಭಾಷಣೆ ನಡೆಯಿತು. ಮಹಾತ್ಮರನ್ನೂ ಬೇರೆ ರಾಜಕೀಯ ಕೈದಿಗಳನ್ನೂ ಬಂಧಮುಕ್ತ ಮಾಡಬೇಕೆಂದು ಇವರು ಸಾಹೇಬರಿಗೆ ವಿನಂತಿಸಿ ಕೊಂಡರೆಂದು ಹೇಳುವರು. ಇದೇ ವಿಷಯವಾಗಿ ಲಾಲಜಿಯವರು ಪತ್ನಿ ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋಗುವರು. ಸಾಹೇಬರೂ, ಹ್ವಾಯಿಸರಾಯರೂ ಅವರ ಆರುವಿನರೂ ಈ ಸಂಭಾಷಣೆಯ ಬಗ್ಗೆ ಮಾತುಕಥೆ ನಡೆಸಿದೆಂದು ತಾರಿನ ವರ್ತಮಾನವಾಗಿದೆ.

ರಂಗೂನದಲ್ಲಿ ಭಯಂಕರ ದಂಗೆ

೧೬೦ ಜನರು ಸತ್ತರು.

—(೦)—

ರಂಗೂನದಲ್ಲಿ ಕೂಲಿ ಮತ್ತು ಬೇರೆ ಕೆಲಸಗಳ ದೆಸೆಯಿಂದ ರಂಗೂನಕ್ಕೆ ಹೋದಂಥ ಆಂಧ್ರ ಮತ್ತು ತಮಿಳ ಜನರಿಗೂ ಅಲ್ಲಿನ ಬ್ರಹ್ಮೀ ಕೂಲಿಕಾರರಿಗೂ ಜಗಳ ಬಂದು, ಕಳೆದೆಂಟು ದಿವಸಗಳಿಂದ ಭಯಂಕರ ಹೊಡೆದಾಟಗಳು ನಡೆದಿವೆ. ಸರಕಾರದವರು ಸೊಲ್ಜರರ, ಪೋಲೀಸರಿಂದ ಬಂದೋಬಸ್ತ ಕಾಯದೆಯನ್ನು ಅವಲಂಬಿಸಿದ್ದಾರೆ- ದಂಗೆಯು ಮೊನ್ನೆ ದಿವಸಗಳಲ್ಲಿ ಶಾಂತವಾಗುತ್ತಿತ್ತು. ಆದರೆ ಬರೀ ಪೋಲೀಸ ಬಂದೋಬಸ್ತು ನಡೆಸಿದ್ದರಿಂದ ದಂಗೆಯು ಭಯಂಕರವಾಗಿ ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲದಾಗಿ, ಈ ವರೆಗೆ ೧೬೦ ಜನರು ಸತ್ತಿದ್ದಾರೆ, ಹಾದಿಯಲ್ಲಿ ಬೀದಿಯಲ್ಲಿ ಭಯಂಕರವಾಗಿ ಕೊಲೆಗಳಾಗುತ್ತಿರುವವು.

ಈಚಲ ಗಿಡಗಳನ್ನು ಹೆಂಗಸರೂ ಗಂಡಸರೂ ಕೂಡೇ ಕಡಿಯಬೇಕು.

—(೦)—

ಈಚಲ ಗಿಡಗಳನ್ನು ಕಡಿಯುವದು ಗಿಡವಿದ್ದಲ್ಲೆಲ್ಲ ನಡೆದಿದೆ. ಕೆಲವು ಕಡೆಗೆ ಈ ಕೆಲಸ ನಡೆಯದಿದ್ದರೆ- ಅಲ್ಲಿಗೆ ಕಾರ್ಯಬಾಹುಲ್ಯದ ಮೂಲಕ ಸ್ವಯಂಸೇವಕರು ಹೋಗದಿರುವದೇ ಕಾರಣ. ಗಿಡಗಳಿಗೆ ಮರಣಶಾಸನವಾಗಿರುವದೇನೋ ನಿಜ. ಕೂಡ್ಲೆಯ ಪೆಟ್ಟು ಕೊಡುವದಕ್ಕೇ ಅವಕಾಶ.

ಗಿಡಗಳನ್ನು ಕಡಿಯುವಾಗ ಮರಿಗಳನ್ನು ಸಹ ಕಡಿಯುತ್ತ ಹೋಗಬಾರದು. ಕಟ್ಟಿದಂಥ ಮತ್ತು ಕಟ್ಟಲಿಕ್ಕೆ ಬಂದಂಥವುಗಳನ್ನೇ ಕಡಿಯಬೇಕು. ಗಂಡಸರು ಅವಕ್ಕೆ ಕಚ್ಚು ಹಾಕಬೇಕು. ಹೆಂಗಸರು ಹಗ್ಗದ ಉರ್ಲು ಹಾಕಿ, ಜಗ್ಗಿ ನೆಲಕ್ಕುರುಳಿಸಬೇಕು. ಅಂದರೆ ಕೆಲಸವು ಇಮ್ಮಡಿ ಚುರುಕಿನಿಂದ ನಡೆಯುವದು.

ಕಟ್ಟಿದ ಗಿಡಗಳನ್ನು ಕಡಿದ ನಂತರ, ಕಟ್ಟಲಿಕ್ಕಾದ ಮತ್ತು ಅವುಗಳ ಮರಿಗಳನ್ನು ಸಮೂಲನಾಶ ಮಾಡುತ್ತಾ ಹೋಗಬೇಕು. ಅಂದರೆ ಕುಡುಕರ ಬಾಯಿಗೆ ನಿರಂತರ ಗಡ್ಡೀ ಹಾಕಿದಂತಾಗುತ್ತದೆ.

ಮ್ಯಾಟ್ರಿಕ ಪರೀಕ್ಷೆಯ ಪರಿಣಾಮವು

ಧಾರವಾಡ ಹಾಯಸ್ಕೂಲ

೧ ಅಮ್ಮಿನಭಾವಿ ಎಲ್ ಟಿ
೨ ಭಂಡಿವಾಡ ಎ ಬಿ
೩ ಬ್ರಹ್ಮೆ ಬಿ ಎ
೪ ದೇಸಾಯಿ ಜಿ ಎಚ್
೫ ದೇಶಪಾಂಡೆ ಆರ ಎಚ್
೬ ಧಾರವಾಡಕರ ಎಚ್ ವ್ಹಿ
೭ ಗುಡಿ ಆರ ಟಿ
೮ ಕೋಟೂರ ಎಫ ಬಿ
೯ ಕುಲಕರ್ಣಿ ಡಿ ಎಲ್
೧೦ ಮಾಳಗಿ ಎಸ್ ಆರ್
೧೧ ಮಂಕಿಕರ ಜಿ ಎಸ
೧೨ ಪರ್ವತಿಕರ ಆ ಟಿ
೧೩ ಪಾಟೀಲ ಆರ ವ್ಹಿ
೧೪ ಸವಣೂರ ಎಲ್ ಜಿ
೧೫ ನಾಡಿಗೇರ ಆರ ಜಿ
೧೬ ಆಚಲಕರ ಎಸ ವಾಯ
೧೭ ಜಮ್ಮಿಹಾಳ ವ್ಹಿ
೧೮ ಶೇಠೆ ಬಿ ವ್ಹಿ
೧೯ ಜಾಲಿ
೨೦ ಜನ್ನು ಆರ ಡಿ
೨೧ ಹೊಸಕೇರಿ ಎಸ್ ಎ
೨೨ ಮಂಕಿಕರ ಎ ಎಸ್
೨೩ ವೆಣಕಿಸೆಶಾಯಿ
೨೪ ಪಾಟೀಲ ಎನ್ ಎಲ್
೨೫ ಕುಲಕರ್ಣಿ ಎನ್ ಎಸ್
೨೬ ದೀಕ್ಷಿತ
೧ ಹೊನ್ನಾವರ ಕೆ ಎಚ್
೨ ಧಾರೇಶ್ವರ ಜಿ ಎನ್
೩ ಹೊನ್ನಾವರ ವ್ಹಿ ಎಚ್ (ಫಾಯನಲ)

ವ್ಹಿಕ್ಟೋರಿಯಾ ಹಾಯಸ್ಕೂಲ

೧ ದೀಕ್ಷಿತ ಬಿ ಆಯ
೨ ಜೋಶಿ ಜಿ ಸಿ
೩ ಕಡಪಾ ಜಿ ಆರ
೪ ಕಮಲಾಪೂರ ಬಿ ಎಚ್
೫ ಕುಲಕರ್ಣಿ ಜಿ ಎಸ್
೬ ಕುಲಕರ್ಣಿ ಎಚ ಎ
೭ ಮುಗದ ಬಿ ಎಸ್
೮ ಶಾಂಡಿಗೇರ ಎಲ್ ಎಮ್
೯ ಶಿಂಧೆ ಸಿ ಎಚ
೧೦ ಕುಲಕರ್ಣಿ ಕೆ ಎ
೧೧ ಹೆಬಳೀಕರ ಕೆ ಜಿ
೧೨ ಜೋಶಿ ಎಸ್ ಎಸ್
೧೩ ಭಾವಿಕಟ್ಟಿ ವಾಯ ಜಿ
೧೪ ಕುಲಕರ್ಣಿ ಕೆ ಆರ
೧೫ ಕುಲಕರ್ಣಿ ಎಸ ಕೆ
೧೬ ಲಿಮಯೆ ಬಿ ಜಿ
೧೭ ಅನಗೊಂಡಕರ ಕೆ ಪಿ
೧೮ ಜಕಾತಿ ಎಸ ವ್ಹಿ
೧೯ ಕವಲೂರ ಪಿ ಬಿ
೨೦ ವಸ್ತ್ರದ ವ್ಹಿ ಜಿ
೨೧ ಪಾಟೀಲ ವ್ಹಿ ವಾಯ

ಕರ್ನಾಟಕ ಹಾಯಸ್ಕೂಲ

ಮ್ಯಾಟ್ರಿಕ

೧ ಗಜೇಂದ್ರಗಡ ವ್ಹಿ ಎಸ್.
೨ ಗುಂಡೇಕರ ಎನ್ ಬಿ.
೩ ಜೋಶಿ ಎಸ್. ಸಿ.
೪ ಜಾನಪಗಡಿ ಎಮ್. ಜಿ.
೫ ಸೋನಿ ಎಸ್. ವ್ಹಿ.
೬ ಅಕ್ಕಸಾಲಿ ಸಿ. ಎ.
೭ ಮುತಾಲಿಕದೇಸಾಯಿ ಎಸ್. ಆರ್.
೮ ಕಾನಡೆ ಬಿ. ಡಿ.
೯ ಕೊಡಕಣಿ ಆರ. ಎ.

ಫಾಯನಲ ಮ್ಯಾಟ್ರಿಕ

೧ ಸವಣೆ
೨ ಅಕ್ಕಸಾಲಿ
೩ ಕೋಡಕಣಿ

ಫಾಯನಲ

೧ ನಾಯಿಕ
೨ ಮುತ್ತಾಲ

ಲಿಂಗಾಯತ ಹಾಯಸ್ಕೂಲಿನಿಂದ ಆರು ಜನರು ಪಾಸಾಗಿದ್ದಾರೆ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಮದ್ರಾಸದ ಹಿಂದೂ ಪತ್ರದ ಸಂಪಾದಕರಾದ ಶ್ರೀ. ರಂಗಯ್ಯಂಗಾರರು ಸಿಮ್ಲಾದಲ್ಲಿ ಲಾರ್ಡ ಆಯರ್ವಿನಸಾಹೇಬರನ್ನು ಕಂಡು, ಅವರ ಕೂಡ ಬಹಳ ಹೊತ್ತಿನ ವರೆಗೆ ರಾಜಕೀಯ ಪರಿಸ್ಥಿತಿಯನ್ನು ಕುರಿತು ಮಾತಾಡಿದರು.

ಮುಂಬಯಿ ಇಲಾಖೆಯಲ್ಲಿ ದಬ್ಬಾಳಿಕೆಯ ಹೊಸ ಕಾಯದೆಗಳು.

ಭೂಮಿಯ ಕಂದಿ ಅಥವಾ ಬೇರೆ ಯಾವ ತೆರಿಗೆಯನ್ನಾದರೂ ಕೊಡಬೇಡಿರೆಂದು ಉಪದೇಶ ಮಾಡಿದರೆ ೬ ತಿಂಗಳ ಶಿಕ್ಷೆಯೆಂದು ವ್ಹಾಯಿಸರಾಯರು ಹೊಸ ಕಾಯದೆ ಮಾಡಿದ್ದಾರೆ.

ಸರಕಾರೀ ಅಧಿಕಾರಿಗಳ ಬಹಿಷ್ಕಾರ ಅಥವಾ ಅಧಿಕಾರಿಗಳನ್ನು ಪೀಡಿಸುವದು ಪಿಕೆಟಿಂಗ ಇವಕ್ಕೂ ೬ ತಿಂಗಳ ಶಿಕ್ಷೆಯ ಕಾಯದೆಯನ್ನು ಮಾಡಿದ್ದಾರೆ.

ಧಾರಾಸಣದಲ್ಲಿ ಲಾಠಿಯ ಹೊಡತದಿಂದ ೫೦ ಜನರಿಗೆ ಗಾಯಗಳಾಗಿವೆ.

ಏಳು ಜನ ವಕೀಲರ ದಸ್ತಗಿರಿ

—(೦)—

ಬಂಗಾಲಕ್ಕೆ ಸೇರಿದ ಕೃಷ್ಣನಗರದಲ್ಲಿ ಶ್ರೀ. ಸರೋಜಿನಿಯವರನ್ನು ಹಿಡಿದ ಬಗ್ಗೆ ಹರತಾಳವಾಯಿತು ಸಾರ್ವಜನಿಕ ಮೆರವಣಿಗೆ ತೆಗೆಯಬಾರದೆಂದು ಪೋಲೀಸರು ಹುಕುಮು ಮಾಡಿದರು. ಆದರೂ ಜನರು ಕಾಯದೆಭಂಗ ಮಾಡಿ, ಮೆರವಣಿಗೆ ತೆಗೆದರು. ಈ ಅಪರಾಧಕ್ಕಾಗಿ ಪೋಲೀಸರು ಮುಖಂಡರೆಂದು ಏಳು ಜನ ವಕೀಲರನ್ನು ದಸ್ತಗಿರ ಮಾಮಾಡಿದ್ದಾರೆ.

ವಿದ್ಯಾರ್ಥಿಗಳು ಸತ್ಯಾಗ್ರಹ ಗೆದ್ದರು.

—(೦)—

ಅಜ್ಮೀರಲ್ಲಿ ವಿದ್ಯಾರ್ಥಿಗಳು ಭಾರತೀಯ ಹಾಡುಗಳ ಪುಸ್ತಕಗಳನ್ನು ಹಿಡಕೊಂಡು ಭಜನೆ ಮಾಡುತ್ತಾ ನಡದಿದ್ದರು. ಪೋಲಿಸರು ಇವರನ್ನು ಚಾವಡಿಯ ಹತ್ತರ ತಡೆದರು. ವಿದ್ಯಾರ್ಥಿಗಳು ಅಲ್ಲೇ ಸತ್ಯಾಗ್ರಹ ಮಾಡಿ ಕೂತರು. ಇವರಿಗೆ ಸಾವಿರ ಜನ ಅನುಕೂಲವಾಗಿ ಕೂತಿತು. ರಾತ್ರಿಯಾಯಿತು. ಆದರೂ ಇವರು ಕದಲಲಿಲ್ಲ. ಕೊನೆಯಲ್ಲಿ ಪೋಲೀಸರು ಕಾಂಗ್ರೆಸವರ ಕೂಡ ರಾಜೀಯಾಗಿ, ಅವರ ಪುಸ್ತಕಗಳನ್ನು ಬಿಟ್ಟುಕೊಟ್ಟರು. ವಿದ್ಯಾರ್ಥಿಗಳು ಜಯಘೋಷ ಮಾಡುತ್ತಾ, ಸತ್ಯಾಗ್ರಹದ ಮಹೋತ್ಸವ ಮಾಡಿದರು.

ಸರ ಸಾಯಮನ ಸಾಹೇಬರ ಸ್ವಾರ್ಥತ್ಯಾಗ—

ಸರ ಸಾಯಮನ್ನ ಸಾಹೇಬರ ರಿಪೋರ್ಟ ಬರೆಯುವ ಕೆಲಸ ಮುಗಿಯಿತು. ಇವರು ಪುನಃ ವಕೀಲಿ ಪ್ರಾರಂಭಿಸಿದರು. ವರ್ಷಕ್ಕೆ ಏಳೆಂಟು ಲಕ್ಷ ರೂಪಾಯಿಯ ಪ್ರಾಪ್ತಿಯುಂಟು. ಎರಡು ವರ್ಷ ವಕೀಲಿ ಮಾಡದ್ದಕ್ಕೆ ೧೫ ಲಕ್ಷ ರೂಪಾಯಿ ಪ್ರಾಪ್ತಿ ಕಳಕೊಂಡು ಇಂಗ್ಲಂಡದ ಸೇವೆಗಾಗಿ ಇಷ್ಟು ಸ್ವಾರ್ಥತ್ಯಾಗ ಮಾಡಿದರು.

WANTED

WANTED:—Candidates desiring to serve in Government Railway and Canal Departments. Full particulars and Railway Fare Certificate on 2 annas stamps; apply to:—

IMPERIAL TELEGRAPH
COLLEGE, Nai Sarak,
DELHI.

ಶೀರೆ! ಪತ್ತಲ!! ಕಿರಗಿ !!

ಶ್ರೀ ದತ್ತ ವ್ಹೀವಿಂಗ್ ಮಿಲ್

ಹುಬ್ಬಳ್ಳಿ.

—(೦)—

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು,

—(೦)—

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಚಿಕಿತ್ಸೆ ಮಾಡಿ, ನಿಮಗೆ ಬೇಕಾದ ಮಾಲು ಕೊಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ- ಮಾಲು ತಿರಗಿ ತಕ್ಕೊಳ್ಳುವೆವು.

ಮೈಸೂರ ಊದುಬತ್ತಿ

—(೦)—

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ತಳ ಶೊಲೆಯ ಸೇರು ೧ಕ್ಕೆ ೩—೦—೦
ಕೃಷ್ಣ ಪಾರಿಜಾತ ಅತ್ತರು ತೊಲೆ ೧ಕ್ಕೆ ೪—೦—೦

೧೯—೧೧—೩೯ ಮೈಸೂರ ಸ್ಟೋರ್ಸ,
ಬೆಳಗಾವಿಯವರ ಗಲ್ಲಿ
ಹುಬ್ಬಳ್ಳಿ

ಸುಸಮಯ

—(೦)—

ಎ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಂಘ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೈದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೇವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ.

☞ ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಜಾಹಿರಾತಿಯನ್ನು ನೋಡಿರುವಿರೆಂಬುದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ
ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಯಾಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗ ದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದೆ, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ವರಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರಿದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಅದರಿಂದ ತೊಡಲೆ ಅರ್ಜೀಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ಪ್ಪಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲ ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಭಾಷಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರುಆಣೆ ಡಬಲ ಕಾಲಮಿನ ವಳಿಗೆ ಇಮ್ಮಡಿ ಚಾರ್ಜ ಖಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—()(೦)()—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದು. ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ಹ್ವಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 14

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಸೋಮವಾರ ತಾರೀಖು ೨ ನೇ ಜೂನ ೧೯೩೦ (ಸಂಚಿಕೆ ೧೩೫

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರು)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂಡಿಗೆಯು ಎಂಟು ಲಕ್ಷದ ಮೇಲುಂಟು. ಚಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ-ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨
೬ ,,	೭
೩ ,,	೪
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೮

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

ಮ್ಯಾ. ವಿಜಯ ಧಾ

ಇಳೀ ಮುಣುಗಿದವರಿಗೆ ಚಳಿಯ ಅಂಜಿಕೆಯೇ?

ಲಾರ್ಡ ಆಯರ್ವಿನಸಾಹೇಬರು ಮೊನ್ನಿನ ದಿವಸ ಪುನ: ಎರಡು ಆರ್ಡಿನನ್ಸ ತೆಗೆದಿದ್ದಾರೆ. ಆರ್ಡಿನನ್ಸವೆಂದರೆ- ಲಾರ್ಡಸಾಹೇಬರ ಮನಸಿಗೆ ಬಂದಂತೆ ಕೊಡುವ ಹುಕುಮು, ಇದಕ್ಕೆ ಪುರಾತನ ಕಾಲದ ಮೊಗಲಾಯಿ, ವರ್ತಮಾನ ಕಾಲದ ಝುಲೂಮಶಾಹಿ ಎಂದು ಹೇಳಬಹುದು. ಲಾರ್ಡಸಾಹೇಬರು ಎಷ್ಟೇ ಸಾತ್ವಿಕ ವಿಚಾರದಿಂದ ಆರ್ಡಿನನ್ಸ ತೆಗೆದರೂ, ಅದು ಏಕಪಕ್ಷೀಯವಾಗಿ, "ಬಾಳಾಖೂನಿ ಮಾಫ" ವೆಂದಂತಾಗುತ್ತದೆ. ವಿಲಾಯತಿಯಲ್ಲಿ ಅಂದರೆ ಬ್ರಿಟಿಷ ಪದ್ಧತಿಯುಂಟಾದಾಗ ಪಾರ್ಲಮೆಂಟ ಸಭೆಯು ತಹಕೂಬಾಗಿದ್ದರೆ ಸ್ಪೇಶಲ ಸಭೆಯನ್ನು ಕರೆಯುವರು. ಅದೇ ಪ್ರಕಾರ ಲಾರ್ಡ ಆಯರ್ವಿನಸಾಹೇಬರು ಲೆಜಿಸ್ಲೇಟಿವ್ಹ ಅಸೆಂಬ್ಲಿ ಮತ್ತು ಕೌನ್ಸಿಲ ಆಫ್ ಸ್ಟೇಟಿನ ಸಭೆಗಳನ್ನು ಕರೆದು, ಅವುಗಳಿಂದ ತಮಗೆ ಬೇಕಾದ ಮಂಜೂರಿಯನ್ನು ಪಡಕೊಳ್ಳಬೇಕಾಗುತ್ತದೆ. ಅಸೆಂಬ್ಲಿಯು ಕಾಂಗ್ರೆಸ ಪಕ್ಷದಿಂದ ಮುಕ್ತವಾಗಿ ಅಪ್ರಸಿದ್ಧ, ಅಪ್ರಬುದ್ಧ ಮತ್ತು ಅಪ್ರಯೋಜಕ ಜನರಿಂದಲೇ ತುಂಬಿದ್ದಿರುತ್ತದೆ. ಇದು ಸಹಜವಾಗಿ ಲಾರ್ಡಸಾಹೇಬರ ನುಡಿಗೆ ಗೋಣು ಅಲಗಾಡಿಸಬಹುದು. ಅಸೆಂಬ್ಲಿಗಿಂತ ಹೆಚ್ಚಿನ ನಂಬಿಗೆಯು ಕೌನ್ಸಿಲ ಆಫ್ ಸ್ಟೇಟದಲ್ಲುಂಟು. ಇದಂತೂ ಮಿಯ್ಯಾ ಬೋಲೆ ದಾಡೀ ಹಾಲೇ ಎಂಬಂತುಂಟು. ಅಂದಬಳಿಕ ಲಾರ್ಡಸಾಹೇಬರು ತಾವೊಬ್ಬರೇ ಅಪಕೀರ್ತಿ ಅಲೌಕಿಕಕ್ಕೇಕೆ ಗುರಿಯಾಗಬೇಕು?

ಇದು ಸರಕಾರದ ದೃಷ್ಟಿಯಿಂದ ವಿಚಾರವಾಯಿತು. ಕಾಂಗ್ರೆಸ ಪಕ್ಷದ ವಿಚಾರ ಮಾಡಿದರೆ ಸಾಹೇಬರ ಆರ್ಡಿನನ್ಸದಲ್ಲಿ ಹುರುಳೇ ಇರುವದಿಲ್ಲ. ಹುಲ್ಲಿನ ಹುಲೀ ಮಾಡಿ, ಬೆದರಿಸುವಂತಿದೆ. ಆರ್ಡಿನನ್ಸ ತೆಗೆಯುವ ಬದಲು ಲಾರ್ಡಸರೇನು ಸಾಧು ಸಂತ ವೃತ್ತಿಯಿಂದಿದ್ದರೇ? ಪುರಂದರದಾಸರಂತೆ ಐಶ್ವರ್ಯದ ಮೇಲೆ ತುಳಸೀ ಪತ್ರಪಟ್ಟಿರುವರೇ? ಸತ್ಯಾಗ್ರಹಿಗಳು ಅಹಿಂಸಾವಾದಿಗಳು; ಅವರು ಅಹಿಂಸಾವಾದಿಗಳೆಂದು ಮಾಡುವ ಆಕ್ರೋಶದ ಕರ್ಕಶ ಧ್ವನಿ ಕೇಳಿ ಕೇಳಿ ಬೇಸತ್ತು ಹೋಗಿದೆ. ಸತ್ಯಾಗ್ರಹಿಗಳು ನಿಜವಾಗಿ ಅಹಿಂಸಾವಾದಿಗಳಾಗಿದ್ದಾರೆ. ಇವರು ದೇವರಿಕ್ಕಿಂತ ಮೆತ್ತಗಿನಂಥ ಜನರು. ನಿಲ್ಲಿರಿ; ನಿಮ್ಮನ್ನು ಹಿಡಿದಿರುತ್ತೇವೆಂದು ಹೇಳಿದರೆ ಸಾಕು. ಅವರು ಜೆಲ್ಲು ಬಡೆದ ಕಲ್ಲಿನಂತೆ ನಿಲ್ಲುವರು. ಆದರೂ ಪೋಲಿಸರು ಇವರ ತಲೆ ಒಡೆಯುವರು. ರಕ್ತ ಒಂಬಾಳ ಮಾಡುವರು. ರಕ್ತದ ಹಳ್ಳ ಹರಿಸುವರು. ಸರಕಾರವು ಪೋಲಿಸರ ಹಿಂಸೆಯನ್ನು ಅಂತಃಕರಣಪೂರ್ವಕವಾಗಿ ಸಮರ್ಥನ ಮಾಡುತ್ತದೆ. ಅವಶ್ಯವಿದ್ದಷ್ಟೇ ದಂಡೋಪಾಯ ಮಾಡುತ್ತದೆ; ಹೆಚ್ಚಿಗೆ ಇಲ್ಲವೇ ಇಲ್ಲೆನ್ನುವರು. ಹೆಚ್ಚಿಗೆಂದರೇನು? ಪೋಲೀಸರು ದಣಿಯುವ ತನಕ ಹೊಡೆದನಂತರ ಬಿಟ್ಟದ್ದು!! ಹ್ವಾಲಂಟಿಯರರ ಮೇಲೆ ಬೀಳುವ ಬಡಿಗೆಯ ಪ್ರತಿಯೊಂದು ಪೆಟ್ಟು, ಮತ್ತು ಅದಕ್ಕೆ ಹತ್ತುವ ರಕ್ತವು ಸ್ವರಾಜ್ಯ ಸ್ವಾತಂತ್ರ್ಯದ ಕೂಗೆಬ್ಬಿಸುತ್ತದೆಂದೂ, ಆಳರಸರು ಈ ಮಾತನ್ನು ಖಂಡಿತವಾಗಿ ತಿಳಿಯಬೇಕೆಂದೂ ಒಬ್ಬ ಸಾಹೇಬರೇ ಅಂದಿರುತ್ತಾರೆ. ಹೋಗಲಿ, ಆದರೂ ಮಾಡಿ, ಚಳವಳಿಯನ್ನು ಒಂದು ಸಾರೆ ಬೇರೆಂತು ಆರಂಭರ ಉಪಕ್ರಮಿಸಿದ್ದು, ಅದರಲ್ಲಿ ಲಾಠಿಯ ಪ್ರಯೋಗವೂ ಒಂದು ಉಪಾಯವಾಗಿರುವದೆ. ಸರಕಾರದವರು ಇಂಥ ಬೇಕಾದಷ್ಟು ಲೂಟಿ ಲೋಪಾಯ ಮಾಡಿದರೂ, ಸ್ವಯಂಸೇವಕರು ಪ್ರಭ್ರಷ್ಟರಾಗುವದಿಲ್ಲ. ಒಮ್ಮೆ ನಿಮ್ಮ ಯುದ್ಧದಲ್ಲಿ ಇಂಗ್ಲಿಷ ತರುಣರು [illegible] ಸತ್ಯಾಗ್ರಹ, ನಾವು ಹಿಂದೀ ಜನರು ಕಲಿಯೊಡಿಕೊಂಡದ್ದು ಅಗಾಧವಾಗುವದಿಲ್ಲೆಂಬ ಮಾತಡಪರಾಗಿದ್ದರೆ.

ಸರಕಾರದವರು ವರ್ತಮಾನಪತ್ರಗಳ ಮೇಲೆ ಪ್ರಹಾರ ಮಾಡಿದ್ದು ವ್ಯರ್ಥವೇ ಆಯಿತು. ಈ ಮುದ್ರಾಸುರನ ಬಾಯಿಗೆ ಕೆಲ ಪತ್ರಗಳು ಆಹುತಿ ಬಿದ್ದವು. ಮುಂದಾದರೂ ಕೆಲವು ಬೀಳುವವು. ಆದರೆ- ಸರಕಾರದ ಉದ್ದೇಶ ಮಾತ್ರ ಸಫಲವಾಗಲಿಲ್ಲ. ಕಾದ ಹಂಚಿನ ಮೇಲೆ ನಾಲ್ಕು ಹನಿ ಹಾಕಿದಂತೆ!! ದೇಶಕ್ಕೆ ಬೆಂಕಿ ಹತ್ತಿದಾಗ, ನಾಲ್ಕು ತುಂತುರ ಹನಿಗಳಿಂದ ಆಗುವ ಪ್ರಯೋಜನವೇನು? ಸರಕಾರದ ದಬ್ಬಾಳಿಕೆಯನ್ನು ಧ್ವಂಸ ಮಾಡಬೇಕೆಂದು ಇವರು ಪಣ ತೊಟ್ಟಿದ್ದಾರೆ. ಎರಡೂ ಪಕ್ಷಗಳು ಹೀಗೆ ಜಗ್ಗಾಡುತ್ತಿರುವಾಗ ಸೋಲುಗೆಲುವಿನ ಹೊರತು ಅನ್ಯಮಾರ್ಗವೇ ಉಳಿಯುವದಿಲ್ಲ. ಉಪ್ಪಿನ ಕಾಯಿದೆ, ತಲೆಯೊಡೆವ ಲಾಠೀ ಪ್ರಯೋಗ, ವರ್ತಮಾನಪತ್ರಗಳ ಬಾಯಿ ಬಂದು ಮಾಡುವ ಗದಾ ಪ್ರಯೋಗ ಇವೆಲ್ಲ ಶಸ್ತ್ರಗಳು ಮೊಂಡವಾದವೆಂದು ಕಂಡು ಬಂದದ್ದರಿಂದಲೇ ಆಳರಸರು ಹೊಸದಾಗಿ ಎರಡು ಆರ್ಡಿನನ್ಸಗಳನ್ನು ತೆಗೆದಿದ್ದಾರೆ. ಹಪ್ತೆ ಕೊಡಬೇಡಿರೆಂದು ಹೇಳುವಂಥ ಮತ್ತು ಸರಕಾರೀ ಕಾಮದಾರರಿಗೆ ಬಹಿಷ್ಕಾರ ಹಾಕಬೇಕೆನ್ನುವಂಥ ಜನರಿಗೆ ಆರಾರು ತಿಂಗಳ ಶಿಕ್ಷೆ ಎಂದು ಜಾಹೀರ ಮಾಡಿದ್ದಾರೆ. ಸಾಹೇಬರು ತಮ್ಮ ದೃಷ್ಟಿಯಿಂದ ದೊಡ್ಡ ಕೆಲಸ ಮಾಡಿದಂತಾಗಿರಬಹುದು. ಕಾಂಗ್ರೆಸದವರೂ, ಸ್ವಯಂಸೇವಕರೂ ಈ ಜಾಹೀರನಾಮೆ ನೋಡಿ, ಹೊಟ್ಟೆ ಹಿಡಿಹಿಡಿಯಾಗುವಷ್ಟು ನಕ್ಕರು. ಮತ್ತು ಒಂದು ರೀತಿಯಿಂದ ಅವರಿಗೆ ಸಮಾಧಾನವೇ ಆಯಿತು. ಉಪ್ಪಿನ ಕಾಯಿದೆ ಮುರಿದವರಿಗೆ ಆರುತಿಂಗಳ ಶಿಕ್ಷೆ ಇದ್ದರೆ- ಕಾಯಿದೆ ಮುರಿಯಲು ಉತ್ತೇಜನ ಕೊಟ್ಟವರಿಗೆ ಎರಡು ವರ್ಷ ಶಿಕ್ಷೆ ಇರುತ್ತದೆ. ಕೆಟ್ಟ ಮೂರು ಮೋಸವಾದರೆ- ಕಾಯಿದೆ ಆರುವೆಗಳ!! ಉಪ್ಪಿನ ಕಾಯಿದೆ ಮುರಿಯುವ ಉತ್ತೇಜನಕ್ಕಿಂತ ಹಪ್ತೆ ಕೊಡಬೇಡಿರಿ; ಸರಕಾರೀ ಕಾಮದಾರರಿಗೆ ನೀರು ನಳ ಕೊಡಬೇಡಿರೆಂದು ಸಾರುತ್ತಾ ಹೋದರೆ- ಆರೇ ತಿಂಗಳ ಶಿಕ್ಷೆ! ಶಿಕ್ಷೆಯು ಸ್ವಲ್ಪವಾದಂತೆ, ಲಾಠೀ ಪ್ರಯೋಗದ ಭಯವೂ ಉಳಿಯದು. ಏಕೆಂದರೆ- ಪೋಲಿಸರಿಂದ ಹೊಡಿಸಿಕೊಳ್ಳುವಂಥ ಕಷ್ಟದ ಪ್ರಸಂಗವೂ ಇರುವದಿಲ್ಲ. ಸರಕಾರೀ ಕಾಮದಾರರಿಗೆ ಅನ್ನ ನೀರು ಕೊಡಬೇಡಿರೆಂದು ಹೇಳುವ ಸ್ವಯಂಸೇವಕನಿಗೆ ಮ್ಯಾಜಿಸ್ಟ್ರೇಟನು ಆರು ತಿಂಗಳ ಶಿಕ್ಷೆ ಕೊಡುವನು. ಆದರೆ ಆ ಸ್ವಯಂಸೇವಕನು ತಾನು ಹೇಳಿದ ಹೊರತು ಸನ್ನ ಮನೆಯವರಿಗೆ ಬೇಕಾದ ಸಿಗದೆಂದು ಮ್ಯಾಜಿಸ್ಟ್ರೇಟನಿಗೆ ಹೇಳೇ ಹೇಳುವನು. ಹೇಗಾದರೂ, ಏನಾದರೂ ಸರಕಾರೀ ಕಾಮದಾರರ ಅವಸ್ಥೆ [illegible] ಬದಲಾಗುವದಿಲ್ಲ. ಸಾಮಾಜಿಕ ಸಂಕಟ ತಪ್ಪುವದಿಲ್ಲ. ಕೆಣಕಿದ ಹುಲಿ [illegible] ಬೆಳೆಸಿ, ಮೂಲ ಮಾಡಿಕೊಂಡಂತೆ!! ಒಟ್ಟಿನಿಂದ ನೋಡಲು- ಆಳರಸರು ಈವರೆಗೆ ಸತ್ಯಾಗ್ರಹ ಮರಿಯದಾಗಿ, ಸೋತೆವೆಂದು ಕಬೂಲಿ ಜವಾಬು ಕೊಟ್ಟಂತಾಗಿರುತ್ತದೆ.

ಪೇಶಾವರದ ಕಮೀಟಿಗೇಕೆ ಬಹಿಷ್ಕಾರ ಹಾಕಿದರು.

—(o)—

ಖಿಲಾಫತ ಕಮೀಟಿಯವರು ಪೇಶಾವರದಲ್ಲಿ ಕೂತ ವಿಚಾರಣೆ ಕಮೀಟಿಗೇಕೆ ಬಹಿಷ್ಕಾರ ಹಾಕಿದ್ದೇವೆಂಬ ಪತ್ರವನ್ನು ಲಾರ್ಡ ಆಯರ್ವಿನ ಸಾಹೇಬರಿಗೆ ಬರೆದಿರುತ್ತಾರೆ. ಅದರಲ್ಲಿಯ ಮುಖ್ಯಾಂಶಗಳು:-

೧ ಸರಕಾರದವರು ಪ್ರಸಿದ್ಧ ಮಾಡಿದ ರಾಜದ್ರೋಹದ ಕಾಯದೆಯಿಂದ ನಾಲ್ಕು ಜನರಾದರೂ ಒಂದೆಡೆಯಲ್ಲಿ ಕೂಡುವದು ಅವಶ್ಯಕವಾಗಿದ್ದು, ಈ ಮೂಲಕ ಸಾಕ್ಷಿ ಪುರಾವೆಗಳಾಗಿ ಸಹ ಜನರು ಒಂದೆಡೆಯಲ್ಲಿ ಸೇರುವದು ಅಪರಾಧವಾಗುತ್ತದೆ.

೨ ಯಾವದೊಂದು ಯೋಗ್ಯವಾದ ಕಮೀಟಿ ಕೂಡಿಸಿ, ಅದರ ವಿದ್ಯಮಾನ ಸಾಕ್ಷಿ ಪುರಾವೆ ಕೊಡುವದೇ ವಿಹಿತವಾಗುತ್ತದೆ. ಇಂಥ ಕಮೀಟಿಯು ಸ್ವತಂತ್ರ ಸಾಕ್ಷಿದಾರರನ್ನು ನಿಲ್ಲಿಸುವದಾಗುವದಿಲ್ಲ.

೩ ಮಹತ್ವದ ಸಾಕ್ಷಿದಾರರೆಲ್ಲರು ತುರಂಗದಲ್ಲಿರುವರು. ಅಥವಾ ಕಿಲ್ಲೆಯಲ್ಲಿ ಲಾಕಪ್ಪಿನಲ್ಲಿರುವರು.

೬ ಸರಕಾರದವರು ಸಾಕ್ಷೀ ಪುರಾವೆಯನ್ನು ಕೂಡಿ ಹಾಕಲು ನೇಮಿಸಿದಂಥ ಕಾಮದಾರನು ಊರ ಜನರ ಸಾಕ್ಷಿಗಳನ್ನು ಕೂಡಿ ಹಾಕುವದಕ್ಕೆ ಲಕ್ಷ್ಯಗೊಡುವದಿಲ್ಲ.

೭ ಸರಕಾರದವರು ಒಮ್ಮೆಲೇ ಕಾಯದೆಯನ್ನು ತೆಗೆದು ಹಾಕಿದರೇ ಸ್ವತಂತ್ರ ಸಾಕ್ಷಿಗಳು ದೊರೆಯುವವು.

ಎರಡು ಆರ್ಡಿನನ್ಸಗಳು

ಪಿಕೆಟಿಂಗ ಮತ್ತು ಕರ ಕೊಡಬಾರದೆಂಬದಕ್ಕೆ ಪ್ರತಿಬಂಧ

—:(೦):—

(೧) ಕರ ಕೊಡಬಾರದೆಂದು, ಯಾವದೊಂದು ಕರ ಕೊಡಬಾರದೆಂದು, ಅಥವಾ ಸರಕಾರೀ ರಾಜಾದೇ ವಾಪಾಸು ಕೊಡಬಾರದೆಂದು ಅಥವಾ ಅದಕ್ಕೆ ಕೊಡುವದಕ್ಕೆ ಆದಷ್ಟು ತಡಮಾಡಬೇಕೆಂದು ಜನರಿಗೆ ಉತ್ತೇಜನ ಕೊಡುವಂಥವರು ಅಪರಾಧಿಗಳಾಗುತ್ತಿದ್ದು ಈ ಗುನ್ಹೆಗೆ ಆರು ತಿಂಗಳು ಕೈದು ಅಥವಾ ದಂಡ, ಇಲ್ಲವೆ ದಂಡ ಮತ್ತು ಶಿಕ್ಷೆ ಎರಡೂ ಪ್ರಕಾರದ ಶಿಕ್ಷೆ ವಿಧಿಸಲಾಗುವದೆಂದು ಸರಕಾರ ಹುಕುಮು ಇದ್ದು ಇದು ಹಿಂದುಸ್ಥಾನದಲ್ಲಿ ೧ನೇ ತಾರೀಖಿನ ಅಮಲಿನಲ್ಲಿ ಬರುತ್ತದೆ. ಈ ಅಪರಾಧವು ಕಾಗ್ನಿಜಬಲ ಮತ್ತು ನಾನ-ಕಾಗ್ನಿಜಬಲವಾಗಿ, ಈ ಸಂಬಂಧವಾಗಿ ಪ್ರಸಿದ್ಧ ಮಾಡುವ ಹಸ್ತಪತ್ರಿಕೆ, ಚಿತ್ರ ಫೋಟೋಗ್ರಾಫ ಮುಂತಾದವುಗಳನ್ನು ಜಪ್ತ ಮಾಡಬೇಕೆಂದೂ ಸ್ಥಾನಿಕ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ.

೨ ಗಡಂಗ ಮತ್ತು ವಿಲಾಯತಿ ಜವಳಿಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದು ಒಂದು ಅಪರಾಧವೆಂದು ಜಾಹೀರ ಮಾಡಿದ್ದಾರೆ. ಇದಕ್ಕೂ ದಂಡ ಮತ್ತು ಶಿಕ್ಷೆ ಎರಡೂ ಶಿಕ್ಷೆಗಳು ಹೇಳಲ್ಪಟ್ಟಿವೆ.

೩ ಸರಕಾರಿ ಕಾಮದಾರರಿಗೆ ಅನ್ನ ನೀರಿನಂಥ ನಿತ್ಯ ನಿರ್ವಾಹಕ ಪದಾರ್ಥ ಮಾರಲಿಕ್ಕೆ ಕೊಡದಿರುವದು, ಅವರಿಗೆ ಮನೆಯ ಬಾಡಿಗೆ ಕೊಡದಿರುವದು, ಅಥವಾ ಅವರ ಮನೆಗೆ ಸಾಮಾಜಿಕ ಬಹಿಷ್ಕಾರ ಹಾಕುವಂಥವರಿಗೆ ಮೇಲಿನಂತೆ ದಂಡ ಶಿಕ್ಷೆ ವಿಧಿಸಲ್ಪಡುವದು. ಈ ರೀತಿ ಪಿಕೆಟಿಂಗ ಮಾಡುವ ಸ್ವಯಂಸೇವಕನ ವಿರುದ್ಧ ಅಂಗಡಿಕಾರನಾಗಲಿ, ಸರಕಾರೀ ಕಾಮದಾರನಾಗಲಿ ಪೋಲಿಸರ ಕಡೆಗೆ ಫಿರ್ಯಾದಿ ಮಾಡಿದರೆ ಪೋಲಿಸರು ಸ್ವಯಂಸೇವಕ ಅಥವಾ ಉತ್ತೇಜನ ಕೊಡುವಂಥವನನ್ನು ಎಳಕೊಂಡು ಹೋಗಿ, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುವಂತೆ ಪೋಲಿಸರಿಗೆ ಅಧಿಕಾರ ಕೊಟ್ಟಿದ್ದಾರೆ.

ವೀರ ವಾಮನರಾಯರ ದಸ್ತಗಿರಿ

—(೦)—

ವರ್‍ಹಾಡದಲ್ಲಿ ಪ್ರಖ್ಯಾತ ಅಸಹಕಾರಿಯಾದ ವೀರ ವಾಮನರಾಯರನ್ನು ರಾಜದ್ರೋಹದ ಆರೋಪದಿಂದ ಹಿಡಿದರು. ಇವರು ಅಲ್ಲಿಯ ಯುದ್ಧ ಮಂಡಲದ ಅಧ್ಯಕ್ಷರು. ಇವರ ತೆರವಾದ ಸ್ಥಳವನ್ನು ಹಿಂದೆ ಪ್ರತಿಯೋಗಿ ಸಹಕಾರಿಯಾಗಿದ್ದ ಅಸೆಂಬ್ಲಿ ಮೆಂಬರ ಶ್ರೀ ಅಣೆ ಮಾಧವರಾಯರು ಸ್ವೀಕರಿಸಿದ್ದಾರೆ.

ಕೌನ್ಸಿಲದ ಮೂರು ಸ್ಥಳಗಳು ಬಿಕ್ಕಲ್ಲದವಾದವು

—(೦)—

ಸುರತದ ಕತಿಯಿಂದ ಕೌನ್ಸಿಲ ಮೆಂಬರರಾಗಿದ್ದ ಡಾಕ್ಟರ ದೀಕ್ಷಿತ, ರಾವಬಹಾದ್ದೂರ ಭೀಮಭಾಯಿ ನಾಯಿಕ ಮತ್ತು ಶ್ರೀ ಶಿವದಾಸನಿ ಇವರು ದಬ್ಬಾಳಿಕೆಯ ನಿಷೇಧ ಮಾಡಲು ರಾಜೀನಾಮೆ ಕೊಟ್ಟಿದಾರೆ. ಶುಕ್ರವಾರ ದಿವಸ ಉಮೇದವಾರರು ಅರ್ಜಿ ಕೊಡುವ ತಾರೀಖು ಇತ್ತು. ಆದರೆ ಒಬ್ಬನೂ ಕಲೆಕ್ಟರರ ಕಚೇರಿಯ ಕಡೆಗೆ ಹಣಕಿ ಸಹ ಹಾಕಲಿಲ್ಲ.

ಸತ್ಯಾಗ್ರಹಕ್ಕೆ ಅಪ್ಪಣೆ ಕೊಡದ್ದಕ್ಕೆ ಆತ್ಮಹತ್ಯೆ

—(೦)—

ಕಾನಪೂರದಲ್ಲಿ ಲಾಲಾ ಕಾಮತಾಲರೆಂಬ ಸುಪ್ರಸಿದ್ಧರಾದ ಕಬ್ಬಿಣ ವ್ಯಾಪಾರಿಗಳಿದ್ದಾರೆ. ಅವರು ತಮ್ಮ ಮಗನಿಗೆ ಸತ್ಯಾಗ್ರಹಿಯಾಗಲು ಅಪ್ಪಣೆ ಕೊಡಲಿಲ್ಲ. ಆದುದರಿಂದ ಅವನು ರೇಲ್ವೆಯ ಎಂಜಿನದ ತಳದಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು. ಊರವರು ದೊಡ್ಡ ಮೆರವಣಿಗೆ ತೆಗೆದು ಇವನ ಅಂತ್ಯವಿಧಿಯನ್ನು ಜರುಗಿಸಿದರು.

ಮಹಾತ್ಮರನ್ನು ಬಿಡಬೇಕೆಂದು ವಿಲಾಯತಿಯಲ್ಲಿ ಲೋಕಜಾಗ್ರತಿ.

—(೦)—

ಇಂಗ್ಲಂಡದಲ್ಲಿರುವ ಧಾರ್ಮಿಕ ಸಂಸ್ಥೆಯವರು ಮಹಾತ್ಮರನ್ನು ಬಿಟ್ಟು, ಅವರ ಚಳವಳಿಯು ಶಾಂತವಾಗುವ ರೀತಿಯನ್ನು ಗೊತ್ತುಪಡಿಸಬೇಕೆಂದು ಮೆ. ಬೆನ್ನ ವೆಜ್ವುಡ ಸಾಹೇಬರ ಕಡೆಗೆ ಹೋಗಿ, ಮಹಾತ್ಮರು, ಸರ ರವೀಂದ್ರನಾಥ ಟಾಗೋರರಂಥವರು ಈ ಚಳವಳಿಯಲ್ಲಿದ್ದು, ಇದರ ಮಹತ್ವವನ್ನು ಲಕ್ಷಿಸಿ, ಶಾಂತಿಯ ಮಾರ್ಗವನ್ನು ಹುಡುಕಿ ತೆಗೆಯಬೇಕೆಂದು ಸೂಚಿಸಿದ್ದಾರೆ.

೨೧ ಸಾವಿರ ಮುಸಲಮಾನರು ಕಾಯದೆಭಂಗದಲ್ಲಿ ಸೇರಿದರು.

—(೦)—

ದಿಲ್ಲಿಯಲ್ಲಿ ಶುಕ್ರವಾರದ ನಮಾಜದ ಕಾಲಕ್ಕೆ ೨೧ ಸಾವಿರ ಜನರು ಸೇರಿದ್ದರು. ಅವರೆಲ್ಲರೂ ಕಾಯದೆಭಂಗದಲ್ಲಿ ಸೇರಬೇಕೆಂದು ಠರಾವಾಯಿತು. ಅನೇಕರು ಸ್ವಯಂಸೇವಕರಾದಂತೆ ಹೆಸರು ಬರೆಯಿಸಿದರು.

ಉಪ್ಪಿನ ಮುಸಲ್ಮಾನ ಮುದುಕನಿಗೆ ಭಯಂಕರ ಹೊಡತ

—:*:—

ಧಾರಾಸಾನದಲ್ಲಿ ಒಬ್ಬ ಮುಪ್ಪಿನ ಮುಸಲ್ಮಾನ ಮುದುಕನು ಸ್ವಯಂಸೇವಕರು ದಾಳಿಯಿಡುವದನ್ನು ನೋಡ ಹೋಗಿದ್ದನು. ಆಗ ಪೋಲಿಸರು ಇವನಿಗೆ ಚನ್ನಾಗಿ ಹೊಡದು ತಿನ್ನಿಸಿದರು.

ಬೆಳಗಾವಿ ಜಿಲ್ಹೆಯಲ್ಲಿ ದಬ್ಬಾಳಿಕೆ

—(೦)—

ಬೆಳಗಾವಿ ಜಿಲ್ಹೆಯ ಸಾಹಾಪೂರದಲ್ಲಿ ಸರಕಾರೀ ಶಿಂದೀ ಗಿಡಗಳನ್ನು ಕಡಿದದ್ದಕ್ಕಾಗಿ ಏಳು ಜನರನ್ನು ಹಿಡಿದಿದ್ದಾರೆ. ಅವರಲ್ಲಿ ಮೂವರು ಮುಸಲ್ಮಾನರಿದ್ದಾರೆ. ಬಸಾಪುರದಲ್ಲಿ ಸಂಪಗಾಂವದ ಶ್ರೀ ಭೀಮರಾವ ನಾಯಕರಿಗೆ ಉಪ್ಪಿನ ಕಾಯದೆ ಮುರಿದದ್ದಕ್ಕೆ ನಾಲ್ಕು ತಿಂಗಳ ಶಿಕ್ಷೆಯಾಗಿದೆ. ಬೈಲಹೊಂಗಲದಲ್ಲಿ ಮಧ್ವಾಚಾರ್ಯ ಹುಕ್ಕೇರಿಯವರನ್ನು ಹಿಡಿದಿದ್ದಾರೆ

ಕರಾಚಿಯಿಂದ ಧಾರಾಸಾನದ ಉಪ್ಪಿನ ವಖಾರದ ಮೇಲೆ ದಾಳಿಯಿಡಲು ೩೦ ಜನ ಸ್ವಯಂಸೇವಕರು, ಶ್ರೀ ಮಾರಿವಾಲಾ ಎಂಬ ಫಾರ್ಸಿ ಪ್ರೊಫೆಸರರ ನೇತೃತ್ವದ ಕೆಳಗೆ ಹೊರಟಿದ್ದಾರೆ.

ವೈಕೂರದಲ್ಲಿ ಸಿಡ್ಲು ಬಡಿದು ಒಂದು ಮೋಟಾರ ಸುಟ್ಟಿತು. ಕೊಯಮತ್ತೂರಿನಲ್ಲಿ ಕರೆದ ಗಡಂಗ ಸುಟ್ಟಿತು

ಹೈದರಾಬಾದಿನ ನಿಜಾಮರು, ಮಹಾತ್ಮರು ಮತ್ತು ಲಾರ್ಡ ಆಯರ್ವಿನರು ಸೇರಿ, ಹಿಂದುಸ್ಥಾನದ ಭಾವೀ ಸ್ವರಾಜ್ಯದ ಘಟನೆ ಮಾಡಬೇಕು; ಅಂದರೆ ಅದು ಎಲ್ಲರಿಗೂ ಒಪ್ಪಿಗೆಯಾಗುವದೆಂದು ಒಬ್ಬ ಮುಸಲಮಾನ ಗೃಹಸ್ಥರು ಸೂಚಿಸಿದ್ದಾರೆ.

R. N. B 1443

ವಿಜಯ

ಸಾಪ್ತಾಹಿಕ — ಬೆಲೆ ೧ ಅಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧: ಧಾರವಾಡ ಮಂಗಳವಾರ ತಾರೀಖು ೩ ನೇ ಜೂನ ೧೯೩೦ (ಸಂಚಿಕೆ ೨

ಇಳೀ ಮುಣುಗಿದವರಿಗೆ ಚಳಿಯ ಅಂಜಿಕೆಯೇ?

ಲಾರ್ಡ ಆಯುರ್ವಿನಸಾಹೇಬರು ಮೊನ್ನಿನ ದಿವಸ ಪುನಃ ಎರಡು ಆರ್ಡಿನನ್ಸ ತೆಗೆದಿದ್ದಾರೆ. ಆರ್ಡಿನನ್ಸವೆಂದರೆ- ಲಾರ್ಡಸಾಹೇಬರ ಮನಸಿಗೆ ಬಂದಂತೆ ಕೊಡುವ ಹುಕುಮು. ಇದಕ್ಕೆ ಪುರಾತನ ಕಾಲದ ಮೊಗಲಾಯಿ, ವರ್ತಮಾನ ಕಾಲದ ಝುರಶಾಹಿ ಎಂದು ಹೇಳಬಹುದು. ಲಾರ್ಡಸಾಹೇಬರು ಎಷ್ಟೇ ಸಾತ್ವಿಕ ವಿಚಾರದಿಂದ ಆರ್ಡಿನನ್ಸ ತೆಗೆದರೂ, ಅದು ಏಕಪಕ್ಷೀಯವಾಗಿ, "ಬಾಕಾಖೂನ ಮಾಫ" ವೆಂದೆಂತೆನಿಸುತ್ತದೆ. ವಿಲಾಯತಿಯಲ್ಲಿ ಅಂಥ ಬಿಕ್ಕಟ್ಟಿನ ಪರಿಸ್ಥಿತಿಯುಂಟಾದಾಗ ಪಾರ್ಲಮೆಂಟ ಸಭೆಯು ಕಚೇರಿಯಾಗಿದ್ದರೆ- ಸ್ಪೇಶಲ ಸಭೆಯನ್ನು ಕರೆಯುವರು. ಅದೇ ಪ್ರಕಾರ ಲಾರ್ಡ ಆಯುರ್ವಿನಸಾಹೇಬರು ಲೆಜಿಸ್ಲೇಟಿವ ಅಸೆಂಬ್ಲಿ ಮತ್ತು ಕೌನ್ಸಿಲ ಆಫ್ ಸ್ಟೇಟದ ಸಭೆಗಳನ್ನು ಕರೆದು, ಅವುಗಳಿಂದ ತಮಗೆ ಬೇಕಾದ ಮಂಜೂರಿಯನ್ನು ಪಡಕೊಳ್ಳಬೇಕಾಗುತ್ತದೆ. ಅಸೆಂಬ್ಲಿಯು ಕಾಂಗ್ರೆಸ ಪಕ್ಷದಿಂದ ಮುಕ್ತವಾಗಿ ಅಪ್ರಸಿದ್ಧ, ಅಪ್ರಬುದ್ಧ ಮತ್ತು ಅಪ್ರಯೋಜಕ ಜನರಿಂದಲೇ ತುಂಬಿದ್ದಿರುತ್ತದೆ. ಇದು ಸಹಜವಾಗಿ ಲಾರ್ಡಸಾಹೇಬರ ನುಡಿಗೆ ಗೋಣು ಅಗಳಾಡಿಸಬಹುದು. ಅಸೆಂಬ್ಲಿಗಿಂತ ಹೆಚ್ಚಿನ ನಂಬಿಗೆಯು ಕೌನ್ಸಿಲ ಆಫ್ ಸ್ಟೇಟದಲ್ಲುಂಟು. ಇದಂತೂ ಮಿಯ್ಯಾ ಬೋಲೆ ದಾಡೀ ಹಾಲೇ ಎಂಬಂತುಂಟು. ಅಂದಬಳಿಕ ಲಾರ್ಡಸಾಹೇಬರು ತಾವೊಬ್ಬರೇ ಅಪಕೀರ್ತಿ ಅಲೌಕಿಕಕ್ಕೇಕೆ ಗುರಿಯಾಗಬೇಕು?

ಇದು ಸರಕಾರದ ದೃಷ್ಟಿಯಿಂದ ವಿಚಾರವಾಯಿತು. ಕಾಂಗ್ರೆಸ ಪಕ್ಷದ ವಿಚಾರ ಮಾಡಿದರೆ- ಸಾಹೇಬರ ಆರ್ಡಿನನ್ಸದಲ್ಲಿ ಹುರುಳೇ ಇರುವದಿಲ್ಲ. ಹುಲ್ಲಿನ ಹುಲೀ ಮಾಡಿ, ಬೆದರಿಸುವಂತಿದೆ. ಆರ್ಡಿನನ್ಸ ತೆಗೆಯುವ ಮೊದಲು ಆಳರಸರೇನು ಸಾಧು ಸಂತ ವೃತ್ತಿಯಿಂದಿದ್ದರೇ? ಪುರಂದರದಾಸರಂತೆ ಐಶ್ವರ್ಯದ ಮೇಲೆ ತುಳಸೀ ಪತ್ರವಿಟ್ಟಿರುವರೇ? ಸತ್ಯಾಗ್ರಹಿಗಳು ಅಹಿಂಸಾವಾದಿಗಳು; ಅವರು ಹಿಂಸಾವಾದಿಗಳೆಂದು ಮಾಡುವ ಆಕ್ರೋಶದ ಕರ್ಕಶ ಧ್ವನಿ ಕೇಳಿ ಕೇಳಿ ಬೇಸತ್ತು ಹೋಗಿದೆ. ಸತ್ಯಾಗ್ರಹಿಗಳು ನಿಜವಾಗಿ ಅಹಿಂಸಾವಾದಿಗಳಾಗಿದ್ದಾರೆ. ಇವರು ಮೇಣಕ್ಕಿಂತ ಮೆತ್ತಗಾದಂಥ ಜನರು. ನಿಲ್ಲಿರಿ; ನಿಮ್ಮನ್ನು ಹಿಡಿದಿರುತ್ತೇವೆಂದು ಹೇಳಿದರೆ ಸಾಕು. ಅವರು ಬೆಲ್ಲ ಬಡಿದ ಕಲ್ಲಿನಂತೆ ನಿಲ್ಲುವರು ಆದರೂ ಪೋಲೀಸರು ಇವರ ತಲೆ ಒಡೆಯುವರು. ರಕ್ತ ಬಂಬಾಳ ಮಾಡುವರು ರಕ್ತದ ಹರಿ ಹರಿಸುವರು. ಸರಕಾರವು ಪೋಲೀಸರ ಹಿಂಸೆಯನ್ನು ಅಂತಃಕರಣಪೂರ್ವಕವಾಗಿ ಸಮರ್ಥನ ಮಾಡುತ್ತದೆ. ಅವಶ್ಯವಿದ್ದಷ್ಟೇ ದಂಡೋಪಾಯ ನಡೆಸುತ್ತದೆ, ಹೆಚ್ಚಿಗೆ ಇಲ್ಲವೇ ಇಲ್ಲೆನ್ನುವದು. ಹೆಚ್ಚಿಗೆಂದರೇನು? ಪೋಲೀಸರು ದಣಿಯುವ ತನಕ ಹೊಡೆದನಂತರ ಬಿಟ್ಟದ್ದು!! ವ್ಹಾಲಂಟಿಯರರ ಮೇಲೆ ಬೀಳುವ ಬಡಿಗೆಯ ಪ್ರತಿಯೊಂದು ಪೆಟ್ಟು, ಮತ್ತು ಅದಕ್ಕೆ ಹತ್ತುವ ರಕ್ತವು ಸ್ವರಾಜ್ಯ ಸ್ವಾತಂತ್ರ್ಯದ ಕೂಗಿಬ್ಬಿಸುತ್ತಿದೆಂದೂ, ಆಳರಸರು ಈ ಮಾತನ್ನು ನಿಂದಿತವಾಗಿ ತಿಳಿಯಬೇಕೆಂದೂ ಒಬ್ಬ ಸಾಹೇಬರೇ ಅಂದಿರುತ್ತಾರೆ. ಹೇಗಾದರೂ ಮಾಡಿ, ಚಳವಳಿಯನ್ನು ಒಂದು ವಾರ ಬೇಕೆಂದು ಆಳರಸರ ಉದ್ದೇಶವಿದ್ದು, ಅದರಲ್ಲಿ ಲಾಠಿಯ ಪ್ರಯೋಗವೂ ಒಂದು ಉಪಾಯವಾಗಿರುತ್ತದೆ. ಸರಕಾರದವರು ಇಂಥ ಬೇಕಾದಷ್ಟು ಕುಟಿಲೋಪಾಯ ಮಾಡಿದರೂ, ಸ್ವಯಂಸೇವಕರು ಪ್ರತಿಭ್ರಷ್ಟರಾಗುವದಿಲ್ಲ. ಜರ್ಮನಿಯ ಯುದ್ಧದಲ್ಲಿ ಇಂಗ್ಲಿಷ ತರುಣರು ಲಕ್ಷ ಸಂಖ್ಯೆಯಿಂದ ಸತ್ತರೂ, ತಾವು ಹಿಂದೀ ಜನರು ತಲೆಯೊಡಿಸಿಕೊಂಡರೆನ್ನು ಅಗಾಧವಾಗುವದಿಲ್ಲೆಂಬ ಮತದವರಾಗಿದ್ದಾರೆ.

ಸರಕಾರದವರು ವರ್ತಮಾನಪತ್ರಗಳ ಮೇಲೆ ಗದಾಪ್ರಹಾರ ಮಾಡಿದ್ದು ವ್ಯರ್ಥವೇ ಆಯಿತು. ಈ ಮುದ್ರಾಸುರನ ಬಾಯಿಗೆ ಕೆಲ ಪತ್ರಗಳು ಆಹುತಿ ಬಿದ್ದವು. ಮುಂದಾದರೂ ಕೆಲವು ಬೀಳುವವು ಆದರೆ- ಸರಕಾರದ ಉದ್ದೇಶ ಮಾತ್ರ ಸಫಲವಾಗಲಿಲ್ಲ. ಕಾದ ಹಂಚಿನ ಮೇಲೆ ನಾಲ್ಕು ಹನಿ ಹಾಕಿದಂತೆ!! ದೇಶಕ್ಕೆ ಬೆಂಕಿ ಹತ್ತಿದಾಗ, ನಾಲ್ಕು ತುಂತುರ ಹನಿಗಳಿಂದ ಆಗುವ ಪ್ರಯೋಜನವೇನು? ಸರಕಾರದ ದಬ್ಬಾಳಿಕೆಯನ್ನು ಧ್ವಂಸ ಮಾಡಬೇಕೆಂದು ಇವರು ಪಣ ತೊಟ್ಟಿದ್ದಾರೆ. ಎರಡೂ ಪಕ್ಷಗಳು ಹೀಗೆ ಜಗ್ಗಾಟ ನಡೆಸಿದಾಗ ಸೋಲುಗೆಲುವಿನ ಹೊರ್ತು ಅನ್ಯಮಾರ್ಗವೇ ಉಳಿಯುವದಿಲ್ಲ. ಉಪ್ಪಿನ ಕಾಯಿದೆ, ತಲೆಯೊಡುವ ಲಾಠೀ ಪ್ರಯೋಗ, ವರ್ತಮಾನಪತ್ರಗಳ ಬಾಯಿ ಬಂದು ಮಾಡುವ ಗದಾ ಪ್ರಯೋಗ ಇವೆಲ್ಲ ಶಸ್ತ್ರಗಳು ಮೊಂಡವಾದವೆಂದು ಕಂಡು ಬಂದದ್ದರಿಂದಲೇ ಆಳರಸರು ಹೊಸದಾಗಿ ಎರಡು ಆರ್ಡಿನನ್ಸಗಳನ್ನು ತೆಗೆದಿದ್ದಾರೆ. ಹಪ್ತೆ ಕೊಡಬೇಡಿರೆಂದು ಹೇಳುವಂಥ ಮತ್ತು ಸರಕಾರೀ ಕಾಮದಾರರಿಗೆ ಬಹಿಷ್ಕಾರ ಹಾಕಬೇಕೆನ್ನುವಂಥ ಜನರಿಗೆ ಆರಾರು ತಿಂಗಳ ಶಿಕ್ಷೆ ಎಂದು ಜಾಹೀರ ಮಾಡಿದ್ದಾರೆ ಸಾಹೇಬರು ತಮ್ಮ ದೃಷ್ಟಿಯಿಂದ ದೊಡ್ಡ ಕೆಲಸ ಮಾಡಿದಂತಾಗಿರಬಹುದು. ಕಾಂಗ್ರೆಸದವರೂ, ಸ್ವಯಂಸೇವಕರೂ ಈ ಜಾಹೀರನಾಮೆ ನೋಡಿ, ಹೊಟ್ಟೆ ಹಿಡಿಸಲಾರದಷ್ಟು ನಕ್ಕರು. ಮತ್ತು ಒಂದು ರೀತಿಯಿಂದ ತಮಗೆ ಲಾಭವೇ ಅಂದರೆ- ಉಪ್ಪಿನ ಕಾಯಿದೆ ಮುರಿದವರಿಗೆ ಆರುತಿಂಗಳ ಶಿಕ್ಷೆ ಇದ್ದರೆ- ಕಾಯಿದೆ ಮುರಿಯಲು ಉತ್ತೇಜನ ಕೊಟ್ಟವರಿಗೆ ಎರಡು ವರ್ಷ ಶಿಕ್ಷೆ ಇರುತ್ತದೆ. ಕೋಟ ಮೂರು ವೇಳವಾದರೆ- ಕಾಯಿ ಆರುಮೊಳ!! ಉಪ್ಪಿನ ಕಾಯಿದೆ ಮುರಿಯುವ ಉತ್ತೇಜನಕ್ಕಿಂತ ಹಪ್ತೆ ಕೊಡಬೇಡಿರಿ, ಸರಕಾರೀ ಕಾಮದಾರರಿಗೆ ನೀರು ಸಹ ಕೊಡಬೇಡಿರೆಂದು ಸಾರುತ್ತಾ ಹೋದರೆ- ಆರೇ ತಿಂಗಳ ಶಿಕ್ಷೆ! ಶಿಕ್ಷೆಯು ಸ್ವಲ್ಪವಾದಂತೆ, ಲಾಠೀ ಪ್ರಯೋಗದ ಭಯವೂ ಉಳಿಯದು. ಏಕೆಂದರೆ- ಪೋಲೀಸರಿಂದ ಹೊಡಿಸಿಕೊಳ್ಳುವಂಥ ಕಷ್ಟದ ಪ್ರಸಂಗವೂ ಇರುವದಿಲ್ಲ. ಸರಕಾರೀ ಕಾಮದಾರರಿಗೆ ಅನ್ನ ನೀರು ಕೊಡಬೇಡಿರೆಂದು ಹೇಳುವ ಸ್ವಯಂಸೇವಕನಿಗೆ ಮ್ಯಾಜಿಸ್ಟ್ರೇಟನು ಆರು ತಿಂಗಳ ಶಿಕ್ಷೆ ಕೊಡುವನು. ಆದರೆ ಆ ಸ್ವಯಂಸೇವಕನು ತಾನು ಹೇಳಿದ ಹೊರ್ತು ಸನ್ನ ಮನೆಯವರಿಗೆ ಬೆಂಕಿ ಸಹ ಸಿಗದೆಂದು ಮ್ಯಾಜಿಸ್ಟ್ರೇಟನಿಗೆ ಬೇರೇ ಹೇಳುವನು. ಹೇಗಾದರೂ, ಏನಾದರೂ ಸರಕಾರೀ ಕಾಮದಾರರ ಅವಸ್ಥೆಯಲ್ಲಿ ಸ್ವಲ್ಪ ಬದಲಾಗುವದಿಲ್ಲ. ಸಾಮಾಜಿಕ ಸೂತಕ ಬಿಡುವದಿಲ್ಲ. ಮಲಗಿದ ಹುಲಿಯನ್ನೆಬ್ಬಿಸಿ, ಮೂಲ ಮಾಡಿಕೊಂಡಂತೆ!! ಒಟ್ಟಿನಿಂದ ನೋಡಲು- ಆಳರಸರು ಈವರೆಗೆ ಸತ್ಯಾಗ್ರಹ ಮುರಿಯದಾಗದೆ, ಸೋತವೆಂದು ಕಬೂಲಿ ಜವಾಬು ಕೊಟ್ಟಂತಾಗಿರುತ್ತದೆ.

ಮುಂಬಯಿ ದಂಗೆಯ ಅನಾಹುತಿ.

ಪೋಲೀಸ ಚಾಕಿ ಸುಟ್ಟರು, ಸಾಹೇಬರ ಮೋಟಾರ ಸುಟ್ಟರು.

ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಬೇಕಾದಷ್ಟು ದಂಡಿನ ಮತ್ತು ಪೋಲೀಸ ಬಂದೋಬಸ್ತು ಇದ್ದರೂ, ದಂಗೆಗಾರರು ಒಂದು ಪೋಲೀಸ ಚಾಕಿಯನ್ನು ಸುಟ್ಟರು. ಮತ್ತು ಒಬ್ಬ ಸಾಹೇಬನನ್ನು ಮೋಟಾರದಿಂದ ಕೆಳಗಿಳಿಸಿ, ಮೋಟಾರ ಸುಟ್ಟರು. ಕಾಂಗ್ರೆಸ ವ್ಹಾಲಂಟಿಯರರು ಸಾಹೇಬನನ್ನು ಸುರಕ್ಷಿತವಾಗಿ ಅವನ ಮನೆಗೆ ಮುಟ್ಟಿಸಿದರು.

ಎರಡು ಆರ್ಡಿನನ್ಸಗಳು

ಪಿಕೆಟಿಂಗ ಮತ್ತು ಹಪ್ತೆ ಕೊಡಬಾರದೆಂಬದಕ್ಕೆ ಪ್ರತಿಬಂಧ

೧ ಹಪ್ತೆ ಕೊಡಬಾರದೆಂದು, ಯಾವದೊಂದು ಕರ ಕೊಡಬಾರದೆಂದು ಅಥವಾ ಸರಕಾರೀ ಯಾವದೇ ಮಾಮೂಲ ಕೊಡಬಾರದೆಂದು ಅಥವಾ ಅದಕ್ಕೆ ಕೊಡುವದಕ್ಕೆ ಅದಷ್ಟು ತಡಮಾಡಬೇಕೆಂದು ಜನರಿಗೆ ಉತ್ತೇಜನ ಕೊಡುವಂಥವರು ಅಪರಾಧಿಗಳಾಗುತ್ತಿದ್ದು ಈ ಗುನ್ಹೆಗೆ ಆರು ತಿಂಗಳು ಕೈದು ಅಥವಾ ದಂಡ, ಇಲ್ಲವೆ ದಂಡ ಮತ್ತು ಶಿಕ್ಷೆ ಎರಡೂ ಪ್ರಕಾರದ ಶಿಕ್ಷೆ ವಿಧಿಸಲಾಗುವದೆಂದು ಸುಲ್ತಾನಶಾಹಿ ಹುಕುಮು ಇದ್ದು ಇದು ಹಿಂದುಸ್ಥಾನದಲ್ಲಿ ೧ನೇ ತಾರೀಖಿನಿಂದ ಅಮಲಿನಲ್ಲಿ ಬಂದಿರುತ್ತದೆ. ಈ ಅಪರಾಧವು ಕಾಗ್ನಿಜಬಲ ಮತ್ತು ನಾನ-ಕಾಗ್ನಿಜಬಲವಾಗಿ, ಈ ಸಂಬಂಧವಾಗಿ ಪ್ರಸಿದ್ಧ ಮಾಡುವ ಹಸ್ತ ಪತ್ರಿಕೆ, ಚಿತ್ರ ಫೋಟೋಗ್ರಾಫ ಮುಂತಾದವುಗಳನ್ನು ಜಪ್ತ ಮಾಡಬೇಕೆಂದೂ ಸ್ಥಾನಿಕ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ

೨ ಗಡಂಗ ಮತ್ತು ವಿಲಾಯತಿಯ ಜವಳಿಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುವದೂ ಒಂದು ಅಪರಾಧವೆಂದು ಜಾಹೀರ ಮಾಡಿದ್ದಾರೆ. ಇದಕ್ಕೂ ದಂಡ ಮತ್ತು ಶಿಕ್ಷೆ ಎರಡೂ ಶಿಕ್ಷೆಗಳು ಹೇಳಲ್ಪಟ್ಟವೆ

೩ ಸರಕಾರಿ ಕಾಮದಾರರಿಗೆ ಅನ್ನ ನೀರಿನಂಥ ನಿತ್ಯ ನಿರ್ವಾಹಕ ಪದಾರ್ಥ ಮಾರಲಿಕ್ಕೆ ಕೊಡದಿರುವದು, ಅವರಿಗೆ ಮನೆಯಲ್ಲಿರಗೊಡದಿರುವದು, ಅಥವಾ ಅವರ ಮನೆಗೆ ಸಾಮಾಜಿಕ ಬಹಿಷ್ಕಾರ ಹಾಕುವಂಥವರಿಗೆ ಮೇಲಿನಂತೆ ದಂಡ ಶಿಕ್ಷೆ ವಿಧಿಸಲ್ಪಡುವದು. ಈ ರೀತಿ ಪಿಕೆಟಿಂಗ ಮಾಡುವಂಥ ಸ್ವಯಂಸೇವಕನ ವಿರುದ್ಧ ಅಂಗಡಿಕಾರನಾಗಲಿ, ಸರಕಾರೀ ಕಾಮದಾರನಾಗಲಿ ಪೋಲೀಸರ ಕಡೆಗೆ ಫಿರ್ಯಾದಿ ಮಾಡಿದರೆ- ಪೋಲೀಸರು ಸ್ವಯಂಸೇವಕ ಅಥವಾ ಉತ್ತೇಜನ ಕೊಡುವಂಥವನನ್ನು ಎಳಕೊಂಡು ಹೋಗಿ, ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುವಂತೆ ಪೋಲೀಸರಿಗೆ ಅಧಿಕಾರ ಕೊಟ್ಟಿದ್ದಾರೆ.

ಪೇಶಾವರದ ಕಮೀಟಿಗೇಕೆ ಬಹಿಷ್ಕಾರ ಹಾಕಿದರು.

ಖಿಲಾಫತ ಕಮೀಟಿಯವರು ಪೇಶಾವರದಲ್ಲಿ ಕೂಡ ವಿಚಾರಣೆ ಕಮೀಟಿಗೇಕೆ ಬಹಿಷ್ಕಾರ ಹಾಕಿದ್ದೇವೆಂಬ ಪತ್ರವನ್ನು ಲಾರ್ಡ ಆಯುರ್ವಿನ ಸಾಹೇಬರಿಗೆ ಬರೆದಿರುತ್ತಾರೆ. ಅದರಲ್ಲಿಯ ಮುಖ್ಯಾಂಶಗಳು –

೧ ಸರಕಾರದವರು ಪ್ರಸಿದ್ಧ ಮಾಡಿದ ರಾಜದ್ರೋಹದ ಕಾಯದೆಯಿಂದ ನಾಲ್ಕು ಜನರಾದರೂ ಒಂದೆಡೆಯಲ್ಲಿ ಕೂಡುವದು ಅವಶ್ಯಕವಾಗಿದ್ದು, ಈ ಮೂಲಕ ಸಾಕ್ಷಿ ಪುರಾವೆಗಳಿಗಾಗಿ ಸಹ ಜನರು ಒಂದಡೆಯಲ್ಲಿ ಸೇರುವದು ಅಪರಾಧವಾಗುತ್ತದೆ.

೨ ಯಾವದೋದು ಯೋಗ್ಯವಾದ ಕಮೀಟಿ ಕೂಡಿಸಿ, ಅದರ ವಿದ್ಯಮಾನ ಸಾಕ್ಷಿ ಪುರಾವೆ ಕೊಡುವದೇ ಹಿತಕರವಾಗುತ್ತದೆ. ಇಂಥ ಕಮೀಟಿಯು ವ್ಯತಿರಿಕ್ತ ಸಾಕ್ಷಿದಾರರನ್ನು ನಿಲ್ಲಿಸುವದಾಗುವದಿಲ್ಲ

೩ ಮಹತ್ವದ ಸಾಕ್ಷಿದಾರರೆಲ್ಲರು ತುರುಂಗದಲ್ಲಿರುವರು. ಅಥವಾ ಕಿಲ್ಲೆಯಲ್ಲಿ ಅಡಕಪ್ಪಿನಲ್ಲಿರುವರು.

೪ ಸರಕಾರದವರು ಸಾಕ್ಷೀ ಪುರಾವೆಯನ್ನು ಕೂಡಿ ಹಾಕಲು ನೇಮಿಸಿದಂಥ ಕಾಮದಾರನು ಊರ ಜನರ ಸಾಕ್ಷಿಗಳನ್ನು ಕೂಡಿ ಹಾಕುವದಕ್ಕೆ ಲಕ್ಷ್ಯಗೊಡುವದಿಲ್ಲ.

೫ ಸರಕಾರದವರು ಲಷ್ಕರೀ ಕಾಯದೆಯನ್ನು ತೆಗೆದು ಹಾಕಿದರೇ ಸ್ವತಂತ್ರ ಸಾಕ್ಷಿಗಳು ದೊರಕುವವು.

ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ನಿಶಾನೆಯ ಗಲಭೆ.

ಧಾರವಾಡದಲ್ಲಿ ರಾಷ್ಟ್ರೀಯ ನಿಶಾನೆ ಹಚ್ಚಲಿ, ನಾವೂ ಹಚ್ಚಬಹುದೆಂದು ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ. ಬ. ಕಂಬಳಿಯವರು ಈ ವಿಷಯವಾಗಿ ತಮ್ಮನ್ನು ಕಾಣಲು ಹೋದ ಗೃಹಸ್ಥರ ಮುಂದೆ ಹೇಳಿದರೆಂದು ಈ ಹಿಂದಲು ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿದೆ. ರಾ. ಬ. ಕಂಬಳಿಯವರು ಕಳೆದೆರಡು ತಿಂಗಳು ಮಹಾಬಳೇಶ್ವರದ ತಂಪು ಹವೆಯಲ್ಲಿದ್ದರು. ಊರು ಬಿಟ್ಟರೂ, ಹನಮಪ್ಪ ಹೊರಗೆನ್ನುವಂಥ ವರ್ತಮಾನ ಕಾಲದಲ್ಲಿ ಮಹಾಬಳೇಶ್ವರವಾಗಿರುತ್ತದೆ. ಆ ಮಹಾಬಳೇಶ್ವರದಿಂದ ರಾ. ಬ ಕಂಬಳಿಯವರು ಹುಬ್ಬಳ್ಳಿಗೆ ಬಂದಿದ್ದಾರೆ. ನೀರೊಳಗಿಂದ ತೆಗೆದು ಉರಿಯಲ್ಲಿ ಹಾಕಿದಂತಾಗಿರಬಹುದು ಏಕೆಂದರೆ ತಂಪು ಹವೆಯ ಬದಲಾಗಿ ಹುಬ್ಬಳ್ಳಿಯಲ್ಲಿ ಧಗಧಗ ಉರಿಯುವ ಬಿಸಲು ಉಳಿದವರಂತೆ ಅವರನ್ನೂ ಸಮಳ ಕಳಮಳಿಸುತ್ತಿರಬಹುದು. ಅದರ ಕೂಡ ರಾಷ್ಟ್ರೀಯ ನಿಶಾನೆಯ ಗೊಂದಲವೂ ಅವರಿಗೆ ಕದಿಸಿ ಮಾಡಿರಬಹುದು. ಆದರೆ ಊರ ಜನರು ಕೇಳುತ್ತಾರೆ! ರಾವಬಹಾದ್ದೂರರೇ, ಹಿಂದೆಯಾದ್ದನ್ನು ಸ್ಮರಣೆಗೆ ತನ್ನಿರಿ, ಜೂನ ತಿಂಗಳ ೧೫ಯ ತಾರೀಖಿನೊಳಗಾಗಿ ಮ್ಯುನಿಸಿಪಾಲಿಟಿಯ ಮೇಲೆ ನಿಶಾನೆ ಹಚ್ಚಿರೆಂದು ಅವರನ್ನು ಒತ್ತಾಯ ಪಡಿಸುತ್ತಲಿದ್ದಾರೆ ವರ್ತಮಾನಪತ್ರಗಳಲ್ಲಿ ಸೂಚನೆಗಳೂ ಟೀಕೆಗಳೂ ಬರುತ್ತಿರುವವು ಇಂದು ಮಂಗಳವಾರ ಮೂರನೆಯ ತಾರೀಖಿನ ದಿವಸ ಮ್ಯುನಿಸಿಪಾಲಿಟಿಯ ಮೇಲೆ ಯುನಿಯನ್ನ ಜಾಕ ಹಚ್ಚುವರು. ಇದಕ್ಕೆ ರಾ. ಬ. ಅಥವಾ ಜನರಲ ಕಮೀಟಿಯ ಮಂಜೂರಿ ಕೂಡ ಬೇಕಾಗಿಲ್ಲ. ಅದು ವರ್ಷದ ನಿತ್ಯಕರ್ಮವಾಗಿರುತ್ತದೆ. ರಾಷ್ಟ್ರೀಯ ನಿಶಾನೆ ಮಾತ್ರ ಪೇಚಲಾಟ ಬಂದಿರುತ್ತದೆ. ರಾ. ಬ ಕಂಬಳಿಯವರು ಮನಸ್ಸು ಮಾಡಿದರೆ- ಅರಸು ಮೆಚ್ಚಿದರೆ- ಅರ್ಧ ರಾಜ್ಯವೆನ್ನುವಂತೆ ಅರೆನಿಮಿಷದಲ್ಲಿ ನಿಶಾನೆ ಹತ್ತಿ ಹೋಗುವದು. ಕೆಲಸವು ಇಷ್ಟು ಸೂಸೂತ್ರವಾಗಿದ್ದರೂ, ಮೂಗಿಲ್ಲದವಳ ಮದಿವೆ ಸಾವಿರ ವಿಘ್ನವೆಂದು ಪುರಾಣದಲ್ಲಿ ಹೇಳುವಂತೆ ವರ್ತಮಾನ ಪರಿಸ್ಥಿತಿಯಾಗಿರುತ್ತದೆ ಹುಬ್ಬಳ್ಳಿಯು ಕರ್ನಾಟಕದ ಮೂಗು! ಅದರ ಮೂಗು ಕೂಡಲಿಲ್ಲ. ಮೂಗು ಮೇಲೆ ಮಾಡಿಕೊಂಡೇ ಉಂಟೆಂದು ರಾ. ಬ. ಕಂಬಳಿಯವರು ಪ್ರತ್ಯಕ್ಷ ಕೃತಿಯಿಂದ ತೋರಿಸುವರೆಂದು ಆಶಿಸುತ್ತೇವೆ.

ಮಹಾಬಳೇಶ್ವರದಲ್ಲಿ ಸ್ವರಾಜ್ಯ ಸಂಧೀ ಸಂಭಾಷಣೆ.

ಮುಂಬಯಿ ವರ್ತಕ ಸಂಘದ ವತಿಯಿಂದ ಕೌನ್ಸಿಲ ಮೆಂಬರರಾಗಿರುವ ಶ್ರೀ. ಲಾಲಜಿಯವರು ಮಹಾಬಳೇಶ್ವರದಲ್ಲಿ ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋಗಿದ್ದರು. ಮಹಾತ್ಮರನ್ನು ಹಿಡಿದದ್ದರಿಂದ ಮತ್ತು ಉಳಿದವರ ಕಾಯದಭಂಗದಿಂದುಂಟಾದ ಪ್ರಜಾಕ್ಷೋಭೆ ಮತ್ತು ಸ್ವರಾಜ್ಯ ಸ್ವಾತಂತ್ರ್ಯದ ಒಗ್ಗೆ ಸಾಹೇಬರಿಗೂ ಇವರಿಗೂ ಮಹತ್ವದ ಸಂಭಾಷಣೆಯಾಯಿತು. ಮಹಾತ್ಮರನ್ನೂ ಬೇರೆ ರಾಜಕೀಯ ಕೈದಿಗಳನ್ನೂ ಬಂಧಮುಕ್ತ ಮಾಡಬೇಕೆಂದು ಇವರು ಸಾಹೇಬರಿಗೆ ನಿರ್ಭಿಡೆಯಿಂದ ಹೇಳಿದರು. ಇದೇ ವಿಷಯವಾಗಿ ಲಾಲಜಿಯವರು ಮತ್ತೆ ಗವ್ಹರ್ನರಸಾಹೇಬರನ್ನು ಕಾಣಲಿಕ್ಕೆ ಹೋಗುವರು. ಸಾಹೇಬರೂ, ವ್ಹಾಯಿಸರಾಯ ಲಾರ್ಡ ಆಯುರ್ವಿನರೂ ಈ ಸಂಭಾಷಣೆಯ ಒಗ್ಗೆ ಮಾತುಕಥೆ ನಡೆಸಿದ್ದಾರೆಂದು ತಾರಿನ ವರ್ತಮಾನವಾಗಿದೆ

ಭಾರತ ಮಂತ್ರಿ

ಮಿ. ಬೆನ್ನ ವೆಜ್ಜವುಡ್ಡಸಾಹೇಬರ

ನಿರಾಶೆಯ ಭಾಷಣ.

ಸೋಮವಾರ ದಿವಸ ಪಾರ್ಲಮೆಂಟ ಸಭೆಯಲ್ಲಿ ಭಾರತಮಂತ್ರಿ ಮಿ. ಬೆನ್ನ ವೆಜ್ಜವುಡ್ಡಸಾಹೇಬರು ಹಿಂದುಸ್ಥಾನದ ಪ್ರಸ್ತುತದ ಚಿಂತಾಜನಕವಾದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡುವರೆಂದು ಪ್ರಸಿದ್ಧವಾಯಿತು. ಭಾಷಣ ಕೇಳಲು ಪಾರ್ಲಮೆಂಟಿನ ಮೆಂಬರರೂ ಅಲ್ಲಿರುವ ಹಿಂದೀ ಮಹಾಜನರೂ ಉತ್ಸುಕರಾಗಿ ನೋಡಿದರು. ಸಾಹೇಬರ ಭಾಷಣ ಕೇಳಿ, ಯುರೋಪಿಯನ್ನರು ಆನಂದಪಟ್ಟರು ಹಿಂದೀ ಜನರು ನಿರಾಶೆಯ ಉದ್ಗಾರ ತೆಗೆದರು. ಕಾಂಗ್ರೆಸ ಸಭೆಯು ಸ್ವಾತಂತ್ರ್ಯದ ಜಾಹೀರನಾಮೆಯನ್ನು ಹಚ್ಚಿದ್ದರಿಂದ, ಹಿಂದುಸ್ಥಾನವು ತಮ್ಮ ಕೈಬಿಟ್ಟು ಹೋಗುವದೆಂದೇ ಬಹು ಜನ ಯುರೋಪಿಯನ್ನರು ಚಿಂತಿಸುತ್ತಿದ್ದಾರೆ. ಅಂತಹ ಯಾವ ಕಾರಣವೂ ಇಲ್ಲೆಂದು ಮಂತ್ರಿಯವರು ಅವರಿಗೆ ನಂಬಿಗೆಯನ್ನು ಹೇಳಿದ್ದಾರೆ. ಹಿಂದುಸ್ಥಾನದಲ್ಲಿ ಮೇಲ್ತರದವರ ಮತ್ತು ಗುಜರಾಥದಲ್ಲಿ ಮಾತ್ರ ಅಸಂತೋಷವುಂಟು. ಪಟ್ಟಣಗಳಲ್ಲಿ ತೋರಿಬರುತ್ತಿರುವವು. ಶೋಲಾಪೂರದ ಹೊರತು ಎಲ್ಲಿಯೂ ಲಷ್ಕರೀ ಕಾಯದೆಯನ್ನು ಜಾಹೀರ ಮಾಡಲಿಲ್ಲ. ದೇಶವೆಲ್ಲ ಶಾಂತವಾಗಿರುತ್ತದೆ ಇಷ್ಟೇ ಅಲ್ಲದೆ, ಮುಸಲಮಾನರೂ ಸಾಮಾನ್ಯವಾಗಿ ಹಳ್ಳಿಗಳ ಜನರೂ ಸರಕಾರಕ್ಕೆ ಅನುಕೂಲವಾಗಿಯೇ ಇದ್ದಾರೆ. ದೇಶೀ ದಂಡಿನವರೂ ಪೋಲೀಸರು ಸರಕಾರಕ್ಕೆ ಸಹಾಯವಾಗಿ ಬಹಾದ್ದೂರಿಯಿಂದ ಕೆಲಸಮಾಡುತ್ತಿದ್ದಾರೆ. ಆದ್ದರಿಂದ ಹಿಂದುಸ್ಥಾನವು ಕೈಬಿಟ್ಟು ಹೋಗುವದೆಂದು ಹೆದರುವ ಕಾರಣವೇ ಇರುವದಿಲ್ಲ. ಸರಕಾರದವರು ಪ್ರಯೋಗಿಸಿದ ದಬ್ಬಾಳಿಕೆಯ ಉಪಾಯಗಳು ಅವಶ್ಯಕ್ಕಿಂತ ಹೆಚ್ಚಾಗಿರುವದೇ ಇಲ್ಲ. ಈ ದಬ್ಬಾಳಿಕೆಯ ಕಾಯದೆಯನ್ನು ಆದಷ್ಟು ಬೇಗನೆ ರದ್ದು ಮಾಡಬೇಕೆಂದು ನಮ್ಮ ಅಪೇಕ್ಷೆಯುಂಟು. ಇದರ ಎಲ್ಲ ಭಾರವು ಚಳವಳಿ ಮಾಡುವಂಥವರ ಕಯ್ಯಲ್ಲಿಯೇ ಉಂಟು. ಏಕೆಂದರೆ ಕಾಯದೆಭಂಗದ ಚಳವಳಿಯನ್ನು ಬಂದು ಮಾಡುವ ಕೆಲಸವು ನಮ್ಮದಲ್ಲ. ಚಳವಳಿಗಾರರದೇ ಇರುತ್ತದೆ. ದಂಗೆ ಮತ್ತು ದಬ್ಬಾಳಿಕೆಯು ಕಟ್ಟಿ ಹೊರಟ ಕೂಡಲೆ- ಸ್ವತಂತ್ರ ಪಕ್ಷದ ಕೂಲೀಕಾರ ಮೆಂಬರರು "ಕೂಲಿಕಾರ ಸರಕಾರದ ಕರ್ತವ್ಯವೇನೆಂದು" ಪ್ರಶ್ನೆ ಮಾಡಲು, ಮಿ. ಬೆನ್ನಸಾಹೇಬರಿಗೆ ಬಹಳ ಸಿಟ್ಟು ಬಂತು. ಕಾರ್ಯಕಾರಭಾರ ಮಾಡುವದು ಕೂಲಿಕಾರ ಸರಕಾರದ ಕರ್ತವ್ಯವಾಗಿರುತ್ತದೆಂದು ಬಿಂಕದ ಉತ್ತರ ಕೊಟ್ಟರು. ಹಿಂದೂ, ಮುಸಲಮಾನ, ಅಲ್ಪ ಸಂಖ್ಯಾಕ ಮುಂತಾದವರ ಹಕ್ಕುಗಳ ಸಂರಕ್ಷಣೆಯಾಗಬೇಕೆಂದೂ, ಈ ನಿರ್ಣಯವಾದ ಹೊರತು ಸ್ವರಾಜ್ಯ ಯೋಜನೆಯು ಕೊನೆಯ ನಿರ್ಣಯ ಹೊಂದಲಾರದೆಂದೂ ಸಾಹೇಬರು ಹಾಡಿದ್ದನ್ನೇ ಹಾಡಿ, ಹಿಂದುಸ್ಥಾನಕ್ಕೆ ಆಶೆ ಹುಟ್ಟುವಂಥ ಮುಂದಿನ ಉದ್ಗಾರ ತೆಗೆದರು.

"ಹಿಂದುಸ್ಥಾನವು ವಸಾಹತಿನ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಹೊಂದುವದೇ ಇಂಗ್ಲಿಷ ಸರಕಾರದ ಅಪೇಕ್ಷೆಯು. ದಾರಿಯಲ್ಲಿ ಅನೇಕ ಅಡಚಣಿಗಳಿರುವವು. ಅವೇನೂ ನೀಗದವಲ್ಲ ಆದರೆ ಇವುಗಳ ಪರಿಹಾರ ಮಾಡತಕ್ಕವರು ಮುಖ್ಯವಾಗಿ ಹಿಂದೀ ಜನರ ಕಯ್ಯಲ್ಲಿಯೇ ಇರುವದು. ಒಮ್ಮೆಯಾದರೊಂದು ಒಪ್ಪಂದವಾಯಿತೆಂದರೆ- ಯಾವ ಬ್ರಿಟಿಶ ಸರಕಾರವೂ ಅದರ ಸ್ವರಾಜ್ಯ ವಿಷಯಕವಾದ ಧ್ಯೇಯವು ಪೂರ್ಣವಾಗುವದನ್ನು ತಡೆಯಲು ಸಮರ್ಥವಾಗಲಾರದು."

ನೋಡತಕ್ಕವರಿಗೆ ಈ ಉದ್ಗಾರವು ಅತ್ಯಂತವಾಗಿ ಆಶಾಜನಕವಾಗಿ ತೋರುವದು. ಆದರೆ ಇದು ವಚನಕ್ಕೆ ಬಡತನವೇ ಎಂಬಂತೆ ಈ ವರೆಗೆ ಬಂದ ಅನುಭವವಾಗಿದೆ. ಹಿಂದೀ ಜನರು ರಾವುಂಡ ಟೇಬಲಕ್ಕೆ ಹೋದರೆಂದು ತಿಳಿಯುವಾ- ಅವರು ಸ್ವರಾಜ್ಯ ಸಂಪಾದಿಸಿಕೊಂಡೇ ಬರುವರೆಂದು ಯಾವ ನಂಬಿಗೆಯಿಂದ ಭವಿಷ್ಯ ಹೇಳುವದು? ಇವರೆಷ್ಟು ಸಲ ಲಂಡನಕ್ಕೆ ಹೋಗಿ ಬಂದರು. ಅವರ ಅವಸ್ಥೆ ನೋಡಿರಿ; ಹಿಂದಿಗೆ ಹೋಗುವದಕ್ಕಿಂತ ಕೊಂಚವೆ ಲೇಸೆಂದುಕೊಂಡಿದ್ದಾರೆ. ಆದ್ದರಿಂದ ಭಾವೀ ಪಾರ್ಲಮೆಂಟಿನ ದೆಸೆಯಿಂದ ದೊಡ್ಡ ಆಶೆ ಮಾಡುವಂತಿರುವದೇ ಇಲ್ಲ. ಆದ್ದರಿಂದಲೇ ಮಹಾತ್ಮರು ಸ್ವಾತಂತ್ರ್ಯವನ್ನು ಪಡೆಯುವಂಥ ಹಕ್ಕಿನ ವಚನ ಕೊಡಿರಿ ಆ ನಂತರ ಉಳಿದ ವಿಷಯಗಳ ವಿಚಾರವನ್ನು ಆಗಲೋ ಸಾಂಗವಾಗಿ ಮಾಡಿರೆಂದು ಹೇಳುವದು ತ್ರಿಕಾಲದಲ್ಲಿಯೂ ಸತ್ಯವಾದಂತಿರುತ್ತದೆ. ಸಾಹೇಬರ ಭಾಷಣದಿಂದ ಪಾರ್ಲಮೆಂಟದಲ್ಲಿ ಕೂತಂಥ ಹಿಂದೀ ಮಹಾಶಯರ ನಿರಾಶೆಯಾದಂತೆ, ಈ ದೇಶದ ಜನಗಳೂ ನಿರಾಶೆಗೊಂಡಿದ್ದಾರೆ. ಈ ನಿರಾಶೆಯು ಕೂಡ ಮುಂದಾಗಿ ಖಂಡಿತವಾದ ವಚನ ಕೊಟ್ಟರೇ ವಿರಾಮತೆಗೆ ಬರುವದೆಂದು ಹೇಳಬೇಕು. ಈ ಪ್ರಕಾರ ಇವರೂ ಗಟ್ಟಿ ಹಿಡಿದರೆ- ದಬ್ಬಾಳಿಕೆ ಹೋಗುವದು. ಪೋಲೀಸರ ಲಾಠಿಯ ಪ್ರಯೋಗ ಹೋಗುವದು. ಸ್ವರಾಜ್ಯ ಸಿಗುವದು.

ವಿಲಾಯತಿಯ ಬಟ್ಟೆಗೆ ಬಹಿಷ್ಕಾರ.

ಈ ದೇಶದಲ್ಲಿ ನಡೆದ ಬಹಿಷ್ಕಾರದ ದೆಸೆಯಿಂದಲೂ ಮಿ. ಬೆನ್ನಸಾಹೇಬರು ತಮ್ಮ ಭಾಷಣದ್ದೊಳಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವೇನಂದರೆ-

"ಸಾಮ್ರಾಜ್ಯದೊಳಗಿನ ಒಂದು ದೇಶವು ಮತ್ತೊಂದು ದೇಶವನ್ನು ಸುಲಿಯಲಿಕ್ಕಾವ ಅಧಿಕಾರವುಂಟು? ಹಿಂದುಸ್ಥಾನದ ಜನರು ನಡೆಸಿದ ಪರದೇಶಿ ಬಟ್ಟೆಗಳ ಮೇಲಿನ ಬಹಿಷ್ಕಾರವನ್ನು ಶಕ್ತಿಯಿಂದ ಮುರಿಯುವದು ಶಕ್ಯವಿಲ್ಲ. ಸರಕಾರವು ಬೇಕಾದಷ್ಟು ಬಲಾಢ್ಯವಿದ್ದರೂ, ನೀವು ವಿಲಾಯತಿಯ ಸರಕನ್ನೇ ಕೊಳ್ಳಬೇಕೆಂಬ ಒಲವುಕಿಕೆಯನ್ನು ಹಿಂದುಸ್ಥಾನದವರ ಮೇಲೆ ಹೇಗೆ ಮಾಡಬೇಕು? ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ದೊರೆತರೂ ವ್ಯಾಪಾರ ದೃಷ್ಟಿಯಿಂದ ಹಿಂದುಸ್ಥಾನದಿಂದ ಇಂಗ್ಲಂಡಕ್ಕಾಗುವ ಲಾಭವು ಬಂದಾಗುತ್ತದೆಂಬ ಭಯವಿಲ್ಲ. ಸಾಮೋಪಚಾರ ಮತ್ತು ಸ್ನೇಹದಿಂದಲೇ ವ್ಯಾಪಾರದ ಅಭಿವೃದ್ಧಿಯಾಗುತ್ತದೆಂಬದನ್ನು ಬ್ರಿಟಿಶರು ಲಕ್ಷ್ಯದಲ್ಲಿಡಬೇಕು."

ಹಿಂದುಸ್ಥಾನದ ಕಲೆಯ ಮೇಲೆ ಒಂದು ರೀತಿಯಿಂದಾದರೂ ತಾವು ಮೆಣಸು ಅರಿಯಲಾರೆವೆಂಬದನ್ನು ಸ್ವತಃ ಬೆನ್ನಸಾಹೇಬರು ಸ್ಪಷ್ಟವಾಗಿ ಒಪ್ಪಿರುತ್ತಾರೆಂಬದು ಸಮಾಧಾನದ ಸಂಗತಿಯು. ಆಗಿನ ಚಳವಳಿಯು ಪಟ್ಟಣಗಳಲ್ಲುಂಟು. ಹಳ್ಳಿಯಲ್ಲಿರುವದಿಲ್ಲೆಂದು ಸಾಹೇಬರು ಅಂದುಕೊಂಡು ಮನಸಿಗೆ ಸಮಾಧಾನ ಹಚ್ಚಿಕೊಂಡಿದ್ದಾರೆ. ಚಳವಳಿಯು ಪಟ್ಟಣಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚಿದ್ದು, ವಿಲಾಯತಿಯ ವ್ಯಾಪಾರವನ್ನು ಸಂಪೂರ್ಣಕ್ಕೆ ಕಲು ಹಳ್ಳಿಗಳೇ ಮುಂದೊರೆದಿರುತ್ತವೆ. ಸಾಹೇಬರು ವ್ಯಾಪಾರ ದೃಷ್ಟಿಯಿಂದ ಹಿಂದೀ ಜನರ ಕೂಡ ಸಾಮೋಪಚಾರದಿಂದ ನಡೆಯಬೇಕೆಂದು ಉಪದೇಶ ಮಾಡುವಾಗ, ತಾವೂ ರಾಜಕೀಯ ಜನರ ಕೂಡ ಸಾಮೋಪಚಾರದಿಂದೇಕೇ ನಡೆಯಬಾರದು? ದಬ್ಬಾಳಿಕೆಯ ಧೋರಣವನ್ನೇಕೆ ಅನುಸರಿಸಬೇಕು?

ಪಾರ್ಲಮೆಂಟ ಸಭೆಯಲ್ಲಾದ ಭಾಷಣಗಳೂ, ಅವುಗಳ ಮೇಲೆ ಅಭಿಪ್ರಾಯಗಳೂ

ಮಿ. ಬ್ರಾಕವೇ-

ಹಿಂದುಸ್ಥಾನದಲ್ಲಿ ನಡೆದ ದಬ್ಬಾಳಿಕೆಯನ್ನು ಅತ್ಯಂತವಾಗಿ ನಿಷೇಧಿಸುತ್ತೇನೆ. ರಶಿಯರು ಹಿಂದುಸ್ಥಾನದಲ್ಲಿ ಅಸಂತೋಷವನ್ನು ಹುಟ್ಟಿಸಲಿಕ್ಕೆ ಕಾರಣವೇ ಇಲ್ಲ. ಏಕೆಂದರೆ- ಮಾಸ್ಕೋಕ್ಕಿಂತ ಹೆಚ್ಚಾಗಿ ಹಿಂದುಸ್ಥಾನದಲ್ಲಿಯೇ ಅಸಂತೋಷವುಂಟು. ಗಾಂಧಿಯಂಥ ಜಗತ್ತಿನಲ್ಲಿ ಶ್ರೇಷ್ಠ ಪುರುಷರನ್ನು ಸೆರೆಮನೆಯಲ್ಲಿ ಹಾಕಿದ ಸರಕಾರವನ್ನು ಎಷ್ಟು ಹಳಿದರೂ ಕಡಿಮೆಯೇ. ಸರಕಾರವು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟು ಬಿಡಬೇಕು. ಅದರ ಘಟನೆ ಮಾಡುವ ಮಟ್ಟಿಗೆ ರಾವುಂಡ ಟೇಬಲ ಪರಿಷತ್ತನ್ನು ಕೂಡಿಸಬೇಕು. ಎಲ್ಲ ರಾಜಕೀಯ ಕೈದಿಗಳಿಗೆ ಮಾಫೀ ಕೊಡಬೇಕೆಂದೆಂದರು. ಪೇಶಾವರದ ದಂಗೆಯ ಸಂಬಂಧವಾಗಿ ಕಾಂಗ್ರೆಸ ಕಮೀಟಿಯವರು ಪ್ರಸಿದ್ಧ ಮಾಡಿದ ಜಾಹೀರ ಪತ್ರಿಕೆಯನ್ನೋದಿದರು. ಆಗ ಮಿ. ಬೆನ್ನಸಾಹೇಬರು- ಈ ರಿಪೋರ್ಟು ನಿಜವೆಂದು ಭಾವಿಸುತ್ತೀರಾ?

ಮಿ. ಬ್ರಾಕವೆ-

ಸರಕಾರದ ಪತ್ರಿಕೆಯ ಕೂಡ, ಪ್ರಜಾಪಕ್ಷದ ಅಂಬೋಣವೂ ಏನಿರುತ್ತದೆಂದು ತಿಳಿಯುವದು ಅವಶ್ಯವಾಗಿರುತ್ತದೆ. ಬೆನ್ನಸಾಹೇಬರ ಸಂಬಳವನ್ನು ಕಡಿಮೆ ಮಾಡಬೇಕೆಂಬ ಸೂಚನೆಯನ್ನು ತಾವು ತರದೆ, ಮುಂದೆ ಯಾವಾಗಾದರೂ ತರುವೆನು. ಹಿಂದೀ ಜನರು ಸ್ವಾತಂತ್ರ್ಯಕ್ಕಾಗಿ ನಡೆಸಿರುವ ಸಂಗ್ರಾಮದಲ್ಲಿ ನನ್ನ ಪೂರ್ಣ ಸಹಾನುಭೂತಿಯುಂಟು.

ಮಿ. ಬೇಟ-

ಮಿ. ಬ್ರಾಕವೇ ಸಾಹೇಬರು ಓದಿದ ಕಾಂಗ್ರೆಸದ ರಿಪೋರ್ಟಿನ ಸತ್ಯತೆಯಲ್ಲಿ ನಿಮ್ಮ ನಂಬಿಗೆಯುಂಟೇನೆಂದು ಭಾರತ ಮಂತ್ರಿಯವರು ಕೇಳುತ್ತಾರೆ. ಸ್ವತಃ ಸಾಹೇಬರ ಸರಕಾರೀ ರಿಪೋರ್ಟಿನಲ್ಲಿ ನಂಬಿಗೆಯಾಗಿರುವದಕ್ಕಿಂತ ಕಾಂಗ್ರೆಸದ ರಿಪೋರ್ಟಿನಲ್ಲಿ ನನ್ನ ನಂಬಿಗೆಯುಂಟು. ದಬ್ಬಾಳಿಕೆಯನ್ನು ಮತ್ತಿಷ್ಟು ಬಲಿಸುವದಕ್ಕಾಗಿಯೋ ಮಿ. ಬೆನ್ನ ಸಾಹೇಬರು ಏನಾದರೂ ನೆವನ ಹುಡುಕುತ್ತಿರಬಹುದು.

ಮಿ. ಬೇಲ-

ಸರಕಾರದವರು ಗಾಂಧಿಯವರ ಕೂಡ ಒಡಂಬಡಿಕೆ ಮಾಡಿಕೊಳ್ಳಬೇಕಿದ್ದರೆ- ಹಿಂದುಸ್ಥಾನದಲ್ಲಿ ಭಯಂಕರ ಪರಿಸ್ಥಿತಿ ಉತ್ಪನ್ನವಾಗಿ, ಹಿಂದುಸ್ಥಾನದಲ್ಲಿ ಬಂಡಾಯವಾಗುವದೆಂಬದನ್ನು ಲಕ್ಷ್ಯದಲ್ಲಿಡಿರಿ. ಮಿ. ಬ್ರಾಕವೇ ಸಾಹೇಬರು ಕೊಟ್ಟ ಎಚ್ಚರಿಕೆಯನ್ನು ಲಕ್ಷ್ಯದಲ್ಲಿಡಿರಿ.

ಮಿ. ಬಾಲ್ಡವಿನ-

ಹಳೇ ಮುಖ್ಯ ಮಂತ್ರಿಯಾಗಿದ್ದ ಮಿ. ಬಾಲ್ಡವಿನಸಾಹೇಬರು ಇಂಗ್ಲಿಷ ಜನರನ್ನುದ್ದೇಶಿಸಿ, ಅನ್ನುವದೇನಂದರೆ-

ಹಿಂದುಸ್ಥಾನದಲ್ಲಿ ರಾಜ್ಯವಾಳುತ್ತಿರುವಂಥ ನಮ್ಮ ಜನರಲ್ಲಿ ಸಂಪೂರ್ಣ ವಿಶ್ವಾಸವಿಡಿರಿ. ಶಾಂತವಾಗಿ, ಹಿಂದೀ ಜನರು ರಾಜ್ಯಸೂತ್ರ ನಡೆಸುತ್ತಿರುವಾಗ- ನಾವು ಅವರ ಕೂಡ ಸಹಕಾರಿತೆಯಿಂದ ಕೆಲಸ ಮಾಡಬೇಕಾಗಿರುತ್ತದೆ. ನಮ್ಮ ಮುಖ್ಯ ಹಿಂದುಸ್ಥಾನದ ವ್ಯಾಪಾರ ನಡೆದು, ಜಗತ್ತಿನ ಬೇರೆ ವ್ಯಾಪಾರಗಳಿಗಿಂತ ಹಿಂದುಸ್ಥಾನವು ನಮಗೆ ಹೆಚ್ಚು ಸವಲತ್ತು ಕೊಡುವದೆಂದು ಭಾವಿಸತಕ್ಕದ್ದು. ಬ್ರಿಟಿಶ ಸಾಮ್ರಾಜ್ಯದ ಎಲ್ಲ ಭಾಗಗಳ ಕೂಡ ನಾವು ಸಂಪೂರ್ಣ ಸಹಕಾರಿತೆಯಿಂದ ನಡೆಯತಕ್ಕದ್ದು. ಹಿಂದುಸ್ಥಾನವು ಒಂದು ಭಾಗವಾಗಿರುತ್ತದೆಂದು ತಿಳಿಯತಕ್ಕದ್ದು. ಹಿಂದುಸ್ಥಾನವು ವಸಾಹತಿನ ಸ್ವರಾಜ್ಯದ ಕರ್ತವ್ಯ ಮಾಡುವಾಗ- ಆ ರಾಜ್ಯದಾಡಳಿತೆಯ ಜವಾಬದಾರಿಯನ್ನು ಹೊರತಕ್ಕದ್ದು.

ಸರ ಯಂಗ ಹಸಬಂಡ-

ಹಿಂದುಸ್ಥಾನವು ತನ್ನ ರಾಜ್ಯವನ್ನು ಬೇಗನೇ ಆಳಲಿಕ್ಕೆ ಪ್ರಾರಂಭಿಸುವಷ್ಟು ಒಳಿತು. ಏಕೆಂದರೆ- ಹಿಂದುಸ್ಥಾನವು ತನ್ನ ರಾಜ್ಯದಾಳಿಕೆ ಸಿಕ್ಕೆಂದರೆ- ಅದು ವಿಷಯವಾದ ನಮ್ಮ ಚಿಂತೆಯೇ ದೂರಾಗುವದು. ಇದು ತನ್ನ ದೊರೆತನ ನೋಡಿಕೊಳ್ಳಲಿಕ್ಕೆ ಶಕ್ತಿ ಕಂದರೆ- ಇದಕ್ಕೆ ಬೇಕಾದರೆ- ಬ್ರಿಟಿಶ ಸಾಮ್ರಾಜ್ಯವಿಲ್ಲಿರು. ಅಥವಾ ಬೇಡಂದರೆ- ಬಿಡೆಂದು ಹೇಳುವ ಸ್ವಾತಂತ್ರ್ಯ ಕೊಡಬಂದರೆ? ಹಿಂದುಸ್ಥಾನವು ಇಂಗ್ಲಂಡದ ಸಂಬಂಧ ಕಡಿಕೊಂಡರೆ- ಅದರ ಅವಸ್ಥೆಯು ಕಾಬೂಲ ಅಥವಾ ಚೀನದಂತಾಗುವದು. ಆದ್ದರಿಂದ ಅದು ತನ್ನ ಸುಖ ಶಾಂತಿಯ ದೆಸೆಯಿಂದ ನಮಗಿಂತ ಹೆಚ್ಚು ವಿಚಾರ ಮಾಡತಕ್ಕದ್ದಾಗುತ್ತದೆ. ನಾವೇ ಹಿಂದುಸ್ಥಾನವನ್ನು ಆಳುತ್ತೇವೆಂದು ಆಗ್ರಹ ಹಿಡಿದರೆ- ಬಂಡಾಯವಾಗುವದು. ಶಾಂತ್ಯ ಚಕ್ರವು ಅರ್ಧಾಂಗವಾಯುವಿನಂತೆ ನಿಷ್ಕ್ರಿಯವಾದರೂ ಆಗುವದು.

ಮುಂಬಯಿಯ ವ್ಯಾಪಾರಿಗಳ ಮತಗಳು

ಮಿ. ಮೋದಿ-

ಮಿ. ಬೆನ್ನಸಾಹೇಬರ ಭಾಷಣದಿಂದ ಹಿಂದುಸ್ಥಾನದ ಪರಿಸ್ಥಿತಿಯಲ್ಲಿ ಏನನ್ನೂ ಬದಲಾಗುವಂತಿಲ್ಲ.

ಸರ ಚುನಿಲಾಲ ಮೇಥಾ -

ಸಾಹೇಬರ ಭಾಷಣವು ಅತೃಪ್ತಿಕರವಾದ ಪರಿಸ್ಥಿತಿಯಲ್ಲಿ ಕಿಂಚಿತ್ತಾದರೂ ಸುಧಾರಣೆ ಹೊಂದಲಾರದು.

ಸರ ಕವಸಜಿ ಜಹಾಂಗೀರ-

ಮಿ. ಬೆನ್ನಸಾಹೇಬರು ನಮಗೆ ಸಮಾಧಾನವಾಗುವಂಥ ಯಾವ ಸಂಗತಿಯನ್ನೂ ಹೇಳಲಿಲ್ಲ. ಮತ್ತು ಅವರ ಭಾಷಣವು ನಿರಾಶಾಜನಕವಾದದ್ದೇ ಆಗಿರುತ್ತದೆ.

ಸರ ಫಿರೋಜ ಸೇಟನಾ-

ಬೆನ್ನಸಾಹೇಬರು ಕಾಂಗ್ರೆಸದ ಜನರನ್ನು ರಾವುಂಡ ಟೇಬಲಕ್ಕೆ ಕರೆಯದಿದ್ದರೆ- ಅದೊಂದು ವಿಶ್ವಾಸಘಾತವೇ ಆಗುತ್ತದೆ. ಮಹಾತ್ಮರ ವಿಚಾರವನ್ನು ಅಂಗೀಕರಿಸದಿದ್ದರೆ- ದೇಶದಲ್ಲಿ ಅರಾಜಕತನ ಮಾಡುವದರ ತಪ್ಪು ಹಿಂದೀ ಜನತೆಯ ಮೇಲೆ ಬರಲಾರದು.

ಸರಕಾರದಿಂದಾದದ್ದೆಂದು ಆಶ್ಚರ್ಯ!!

ಮಿ. ಸ್ಲೋಕೋಂಬಸಾಹೇಬರು ಸೆರೆಮನೆಯಲ್ಲಿ ಮಹಾತ್ಮರನ್ನು ಕಂಡು, ಅವರ ಕೂಡ ರಾಜಕೀಯವಾದ ಒಡಂಬಡಿಕೆಯ ಬಗ್ಗೆ ಮಾಡಿದ ಭಾಷಣಕ್ಕೆ ತಾವು ಸರಕಾರದವರು ಕೊಟ್ಟ ಅಪ್ಪಣೆಯು ಆಶ್ಚರ್ಯಕಾರಕವು; ಇಂಥ ಅವಿಚಾರವನ್ನು ಈನಂತರ ಮಾಡಲಾಗದೆಂದು ಮಿ. ಬೆನ್ನವುಡ್ಡಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಹೇಳಿದ್ದಾರೆ. ಝುಗಲೂಲ ಪಾಶ್ಯರನ್ನು ಹದ್ದುಪಾರ ಮಾಡಿ, ಜಿಬ್ರಾಲ್ಟರಿಂದಲ್ಲಿ ಟ್ರೆಯಿನಾಗ ಅವರ ಕೂಡ ಸಂಧಾನ ಮಾಡಿದ್ದು ಇತಿಹಾಸ ಪ್ರಸಿದ್ಧವಿದೆ. ಸರಕಾರದವರು ಹೀಗೆ ಮಾತಾಡಿದ ಹೊರತು ಗತ್ಯಂತರವೇ ಇಲ್ಲ. ಆದರೆ ಅದನ್ನು ವರ್ತಮಾನಪತ್ರಗಳಲ್ಲಿ ಪ್ರಸಿದ್ಧ ಮಾಡಿದ್ದು ಮಾತ್ರ ಆಶ್ಚರ್ಯವಾಯಿತೆಂದು ಯಾರಾದರೂ ಹೇಳಬಹುದು.

ಇಬ್ಬರು ಡಿಪುಟಿ ಕಲೆಕ್ಟರರ ರಾಜೀನಾಮೆ.

ಸ್ವದೇಶಿಯರಿಗೆ ಶಿಕ್ಷೆ ಕೊಡುವದಕ್ಕೆ ಕಷ್ಟವಾಗಿ, ನೌಕರಿ ಬಿಟ್ಟರು.

ಗುಜರಾಥದಲ್ಲಿ ಡಿಪುಟಿ ಕಲೆಕ್ಟರರಾಗಿದ್ದ ಶ್ರೀ ದುರ್ಲಭಭಾಯಿ ದೇಸಾಯಿ ಮತ್ತು ಶ್ರೀ ಮೊರಾರಜಿ ದೇಸಾಯಿ ಈ ಇಬ್ಬರು ಡಿ. ಕಲೆಕ್ಟರರು ಸರಕಾರೀ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಇವರ ಅಭಿನಂದನ ಮಾಡಲು ಸುರತದಲ್ಲಿ ಪ್ರಚಂಡ ಜಾಹೀರ ಸಭೆ ಕೂಡಿತ್ತು. ಸಭೆಯಲ್ಲಿ ಶ್ರೀ ದುರ್ಲಭಭಾಯಿಯವರು-

ಕಳೆದೆರಡು ತಿಂಗಳಲ್ಲಿ ನಾನೊಬ್ಬನೇ ೩೫ ಜನ ದೇಶಭಿಮಾನಿಗಳಿಗೆ ಶಿಕ್ಷೆ ಕೊಟ್ಟಿದ್ದೇನೆ. ಶಿಕ್ಷೆ ಕೊಡುವಾಗ ನನಗೆಷ್ಟು ಸಂತಾಪ ಮತ್ತು ದುಃಖವಾಗಿರಬೇಕೆಂಬದನ್ನು ದೇವರೇ ಬಲ್ಲನು. ದೇಶದ್ರೋಹಿಯಾಗಿ ದೇಶ ಸೇವಕರ ವಿರುದ್ಧ ನಾನು ಕೆಲಸ ಮಾಡುತ್ತೇನೆಂದು ನನ್ನ ಎದೆಯಲ್ಲಿ ಬಡಿಯುತ್ತಿತ್ತು. ಆ ದಸ್ತುರದ ಭಾರ ತೊಲಗಿ ಕೂಡಲೆ ರಾಜೀನಾಮೆ ಕೊಟ್ಟೆನು. ನನ್ನ ತಕ್ಕೊಳ್ಳಿರಿ. ಅಥವಾ ಸೇವಕನ ತಕ್ಕೊಳ್ಳಿರಿ. ರಾಜೀನಾಮೆ ಮಂಜೂರ ಮಾಡಬೇಕೆಂದು ಸರಕಾರದವರು ನನಗೆ ಪವಾರಿಯಿಂದ ಕೇಳಿದರು. ವೀರಮಗಾಮಿನ ನಿರಪರಾಧಿ ಭಗಿನಿಯರ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವನ್ನು ನೋಡಿ ಸಹಿಸಲಾರದೆ ರಾಜೀನಾಮೆ ಕೊಟ್ಟೆನು. ವೀರಮಗಾಮಿನ, ಆನಂದ, ಉಮರೇಥ, ಬಾರ್ಡೋಲಿ ಮತ್ತು ಬೇರೆ ಸ್ಥಳಗಳಲ್ಲಿಯ ಪೋಲೀಸ ರಾಜ್ಯವಾಯಿತು. ಆ ಆ ಸನ್ನದ ದೆಸೆಯಿಂದಲೇ ಸರಕಾರೀ ಕೆಲಸವನ್ನು ಧಿಕ್ಕರಿಸಿದೆನು.

ಎಂದಿದಾಗಿ ತಮ್ಮ ಅಂತಃಕರಣ ಬಿಚ್ಚಿ ಹೇಳಿದ್ದಾರೆ. ಇವರಂತೆ ಬೇರೆ ಡಿಪುಟಿ ಕಲೆಕ್ಟರರೂ ಸ್ವದೇಶಿಯರಿಗೆ ಶಿಕ್ಷೆ ಮಾಡುವ ಪ್ರಸಂಗದಲ್ಲಿ ತಮ್ಮ ಎದೆಯಲ್ಲೇನು ಒಡೆದಿರುತ್ತದೆಂಬದನ್ನು ನೋಡಬಾರದೇ?

ಮುಂಬಯಿಯಲ್ಲಾದ

ದಂಗೆಯ ನಿಷೇಧ; ಹಿಂದೂ ಮುಸಲಮಾನರ ಸಭೆ.

ರೇನಾಲ್ಡ್ಸ ಸಾಹೇಬರ ಸರಕಾರದ ಕೃತ್ಯದ ನಿಷೇಧ

ದಂಗೆ, ಮತ್ತು ಅದರಿಂದಾದ ಗುಂಡಿನ ಮತ್ತು ಜನಲಯವನ್ನು ನಿಷೇಧಿಸುವದಕ್ಕಾಗಿ ಹಿಂದೂ ಮುಸಲಮಾನರ ಸಭೆಯು ಕೂಡಿತ್ತು. ಮೌಲಾನಾ ಮಹಮದಲ್ಲಿಯವರೂ ಸಭೆಗೆ ಬಂದಿದ್ದರು. ಆದರೆ ಭಾಷಣ ಮಾಡಲಿಲ್ಲ. ಮುಸಲಮಾನರು ಸಾಬರಮತಿಯ ಫಕೀರರ ಛಾವಣಿಯಲ್ಲಿ ಸೇರಿ, [illegible] ಹುಸೇನ ಮುಸ್ಲಿಮರು [illegible] ಭಾಷಣ ಮಾಡಿದರು. ವಿಲಾಯತಿಯಿಂದ ಬಂದಿರುವ ರೇನಾಲ್ಡ್ಸಸಾಹೇಬರು ಭಾಷಣಮಾಡಿದರು. ಅವರ ಮಾತು ನೆರೆದಜನರ ಮೇಲೆ ವಿಶೇಷ ಪರಿಣಾಮಕಾರಕವಾಯಿತು. ಅವರು "ಬ್ರಿಟಿಶ ರಾಜ್ಯದೊಳಗಿನ ಅನೀತಿಯ ಪ್ರಕಾರವನ್ನು ವರ್ಣಿಸಿ, ಈಗಿನ ಪರಿಸ್ಥಿತಿಯ ಜವಾಬದಾರಿಯು ಮುಖ್ಯ ಮಂತ್ರಿ, ಭಾರತ ಮಂತ್ರಿ ಮತ್ತು ಲಾರ್ಡ ಆಯರ್ವಿನ ಸಾಹೇಬರ ಮೇಲುಂಟೆಂದು ಸ್ಪಷ್ಟವಾಗಿ ಹೇಳಿದರು,

ಕಂಪ ದೇವರಿಗೆ ಕೈಮುಗಿದರೆ ಪ್ರೊಫೆಸರ ಒಲಿಯುವನೇ?

[illegible]

ಕರಟಗಿನ ಗೌಡರ ಗುಂಡಿಗೆ.

[illegible]

ನಮ್ಮ ಗ್ರಹದ ಗತಿ !!

[illegible]

ಯಾರ ಪ್ರಾಣಾಪಾಯ?

[illegible]

ಬಾರಡೋಲಿಗೆ ದಂಡಿನ ಪ್ರಯಾಣ.

[illegible]

ಪೋಲೀಸ ಮತ್ತು ಗೌಡರ ಕಟ್ಟಿಗೆ

[illegible]

ಕುರಂದದಲ್ಲಿ ಮಹಾತ್ಮರ ಕಾರ್ಯಕ್ರಮ

[illegible]

[illegible]

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿವರ್ಯರೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

ದಿ ವೇಮರಡ್ಡಿ ಕಂಪನಿ ಲಿಮಿಟೆಡ್.

ಎಂಬ ನಾಮೋದ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಈ ವರ್ಷ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯ ವ್ಯವಸ್ಥೆಯು ದೊಡ್ಡ ದೊಡ್ಡ ಜಮೀನದಾರರ ಮತ್ತು ವ್ಯವಹಾರದಕ್ಷರಾದ ಪ್ರತಿಷ್ಠಿತ ಜನರಿಂದಲೇ ನಡೆಯುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶ ಒಂದರಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಕಲ್ಪಿಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಜೋಳದಾನ್ಯ, ಶಾಲೀ(?)ಟಿಲ, ಹತ್ತಿ(?)ಕಾಳು, ಜಿನಸಿ ಎಣ್ಣೆ ಶೇಂಗಾ ವಗೈರೆ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಸೋವಿಯದರದಿಂದ ಕೊಂಡುಕೊಳ್ಳಬೇಕಾಗಿ ವಿನಂತಿ. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತಿ ಕಾಳು, ಜೋಳ ವಗೈರೆ ಮಾಲನ್ನು ಸಂಗ್ರಹ ಮಾಡಿದರೆ ಬಹಳ ಲಾಭವಿದೆ. ಈಗ ತಮಗೆ ಬೇಕಾದ ಮಾಲಿನ ಬದಲು ೧/೪ ದರವು ನಮಗೆ ಮುಂಗಡವಾಗಿ ಕಳುಹಿಸಿಕೊಟ್ಟ ಬಳಿಕ ಖರೀದಿ ಮಾಡಲಿಕ್ಕೆ ತಿಳಿಸಿದಲ್ಲಿ ಯೋಗ್ಯದರದಿಂದ ಖರೀದಿಸಿ ಕಳುಹಿಸುವೆವು.

ತಾವು ಇರುವಲ್ಲಿ ಬರುವ ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳಿ, ಜೋಳ, ಜೀನಸು, ಶೇಂಗಾ ವಗೈರೆ ಮಾಲನ್ನು ತರಹದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂದೂ ಮತ್ತು ತಾವೂ ಲಾಭಹೊಂದಬೇಕೆಂದೂ ಇಚ್ಛಿಸುತ್ತೇವೆ.

ತಮ್ಮ

ಗದಗ.

ಅಂಗಡಿ ನಂ ೧೨೩೭ — ರಾ. ಸಾ. ಲಿಂಗನಗೌಡಾ ಪಾಟೀಲ, ಚೇರಮನ್ನ.

ಕಾಟನ್ ಮಾರ್ಕೆಟ ರೋಡ — ಲಕ್ಷ್ಮಪ್ಪಾ ಗೋಣೆಪ್ಪಾ, ಸಾಹುಕಾರ ಮೈದೂರ ಅಂತರವಳ್ಳಿ

ವೆಂಕರಡ್ಡಿ ಕೃಷ್ಣರಡ್ಡಿ ಅನಾಮತಿ ಅಸುಂಡಿ, ಗದಗ — ಬಸವನಗೌಡಾ ಪಾಟೀಲ, ಹಾಯಕೋರ್ಟ ವಕೀಲ

ಹನುಮಂರಡ್ಡಿ ತಿಮ್ಮರಡ್ಡಿ ಕಾಲವಾಡ ಮ್ಯಾನೇಜರ, ರಡ್ಡಿ ಬ್ಯಾಂಕ ಧಾರವಾಡ — ಧಾರವಾಡ

ಸೂಚನೆ:— ವಿಮೆ ಇಳಿಸುವಲ್ಲಿ ಮಾಲಿನ ಮೇಲೆ ಒಂದರಕ್ಕಿಂತ ಹೆಚ್ಚಿಲ್ಲದಷ್ಟು ದರವು ಆಗ ಪತ್ರ ಕೊಡುವದರಲ್ಲಿ ಬರುವದು. ಹೀಗೆ ಒಯ್ದ ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಗಿಂತ ಹೆಚ್ಚು ಬಡ್ಡಿ ಕೊಡಬೇಕಾಗುವದು. ಕಂಪನಿಯವರು ಅಸಾಮಿಗಳ ಇಚ್ಛೆಯ ಪ್ರಕಾರ, ಮಾರ್ಕೆಟ ದರದಲ್ಲಿ ಖಾಸಗಿ ಅಥವಾ ಲಿಲಾವ ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ತೀರ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಕುಂಬಾರ, ಕಬ್ಬೇರ, ಒಡ್ಡರ, ಗೊಲ್ಲರ, ತೇಲಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ ಕಿಕ್ಕಲಿಗರಾದ ಲಮಾಣಿ ಮೊದಲಾದ ಸಮಸ್ತ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಲೆತ್ನಿಸುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ಹಿನಾವಸ್ಥೆ, ಅಡಚಣೆ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧ್ಯೇಯದಾವುದು ಮೊದಲಾದವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ನಿಜಾಮ, ಮೈಸೂರ ಮೊದಲಾದ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ವಯಸ್ಸಿನ ಸ್ತ್ರೀಪುರುಷರು ಕೆಳಗೆ ಕಾಣಿಸಿದಂತೆ ಆಯಾ ತರಗತಿಯ ದೇಣಿಗೆ ಅಥವಾ ವರ್ಗಣಿಯನ್ನು ಕೊಟ್ಟು ಆಯಾ ತರಗತಿಯ ಸಭಾಸದರಾಗಬಹುದು.

ಆಶ್ರಯದಾತರು:— ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ದೇಣಿಗೆಯನ್ನು ಕೊಡತಕ್ಕವರು.

ದಾತೃಗಳು. ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಆಜೀವ ಸಭಾಸದರು:— ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.

ಸಾಧಾರಣ ಸಭಾಸದರು:— ಇವರು, ಕೆಳ ೧ ನೇ ತರಗತಿ:— ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ

೨ ನೇ ತರಗತಿ:— ಕನಿಷ್ಠ ೩ ರೂ. ವಾರ್ಷಿಕ ವರ್ಗಣಿ ಕೊಡುವವರು.

೩ ನೇ ತರಗತಿ:— ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.

೪ ನೇ ತರಗತಿ:— ಕನಿಷ್ಠ ೪ ಆಣೆ. ವಾರ್ಷಿಕ ವರ್ಗಣಿ ಕೊಡುವವರು.

ಯುವಕರೂ, ಬಂಧುಭಗಿನಿಯರು ಅವಶ್ಯವಾಗಿ ಸಂಘದ ಸಭಾಸದರಾಗಬೇಕೆಂದು ಒಕ್ಕೊರಲಿನ ವಿನಂತಿಯು.

ದೇವನಗೌಡ ಲಿಂಗನಗೌಡ ಪಾಟೀಲ,

ಬಿ. ಎ. ಎಲ್ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ

ಸೆಕ್ರೆಟರಿ.

ಫಕ್ತ ೩ ತಿಂಗಳು ಈ ಪತ್ರದ ವರ್ಗಣಿದಾರರಿಗೆ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೇಡಿಯಂ ಲಿವ್ಹರ ವಾಚ

ಈಗ

ಮೊದಲಿನ ಕಿಮ್ಮತ್ತು. ರೂ. ೧೫



ಕೊಡುವ ಕಿಮ್ಮತ್ತು. ರೂ. ೭||

ಇವುಗಳ ಕಿಮ್ಮತ್ತಿನ ಶಿವಾಯ ವಿ. ಪಿ. ಖರ್ಚು

ಒಮ್ಮೆಲೇ ೩ ವಾಚ ತರಿಸಿದರೆ. ವಿ ಪಿ. ಮಾಫ, ಒಮ್ಮೆಲೇ ೬ ವಾಚ ತರಿಸಿದರೆ ೧ ವಾಚ ಹೆಚ್ಚು. ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು. ಈ ವಾಚುಗಳು ಶಿಲೆಂಡರ ಅಥವಾ ಲಿವ್ಹರ ಇರುವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ

ಪೋಸ್ಟ ಬನವಾಸಿ (ಉ. ಕ.)

೯—೧೧—೨೯

THE UNITED KARNATAK INSURANCE COMPANY
LTD. DHARWAR

ಸುಸಂಧಿ — ಸ್ಥಿರವಸ್ತಿ — ಕಳೆದುಕೊಳ್ಳಬೇಡಿರಿ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ೭ನೇ ಆಕ್ಟಿನ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಗೋವಿಂದರಾವ ಶ್ರೀನಿವಾಸರಾವ ಸಾವಕಾರ ಬಿ ಎ ಎಲ್‌ಎಲ್ ಬಿ ಸರಕಾರಿ ವಕೀಲ ವ ಕಸ್ತೂ ಪಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಚೇರಮನ

೨ ಡಾ|| ವಾಸುದೇವರಾವ ಶ್ರೀನಿವಾಸರಾವ ಭೂಮಟಗಿ ಎಲ್ ಎಮ್ ಆ್ಯಂಡ ಎಸ್ ಗದಗ

೩ ರಾ|| ಶ್ರೀನಿವಾಸರಾವ ಶಂಕರರಾವ ಮುತಾಲೀಕದೇಸಾಯಿ ಬಿ ಎ ಅಣ್ಣಿಗೇರಿ

೪ ಮಿ॥ ರಾಮಚಂದ್ರ ರಂಗರಾವ ಸಾವಕಾರ ವತನದಾರ ಹಳೆ ಹುಬ್ಬಳ್ಳಿ

೫ ಮಿ॥ ಕೃಷ್ಣರಾವ ಲಕ್ಷ್ಮಣರಾವ ಹುಯಿಲಗೋಳಕರ ಬಿ ಎ ಎಲ್‌ಎಲ್ ಬಿ ವಕೀಲ ಗದಗ

೬ ಮಿ॥ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡದಹುಬ್ಬಳ್ಳಿ ವಕೀಲಬೈಲಹೊಂಗಲ

೭ ರಾ|| ಅನಂತರಾವ ವೆಂಕಟೇಶ ದೇಸಾಯಿ ಬಿ ಎ ಎಲ್‌ಎಲ್ ಬಿ ವಕೀಲ ಹುಬ್ಬಳ್ಳಿ

೮ ಮಿ॥ ರಾಮರಾವ ವಿ. ಭಂಡಿವಾಡ ಬಿ. ಎ. ಎಲ್. ಎಲ್ ಬಿ ವಕೀಲ ಧಾರವಾಡ

೯ ರಾ|| ಅಬ್ದುಲ ಕರಿಮ ಅಮೀನ ಸಾ|| ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹೊರಟ ಇನ್‌ಶ್ಯೂರನ್ಸ ಕಂಪನಿಗಳೊಂದರಲ್ಲಿ ಇದೇ ಮೊದಲನೇದು. ಈ ಕಂಪನಿಯ ಡಾಯರೆಕ್ಟರರೂ ಮತ್ತು ಕೆಲಸ ನಡೆಸುವವರೂ ಕನ್ನಡಿಗರೇ ಆಗಿರುತ್ತಾರೆ. ಒದಗಿ(?) ಕಂಪನಿಗಳಿಗೆ ಏಜಂಟರಾಗಿ ವಿಮೆ ಇಳಿಸುವ(?) ಸಹಾಯ ಮಾಡಿ ಹಣವನ್ನು ಹೊರಗೆ ಕಳಿಸುವದಕ್ಕಿಂತ ಕರ್ನಾಟಕದಲ್ಲಿಯೇ ಹುಟ್ಟಿ ಹೆಸರು ಪಡೆದ ಈ ಕಂಪನಿಗೆ ಸಹಾನುಭೂತಿಯನ್ನು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಶೇರುಗಳು ಮಾರಾಟಕ್ಕೆ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಎಪ್ರಿಲ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗಿರುವದು. ಶೇರುಗಳನ್ನು ಮಾರುವದಕ್ಕೂ ಮತ್ತು ವಿಮೆ ಕೆಲಸವನ್ನು ತಂದು ಕೊಡುವದಕ್ಕೂ ಎಲ್ಲ ದೊಡ್ಡದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಏಜಂಟರುಗಳು ಸುಲಭ ಸವಲತ್ತುಗಳು ವಿಪುಲ ಮತ್ತು ಕಮಿಶನ ದರಗಳು ಲಾಭಕಾರವಾಗಿದ್ದು ಏಜಂಟರಾಗಬಿಚ್ಛಿಸುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬೇಕು.

K. L. Huilgolkar,

ಸೆಕ್ರೆಟರಿ

ಯು. ಕ. ಇ. ಕ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧೨ ವರೆಗೆ

ಚಾಲೂ ಖಾತೆಗಳ:— ಫುಕ್ಕಟೆಯಾಗಿ ತೆರೆಯಲ್ಪಡುವವು

ಸೇವಿಂಗ್ಸ ಬ್ಯಾಂಕು:— ಬಡ್ಡಿ ದರದಿಂದ ತೆಗೆದುಕೊಳ್ಳಲ್ಪಡುವದು. ಬಡ್ಡಿ ೧೦ ೩ ರೂ.

ಮುದತಿ ಠೇವುಗಳ:— ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡಿ ದರ ೩|| ರೂ

ದೇಣ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡಿ ದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಧಾರದ ಮೇಲೆ ಹಾಗು ಸರಕಾರಿ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮತ್ತು ಇತರ ಕಂಪನಿಯ ಶೇರುಗಳ ಖರೀದಿ ಮಾರಾಟ ಮಾಡಿ ಆಯಾ ಚೆಕ್ಕುಗಳ ಹಣವನ್ನು ವಸೂಲು ಮಾಡಿಕೊಡಲ್ಪಡುವದು. ಯೋಗ್ಯ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವರ ಖರೀದಿ ಮತ್ತು ವಿಕ್ರಿ ಮಾಡುವದರಲ್ಲಿಯೂ ಒದಗುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಬಿಲ್ಲು ಹುಂಡಿಗಳನ್ನು ವಸೂಲು ಮಾಡುವದರಲ್ಲಿಯೂ ಒದಗುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ಕಾಲದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಟ,

ಏಜಂಟರು.

ತಿಳಿಯದೇ ಧಾತುಕ್ಷಯವಾಗಿ ಶಕ್ತಿಗುಂದಿ ಆದ ಮನುಷ್ಯನಿಗೆ ಮುಪ್ಪಿನ ಕಾಲದಲ್ಲಿಯೇ ನಿಜ ವಾಗಿ ಸಂಸಾರ ಸುಖವು, ದುಃಖಮಯ ನಿರುತ್ಸಾಹ ನಿರಾಶೆಗಳು ಹುಟ್ಟುತ್ತವೆ. ಇಂಥ ಮನುಷ್ಯರು ಧಾತು ಕ್ಷಯರೋಗವು ಹೋಗಿ, ಪೂರ್ಣ ಪುರುಷತ್ವವನ್ನು ತಂದು ಕೊಡುತ್ತದೆ. ಸುಪ್ರಸಿದ್ಧ ವೈದ್ಯ ಶಾಸ್ತ್ರೀ ವಿಜಾಪುರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂದು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಸವಿ ಹಾಗು ತೀವ್ರ ಗುಣಕೊಡುವ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಸಪ್ಪಗಿನ ಚರ್ಮ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು ಹೋಗಿ ಸ್ಫುರಣಯುಕ್ತ ದೇಹ, ಆನಂದಿತ ಸ್ವಭಾವ, ಸ್ತ್ರೀ ಚಿತ್ತವನ್ನು ಹೀಡಿಸುವ ಸೌಂದರ್ಯ, ಆಕರ್ಷಕತೆ, ಅಶಕ್ತತೆ, ವೀರ್ಯದ ನೀರು, ಆಲಸ್ಯ, ಕೈಕಾಲುಗಳ ಬೇನೆ, ಉರಿಮೂತ್ರ, ಇಂದ್ರಿಯದ ಉರಿ, ಸ್ವಪ್ನಾವಸ್ಥೆ, ಪಿತ್ತವಿಕಾರ, ಅಗ್ನಿ ಮಾಂದ್ಯ ನಿದ್ರಾನಾಶ, ಮಲಾವರೋಧ, ಕೆಮ್ಮು ನೆಗಡಿ ರೋಗ, ಜೋಂಪಹತ್ತುವಿಕೆ, ಎದೆ ದರದ ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶವಾಗಿ, ರಸ, ರಕ್ತ, ಅಸ್ಥಿ, ಮಜ್ಜಾ, ವೀರ್ಯ ಮೊದಲಾದ ಸಪ್ತಧಾತುಗಳು ವೃದ್ಧಿಯಾಗಿ ಇಂದ್ರಿಯ ಶಕ್ತಿ ತೀವ್ರವಾಗಿ ದೇಹದಲ್ಲಿ ಶಕ್ತಿ ಉಕ್ಕುತ್ತದೆ. ಇದರಿಂದ ನಿಜವಾದ ಸುಖಸಂತೋಷ ಸಿಗುತ್ತದೆ. ಹೆಂಗಸರ ಮುಟ್ಟಿನ ಬೇನೆ, ಬಿಳುಪು, ಹಾಗು ಬಂಜೆತನ ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರಕೃತಿಯು ಸುಧಾರಿಸುತ್ತದೆ. ಈ ಅಮೃತಸಿಂಧುವನ್ನು ಸಕ್ಕರೆ ಅರ್ಧ ತೊಲೆ ಮತ್ತು ಸಂಜೆಗೆ ಅರ್ಧ ಶೇರು ಕಾಯಿಸಿದ ಹಾಲಿನ ಜೊತೆ ಕುಡಿಯಬೇಕು ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆಯವರೆಗೆ ತೆಗೆದುಕೊಳ್ಳಬೇಕು. ಹತ್ತುದಿನಗಳ ಕವಡಿಗೆ ಸಾಕಾಗುವ ೧ ಬಾಟಲಿ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ ಹಾಗು ಒಂದು ಬಾಟಲಿ ಪುಕ್ಕಟೆ. ಅಂಚೆ ಹಾಗು ಟಪಾಲುಗಳ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ

(ವಿಜಾಪುರ) ಜಿ.

ಪಂಡಿತ ಮಾಲವಿಯಾಯವರ ದಸ್ತಗಿರಿ.

ಪಂಡಿತ ಮದನಮೋಹನ ಮಾಲವಿಯಾಯವರಂಥ ಸಜ್ಜನರು ಕೂಡ ಬ್ರಿಟಿಶ ಸರಕಾರದ ಕಾಯದೆಗೆ ಆಹುತಿ ಬಿದ್ದರು. [illegible]

ಪಂಡಿತ ಮಾಲವಿಯಾಯವರ ಪರೀಕ್ಷೆಯು

[illegible]

ಬಾರಡೋಲಿಯು

ಸರಕಾರೀ ಒಂಗಲೆಯ ಹತ್ತರ ಪೋಲೀಸ ಗುಂಡು!!

[illegible]

ಸಾತಾರಕ್ಕೆ ನಿಜವಾದ ಟಿಳಕ ಸ್ಮಾರಕ ಬೇಕು.

[illegible]

ಮುಂಬಯಿಯಲ್ಲಿ

ಪೋಲೀಸ ಮತ್ತು ಮುಸಲಮಾನರ ದಂಗೆ

ಇಬ್ಬರು ಸತ್ತರು; ಅನೇಕರು ಘಾಯವಾದರು.

[illegible]

ಕಡಕೋಳದ ಸುತ್ತಲು ನಾಯಿದ ಕುಂಬಿಗಳ ಧ್ವಂಸ.

(ಬರೆದು ಬಂದದ್ದು)

[illegible]

ಹಟ್ಟಿನ ವಕ್ಕಳಿಗೋತಕ್ಕೆ ವಿಷಪಾನ ಮಾಡಿಸುವಿರಿ?



[illegible]

೩೪	ಕೋಳೆಯು ಡಬಿ	ಸೋಪಪ್ಪಂಟಿನ		೬-೦-೦
೧೨	,,	,,	,,	೩-೦-೦
೩೪	,,	,,	ಉಸ್ತರ	೫-೮-೦
೧೨	,,	,,	,,	೩-೦-೦

[illegible]

ಬ್ರಾಂಚ ಸೋಮರಾವ ರೋಡ
ಬೆಂಗಳೂರ ಸಿಟಿ

ಓ ಲಕ್ಷ್ಮೀ ಮಲ್ಲಿಕಾರ್ಜುನ ಕಂಪನಿ,
ಚಿಕ್ಕಮಂಗಳೂರ

ಕ್ಷಣಿಕದಾಸ" ಸೋಪು ಉಪಯೋಗಿಸಿ!" ಪೋಲ ಪೋಗಟಿಸಿ"

ನವೀನ ತರದ ಬಯ್ಯಲಾಟಕ್ಕೆ ಮರುಳಾಗಬೇಡಿರಿ

ಮಹಾಶಯರೇ!

[illegible]

ಪಿ. ದತ್ತಾತ್ರರಾವ, ಪರಿಪ್ಪದ ಅಂಬರಬತ್ತಿ
ಫ್ಯಾಕ್ಟರಿ ವ್ಯೆಸರ ರೋಡ ಶ್ರಿ ಟ
ರಾಜೇಟವಾರ Camp ಮಹಿಸೂರ

ಎಂ ಎಸ್ ಮಹಮದ ಹನೀಫ್ ಆ್ಯಂಡ್ ಸನ್ಸ್
ಪರಪ್ಪದ ಅಂಬರಬತ್ತಿ ಫ್ಯಾಕ್ಟರಿ
ಸರ್ಕಾರಿ ಸಾಹುಕಾರ ಮೈಸೂರ

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

[illegible]

ಬೆಳಗಾವಿ,
ಫೋನ ನಂಬರ

ಹೆ. ಬಿ. ಫೌಜದಾರ ಬಿ ಕಾಂ
ಶೇಅರ ಬಜಾರ ಗೋಕಿಲ್ಸ ಮೊಹಲ್ಲ
ಫೋರ್ಟ ಬಳಿ ರೋಡ,
ದಾರವಾಡ, ಬೊಂಬಾ

[illegible]

ಶೀಘ್ರ! ಶಕ್ತ!! ಕಾಸಿ!!!

ಶ್ರೀದತ್ತ ಪ್ರಿಂಟಿಂಗ್ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀಲಿಯ ಮಿಲ್ಲು.

[illegible]

ಸುಸಮಯ

[illegible]

WANTED

WANTED - Candidates desiring to serve in Government Railway and Canal Departments. Full particulars and Railway Fare Certificate on 2 annas stamps; apply to -

IMPERIAL TELEGRAPH COLLEGE, Nai Sarak, DELHI.

ಮೈಸೂರ ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು. [illegible]

[illegible]

ಮ್ಯಾಟ್ರಿಕ ಪರಿಣಾಮವು

ಧಾರವಾಡ ಹಾಯಸ್ಕೂಲ

೧ ಅಪ್ಪಿನಭಾವಿ ಎಲ್ ಟಿ ೨ ಥಂಡಿವಾಡ ಎ ಬಿ ೩ ಬ್ರಿವ್ಹೆ ಬಿ ಎ ೪ ದೇಸಾಯಿ ಜಿ ಎಚ್ ೫ ದೇಶಪಾಂಡೆ ಆರ ಎಚ್ ೬ ಧಾರವಾಡಕರ ಎಚ್ ಹ್ವಿ ೭ ಗುಡಿ ಆರ ಟಿ ೮ ಕೋಟೂರ ಎಫ ಬಿ ೯ ಕುಲಕರ್ಣಿ ಡಿ ಎಲ್ ೧೦ ಮಾಳಗಿ ಎಸ ಆರ್ ೧೧ ವೆಂಕಿಕರ ಜಿ ಎಸ ೧೨ ಪರ್ವತಿಕರ ಜಿ ಟಿ ೧೩ ಪಾಟೀಲ ಆರ ವ್ಹಿ ೧೪ ಸವಣೂರ ಎಚ್ ಜಿ ೧೫ ಪಾಂಡಿಗೇರ ಆರ ಜಿ ೧೬ ಅಚಲಕರ ಎನ ವಾಯ ೧೭ ಜಮ್ಮಿಹಾಳ ಹ್ವಿ ೧೮ ಲೇಲೆ ಬಿ ವ್ಹಿ ೧೯ ಚಾಲಿ ೨೦ ಜನ್ನು ಆರ ಡಿ ೨೧ ಹೊಸಕೇರಿ ಎನ್ ಎ ೨೨ ಮೋಹಿತೆ ಎ ಎಸ್ ೨೩ ವೆಣಕಿನಕಾಯಿ ೨೪ ಪಾಟೀಲ ಎನ್ ಎಲ್ ೨೫ ಕುಲಕರ್ಣಿ ಎನ್ ಎಸ್ ೨೬ ದೀಕ್ಷಿತ

ಮ್ಯಾಟ್ರಿಕ್

೧ ಹೊನ್ನಾಪುರ ಕೆ ಎಚ್ ೨ ಧಾರೇಶ್ವರ ಜಿ ಎನ್ ೩ ಹೊನ್ನಾಪುರ ಹ್ವಿ ಎಚ್ (ಫಾಯನಲ)

ವಿಕ್ಟೋರಿಯಾ ಹಾಯಸ್ಕೂಲ.

೧ ದೀಕ್ಷಿತ ಬಿ ಆಯ ೨ ಜೋಶಿ ಜಿ ಸಿ ೩ ಕಡಣಿ ಜಿ ಆರ ೪ ಕಮಲಾಪೂರ ಬಿ ಎಚ್ ೫ ಕುಲಕರ್ಣಿ ಜಿ ಎನ್ ೬ ಕುಲಕರ್ಣಿ ಎಚ ಎ ೭ ಮಠದ ಬಿ ಎಸ್ ೮ ಸಂಶಿಗೇರ ಎಲ್ ಎಮ್ ೯ ಕಿಂದ ಸಿ ಎಚ ೧೦ ಕುಲಕರ್ಣಿ ಕೆ ಎ ೧೧ ಹೆಬ್ಬಳ್ಳಿಕರ ಕೆ ಜಿ ೧೨ ಜೋಶಿ ಎಸ್ ಎಸ್ ೧೩ ಭಾವಿಕಟ್ಟಿ ವಾಯ ಜಿ ೧೪ ಕುಲಕರ್ಣಿ ಕೆ ಆರ ೧೫ ಕುಲಕರ್ಣಿ ಎಸ ಕೆ ೧೬ ತಿಮಯಿ ಬಿ ಜಿ ೧೭ ಅಪಗೊಂಡರ ಕೆ ಪಿ ೧೮ ಜಕಾತಿ ಎಸ ವ್ಹಿ ೧೯ ಕಲ್ಲೂರ ಪಿ ಬಿ ೨೦ ವಸ್ತ್ರದ ಹ್ವಿ ಜಿ ೨೧ ಪಾಟೀಲ ಹ್ವಿ ವಾಯ

ಕರ್ನಾಟಕ ಹಾಯಸ್ಕೂಲ

ಮ್ಯಾಟ್ರಿಕ

೧ ಗಜೇಂದ್ರಗಡ ವ್ಹಿ. ಎಸ್. ೨ ಗುಂಡೇಕರ ಎನ್ ಬಿ. ೩ ಜೋಶಿ ಎನ್. ಸಿ ೪ ಖಾನಪಗಡಿ ಎಮ್. ಜಿ ೫ ಸೋನಿ ಎಸ್. ವ್ಹಿ ೬ ಅರ್ಕಸಾಲಿ ಪಿ ಎ. ೭ ಮುತಾಲಿಕದೇಸಾಯಿ ಎನ್ ಆರ್. ೮ ಕಾನಡೆ ಬಿ. ಡಿ. ೯ ಕೊಡಕಣಿ ಆರ್. ಎ

ಫಾಯನಲ ಮ್ಯಾಟ್ರಿಕ

೧ ಸವಣೆ ೨ ಅರ್ಕಸಾಲಿ ೩ ಕೋಡಕಣಿ

ಫಾಯನಲ

೧ ನಾಯಿಕ ೨ ಮುತ್ತಲ

ಲಿಂಗಾಯತ ಹಾಯಸ್ಕೂಲಿನಿಂದ ೮ ಜನರು ಪಾಸಾಗಿದ್ದಾರೆ. ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ವೀರ ವಾಮನರಾಯರ

ದಸ್ತಗಿರಿ

ಪಂಡ್ಹರಪುರದಲ್ಲಿ ಪ್ರಖ್ಯಾತ ಅಸಹಕಾರಿಗಳಾದ ವೀರ ವಾಮನರಾಯರನ್ನು ರಾಜದ್ರೋಹದ ಆರೋಪದಿಂದ ಹಿಡಿದರು. ಇವರು ಅಲ್ಲಿಯ ಯುದ್ಧ ಮಂಡಲದ ಅಧ್ಯಕ್ಷರು. ಇವರ ತೆರವಾದ ಸ್ಥಳವನ್ನು ಹಿಂದಿನ ಪ್ರತಿಯೋಗಿ ಸಹಕಾರಿಯಾಗಿದ್ದ ಅಸೆಂಬ್ಲಿ ಮೆಂಬರ ಶ್ರೀ ಅಣೆ ಮಾಧವರಾಯರು ಸ್ವೀಕರಿಸಿದ್ದಾರೆ.

ಕೌನ್ಸಿಲದ ಮೂರು ಸ್ಥಳಗಳು

ದಿಕ್ಕಿಲ್ಲದವಾದವು.

ಸುರತದ ಪಕ್ಷಿಯಿಂದ ಕೌನ್ಸಿಲ ಮೆಂಬರರಾಗಿದ್ದ ಡಾಕ್ಟರ ದೀಕ್ಷಿತ, ರಾವಬಹಾದ್ದೂರ ಭೀಮಭಾಯಿನಾಯಿಕ ಮತ್ತು ಶ್ರೀ ಶಿವದಾಸಿನಿ ಇವರು ದಬ್ಬಾಳಿಕೆಯ ನಿಷೇಧ ಮಾಡಲು ರಾಜೀನಾಮೆ ಕೊಟ್ಟಿದ್ದಾರೆ. ಶುಕ್ರವಾರ ದಿವಸ ಉಮೇದವಾರರು ಅರ್ಜಿಕೊಡುವ ತಾರೀಖು ಇತ್ತು. ಆದರೆ ಒಬ್ಬನೂ ಕಲೆಕ್ಟರರ ಕಚೇರಿಯ ಕಡೆಗೆ ಹಣಿಕಿ ಸಹ ಹಾಕಲಿಲ್ಲ.

ಪೇಶಾವರ ಪ್ರಕರಣದ ನಿಜ ಸುದ್ದಿ ಬೈಲಿಗೆ ಬಂತು.

ದೇವರು ಮ್ಯಾಜಿಸ್ಟ್ರೇಟರ ಬಾಯಿಯಿಂದಲೇ ಸತ್ಯ ಹೊರಸಿದನು.

ಸಿಟಿ ಮ್ಯಾಜಿಸ್ಟ್ರೇಟರಾದ ಮಿ ಸದುಲ್ಲಾಖಾನನು ಪೇಶಾವರದ ಜಜ್ಜರ ಮುಂದೆ ಕೆಳಗೆ ಕೊಟ್ಟಂತೆ ಜವಾಬು ಕೊಟ್ಟಿದ್ದಾರೆ

ಕಾಂಗ್ರೆಸದ ೧೧ ಜನರ ಮೇಲೆ ವಾರಂಟು ಹೊರಟಿರುತ್ತವೆಂದು ೨೩ನೆಯ ತಾರೀಖಿನ ಪ್ರಾತಃಕಾಲದಲ್ಲಿ ಕೇಳಿದೆನು. ಇವರಲ್ಲಿ ಇಬ್ಬರ ದಸ್ತಗಿರಿಯಾಗಿದ್ದಿಲ್ಲ. ಕಲೆಕ್ಟರರು ನನಗೆ ಕಾಬೂಲಿ ಅಗಸಿಯ ಚಾವಡಿಗೆ ಬರಲಿಕ್ಕೆ ಹೇಳಿದರು. ಅಲ್ಲಿ ಅಜಮಾಸು ೯೦ ಜನರು ನನ್ನ ಕಡೆಗೆ ಬರುವದನ್ನು ಕಂಡೆನು. ಅವರು ಬಂದವರೇ ಹೊರಟು ಹೋದರು. ಯಾವ ಗದ್ದಲವೂ ಇರಲಿಲ್ಲ. ಅನಂತರ ಹತ್ತು ಗಂಟೆಯ ಸಮಯದಲ್ಲಿ ಇದಕ್ಕೂ ದೊಡ್ಡದಾದ ಆರುನೂರು ಜನರದೊಂದು ಗುಂಪು ಬಂತು. ಇವರಲ್ಲಿ ಇನ್ನೂರು ಜನರು ಹೊರಟು ಹೋದರು. ನಾಲ್ಕನೂರು ಜನರು ಅಲ್ಲೇ ಕೂತರು. ಪೋಲೀಸರಿಗೆ ಬೇಕಾದಂಥ ಉಳಿದ ಇಬ್ಬರು ಈ ಗುಂಪಿನಲ್ಲಿದ್ದಾರೆಂದು ನನಗೆ ಹೇಳಿದರು. ನಾನು ಅವರನ್ನು ಕರೆದೆನು. ಅವರು ತಾವಾಗಿ ನನ್ನ ವಶವಾದರು. ಆಗ ನಾನು ಡೆಪ್ಯುಟಿ ಕಮೀಶನರರಿಗೆ ದಂಗೆ ತರಿಸುವ ಅಗತ್ಯವಿಲ್ಲೆಂದೂ ದಂಗೆ ಎಂದರೆ ಗೊಂದಲವೇಳುವದೆಂದೂ ಹೇಳಿದೆನು. ಪೋಲಿ ಸಾಹೇಬ ಸಿಗಂತನು ಪದೇ ಪದೇ ಹೇಳುತ್ತಾ ಇದ್ದನು. ಆದರೂ ದಂಗೆ ಹೊರಟಿತೆಂಬ ಸುದ್ದಿ ಬಂತು. ನಾನು ಚಾವಡಿಯ ಮಾಳಿಗೆಯ ಮೇಲೆ ಹತ್ತಿದೆನು. ಅ|| ಪೊ|| ಸು|| ಸಾಹೇಬನು ಕುದುರೆಯ ಮೇಲಿಂದ ಬರುತ್ತಿರುವದನ್ನು ಕಂಡೆನು. ಕೆಲವರು ಅವನ ಹುಯಿಲ್ ಮಾಡುತ್ತಿದ್ದರು. ಆದರೆ ಕಲ್ಲೊಗೆಯುತ್ತಿದ್ದಿಲ್ಲ. ಕೂಡಲೆ ನಾನು ಕೆಳಗಿಳಿದು ಒಂದು ಕಲೆಕ್ಟರಸಾಹೇಬನನ್ನು ಕಂಡು, ಅ|| ಪೊ|| ಸಾಹೇಬನು ಹೇಳುವದನ್ನು ನಂಬಬೇಡಿರಿ ಕಲ್ಲೊಗೆದರೆಂಬ ಆರೋಪ ಸುಳ್ಳೆಂದು ಹೇಳಲು ಟೆಲಿಫೋನದ ಹತ್ತರ ಹೋದೆನು. ಆದರೆ ಅವರು ಎಲ್ಲಿದ್ದಾರೆಂಬ ತಪಾಸು ಹತ್ತಲಿಲ್ಲ. ತುಸು ಹೊತ್ತಿನ ನಂತರ ಸಾಹೇಬರು ದಂಡು ಸಹಿತ ಬಂದರು. ಚಾವಡಿಯ ಕೆಳಗಿಳಿದೆನು. ಮೂರು ಕವಚದ ಬಂಡಿಗಳನ್ನೂ ಸಾಹೇಬರನ್ನೂ ಕಂಡೆನು. ಒಂದರ ಬುಡದಲ್ಲಿ ಇಬ್ಬರು ಹಿಂದಿ ಜನರು ಸಿಕ್ಕಿದ್ದರು. ಕವಚದ ಬಂಡಿ ಸರಿಸಿರಿ ಜನರನ್ನು ಹೊರಗೆ ತೆಗಯುತ್ತೇವೆಂದು ಜನರು ಕೂಗಿದರು. ಬಂಡಿ ತೆಗೆಯದಾಗಲು ಕಡಿದ ಜನರು ಕಲ್ಲೊಗೆಯಲಾರಂಭಿಸಿದರು. ಒಂದು ಕಲ್ಲು ಕಲೆಕ್ಟರರಿಗೆ ಬಡಿಯಿತು. ಸಾಹೇಬರನ್ನು ಚಾವಡಿಯಲ್ಲಿ ಕರೆತಂದರು. ನಂತರ ಜನರನ್ನು ಚದರಿಸಲು ಇಂಗ್ರೇಜಿ ಸೈನ್ಯದೊಡನೆ ನಾನ ಹೊರಟೆನು. ಸೈನ್ಯ ತೆಗೆಯಿರಿ. ನಾವು ಹೋಗುತ್ತೇವೆಂದು ಜನರು ನಮಗೆ ಉತ್ತರ ಕೊಟ್ಟರು. ಅಷ್ಟರಲ್ಲಿ ಕವಚದ ಬಂಡಿ ಬಂದು, ಗುಂಡು ಹಾರಿಸಿತು. ಪ್ರಾರಂಭದಲ್ಲಿ ಜನರ ಗುಂಪು ಯಾರ ಸ್ವಾನದ ಜಂಗಮ ಆಸ್ತಿಯನ್ನು ನಾಶಪಡಿಸಲಿಲ್ಲ. ಮತ್ತು ಬೇಕಾಯದೇಶೀರವಾಗಿ ಗುಂಡ ಪುಂಡತನದಿಂದ ನಡೆಯಲಿಲ್ಲ. ಸೈನ್ಯ ಬರುವ ಮೊದಲು ಜನರು ಶಾಂತ ಮತ್ತು ಸಮಾಧಾನವೃತ್ತಿಯುವರಾಗಿದ್ದರು. ಇಬ್ಬರ ಮೇಲೆ ಕವಚದ ಬಂಡಿ ಹಾಯದ್ದರಿಂದಲೇ ಜನರು ಸಂತಾಪಗೊಂಡರು. ಮಾಳಿಗೆಗಳ ಮೇಲಿಂದ ಕಲ್ಲು ಇಟ್ಟಂಗಿಗಳು ಬರಲಿಲ್ಲ. ಸಂದಿಗಳಿಂದ ಬರುತ್ತಿದ್ದವು.

ವಿದ್ಯಾರ್ಥಿಗಳು ಸತ್ಯಾಗ್ರಹ ಗೆದ್ದರು.

ಆರ್ಣೆಯಲ್ಲಿ ವಿದ್ಯಾರ್ಥಿಗಳು ಭಾರತೀಯ ಹಾಡುಗಳ ಪುಸ್ತಕಗಳನ್ನು ಹಿಡಕೊಂಡು ಭಜನ ಮಾಡುತ್ತಾ ನಡದಿದ್ದರು. ಪೋಲಿಸರು ಇವರನ್ನು ಚಾವಡಿಯ ಹತ್ತರ ತಡೆದರು. ವಿದ್ಯಾರ್ಥಿಗಳು ಅಲ್ಲೇ ಸತ್ಯಾಗ್ರಹ ಮಾಡಿ ಕೂತರು. ಇವರಿಗೆ ಸಾವಿರ ಜನ ಅನುಕೂಲವಾಗಿ ಕೂತಿತು ರಾತ್ರಿಯಾಯಿತು. ಆದರೂ ಇವರು ಕದಲಲಿಲ್ಲ. ಕಡೆಯಲ್ಲಿ ಪೋಲಿಸರು ಕಾಂಗ್ರೆಸದವರ ಕೂಡ ರಾಜಿಯಾಗಿ, ಅವರ ಪುಸ್ತಕಗಳನ್ನು ಬಿಟ್ಟುಕೊಟ್ಟರು. ವಿದ್ಯಾರ್ಥಿಗಳು ಜಯಘೋಷ ಮಾಡುತ್ತಾ, ಸತ್ಯಾಗ್ರಹದ ಮಂಗಳೋತ್ಸವ ಮಾಡಿದರು.

ವಿವಿಧ ವರ್ತಮಾನಗಳು

ಕಾನಪೂರದಲ್ಲಿ ಲಾಲಾಶಾಮಲಾಲರೆಂಬ ಸುಪ್ರಸಿದ್ಧರಾದ ಕಬ್ಬಿಣ ವ್ಯಾಪಾರಿಯಿದ್ದಾರೆ. ಅವನು ತನ್ನ ಮಗನಿಗೆ ಸತ್ಯಾಗ್ರಹಿಯಾಗಲು ಅಪ್ಪಣೆ ಕೊಡಲಿಲ್ಲ. ಆದದರಿಂದ ಅವನು ರೇಲ್ವೆಯ ಎಂಜಿನದ ತಳದಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು. ಊರವರು ದೊಡ್ಡ ಮೆರವಣಿಗೆ ತೆಗೆದು ಇವನ ಅಂತ್ಯವಿಧಿಯನ್ನು ಜರುಗಿಸಿದರು.

ಇಂಗ್ಲಂಡದಲ್ಲಿರುವ ಕಾರ್ಮಿಕ ಸಂಸ್ಥೆಯವರು ಮಹಾತ್ಮರನ್ನು ಬಿಟ್ಟು, ಅವರ ಚಳವಳಿಯು ಶಾಂತವಾಗುವ ರೀತಿಯನ್ನು ಗೊತ್ತುಪಡಿಸಬೇಕೆಂದು ಮಿ ವಿನ್ನ ವೆಜ್ವುಡ ಬೇನ್ ರ ಕಡೆಗೆ ಹೋಗಿ, ಮಹಾತ್ಮರು, ಸರ ತೇಜಬಹಾದ್ದೂರ ಸಪ್ರೂ ಮೊದಲಾದವರು ಈ ಚಳವಳಿಯಲ್ಲಿದ್ದು, ಇದರ ಮಹತ್ವವನ್ನು ಲಕ್ಷಿಸಿ, ತಡೆಯ ಮಾರ್ಗವನ್ನು ಹುಡುಕಿ ತೆಗೆಯಬೇಕೆಂದು ಸೂಚಿಸಿದ್ದಾರೆ.

ದಿಲ್ಲಿಯಲ್ಲಿ ಶುಕ್ರವಾರದ ನಮಾಜದ ಕಾಲಕ್ಕೆ ೨ ಸಾವಿರ ಜನರು ಸೇರಿದ್ದರು. ಅವರೆಲ್ಲರೂ ಕಾಯದೆಭಂಗದಲ್ಲಿ ಸೇರಬೇಕೆಂದು ಠರಾವಾಯಿತು. ಅನೇಕರು ಸ್ವಯಂಸೇವಕರಾದಂತೆ ಹೆಸರು ಬರೆಯಿಸಿದರು

ಬಾರಾಸಾತದಲ್ಲಿ ಓರ್ವ ಮುಸ್ಲಿಮ ಸನ್ಯಾಸಿ ಮುದುಕನು ಸ್ವಯಂಸೇವಕರು ದಾಳಿಯಿಡುವದನ್ನು ನೋಡ ಹೂ ಗಿದ್ದನು. ಆಗ ಪೋಲಿಸರು ಇವನಿಗೆ ಚನ್ನಾಗಿ ಮೋದಕ ತಿನ್ನಿಸಿದರು.

ಬೆಳಗಾವಿ ಜಿಲ್ಲೆಯ ಹಿಡಕಲ್ಲ ಪ್ರದೇಶದಲ್ಲಿ ಸರಕಾರೀ ಶೆಂದೀ ಗಿಡಗಳನ್ನು ಕಡಿದದ್ದಕ್ಕಾಗಿ ಏಳು ಜನರನ್ನು ಹಿಡಿದಿದ್ದಾರೆ. ಅದರಲ್ಲಿ ಮೂವರು ಮುಸಲ್ಮಾನರಿದ್ದಾರೆ. ಮೊದಲಿನವನಾದ ಶ್ರೀ ಭೀಮರಾವ ನಾಯಕರಿಗೆ ಉಪ್ಪಿನ ಕಾಯದೆ ಮುರಿದದ್ದಕ್ಕೆ ನಾಲ್ಕು ತಿಂಗಳ ಶಿಕ್ಷೆಯಾಗಿದೆ. ಬೈಲಹೊಂಗಲದಲ್ಲಿ ಮದ್ಯಾಚಾರ್ಯ ಹುಕ್ಕೇರಿಯವರನ್ನು ಹಿಡಿದಿದ್ದಾರೆ

ಸರಕಾರದವರು ಬಾರಾಸಾತದಲ್ಲಿ ಹಿಡಿದ ವ್ಹಾಲಂಟಿಯರರಿಗೆ ಊಟಕ್ಕೆ ಹಾಕಲಾರದ, ಅವರಿಗೆ ದಿನಾಲು ಜೇಲಿಗೆ ಕಳಿಸುವ ಭತ್ತೆ ಕೊಡಲಾರಂಭಿಸಿದ್ದಾರೆ. ತುರಂಗದ ರಾಜಕೀಯ ಕೈದಿಗಳಿಗೂ ಹೀಗೆ ಅವರವರ ಯೋಗ್ಯತೆಯ ಪ್ರಕಾರ ಭತ್ತೆ ಕೊಟ್ಟು, ಹೀಗೆ ಊರು ಒಬ್ಬರೆಂದರೆ ಹೇಳಬಂದು

ವಿಜಾಪೂರ ಜಿಲ್ಲಾ ಹೀಳಗಿಯ ಪೋಲಿಸರು ಕುಂದರಗಿಯಲ್ಲಿ ಆ ಪ್ರಾಂತದಲ್ಲಿ ಪ್ರಸಿದ್ಧ ಅಸಹಕಾರಿಯಾಗಿರುವ ಶ್ರೀ ಶಂಕರಗೌಡಾ ಅಮ್ಮನಗೌಡಾ ಪಾಟೀಲ ಇವರನ್ನು ಹಿಡಿದು ಬೀಳಗಿಗೆ ತಂದಿದ್ದಾರೆ

ಪುಣೆಯಲ್ಲಿ ಶ್ರೀ ಕೇಳಕರರು ಕಾಯದೆಭಂಗದ ಒಂದು ಉಪ್ಪಿನ ಪುಡಿಕೆಯನ್ನು ನೂರು ರೂಪಾಯಿ ಕೊಟ್ಟು ತಗೊಂಡು ಪುನಃ ಕಾಯದೆಭಂಗ ಮಾಡಿದರು. ಆದರೂ ಸರಕಾರದವರು ಇವರನ್ನು ಹಿಡಿಯಲೊಲ್ಲರು !!

ಮದ್ರಾಸದ ಹಿಂದೂ ಪತ್ರದ ಸಂಪಾದಕರಾದ ಶ್ರೀ. ರಂಗಸ್ವಾಮಿ ಅಯ್ಯಂಗಾರರು ಸಿಮ್ಲಾದಲ್ಲಿ ಲಾರ್ಡ ಆಯರ್ವಿನಸಾಹೇಬರನ್ನು ಕಂಡು, ಅವರ ಕೂಡ ಬಹಳ ಹೊತ್ತಿನ ತನಕ ರಾಜಕೀಯ ಪರಿಸ್ಥಿತಿಯನ್ನು ಕುರಿತು ಮಾತಾಡಿದರು.

ಧಾರವಾಡ-

ಇಲ್ಲಿಯ ಮಾರ್ಕೇಟಿನ ಓರ್ವ ವರ್ತಕರಾದ ನಾಗಪ್ಪ ಕೋಟೂರ ಇವರು ನಿನ್ನೆ ಮನೆ ಗೃಹಕೃತ್ಯದ ಮೂಲಕ ಉರುಲುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

THE ANKALGI BANK LTD

Head Office

Kamanlatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT

Dharwar 3-6 1927 | K' B' ANKALGI Managing Director

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗಾಯಿ ಎಂಟು ಲಕ್ಷದ ಮೂಲಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ರ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವಶ್ಕಿ ಇಟ್ಟುಕೊಳು ವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯಗಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗ ದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದು, ಈಗಾಗಲೇ ಅನೇಕರು ಶಿಕ್ಷಣ ಪಡಿಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕೊಳ್ಳಬೇಕಾದ್ದರಿಂದ ಬಯಸುವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ ಎಸ. ಇಟಗಿ.

ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಗೌಡರು ಕಾಯದೆಭಂಗದ ಕಡುಗಲಿಯಾದರು

ಬಾಗಲಕೋಟೆ ತಾಲೂಕಿಗೆ ಸೇರಿದ ಗಲಗಲಿ ಮತ್ತು ಗಣಿಗ್ರಾಮಗಳು ಕೆಲವಟ್ಟಿಗೆ ಬಾರಡೋಲೆಯಾಗಿರುತ್ತವೆ. ವಿಜಾಪೂರ ಜಿಲ್ಹೆಯಲ್ಲಿ ಸತ್ಯಾಗ್ರಹಕ್ಕಾಗಿ ಶೀಕ್ಷೆ ಹೊ ದಿದವರಲ್ಲಿ ಅರ್ಧಕ್ಕಂತ ಹೆಚ್ಚು ಜನರು ಈ ನಿಟ್ಟಿನವರಾಗಿದ್ದಾರೆ ಇವರಲ್ಲಿ ಶ್ರೀ ಬಾಬೂರಾವ ಗಣೆಯವರನ್ನು ಹಿಡಿದು ಶೀಕ್ಷೆ ಮಾಡಿದರಷ್ಟೇ; ಇವರನ್ನು ಹಿಡಿಯುವ ಮೊದಲು ಗಲಗಲಿಯಲ್ಲಿ ದೊಡ್ಡ ಸಮಾರಂಭವಾಯಿತು. ಸಭೆಯಾಯಿತು. ಸಭೆಯಲ್ಲಿ ಶ್ರೀ ಬಾಬೂರಾಯರು ತಮ್ಮ ಅಧಿಕಾರವನ್ನು ಶ್ರೀ ಪಾಟೀಲ ಮಲ್ಲನಗೌಡರಿಗೊಪ್ಪಿಸಿದರು. ಗೌಡರೂ ತಮ್ಮದೊಂದು ಕಾಲು ತುರಂಗದಲ್ಲಿದೆಂದು ಭಾವಿಸಿದ್ದಾರೆ. ಒಂದು ವೇಳೆ ಶ್ರೀ. ಮಲ್ಲಣಗೌಡರಿಗೆ ತುರಂಗವಾಸ ಪ್ರಾಪ್ತವಾದರೆ- ತಾವು ಅವರ ಕಲಸ ಕೈಕೊಳ್ಳುವಂತೆ ಶ್ರೀ. ಪಾಟೀಲ ತಮ್ಮಣಗೌಡರು ಜಾಹಿರ ಮಾಡಿದ್ದಾರ ಒಬ್ಬರ ತರುವಾಯಾ ಒಬ್ಬರು ಮುಂದ ಸರಿದು ಬರುವದೂ, ಅವರಲ್ಲಿ ಗೌಡರ ಮನೆತನದವರು ಹುರುಪುಗೊಳ್ಳುವದೂ ಪ್ರಶಂಸನೀಯವಾದದ್ದು.

ಈಚಲ ಗಿಡಗಳನ್ನು ಹೆಂಗಸರೂ ಗಂಡಸರೂ ಕೂಡೇ ಕಡಿಯಬೇಕು.

ಈಚಲ ಗಿಡಗಳನ್ನು ಕಡಿಯುವದು ಗಿದವಿದ್ದಲ್ಲೆಲ್ಲ ನಡೆದಿದೆ ಕೆಲವು ಕಡಿಗೆ ಈ ಕೆಲಸ ನಡೆಯದಿದ್ದರೆ- ಅಲ್ಲಿಗೆ ಕಾರ್ಯಬಾಹುಲ್ಯದ ಮೂಲಕ ಸ್ವಯಂಸೇವಕರು ಹೋಗದಿರುವದೇ ಕಾರಣ ಗಿಡಗಳಿಗೆ ಮರಣಶಾಸನವಾಗಿರುವದೇನೋ ನಿಜ. ಕೊಡೆಯ ಪೆಟ್ಟು ಕೊಡ್ರುವದಕ್ಕೇ ಅವಕಾಶ

ಗಿಡಗಳನ್ನು ಕಡಿಯುವಾ ಮರಿಗಳನ್ನು ಸಹ ಕಡಿಯುತ್ತ ಹೋಗಬಾರದು. ಕಟ್ಟೆದಂಥ ಮತ್ತು ಕಟ್ಟಲಿಕ್ಕ ಒಂದಂಥವುಗಳನ್ನೇ ಕಡಿಯಬೇಕು. ಗಂಡಸರು ಅವಕ್ಕೆ ಕಚ್ಚು ಹಾಕಬೇಕು ಹೆಂಗಸರು ಹಗ್ಗದ ಉರ್ಲು ಹಾಕಿ, ಜಗ್ಗಿ ನೆಲಕ್ಕುರುಳಿಸಬೇಕು. ಅಂದರೆ ಕೆಲಸವು ಇಮ್ಮಡಿ ಒತ್ತರದಿಂದ ನಡೆಯುವದು.

ಕಟ್ಟಿದ ಗಿಡಗಳನ್ನು ಕಡಿದ ನಂತರ, ಕಟ್ಟಲಿಕ್ಕಾದ ಮತ್ತು ಅವುಗಳ ಮರಿಗಳನ್ನು ಸವಾಲನಾಶಮಾಡುತ್ತಾ ಹೋಗಬೇಕು. ಅಂದರೆ ಕುಡುಕರ ಬಾಯಿಗೆ ಸಿರಂತರ ಗಡ್ಡಿ ಹಾಕಿದಂತಾಗುತ್ತದೆ

ಹೈದರಾಬಾದದ ನಿಜಾಮರು, ಮಹಾತ್ಮರು ಮತ್ತು ಲಾರ್ಡ ಆಯರ್ವಿನರು ಸೇರಿ, ಹಿಂದಸ್ಥಾನದ ಭಾವೀ ಸ್ವರಾಜ್ಯದ ಘಟನೆ ಮಾಡಬೇಕು; ಅಂದರೆ ಅದು ಎಲ್ಲರಿಗೂ ಒಪ್ಪಿಗೆಯಾಗುವದೆಂದು ಒಬ್ಬ ಮುಸಲ್ಮಾನ ಗೃಹಸ್ಥರು ಸೂಚಿಸಿದ್ದಾರೆ.

-: ಶ್ರೀ. ಸದ್ಗುರು ಸು. ಪ್ರಸನ್ನ :-

ಶ್ರೀ ಸದ್ಗುರು ಸದಾನಂದಸ್ವಾಮಿ

ಶ್ರೀ ಶಾಂತಾನಂದಸ್ವಾಮಿ

ಜಾಹೀರಾತು

ಶ್ರೀ ಸದ್ಗುರುಯೋಗಾಮೃತ ಪ್ರಾಪ್ತಿ ಬಗ್ಗೆ

ಶ್ರೀ ಸದ್ಗುರು ಸದಾನಂದಸ್ವಾಮಿ

ಸದಾನಂದೀಶ್ವರಮಠ

(ನೀ. ಗು. ಕೋಟೂರ)

ವಾಸ ಧಾರವಾಡ ವಾನಪ್ರಸ್ತ ಅಮ್ಮಿನಭಾವಿ ಮಾರ್ಗ ವಹಿವಾಟದಾರ ಸತ್ಶಿಷ್ಯ ಶಾಂತಾನಂದಸ್ವಾಮಿ ಸದಾನಂದೀಶ್ವರಮಠ (ದ್ವಾಸುಕುಲ) ವಾಸ ಸದರ ಆಶ್ರಮದವರಿಂದಾ-

ಜಗತ್ತದ ಯಾವತ್ತು ಪ್ರೀತಿಮಾನವರಿಗೆ ಈ ಮುಂಜಾಗ್ರತೆ ಕೊಡುವದೇನಂದರೆ ನಮ್ಮ ಆಶ್ರಮಕ್ಕೆ ಬರಲಿಕ್ಕೆ ಇಚ್ಛಿಸುವ ನಮ್ಮ ಸುಖಿಸಜ್ಜನರು ತಮ್ಮ ಮನಿ ಬಿಡುವ ಪೂರ್ವದಲ್ಲಿ ಊರಲ್ಲಿ ನಮ್ಮ ಇಚ್ಛಾ ಅಜ್ಞಾಪತ್ರಪಡಕೊಳ್ಳದೆ ಯಾವ ಕಾರಣದಿಂದಲೂ ಯಾರೂ ನಮ್ಮ ಆಶ್ರಮ ಸಮೀಪ ಹಾಯಬಾರದು.

ಒಂದು ವೇಳೆ ನಮ್ಮ ಅಜ್ಞಾಪಡಕೊಂಡು ಬಂದರೂ ಸಹಾ ಸ್ವಲ್ಪ ವ್ಯಾಳೆದಲ್ಲೆ ಬೋದಾಮೃತ ಕೊಟ್ಟು ತಗೊಂಡು ಮಾಡಿ ನರಜನ್ಮ ನಾರಾಯಣ ಆಗಬೇಕಂತಾ ಇಚ್ಛಾ-

ಇಷ್ಟಾಗಿ ವಿಷಯ ಗರ್ವದಿಂದಾ ಅಜ್ಞಾಪತ್ರಪಡಕೊಳ್ಳದೆ ಬಂದರೆ ನಮ್ಮ ವೃತ್ತಿ ಕೆಡಿಸಲಿಕ್ಕೆ ಬಂದೀರೆಂದು ಗುರುಪ್ರೇರ್ಣೆಯಂತೆ ಮಾಡುವದರಲ್ಲಿ ಬರುವದು ಇಂತಿ ಇಛಾವಿನಂತಿ ಮುಂಜಾಗ್ರತೆ

ದಸ್ತೂರ ವ ಸಹಿ

ಶಾಂತಾನಂದಸ್ವಾಮಿ ಸದಾನಂದೀಶ್ವರಮಠವಾಸ.

ಸದರ ತಾರೀಖು

(ವಿಜಯ ಮುದ್ರಾಲಯ ಧಾರವಾಡ.)

ರಂಗೂನದಲ್ಲಿ ಭಯಂಕರ ದಂಗೆ

ಗಟ್ಟಲೆ ಜನರು ಸತ್ತರು.

ರಂಗೂನದಲ್ಲಿ ಕೂಲಿ ಮತ್ತು ಬೇರೆ ಕೆಲಸಗಳ ದೆಸೆಯಿಂದ ರಂಗೂನಕ್ಕೆ ಹೋದಂಥ ಆಂಧ್ರ ಮತ್ತು ತಮಿಳ ಜನರಿಗೂ ಅಲ್ಲಿಯ ಬ್ರಹ್ಮೀ ಕೂಲಿಕಾರರಿಗೂ ಜಗಳ ಬಂದು, ಕಳೆದೆಂಟು ದಿವಸಗಳಿಂದ ಭಯಂಕರ ಹೊಡದಾಟಗಳು ನಡೆದಿವೆ ಸರಕಾರದವರು ಸೊಲ್ಲಾಪೂರ, ಪೇಶಾವರದಂತೆ ಲಸ್ಕರೀ ಕಾಯದೆಯನ್ನು ಅಮಲಿನಲ್ಲಿ ತಂದಿದ್ದರೆ- ದಂಗೆಯು ಎಂದೋ ದಿವಸಗಳಲ್ಲಿ ಶಾಂತವಾಗುತ್ತಿತ್ತು. ಆದರೆ ಬರೇ ಪೋಲೀಸ ಬಂದೋಬಸ್ತು ನಡೆಸಿದ್ದರಿಂದ ದಂಗೆಯು ಭಯಂಕರವಾಗಿ ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲದಾಗಿ, ಈ ವರೆಗೆ ಗಟ್ಟಲೆ ಜನರು ಸತ್ತಿದ್ದಾರೆ. ಹಾದಿಯಲ್ಲಿ ಬೀದಿಯಲ್ಲಿ ಭಯಂಕರವಾಗಿ ಕೊಲೆಗಳಾಗುತ್ತಿರುವವು.

ಸ್ವಾತಿ ಮಳೆ ಹೋದ ಬಳಿಕ

ಇನ್ನೇತರ ಮಳೆ

ಶ್ರೀ· ಜೋಗರ ರಾಜೀನಾಮೆಯಿಂದ ತೆರವಾದ ಮತ್ತು ಸ್ವಾತಿ ಮಳೆ ಹೋದ ಬಳಿಕ ಇನ್ನೇತರ ಮಳೆ ಎಂಬಂತಾದ ಕೌನ್ಸಿಲ ಮೆಂಬರ ಕೆಲಸಕ್ಕೆ ಶ್ರೀ ಗಿರಿಯಪ್ಪನವರೊಬ್ಬರೇ ಉಮೇದವಾರರಾದ್ದರಿಂದ, ನಿರಾಯಾಸವಾಗಿ ಮೆಂಬರರಾದರು

ವಿಜಯ ಮುದ್ರಾಲಯ ಧಾರವಾಡ

ಪೇಶಾವರದಲ್ಲಿ ಗೋಳೀಬಾರು.

ಏಳು ಜನರು ಸತ್ತರು; ಆಕಸ್ಮಾತ್ತಾಗಿ ಇಬ್ಬರು ಹುಡುಗರ ಮರಣ.

—(o)—

ಪೇಶಾವರದಲ್ಲಿ ಕಾಬೂಲಿ ಅಗಸಿಯ ಹತ್ತರ ಒಬ್ಬ ಸೋಲ್ಜರನು ಬಂದೂಕು ಸ್ವಚ್ಛ ಮಾಡುತ್ತಿದ್ದನು. ಬಂದೂಕಿನಿಂದ ಕಾಡತೂಸು ಹಾರಿ, ಟಾಂಗೆಯಲ್ಲಿ ಕೂತು ಹೋಗುತ್ತಿದ್ದ ಒಬ್ಬ ಶೀಖ ಸರದಾರನ ಹೆಂಡತಿ ಮತ್ತು ಇಬ್ಬರು ಮಕ್ಕಳಿಗೆ ಒಡೆದು, ಹೆಂಡತಿಯು ಮರಣೋನ್ಮುಖಳಾಗಿದ್ದು, ಹುಡುಗರು ಆ ಕ್ಷಣವೇ ಪ್ರಾಣ ಹೋಗಿ ಬಿದ್ದವು.

ಈ ವರ್ತಮಾನ ಕೇಳಿ, ಸಾವಿರಾರು ಜನರು ಕೂಡಿದರು. ಕೆಲವರು ಸೋಲ್ಜರರ ಕಯ್ಯೊಳಗಿನ ರಾಯಫಲ ಬಂದೂಕುಗಳನ್ನು ಕಸಕೊಳ್ಳಲಿಕ್ಕೆ ಪ್ರಯತ್ನಿಸಿದರೆಂದೂ, ಮಾಳಿಗೆಯ ಮೇಲಿಂದ ಕಲ್ಲು ದುಂಡಿ ಒಗೆದರೆಂದೂ, ಸೋಲ್ಜರರು ಗುಂಡು ಹಾಕಿದರು. ಏಳು ಜನರು ಸತ್ತರು. ಅನೇಕರು ಘಾಯವಾಗಿದ್ದಾರೆ.

ಡೇರಾ ಇಸ್ಮಾಯಿಲಖಾನದಲ್ಲಿ ಗುಂಡು ಹಾರಿದವು.

—(o)—

ಡೇರಾ ಇಸ್ಮಾಯಿಲಖಾನ ಪಟ್ಟಣದಲ್ಲಿ ಪೋಲೀಸರು ಕಾಂಗ್ರೆಸದವರನ್ನು ಹಿಡಿದರು. ಇದರ ನಿಷೇಧವೆಂದು ಊರಲ್ಲಿ ಮೆರವಣಿಗೆ ಹೊರಟಿತು. ಮೆರವಣಿಗೆ ಮುಂದೆ ಹೆಂಗಸರು, ಹಿಂದೆ ಗಂಡಸರು ಇದ್ದರು. ಇವರನ್ನು ಅಗಲಿಸಿ, ಪುರುಷರನ್ನು ಹಿಡಿಯಬೇಕೆಂದು ಪೋಲೀಸರು ಪ್ರಯತ್ನಿಸುತ್ತಿರುವಾಗ ಪೋಲೀಸರು ಗುಂಡು ಹಾರಿಸಿದರು. ಜನರು ಸತ್ತು ಕೆಟ್ಟಿದ್ದು ಇನ್ನೂ ತಿಳಿದಿಲ್ಲ.

ಸಂಸ್ಥಾನಿಕರ ಪ್ರತಿನಿಧಿಗಳು-

ರಾವುಂಡಟೇಬಲಿಗಾಗಿ, ಮೈಸೂರ, ಹೈದರಾಬಾದ, ತ್ರಾವಣಕೋರ, ಬಡೋದೆಯ ಪತಿಯಿಂದ ಮತ್ತು ಇನ್ನು ಒಬ್ಬೊಬ್ಬ ದೊಡ್ಡ ಸಂಸ್ಥಾನಿಕರು ತಮ್ಮ ಪತಿಯಿಂದ ಸ್ವತಂತ್ರ ಮತ್ತು ನರೇಂದ್ರ ಮಂಡಲದ ಮುಖಾಂತರ ಒಬ್ಬೊಬ್ಬರನ್ನು ಆರಿಸಿ ಕಳಿಸಬೇಕೆಂದು ವಿಚಾರ ನಡೆದಿದೆ.

ಕೆಲಸಗಾರರು ಬೇಕು

ವಿಜಯ ಮುದ್ರಾಲಯದಲ್ಲಿ ಟ್ರೆಡಲ, ಬಾಯಿಂಡಿಂಗ ಮತ್ತು ಹ್ಯಾಂಡ ಪ್ರೆಸ ಮುದ್ರಣ ಬಲ್ಲಂಥ ಕೆಲಸಗಾರರು ಬೇಕಾಗಿದ್ದಾರೆ. ಉಮೇದವಾರರಿಗೆ ಕೆಲಸ ಕಲಿಸಲ್ಪಡುವದು. ಕೆಲಸ ಮಾಡ ಇಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಸಂಬಳ ಯೋಗ್ಯತೆಯ ಪ್ರಕಾರ.

ಮ್ಯಾನೇಜರ ವಿಜಯ
ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ವಬ್ಯಾಂಕ ಧಾರವಾಡ

[illegible] ಈ ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡುವಿರಿಯೆಂಬದನ್ನು ಬರೆಯಬೇಕು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಸುಸಮಯ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸ್ಥಳವು.

ಮೋಟಾರ ಡ್ರಾಯ್ವರ ವಿದ್ಯ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ವಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದದರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಫಕೋರ್ಟಿನಹತ್ತರ, ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಬುಧವಾರ ತಾರೀಖು ೪ನೇ ಜೂನ ೧೯೩೦ (ಸಂಚಿಕೆ ೨೩೬

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯುಳ್ಳಿಯೂ ತಾನಾಗಿ ರದ್ದಾಗದ ಆದರಿಯ ಪಾಲಿಸಿಯ ಯೋಜನೆ ಬಂದ[illegible]ವು	ಖಂಡಿತವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿ [illegible] ಉಪಯೋಗಿಸಲ್ಪಡುತ್ತದೆ.

[illegible] ವಿವರಗಳಿಗೆ-

ಶ್ರೀ. ಎನ್. ಟಿ. ಖೋನಾ [illegible] ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾಯೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುದು. ದರವನ್ನು [illegible] ಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು [illegible] ಇಟ್ಟುಕೊಳ್ಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೩ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೦-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಮ್ಯಾ. ವಿಜಯ. ಧಾರವಾಡ.

ಚಾಳುಕ್ಯ ವಿಕ್ರಮ ವರ್ಷ ಚಾಂದ್ರ ಜ್ಯೇಷ್ಠ ಶುದ್ಧ ೮

ಆ ವಿಜಯೇಂ ಶ್ರೀಣಿಪ್ರಿಯ
ಶ್ರೀ ವಸುಮತಿಯ ನಲಿಸಿರೆ ಸುಹಿತ ಚರಿತೆಗಳಿಂ ವಿ
ದಿ " ವಿಜಯಂ " ಶ್ರೀಕರಲಿ
ನಾ ವಿಹಿತಂಗಳ ವಿವರಿಸಲಿಪ್ಪುದು ಶಾಶ್ವತ

ಪ್ರಸಂಗ ಒಂದು—
ಬ್ರಾಹ್ಮಣೇತರರು ಕಾಯದೆಭಂಗ
ಮಾಡುವರಂತೆ!!

—:(೧): —

ರಾ. ಬ. ಕಾಂಬಳಿಯವರು ಇದರಲ್ಲಿ ಸೇರುವರೇ.?

——: :——

ಪುಣೆ ಪ್ರಾಂತದ ಬ್ರಾಹ್ಮಣೇತರರು ತಮ್ಮದೊಂದು ಪರಿಷತ್ ಕೂಡಿಸಿ, ಕೆಲವು ಠರಾವುಗಳನ್ನು ಮಾಡಿದ್ದಾರೆ. ಆ ಠರಾವುಗಳು ಬಿಳೇ ಕಾಗದದ ಮೇಲೆ ಕರೇ ಗೆರೆ ಎಳೆದಂತಿರುತ್ತವೆ ಏಕೆಂದರೆ ಇಂಗ್ರೇಜಿ ರಾಜ್ಯದಲ್ಲಿ ಠರಾವು, ಅರ್ಜಿ, ವಿನಂತಿ ಇವುಗಳ ಕಾಲ ಎಷ್ಟೋ ಹಿಂದಾಯಿತು. ಕಿತ್ತೂರಿನ ದೃಷ್ಟಾಂತ ಕೊಡಬೇಕಾದರೆ ಮುದ್ದತಿನ ಹೋರಾಟ. ಅದರೂ ಇವರು ಜನರ ಬೋರಿಯ ಮೇಲೆ ಕಯ್ಯಿಡುವುದಕ್ಕಾಗಿ ಠರಾವಿನಿಂದ ತಾವೂ ಪ್ರಜಾಪಕ್ಷೀಯರೇ ಎಂಬುದಾಗಿ ತೋರಿಸುವ ಸೋಗು ಹಾಕಿದ್ದಾರೆ. ಸೋಗಿನಂತೆಯೇ ಇವರ ಮೇಲಿನ ಠರಾವಾಗಿರುತ್ತವೆ ಮೊದಲಿನ ಠರಾವು ಮಹಾತ್ಮರನ್ನು ಬಿಡಿಸುವದು, ಆವರಿಗಾದ ಒಂದಿವಾಸವನ್ನು ನಿಷೇಧಿಸುವದಾಗಿರುತ್ತದೆ. ಖಾದಿ ಪ್ರಸಾರ ಮತ್ತು ಮದ್ಯಪಾನ ಪ್ರತಿಬಂಧ ಇವೆರಡು ಅತ್ತು ... ಹೇಳಿಕೊಂಡಂತಿವೆ. ಮೂರನೆಯದು ಅವರ ಯೋಗ್ಯತೆ, ಸಾಮರ್ಥ್ಯ ಮತ್ತು ಇವತ್ತಿನ ವರ್ತನ ಹಾಗೆಯೇ ... ರದ್ದಾಗಿದೆ ... "ಮಿತಿಮೀರಿ ಹೆಚ್ಚಿದ ಭೂಕಂದಾಯ, ಮತ್ತು ವನಗಾವಲ ಸಂಬಂಧವಾಗಿ ರೈತರು ಅನುಭವಿಸುವ ಕಷ್ಟ ಮತ್ತು ಅನ್ಯಾಯದ ಕಾಯದ ... ಇವುಗಳ ಬಗ್ಗೆ ವಿಚಾರ ಮಾಡ್ಲು" ... ಕಮೀಟಿ ನೇಮಿಸಿದ್ದಾರೆ. ಈ ಕಮಿಟಿಯಲ್ಲಿ ಮುಂಬಯಿ ಕರ್ನಾಟಕದಿಂದ ಈವರ್ಗ್ಯ ... ರಾದ ಕಾಂಬಳಿ ಮತ್ತು ಬಿ. ಎಲ್. ... ಟಿಯ ಅಪ್ಪ ... ಗೆ ಕಂಡು ... ಅವರು ಕಾಯದೆಭಂಗ ಮಾಡಲಿಕ್ಕೆ ಸಿದ್ಧರಾಗಿ ಮೊದಲನೆಯ ಸತ್ಯಾಗ್ರಹಿಯಾಗುವಂತೆ ಜಾಹೀರ ಮಾಡಿದ್ದಾರೆ. ಈ ಠರಾವು ಮತ್ತು ಹೆಬ್ಬಳಿಕೆಯು ಖುಬ್ಬಾಳತನವು ದೈವವುಳ್ಳವರ ಮನೆಯು ನೋಟ ಚಂದವೆಂಬಂತಿರುತ್ತವೆ. ಜನಲಜ್ಜೆಯ ದೆಸೆಯಿಂದ ಮಾಡಿದ್ದಿರುವಂತೆ ಸ್ಪಷ್ಟವಾಗುತ್ತದೆ. ಇವರಿಗೆ ನಿಜವಾದ ಸ್ವಜನಾಭಿಮಾನವಿದ್ದರೆ ಸರಿ ಪಟ್ರೋನಾಕೇಬರು ತಮ್ಮ ಇಲಾಖೆಯಲ್ಲಾದ ಪೋಲೀಸ ಹಿಂಸೆಗಾಗಿ ಮತ್ತು ರಾ. ಬ. ದ್ಯಾಯರು ... ಬೆಳಗಾವಿಯಲ್ಲಿ ನಡೆದ ಧೂಮಶ್ಚಕ್ರದ ದೆಸೆಯಿಂದ ಕೌನ್ಸಿಲ ಮತ್ತು ಅಸೆಂಬ್ಲಿಗೆ ಎಂದೋ ರಾಜೀನಾಮೆ ಕೊಡುತ್ತಿದ್ದರು ಮತ್ತು ತಮ್ಮವರನ್ನು ಕೌನ್ಸಿಲದ ಉಮೇದವಾರರಾಗಿ ನಿಲ್ಲಿಸದೆ, ಸುರಕ್ಷದ ... ಚಳ್ವಳಿಯ ಸ್ಥಳವನ್ನು ತೆರವುಗೊಳಿಸುತ್ತಿದ್ದರು. ಮದ್ರಾಸ ಇಲಾಖೆಯಲ್ಲಿ ಕೌನ್ಸಿಲದ ಡಿಪ್ಯುಟಿ ಪ್ರೆಸಿಡೆಂಟರಾಗಿದ್ದ ಶ್ರೀ. ಮುತ್ತುಲಕ್ಷ್ಮಮ್ಮ ರಡ್ಡಿಯವರು ಪೋಲೀಸರ ಅತ್ಯಾಚಾರ ಮತ್ತು ಸರಕಾರದ ದಬ್ಬಾಳಿಕೆಯ ನಿಷೇಧವೆಂದು ರಾಜೀನಾಮೆ ಕೊಟ್ಟರು. ಇವರು ಪ್ರಜರಿಂದ ಕೂಡ ಆರಿಸಲ್ಪಟ್ಟವರಲ್ಲ; ಸರಕಾರದಿಂದ ನಾಮನಿರ್ದೇಶಿತರಾದಂಥವರು. ಸರಕಾರದ ವಿಶ್ವಾಸಕ್ಕೆ ಪಾತ್ರರಾದಂಥವರೇ ರಾಜೀನಾಮೆ ಕೊಟ್ಟ ಬಳಿಕ, ಪ್ರಜರಿಂದ ಆರಿಸಲ್ಪಟ್ಟಂಥವರು ಸಹಜವಾಗಿ ರಾಜೀನಾಮೆ ಕೊಡತಕ್ಕದ್ದು. ಆದರೆ ಇವರು ಬರೇ ಠರಾವು ಮಾಡುವದೇ ಪುರುಷಾರ್ಥವೆಂದು ತಿಳಕೊಂಡಿದ್ದಾರೆ. ಹಪ್ತೆ ಮತ್ತು ವನಗಾವಲದ ವಿಚಾರವಾಗಿ, ಅದು ಅನ್ಯಾಯದ್ದಾಗಿರುತ್ತದೆಂದು ಕಂಡು ಬಂದ ಬಳಿಕ, ಸರಕಾರಕ್ಕೆ ಅರ್ಜಿ ಮಾಡುವರು; ಅದರ ವಿಚಾರಣೆಯು ಸರಕಾರದಲ್ಲಾಗಿ, ಅದೂ ತಮಗೆ ಪ್ರತಿಕೂಲವಾಗಿರುತ್ತದೆಂದು ಕಂಡು ಬಂದನಂತರ ಕೌನ್ಸಿಲದಲ್ಲಿ ಠರಾವು ತರುವರು ಅಲ್ಲಿಯೂ ಪ್ರತಿಕೂಲವಾದರೆ ಕಾಯದೆಭಂಗ ಮಾಡುವರು, ಮಾರ್ಕಂಡೇಯನ ಆಯುಷ್ಯವಾದರೂ ಸಾಲದು ಇದಿರಲಿ; ಕಾಯದೆ ಮುರಿಯುತ್ತೇವೆಂದು ಹೇಳಿದವರು ಅಥವಾ ಮಾತಿನ ಒಘದಲ್ಲಿ ನುಡಿದವರು ಸರ ಪಟ್ರೋನಾಕೇಬರು!! ಉಳಿದವರಲ್ಲವೇ ಇಲ್ಲ! ಆದ್ದರಿಂದ ಇವರು ಸತ್ಯಾಗ್ರಹದಲ್ಲಿ ಸೇರುವರೆಂಬುದೂ ಅಸಂಭವ. ರಾ. ಬ. ಬಿ. ಎಲ್. ಪಾಟೀಲರು ಅಸೆಂಬ್ಲಿಯಲ್ಲಿ ಪಂಡಿತ ಮಾಲವಿಯಾಯವರ ಪಕ್ಷ ಸೇರುವೆವೆಂದು ಹೇಳಿದ್ದು ಅಡಿದ್ದು ಬಹುಜನರ ಸ್ಮರಣದಲ್ಲಿರಬಹುದು. ಆದರೆ ... ಮಾಲವಿಯಾಯವರು ಅಸೆಂಬ್ಲಿಗೆ ರಾಜೀನಾಮೆ ಕೊಟ್ಟು, ವಿಲಾಯತಿಯ ಬಟ್ಟೆಯ ಬಹಿಷ್ಕಾರದ ಮುಖಂಡತ್ವವನ್ನು ಸ್ವೀಕರಿಸಿದ್ದಾರೆ ರಾ. ಬ. ಪಾಟೀಲರು ಅದರಂತೆ ನಡೆದಿರುವದೇ ಇಲ್ಲ. ಇದೊಂದೇ ಸಂಗತಿಯಿಂದ ಕರ್ನಾಟಕದ ಬ್ರಾಹ್ಮಣೇತರರೆಂಬ ಹಳೇ ಮತ್ತು ಹೊಸ ನೇತಾರರು ಇನ್ನೂ ಮುಂದೆ ಮಾಡಿಕೊಳ್ಳುವವರಿಂದ ದೇಶಹಿತಕ್ಕೆ ಎಷ್ಟು ಸಹಾಯವಾಗುವದೆಂಬುದನ್ನು ವಾಚಕರು ಸಹಜವಾಗಿ ಊಹಿಸಬಹುದು.

ರಾಜೀನಾಮೆ ... ಕೊಟ್ಟ ... ಹೆಸರುಗಳು

ರಾವು-ಡ ಟೇಬಲಕ್ಕೆ ... ಆರಿಸಿದವರನ್ನು
ಆರೆಯುವೇಕು

— (೧) —

ಮುಂಬಯಿಯ ಟಾಯಿಮ್ಸ ಪತ್ರದಲ್ಲಿ ರಾವುಂಡ ಟೇಬಲಕ್ಕೆ ... ದು ಲೇಖವು ಪ್ರಸಿದ್ಧವಾಗಿದೆ ಅದರಲ್ಲಿ ಸೂಚಿಸಿದ ಹೆಸರುಗಳು: —

ಕಾಂಗ್ರೆಸದ ಪತಿಯಿಂದ—

ಮಹಾತ್ಮರು, ಪಂಡಿತ ಮೋತಿಲಾಲ, ಪಂಡಿತ ಜವ್ಹಾಹಿರಲಾಲ, ಡಾಕ್ಟರ ಅನ್ಸಾರಿ ಮತ್ತು ಶ್ರೀ ಸೇನಗುಪ್ತ.

ಮುಸಲಮಾನ—

ಸರ ಮಹಮದ ಶಫಿ, ಬ್ಯಾರಿಸ್ಟರ ಜಿನ್ನಾ, ಮೌ. ಮಹಮದಲ್ಲಿ, ಮೌಲ್ವಿ ಮಹಮದ ಯಾಕೂಬ, ಬಂಗಾಲದಿಂದ ಇಬ್ಬರು ಗೃಹಸ್ಥರು.

ಮವಾಳ

ಸರ ತೇಜಬಹಾದ್ದೂರ ಸಪ್ರು, ಸರ ಸಿ. ಪಿ. ರಾಮಸ್ವಾಮಿ ಅಯ್ಯರ, ಸರ ಫಿರೋಜ ಸೆಟನಾ, ಸರ ಕಾವಸಜಿ ಜಹಾಂಗೀರ.

ಹಿಂದೂ ಮಹಾಸಭೆ—

ಬ್ಯಾರಿಸ್ಟರ ಜಯಕರ, ಡಾಕ್ಟರ ಮುಂಜೆ.

ಬ್ರಾಹ್ಮಣೇತರ—

ಶ್ರೀ ರಾಮಸ್ವಾಮಿ ಮೊದ್ಲಿಯಾರ, ದಿವಾನ ಚಾಂಧವರಾವ.

ಸ್ವತಂತ್ರ—

ಪಂಡಿತ ಮಾಲವಿಯಾ, ಮಹಮುದಾಬಾದಿನ ಮಹಾರಾಜರು, ಸರ ಪುರುಷೋತ್ತಮದಾಸ ಠಾಕೂರದಾಸ, ಸರ ಇಬ್ರಾಹೀಮ ರಹಿಮತುಲ್ಲಾ ಡಾಕ್ಟರ ಅನಿಬಿಝಾಂಟ.

ಕಡುಗಲಿ ಕುಲದವರು—

ಸರ ಉಮರ ಹಯಾತಖಾನ, ಸರದಾರ ಮ್ಹಾಲಬಸಿಂಗ—

ಯುರೋಪಿಯನ—

ಸರ ಹ್ಯುವರ್ಗ ಪ್ರೊಮ.

ವಿಲಾಯತಿಯ ಜವಳಿ ಅಂಗಡಿಗಳ ಮುಂದೆ ಪಿಕೆಟಿಂಗ.

—(೦)—

ಲಾರ್ಡ ಆಯರ್ವಿನಸಾಹೇಬರು ವಿಲಾಯತಿಯ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದರೆ ಆರು ತಿಂಗಳು ಕೈದಿನ ಶಿಕ್ಷೆ ಎಂದು ಆರ್ಡಿನನ್ಸ ತೆಗೆದರೂ, ಅದಕ್ಕೆ ಯಾರೂ ಹೆದರಿರುವದಿಲ್ಲ. ಮುಂಬಯಿಯ ಕಾಂಗ್ರೆಸ ಕಮೀಟಿಯವರು ಸ್ವೀಕಾರ ಸಭೆ ಮಾಡಿ, ಆ ದಬ್ಬಾಳಿಕೆಯನ್ನು ಮುರಿಯಬೇಕೆಂದು ಠರಾವು ಮಾಡಿದರು. ಅದೇ ಪ್ರಕಾರ ಧಾರವಾಡದಲ್ಲಿ [illegible] ಠರಾವಾಗಿರುತ್ತದೆ. ಮುಂಬಯಿ [illegible] ಒಂದು [illegible] ವಿಲಾಯತಿ ಅಂಗಡಿಗಳಿಗೆ ಹೋಗಿ [illegible] ಪಿಕೆಟಿಂಗ ಮಾಡುವರು. [illegible] ಪಿಕೆಟಿಂಗ [illegible] ಶಿಕ್ಷೆ [illegible].

ಬಹಿಷ್ಕಾರ [illegible] ಉಪಕಾರವಾಗುವದು.

—(೦)—

[illegible] ವಿಲಾಯತಿಯ [illegible] ಹಾಕಿದ [illegible] ಕಾಂಗ್ರೆಸವರ [illegible] ದಬ್ಬಾಳಿಕೆಯಿಂದ [illegible] ವಿಲಾಯತಿಯ [illegible] ಸಂಘ [illegible] ಅಧ್ಯಕ್ಷರಾದ [illegible] ಸಾಹೇಬರು [illegible] ವಿಧಾನ [illegible] ಸಾಹೇಬರೇ ನಿಮ್ಮ ದಬ್ಬಾಳಿಕೆ ಮತ್ತು ಹಿಂಸೆಯ ದೆಸೆಯಿಂದ ಬಹಿಷ್ಕಾರ ಹಾಕಿದ್ದೇವೆ. ನೀವು ಇಲ್ಲದ ಆರೋಪ ಹೊರಿಸಿದರೆ ನಾವು ಆ ಬಹಿಷ್ಕಾರವನ್ನು ಮತ್ತಿಷ್ಟು ಖಡತರ ಮಾಡುವೆವೆಂದು ದಿಲ್ಲಿಯ ವರ್ತಕರು ಇವರಿಗೆ ತಾರಿನಿಂದ ತಿಳಿಸಿದ್ದಾರೆ.

ಸಾಕ್ಷಿಯ ಸಂಗತಿ ಹಾಳುಮಾಡುವ ಪುಸ್ತಕ

—(೦)—

ಲಾಹೋರದ ಕೊಲೆಯ ಪ್ರಕರಣದಲ್ಲಿ ಮಾಫೀ ಸಾಕ್ಷಿದಾರನಾದ ರಾಮಶರಣನು ಕೋರ್ಟಿನಲ್ಲಿ ಉರ್ದುವಿನಲ್ಲಿ ಕಯ್ಯಿಂದ ಬರೆದದ್ದೊಂದು ಪುಸ್ತಕವನ್ನು ಮ್ಯಾಜಿಸ್ಟ್ರೇಟರ ಮುಂದಿಟ್ಟನು. ಈ ಪುಸ್ತಕವನ್ನು ಪ್ರತಿಯೊಬ್ಬ ಪೋಲಿಸ ಅಮಲದಾರನ ಕೈದಾಟಿ ಬಂದಿದ್ದು, ಇದರಲ್ಲಿದ್ದಂತೆ ಸಾಕ್ಷೀ ನುಡಿಯಬೇಕೆಂದು ರಾಮಶರಣನಿಗೂ ಕೊಟ್ಟಿದ್ದರು.

ಪೋಲಿಸ ಸಾರ್ಜಂಟನಿಗೆ ಬರತರ್ಫ.

—(೦)—

ಮುಂಬಯಿಯಲ್ಲಿ ನಾಯಿಯ ದೆಸೆಯಿಂದ ಗುಂಡು ಹಾಕಿ, ಜನರ ಕೊಲೆಗೆ ಕಾರಣನಾದ ಸಾರ್ಜಂಟ ಫರ್ನಹೇಲ ಎಂಬವನನ್ನು ಸರಕಾರದವರು ಬರತರ್ಫ ಮಾಡಿದರು. ಬರತರ್ಫಿನ ಶಿಕ್ಷೆಯು ತೀರ ಕಡಿಮೆ. ಕೊಲೆಯ ನಿಮಿತ್ಯವಾದ ಆರೋಪ ಹೊರಿಸಿ, ಆತನಿಗೆ ತಕ್ಕ ಶಿಕ್ಷೆ ಮಾಡುವದೇ ಯೋಗ್ಯನ್ಯಾಯವಾಗುತ್ತದೆ.

ಸೊಲ್ಲಾಪೂರದಲ್ಲಿ ಸಾರ್ಜಂಟನ ಸಾಮಾನ ಸುಟ್ಟರು.

—(೦)—

ಸೊಲ್ಲಾಪೂರದಲ್ಲಿ ಹಾಲಸೆಂಬ ಸಾರ್ಜಂಟನು ಹೊರಗೆ [illegible] ಹೋದಾಗ, ಆತನ ಕೋಣೆಯಲ್ಲಿದ್ದ ಆರಿವೆ, [illegible], ಮತ್ತು ಬೇರೆ ಸಾಮಾನುಗಳನ್ನು ಹೊರಗೆ ಹಾಕಿ, ಬೆಂಕಿಹಚ್ಚಿ ಬೂದಿ ಮಾಡಿದ್ದಾರೆ. ಸಾಹೇಬನ ಮದಿವೆಯಾಗತಕ್ಕದ್ದಿತ್ತು. ಭಾವೀ ಹೆಂಡತಿಗಾಗಿ ಹಲವು ಸೋಜಿಗದ ಪದಾರ್ಥಗಳ ಸಂಗ್ರಹ ಮಾಡಿದ್ದನು. ಇವೆಲ್ಲ ಸುಟ್ಟುಹೋದವು.

ಇನ್ನೊಬ್ಬ ಗೌಡನ ಕಥೆ.

—(೦)—

ಬುಡಣಸಾಹೇಬನ ಬಿಳ್ಳಾಟ.

—(೦)—

ರಾಣೇಬೆನ್ನೂರ ತಾಲೂಕ ಮೆಡ್ಲೇರಿ ಗ್ರಾಮಕ್ಕೆ ವ್ಯಾಖ್ಯಾನ ಕೊಡಲು ಶ್ರೀ ಕೆ. ಎಫ್ ಪಾಟೀಲ ಜ್ಞಣ್ಣನವರ ಸಹಿತ ಹೋಯಿತು. ಗೌಡರು ಮಾತ್ಯನೆ ಕೊಡದೆ ಇವರಿಗೆ ಹೆಸರು ಕೇಳಿದರು. ಹೆಸರು ಹೇಳಲಿಲ್ಲ. ಸಾಯಂಕಾಲದಲ್ಲಿ ಶ್ರೀ ಮುಂಡಾಸದ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಗೌಡರು ಆಗದ ಪೇನ್ಸಿಲ ತಕ್ಕೊಂಡು ಕೂತು ಪುನಃ ಹೆಸರು ಕೇಳಿದರು. ಆಗೂ ಹೇಳಲಿಲ್ಲ. ಸಭೆ ಮುಗಿದು ವಂದೇಮಾತರಂ ರಾಷ್ಟ್ರಗೀತವಾಗುವಾಗ ಈಗಾದರೂ ಹೆಸರು ಹೇಳಿರೆಂದರು. ನೀವು ಕೂತವರು ಎದ್ದು ನಿಲ್ಲಿರಿ; ನಿಮ್ಮ ರಾಷ್ಟ್ರ ದೇವತೆಗೆ ವಂದನ ಮಾಡಿರಿ; ಅಂದರೆ ಹೆಸರು ಹೇಳುತ್ತೇವೆಂದರು. ಗೌಡ ಬುಡಣಸಾಹೇಬರು ಎದ್ದು ನಿಂತರು. ರಾಷ್ಟ್ರಗೀತೆಯಾದ ಬಳಿಕ ಇವರು ಹೆಸರು ಹೇಳಿದರು.

ರಾಜೀಯ ಸಂಧಾನ.

—(೦)—

ಮಹಾತ್ಮರನ್ನು ಬೇರೆ ರಾಜಕೀಯ ಕೈದಿಗಳನ್ನು ಬಿಡುವಂತೆ ಮುಂಬಯಿಯ ಶ್ರೀ. ಜಯಕರ ಸಭಾಯಿ ಲಾಲಜಿ ಮತ್ತು ಮಿ. ಮೋದಿಯ ಹಾಗು ನಾಮದಾರ ಗವ್ಹರ್ನರಸಾಹೇಬರ ನಡುವೆ ಪ್ರಸ್ತಾಪ ನಡೆದಿದೆ.

ಬ್ಯಾರಿಸ್ಟರ ಅಭ್ಯಂಕರರ ಜವಾಬು.

—(೦)—

ದೇಶದ್ರೋಹಿಯಾದ ಹಿಂದೀ ಸರಕಾರೀ ವಕೀಲ ಮತ್ತು ಮ್ಯಾಜಿಸ್ಟ್ರೇಟ.

—(೦)—

ನಾಗಪೂರದ ಪ್ರಸಿದ್ಧ ಬಾರಿಸ್ಟರರಾದ ಶ್ರೀ ಅಭ್ಯಂಕರರನ್ನು ರಾಜದ್ರೋಹದ ಆರೋಪದಿಂದ ಹಿಡಿದಿದ್ದಾರಷ್ಟೇ; ಇವರು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಂದೆ ಕೊಟ್ಟಂತೆ ಜವಾಬು ಹಾಜರ ಮಾಡಿದ್ದಾರೆ:-

ಹಿಂದುಸ್ಥಾನದಲ್ಲಿ ಹಿಂದೂ ಜನರ ವಿರುದ್ಧ ಹಿಂದೂ ಸಾಕ್ಷಿದಾರ, ಹಿಂದೂ ಸರಕಾರೀ ವಕೀಲ ಮತ್ತು ಶಿಕ್ಷೆ ಕೊಡುವಂಥ ಹಿಂದೂ ಮ್ಯಾಜಿಸ್ಟ್ರೇಟರು ಇಂಗ್ರೇಜಿ ಸರಕಾರಕ್ಕೆ ದೊರೆಯುವ ತನಕ, ದೇಶಾಭಿಮಾನಿಯಾದ ಹಿಂದೂ ಗೃಹಸ್ಥನು, ಅದರಲ್ಲಿಯೂ ಕಾಯದೆ ಪಂಡಿತನು ಭಾಗತಕ್ಕೊಳ್ಳುವದು ಮೂರ್ಖತನವೇ ಆಗುತ್ತದೆ. ನನ್ನ ಪ್ರಕರಣದ ವಿಚಾರಣೆಯು ಏನಾಗುವದೆಂಬದನ್ನು ಬಲ್ಲೆನು. ನಾನು ಇದರ ಪರಿಣಾಮದಿಂದ ಪಾರಾಗುವನ್ನು ಸಮರ್ಥನಿರುವದಿಲ್ಲ. ಆ ಪರಿಣಾಮದಿಂದ ಪಾರಾಗಬೇಕೂ ಇಚ್ಛಿಸುವದಿಲ್ಲ. ಪರಕೀಯ ಸರಕಾರವು ನಮ್ಮ ಎದೆಯ ಮೇಲೆ ಕೂತಿರುವ ತನಕ ಮತ್ತು ದೇಶದ್ರೋಹಿಯಾದಂಥ ಸರಕಾರೀ ವಕೀಲ ಮತ್ತು ಮ್ಯಾಜಿಸ್ಟ್ರೇಟರು ಪರಕೀಯ ಸರಕಾರಕ್ಕೆ ಸಹಾಯ ಮಾಡಲು ಸಿದ್ಧರಾಗಿ ಕೂತಿರುವ ತನಕ ಹಿಂದುಸ್ಥಾನದಲ್ಲಿ ರಾಜದ್ರೋಹದ ಖಟ್ಲೆಗಳಿಗೆ ಅಂತ್ಯವೇ ಇಲ್ಲಾದರು. ಮತ್ತು ಅವು ಅಸಂಖ್ಯವಾಗಿ ಬೆಳೆಯುವವು. ಅವರ ಪರಿಣಾಮವು ಒಂದೇ ರೀತಿಯಾಗಿ ಪಡಿಯಚ್ಚಿನಲ್ಲಿ ಹೊಯ್ದಂತಾಗುತ್ತದೆ. ಅದು ಶಿಕ್ಷೆ ಮತ್ತು ತುರಂಗವಾಸ. ಇದಕ್ಕೆ ಪ್ರತ್ಯಕ್ಷ ಪ್ರಮಾಣವೆಂದರೆ- ನನ್ನ ವಿಚಾರಣೆಯನ್ನು ತುರಂಗದಲ್ಲಿ ನಡೆಸಿದ್ದೇ ಆಗಿರುತ್ತದೆ

ಸಾಣೇಕಟ್ಟೆಯಲ್ಲಿ ಉಪ್ಪಿನ ಲೂಟಿ ಮತ್ತು ಮಾರಾಟ.

—()—()—()—

ಅಂಕೋಲಾ ತಾಲ್ಲೂಕಿನಲ್ಲಿ ೨-೩ ದಿವಸಗಳಿಂದ ಶೆರೆ ಶಿಂದೀ ಅಂಗಡಿಗಳ ಪಿಕೆಟಿಂಗ ಬಹಳ ಉತ್ತಮ ರೀತಿಯಲ್ಲಿ ನಡೆಯುತ್ತ ಬಂದಿದೆ. ಕುಡಿತವು ಬಹಳ ಕಡಿಮೆಯಾಗುತ್ತಿದೆ. ಶೆರೆ ಶಿಂದೀ ದುಕಾನದಾರರು ಈ ಪಿಕೆಟಿಂಗದ ಸಲುವಾಗಿ ಜನರು ಕುಡಿಯಲಿಕ್ಕೆ ಬರದಿರುವರೆಂದು ಯಾರೂ ಇಲ್ಲದ ವೇಳೆಯಲ್ಲಿ ಹೆಂಡವನ್ನು ಒಯ್ದು ಹೊರಗೆ ಮಾರಾಟ ಮಾಡಹತ್ತಿರುವರು. ಇದರ ಸುಳವು ಅರಿದು ಸತ್ಯಾಗ್ರಹಿಗಳು ಈಗ ಎಲ್ಲೆಲ್ಲಿಯೂ ಅವರ ಬೆನ್ನು ಹತ್ತಿ ಅವರು ಕದ್ದು ಮಾರುವದನ್ನು ನಿಲ್ಲಿಸತೊಡಗಿರುವರು.

ಈ ದಿನ ಕೆಲ ದುಕಾನದಾರರು ಕಾರವಾರಕ್ಕೆ ಕಲೆಕ್ಟರರನ್ನು ಭೆಟ್ಟಿಯಾಗಲಿಕ್ಕೆ ಹೋಗಿದ್ದಾರೆಂದು ವರ್ತಮಾನ ಬಂದಿದೆ.

ಸಾಣೇಕಟ್ಟೆಯ ಉಪ್ಪಿನ ಮಾಳಗಳ ಮೇಲೆ ಸುತ್ತುಮುತ್ತಲಿನ ಹಳ್ಳಿಗಳ ಜನರು ಹಲ್ಲಾ ಮಾಡಿ ಸುಮಾರು ೫೦೦ ಮಣ ಉಪ್ಪನ್ನು ಒಯ್ದಿರುವರೆಂದೂ ಮತ್ತು ಸುಮಾರು ೧೦೦ ಮಣ ಉಪ್ಪನ್ನು ಕುಮಟಾದಲ್ಲಿ ಮಾರಿರುವರೆಂದೂ ಸುದ್ದಿ ಬಂದಿದೆ.

ಸತ್ಯಾಗ್ರಹ ಶಿಬಿರ ಅಂಕೋಲಾ ೩-೬-೩೦	ಚಿಂ ಮೂರ್ತಿ. ಪ್ರಕಟನಾ ಕಾರ್ಯಾಧಿಕಾರಿ

ನೋಟೀಸು

ಭಾಗವ್ವಾ ಕೋಂ ಭವಾನಸಿಂಗ ಧಾರವಾಡ ಇವರಿಗೆ—

ಕಳಗೆ ಹೆಬ್ಬಟ್ಟಿನ ಗುರ್ತು ಮಾಡುವ ಯಲ್ಲವ್ವಾ ಕೋಂ ಕರಿಯವ್ವಾ ಬೂದಿಹಾಳ ಸಾಕಿನ ಹುಬ್ಬಳ್ಳಿ ಹಾಲಿವಸ್ತಿ ಧಾರವಾಡ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನೆಂದರೆ—

ನೀನು ಅಜಮಾಸು ಎಳೆಂಟು ತಿಂಗಳ ಹಿಂದೆ ನಿನ್ನ ಮಗ ಗುರಪ್ಪನ ಮದಿವೆಗೆಂದು ನನ್ನ ಮಾಲಕಿಯ ದಾಗಿನೆಗಳು ಅಂದರೆ—

೧ ಜೋಡು ಬಂಗಾರದ ಪಾಟ್ಲಿ ತೊಲಿ ೩

೨ ಪುತಳೀಸರಾ ನಾಲ್ಕೂವರೀ ತೊಲಿ

೩ ಬೆಳ್ಳಿ ತೋಡೆಜೋಡು ಒಂದು ಶೇರು ೭

ಇಷ್ಟು ನಾಲ್ಕು ಮಂದಿ ಪಂಚರ ಸಮಕ್ಷಮ ಇಸಗೊಂಡು ಹೋದಿ ನಿನ್ನ ದುರ್ದೈವದಿಂದ ಮಗನು ಸತ್ತು ಹೋದನು. ಅನಂತರ ನಾನು ನಿನಗೆ ದಾಗೀನೆ ಕೊಡೆಂದು ಎಷ್ಟು ಕೇಳಿದರೂ ಕೊಡವಲ್ಲಿ. ಕಾರಣ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ನಾಲ್ಕು ದಿವಸಗಳಲ್ಲಿ ನನ್ನ ದಾಗೀನೆ ನನಗೆ ಕೊಟ್ಟು, ನನ್ನಿಂದ ಪಾವತಿ ಪಡೆಯಬೇಕು. ಇದಕ್ಕೆ ತಪ್ಪಿದರೆ ದಿವಾಣಿ ಅಥವಾ ಫೌಜದಾರಿಯಲ್ಲಿ ನಿನ್ನ ಮೇಲೆ ಇಲಾಜ ಮಾಡುವೆನು ಆಗಾಗುವ ಖರ್ಚು ಯಾವತ್ತು ನಿನ್ನ ತಲೆಯ ಮೇಲಿರುತ್ತದೆ ಈ ನೋಟೀಸಿನ ಖರ್ಚು ಸಹ ನಿನ್ನ ಮೇಲಿರುತ್ತದೆ. ಅಂತಾ ಕೊಟ್ಟ ನೋಟೀಸು

ತಾ॥ ೪ ಜೂನ ೧೯೩೦ ನೇ ಇಸವಿ—

ಸಹಿ ಯಲ್ಲವ್ವಾ ಕರವೀರಪ್ಪಾ ಬುದ್ಯಾಳ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ಬೇರೆ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಸೂಚನೆ ನೀವು ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ಕೆಲಸಗಾರರು ಬೇಕು

——(೦)——

ವಿಜಯ ಮುದ್ರಾಲಯದಲ್ಲಿ ಟ್ರೆಡಲ, ಬಾಯಿಂಡಿಂಗ ಮತ್ತು ಹ್ಯಾಂಡ ಪ್ರೆಸ ಮುದ್ರಣ ಬಲ್ಲಂಥ ಕೆಲಸಗಾರರು ಬೇಕಾಗಿದ್ದಾರೆ. ಉಮೇದವಾರರಿಗೆ ಕೆಲಸ ಕಲಿಸಲ್ಪಡುವದು. ಕೆಲಸ ಮಾಡಬಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಸಂಬಳ ಯೋಗ್ಯತೆಯ ಪ್ರಕಾರ.

ಮ್ಯಾನೇಜರ ವಿಜಯ

ಧಾರವಾಡ

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದರಿಂದ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣದ ಸಳವು.

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನ್ನು ತಕ್ಕೊಳ್ಳಬೇಕಾದ್ದರಿಂದ ಕಲಿಯುವವರ ನಿರಾಶೆಯಾಗಬಾರದೆಂದು ಮುಂದಾಗಿಯೇ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನ್ನು ತಕ್ಕೊಳ್ಳುವೆವು. ಆದ್ದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

ಎಂಜಿನಿಯರಿಂಗ ವರ್ಕ್ಸ, ಧಾರವಾಡ

ಈ ಪತ್ರವನ್ನು ಶಿವಾಚಾರ್ಯ ಬಸಲಿಂಗಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಗುರುವಾರ ತಾರೀಖು ೫ನೇ ಜೂನ ೧೯೩೦ (ಸಂಚಿಕೆ:೨೨೩

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ತಾನಾಗಿ ರದ್ದಾಗದ ಪಾಲಿಸಿಯ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ, ಧಾರವಾಡ

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ಶುದ್ಧ ೯

ಶ್ರೀ ವಿಜಯಂ ಶ್ರೀಶಪುರು
ಷೀ ವಸುಮತಿಯ ನಳಿಸಿ ಸುಜನ ತತಿಗೆಳಂ ।
ದೀ "ವಿಜಯಂ" ಸ್ವೀಕರಿಸು ।
ಪಾವಿತಕಾಗಿ ಸದಾ ಸುವಸುಮತಿ ಸಾಜಾ ।

ವಡಾಲಾದಲ್ಲಿ

ಪೋಲೀಸರಿಗೂ ಸ್ವಯಂ ಸೇವಕರಿಗೂ ಅದ್ಭುತ ಯುದ್ಧ

— : : —

ಇಂಗ್ಲಿಷರು ಆಫ್ರಿಕೆ ಮತ್ತು ಅಯರ್ಲಂಡ ದಲ್ಲಿ ಸ್ವರಾಜ್ಯ ಕೊಡುವ ಮೊದಲು, ತೀವ್ರ ತು ಬಾಕಿಗಳೊಂದಿಗೆ ಭಯಂಕರ ಯುದ್ಧ ಮಾಡಿ, ತಮ್ಮ ಜನರ ಪ್ರಾಣ ಕಳಕೊಂಡಲ್ಲದೆ, ಆ ಪ್ರಜರ ಜೀವವನ್ನೂ ತೆಗೆದುಕೊಂಡರು. ಕೊನೆಗೆ ಅವರಿಗೆ ಸ್ವರಾಜ್ಯಾಧಿಕಾರ ಕೊಟ್ಟು, ಅವರನ್ನು ಸ್ನೇಹಿತರಾಗಿ ಮಾಡಿಕೊಂಡರು. ಹಿಂದುಸ್ಥಾನದ ಜನರನ್ನು ಮುಂದೆ ಇದೇ ರೀತಿಯಾಗಿ ಮಿತ್ರರಾಗಿ ಮಾಡಿ ಕೊಳ್ಳಬೇಕಾಗಿದೆ. ಆ ಮಿತ್ರತ್ವವು ಗಟ್ಟಿಯಾಗುವ ಮೊದಲು ಯಾವ ಹೊಸ ಗಟ್ಟಿ ಗರಂಬದ ಪರೀಕ್ಷೆಯಾಗತಕ್ಕದ್ದಿರುತ್ತದೆ. ಈ ಜಿದ್ದಿನ ಹೋರಾಟದಲ್ಲಿ ಸರಕಾರ ಪಕ್ಷವು ಶಸ್ತ್ರಧಾರಿಯಾದ ಪೋಲೀಸ ಮತ್ತು ಸೇನಾಬಲದಿಂದ ಸಜ್ಜಾಗಿದ್ದು, ಸ್ವಯಂಸೇವಕರು ಕಿಸ್ಸಿಂದೆಯ ವಾನರರಂತೆ ನಿಃಶಸ್ತ್ರಧಾರಿಯಾಗಿದ್ದಾರೆ. ಇವರೂ ಕೊನೆಯಲ್ಲಿ ಇವರೇ ಗೆಲ್ಲುವವರೆಂದು ಖಂಡಿತ. ಇದಕ್ಕೆ ಮುಂಬಯಿ ಹತ್ತಿರದ ವಡಾಲಾದಲ್ಲಾದ ಯುದ್ಧವೇ ಒಂದು ದೃಷ್ಟಾಂತವು.

ವಡಾಲಾದಲ್ಲಿ ಉಪ್ಪಿನ ಪರ್ವತ ಬಿದ್ದಿದೆ. ಧಾರಾಸಣದಂತೆ ಮುಂಬಯಿಯವರು ಇದನ್ನು ಸ್ವಾಧೀನ ಮಾಡಿಕೊಳ್ಳಬೇಕು; ತಪ್ಪಿದರೆ ಅಲ್ಲಿಯ ಉಪ್ಪನ್ನು ಸುಲಿಗೆ ಮಾಡಬೇಕೆಂಬ ಸಂಕಲ್ಪಮಾಡಿದ್ದಾರೆ. ಆಕೆ ಒಂದು ತಿಂಗಳಲ್ಲಿ ಇದರ ಮೇಲೆ ಮೂರಾವರ್ತಿ ದಾಳಿಯಿಟ್ಟರು. ಇವುಗಳಲ್ಲಿ ಹೋದ ಶನಿವಾರ ದಿವಸ ನಡೆದ ದಾಳಿಯು ಪ್ರತ್ಯಕ್ಷ ಯುದ್ಧದಂತೆಯೇ ಆಯಿತು. ಜವಾನರು ಪೋಲೀಸ ಲಾರಿಗಳಲ್ಲಿ ಗೆದ್ದು ಪ್ರಾಣದ ಹಂಗು ತೊರೆದಂತೆ ಸ್ವಯಂ ಸೇವಕರು ಅಲ್ಲಿಯೂ ಜೀವದ ಹಂಗುದೊರೆದಿದ್ದರು. ಆರು ಬೆಳಗಾದ ಕೂಡಲೆ, ಕಾಂಗ್ರೆಸ ಭವನದಿಂದ ಒಂದು ಸಾವಿರ ಸ್ವಯಂಸೇವಕರು ಹೊರಟರು. ಇವರಲ್ಲಿ ಮುಸಲಮಾನರು ಭಾಗಿಯಾಗಿದ್ದರು. ಹಿಂದಿನ ತಿಂಗಳು ಅವ್ಯಕ್ತ ಹುಟ್ಟುವಂತೆ, ಸಾಬರಮತಿ ಮತ್ತು ಪಠಾಣರ ದಂಗೆಯಿಂದ ಮುಸಲ್ಮಾನರು ಬುದ್ಧಿಬಂದವರಾಗಿ ಕಾಂಗ್ರೆಸದಲ್ಲಿ ಸೇರಿ, ತಮಗೆ ವಡಾಲಾದ ಮೇಲೆ ಅಭಿಯೋಗ ಮಾಡುವ ಮೊದಲನೇ ಮಾನ ದೊರೆಯಬೇಕೆಂದು ಎಲ್ಲರ ಮುಂದಾದರು. ಮತ್ತು ಇವರೇ ಹಲ್ಲೇ ಮಾಡಿದರು. ಯುದ್ಧದಲ್ಲಿ ಮುಂದಿನ ಸೈನ್ಯಕ್ಕೆ ಸಹಾಯವಾಗಲು ಹಿಂದಿನ ಸೈನ್ಯವಿರುತ್ತದೆ. ಅದೇ ಪ್ರಕಾರ ಹಿಂದೆ ಎರಡು ಸಾವಿರ ಸ್ವಯಂಸೇವಕರ ಸಿದ್ಧವಾಗಿದ್ದರು.

ಪೋಲೀಸರ ಸಂಖ್ಯೆ ಕಡಿಮೆಯಾಗಿದ್ದರೂ, ಶಕ್ತಿಯು ಕಡಿಮೆಯಾಗಿರಲಿಲ್ಲ. ೨೦ ಸ್ವಾರರು, ೩೦ ಸಶಸ್ತ್ರ ಸಿಪಾಯಿಗಳು ೬೦೦ ಲಾಠಿ ಸಿಪಾಯಿಗಳು ಉಪ್ಪಿನ ಉಗ್ರಾಣದ ಸುತ್ತಲು ಕಾವಲಾಗಿದ್ದರು. ಇವರ ಹಿಂದ ತಂತಿಯ ಬೇಲಿ ಇತ್ತು. ಪ್ರತ್ಯಕ್ಷ ಯುದ್ಧದಲ್ಲಿ ಸಹ ಸೈನಿಕರನ್ನು ಅಲ್ಲಿ ಕಡೆಯಲು ಇಂಥ ಬೇಲಿ ಹಾಕುವದುಂಟು. ಬೇಲಿಯ ಹಿಂದೆ ಎತ್ತರವಾದ ದಿನ್ನೆಯ ಮೇಲೆ ನಿಶಾನೆಯಿಂದ ಗುರುತು ತೋರಿಸಿ, ಸರಿಯಾಗಿ ಪೋಲೀಸ ಮತ್ತು ಸೈನ್ಯ ತರಿಸುವ ವ್ಯವಸ್ಥೆ ಮಾಡಿದ್ದರು. ಪೋಲೀಸರು ಹೊಡಿಸಿಕೊಳ್ಳುವವರಲ್ಲ; ಹೊಡೆಯುವಂಥವರು; ಆದ್ದರಿಂದ ಅವರಿಗಾಗಿ ಡಾಕ್ಟರ, ನರ್ಸ, ಔಷಧವನ್ನು ಮುಲಗಿಸಿಕೊಂಡು ಹೋಗುವ ಹೆಸರಿನ ಮುಂತಾದವುಗಳ ಕೊರತೆಯು ಹೆಚ್ಚು. ಸರ್ಕಾರ ಎಲ್ಲ ಒಗೆಯ ಮುದ್ದೆಗಳು ಸಿದ್ಧವಾಗಿದ್ದವು. ಕಾಂಗ್ರೆಸದವರು ಹೊಡಿಸಿಕೊಳ್ಳುವಂದವರಾದ್ದರಿಂದ ಡಾಕ್ಟರ, ನರ್ಸ, ಸ್ಟ್ರೇಚರ (ಹೊರಸ) ಔಷಧ ಮುಂತಾದವು ಸಿದ್ಧವಾಗಿದ್ದವು. ಈ ಪ್ರಕಾರದ ಉಭಯ ಪಕ್ಷಗಳ ಸಿದ್ಧತೆಯಿಂದ ೮ ಗಂಟೆಗೆ ಪ್ರಾರಂಭವಾದ ಯುದ್ಧವು ಮಧ್ಯಾಹ್ನದ ವರೆಗೆ ನಡೆಯಿತು. ಪೋಲೀಸರು ಲಾಠೀ ಪ್ರಯೋಗ ಮಾಡಿದರು. ಅನೇಕರನ್ನು ಘಾಯ ಪಡಿಸಿದರು. ಕೋಟೆಯನ್ನು ಸ್ವವಶ ಮಾಡಿಕೊಳ್ಳುವಾಗ, ಪೊಳ್ಳದಲ್ಲಿಯೇ ಸುರಂಗ ಹೊಡೆಯುವಂತೆ, ಸ್ವಯಂಸೇವಕರು ಪೋಲೀಸರ ಸಂಖ್ಯೆಯು ಕಡಿಮೆ. ಇದ್ದಲ್ಲಿಂದ ತಂತಿಯಿಂದ ಒಳಗೆ ಹಾರಿ ಉಗ್ರಾಣದ ಹತ್ತರ ನಿಂತರು. ಉಪ್ಪು ಸಾಧಾರಣ ಒಂದು ಮೈಲಿನ ಸ್ಥಳವನ್ನು ವ್ಯಾಪಿಸಿದೆ. ಅಲ್ಲಿಯೂ ಪೋಲೀಸರಿಗೂ ಇವರಿಗೂ ಮಲ್ಲಯುದ್ಧ ನಡೆಯಿತು. ಸ್ವಯಂಸೇವಕರನ್ನು ಹಿಡಿಯುವ ಗೊಂದಲದಲ್ಲಿ ಪೋಲೀಸರು ಬಿದ್ದಾಗ, ಉಳಿದ ನೂರಾರು ಜನರು ಚೀಲಗಳಲ್ಲಿ ಉಪ್ಪು ತುಂಬಿಕೊಂಡು, ಹೆಗಲ ಮೇಲೆ ಹೊತ್ತುಕೊಂಡು, ಪೋಲೀಸರ ಬೆನ್ನಟ್ಟಿದರೂ, ಬಿಡದೆ ಗೆದ್ದರು.

ಪುರುಷರಂತೆ ಸ್ತ್ರೀ ಸ್ವಯಂಸೇವಿಕೆಯರೂ ಈ ಕುರುಕ್ಷೇತ್ರದಲ್ಲಿ ಸೇರಿದ್ದರು. ಶ್ರೀಮತಿ ಕಮಲಾದೇವಿ ಮುನಸಿಯವರ ಪತ್ನಿಯವರು ಪ್ರವೀಣರಾಗಿದ್ದರು. ದೇಶಪಾಂಡೆ, ಗಜರಾಥಿ ಮತ್ತು ಶೀಲಾ ಸ್ತ್ರೀಯರು ಇವರ ಜೊತೆ ಯಾಳುಗಳಾದ್ದರು. ಪೋಲೀಸ ಅಧಿಕಾರಿಗಳು ಇವರನ್ನು ತಡೆದು ಮುಂದೆ ಬಿಡಲಿಲ್ಲ. ಇವರು ಏನಾದರೂ ಮುಂದೆ ಹೋಗತಕ್ಕದ್ದೆಂದು ಸತ್ಯಾಗ್ರಹ ಮಾಡಲು ನಿಮ್ಮನ್ನು ಹಿಡಿದೇವೆಂದು ಹೇಳಿ, ಕೆಲಹೊತ್ತು ಕೂಡ್ರಿಸಿ ಹಿಂಗಡೆ ಬಿಟ್ಟುಬಿಟ್ಟರು. ಸ್ವಯಂಸೇವಕರು ಉಪ್ಪು ತಕ್ಕೊಂಡು ಹೊರ ಬಂದರು, ಸೈನ್ಯದ ಸಾಲು ಹರಿದರು. ಅಷ್ಟರಲ್ಲಿ ಮುಂದಿನ ಕಾಲುವೆಯಿಂದ, ಸ್ವಯಂಸೇವಕರು ಜಯಧ್ವನಿ ಮಾಡುತ್ತ ಕಾಂಗ್ರೆಸ ಆಫೀಸಿಗೆ ಬಂದರು. ಆಗ ಘಾಯವಾದವರನ್ನು ಮತ್ತು ಸ್ವಯಂಸೇವಕರನ್ನು ಕಾಂಗ್ರೆಸ ಆಸ್ಪತ್ರೆಗೆ ತೆಗೆದುಕೊಂಡರು. ವಿಶೇಷ ಘಾಯವಾದವರನ್ನು ಇಲ್ಲಿಗೆ ತಂದು, ಆರೈಕೆ ಮಾಡಿದರು. ಒಟ್ಟು ೧೫೦ ಜನರು ಘಾಯವಾಗಿದ್ದಾರೆ. ಈ ದಾಳಿಯಲ್ಲಿ ಸುಲಿದು ತಂದ ಉಪ್ಪು ಸಾವಿರ ಮಣವಾಗಿದೆ.

ಖೇಡದ ರೈತರ ಸತ್ಯಾಗ್ರಹ.

—(೦)—

ಕೊಂದರೂ ಹಪ್ತೆ ಕೊಡರು.

—(0)—

ಗುಜರಾಥದಲ್ಲಿರುವ ಖೇಡಜಿಲ್ಹೆಯ ಪ್ರತಿ ಊರಿನಿಂದ ಒಂದು ಸಾವಿರ ರೈತರ ಪ್ರಚಂಡ ಮತ್ತು ಇತಿಹಾಸ ಪ್ರಸಿದ್ಧವಾಗುವಂಥ ಸಭೆಯು ನಡಿಯಾದದಲ್ಲಿ ಸೇರಿತ್ತು. ಈ ಸಭೆಯಲ್ಲಿ ರೈತರು ಎಂಥ ಪ್ರಸಂಗ ಬಂದರೂ, ಪಡಿಪಾಟ್ಲ ಬಂದರೂ, ಸಂಕಟ ಬಂದರೂ ಸಾಯುವ ಹೊತ್ತು ಬಂದರೂ ಹಪ್ತೆ ಕೊಡಬಾರದೆಂಬ ಠರಾವು ಪಾಸ ಮಾಡಿದ್ದಾರೆ. ಅದು-

"ನಾವು ಖೇಡಾ ಜಿಲ್ಹೆಯ ರೈತರು ದೇವರನ್ನು ಸ್ಮರಿಸಿ ಪ್ರತಿಜ್ಞೆ ಮಾಡುವದೇನಂದರೆ- ಸರಕಾರದವರು ಮಹಾತ್ಮರನ್ನು ಬಿಡುವತನಕ, ಅಥವಾ ಸಂಧಾನ ಪಟೇಲರು ಹೇಳುವತನಕ, ನಾವು ಸರಕಾರಕ್ಕೆ ಹಪ್ತೆ ಕೊಡತಕ್ಕದ್ದಿಲ್ಲ. ಹಪ್ತೆ ಕೊಡಲಿಕ್ಕಿಲ್ಲೆಂದು ಸತ್ಯಾಗ್ರಹ ಮಾಡುವಾಗ- ನಮ್ಮನ್ನು ಲಾಠಿಯಿಂದ ಹೊಡೆದರೆ- ತುರುಂಗದಲ್ಲಿ ಹಾಕಿದರೆ- ಸ್ಥಾವರ ಜಂಗಮ ಆಸ್ತಿಯನ್ನು ನಾಶ ಮಾಡಿದರೆ- ಕೊನೆಯಲ್ಲಿ ಮರಣ ಬಂದರೂ ಕೂಡ- ಇವೆಲ್ಲ ಕಷ್ಟತಾಪಗಳನ್ನು ತಾಳಿದು, ಮತ್ತು ಸಹನಶೀಲವೃತ್ತಿಯಿಂದಲೇ ಇದ್ದು ಸ

ಸತ್ಯಾಗ್ರಹಕ್ಕೆ ಭಂಗ ತರಲಿಕ್ಕಿಲ್ಲ”

ಈ ಠರಾವು ಬಹು ಪಟ್ಟಿಗೆ ಬಾರದೊಳಿಯು ಠರಾವಿನಂತಿದ್ದು, ಇದಾ ಕೂಡ ಸರಕಾರೀ ಕಾವ ಬಾರಿಗೆ ಅನ್ನ ನೀರು ಸಿಗದಂತೆ ಮಾಡುವದೂ ಇದ್ದುದೆ ಲಾರ್ಡ ಅರ್ವಿನಸಾಹೇಬರು ಹಪ್ಪೆ ಕೊಡಬೇಡಿರೆಂದು ಹೇಳುವ ಧನರಿಗೆ ಆರು ತಿಂಗಳ ಶಿಕ್ಷೆ ಹೇಳಿದ್ದಾರೆ ಎಷ್ಟು ಜನರಿಗೆ ಶಿಕ್ಷೆ ಕೊಡುವರು? ಇವರಿಗಾಗಿ ಎಷ್ಟು ತುರಂಗ ಕಟ್ಟಿಸುವರೆಂಬದನ್ನು ನೋಡಬೇಕಾಗಿದೆ.

ಮಹಾತ್ಮರ ಏಕಾಂತವಾಸ!!

ಬೆಳಕಿಂದ ಕತ್ತಲೆ ಕೋಣೆಯ

ಬದಲಾಗಿ

ಬೆಳಕಿರುವ ಕತ್ತಲೆ ಕೋಣೆ.

—(೦)—

ಭಯಂಕರ ಅಪರಾಧ ಮಾಡಿದವರಿಗೆ ಜಪ್ಪು ಕತ್ತಲೆ ಕೋಣೆಯ ಶಿಕ್ಷೆ ವಿಧಿಸುವರು. ತುರಂಗದಲ್ಲಿ ಕೈದಿಯು ಅಂಥದೊಂದು ಅಪರಾಧ ಮಾಡಿದರೆ ಜೇಲಿನ ಅಧಿಕಾರಿಗಳು ಅವನನ್ನು ಕತ್ತಲೆ ಕೋಣೆಯಲ್ಲಿ ಹಾಕುವ ಶಿಕ್ಷೆ ವಿಧಿಸುವರು. ಇಲ್ಲಿ ಹೊರಗಿನ ಬೆಳಕಿರುವದು ಇದರೆ ಜನರಾರೂ ಇರುವದಿಲ್ಲ. ಒಬ್ಬನೇ ವಾರಗಟ್ಟಲೆ ಕಳೆಯಬೇಕಾಗುತ್ತದೆ. ಸಹಿಗೆ ಹದಿನಾಲ್ಕು ದಿವಸಕ್ಕಿಂತ ಹೆಚ್ಚು ಇಡಬಾರದೆಂದು ನಿಯಮವುಂಟು

ಮಹಾತ್ಮರು ರಾಜಕೀಯ ಕೈದಿಯಾದರೂ ಅವರ ಪಾಲಿಗೆ ಏಕಾಂತವಾಸ ಬಂದಿದೆ. ಇವರಿಗಾಗಿ ಸ್ವತಂತ್ರ ಕೋಣೆಯುಂಟು. ಆಹಾರಕ್ಕೆ ಕೊರತೆಯಿಲ್ಲ. ರಾತ್ರಿ ವಿದ್ಯುತ್ತಿನ ದೀಪವಿರುವದು. ಇವೇ ಮುಂತಾದ ಸೌಖ್ಯಗಳಿದ್ದರೂ, ಸಂಪ್ರಾಣಿಯ ಸಹವಾಸವಿರುವದಿಲ್ಲ. ಅವರು ನಿತ್ಯ ಉಪಾಸನೆಗಾಗಿ ಒಂದು ಹೋಗುವಷ್ಟು ಸಮಯ. ಅಂದರೆ ಒಂದೆರಡು ನಿಮಿಷ. ಈ ಪ್ರಕಾರ ಮಹಾತ್ಮರಂಥ ಜಗದ್ವಂದ್ಯರನ್ನ ಏಕಾಂತದಲ್ಲಿಡುವದು ಜೇಯವಾದದ್ದೇ ಸರಿ, ಇವರ ಕೂಡ ಹೇಳಾದರೂ ಸಂಭಾಷಣೆ ಮಾಡುತ್ತಾ, ಅವರಿಗೆ ಕು ಆರಾಮವೆನಿಸುವಂಥವರು ಯರವಡೆಯ ಜೇಲಿನಲ್ಲಿಯೇ ಇದ್ದಾರೆ. ದೇವೀಸರೋಜಿನಿ ಮತ್ತು ಶ್ರೀ ಕಮಲಾಬಾಯಿ ಚಟ್ಟೋಪಾಧ್ಯಾಯಿನಿಯವರು ಪುತ್ರಭಕ್ತಿಯಿಂದ ಇನ್ನ ಕೂಡ ಇದ್ದು, ಇವರಿಗೆ ಬೇಕಾದಷ್ಟು ಮನಾನಂದವನ್ನುಂಟು ಮಾಡಬಹುದು. ಮುಂಬಯಿ ಇಲಾಖೆಯ ತುರಂಗಗಳಲ್ಲಿಯೇ ಇವರ ಇಬ್ಬರು ಮಕ್ಕಳಿದ್ದಾರೆ. ಇವರನ್ನು ಮಹಾತ್ಮರ ಹತ್ತಿರ ಇಟ್ಟರೆ ಜಗತ್ತು ಎಂದಿಗೂ ಬುಡಮೇಲಾಗದು. ಕಳ್ಳರು ದರೋಡೆಗಾರರಂಥವರು ಕೂಡ ಜಗಳ ರಾತ್ರಿ ಜಾಗರೋಗಿರುತ್ತಾರೆ ಅಂದಬಳಿಕ ಮಹಾತ್ಮರಿಗೇಕೆ ಜನರ ಸಹವಾಸ ಕೊಡುವದಿಲ್ಲ?

ಬೆಳಗಾವ ಜಿಲ್ಹೆಯ

ವತನದಾರ ಇನಾಮದಾರರ ರಾಜನಿಷ್ಠೆಯ

ಡಂಗುರ.

—(೦)—

ಬೆಳಗಾವಿಯಲ್ಲಿ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಮಿ. ಕಮೀಶನರಸಾಹೇಬರ ತನಕ ಹೋಗಿ ಅವರ ಮುಂದೆ ರಾಜನಿಷ್ಠೆಯ ಪ್ರತಿಜ್ಞೆ ಮಾಡಿದರಷ್ಟೇ; ಅದರ ತರುವಾಯ ಆ ಜಿಲ್ಹೆಯ ಇನಾಮದಾರ ಮತ್ತು ವತನದಾರರು ಸ್ವತಃ ಕಮೀಶನರ ಸಾಹೇಬರ ಅಧ್ಯಕ್ಷತೆಯಲ್ಲಿಯೇ ವನಿತಾ ವಿದ್ಯಾಲಯದಲ್ಲಿ ಸಭೆ ಮಾಡಿ, ರಾಜನಿಷ್ಠೆಯ ಪ್ರತಿಜ್ಞೆಯ ಡಂಗುರ ಸಾರಿದರು. ಸಭೆಯಲ್ಲಿ ವಂಟಮೂರಿ, ಕೋವಾಡ ಮತ್ತು ಅಂಕಲಗಿಯ ದೇಸಾಯಿ ಸರದೇಸಾಯರೂ, ರಾ ಬ. ಕಿಣಿಯವರೂ ಭಾಷಣ ಮಾಡಿದರು. ಮಿ ಕಮೀಶನರಸಾಹೇಬರು ಈಗಿನ ಚಳವಳಿಯು ಹೇಗೆ ಅನ್ಯಾಯಕತನದ್ದಾಗಿರುತ್ತದೆಂಬದನ್ನೂ ವತನದಾರರು ಇವರಲ್ಲಿ ಸೇರಿದರೆ ಹೇಗೆ ಹಾನಿಯಾಗುವದೆಂಬದನ್ನು ಸ್ಫೂರ್ತಿಯಿಂದ ಹೇಳಿದರು. ಗುರುವಿಗೆ ಗುಟುಕು ನೀರಾದರೆ ಶಿಷ್ಯನಿಗೆ ಮೊಳಕಾಲಮಟ ನೀರೆನ್ನುವಂತೆ ಕೂಡಿದ ವತನದಾರರು—

> ಪ್ರಸ್ತುತದ ರಾಜಕೀಯ ಚಳವಳಿಯು ಅರಾಜಕ, ಕ್ರಾಂತಿಕಾರಕ ಮತ್ತು ದೇಶಹಿತಕ್ಕೆ ಬಾಧೆ ತರುವಂಥಾದ್ದಿರುತ್ತದಾದ್ದರಿಂದ

ಇನ್ನು ಬಲವಾಗಿ ವಿರೋಧಿಸಿ ನಿಷೇಧಿಸುತ್ತೇವೆಂದು ಠರಾವನ್ನು ಪಾಸ ಮಾಡಿದರು. ಇಷ್ಟೇ ಅಲ್ಲ; ಇವರು ತಂತಮ್ಮ ನೆರೆಹೊರೆಯ ಗ್ರಾಮಗಳಿಗೆ ಚಳವಳಿ ಮುರಿಯಲು ಪ್ರಚಾರಕರಾಗಿ ಹೋಗುವರು. ಆಗ ಹೇಗೆ ಇವರ ಸ್ವರೂಪದ ಪರೀಕ್ಷೆಯಾಗುವದು. ಒಂದೂರ ಗೌಡನು ಮತ್ತೊಂದೂರಿನ ತಳವಾರನೆಂಬ ಗಾದೆಯ ಮಾತನ್ನು ಇವರು ಧ್ಯಾನದಲ್ಲಿಟ್ಟುಕೊಳ್ಳತಕ್ಕದ್ದು.

ಒಡಂಬಡಿಕೆಯು ಕುದಿಯುವಾಗ ಹಳಸಿತು.

—(೦)—

ಮುಂಬಯಿಯ ವರ್ತಕರು ಒಡಂಬಡಿಕೆ ಮಾಡಿಸಬೇಕೆಂದು ನಾಮದಾರ ಗವ್ಹರ್ನರಸಾಹೇಬರ ಕಡೆಗೆ ಹೋಗಿದ್ದರಷ್ಟೇ; ಇವರಿಗೆ ಮಹಾತ್ಮರನ್ನು ಕಾಣಲು ಅಪ್ಪಣೆ ಕೊಡದ್ದರಿಂದ, ಒಡಂಬಡಿಕೆಯು ಕುದಿಯುವಾಗ್ಗೇ ಹಳಸಿತು.

ಅರಳೆಯ ವ್ಯಾಪಾರಕ್ಕೆ ಬರುವ ಭಯಂಕರ ಮಂದಿಯು.

—(೦)—

ಮುಂಬಯಿ ವರ್ತಕರ ಸತ್ಯಾಗ್ರಹ ಮತ್ತು ಬಹಿಷ್ಕಾರ.

—(೦)—

ಮುಂಬಯಿಯಲ್ಲಿ ಅರಳೆಯ ವ್ಯಾಪಾರ ಮಾಡುವ ವರ್ತಕರದೊಂದು ಸಂಘವುಂಟು. ಇದರಲ್ಲಿ ೬೫೦ ಮೆಂಬರರಿದ್ದಾರೆ. ಇವರೇ ಇಡೀ ವ್ಯಾಪಾರವನ್ನು ತಡೆಗಿಸುತ್ತಾರೆ. ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಸ್ವರಾಜ್ಯ ಸಂಪಾದಿಸುವದಕ್ಕಾಗಿ ವರ್ತಕರು ಹೊಸದಾಗಿ ಮಾರ್ಕೆಟಿಗೆ ಬರುವ ಅರಳೆಯು ಖರೀದಿ ವಿಕ್ರಿ ಮಾಡಬಾರದೆಂಬ ಠರಾವು ಮಾಡಿದ್ದಾರೆ ಇದರಿಂದ ಅರಳೆಯ ವ್ಯಾಪಾರಕ್ಕೆ ಭಯಂಕರ ಮಂದಿ ಬರುವದೆಂದು ಸಹಜವಾಗುತ್ತದೆ.

ಪದವಿಗಳ ತ್ಯಾಗ

—(೦)—

ಸರ ಸಾಯಮನ್ನ ಜೆ ಸಿ. ಎಸ್. ಆಯ್.
ಮಿ. ಹಾಟಸನ ಕೆ. ಸಿ. ಎಸ್. ಆಯ್.
ರಾ. ಬ. ಲಠ್ಠೆ ದಿವಾನ ಬಹಾದ್ದೂರ
ಮಿ. ಜಗದಾಳೆ ರಾವಬಹಾದ್ದೂರ
ಡಾಕ್ಟರ ಕುಂಭಕೋಣ ಹುಬ್ಬಳ್ಳಿ ರಾವ ಸಾಹೇಬ
ಮಿ. ಗುರಪ್ಪಾ ಚನವೀರಪ್ಪಾ ಟೆಂಗಿನಕಾಯಿ ಗದಗ ಬೆಟಗೇರಿ ರಾವಸಾಹೇಬ

ಇಬ್ಬರು ಮುಖಂಡರಿಗೆ ಭಯಂಕರ ಶಿಕ್ಷೆ.

—(೦)—

ಬ್ಯಾರಿಸ್ಟರ ಅಭ್ಯಂಕರ ಮತ್ತು ವೀರ ವಾಮನರಾಯರಿಗೆ ಎರಡೆರಡು ವರ್ಷಗಳ ಸಶ್ರಮ ಶಿಕ್ಷೆಯಾಯಿತು.

ಮುಂಬಯಿಯಲ್ಲಿ ಪ್ರತಿವರ್ಷ ಹಿಂದೂ, ಮುಸಲಮಾನ, ಪಾರ್ಸಿ ಮತ್ತು ಯುರೋಪಿಯನ್ನರ ಕ್ರಿಕೆಟ ಆಟಗಳು ನಡೆಯುವವು. ಈ ವರ್ಷ ಹಿಂದೂ ಆಟಗಾರರು ಇದಕ್ಕೆ ಬಹಿಷ್ಕಾರ ಹಾಕುವದರಿಂದ, ಆಟವೇ ನಿಂತು ಹೋಗುವದು.

ಮೇ ತಿಂಗಳ ೨೯ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಪೋಲೀಸರು ಶೀಖರ ದೇವಾಲಯದಲ್ಲಿ ಹಾರಿಸಿದ ಗುಂಡುಗಳಿಂದ ಒಲಟೆ ಕಿತುಗಳು ಅಥವಾ ಪೆಟ್ಟುಗಳು ಬಿದ್ದಿರುತ್ತವೆಂದು ಲೆಕ್ಕವಾಗಿದೆ. ಶ್ರೀಗುರು ಗೋವಿಂದಸಿಂಗರ ಭಾವಚಿತ್ರವೂ ಬಹುವಾಗಿ ಛಿನ್ನವಿಚ್ಛಿನ್ನವಾಗಿರುತ್ತದೆ.

ನೋಟೀಸು

—(೦)—

ಭಾಗವ್ವಾ ಕೋಮ ಭವಾನಸಿಂಗ ಧಾರವಾಡ ಇವರಿಗೆ—

ಕೆಳಗೆ ಸಹೀ ಮಾಡಿದ ಯಲ್ಲವ್ವಾ ಕೋಮ ಕರಿಯನವ್ವಾ ಬಡಿಗೇರ ಸಾ. ಹೀನ ಹುಬ್ಬಳ್ಳಿ ಹಾಲಿವಸ್ತಿ ಧಾರವಾಡ ಈಕೆಯು ನಿನಗೀ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ಚಿಟವಿನ ಎಳೆ ಟ. ತಿಂಗಳ ಹಿಂದೆ ನನ್ನ ಮಗ [illegible] ನ ದಿವಗಿಂದು ನನ್ನ ಮಾಲೀಕಿಯ ದಾಗೀನಗಳು ಅಂದರೆ–

೧ ಬೋಡು ಬಂಗಾರದ ಪಾಟ್ಲಿ ತೊಲಿ ೬

೨ ಪುತಳೀಸರಿ ನಾಲ್ಕುವರೀ ತೊಲಿ

೩ ಬೆಳ್ಳಿ ಕೋಲ್ಜೊಡು ಒಂದು ಶೇರು ೭

ಇಷ್ಟು ನಾಲ್ಕು [illegible] ಪಂಚರ ಸಮಕ್ಷಮ ಇಸಗೊಂಡು ಹೋದಿ. ನಿನ್ನ ದುರ್ದೈವದಿಂದ ಮಗನ ಸತ್ತು ಹೋದನು. ನಂತರ ನಾನು ನಿನಗೆ ದಾಗೀನ ಕೊಡೆಂದು ಎಷ್ಟು ಕೇಳಿದರೂ ಕೊಡದಲ್ಲಿ ಕಾರಣ ಈ ನೋಟೀಸು ಕೊಡಬೇಕಾಯಿತು. ನೀನು ಈ ನೋಟೀಸು ಮುಟ್ಟಿದ ನಾಲ್ಕು ದಿವಸಗಳಲ್ಲಿ ನನ್ನ ದಾಗೀನ ನನಗೆ ಕೊಟ್ಟು, ನನ್ನಿಂದ ಪಾವತಿ ಪಡೆಯಬೇಕು. ಇದಕ್ಕೆ ತಪ್ಪಿದರೆ ದಿವಾಣಿ ಅಥವಾ ಫೌಜದಾರಿಯಲ್ಲಿ ನಿನ್ನ ಮೇಲೆ ಇಲಾಜ ಮಾಡುವೆನು. ಆಗಾಗುವ ಖರ್ಚು ಯಾವತ್ತು ನಿನ್ನ ತಲೆ ಮೇಲಿರುತ್ತದೆ. ಈ ನೋಟೀಸಿನ ಖರ್ಚು ಸಹ ನಿನ್ನ ಮೇಲಿರುತ್ತದೆ. ಅಂತಾ ಕೊಟ್ಟ ನೋಟೀಸು

ತಾ|| ೪ ಜೂನ ೧೯೩೦ ನೇ ಇಸವಿ—

ಸಹಿ ಯಲ್ಲವ್ವಾ ಕರಿಯವ್ವಾ ಬಡಿಗ್ಯಾಳ

ಕೆಲಸಗಾರರು ಬೇಕು

——(೦)——

ವಿಜಯ ಮುದ್ರಾಲಯದಲ್ಲಿ ಟ್ರೆಡಲ, ಜಾಯಿಂಟಿಂಗ ಮತ್ತು ಹ್ಯಾಂಡ ಪ್ರೆಸ ಮುದ್ರಣ ಬಲ್ಲಂಥ ಕೆಲಸಗಾರರು ಬೇಕಾಗಿದ್ದಾರೆ. ಉಮೇದವಾರರಿಗೆ ಕೆಲಸ ಕಲಿಸಲ್ಪಡುವದು. ಕೆಲಸ ಮಾಡ ಬಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಸಂಬಳ ಯೋಗ್ಯತೆಯ ಪ್ರಕಾರ.

ಮ್ಯಾನೇಜರ ವಿಜಯ

ಧಾರವಾಡ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಬಿಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗಿಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, [illegible]ಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಟಿಪ್ಪಣಿ:—ಔಷಧ ಬೇಡುವಾಗ [illegible] ವರ್ತಮಾನಪತ್ರದ ಜಾಹೀರಾತಿನ [illegible] ಈ ಜಾಹಿರಾತು ಓದಿರುವಿರೆಂಬುದನ್ನು ಬರೆಯಬೇಕು.

ಸೀರೆ! ಪತ್ತಲ!! ಕಿರಗಿ!!

ಶ್ರೀದತ್ತ ಸ್ಪಿನಿಂಗ್ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಸೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಖಾತರಿ ಮಾಡಿ, ನಿಮಗೆ ಬೇಕಾದ ಮಾಲು ಕೊಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಸರಿ, ಬಣ್ಣ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸಂಕಾರಿ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿಂದ ಅವಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ

ಇದೊಂದೇ ಶಿಕ್ಷಣಾಲಯ ಸಂಸ್ಥೆ.

ಮೋಟಾರ ಡ್ರೈವರ ವಿದ್ಯೆಗಳಿಯಲು ಜನರು ಈವರೆಗೆ ಪುಣೆ, ಬೆಳಗಾವಿ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, [illegible] ಉತ್ತಮ ಶಿಕ್ಷಣ [illegible] ನಾವು ಧಾರವಾಡದಲ್ಲಿ ತೆಗೆದಿದು, ಆಗಾಗಲೇ ಅನೇಕರು ಶಿಕ್ಷಣ ಪಡೆದುಕೊಳ್ಳಲಿದ್ದಾರೆ. ಪ್ರತಿ ತಿಂಗಳ [illegible] ಜನರನ್ನು ತೆಗೆದುಕೊಳ್ಳಬೇಕೆಂದಿರುವ [illegible] ಮುಂದಾಗಿ ಈ [illegible] ಮೇ ಆಖೈರಿ [illegible] ಹತ್ತು ಜನರನ್ನು ತೆಗೆದುಕೊಳ್ಳುವೆವು. ಇದರಿಂದ ಕೂಡಲೆ ಅರ್ಜಿ ಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ಹೆಚ್ಚಿನ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬಹುದು.

ಪ್ರೊ. ಪಿ. ಎಸ. ಇಟಗಿ.

[illegible] ಧಾರವಾಡ

ಈ ಪತ್ರವನ್ನು [illegible] ಯರ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ಶುಕ್ರವಾರ ತಾರೀಖು ೬ನೇ ಜೂನ ೧೯೩೦ (ಸಂಚಿಕೆ ೩೭

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯುರನ್ಸ ಕಂ. ಲಿ.

ವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಈನಾಗಿ ರದ್ದಾಗದ ಎರಡರಿಂದ ಆದರ್ಶ ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ–

ಶ್ರೀ ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆದುಕೊಳ್ಳಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಎಂಟು ಲಕ್ಷದ ಮೇಲಿನಟು, ಚಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠಾಣೀಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಜಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುದು. ದರವನ್ನು ಸಮಕ್ಷಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ.

೧೨ ತಿಂಗಳಿಗೆ	ರೂ. ೧೨ ೮-೦
೬ ,,	೬ ೨-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ಶುದ್ಧ ೧೦

ಆ ವಿಜಯಂ ಶ್ರೀಕಲ್ಪಿಯು
ಸೀ ವಸುಮತಿಯು ನಲಿಸಿರೆ ಸುಹಿತಕಥೆಗಳಿಂ ॥
ದೀ "ವಿಜಯಂ" ಶ್ರೀಕರಣ।
ನಾ ವಿಹಿತಂಗಳ ವಿವರಿಸಲಿವೃನು ಸಾಜಂ॥

ಸರ್ಕಾರದ ಒಂಟೇಯ ಹಿಡತ,

ಬಡಂಬಡಿಕೆ ಆರೆಯು ನಿರ್ಣಯ.

—— (೦) ——

ಮುಂಬಯಿ ಕೌನ್ಸಿಲ ಮೆಂಬರರಾದ ಶ್ರೀ ಬಾಲಜಿ ನಾರಾಯಣಜಯವರು, ಅಸೆಂಬ್ಲಿಯ ಮೆಂಬರರಾಗಿಷ್ಠ ಸರ ಪುರಷೋತ್ತಮದಾಸ ಠಾಕೂರದಾಸ ಮತ್ತು ಮಿ. ಮೋದಿ ಪಾರಸಿ ಮೆಂಬರ ಮತ್ತು ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮಿ. ಹುಸೇನಭಾಯಿ ಲಾಲಜಿ, ಇವರ ಸಹಕಾರದಿಂದ ಕಳೆದ ವಾರದಲ್ಲಿ ಎರಡು ಮೂರು ಸಾರೆ ಮಹಾಬಳೇಶ್ವರದ ಯಾತ್ರೆ ಮಾಡಿದರು. ಅಲ್ಲಿ ಶ್ರೀ. ಕೃಷ್ಣವೇಣಿಯ ಉಗಮಸ್ಥಾನದಲ್ಲಿ ಸ್ನಾನಮಾಡಿದ್ದರೆ ಎಷ್ಟೋ ಪುಣ್ಯವಾಗುತ್ತಿತ್ತು; ಆದರೆ ನಗರವಲ್ಲಾಂದಂಥ ಕುಂಬಳಕಾಯಿಯ ದೊಡ್ಡ ಆಶೆಯಿಂದ ಗವರ್ನರಸಾಹೇಬರನ್ನು ಕಾಣಲಿಕ್ಕೆ ಹೋದರು. ಮಹಾತ್ಮರಿಗೂ ಸರಕಾರಕ್ಕೂ ರಾಜಿ ಮಾಡಿಸಬೇಕೆಂದೇ ಇವರ ಉದ್ದೇಶವು. ಮೊದಲು ಹೋದವರು ಮಿ. ಹುಸೇನಭಾಯಿಯವರು. ಇವರಿಗೆ ವ್ಯಾಗಳಲ್ಲದಂಥ ಆಶೆ ಹುಟ್ಟಿ, ಅವುಗೆ ಸಹಾಯವಾಗಿ ಮಿ. ಮೋದಿಯವರನ್ನು ಕರಸಿಕೊಂಡರು. ಶ್ರೀ. ಬಾಲಜಿ ನಾರಾಯಣಜಿಯವರು ಗಂಗಾಯಮುನಾ ಸಂಗಮದಲ್ಲಿ ಸರಸ್ವತಿಯಂತೆ ಗುಪ್ತಗಾಮಿನಿಯಾಗಿದ್ದರು. ಈ ಮೂವರ ಕೂಡ ಗವರ್ನರಸಾಹೇಬರು ಬಹುವಾಗಿ, ಶಾಂತ ಮತ್ತು ಗಂಭೀರವಾಗಿ ಮಾತಾಡಿದರು; ರಾಜಿಗೆ ಸಿದ್ಧವಾಗಿರುವಂತೆ ಲಕ್ಷಣವನ್ನು ತೋರಿಸಿದರು. ಆದರೆ ಇವರಿಗೆ ಮಹಾತ್ಮರನ್ನು ಕಾಣಗೊಡುವದಿಲ್ಲೆಂದರು. ಮಿ. ಸ್ಲೋಕೊಂಬಿಸಾಹೇಬರಿಗೆ ಹೋಗಗೊಟ್ಟದ್ದೇ ಅಚಾತುರ್ಯವಾಯಿತೆಂದು ಮಿ. ಬೆನ್ನಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಉದ್ಗಾರ ತೆಗೆದರಷ್ಟೇ; ಅದೇ ಅಚಾತುರ್ಯವನ್ನು ಗವರ್ನರಸಾಹೇಬರು ಮಾಡುವದೆಂತು? ತಮ್ಮ ಸಲಿಗೂ ಅವಿವೇಕತನದ ಆರೋಪ ಬರಬಾರದೆಂದು ಸಾಹೇಬರು ಇವರಿಗೆ ಮಹಾತ್ಮರನ್ನು ಕಾಣಗೊಡುವದಿಲ್ಲೆಂದರು. ಈ ದಾರಿ ಬಂದಾದದ್ದೇ ಬಡಂಬಡಿಕೆಯು ಮುರಿಯುವದಾಯಿತು.

ಬಡಂಬಡಿಕೆಯ ಮಾತು ಕಥೆ ಹೀಗೆ ಮುರಿದದ್ದು ಮುಂಬಯಿಯ ವರ್ತಕ ಸಂಘದವರಿಗೆ ನಿರಾಶೆಜನಕವಾಯಿತು. ಈ ದಬ್ಬಾಳಿಕೆಯು ನಿಷೇಧವೆಂದು ತಮ್ಮ ವತಿಯಿಂದ ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರಶಿಪ್ಪಿಗೆ ರಾಜೀನಾಮೆ ಕೊಡಬೇಕೆಂದು ಗೊತ್ತಾಗಿತ್ತು. ಆದರೆ ನಡುವೆ ಆಕಸ್ಮಿಕವಾಗಿ ಎದ್ದ ಸಂಧಿಗಾಗಿ ರಾಜೀನಾಮೆಯು ತಡಕೂಬಿನಲ್ಲುಳಿಯಿತು. ಇದು ಕೃಷ್ಣ ಶಿಷ್ಟಾಯಿಯಂತೆ ನಿರರ್ಥಕವಾದ್ದರಿಂದ, ಇವರು ರಾಜೀನಾಮೆ ಕೊಡುವದಂತೂ ಖಂಡಿತವಾಯಿತು. ಇವರ ತರುವಾಯ ಮೋದಿ ಪಕ್ಷದವರಾದ ಸರ ಕಾವಸಜಿ ಜಹಾಂಗೀರ, ಸರ ಫಿರೋಜ ಸೇಟನಾ, ಸಾಂಭಾಯಿ ಇವರಿಗೂ ರಾಜೀನಾಮೆ ಕೊಡುವ ಹೊತ್ತು ಬಂದಿತು. ಏಕೆಂದರೆ- ಬೇರೆಯವರ ಮಾತಿನ ತಿರಸ್ಕಾರವೆಂದರೆ- ತಮ್ಮೆಲ್ಲರ ಅಪಮಾನವೆಂದು ಇವರೂ ರಾಜೀನಾಮೆ ಕೊಡಬಹುದು. ಇದರಿಂದ ಹಿಂದುಸ್ಥಾನದಲ್ಲಿ ಗಾಳಿಯು ಎತ್ತ ಬೀಸುತ್ತದೆಂಬದು ಗೊತ್ತಾಗುವದು. ಇದೇ ಸಮಯದಲ್ಲಿ ಇದೇ ವರ್ತಕ ಸಂಘದವರು ಲಾರ್ಡ ಅಯರ್ವಿನಸಾಹೇಬರ ಕಡೆಗೆ ಡೆಪ್ಯುಟೇಶನ ಕಳಿಸುವದನ್ನು ಗೊತ್ತು ಮಾಡಿದ್ದರು. ಇದಕ್ಕೆ ದರ್ಶನ ಲಾಭ ಕೊಡುವಂತೆಯೂ ಸಾಹೇಬರು ಈ ಮುಂದಾಗಿ ತಿಳಿಸಿದ್ದಾರೆ. ಆದರೆ ಮುಂಬಯಿಯ ಕೃಷ್ಣ ಶಿಷ್ಟಾಯಿಯು ಮುರಿದದ್ದರಿಂದ ಇವರ ಈ ಮಹಾದ ಪ್ರವಾಸದ ಆಯಾಸ ಉಳಿಯಿತು. ಇದೊಂದು ಲಾಭವೇ ಸರಿ.

ಹಾವೇರಿಯಲ್ಲಿ ಈಚಲ ಗಿಡಗಳ ಮೂಲೋತ್ಪಾಟನ

—(೦)—

ಹಾವೇರಿಯಲ್ಲಿಯೂ ಈಚಲ ಗಿಡಗಳ ಕಡಿತದ ಕಾರ್ಯವು ಒಳ್ಳೇ ಉತ್ಸಾಹದಿಂದ ನಡೆದಿದೆ. ದಿನದ ಪ್ರಕಾರ ಕಡಿದ ಹನನವು

ತಾರೀಖು	ಗಿಡಗಳು
೩೧ ಮೇ-೩೦	೨೫೦
೧-೬- ,,	೩೪೩
೨-,,- ,,	೨೩೫
೩-,,- ,,	೭೫

ಗಿಡಗಳನ್ನು ಕಡಿಯುವದಕ್ಕೆ ಸ್ತ್ರೀಯರೂ ಹೋಗುತ್ತಿದ್ದಾರೆಂಬದು ವಿಶೇಷ. ೨ನೇ ತಾರೀಖಿನ ದಿವಸ ಎಂಟು ಮಂದಿ ಸ್ತ್ರೀಯರು ಹೋಗಿದ್ದರು.

ದೇವಗೇರಿ ಕ್ರಾಸಿನಲ್ಲಿಯೂ ಗಿಡಗಳನ್ನು ಕಡಿಯುವದು ಪ್ರಾರಂಭವಾಗಿದೆ.

ವಕೀಲರ ಹೀನ ದೀನ ಅವಸ್ಥೆ

—:(೦):—

ಹಿಬ್ಬ ವಕೀಲರೇ ಹೇಳಿದ ಕರ್ಮಕಥೆ.

—(೦)—

ವಕೀಲರು ಕಾಯದೆಭಂಗದಲ್ಲಿ ಸೇರಬೇಕು

ಪುಣೆಯಲ್ಲಿ ಅಹಮ್ಮದನಗರದ ವಕೀಲರಾದ ಶ್ರೀ. ಗಾಯಕೋವಾಡ ಎಂಬವರ ಭಾಷಣವಾಯಿತು.

ಕೇಜಸ್ವಿಯಾದಂಥ ಕಾಯದೆಭಂಗದಲ್ಲಿ ವಕೀಲರು ಸೇರುವದು ವಿಹಿತವಾದರೂ, ಉದರಪೋಷಣೆಯು ಒಂದು ಚಿಂತೆಯು ಪ್ರಕ್ಷವಾಗಿರುತ್ತದೆ ೧೯೨೦ ರಲ್ಲಾಗುತ್ತಿದ್ದಷ್ಟು ಟೀಕೆಯು ಈಗಾಗುವದಿಲ್ಲ. ವಕೀಲರ ಸತ್ತ್ವಹರಣವು ಅತಿಶಯವಾಗಿಷ್ಟು, ಸತ್ಯಾಗ್ರಹಿಗಳ ಆತಿಥ್ಯ ಸತ್ಕಾರ ಮಾಡುವದಕ್ಕೆ ಸಹ ಹೆದರಿಕೆಯಾಗುತ್ತದೆ. ಸತ್ಯಾಗ್ರಹದ ಸಭೆಗೆ ಹೋಗಲು ಅಂಜಿಕೆ ಬರುತ್ತದೆ. ಜನತೆಯ ದೃಷ್ಟಿಯಿಂದ ಇಂಥವರ ಯೋಗ್ಯತೆಯು ಮಹತ್ತ್ವಮಾಪನದಲ್ಲಿ ಪೂಜೆಗೆ ಬರುತ್ತದೆ.

ಪೂರ್ವಕಾಲದಲ್ಲಿ ಕಾಯದೆ ಮಾಡುವ ಕೆಲಸವು ಋಷಿಗಳ ಕಡೆಗಿತ್ತು. ರಾಜನೀತಿಯ ಕೆಲಸ ಮಾಡುವದು ಪವಿತ್ರವೆಂದು ತಿಳಿಯುತ್ತಿದ್ದರು. ಋಷಿಗಳು ಬರೇ ಕಾಯದೆ ಮಾಡುತ್ತಿದ್ದಿಲ್ಲ. ಅರಸನ ಮೇಲೆ ತಮ್ಮ ವರ್ಚಸ್ಸು ಕೂಡಿಸುತ್ತಿದ್ದರು. ಹಿಂದೂ ಧರ್ಮಶಾಸ್ತ್ರವನ್ನು ಬ್ರಾಹ್ಮಣರು ಬರೆದಿರುತ್ತಾರೆ. ಆಚಾರ ವಿಚಾರ ಮತ್ತು ರೂಢಿಯ ಮುಂದೆ ಅರಸನು ತಲೆಬಾಗಿಸಿ ನಡೆಯುವನು. ಸ್ವತಂತ್ರ ಋಷಿಗಳು ಕಾಯದೆ ಮಾಡಿತರಿದ್ದರು. ರಾಜನು ಅವರ ತಂತ್ರದಿಂದ ರಾಜ್ಯಕಾರಭಾರ ಮಾಡುತ್ತಿದ್ದನು. ರೋಮನ ಇತಿಹಾಸ ನೋಡಿರಿ. ಸಿಸಿರೋನಂಥ ಪ್ರಖ್ಯಾತ ವಕೀಲನು ಸ್ವಾತಂತ್ರ್ಯಪ್ರಿಯನಾಗಿದ್ದನು. ಎಲ್ಲ ಚಳವಳಿಗಳ ಜನಕತ್ವವು ವಕೀಲರ ಕಡೆಗಿದ್ದು, ಅವರೇ ಮುಂದಾಳುಗಳಾಗಿರುತ್ತಿದ್ದರು. ಸ್ವರ್ಣನಾಗರಿಕರೆಂಬ ಸಂಜ್ಞೆಗೆ ಪಾತ್ರರಾಗಿದ್ದರು. ರೋಮ ರಾಜ್ಯದಲ್ಲಿ ವಕೀಲರೇ ಕಾಯದೆಯ ಪಾಯಾ ಹಾಕಿದರು. ಆದರೆ ನಮ್ಮ ದೇಶದ ಪರಿಸ್ಥಿತಿಯು ತೀರ ಭಿನ್ನವಾಗಿರುತ್ತದೆ. ವಕೀಲರು ಶ್ರೇಷ್ಠರೆಂದು ಜನರಲ್ಲಿ ಕಲ್ಪನೆಯಾಗಿರುವದೊಂದೇ ಕ್ಷೇಮ. ಆದ್ದರಿಂದಲೇ ನಮ್ಮ ಸ್ಥಿತಿಯು ತಕ್ಕಮಟ್ಟಿಗೆ ನೆಟ್ಟಗಿರುವದು. ಸದ್ಯ ವಕೀಲರ ದೆಸೆಯಿಂದ ತುಸು ಆನಂದವಿದ್ದರೂ, ಸಹಾನುಭೂತಿಯು ಕಡಿಮೆಯಾಗಿರುತ್ತದೆ. ವಕೀಲರು ಬೇರೆಯವರಂತೆ ದ್ವೇಷಪಡದಿದ್ದದ್ದರಿಂದ ಇವರ ವಿಷಯಕವಾದ ತಿರಸ್ಕಾರವು ಅಧಿಕರಕ್ಕೆ ಹತ್ತಿದೆ.

ಇಂದು ನಾವು ಸ್ವತಂತ್ರರಿಲ್ಲ. ಪಶ್ಚಿಮರ ದೆಸೆಯಿಂದ ನಮ್ಮ ವ್ಯವಸಾಯವನ್ನು ವಕ್ಷಾ

ಕಾಟಕ್ಕೆ ಹಚ್ಚಿರುತ್ತೇವೆ. ಖಟ್ಲೆಯು ಸುಳ್ಳೆಂದು ಪೂರಾ ಗೊತ್ತಿದ್ದರೂ, ಪಕ್ಷಕಾರನ ದೆಸೆಯಿಂದ ಖಟ್ಲೆ ನಡಿಸುತ್ತೇವೆ. ದರೋಡೆಗಾರರನ್ನು ದೋಷಮುಕ್ತ ಮಾಡಿಸುವದಕ್ಕೆ ಪ್ರಯತ್ನಿಸುತ್ತೇವೆ. ಆದರೆ ನಮ್ಮಿಂದ ಸ್ವಾರ್ಥತ್ಯಾಗಿಯನ್ನು ಬಿಡಿಸುವದಕ್ಕಾಗುವದಿಲ್ಲವಲ್ಲ !! ಮೊಟ್ಟಮೊದಲು ಕಾಯದೆಭಂಗದಲ್ಲಿಯೇ ವಕೀಲರ ಸಂಬಂಧವುಂಟಾಗುತ್ತದೆ ನೋಡಿರಿ. ನನ್ನ ಮನೆಯ ಮುಂದೇ ದಿನಾಲು ಸಭೆ ಆಗುತ್ತವೆ. ಪ್ರಾತಃಕಾಲದಲ್ಲಿ ನಗರ ಸಂಕೀರ್ತನೆಯು ನನ್ನ ಮನೆಯ ಮುಂದೇ ಹಾದು ಹೋಗುತ್ತದೆ. ಆದರೆ ಅದರಲ್ಲಿ ನನಗೆ ಸೇರಲಿಕ್ಕಾಗುವದಿಲ್ಲ. ಅದರಲ್ಲಿ ಸೇರಿದರೆ- ನನ್ನ ಕುಟುಂಬ ಪೋಷಣೆಯು ಮೂರ್ತಿಮಂತ ನನ್ನೆದುರಿಗೆ ನಿಲ್ಲುತ್ತದೆ. ಈ ಪ್ರಕಾರ ಸಹಜವಾದ ಅಡಚಣಿಯು ನನ್ನ ಮುಂದೆ ನಿಲ್ಲುತ್ತದೆ. ಸದ್ಯ ವಕೀಲರ ಅವಸ್ಥೆಯು ಸರಕಾರೀ ನೌಕರರಿಗಿಂತ ಹೆಚ್ಚು ಶೋಚನೀಯವಾಗಿರುತ್ತದೆ. ಮೂಲತಃ ನೋಡಿದರೆ- ವಕೀಲರ ಹೊಟ್ಟೆಗೆ ಹಾಕುವಂಥವರು ಪ್ರಜರಾಗಿದ್ದಾರೆ. ಪ್ರಜಾ ಹಕ್ಕುಗಳ ಧ್ವಂಸವಾಗುತ್ತಿರುವಾಗ ಅವರ ಹಕ್ಕುಗಳ ಸಂರಕ್ಷಣೆಗಾಗಿ ನಮ್ಮಿಂದೇನೂ ಆಗುವದಿಲ್ಲೆಂದು ನಿಟ್ಟುಸುರು ಹಾಕುವದು ಶ್ರೇಯಸ್ಕರವಲ್ಲ. ನಾವು ರಾಷ್ಟ್ರರಥ ಸಾಗಿಸುವಂಥವರಾಗಿದ್ದೇವೆ. ಅರಸನನ್ನು ಮಾಡುವಂಥ ಕಿಂಗ ಮೇಕರರಾಗಿದ್ದೆವು. ಆದರೆ ಈಗ ಸರಕಾರದ ಹೆಂಡತಿಯಾಗಿ ಸರಕಾರ ಹೇಳಿದಂತೆ ಪತಿವ್ರತಾಧರ್ಮ ಪಾಲಿಸಬೇಕಾಗುತ್ತದೆ. ಜನರ ಮುಂದೆ ಕರ್ತವ್ಯಚ್ಯುತವೂ, ಕೋರ್ಟಿನಲ್ಲಿ ಒದ್ದಿಕೊಳ್ಳುವದೂ ನಮ್ಮ ಹಣೇಬರಹವಾಗಿದೆ. ಏನಾದರೂ ಪೇಚು ಬಂದು ಸನದು ಎಲ್ಲಿ ರದ್ದಾಗುವದೋ ಎಂಬ ಭಯವಂತೂ ನಮಗೆಲ್ಲರ ಮನಸ್ಸಿನಲ್ಲಿ ಕುದಿಯುತ್ತದೆ. ವಕೀಲರ ದುಃಖಗಳ ಸಂಖ್ಯೆಯು ಅಸಂಖ್ಯವಾಗಿದೆ. ಅದನ್ನು ದೂರ ಮಾಡಿಕೊಳ್ಳಲಿಕ್ಕೇ ಬೇಕು. ಸ್ವಾರ್ಥತ್ಯಾಗ ಮತ್ತು ಸತ್ಯನಿಷ್ಠೆ ಇವೆರಡೇ ಗುಣಗಳ ಮೇಲೆ ನಮ್ಮ ವ್ಯವಸಾಯ ಸಾಗಿಸತಕ್ಕದ್ದು. ಫ್ರಾನ್ಸ, ಅಮೇರಿಕಾ ಮತ್ತು ಬೇರೆ ದೇಶಗಳಲ್ಲಿಯ ವಕೀಲ ಸಂಘಗಳ ನಿಯಮಗಳನ್ನು ತಿಳಿದುಕೊಳ್ಳಿರಿ. ದಬ್ಬಾಳಿಕೆಯಿಂದ ಪ್ರಜಾ ಮೇಲೆ ಹೇರಿದ ಕಾಯದೆಯ ವಿರೋಧ ಮಾಡುವದು ವಕೀಲರ ಕರ್ತವ್ಯಕರ್ಮವಾಗಿರುತ್ತದೆ. ಅಮೇರಿಕೆಯ ಅಬ್ರಾಹಮ ಲಿಂಕನನು ವಕೀಲನೇ ಆಗಿದ್ದನು. ಆತನು ಸತ್ಯಕ್ಕಾಗಿ ತನ್ನ ಹಕ್ಕು ನಡೆಸಿದನು. ಆದ್ದರಿಂದ ನಾವು ದಬ್ಬಾಳಿಕೆಯ ಕಾಯದೆಯನ್ನು ಮುರಿಯಲು ಸಿದ್ಧರಾಗಬೇಕು. ಮತ್ತು ಅದಕ್ಕಾಗಿ ಬರುವ ಪ್ರಾಯಶ್ಚಿತ್ತವನ್ನು ಭೋಗಿಸಲು ಸಿದ್ಧರಾಗಬೇಕು. ಈ ದೃಷ್ಟಿಯಿಂದ ಕಾಯದೆಭಂಗ ಮಾಡಲು ಸಿದ್ಧರಾಗಬೇಕು. ಯೋಗ್ಯ ಕಾಯದೆಯನ್ನು ಅಮಲಿನಲ್ಲಿ ತರಿಸುವದೂ, ಅದಕ್ಕೆ ಬೆಂಬಲ ಕೊಡುವದೂ ವಕೀಲರ ಕರ್ತವ್ಯಕರ್ಮವಾಗಿರುತ್ತದೆ. ಇಂದು ಉತ್ಪನ್ನ ಕಡಿಮೆಯಾಯಿತು. ಕಾರಣ ಪ್ರತಿಯೊಬ್ಬ ಮನುಷ್ಯನು ಸೆರೆ ಕುಡಿಯಬೇಕು. ವಿಲಾಯತಿ ಅರಿವೆ ತೊಡಬೇಕೆಂದು ಕಾಯದೆ ಮಾಡಿದರೆ- ಅದನ್ನು ಮನ್ನಿಸುವರೇನು ? ಇಂಥ ವಿಕ್ಷಿಪ್ತ ಕಾಯದೆಗಳಿಗೆ ತಲೆದೂಗುವದೆಂದರೆ- ದೇಶದ್ರೋಹವಾಗುತ್ತದೆ. ನಾವು ಸರಕಾರದ ನೌಕರರಲ್ಲ ; ವಕೀಲರಿದ್ದೇವೆಂದು ತಿಳಿದೇ ಕಾಯದೆಭಂಗದಲ್ಲಿ ಸೇರತಕ್ಕದ್ದು. ವಕೀಲರು ಇದರಲ್ಲಿ ಸೇರದಿದ್ದರೆ ಚಳವಳಿಯು ಇವರ ದೆಸೆಯಿಂದ ನಿಲ್ಲುವದಿಲ್ಲೆಂಬದನ್ನು ತಿಳಿಯಬೇಕು. ಸೇರದಿದ್ದರೆ- ಅಪಹಾಸ್ಯ ಮಾತ್ರವಾಗುವದು.

ಕಾಂಟ್ರ್ಯಾಕ್ಟರರು ಸರಕಾರೀ ಉಪ್ಪಿಗೆ ಬಹಿಷ್ಕಾರ ಹಾಕಿದರು.

—(೦)—

ಧಾರಸಾನಾದಲ್ಲಿರುವ ಸರಕಾರೀ ಉಪ್ಪನ್ನು ನಾಲ್ಕು ತಿಂಗಳ ತನಕ ಕೊಳ್ಳಬಾರದೆಂದು ಅಲ್ಲಿಯ ದೊಡ್ಡ ದೊಡ್ಡ ಕಾಂಟ್ರ್ಯಾಕ್ಟರರು ಗೊತ್ತುಮಾಡಿ, ಆ ಉಪ್ಪಿಗೆ ಬಹಿಷ್ಕಾರ ಹಾಕಿದ್ದಾರೆ. ಕಿರುಕಳವಾಗಿ ಕೊಂಡು ಬಂಡಿಯಲ್ಲಿ ತುಂಬಿಕೊಂಡು ಹೋಗುವವರನ್ನು ಡೆಂಗರಾಯಲ್ಲಿಯೇ ತರುಬಿ, ಅವರು ಧಾರಸಾನಾಕ್ಕೆ ಹೋಗದಂತೆ ಕಟ್ಟುಮಾಡಿದ್ದಾರೆ.

ಜಂಗಲ ಕಾಂಟ್ರ್ಯಾಕ್ಟರರ ಬಹಿಷ್ಕಾರ.

—(೦)—

ಠಾಣೆ ಜಿಲ್ಹೆಯ ಫಾರೆಸ್ಟದ ಪ್ರಮುಖರಾದ ೭೫ ಜನ ಕಾಂಟ್ರ್ಯಾಕ್ಟರರು ಈಗಿನ ದಬ್ಬಾಳಿಕೆ ಹೋಗಿ ಸ್ವರಾಜ್ಯ ಸಿಗುವ ತನಕ ಫಾರೆಸ್ಟಿನ ಯಾವ ಪದಾರ್ಥವನ್ನೂ ಸವಾಲಿನಲ್ಲಿ ಕೊಳ್ಳತಕ್ಕದ್ದಲ್ಲೆಂದು ಗೊತ್ತು ಮಾಡಿದ್ದಾರೆ. ಇವರ ಇನ್ನೊಂದು ಸಭೆಯು ಬೇಗನೆ ಕಲ್ಯಾಣದಲ್ಲಿ ಸೇರತಕ್ಕದ್ದಿದೆ.

ಅಸೆಂಬ್ಲಿಯಲ್ಲಿ ರಾವುಂಡ ಟೇಬಲ.

—(೦)—

ಜುಲೈ ತಿಂಗಳ ೭ನೆಯ ತಾರೀಖಿನ ದಿವಸ ಅಸೆಂಬ್ಲಿಯು ಸೇರತಕ್ಕದ್ದೆಂದು ಲಾರ್ಡ ಆಯರ್ವಿನ ಸಾಹೇಬರು ಗೊತ್ತು ಮಾಡಿದ್ದಾರೆ. ಇದರ ಆಯುಷ್ಯ ಒಂದೇ ವಾರ. ಇದರಲ್ಲಿ ಮೂರು ದಿವಸಗಳನ್ನು ಸಾಯಮನ ರಿಪೋರ್ಟ ಮತ್ತು ರಾವುಂಡಟೇಬಲದ ಬಗ್ಗೆ ವಿಚಾರ ಮಾಡಬೇಕೆಂದು ಗೊತ್ತು ಮಾಡಿದ್ದಾರೆ.

ಮಾಫೀ ಸಾಕ್ಷಿದಾರನು ತಿರುಗಿ ಬಿದ್ದನು.

—(೦)—

ಲಾಹೋರಿನಲ್ಲಿ ಮಾಫೀ ಸಾಕ್ಷಿದಾರನಾಗಿದ್ದ ರಾಮಶರಣನು ಕೋರ್ಟಿನ ಮುಂದೆ ಒಂದು ಪತ್ರಕವನ್ನಿಟ್ಟನಷ್ಟೇ; ಈತನು ಈಗ ಸರಕಾರದ ವಿರುದ್ಧ ತಿರುಗಿ ನಿಂತು, ತನಗೆ ಹೀಗೆ ಸಾಕ್ಷೀ ಹೇಳಬೇಕೆಂದು ಯುರೋಪಿಯನ್ನ ಪೋಲೀಸ ಸಾಹೇಬನೂ, ಇನ್ಸಪೆಕ್ಟರ ಅಲಾಹುಲ್ಲಾ ಸಾಹೇಬನೂ ಕಲಿಸಿಕೊಟ್ಟರು. ಈ ಮೊದಲು ತಾನು ಕೊಟ್ಟ ಜವಾಬು ಪೂರಾ ಸುಳ್ಳಿರುತ್ತದೆಂದು ಜಜ್ಜರ ಮುಂದೆ ಜವಾಬು ಕೊಟ್ಟಿದ್ದಾನೆ

ಮೇ ೧೫ನೇ ತಾರೀಖಿನಿಂದ ವಿಲಾಯತಿಯ ಬಟ್ಟೆಗೆ ಬಹಿಷ್ಕಾರ

—(೦)—

ಮೇ ತಿಂಗಳ ೧೬ನೇ ತಾರೀಖಿನೊಳಗಾಗಿ ವಿಲಾಯತಿಯಿಂದ ಹೊರಟ ಅರಿವೆಯನ್ನು ಮುಂಬಯಿಯ ಪರದೇಶಿ ಅರಿವೆಯ ವ್ಯಾಪಾರಸ್ಥರು ತಕ್ಕೊಳ್ಳಬೇಕು; ಅನಂತರ ಕಳಿಸಿದ ಮಾಲನ್ನು ಸಹಸಾ ತಕ್ಕೊಳ್ಳತಕ್ಕದ್ದಲ್ಲೆಂದು ಶ್ರೀ. ಬಾಲುಭಾಯಿ ದೇಸಾಯಿಯವರ ಮಧ್ಯಸ್ಥಿಕೆಯಿಂದ ರಾಜಿಯಾಯಿತು. ಈಗಿರುವ ವಿಲಾಯತಿಯ ಮಾಲನ್ನು ೬ ಮಾಸಗಳೊಳಗಾಗಿ ತೀರಿಸಿ ಬಿಡಬೇಕೆಂದೂ ಗೊತ್ತಾಗಿದೆ.

ಚಿಕ್ಕೇರೂರ ಪತ್ರ.

ಇಲ್ಲಿಗೆ ಬುಧವಾರ ದಿವಸ ಶ್ರೀ. ಹುಚ್ಚಣ್ಣನವರ ತಂತಿ ಬಂತು. ಅಂದೇ ಸಾಯಂಕಾಲದಲ್ಲಿ ಮ. ನಾಬಜಿ ಮಂಡಿ ಎಂಬ ಮುಸಲಮಾನ ಗೃಹಸ್ಥರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಮರುದಿವಸ ಊರ ಜನರು ಸಂಪೂರ್ಣ ಹರತಾಳಮಾಡಿದರು. ಊರ ಪ್ರಮುಖರಲ್ಲಿ ಶ್ರೀ ವೀರಪ್ಪ ಎಣ್ಣೆ ಭಿಸ್ತಪ್ಪಾ ನಾಡಿಗೇರ ರುದ್ರಪ್ಪಾ, ವೀರಪ್ಪ ದಂಡೂರ ಮೊದಲಾದವರು ಒಕ್ಕಟ್ಟಿನ ಕಟ್ಟಿಂಬ ವಿಷಯದ ಮೇಲೆ ಭಾಷಣಮಾಡಿದರು. ಮತ್ತು ಕೆಲ ಪ್ರಮುಖರನ್ನು ಕೂಡಿ ಮಾಲಕಿಯ ತೋಟಕ್ಕೆ ಹೋಗಿ ಸುಮಾರು ೭೫ ಶೇಂದೀ ಗಿಡಗಳನ್ನು ಕಡಿದರು. ಅಂದು ಶ್ರೀ ಹೊಸಮನಿಯ ಪಂಪಣ್ಣನವರ ಆಗಮನವೂ ಆಯಿತು. ಅವರು ಸರಕಾರದ ಅನ್ಯಾಯಗಳನ್ನು ಸರಸವಾಗಿ ವರ್ಣಿಸಿದರು.

ಧಾರವಾಡ ತಾಲೂಕ ಮರೆವಾಡದ ಸ್ತ್ರೀಯರು ಕಹಳೆ, ರಣಹಲಗೆಯನ್ನು ಬಾರಿಸುತ್ತ ಉತ್ಸವದಿಂದ ಹೋಗಿ, ಅನೇಕ ಗಿಡಗಳನ್ನು ಸಂಭ್ರಮದಿಂದ ಕೆಡವಿ ಮನೆಗೆ ಬಂದರು.

R. N. ಠ 1445

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಸಕ್ರಿಶಕೇರಿ.

ವರ್ಷ ೨೧) ಧಾರವಾಡ ಶನಿವಾರ ತಾರೀಖು ೭ನೇ ಜೂನ ೧೯೩೦ (ಸಂಚಿಕೆ ೧೩೯

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ಶುದ್ಧ ೧೧

ಬ್ಯಾಡಗಿಯ ಬಂಟತನ

—:–*–:—

ಬ್ಯಾಡಗಿಯು ಕಾಯದೆಭಂಗದ ಚಳವಳಿಯು ಲ್ಲಿ ಮುಂದೆ ಹೋಗಿದೆ. ಅದರ ಏಕೆಯೂ ಆಳರ ರ ಪ್ರೇಮಿಗಳಿಂದ ಅಲ್ಲಿಯ ಶ್ಯಾನಿಟರಿ ಇನ್ಸಪೇಕ್ಟರರಿಗೂ ಒಡೆಯಿತು. ಶ್ರೀ ಹಣಮಂತ ಮೇಲಪ್ಪ ಕ್ಯಾತಾರಿಯವರು ಶ್ಯಾನಿಟರಿ ಇನ್ಸಪೇಕ್ಟರರಿದ್ದರು. ನೀವು ರಾಜಕೀಯ ಚಳವಳಿಯಲ್ಲಿ ಸೇರಿ ಮ್ಯುನಿಸಿಪಾಲಿಟಿಗೆ ಕೊಡತಕ್ಕಂಥ ಕರ ಬಾಕಾತಿಯನ್ನು ಕೊಡಬೇಡಿರೆಂದು ನಾಗರಿಕರಿಗೆ ಬೋಧ ಮಾಡುತ್ತೀರೆಂದು ಇವರ ಮೇಲೆ ಆರೋಪ ಹೊರಿಸಿ, ಇವರನ್ನು ಕೆಲಸದಿಂದ ದೂರ ಮಾಡಿದ್ದಾರೆ.

ಬ್ಯಾಡಗಿಯಲ್ಲಿ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನಿ ಹಚ್ಚಬೇಕೆಂಬ ದೊಡ್ಡ ವಾದನೆದ್ದಿದೆ. ಅಧ್ಯಕ್ಷ ಮೊದಲಾದವರು ಆಳರಸರ ಪಕ್ಷದವರಾಗಿದ್ದಾರೆ. ನಿಶಾನೆ ಹಚ್ಚಿಸಿಬಿಡಬೇಕೆಂದು ಊರವರು ಪಂಥಗಟ್ಟಿದ್ದಾರೆ. ಮ್ಯುನಿಸಿಪಾಲಿಟಿಯವರು ಒಂದು ತಿಂಗಳಲ್ಲಿ ರಾಷ್ಟ್ರೀಯ ನಿಶಾನೆಯನ್ನೇರಿಸದಿದ್ದರೆ– ಮನಪಟ್ಟಿ, ತಂಬಾಕದ ಫೀ ಮತ್ತು ಚಹಾದ ಅಂಗಡಿಗಳ ಟ್ಯಾಕ್ಸ ಕೊಡಬಾರದೆಂದೂ, ಈ ಬಗ್ಗೆ ಸತ್ಯಾಗ್ರಹ ಮಾಡಬೇಕೆಂದೂ ನಾಗರಿಕರ ಪ್ರಚಂಡ ಸಭೆ ಕೂಡಿ, ಠರಾವು ಪಾಸಾಗಿರುತ್ತದೆ. ಈ ಠರಾವಿಗ ಶ್ರೀ ಕ್ಯಾತಾರಿಯವರೇ ಕಾರಣರೆಂದು ಮ್ಯುನಿಸಿಪಾಲಿಟಿಯವರು ಇವರನ್ನು ಮನೆಗೆ ಕಳಿಸಿದ್ದಾರೆ.

ಶ್ರೀ ಕ್ಯಾತಾರಿಯವರನ್ನು ಬರತರ್ಫ ಮಾಡುವದರಿಂದ, ಮ್ಯುನಿಸಿಪಾಲಿಟಿಯು ಮುಖ್ಯ ಬೇನೆ ಹೋದಂತಾಗಲಿಲ್ಲ. ನಿಶಾನೆ ಹಚ್ಚುವ ಹಾಗು ಜನರು ಕರಗಳಂದಾಯ ಕೊಡಬಾರದೆಂಬುವ ಪ್ರಶ್ನಗಳು ಹಾಗೇ ಉಳಿದವು. ಶ್ರೀ ಕ್ಯಾತಾರಿಯವರು ಈಗ ಸ್ವತಂತ್ರರಾದರು. ಅವರು ಕರಕಂದಾಯ ಕೊಡಬಾರದೆಂಬ ಹೆಚ್ಚಾಗಿ ಚಳವಳಿ ಎಬ್ಬಿಸಬಹುದು. ಇವರು ಒಂದು ವೇಳೆ ಸುಮ್ಮನೆ ಕೂತರೂ, ಇವರನ್ನು ವಿನಹಕಾರಣ ಬರತರ್ಫ ಮಾಡಿದ ಬಗ್ಗೆ ಊರವರು ಟ್ಯಾಕ್ಸ ಕೊಡಬಾರದೆಂದು ಸತ್ಯಾಗ್ರಹದ ಪ್ರಚಂಡ ಕೋಲಾಹಲವೆಬ್ಬಿಸಬಹುದು. ಪರಕೀಯರಾದ ಜೆಲ್ಲೆಯ ಕಲೆಕ್ಟರಂಥವರೇ ಬಹು ಶಾಂತ ಮತ್ತು ಉದಾತ್ತ ಭಾವನೆಯಿಂದ ಆಡಳಿತೆ ನಡಿಸಿದ್ದನ್ನು ಬ್ಯಾಡಗಿಯ ಅಧ್ಯಕ್ಷರು ಕಂಡುಕೊಂಡು ಅವರಂತೆ ತಾವೂ ವರ್ತಿಸಿ, ಶ್ರೀ ಕ್ಯಾತಾರಿಯವರನ್ನು ಕೆಲಸಕ್ಕೆ ತಕ್ಕೊಂಡು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿ, ಊರನ್ನು ಶಾಂತಮಾಡುವ ಶ್ರೇಯಸ್ಸು ತಕ್ಕೊಳ್ಳುವರೆಂದು ಆಶಿಸುತ್ತೇವೆ.

ವ್ಹೋರ್ಲಿ ಸತ್ಯಾಗ್ರಹಿಗಳಿಗೆ ಬಡತ

—(೦)—

ಮುಂಬಯಿಯಲ್ಲಿರುವ ವ್ಹೋರ್ಲಿಯಲ್ಲಿ ಸತ್ಯಾಗ್ರಹಿಗಳೆನ್ನಿಟ್ಟಿದ್ದಾರಷ್ಟೇ, ಇಲ್ಲಿ ಇವರು ಸಿಕ್ಕಂತೆ ಓಡಾಡಬಾರದೆಂದು ಸುತ್ತಲು ವಿದ್ಯುತ್ತಿನ ತಂತೀ ಹಾಕತೊಡಗಿದರು ಹತ್ತಿರವೇ ಇದ್ದ ಚಾಳಿನ ಸ್ತ್ರೀಯರು ಇದಕ್ಕೆ ಅಡ್ಡೀ ಮಾಡಲು– ಪೋಲೀಸರು ೯ ಇರಿಗೆ ಅಲ್ಲಿಂದ ಎದ್ದು ಹೋಗಲಿಕ್ಕೆ ಹೇಳಿದರು ಸ್ತ್ರೀಯರು ಸತ್ಯಾಗ್ರಹ ಮಾಡಿ ಅಲ್ಲಿಯೇ ಕೂಡ್ರಲು, ಸೈನಿಕರು ಇವರನ್ನು ಅಮಾತ ಎತ್ತಿ, ದೂರ ವೈದರು ಈ ವರ್ತಮಾನ ಕೇಳಿ, ಪೋಲೀಸ ಕಮೀಶನರರಾದ ಮೆ. ಹೇಲಿಸಾಹೇಬರು ಸ್ವತಃ ಬಂದು, ಇವರಿಗೆ ದೂರ ಸರಿಯಲಿಕ್ಕೆ ಹೇಳಿದರು. "ಇದು ನಮ್ಮ ಸ್ಥಳ, ಸ್ವತಃ ಗವ್ಹರ್ನರ ಬಂದರೂ, ನಾವು ಏಳತಕ್ಕವರಲ್ಲೆಂದು" ಸ್ತ್ರೀಯರು ಗಟ್ಟಿಳ್ಳತನದ ಉತ್ತರ ಕೊಟ್ಟರು. ಆಗ ಸೈನಿಕರು ಇವರನ್ನು ಪುನಃ ಅಮಾತ ಎತ್ತಿ, ದೂರ ವೈದರು ಮತ್ತು ಇತ್ತ ಕೂಲಿಕಾರರು ತಂತೀ ಹಾಕಿದರು

ಇದು ಬಾದಶಹರ ವರ್ಧಂತಿಯ ದಿವಸವಾಯಿತು. ಸತ್ಯಾಗ್ರಹಿಗಳು ಅಂದು ಪ್ರಾತಃಕಾಲದಲ್ಲಿ ಕರೇ ನಿಸಾನೆಗಳಿಂದ ಜನ್ಮದ ಸಮಾರಂಭ ಮಾಡಿದರು. ಇದೊಂದು ಸಿಟ್ಟು ಅಧಿಕಾರಸ್ಥರ ಹೊಟ್ಟೆಯಲ್ಲಿತ್ತು. ಪೋಲೀಸರೂ, ಸೈನಿಕರೂ ಸ್ತ್ರೀಯರನ್ನು ಎತ್ತಿಕೊಂಡು ಹೋಗುವಾಗ ಇವರು ಎರಡೂ ಸಾರೆ ಅಡ್ಡೀ ಮಾಡಿದರು. ಪೋಲೀಸರೂ ದಂಡಿನವರೂ ಸೇರಿ ಎರಡೂ ಸಾರೆ ಇವರ ಪೂರಾ ಸಮಾಚಾರ ತಕ್ಕೊಂಡರು. ಈ ಲಾಠೀ ಪ್ರಯೋಗದಿಂದ ೭೫ ಜನರು ಘಾಯವಾಗಿದ್ದಾರೆ. ಕಾಂಗ್ರೆಸದ ಆಸ್ಪತ್ರಿಯಲ್ಲಿ ೫೮ ಮತ್ತು ಜೆ ಜೆ. ಆಸ್ಪತ್ರಿಯಲ್ಲಿ ೨೦ ಜನರು ಆರೈಕೆ ಹೊಂದುತ್ತಿದ್ದಾರೆ.

ಕರಾಚಿಯಲ್ಲಿ ಬಾದಶಹರ ಹುಟ್ಟಿದ ದಿವಸದ ದೆಸೆಯಿಂದಾಗುವ ಸೈನ್ಯದ ಕವಾಯತು ನೋಡಲಿಕ್ಕೆ ಯಾರೂ ಹೋಗಬಾರದೆಂದು ಕಾಂಗ್ರೆಸದವರು ತೆಗೆದ ಜಾಹೀರಾತಿನ ಪ್ರಕಾರ ಒಬ್ಬನೂ ಅತ್ತ ಹಣಕಿ ಹಾಕಲಿಲ.

ಧಾರಾಸಾಣದಲ್ಲಿ ಮವಾಳರಿಗೆ ಮಂಗಳಾರತಿಯಾಯಿತು.

——(೦)——

ಧಾರಾಸಾಣದಲ್ಲಿ ನಡೆದಿರುವ ಪೋಲೀಸರ ಭಯಂಕರ ಅತ್ಯಾಚಾರಗಳನ್ನು ನೋಡಲೋಸುಗ, ಸರ್ವಂಟ ಆಫ್ ಇಂಡಿಯಾ ಸೊಸಾಯಿಟಿಯ ಶ್ರಿ ದೇವಧರ, ಠಕ್ಕರ ಮತ್ತು ಸುಪ್ರಸಿದ್ಧ ಲೇಖಕರಾದ ಶ್ರೀ ಕೆ. ನಟರಾಜನ ಹಾಗು ಮುಂಬಯಿ ಸ್ಮಾಲಕಾಜ ಕೋರ್ಟಿನ ಜಡ್ಜರಾಗಿದ್ದ ಮೆ. ಹುಶೇನ ತಯಬಜೆಯವರು ಹೋಗಿ, ಧಾರಸಾಣದಿಂದ ದೂರ ಅರ್ಧ ಮೈಲಿನ ಮೇಲೆ ನಿಂತರು. ಆದರೂ ಪೋಲೀಸ ಅಧಿಕಾರಿಗಳು ಇವರಿದ್ದಲ್ಲಿಗೆ ಬಂದು, ನೀವು ನಾಲ್ವರಿಗಿಂತ ಹೆಚ್ಚು ಜನರಾಗಿದ್ದೀರಿ. ಗೈರ ಕಾಯದೇಶೀರ ಮಂಡಲವಾಗುತ್ತೀರಿ ಹೊರಟು ಹೋಗಿರೆಂದು ಹೆದರಿಸಿ, ಹಿಂದಕ್ಕೆ ಅಟ್ಟಿ ಹಾಕಿದರು. ಶ್ರೀ ದೇವಧರರು ಸಹಕಾರದ ದೀವಟಿಗೆ ಹಿಡಿದವರಿದ್ದು, ಇಂಥವರ ಪಾಲಿಗೂ ಪೋಲಿಸರ ಅಸಹಕಾರದ ಧಮಕಿ ಬಂದದ್ದೊಂದು ವಿಹಿತವೇ ಆಯಿತು. ಪರದಾಸ್ಯದಿಂದ ಎಂಥ ಅಪಮಾನವಿರುತ್ತದೆಂಬದನ್ನು ಇನ್ನಾದರೂ ಇವರು ತಿಳಿಯಲೆಂದರಾಯಿತು.

ಮುಂಬಯಿಯಲ್ಲಿ ಮುಸಲಮಾನರ ಮೇಲೆ ಹಿಂದೂ ಜನರ ಪುಷ್ಪವೃಷ್ಟಿ ಮೈಲುದ್ದ ಮೆರವಣಿಗೆ.

—(೦)—

ಮುಂಬಯಿಯ ಮುಸಲಮಾನರೂ ಕಾಂಗ್ರೆಸ ಸೇರಿದರು. ಕಬ್ಬಿಣ, ಕಾಜು, ಕಸ್ತಡಿ, ಕಾಗದ, ಟ್ರಂಕ, ಮೊದಲಾದ ವ್ಯಾಪಾರ ಮಾಡುತ್ತಿರುವ ಮುಸಲಮಾನ ವರ್ತಕರು ತಾವು ಕಾಂಗ್ರೆಸ ಸೇರಿದಂತೆ ಜಾಹೀರ ಮಾಡಲು ಪ್ರಚಂಡ ಮೆರವಣಿಗೆ ತೆಗೆದರು. ಮೆರವಣಿಗೆಯಲ್ಲಿ ಲಕ್ಷ ಜನರು ಸೇರಿದ್ದರು. ಒಂದು ಮೈಲು ಉದ್ದವಾಗಿತ್ತು. ದಾರಿಗುಂಟ ಹಿಂದೂ ಜನರು ಇವರ ಮೇಲೆ ಪುಷ್ಪವೃಷ್ಟಿಮಾಡಿದರು.

ಶ್ರೀಮಂತ ಸ್ತ್ರೀಯರ ಪಿಕೆಟಿಂಗ.

——(೦)——

ಅಹಮದಾಬಾದಿನಲ್ಲಿ ಶ್ರೀಮಂತ ಸ್ತ್ರೀಯರು ಸ್ವಯಂಸೇವಿಕೆಯರಾಗಿ ಗಡಂಗ ಮತ್ತು ವಿಲಾಯತಿಯ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸುವರು. ಮುಂದೆ ಇವರೆಲ್ಲರೂ ಎ ಕ್ಲಾಸ ಕೈದಿಗಳಾಗುವರು.

ಧಾರವಾಡದಲ್ಲಿ ರಾಜದ್ರೋಹದ ಪುಸ್ತಕಗಳ ವಾಚನ.

—೦—

ನಾಗಪೂರ, ಕಲಕತ್ತೆ, ಪುಣೆಯಂತೆ ಈ ಊರಲ್ಲಿಯೂ ಮೊನ್ನಿನ ದಿವಸ ಕೂಡಿದ ಸಭೆಯಲ್ಲಿ ಇಂಗ್ರೇಜಿ ಸರಕಾರದಿಂದ ಬಹಿಷ್ಕೃತವಾದಂಥ ರಾಜದ್ರೋಹದ ಪುಸ್ತಕಗಳನ್ನು ಓದಿದರು. ಈ ಪುಸ್ತಕಗಳು ಬಜಾರಲ್ಲಿಯೂ ಇರಬಾರದು. ಇದ್ದರೆ- ಶಿಕ್ಷೆ ಎಂದು ...ಯದೆ ಇದ್ದರೂ, ಇವು ಎಲ್ಲಿ ಬೇಕಾದಲ್ಲಿರುತ್ತವೆಂಬದೊಂದು ಆಶ್ಚರ್ಯ. ಇವುಗಳಲ್ಲಿ "ಗುಲಾಮಗಿರಿಯಲ್ಲಿರುವ ಹಿಂದುಸ್ತಾನ ಮತ್ತು ದೇಶಿ ದುಂದುಮಿ ಎಂಬೆರಡು ಪುಸ್ತಕಗಳೊಳಗಿನ ಸರಕಾರ ದೃಷ್ಟಿಯಿಂದ ಒಳ್ಳೇ ರಾಜದ್ರೋಹವೆನಿಸುವ ಭಾಗಗಳನ್ನೋದಿ ತೋರಿಸಿದರು. ಪೋಲೀಸರು ಆಗಿಂದಾಗ ಪುಸ್ತಕನ್ನು ಜಪ್ತ ಮಾಡಬಂದರೆ ಹಾಗೆ ಮಾಡಗೊಡಬಾರದೆಂದು ಸುತ್ತಲು ಸ್ವಯಂಸೇವಕರ ಗುಪ್ತ ಬಳ್ಳಿಯನ್ನು ಮುಂದಾಗಿ ಕಟ್ಟಿದ್ದರು,

---

ಪೋಲೀಸ ಮತ್ತು ದಂಡಿನವರು ಖಾದಿ, ಖಾದಿ ಟೊಪ್ಪಿಗೆ ಖಾದೀ ಸಮವಸ್ತ್ರ ಸುಟ್ಟರು.

ಪೋಲೀಸರು ಡೆರಾ ಇಸ್ಮಾಯಿಲಖಾನದಲ್ಲಿ ...ಕಿದ ಗುಂಡು ಮತ್ತು ಲಾರಿಯಿಂದ ಇನ್ನೂರು ...ನರು ಘಾಯವಾಗಿದ್ದಾರೆ. ಊರ ಮಧ್ಯದಲ್ಲಿರುವ ಕೋಟಿನಲ್ಲಿ ಪೋಲೀಸರೂ ದಂಡಿನವರೂ ಸೇರಿ, ೬೦ ಮೊಳ ಖಾದಿ, ೪೦ ಜನ ಹ್ವಾಲಂಟಿಯರರ ಖಾದಿಯ ಯುನಿಫಾರ್ಮ ಮತ್ತು ಇನ್ನೂರು ಟೊಪ್ಪಿಗೆಗಳನ್ನು ಸುಟ್ಟರು. ಆದರೂ ಜನರು ಶಾಂತವೃತ್ತಿಯಿಂದಿದ್ದರು.

ಮುಯ್ಯಕ್ಕೆ ಮುಯ್ಯ-

ಗುಂಡು ಹಾರಿದರೂ, ಜನರು ಕರ್ತವ್ಯಚ್ಯುತರಾಗಲಿಲ್ಲ. ಪದ್ಧತಿ ಪ್ರಕಾರ ವಿಲಾಯತಿ ಅರಿವೆ ಹಾಗು ಸಾಹೇಬರ ಟೊಪ್ಪಿಗೆಗಳನ್ನು ಅಗ್ನಿ ನಾರಾಯಣನಿಗೆ ಆಹುತಿ ಕೊಟ್ಟರು.

ಸೊಲ್ಲಾಪೂರಕ್ಕೆ ಹೋದ ಹತ್ತು ಹ್ವಾಲಂಟಿಯರರ ಪತ್ತೆ ಇಲ್ಲ.

—(೦)—

ಸಾತಾರಿಯ ಶ್ರೀ. ಏಕಬೋಟೆಯವರ ನೇತೃತ್ವದಲ್ಲಿ ೧೫ ಜನರು ಸೊಲ್ಲಾಪೂರದ ರಾಷ್ಟ್ರೀಯ ಸೇನೆಯ ಕಾಯದೆಭಂಗ ಮಾಡಲಿಕ್ಕೆ ಹೋದರು. ...ರಲ್ಲಿ ಐವರನ್ನು ಪುಣೆಗೆ ಹಿಂದಕಟ್ಟಿದರು. ಉಳಿದ ಹತ್ತು ಜನರೆಲ್ಲಿದ್ದಾರೆಂಬ ಪತ್ತೆ ಇಲ್ಲ.

ಹೆಸರು ನಿಮಕಲಾಲ ಮೀಠಾಲಾಲ !!

—(೦)—

ವಾಡಾಲದಲ್ಲಿಯ ಆರೋಪಿಗಳ ವಿಚಾರಣೆ ನಡೆದಾಗ ಮ್ಯಾಜಿಸ್ಟ್ರೇಟರು ಇವರಿಗೆ ಹೆಸರು ಕೇಳಲು ಕೆಲವರು ತಮ್ಮ ಹೆಸರು ನಿಮ್ಮಕಲಾಲ (ಉಪ್ಪು) ಮೀಠಾಲಾಲ (ಉಪ್ಪು) ಎಂದೂ, ಕೆಲವರು ವಂದೇ ಮಾತರಮ್ ಎಂದೂ ಉತ್ತರಕೊಟ್ಟರು.

ಮೊಹರಮದ ರಜೆ

ಮೊಹರಮದ ದೆಸೆಯಿಂದ ವಾರ್ಷಿಕ ಪದ್ಧತಿಪ್ರಕಾರ, ವಿಜಯದ ನಿತ್ಯ ಪತ್ರಿಕೆಯು ಆದಿತ್ಯವಾರ ಮತ್ತು ಸೋಮವಾರ ಈ ಎರಡು ದಿವಸ ಪ್ರಕಟಿಸಲ್ಪಡಲಾರದು.

ನೋಟೀಸು

ಗೂಳಪ್ಪಾ ತಂದಿ ರುದ್ರಪ್ಪಾ, ಉಳ್ಳಾಗಡ್ಡಿ, ಸಾ|| ಅಂಣ್ಣೀಗೇರಿ ಪತ್ತೆ ಸೇಕಾರ ಓಣಿ ಇವರಿಗೆ-

ಕೆಳಗೆ ಸಹಿ ಮಾಡಿದವಳು ಈ ನೋಟೀಸಿನಿಂದ ತಿಳಿಸುವದೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ಮದುವೆಯಾದ ನಂತರ ನನ್ನ ನಿನ್ನ ಬಾಳ್ವೆ ೨-೩ ವರ್ಷ ಸುರಳೀತ ರೀತಿಯಿಂದ ಸಾಗಿ ಈಗ ಒಂದೂವರಿ ೧|| ವರ್ಷದ ಹಿಂದೆ ಎರಡನೇಯವರ ಮಾತುಕೇಳಿ ನನ್ನ ಮೇಲೆ ಅಪವಾದ ಕೊಟ್ಟು ನನ್ನ ಮೈಮೇಲಿನ ದಾಗೀನೆ ವಗೈರೆ ಯಾವತ್ತೂ ಕಸಕೊಂಡು ಉಟ್ಟ ಸೀರೀಲೆ ನನ್ನ ತವರ ಮನೆಗೆ ಕಳಿಸಿಹೋದಿ ನಾನು ಇವತ್ತಿನವರೆಗೂ ನನ್ನನ್ನು ಕರಕೊಂಡು ಹೋದಾನು ಅಂತಾ ದಾರೀ ನೋಡಿದೆ ನೀನು ನನ್ನನ್ನು ಕರಕೊಂಡು ಹೋಗದೆ ಮೊನ್ನೆ ಅಂದರೆ ೨-೩ ತಿಂಗಳ ಕೆಳಗೆ ಪುನಃ ಮತ್ತೊಂದು ಬೇರೆ ಲಗ್ನ ಮಾಡಿಕೊಂಡಿ ಅಂತಾ ತಿಳಿಯಿತು ಕಾರಣ ಈ ನೋಟೀಸು ಕೊಡುವ ಭಾಗ ಬಿತ್ತು ಈಗ ನೀನು ನನ್ನನ್ನು ಕರಕೊಂಡು ಹೋಗಿ ಸುರಳೀತ ಪ್ರಪಂಚ ಮಾಡಿಸಿಕೊಳ್ಳುವ ಇಚ್ಛೆ ಇದ್ದರೆ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಬಂದು ನನ್ನನ್ನು ಕರಕೊಂಡು ಹೋಗಬೇಕು ಜರ ನೀನು ಬಾರದಿದ್ದರೆ ಇದೇ ನೋಡಚೀಟಿ ಅಂತಾ ತಿಳಿದು ಬೇರೊಬ್ಬ ಗಂಡನನ್ನು ಉಡಿಕೀ ಆಗುವೆನು ಆನಂತರ ನನ್ನ ಮೇಲೆ ಹಾಗೂ ನನ್ನ ಉಡಕೀ ಗಂಡನ ಮೇಲೆ ನಿನ್ನದು ಯಾವ ತರದ ಹಕ್ಕು ನಡಿಯಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸು ಸಹಿ ತಾ|| ೫-೬-೩೦

ಸಹಿ ಈರವ್ವಾ ಕೋಂ ಗೂಳಪ್ಪಾ ಉಳ್ಳಾಗಡ್ಡಿ

ನೋಟೀಸು.

ರಾ|| ಧರಮವ್ವಾ ಕೋಂ ಫಕೀರಪ್ಪಾ ಮಾಳಪ್ಪನವರ ಸಾ|| ಕುಸಲಾಪೂರ ತಾ|| ಪರ್ಸಗಡ ಈಕಿಗೆ-

ಕೆಳಗೆ ಸಹಿ ಮಾಡಿದವಳಿಂದ ತಿಳಿಸೋದೇನಂದರೆ ನನ್ನ ಮೃತ ತಂದಿ ಫಕೀರಪ್ಪಾ ಈತಗೆ ಗಂಡ ಸಂತತಿಯಿಲ್ಲದೆ ನಾನೊಬ್ಬಳೇ ಮಗಳು ಇರೋದರಿಂದ ತನ್ನ ಸ್ಥಾವರ ಜಂಗಮ ಆಸ್ತಿ ನನಗೆ ಕೊಟ್ಟು ನನ್ನ ಹೆಸರಲೆ ಕಾಗದ ಬರಕೊಟ್ಟಿರುತ್ತಾನೆ. ನಾನು ವ ನನ್ನ ತಾಯಿ ಲಕ್ಷ್ಮವ್ವಾ ಇಬ್ಬರೇ ಇರತೇವೆ ನೀನು ನನ್ನ ಮಗಳು ಇರೋದರಿಂದ ನಿನ್ನ ಕರಿಸಿದ್ದೆ ನಿನ್ನನ್ನು ಮನಿಯಲ್ಲಿ ಇಟ್ಟು ನಾನು ಊರಿಗೆ ಹೋದೆ ನಾನು ಬರುವದರೊಳಗೆ ನನ್ನ ಮುಪ್ಪಿನ ತಾಯಿಗೆ ಭುಲತಾಪಕೊಟ್ಟು ವಂದು ಒಕ್ಷೀಸಪತ್ರ ಅಂತ ಬರಸಿಕೊಂಡು ಮನಿಯಲ್ಲಿಯ ನನ್ನ ಮಾಲು

೧ ಭಂಗಾರದ ಶ್ರಿಂಗಾರ ಸರಾ	ಕಿ|| ರೂ.	೩೦
,, ಉಂಗರ ೧ ವ ಬಾವಲಿ ೧	ಕಿ|| ರೂ.	೨೦
,, ಗುಂಡಿನ ಟೀಕಿ	ಕಿ|| ರೂ.	೩೦
,, ಬೆಳ್ಳಿ ತೋಳಬಂದಿ ಜೋಡ	ಕಿ|| ರೂ.	೨೦
ಕೂಸಾ ಅಂಚಿನ ಧೋತರ ೧	ಕಿ. ರೂ.	೧೦
ಭಂಡಿಯ ವ ಗಳೇದ ಸಾಮಾನಗಳು	ರೂ.	೨೦
ಹೊರಸಾ ಕಲ್ಲಿನ ಬಚ್ಚಲ ವ ಕಲ್ಲುಗಳು	ರೂ.	೨೦
ಹತ್ತಿ ಮಾರ ವೈದಾ ಪಾಯಿ		೪೦
	ಅಂತು ರೂ.	೧೯೦

ಮೇಲೆ ಬರೆದ ಪ್ರಕಾರ ಮಾಲು ಚಕಡಿ ಮೇಲೆ ಹೇರಕೊಂಡು ಗಂಡನ ಮನೆಗೆ ಹೋಗಿ ಕೂತೀದಿ ನಾನು ಊರಿಂದ ಬಂದಮೇಲೆ ನೀನು ಮಾಡಿದ ಕಂತ್ರಾಟ ನನಗೆ ತಿಳಿಯಿತು ನೀನು ಬಂದು ಭೆಟಿ ಆಗು ಅಂತಾ ಹೇಳಿಕಳಿಸಿದರೆ ಬರವಲ್ಲಿ ಮಾರಿ ತಪ್ಪಿಸತೀದಿ ಕಾರಣ ಈ ನೋಟೀಸು ಕೊಡುವ ಭಾಗ ಬಿತ್ತು.

ನನ್ನ ತಂದಿ ಇದ್ದಾಗ ನನ್ನ ತಾಯಿ ಸಮ್ಮತಿಯಿಂದ ತನ್ನ ಆಸ್ತಿ ಬರಕೊಟ್ಟಿರತಾನೆ ಯಾವತ್ತಕ್ಕೂ ಸಂಪೂರ್ಣ ಮಾಲಕಳು ಇರುತ್ತೇನೆ ತಾಯಿ ಸಂರಕ್ಷಣೆ ನಾನು ಮಾಡತೇನೆ ನನ್ನ ತಾಯಿ ನಿನಗೆ ಬರಕೊಡಲಿಕ್ಕೆ ಹಕ್ಕು ಇಲ್ಲಾ ನೀನು ಮಾಲಕಳು ಅಂತಾ ನನ್ನ ಆಸ್ತಿ ಸೊಸಾಯಿಟಿಗೆ ವ ಸಾವಕಾರಗೆ ಬರಕೊಟ್ಟು ಪರಾಧೀನ ಮಾಡಲಿಕ್ಕೆ ನಿನಗೆ ಹಕ್ಕು ಇಲ್ಲಾ ಯಾರಾದರೂ ಬರಿಸಿಕೊಂಡರೆ ನಡಿಲಾರದು

ಈ ನೋಟೀಸು ಮುಟ್ಟಿದ ೭ ದಿವಸಗಳಲ್ಲಿ ನೀನು ಬಂದು ನನ್ನ ಹಕ್ಕು ಇಲ್ಲಾ ಅಂತಾ ಲೇಖ ಕೊಟ್ಟು ನನ್ನ ಸಾಮಾನ ನನಗೆ ಕೊಟ್ಟು ನನ್ನ ಪಾವತಿ ತಗೋಬೇಕು ಹಾಗೆ ಮಾಡದೆ ಇದ್ದರೆ ನಿನ್ನ ಮೇಲೆ ದಾವೇ ಮಾಡಿ ಯಾವತ್ತು ಮಾಲು ಖರ್ಚ ಸಹ ವಸೂಲ ಮಾಡಲಾದೀತು. ಜಮಿನಿಯಲ್ಲಿ ನೆಹಮಿಯಂತೆ ಕಾಯ ಕಷ್ಟ ನಡಿಸಿನಿ ನೀನು ಬಂದು ದಂಡಗಾಯಿ ಮಾಡಿದರೆ ನಿನ್ನ ಮೇಲೆ ಫೌಜದಾರಿಯಲ್ಲಿ ಕೆಲಸ ನಡಿಸಬೇಕಾದೀತು ಈ ನೋಟೀಸಿನ ಖರ್ಚ ನಿನ್ನ ಮೇಲೆ ಅದೆ ತಿಳಿಯೋದು

ಸವದತ್ತಿ ತಾ|| ೨-೬-೧೯೩೦

ಈ ಎಡಗೈ ಹೆಬ್ಬಟ್ಟಿನ ಗುರ್ತ ಗದಿಗೆವ್ವಾ ಕೋಂ ನಿಂಗಪ್ಪಾ ಮಾಕಾಳಿ ಈಕಿ ಕೈದು ಅದೆ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ ಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ		ರೂ. ೧೨-೮-೦
೬	,,	೭-೦-೦
೩	,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ಸಾಪ್ತಾಹಿಕ ವಿಜಯ ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೩೧) ಧಾರವಾಡ ಮಂಗಳವಾರ ತಾರೀಖು ೧೦ನೇ ಜೂನ ೧೯೩೦ (ಸಂಚಿಕೆ ೩

ವಿಜಯ.

ಶಾಲಿಶಕ ವಿಕ್ರಮ ವರ್ಷ ೧೮೫೨ ಜ್ಯೇಷ್ಠ ಶುದ್ಧ ೧೪

ಬ್ಯಾಡಗಿಯ ಬಿಕ್ಕಟ್ಟನೆ

ಬ್ಯಾಡಗಿಯು ರಾಜಕೀಯ ಚಳವಳಿಯಲ್ಲಿ ಮುಂದೆ ಹೋಗಿದೆ. ಅದರ ಕಳೆಯೂ ಆಳರಸರ ಸ್ನೇಹಿಗಳಿಂದ ಅಲ್ಲಿಯ ಶ್ಯಾನಿಟರಿ ಇನ್ಸಪೇಕ್ಟರರಿಗೂ ಬಡಿಯಿತು. ಶ್ರೀ ಹಣಮಂತ ಮೇಲಪ್ಪ ಕ್ಯಾತಾರಿಯವರು ಶ್ಯಾನಿಟರಿ ಇನ್ಸಪೇಕ್ಟರ ಇದ್ದರು. ಇವರು ರಾಜಕೀಯ ಚಳವಳಿಯಲ್ಲಿ ಸೇರಿ ಮ್ಯುನಿಸಿಪಾಲಿಟಿಗೆ ಕೊಡತಕ್ಕಂಥ ಕರ ಪಟ್ಟಿಯನ್ನು ಕೊಡಬೇಡಿರೆಂದು ನಾಗರಿಕರಿಗೆ ಬೋಧ ಮಾಡುತ್ತಿರೆಂದು ಇವರ ಮೇಲೆ ಆರೋಪ ಹೊರಿಸಿ, ಇವರನ್ನು ಕೆಲಸದಿಂದ ದೂರ ಮಾಡಿದ್ದಾರೆ.

ಬ್ಯಾಡಗಿಯಲ್ಲಿ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನಿ ಹಚ್ಚಬೇಕೆಂಬ ದೊಡ್ಡ ವಾದವೆದ್ದಿದೆ. ಅಧ್ಯಕ್ಷ ಮೊದಲಾದವರು ಆಳರಸರ ಪಕ್ಷದವರಾಗಿದ್ದಾರೆ. ನಿಶಾನೆ ಹಚ್ಚಿಸಿಬಿಡಬೇಕೆಂದು ಊರವರು ಪಂತಗಟ್ಟಿದ್ದಾರೆ. ಮ್ಯುನಿಸಿಪಾಲಿಟಿಯವರು ಒಂದು ತಿಂಗಳಲ್ಲಿ ರಾಷ್ಟ್ರೀಯ ನಿಶಾನೆಯನ್ನೇರಿಸದಿದ್ದರೆ- ಮನೆಪಟ್ಟಿ, ಜಂಬಾಕದ ಫೀ ಮತ್ತು ಜಕಾತ ಅಂಗಡಿಗಳ ಟ್ಯಾಕ್ಸ ಕೊಡಬಾರದೆಂದೂ, ಈ ಬಗ್ಗೆ ಸತ್ಯಾಗ್ರಹ ಮಾಡಬೇಕೆಂದೂ ನಾಗರಿಕರ ಪ್ರಚಂಡ ಸಭೆ ಕೂಡಿ. ಠರಾವು ಪಾಸಾಗಿರುತ್ತದೆ. ಈ ಠರಾವಿಗೆ ಶ್ರೀ ಕ್ಯಾತಾರಿಯವರೇ ಕಾರಣರೆಂದು ಮ್ಯುನಿಸಿಪಾಲಿಟಿಯವರು ಇವರನ್ನು ಮನೆಗೆ ಕಳಿಸಿದ್ದಾರೆ.

ಶ್ರೀ ಕ್ಯಾತಾರಿಯವರನ್ನು ಬರತರ್ಫ ಮಾಡುವದರಿಂದ, ಮ್ಯುನಿಸಿಪಾಲಿಟಿಯು ಮುಖ್ಯ ಬೇನೆ ಹೋದಂತಾಗಲಿಲ್ಲ. ನಿಶಾನೆ ಹಚ್ಚುವ ಹಾಗು ಜನರು ಕರಕೊಡದಿರುವ ಕೊಡಬಾರದೆಂಬುವ ಪ್ರಶ್ನೆಗಳು ಹಾಗೇ ಉಳಿದವು. ಶ್ರೀ ಕ್ಯಾತಾರಿಯವರು ಈಗ ಸ್ವತಂತ್ರರಾದರು.- ಅವರು ಕರಕೊಡಬಾರದೆಂಬ ಹೆಚ್ಚಾಗಿ ಚಳವಳಿ ಎಬ್ಬಿಸಬಹುದು. ಇವರು ಒಂದು ವೇಳೆ ಸುಮ್ಮನೆ ಕೂತರೂ, ಇವರನ್ನು ವಿನಹಕಾರಣ ಬರತರ್ಫ ಮಾಡಿದ ಬಗ್ಗೆ ಊರವರು ಟ್ಯಾಕ್ಸ ಕೊಡಬಾರದೆಂದು ಸತ್ಯಾಗ್ರಹದ ಪ್ರಚಂಡ ಕೋಲಾಹಲವೆಬ್ಬಿಸಬಹುದು. ಪರಕೀಯರಾದ ಜಿಲ್ಲೆಯ ಕಲೆಕ್ಟರರಂಥವರೇ ಬಹು ಶಾಂತ ಮತ್ತು ಉದಾತ್ತ ಭಾವನೆಯಿಂದ ಆಡಳಿತೆ ನಡಿಸಿದ್ದನ್ನು ಬ್ಯಾಡಗಿಯ ಅಧ್ಯಕ್ಷರು ಕಂಡುಕೊಂಡು ಅವರಂತೆ ತಾವೂ ವರ್ತಿಸಿ, ಶ್ರೀ ಕ್ಯಾತಾರಿಯವರನ್ನು ಕೆಲಸಕ್ಕೆ ತಕ್ಕೊಂಡು ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿ, ಊರನ್ನು ಶಾಂತಗೊಳಿಸುವ ಶ್ರೇಯಸ್ಸು ತಕ್ಕೊಳ್ಳುವರೆಂದು ಆಶಿಸುತ್ತೇವೆ.

ಮುಂಬಯಿಯಲ್ಲಿ ನಾಯಿಯ ದನಿಯಿಂದ ಗುಂಡು ಹಾಕಿ, ಜನರ ಕೊಲೆಗೆ ಕಾರಣನಾದ ಸಾರ್ಜಂಟ ಫರ್ನಿಹೋ ಎಂಬವನನ್ನು ಸರಕಾರದವರು ಬರತರ್ಫ ಮಾಡಿದವರು. ಬರತರ್ಫಿನ ಶಿಕ್ಷೆಯು ತೀರ ಕಡಿಮೆ. ಕೊಲೆಯ ನಿವಿ ಕೃತಾದ ಆರೋಪ ಹೊರಿಸಿ, ಆತನಿಗೆ ತಕ್ಕ ಶಿಕ್ಷೆ ಮಾಡುವದೇ ಯೋಗ್ಯನ್ಯಾಯವಾಗುತ್ತದೆ.

ಖೇಡದ ರೈತರ ಸತ್ಯಾಗ್ರಹ.

ಕೊಂದರೂ ಹಪ್ತೆ ಕೊಡರು.

ಗುಜರಾಥದಲ್ಲಿರುವ ಖೇಡಜಿಲ್ಲೆಯ ಪ್ರಮುಖರಾದಂಥ ಒಂದು ಸಾವಿರ ರೈತರ ಪ್ರಚಂಡ ಮತ್ತು ಇತಿಹಾಸ ಪ್ರಸಿದ್ಧವಾಗುವಂಥ ಸಭೆಯು ನದಿಯಾದದಲ್ಲಿ ಸೇರಿತ್ತು. ಈ ಸಭೆಯಲ್ಲಿ ರೈತರು ಎಂಥ ಪ್ರಸಂಗ ಬಂದರೂ, ಪಡಿಪಾಟ್ಲು ಬಂದರೂ, ಸಂಕಟ ಬಂದರೂ, ಸಾಯುವ ಹೊತ್ತು ಬಂದರೂ ಹಪ್ತೆ ಕೊಡಬಾರದೆಂಬ ಠರಾವು ಪಾಸ ಮಾಡಿದ್ದಾರೆ. ಅದು-

"ನಾವು ಖೇಡಾ ಜಿಲ್ಲೆಯ ರೈತರು ದೇವರನ್ನು ಸ್ಮರಿಸಿ ಪ್ರತಿಜ್ಞೆ ಮಾಡುವದೇನೆಂದರೆ- ಸರಕಾರದವರು ಮಹಾತ್ಮರನ್ನು ಬಿಡುವತನಕ, ಅಥವಾ ಸರದಾರ ಪಟೇಲರು ಹೇಳುವತನಕ, ನಾವು ಸರಕಾರಕ್ಕೆ ಹಪ್ತೆಕೊಡತಕ್ಕದ್ದಲ್ಲ. ಹಪ್ತೆ ಕೊಡಲಿಕ್ಕಿಲ್ಲೆಂದು ಸತ್ಯಾಗ್ರಹ ಮಾಡುವಾಗ- ನಮ್ಮನ್ನು ಲಾಠಿಗಳಿಂದ ಹೊಡೆದರೆ- ಕಾರಾಗೃಹದಲ್ಲಿ ಹಾಕಿದರೆ- ಸ್ಥಾವರ ಜಂಗಮ ಆಸ್ತಿಯನ್ನು ನಾಶ ಮಾಡಿದರೆ- ಕೊನೆಯಲ್ಲಿ ಮರಣ ಬಂದರೂ ಕೂಡ- ಇವೆಲ್ಲ ಕಷ್ಟತಾಪಗಳನ್ನು ತಾಳಿದು, ಮತ್ತು ಸಂತೋಷವೃತ್ತಿಯಿಂದಲೇ ಇದ್ದು ಸತ್ಯಾಗ್ರಹಕ್ಕೆ ಭಂಗ ತರಲಿಕ್ಕಿಲ್ಲ."

ಈ ಠರಾವು ಬಹು ಮಟ್ಟಿಗೆ ಬಾರಡೋಲಿಯ ಠರಾವಿನಂತಿದ್ದು, ಇದರ ಕೂಡ ಸರಕಾರದ ನಾವು ದಾರರಿಗೆ ಅನ್ನ ನೀರು ಸಿಗದಂತೆ ಮಾಡುವದೂ ಇರುತ್ತದೆ. ಲಾರ್ಡ ಆಯರ್ವಿನಸಾಹೇಬರು ಹಪ್ತೆ ಕೊಡಬೇಡಿರೆಂದು ಹೇಳುವಂಥವರಿಗೆ ಆರು ತಿಂಗಳ ಶಿಕ್ಷೆ ಹೇಳಿದ್ದಾರೆ. ಎಷ್ಟು ಜನರಿಗೆ ಶಿಕ್ಷೆ ಕೊಡುವರು? ಇವರಿಗಾಗಿ ಎಷ್ಟು ತುರುಂಗ ಕಟ್ಟಿಸುವರೆಂಬದನ್ನು ನೋಡಬೇಕಾಗಿದೆ.

ಮಹಾತ್ಮರ ಏಕಾಂತವಾಸ!!

ಬೆಳಕಿಂದ ಕತ್ತಲೆ ಕೋಣೆಯ ಬದಲಾಗಿ

ಬೆಳಕಿರುವ ಕತ್ತಲೆ ಕೋಣೆ.

ಭಯಂಕರ ಅಪರಾಧ ಮಾಡಿದವರಿಗೆ ಜಡ್ಜರು ಕತ್ತಲೆ ಕೋಣೆಯ ಶಿಕ್ಷೆ ವಿಧಿಸುವರು. ತುರಂಗದಲ್ಲಿ ಕೈದಿಯು ಅಂಥದೊಂದು ಅಪರಾಧ ಮಾಡಿದರೆ- ಜೇಲಿನ ಅಧಿಕಾರಿಗಳು ಈತನನ್ನು ಕತ್ತಲೆ ಕೋಣೆಯಲ್ಲಿ ಹಾಕುವ ಶಿಕ್ಷೆ ವಿಧಿಸುವರು. ಇಲ್ಲಿ ಹೆಸರಿಗೆ ಬೆಳಕಿರುವದು. ಆದರೆ ಜನರಾರೂ ಇರುವದಿಲ್ಲ. ಒಬ್ಬನೇ ವಾರಎರಡುವಾರ ಕಳೆಯಬೇಕಾಗುತ್ತದೆ. ಸರ್ತಿಗೆ ಹದಿನಾಲ್ಕು ದಿವಸಕ್ಕಿಂತ ಹೆಚ್ಚಿಗಿಡಬಾರದೆಂಬ ನಿಯಮವುಂಟು.

ಮಹಾತ್ಮರು ರಾಜಕೀಯ ಕೈದಿಯಾದರೂ ಅವರ ಪಾಲಿಗೆ ಏಕಾಂತವಾಸ ಬಂದಿದೆ. ಇವರಿಗಾಗಿ ಸ್ವತಂತ್ರ ಕೋಣೆಯುಂಟು. ಅಯಾಂತ್ಕೆ ಕೊರತೆಯಿಲ್ಲ. ರಾತ್ರಿ ವಿದ್ಯುತ್ತಿನ ದೀಪವಿರುವದು. ಇವೇ ಮುಂತಾದ ಸೌಖ್ಯಗಳಿದ್ದರೂ, ನಂಪ್ರಾಣಿಯ ಸಹವಾಸವಿರುವದಿಲ್ಲ. ಅವರು ನಿತ್ಯ ತಪಾಸಣೆಗಾಗಿ ಬಂದು ಹೋಗುವಷ್ಟು ಸಮಯ. ಅಂದರೆ ಒಂದೆರಡು ನಿಮಿಷ. ಈ ಪ್ರಕಾರ ಮಹಾತ್ಮರಂಥ ಜಗದ್ವಂದ್ಯರನ್ನು ಏಕಾಂತದಲ್ಲಿಡುವದು ಶ್ರೇಯವಾದದ್ದೇ ಸರಿ. ಇವರ ಕೂಡ ಹಗಲಾದರೂ ಸಂಭಾಷಣೆ ಮಾಡುತ್ತಾ, ಅವರಿಗೆ ತುಸು ಆರಾಮವೆನಿಸುವಂಥವರು ಯರವಡೆಯ ಜೇಲಿನಲ್ಲಿಯೇ ಇದ್ದಾರೆ. ದೇವೀಸರೋಜಿನಿ ಮತ್ತು ಶ್ರೀ· ಕಮಲಾಬಾಯಿ ಚಟ್ಟೋಪಾಧ್ಯಾಯಿನಿಯವರು ಪಿತೃಭಕ್ತಿಯಿಂದ ಇವರ ಕೂಡ ಇದ್ದು, ಇವರಿಗೆ ಬೇಕಾದಷ್ಟು ಮನಃಸಂದವನ್ನುಂಟು ಮಾಡಬಹುದು. ಮುಂಬಯಿ ಇಲಾಖೆಯ ತುರಂಗಗಳಲ್ಲಿಯೇ ಇವರ ಇಬ್ಬರು ಮಕ್ಕಳಿದ್ದಾರೆ. ಇವರನ್ನು ಮಹಾತ್ಮರ ಹತ್ತರ ಇಟ್ಟರೆ ಜಗತ್ತು ಎಂದಿಗೂ ಬುಡಮೇಲಾಗದು. ಕಳವು ದರೋಡೆಗಾರರಂಥವರು ಕೂಡ ಹಗಲು ರಾತ್ರಿ ಜನರೊಳಗಿರುತ್ತಾರೆ. ಅಂದಬಳಿಕ ಮಹಾತ್ಮರಿಗೇಕೆ ಜನರ ಸಹವಾಸ ಕೊಡುವದಿಲ್ಲ?

ವೋರ್ಲಿ ಸತ್ಯಾಗ್ರಹಿಗಳಿಗೆ ಬಡತ.

ಮುಂಬಯಿಯಲ್ಲಿರುವ ವೋರ್ಲಿಯಲ್ಲಿ ಸತ್ಯಾಗ್ರಹಿಗಳನ್ನಿಟ್ಟಿದ್ದಾರಷ್ಟೇ; ಇಲ್ಲಿ ಇವರು ಸಿಕ್ಕಂತೆ ಓಡಾಡಬಾರದೆಂದು ಸುತ್ತಲು ವಿದ್ಯುತ್ತಿನ ತಂತೀ ಹಾಕತೊಡಗಿದರು. ಹತ್ತರವೇ ಇದ್ದ ಚಾಳಿನ ಸ್ತ್ರೀಯರು ಇದಕ್ಕೆ ಅಡ್ಡೀ ಮಾಡಲು- ಪೋಲೀಸರು ಇವರಿಗೆ ಅಲ್ಲಿಂದ ಎದ್ದು ಹೋಗಲಿಕ್ಕೆ ಹೇಳಿದರು. ಸ್ತ್ರೀಯರು ಸತ್ಯಾಗ್ರಹ ಮಾಡಿ ಅಲ್ಲಿಯೇ ಕೂಡ್ರಲು, ಸೈನಿಕರು ಇವರನ್ನು ಅನಾಮತ ಎತ್ತಿ, ದೂರ ಒಯ್ದರು. ಈ ವರ್ತಮಾನ ಕೇಳಿ, ಪೋಲೀಸ ಕಮಿಶನರರಾದ ಮಿ. ಹೇಲಿಸಾಹೇಬರು ಸ್ವತಃ ಬಂದು, ಇವರಿಗೆ ದೂರ ಸರಿಯಲಿಕ್ಕೆ ಹೇಳಿದರು. "ಇದು ನಮ್ಮ ಸ್ಥಳ, ಸ್ವತಃ ಗವ್ಹರ್ನರ ಬಂದರೂ, ನಾವು ಏಳತಕ್ಕವರಲ್ಲೆಂದು" ಸ್ತ್ರೀಯರು ಗಟ್ಟಿಗಳತನದ ಉತ್ತರ ಕೊಟ್ಟರು. ಆಗ ಸೈನಿಕರು ಇವರನ್ನು ಪುನಃ ಅನಾಮತ ಎತ್ತಿ, ದೂರ ಒಯ್ದರು ಮತ್ತು ಇತ್ತ ಕೂಲಿಕಾರರು ತಂತೀ ಹಾಕಿದರು.

ಇದು ಬಾದಶಹರ ವರ್ಧಂತಿಯ ದಿವಸವಾಯಿತು. ಸತ್ಯಾಗ್ರಹಿಗಳು ಅಂದು ಪ್ರಾತಃಕಾಲದಲ್ಲಿ ಕರೇ ನಿಶಾನೆಗಳಿಂದ ಜನ್ಮದ ಸಮಾರಂಭ ಮಾಡಿದರು. ಇದೊಂದು ಸಿಟ್ಟು ಅಧಿಕಾರಸ್ಥರ ಹೊಟ್ಟೆಯಲ್ಲಿತ್ತು. ಪೋಲೀಸರೂ, ಸೈನಿಕರೂ ಸ್ತ್ರೀಯರನ್ನು ಎತ್ತಿಕೊಂಡು ಹೋಗುವಾಗ ಇವರು ಎರಡೂ ಸಾರೆ ಅಡ್ಡೀ ಮಾಡಿದರು. ಪೋಲೀಸರೂ ದಂಡಿನವರೂ ಸೇರಿ ಎರಡೂ ಸಾರೆ ಇವರ ಪೂರಾ ಸಮಾಚಾರ ತಕ್ಕೊಂಡರು. ಈ ಲಾಠೀ ಪ್ರಯೋಗದಿಂದ ಒಬ್ಬ ಜನ ಘಾಯವಾಗಿದ್ದಾನೆ. ಕಾಂಗ್ರೆಸದ ಆಸ್ಪತ್ರಿಯಲ್ಲಿ ೫೮ ಮತ್ತು ಜೆ ಜೆ, ಆಸ್ಪತ್ರಿಯಲ್ಲಿ ೨೦ ಜನರು ಆರೈಕೆ ಹೊಂದುತ್ತಿದ್ದಾರೆ.

ಧಾರಾಸಾನದಲ್ಲಿ ಮವಾಳರಿಗೆ ಮಂಗಳಾರತಿಯಾಯಿತು.

ಧಾರಾಸಾನದಲ್ಲಿ ನಡೆದಿರುವ ಪೋಲೀಸರ ಭಯಂಕರ ಅತ್ಯಾಚಾರಗಳನ್ನು ನೋಡಲೋಸುಗ, ಸರ್ವಂಟ ಅಫ್ ಇಂಡಿಯಾ ಸೊಸಾಯಿಟಿಯ ಶ್ರೀ ದೇವಧರ, ಠಕ್ಕರ ಮತ್ತು ಸುಪ್ರಸಿದ್ಧ ಲೇಖಕರಾದ ಶ್ರೀ ಕೆ. ನಟರಾಜನ ಹಾಗು ಮುಂಬಯಿ ಸ್ಮಾಲಕಾಜ ಕೋರ್ಟಿನ ಜಡ್ಜರಾಗಿದ್ದವರೆ. ಹುಸೇನ ತಯಬಜಿಯವರು ಹೋಗಿ, ಧಾರಸಾನದಿಂದ ದೂರ ಅರ್ಧ ಮೈಲಿನ ಮೇಲೆ ನಿಂತರು. ಆದರೂ ಪೋಲೀಸ ಅಧಿಕಾರಿಗಳು ಇವರಿದ್ದಲ್ಲಿಗೆ ಬಂದು, ನೀವು ನಾಲ್ವರಿಗಿಂತ ಹೆಚ್ಚು ಜನರಾಗಿದ್ದೀರಿ. ಗೈರ ಕಾಯದೇಶೀರ ಮಂಡಲವಾಗುತ್ತೀರಿ. ಹೊರಟು ಹೋಗಿರೆಂದು ಹದರಿಸಿ, ಹಿಂದಕ್ಕೆ ಅಟ್ಟಿ ಹಾಕಿದರು. ಶ್ರೀ ದೇವಧರರು ಸಹಕಾರದ ದೀವಟಿಗೆ ಹಿಡಿದವರಿದ್ದು, ಇಂಥವರ ಪಾಲಿಗೂ ಪೋಲಿಸರ ಅಸಹಕಾರದ ಧಮಕಿ ಬಂದದ್ದೊಂದು ವಿಚಿತ್ರವೇ ಆಯಿತು. ಪರಿಚಾರ್ಯದಿಂದ ಎಂಥ ಅಪಮಾನವಿರುತ್ತದೆಂಬದನ್ನು ಇನ್ನಾದರೂ ಇವರು ತಿಳಿಯಲೆಂದರಾಯಿತು;

ಸಂಸ್ಥಾನಿಕರ ಪ್ರತಿನಿಧಿಗಳು-

ರಾವುಂಡಟೇಬಲಿಗಾಗಿ, ಮೈಸೂರ, ಹೈದರಾಬಾದ, ತ್ರಾವಣಕೋರ, ಬಡೋದೆಯ ಪಕಿಯಿಂದ ಮತ್ತು ಚಿಕ್ಕ ದೊಡ್ಡ ಸಂಸ್ಥಾನಿಕರ ತಮ್ಮ ಪಕಿಯಿಂದ ಸ್ವತಂತ್ರ ಮತ್ತು ನರೇಂದ್ರ ಮಂಡಲದ ಮುಖಾಂತರ ಒಬ್ಬಬ್ಬರನ್ನು ಆರಿಸಿ ಕಳಿಸಬೇಕೆಂದು ವಿಚಾರ ನಡೆದಿದೆ.

ಬೆಳಗಾವ ಜಿಲ್ಲೆಯ ವತನದಾರ ಇನಾಮದಾರರ ರಾಜನಿಷ್ಠೆಯ ಡಂಗುರ.

ಬೆಳಗಾವಿಯಲ್ಲಿ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಮಿ. ಕಮಿಶನರಸಾಹೇಬರ ಕನಕ ಹೋಗಿ ಅವರ ಮುಂದೆ ರಾಜನಿಷ್ಠೆಯ ಪ್ರತಿಜ್ಞೆ ಮಾಡಿದರಷ್ಟೇ; ಅವರ ತರುವಾಯಾ ಆ ಜಿಲ್ಲೆಯ ಇನಾಮದಾರ ಮತ್ತು ವತನದಾರರು ಸ್ವತಃ ಕಮಿಶನರ ಸಾಹೇಬರ ಅಧ್ಯಕ್ಷತೆಯಲ್ಲಿಯೇ ವನಿತಾ ವಿದ್ಯಾಲಯದಲ್ಲಿ ಸಭೆ ಮಾಡಿ, ರಾಜನಿಷ್ಠೆಯ ಪ್ರತಿಜ್ಞೆಯ ಡಂಗುರ ಸಾರಿದರು. ಸಭೆಯಲ್ಲಿ ವಂಟಮೂರಿ, ಕೋವಾಡ ಮತ್ತು ಅಂಕಲಗಿಯ ದೇಸಾಯಿ ಸರದೇಸಾಯರೂ, ರಾ. ಬ. ಶಿಣೆಯವರೂ ಭಾಷಣ ಮಾಡಿದರು. ಮಿ. ಕಮೀಶನರಸಾಹೇಬರು ಈಗಿನ ಚಳವಳಿಯು ಹೇಗೆ ಅನಾಯಕತನದ್ದಾಗಿರುತ್ತದೆಂಬದನ್ನೂ ವತನದಾರರು ಇವರಲ್ಲಿ ಸೇರಿದರೆ- ಹೇಗೆ ಹಾನಿಯಾಗುವದೆಂಬದನ್ನು ಸ್ಫೂರ್ತಿಯಿಂದ ಹೇಳಿದರು. ಗುರುವಿಗೆ ಗುಟುಕು ನೀರಾದರೆ- ಶಿಷ್ಯನಿಗೆ ಮೊಳಕಾಲಮಟ ನೀರೆನ್ನುವಂತೆ ಕೂಡಿದ ವತನದಾರರು-

ಪ್ರಸ್ತುತದ ರಾಜಕೀಯ ಚಳವಳಿಯು ಅರಾಜಕ, ಕ್ರಾಂತಿಕಾರಕ ಮತ್ತು ದೇಶಹಿತಕ್ಕೆ ಬಾಧೆ ತರುವಂಥಾದ್ದಿರುತ್ತದಾದ್ದರಿಂದ

ಇನ್ನು ಬಲವಾಗಿ ವಿರೋಧಿಸಿ ನಿಷೇಧಿಸುತ್ತೇವೆಂದು ಠರಾವನ್ನು ಪಾಸ ಮಾಡಿದರು. ಇಷ್ಟೇ ಅಲ್ಲ; ಇವರು ತಂತಮ್ಮ ನೆರೆಹೊರೆಯ ಗ್ರಾಮಗಳಿಗೆ ಚಳವಳಿ ಮುರಿಯಲು ಪ್ರಚಾರಕರಾಗಿ ಹೋಗುವರು. ಆಗ ಹೀಗೆ ಇವರ ಸ್ವರೂಪದ ಪರೀಕ್ಷೆಯಾಗುವದು. ಒಬ್ಬ ದೂರ ಗೌಡನು ಮತ್ತೊಂದೂರಿನ ತಳವಾರನೆಂಬ ಗಾದೆಯ ಮಾತನ್ನು ಇವರು ಧ್ಯಾನದಲ್ಲಿಟ್ಟುಕೊಳ್ಳತಕ್ಕದ್ದು.

ಮುಂಬಯಿಯಲ್ಲಿ ಮುಸಲಮಾನರ ಮೇಲೆ ಹಿಂದೂ ಜನರ ಪುಷ್ಪವೃಷ್ಟಿ

ಮೈಲುದ್ದ ಮೆರವಣಿಗೆ.

ಮುಂಬಯಿಯ ಮುಸಲಮಾನರೂ ಕಾಂಗ್ರೆಸ ಸೇರಿದರು. ಕಬ್ಬಿಣ, ಕಾಜು, ಕನ್ನಡಿ, ಕಾಗದ, ಟ್ರಂಕ, ಮೊದಲಾದ ವ್ಯಾಪಾರ ಮಾಡುತ್ತಿರುವ ಮುಸಲಮಾನ ವರ್ತಕರು ತಾವು ಕಾಂಗ್ರೆಸ ಸೇರಿದಂತೆ ಜಾಹೀರ ಮಾಡಲು- ಪ್ರಚಂಡ ಮೆರವಣಿಗೆ ತೆಗೆದರು. ಮೆರವಣಿಗೆಯಲ್ಲಿ ಲಕ್ಷ ಜನರು ಸೇರಿದ್ದರು. ಒಂದು ಮೈಲು ಉದ್ದವಾಗಿತ್ತು. ದಾರಿಗುಂಟ ಹಿಂದೂ ಜನರು ಇವರ ಮೇಲೆ ಪುಷ್ಪವೃಷ್ಟಿಮಾಡಿದರು.

ಶ್ರೀಮಂತ ಸ್ತ್ರೀಯರ ಪಿಕೆಟಿಂಗ.

ಅಹಮದಾಬಾದಿನಲ್ಲಿ ಶ್ರೀಮಂತ ಸ್ತ್ರೀಯರು ಸ್ವಯಂಸೇವಿಕೆಯರಾಗಿ ಗಡಂಗ ಮತ್ತು ವಿಲಾಯತಿಯ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭಿಸುವರು. ಮುಂದೆ ಇವರೆಲ್ಲರೂ ಎ ಕ್ಲಾಸ ಕೈದಿಗಳಾಗುವರು.

ಸೊಲ್ಲಾಪೂರದಲ್ಲಿ ಹಾಲನೆಂಬ ಸಾರ್ಜಂಟನು ಹೊರಗೆ ಕೆಲಸಕ್ಕೆ ಹೋದಾಗ, ಆತನ ಕೋಣೆಯಲ್ಲಿದ್ದ ಅರಿವೆ, ರಿವ್ಹಾಲ್ವರ, ಮತ್ತು ಬೇರೆ ಸಾಮಾನುಗಳನ್ನು ಕೂಡಿಹಾಕಿ, ಬೆಂಕಹಚ್ಚಿ ಬೂದಿ ಮಾಡಿದ್ದಾರೆ. ಸಾಹೇಬನ ಮದಿವೆಯಾಗತಕ್ಕದ್ದಿತ್ತು. ಭಾವೀ ಹೆಂಡತಿಗಾಗಿ ಹಲವು ಸೌ ಪದಾರ್ಥಗಳ ಸಂಗ್ರಹ ಮಾಡಿದ್ದನು. ಇವೆಲ್ಲ ಸುಟ್ಟು ಹೋದವು.

ಪ್ರಸಂಗ ಒಂದರೆ-
ಬ್ರಾಹ್ಮಣೇತರರು ಕಾಯದೆಭಂಗ
ಮಾಡುವರಂತೆ!!!

ಡಾ. ಬ. ಕಂಬಳಿಯವರು ಇದರಲ್ಲಿ ಸೇರುವರೇ ?

ಪುಣೆ ಪ್ರಾಂತದ ಬ್ರಾಹ್ಮಣೇತರರು ತಮ್ಮದೊಂದು ವರ್ಕಿಂಗ ಕಮಿಟಿ ಕೂಡಿಸಿ, ಕೆಲವು ಠರಾವುಗಳನ್ನು ಮಾಡಿದ್ದಾರೆ. ಆ ಠರಾವುಗಳು ಬಿಳೇ ಕಾಗದದ ಮೇಲೆ ಕರೇ ಗೆರೆ ಎಳೆದಂತಿರುತ್ತವೆ. ಏಕಂದರೆ- ಇಂಗ್ರೇಜಿ ರಾಜ್ಯದಲ್ಲಿ ಠರಾವು, ಅರ್ಜಿ, ವಿನಂತಿ ಇವುಗಳ ಕಾಲ ಎಷ್ಟೋ ಹಿಂದಾಯಿತು. ಕೋರ್ಟಿನ ದೃಷ್ಟಾಂತ ಕೊಡಬೇಕಾದರೆ- ಮುದ್ದತಿನ ಹೊರಗಾದದ್ದು. ಆದರೂ ಇವರು ಜನರ ಮೇಲೆ ಛಾಪು ಹಾಕುವದಕ್ಕಾಗಿ ಠರಾವಿನಿಂದ ತಾವೂ ಪ್ರಜಾಪಕ್ಷೀಯರೇ ಎಂಬುದಾಗಿ ತೋರಿಸುವ ಸೋಗು ಹಾಕಿದ್ದಾರೆ. ಸೋಗಿನಂತೆಯೇ ಇವರ ಮೇಲಿನ ಠರಾವಾಗಿರುತ್ತವೆ ಮೊದಲಿನ ಠರಾವು ಮಹಾತ್ಮರನ್ನು ಬಿಡಿಸುವದು, ಅವರಿಗಾದ ಬಂದಿವಾಸವನ್ನು ನಿಷೇಧಿಸುವದಾಗಿರುತ್ತದೆ. ಖಾದಿ ಪ್ರಸಾರ ಮತ್ತು ಮದ್ಯಪಾನ ಪ್ರತಿಬಂಧ ಇವೆರಡು ಅತ್ತ ಔಣ ಹೇಳಿಸಿಕೊಂಡಂತಿವೆ. ಮೂರನೆಯದು ಅವರ ಯೋಗ್ಯತೆ, ಸಾಮರ್ಥ್ಯ ಮತ್ತು ಇವತ್ತಿನ ವರ್ತನ ಹಾರಿಕೆಗೆ ಮೀರಿದ್ದಾಗಿರುತ್ತದೆ. "ಮಿತಿಮೀರಿ ಹೆಚ್ಚಿದ ಭೂಕಂದಾಯ, ಮತ್ತು ವನಗಾವಲ ಸಂಬಂಧವಾಗಿ ರೈತರು ಅನುಭವಿಸುವ ಕಷ್ಟ ಮತ್ತು ಅನ್ಯಾಯದ ಕಾಯದೆ ಶಾಸನಗಳು ಇವುಗಳ ಬಗ್ಗೆ ವಿಚಾರ ಮಾಡಲು" ಒಂದು ಕಮಿಟಿ ನೇಮಿಸಿದ್ದಾರೆ. ಈ ಕಮಿಟಿಯಲ್ಲಿ ಮುಂಬಯಿ ಕರ್ನಾಟಕದ ಈರ್ವರು ಶಾಸನಸಭಾಸದರಾದ ಕಂಬಳಿ ಮತ್ತು ಬಿ. ಎಲ್. ಪಾಟೀಲರಿದ್ದಾರೆ. ಹತ್ತೆ ಹೆಚ್ಚಾಗಿದೆ. ವನಗಾವಲದ ಅನ್ಯಾಯವಾಗಿದೆಂದು ಈ ಕಮಿಟಿಯ ಅಧ್ಯಕ್ಷರಾಗಿರುವ ಸರ ಪಟ್ರೋಸಾಹೇಬರಿಗೆ ಕಂಡುಬಂದರೆ- ಅವರು ಕಾಯದೆಭಂಗ ಮಾಡಲಿಕ್ಕೆ ಸಿದ್ಧರಾಗಿ ಮೊದಲನೆಯ ಸತ್ಯಾಗ್ರಹಿಯಾಗುವಂತೆ ಜಾಹೀರ ಮಾಡಿದ್ದಾರೆ. ಈ ಠರಾವು ಮತ್ತು ಹೇಳಿಕೆಯು ಉಬ್ಬಾಳಿಕೆಯ ದೈವವುಳ್ಳವರ ವಸೆಯ ನೋಟ ಚಂದವೆಂಬಂತಿರುತ್ತವೆ. ಜನಲಜ್ಜೆಯದೆಸೆಯಿಂದ ಮಾಡಿದ್ದಿರುವಂತೆ ಸ್ಪಷ್ಟವಾಗುತ್ತದೆ. ಇವರಿಗೆ ನಿಜವಾದ ಸ್ವಜನಾಭಿಮಾನವಿದ್ದರೆ- ಸರ ಪಟ್ರೋಸಾಹೇಬರು ತಮ್ಮ ಇಲಾಖೆಯಲ್ಲಾದ ಪೋಲೀಸ ಹಿಂಸೆಗಾಗಿ ಮತ್ತು ರಾ. ಬ. ದ್ವಯರು ಮುಂಬಯಿ ಇಲಾಖೆಯಲ್ಲಿ ನಡೆದ ಗೂಂಡಾತ್ಕೃತ್ಯದ ದೆಸೆಯಿಂದ ಕೌನ್ಸಿಲ ಮತ್ತು ಅಸೆಂಬ್ಲಿಗೆ ಎಂದೋ ರಾಜೀನಾಮೆ ಕೊಡುತ್ತಿದ್ದರು. ಮತ್ತು ತಮ್ಮವರನ್ನು ಕೌನ್ಸಿಲದ ಉಮೇದವಾರರಾಗಿ ನಿಲ್ಲಿಸದೆ, ಸುರತದಂತೆ ಘೋರವಾದ ಜಿಲ್ಲೆಯ ಸ್ಥಳವನ್ನು ತೆರವಿಡುತ್ತಿದ್ದರು. ಮದ್ರಾಸ ಇಲಾಖೆಯಲ್ಲಿ ಕೌನ್ಸಿಲದ ಡಿಪುಟಿ ಪ್ರೆಸಿಡೆಂಟರಾಗಿದ್ದ ಶ್ರೀ. ಮುತ್ತುಲಕ್ಷ್ಮಮ್ಮ ರಡ್ಡಿಯವರು ಪೋಲೀಸರ ಅತ್ಯಾಚಾರ ಮತ್ತು ಸರಕಾರದ ದಬ್ಬಾಳಿಕೆಯ ನಿಷೇಧವೆಂದು ರಾಜೀನಾಮೆ ಕೊಟ್ಟರು. ಇವರು ಪ್ರಜರಿಂದ ಕೂಡ ಆರಿಸಲ್ಪಟ್ಟವರಲ್ಲ; ಸರಕಾರದಿಂದ ನಾಮನಿರ್ದೇಶಿತರಾದಂಥವರು. ಸರಕಾರದ ವಿಶ್ವಾಸಕ್ಕೆ ಪಾತ್ರರಾದಂಥವರೇ ರಾಜೀನಾಮೆ ಕೊಟ್ಟಬಳಿಕ, ಪ್ರಜರಿಂದ ಆರಿಸಲ್ಪಟ್ಟಂಥವರು ಸಹಜವಾಗಿ ರಾಜೀನಾಮೆ ಕೊಡತಕ್ಕದ್ದು. ಆದರೆ ಇವರು ಒರೇ ಠರಾವು ಮಾಡುವದೇ ಪುರುಷಾರ್ಥವೆಂದು ತಿಳಕೊಂಡಿದ್ದಾರೆ. ಹತ್ತೆ ಮತ್ತು ವನಗಾವಲದ ವಿಚಾರವಾಗಿ, ಅದು ಅನ್ಯಾಯದ್ದಾಗಿರುತ್ತದೆಂದು ಕಂಡುಬಂದ ಬಳಿಕ, ಸರಕಾರಕ್ಕೆ ಅರ್ಜಿ ಮಾಡುವರು; ಅದರ ವಿಚಾರಣೆಯು ಸರಕಾರದಲ್ಲಾಗಿ, ಅದೂ ತಮಗೆ ಪ್ರತಿಕೂಲವಾಗಿರುತ್ತದೆಂದು ಕಂಡುಬಂದನಂತರ ಕೌನ್ಸಿಲದಲ್ಲಿ ಠರಾವು ತರುವರು. ಅಲ್ಲಿಯೂ ಪ್ರತಿಕೂಲವಾದರೆ- ಕಾಯದೆಭಂಗ ಮಾಡುವರು. ಮಾರ್ಕಂಡೇಯನ ಆಯುಷ್ಯವಾದರೂ ಸಾಲದು ಇದಕ್ಕೆ; ಕಾಯದೆ ಮುರಿಯುತ್ತೇವೆಂದು ಹೇಳಿದವರು ಅಥವಾ ಮಾತಿನ ಓಘದಲ್ಲಿ ನುಡಿದವರು ಸರ ಪಟ್ರೋಸಾಹೇಬರು!!! ಉಳಿದವರಿಲ್ಲವೇ ಇಲ್ಲ? ಆದ್ದರಿಂದ ಇವರು ಸತ್ಯಾಗ್ರಹದಲ್ಲಿ ಸೇರುವರೆಂಬದೂ ಅಸಂಭವ. ರಾ. ಬ. ಬಿ. ಎಲ್. ಪಾಟೀಲರು ಅಸೆಂಬ್ಲಿಯಲ್ಲಿ ಪಂಡಿತ ಮಾಲವೀಯಾಯವರ ಪಕ್ಷ ಸೇರುವೆನೆಂದು ಹೇಳಿದ್ದು ಇನ್ನೂ ಬಹುಜನರ ಸ್ಮರಣದಲ್ಲಿರಬಹುದು. ಅದರಂತೆ ವರ್ತಮಾನಪತ್ರದಲ್ಲಿಯೂ ಪ್ರಸಿದ್ಧವಾಗಿದೆ. ಪಂಡಿತ ಮಾಲವೀಯಾಯವರು ಅಸೆಂಬ್ಲಿಗೆ ರಾಜೀನಾಮೆ ಕೊಟ್ಟು, ವಿಲಾಯತಿ ಬಟ್ಟೆಯ ಬಹಿಷ್ಕಾರದ ಮುಖಂಡತ್ವವನ್ನು ಸ್ವೀಕರಿಸಿದ್ದಾರೆ. ರಾ. ಬ. ಪಾಟೀಲರು ಅಡಿದಂತೆ ನಡೆದಿರುವದೇ ಇಲ್ಲ. ಇದೊಂದೇ ಸಂಗತಿಯಿಂದ ಕರ್ನಾಟಕದ ಬ್ರಾಹ್ಮಣೇತರರೆಂಬ ಹಳೇ ಮತ್ತು ಹಳಸಿದ ಹೆಸರನ್ನೇ ಇನ್ನೂ ಮುಂದೆ ಮಾಡಿಕೊಳ್ಳುವವರಿಂದ ದೇಶಹಿತಕ್ಕೆ ಎಷ್ಟು ಸಹಾಯವಾಗುವದೆಂಬುದನ್ನು ವಾಚಕರು ಸಹಜವಾಗಿ ಊಹಿಸಬಹುದು.

ವಡಾಲಾದಲ್ಲಿ

ಪೋಲೀಸರಿಗೂ ಸ್ವಯಂಸೇವಕರಿಗೂ ಅದ್ಭುತ ಯುದ್ಧ

ಇಂಗ್ಲಿಷರು ಆಫ್ರಿಕೆ ಮತ್ತು ಐರ್ಲಂಡದಲ್ಲಿ ಸ್ವರಾಜ್ಯ ಕೊಡುವ ಮೊದಲು ಶೋಫ ತುಬಾಕಿಗಳೊಂದಿಗೆ ಭಯಂಕರ ಯುದ್ಧ ಮಾಡಿ, ಲಕ್ಷ ಜನರ ಪ್ರಾಣ ಕಳೆದುದಲ್ಲದೆ, ತಮ್ಮ ಪ್ರಜರ ಜೀವವನ್ನೂ ತೆಕ್ಕೊಂಡರು. ಕೊನೆಗೆ ಅವರಿಗೆ ಸ್ವರಾಜ್ಯಾಧಿಕಾರ ಕೊಟ್ಟು, ಅವರನ್ನು ಸ್ನೇಹಿತರಾಗಿ ಮಾಡಿಕೊಂಡರು. ಹಿಂದುಸ್ಥಾನದ ಜನರನ್ನೂ ಮುಂದೆ ಇದೇ ರೀತಿಯಾಗಿ ಮಿತ್ರರಾಗಿ ಮಾಡಿಕೊಳ್ಳಬೇಕಾಗಿದೆ. ಆ ಮಿತ್ರತ್ವವು ಗಟ್ಟಿಯಾಗುವ ಮೊದಲು ಯಾರು ಹೆಚ್ಚು ಗಟ್ಟಿಗರೆಂಬುವರ ಪರೀಕ್ಷೆಯಾಗತಕ್ಕದ್ದಿರುತ್ತದೆ. ಈ ಬಿದ್ದಿನ ಹೋರಾಟದಲ್ಲಿ ಸರಕಾರ ಪಕ್ಷವು ಶಸ್ತ್ರಧಾರಿಯಾದ ಪೋಲಿಸ ಮತ್ತು ಸೇನಾಬಲದಿಂದ ಸಜ್ಜಾಗಿದ್ದು, ಸ್ವಯಂಸೇವಕರು ಕಿಷ್ಕಿಂಧೆಯ ವಾನರರಂತೆ ನಿಃಶಸ್ತ್ರಧಾರಿಯಾಗಿದ್ದಾರೆ. ಆದರೂ ಕೊನೆಯಲ್ಲಿ ಇವರೇ ಗೆದೆಯುವರೆಂದು ಖಂಡಿತ. ಇದಕ್ಕೆ ಮುಂಬಯಿ ಹತ್ತಿರಿರುವ ವಡಾಲಾದಲ್ಲಾದ ಯುದ್ಧವೇ ಒಂದು ದೃಷ್ಟಾಂತವು.

ವಡಾಲಾದಲ್ಲಿ ಉಪ್ಪಿನ ಪರ್ವತ ಬಿದ್ದಿದೆ. ಧಾರಾಸಾನದಂತೆ ಮುಂಬಯಿಯವರು ಇದನ್ನು ಕೈವಶ ಮಾಡಿಕೊಳ್ಳಬೇಕು; ತಪ್ಪಿದರೆ- ಅಲ್ಲಿಯ ಉಪ್ಪನ್ನು ಸುಲಿಗೆ ಮಾಡಬೇಕೆಂಬ ಸಂಕಲ್ಪಮಾಡಿದ್ದಾರೆ. ಕಳೆದೊಂದು ತಿಂಗಳಲ್ಲಿ ಇದರ ಮೇಲೆ ಮೂರಾವರ್ತಿ ದಾಳಿಯಿಟ್ಟರು. ಇವುಗಳಲ್ಲಿ ಹೋದ ಶನಿವಾರ ದಿವಸ ಆದ ಹಾವಳಿಯು ಪ್ರತ್ಯಕ್ಷ ಯುದ್ಧದಂತೆಯೇ ಆಯಿತು. ಜಪಾನರು ಪೋರ್ಟ ಆರ್ಥರ್ ಕಿಲ್ಲೆಗೆದೆಯಲು ಪ್ರಾಣದ ಪರಿವೆ ಮಾಡದಂತೆ ಸ್ವಯಂಸೇವಕರು ಇಲ್ಲಿಯೂ ಜೀವದ ಹಂಗುದೊರೆದಿದ್ದರು. ಅಂದು ಬೆಳಗಾದ ಕೂಡಲೆ, ಕಾಂಗ್ರೆಸ ಭವನದಿಂದ ಒಂದು ಸಾವಿರ ಸ್ವಯಂಸೇವಕರು ಹೊರಟರು. ಇವರಲ್ಲಿ ಮುಸಲಮಾನರು ಜೂನೆಯವರಾದರು. ವಿಷದ ಕಲುವಾಯಾ ಅಮೃತ ಹುಟ್ಟುವಂತೆ, ಸಾಜರ್ಂಟ ಮತ್ತು ಪಠಾಣರ ಸಂಗೆಯಿಂದ ಮುಸಲಮಾನರು ಬುದ್ಧಿಬಂದವರಾಗಿ ಕಾಂಗ್ರೆಸದಲ್ಲಿ ಸೇರಿ, ತಮಗೆ ವಡಾಲಾದ ಮೇಲೆ ಅಭಿಯೋಗ ಮಾಡುವ ಮೊದಲನೇ ಮಾನ ದೊರೆಯಬೇಕೆಂದು ಎಲ್ಲಕ್ಕೂ ಮೊದಲು ಮುಂದಾದರು. ಮತ್ತು ಇವರೇ ಹಲ್ಲೆಯೇರಿಸಿದರು. ಯುದ್ಧದಲ್ಲಿ ಮುಂದಿನ ಸೈನ್ಯಕ್ಕೆ ಸಹಾಯವಾಗಲು ಕುಮುಕಿನ ಸೈನ್ಯವಿರುತ್ತದೆ. ಅದೇ ಪ್ರಕಾರ ಹಿಂದೆ ಎರಡು ಸಾವಿರ ಸ್ವಯಂಸೇವಕರು ಸಿದ್ಧವಾಗಿದ್ದರು.

ಪೋಲೀಸರ ಸಂಖ್ಯೆ ಕಡಿಮೆಯಾಗಿದ್ದರೂ, ಶಕ್ತಿಯು ಕಡಿಮೆಯಾಗಿರಲಿಲ್ಲ. ೩೦ ಸ್ವಾರರು ೭೦ ಸಶಸ್ತ್ರ ಸಿಪಾಯರು ೭೦೦ ಲಾಠೀ ಸಿಪಾಯರು ಉಪ್ಪಿನ ಉಗ್ರಾಣದ ಸುತ್ತಲು ಕಾವಲಾಗಿದ್ದರು; ಇವರ ಹಿಂದೆ ತಂತಿಯ ಬೇಲಿ ಇತ್ತು. ಪ್ರತ್ಯಕ್ಷ ಯುದ್ಧದಲ್ಲಿ ಸಹ ವೈರಿಯನ್ನು ಅಲ್ಲಲ್ಲಿ ತಡೆಯಲು ತಂತಿಯ ಬೇಲಿ ಹಾಕುವದುಂಟು. ಬೇಲಿಯ ಹಿಂದೆ ಎತ್ತರವಾದ ದಿನ್ನೆಯ ಮೇಲೆ ನಿಶಾನೆಯಿಂದ ಗುರ್ಖಾ ತೋರಿಸಿ, ನೆರವಿಗೆ ಪೋಲೀಸ ಮತ್ತು ಸೈನ್ಯ ಕರಿಸುವ ವ್ಯವಸ್ಥೆ ಮಾಡಿದ್ದರು. ಪೋಲಿಸರು ಹೊಡಿಸಿಕೊಳ್ಳುವಂಥವರಲ್ಲ; ಹೊಡೆಯುವಂಥವರು; ಆದ್ದರಿಂದ ಅವರಿಗಾಗಿ ಡಾಕ್ಟರ, ನರ್ಸ, ಬಿದ್ದವರನ್ನು ಮಲಗಿಸಿಕೊಂಡು ಹೋಗುವ ಹೊರಸು ಮುಂತಾದವುಗಳ ಕೊರತೆಯು ಹೊರ್ತು ಎಲ್ಲ ಬಗೆಯ ಯುದ್ಧೋಪಕರಣಗಳು ಸಿದ್ಧವಾಗಿದ್ದವು. ಕಾಂಗ್ರೆಸದವರು ಹೊಡಿಸಿಕೊಳ್ಳುವವರಾದ್ದರಿಂದ ಡಾಕ್ಟರ, ನರ್ಸ, ಸ್ಟ್ರೇಚರ (ಹೊರಸು) ಔಷಧ ಮುಂತಾದವು ಸಿದ್ಧವಾಗಿದ್ದವು ಈ ಪ್ರಕಾರದ ಉಭಯ ಪಕ್ಷಗಳ ಸಿದ್ಧತೆಯಿಂದ ಆರು ಗಂಟೆಗೆ ಪ್ರಾರಂಭವಾದ ಯುದ್ಧವು ಮಧ್ಯಾಹ್ನದವರೆಗೆ ನಡೆಯಿತು. ಪೋಲೀಸರು ಲಾಠೀ ಪ್ರಯೋಗ ಮಾಡಿದರು. ಅನೇಕರನ್ನು ಘಾಯ ಪಡಿಸಿದರು. ಕೋಟೆಯನ್ನು ಕೈವಶ ಮಾಡಿಕೊಳ್ಳುವಾಗ, ಪೊಳ್ಳಿನಲ್ಲಿಯೇ ಸುರಂಗ ಹೊಡೆಯುವಂತೆ, ಸ್ವಯಂಸೇವಕರು ಪೋಲಿಸರ ಸಂಖ್ಯೆಯು ಕಡಿಮೆ ಇದ್ದಲ್ಲಿಂದ ತಂತಿಯಿಂದ ಒಳಗೆ ಹಾರಿ, ಉಗ್ರಾಣದ ಹತ್ತಿರ ನಿಂತರು. ಉಪ್ಪು ಸಾಧಾರಣ ಒಂದು ಮೈಲಿನ ಸ್ಥಳವನ್ನು ವ್ಯಾಪಿಸಿದೆ. ಅಲ್ಲಿಯೂ ಪೋಲೀಸರಿಗೂ ಇವರಿಗೂ ಮಲ್ಲಯುದ್ಧ ನಡೆಯಿತು. ಸ್ವಯಂಸೇವಕರನ್ನು ಹಿಡಿಯುವ ಗೊಂದಲದಲ್ಲಿ ಪೋಲಿಸರು ಬಿದ್ದಾಗ, ಉಳಿದ ನೂರಾರು ಜನರು ಚೀಲಗಳಲ್ಲಿ ಉಪ್ಪು ತೆಕ್ಕೊಂಡು, ಹೆಗಲ ಮೇಲೆ ಹೊತ್ತುಕೊಂಡು, ಪೋಲಿಸರು ಬೆನ್ನಟ್ಟಿದರೂ, ಬಿದ್ದು ಗೆದ್ದರು.

ಪುರುಷರಂತೆ ಸ್ತ್ರೀ ಸ್ವಯಂಸೇವಿಕೆಯರೂ ಈ ತುಮುಲಕಾಳಗದಲ್ಲಿ ಸೇರಿದ್ದರು. ಖ್ಯಾಡಹೋಕೇಟ ಮುನಸಿಯವರ ಪತ್ನಿಯವರು ಪ್ರಮುಖೆಯಾಗಿದ್ದರು. ದೇಶಸ್ಥ, ಗುಜರಾತಿ ಮತ್ತು ತೆಲುಗು ಸ್ತ್ರೀಯರು ಇವರ ಬಿಡಿಯಾಳಾಗಿದ್ದರು. ಪೋಲಿಸ ಅಧಿಕಾರಿಗಳು ಇವರನ್ನು ತಡೆದು ಮುಂದೆ ಬಿಡಲಿಲ್ಲ. ಇವರು ಏನಾದರೂ ಮುಂದೆ ಹೋಗತಕ್ಕದ್ದೇ ಎಂದು ಸತ್ಯಾಗ್ರಹ ಮಾಡಲು- ನಿಮ್ಮನ್ನು ಹಿಡಿದಿದ್ದೇವೆಂದು ಹೇಳಿ, ಕೆಲಹೊತ್ತು ಕೂಡ್ರಿಸಿ, ಹಿಂಗಡೆ ಬಿಟ್ಟುಬಿಟ್ಟರು. ಸ್ವಯಂಸೇವಕರು ಉಪ್ಪು ತಕ್ಕೊಂಡು ಹೋಗಲಾರಂಭಿಸಲು, ಸೈನ್ಯದ ನೆರವು ತರಿಸಿದರು. ಅಷ್ಟರಲ್ಲಿ ಯುದ್ಧದ ಕಾಲ ಮುಗಿದ್ದರಿಂದ, ಸ್ವಯಂಸೇವಕರು ಜಯಧ್ವನಿ ಮಾಡುತ್ತ ಕಾಂಗ್ರೆಸ ಆಫೀಸಿಗೆ ಬಂದರು. ಅಲ್ಲಿ ಘಾಯಪಟ್ಟವರಿಗಾಗಿ ಮತ್ತು ಸ್ವಯಂಸೇವಕರಿಗಾಗಿ ಸ್ವತಂತ್ರ ಆಸ್ಪತ್ರೆಯನ್ನೇ ತೆಗೆದಿದ್ದಾರೆ. ವಿಶೇಷ ಘಾಯವಾದವರನ್ನು ಇಲ್ಲಿಗೆ ತಂದು, ಆರೈಕೆ ಮಾಡಿದರು. ಒಟ್ಟು ೧೫೦ ಜನರು ಘಾಯವಾಗಿದ್ದಾರೆ ಈ ದಾಳಿಯಲ್ಲಿ ಸುಲಿದು ತಂದ ಉಪ್ಪು ನೂರಾರು ಮಣವಾಗಿದೆ

ಸರಕಾರದ ಒಂದೆಯ ಹಿಡತ.

ಒಡಂಬಡಿಕೆ ಆಳಿಯು ನಿಂತಿತು.

ಮುಂಬಯಿ ಕೌನ್ಸಿಲ ಮೆಂಬರರಾದ ಲಾಲಜಿ ನಾರಾಯಣಜಿಯವರು, ಅಸೆಂಬ್ಲಿಯ ಮೆಂಬರರಾದ ಸರ ಪುರುಷೋತ್ತಮದಾಸ ಠಾಕೂರದಾಸ ಮತ್ತು ಮಿ. ಮೋದಿ ಫರ್ಮ ಮೆಂಬರ ಮತ್ತು ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮಿ. ಹು. ಶೇನಭಾಯಿ ಲಾಲಜಿ, ಇವರ ಸಹಕಾರದಿಂದ ಕಳೆದ ವಾರದಲ್ಲಿ ಎರಡು ಮೂರು ಸಾರೆ ಮಹಾಬಳೇಶ್ವರದ ಯಾತ್ರೆ ಮಾಡಿದರು. ಅಲ್ಲಿ ಶ್ರೀ. ಕೃಷ್ಣವೇಣಿಯ ಉಗಮಸ್ಥಾನದಲ್ಲಿ ಸ್ನಾನಮಾಡಿದ್ದರೆ- ಎಷ್ಟೋ ಪುಣ್ಯವಾಗುತ್ತಿತ್ತು; ಆದರೆ ನೆಗವಾರದಂಥ ಕುಂಬಳಕಾಯಿಯ ದೊಡ್ಡ ಆಕೆಯಿಂದ ಗವರ್ನರಸಾಹೇಬರನ್ನು ಕಾಣಲಿಕ್ಕೆ ಹೋದರು. ಮಹಾತ್ಮರಿಗೂ ಸರಕಾರಕ್ಕೂ ರಾಜೀ ಮಾಡಿಸಬೇಕೆಂದೇ ಇವರ ಉದ್ದೇಶವು. ಮೊದಲು ಹೋದವರು ಮಿ. ಹ. ಶೇನಭಾಯಿಯವರು. ಇವರಿಗೆ ಮೃಗಜಲದಂಥ ಆಶೆ ಹುಟ್ಟಿ, ತಮಗೆ ಸಹಾಯವಾಗಿ ಮಿ. ಮೋದಿಯವರನ್ನು ಕರಿಸಿಕೊಂಡರು. ಶ್ರೀ. ಲಾಲಜಿ ನಾರಾಯಣಜಿಯವರು ಗಂಗಾಯಮುನಾ ಸಂಗಮದಲ್ಲಿ ಸರಸ್ವತಿಯಂತೆ ಗುಪ್ತಗಾಮಿನಿಯಾಗಿದ್ದರು ಈ ಮೂವರ ಕೂಡ ಗವರ್ನರಸಾಹೇಬರು ಬಹುವಾಗಿ, ಶಾಂತ ಮತ್ತು ಗಂಭೀರವಾಗಿ ಮಾತಾಡಿದರು. ರಾಜಿಗೆ ಸಿದ್ಧವಾಗಿರುವಂತೆ ಆಶೆಯನ್ನೂ ತೋರಿಸಿದರು. ಆದರೆ ಇವರಿಗೆ ಮಹಾತ್ಮರನ್ನು ಕಾಣಗೊಡುವದಿಲ್ಲೆಂದರು. ಮಿ. ಸ್ಲೋಕೊಂಬಿಸಾಹೇಬರಿಗೆ ಹೋಗಗೊಟ್ಟದ್ದೇ ಅಚಾತುರ್ಯವಾಯಿತೆಂದು ಮಿ. ಬೆನ್ನಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಉದ್ಗಾರ ತೆಗೆದರಷ್ಟೇ; ಅದೇ ಅಚಾತುರ್ಯವನ್ನು ಗವರ್ನರಸಾಹೇಬರು ಮಾಡುವದೆಂತು? ತಮ್ಮ ಮೇಲಿಗೂ ಅವಿವೇಕತನದ ಆರೋಪ ಬರಬಾರದೆಂದು ಸಾಹೇಬರು ಇವರಿಗೆ ಮಹಾತ್ಮರನ್ನು ಕಾಣಗೊಡುವದಿಲ್ಲೆಂದರು. ಈ ದಾರಿ ಬಂದಾದದ್ದೇ ಒಡಂಬಡಿಕೆಯು ಮುರಿಯುವದಾಯಿತು.

ಒಡಂಬಡಿಕೆಯ ಮಾತು ಹೀಗೆ ಮುರಿದದ್ದು ಮುಂಬಯಿಯ ವರ್ತಕ ಸಂಘದವರಿಗೆ ನಿರಾಶೆಯಾಯಿತು. ಈ ದಬ್ಬಾಳಿಕೆಯ ನಿಷೇಧವೆಂದು ತಮ್ಮ ಪಕ್ಷದಿಂದ ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರಶಿಪ್ಪಿಗೆ ರಾಜೀನಾಮೆ ಕೊಡಬೇಕೆಂದು ಗೊತ್ತಾಗಿತ್ತು. ಆದರೆ ನಡುವೆ ಆಕಸ್ಮಿಕವಾಗಿ ಎದ್ದ ಸಂಧಿಗಾಗಿ ರಾಜೀನಾಮೆಯು ತಡೆಹೊಂದಿ ನಿಲ್ಲಿಸಿಯಿತು. ಇದು ಕೃಷ್ಣ ಶಿಷ್ಟಾಯಿಯಂತೆ ನಿರರ್ಥಕವಾದ್ದರಿಂದ, ಇವರು ರಾಜೀನಾಮೆ ಕೊಡುವದಂತೂ ಖಂಡಿತವಾಯಿತು. ಇವರ ತರುವಾಯ ಮೋದಿ ಪಕ್ಷದವರಾದ ಸರ ಕಾವಸಜಿ ಜಹಾಂಗೀರ, ಸರ ಫಿರೋಜ ಸೇಟನಾ, ಸಾರಾಭಾಯಿ ಇವರಿಗೂ ರಾಜೀನಾಮೆ ಕೊಡುವ ಹೊತ್ತು ಬಂದಿತು. ಏಕಂದರೆ- ಬಟ್ಟೆದ ಮಾತಿನ ತಿರಸ್ಕಾರವೆಂದರೆ- ತಮ್ಮೆಲ್ಲರ ಅಪಮಾನವೆಂದು ಇವರೂ ರಾಜೀನಾಮೆ ಕೊಡಬಹುದು. ಇದರಿಂದ ಹಿಂದುಸ್ಥಾನದಲ್ಲಿ ಗಾಳಿಯು ಎತ್ತ ಬೀಸುತ್ತದೆಂಬದು ಗೊತ್ತಾಗುವದು. ಇದೇ ಸಮಯದಲ್ಲಿ ಇದೇ ವರ್ತಕ ಸಂಘದವರು ಲಾರ್ಡ ಆಯರ್ವಿನಸಾಹೇಬರ ಕಡೆಗೆ ಡೆಪ್ಯುಟೇಶನ ಕಳಿಸುವದನ್ನು ಗೊತ್ತು ಮಾಡಿದ್ದರು. ಇದಕ್ಕೆ ದರ್ಶನ ಲಾಭ ಕೊಡುವಂತೆಯೂ ಸಾಹೇಬರು ಈ ಮುಂದಾಗಿ ತಿಳಿಸಿದ್ದಾರೆ. ಆದರೆ ಮುಂಬಯಿಯ ಕೃಷ್ಣ ಶಿಷ್ಟಾಯಿಯು ಮುರಿದದ್ದರಿಂದ ಇವರ ಸಿಮ್ಲಾದ ಪ್ರವಾಸದ ಆಯಾಸ ಉಳಿಯಿತು. ಇದೊಂದು ಲಾಭವೇ ಸರಿ.

ರೌಂಡ ಟೇಬಲಕ್ಕೆ ಯಾರಾರನ್ನು ಕರೆಯಬೇಕು

ಮುಂಬಯಿಯ ಟಾಯಿಮ್ಸ ಪತ್ರದಲ್ಲಿ ರಾವುಂಡ ಟೇಬಲಕ್ಕೆ ಯಾರಾರನ್ನು ಕರಿಸಬೇಕೆಂಬದೊಂದು ಲೇಖವು ಪ್ರಸಿದ್ಧವಾಗಿದೆ. ಅದರಲ್ಲಿ ಸೂಚಿಸಿದ ಹೆಸರುಗಳು:—

ಕಾಂಗ್ರೆಸದ ಪತಿಯಿಂದ-

—:(೦):—

ಧಾರವಾಡದಲ್ಲಿ ಶೇಂದಿಯ ಗುತ್ತಿಗೆಯ ಸವಾಲಾಯಿತು. ಆರು ಅಂಗಡಿಗಳಿರುವವು. ಸವಾಲು ಮಾಡಬಾರದೆಂದು ಸ್ತ್ರೀಯರು ಕಚೇರಿಯ ಬಾಗಿಲದಲ್ಲಿ ಪಿಕೆಟಿಂಗ ನಡೆಸಿದರು. ಮೂರೇ ಅಂಗಡಿಗಳ ಸವಾಲಾಯಿತು. ಹೋದ ವರ್ಷ ಒಂದೊಂದು ಅಂಗಡಿಯು ಮುನ್ನೂರು ರೂಪಾಯಿಗಳಾಗಿತ್ತು. ಈ ವರ್ಷ ಕ ... ರೂಪಾಯಿಕ್ಕಾದವು. ಉಳಿದ ಮೂರು ಅಂಗಡಿ ಕೊಳ್ಳುವರು ಗಿರಾಕಿಗಳೇ ಇಲ್ಲ.

ವ್ಯಾಪಾರದ ಮಂದಿಯು ಸರಕಾರವನ್ನು ತಲ್ಲಣಿಸಿತು.

—:*:—

೧೯೩೦ರ ಆರಂಭದಲ್ಲಿ ದೇಶದ ತುಂಬ ಕೋಲಾಹಲವಾಗಿ ಹಾ-ಹಾಕಾರ ನೆಲೆಸಿತು. ಇಂಗ್ರೇಜರ ವ್ಯಾಪಾರವು ಯಥಾ ಪ್ರಕಾರ ನಡೆಯುತ್ತ ಸ್ವಕೀಯ ರಾಜಕೀಯ ಆಂದೋಲನದಲ್ಲಿಯೂ ತಮಗೆ ವ್ಯಾಪಾರದ ಜನರ ಬೆಂಬಲವಿದೆಂದು ಖಾಸಿತವಾಗಿ ತಿಳಿದಿದ್ದರು. ಆ ತಿಳುವಳಿಕೆಯು ಪೂರಾ ತಪ್ಪಾಯಿತು. ಜನರಿಗೆ ವ್ಯಾಪಾರ ಮಾತ್ರವಲ್ಲ, ಅಂತೆ, ಕಾಯದೆ ಕನ್ನಡಿ ಶಬ್ದಾರ್ಥ ಸಾಧನಗಳಲ್ಲದೆ, ವ್ಯಾಪಾರಿ ಬೇಕಾದಗಳಲ್ಲಿ ಸಹ ಜತ್ತ ಎಂದಿದೆ. ಸಕಲಿಯೆಂದು ವ್ಯವಹಾರಸ್ಥರು ಇಂಗ್ಲಂಡದ ಯಾರದೇ ಸಂಕೆನ್ನು ತಾಳಬಾರದೆಂದು ಪ್ರಕಟಿಸಿದ್ದಾರೆ. ಆದ್ದರಿಂದ ಮುಂದೇನ ಗತಿಯೆಂದು ಇಂಗ್ರೇಜಿ ವ್ಯವಹಾರಸ್ಥರೂ, ಅವರ ಕಡೆ ಸರಕಾರದವರೂ ಚಿಂತೆ ಮಾಡುವರೂ ಸಹಜವಾಗಿದೆ. ಲಾರ್ಡ ಇರ್ವಿನಸಾಹೇಬರು ದಬ್ಬಾಳಿಕೆಯು ಬೇಕಾದನ್ನು ಆರ್ಡಿನನ್ಸಗಳನ್ನು ಹೊರಡಿಸಿ, ಸ್ವರಾಜ್ಯ ಚಳವಳಿಯು ಶಾಂತವಾಗುವದರ ಬದಲು ಹೆಚ್ಚು ಉಗ್ರಸ್ವರೂಪ ಧಾರಣವಾಗುತ್ತ ಇದೆ. ದಿನಾಲು ಸಾವಿರಾರು ಜನ ಸ್ವಯಂಸೇವಕರು ತಲೆಯೆತ್ತಿ ಡಿಸಿಕೊಳ್ಳುವರು; ತುರುಂಗಕ್ಕೆ ಹೋಗುವರು. ಇದಲ್ಲದೆ ಇಂಗ್ರೇಜಿ ವ್ಯಾಪಾರವನ್ನು ಬಹಿಷ್ಕಾರ ಹಾಕುವ ಹೊಳೆಯ ತ್ರಾಣವು ಅದರಿಂದ ಇದ ... ವ್ಯಾಪಾರ ... ಹಿಂದುಸ್ಥಾನ ನರ ... ಮೇಂಬರರಾದ ಸ್ಟೇಟಸೆಕ್ರೆಟರಿ ... ಬೆನ್ ... ಹೊರಡರು ... ರಾಜಕೀಯ ಪರಿಸ್ಥಿತಿಯನ್ನು ಕುರಿತು, ಮೆ ... ಪೂರ್ಣ ಸ್ವಾತಂತ್ರ್ಯಕ್ಕೆ ಸಮಾನವಾದ ಸ್ಥಿತಿ ... ಹೇಳಿ ... ವಿಶ್ವಾಸಾರ್ಹತೆ ... ದಾಸ್ಯದ ... ಮುಸಲಮಾನ, ಹಿಂದು ಮತ್ತು ಪಾರ್ಸಿ ಕೋಟ್ಯಾಧೀಶರ ... ಪ್ರಚಾರ ಮಾಡಿದರು. ಹಿಂದೀ ಜನರ ಸಂಚಳಿಯ ಮಹತ್ವಾಕಾಂಕ್ಷೆಯನ್ನು ಕೃಷ್ಣ ವ ... ಸವಿನಯ, ಈಗಿನ ಬಹಿಷ್ಕಾರದಿಂದ ಬಿಗುವು ಕಡಿಮೆಯಾಗಲಾರದೆಂದು ಇವರು ಸಾಹೇಬರಿಗೆ ನಿಧಿ ದಿಕ್ಕಿನಿಂದ ಹೇಳಿದಂತೆ ಪ್ರಸಿದ್ಧವಾಗಿದೆ.

ಅಸೆಂಬ್ಲಿಯ ಮೆಂಬರರಾದ ಶ್ರೀ ರಾಮ ... ಸ್ವಾತಂತ್ರ್ಯ ... ತುರುಂಗದಲ್ಲಿದ್ದಾರೆ. ಇವರು ಯಾವ ... ಮೊದಲೇ ಅನ್ನ ... ಬಿಟ್ಟಿರುವರು.

ಮ್ಯೊಲಾನಾ ಶೌಕತಲ್ಲಿಯವರಿಗೆ ಪೀಕಲಾಟ ಬಂತು.

—(೦)—

ಮ್ಯೊಲಾನಾ ಶೌಕತಲ್ಲಿಯವರು ಸದ್ಯದಲ್ಲಿ ಬ್ರಿಟಿಶ ಸರಕಾರದ ಕೃಪೆಗೊಳಗಾದ ಗೃಹಸ್ಥರಾದ್ದರಿಂದ, ಸರಕಾರದವರು ಅವರಿಗೆ ದಕ್ಷಿಣ ಆಫ್ರಿಕೆಗೆ ಹೋಗಲೂ, ಅನಂತರ ರಾವುಂಡಟೇಬಲಿನ ವೇಳೆಯಲ್ಲಿ ಲಂಡನಕ್ಕೆ ಒರಲೂ ಪಾಸಪೋರ್ಟ ಕೊಟ್ಟರು. ಸ್ಥಿತಿಯು ಬಲಕ್ಕಿಂತ ಪ್ರಜಾಬಲವೇ ಹೆಚ್ಚೆಂಬುದು ಅವರಿಗೆ ಗೊತ್ತಿದ್ದರೂ, ಈಗ ಅದೇ ಮಾದಾಗಿ ಹೇಳದೆ ಪ್ರಜ್ಞಾನದ ಸ್ಮರಣೆಯನ್ನು ಇವರಿಗೆ ಆಫ್ರಿಕೆಯ ಮುಸಲ್ಮಾನ ಸಭೆ ತಂದು ಕೊಟ್ಟರು. ಇವರು ಮ್ಯೊಲಾನಾ ಸಾಹೇಬರಿಗೆ ತಾರು ಮಾಡಿ—

"ನೀವು ಮೊದಲು ಮಹಾತ್ಮರ ವಿರುದ್ಧ ನಡೆಸಿದ ಚಳವಳಿಯನ್ನು ಬಿಡಿರಿ. ಅವರ ಶಿಷ್ಯತ್ವ ಸ್ವೀಕಾರ ಮಾಡಿ, ಕಾಂಗ್ರೆಸದಲ್ಲಿ ಸೇರಿಕೊಳ್ಳಿರಿ. ಅಂದರೇ ನಾವು ನಿಮಗೆ ಸ್ವಾಗತವನ್ನೀಯುವೆವು. ನಿಮ್ಮ ನಡತೆಯಲ್ಲಿ ಬದಲು ಮಾಡಿಕೊಳ್ಳದೆ ಬಂದರೆ ನಿಮಗಾವ ಮಾನಮರ್ಯಾದೆ ದೊರೆಯಲಾರದು"

ಎಂಬದಾಗಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಮುಸಲ್ಮಾನ ಧರ್ಮತಾರಕರೆಂದು ಮ್ಯೊಲಾನರು ಒಳ್ಳೇ ಉಬ್ಬಿದ್ದಾರೆ. ಆ ಉಬ್ಬು ಪೂರಾ ಹೋಗಿ ಮೈ ಉಬ್ಬು ಕೂಡ ಇಳಿದು ಹೋಗುವಂತೆ ಇವರಿಗೆ ಬಂದ ಪೀಕಲಾಟ ಕಂಡು ಬಹಳವಾಗಿ ವಿಷಾದಪಡಬೇಕಾಗುತ್ತದೆ. ಎಷ್ಟು ರಾಜಭಕ್ತಿಯು ಇವರಿಗೆ ಪ್ರಜಾಬಲ ಪ್ರದಾನ ಮಾಡಿಸಲು ಶಕ್ಯವಾದೀತು?

ಶಿಯಾ ಸುನ್ನಿ ಜಗಳ; ತಾಬೂತಗಳು ಕೂತಲ್ಲಿಯೇ ಕೂತಿವೆ.

ಆಗ್ರಾದಲ್ಲಿ ಶಿಯಾ-ಸುನ್ನಿಗಳ ಜಗಳವೆದ್ದಿದೆ. ಈ ಮೂಲಕ ಅಲ್ಲಿಯ ತಾಬೂತಗಳು ೧೦ ನೆಯ ತಾರೀಖಿನ ದಿವಸ ವಿಸರ್ಜನವಾಗದೆ ಕೂತಲ್ಲೇ ಕೂತಿವೆ.

ಪೇಶಾವರದಲ್ಲಿ ಬಂದೂಕಿನಿಂದ ಗುಂಡು ಹೋಗಗೊಟ್ಟು ಇಬ್ಬರು ಹುಡುಗರ ಸಾವಿಗೆ ಕಾರಣನಾದ ಸಾರ್ಜಂಟನಿಗೆ ಹತ್ತು ತಿಂಗಳ ಶಿಕ್ಷೆಯಾಯಿತು.

ಸರಕಾರದವರು ನಡೆಸಿದ ದಬ್ಬಾಳಿಕೆಗೆ ಪ್ರತ್ಯುತ್ತರವೆಂದು ಎಲ್ಲ ಯುರೋಪಿಯನ್ನರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳಿರೆಂದು ಶ್ರೀ ಸೌ|| ಮುನಶಿ ಲೀಲಾವತಿಯವ್ವನವರು ಗುಜರಾಥದಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾರೆ.

ಸವದತ್ತಿಯಲ್ಲಿ ರಾಷ್ಟ್ರೀಯ ನಿಶಾನೆಯ ಸತ್ಯಾಗ್ರಹ.

—(೦)—

ಸವದತ್ತಿ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆಯನ್ನು ಏರಿಸಬೇಕೆಂಬದಾಗಿ ನಾಗರಿಕರು ಶ್ರೀ. ಗುರುರಾವ ಮುನವಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಅದರದೊಂದು ನಕಲನ್ನು ಅಧ್ಯಕ್ಷರ ಕಡೆಗೆ ಕಳಿಸಿದ್ದಾರೆ. ಮುನಿಸಿಪಾಲಿಟಿಯವರು ೧೫ ದಿವಸಗಳಲ್ಲಿ ನಿಶಾನೆ ಏರಿಸದಿದ್ದರೆ ಊರವರು ಸತ್ಯಾಗ್ರಹ ಮಾಡಿ, ನಿಶಾನೆ ಏರಿಸಬೇಕೆಂಬ ಠರಾವು ಮಾಡಿದ್ದಾರೆ.

ಕ್ರಿಶ್ಚನ್ನರು ಸತ್ಯಾಗ್ರಹದಲ್ಲಿ ಸೇರಿದರು.

—(೦)—

ಮುಂಬಯಿಯ ಕ್ರಿಶ್ಚನ್ನರು ಸತ್ಯಾಗ್ರಹದಲ್ಲಿ ಸೇರಿದರು. ಇವರು ಕ್ರಿಸ್ತನಂತೆ ಅಹಿಂಸೆಯ ಅಸಹಕಾರತತ್ವವನ್ನು ಪೂರಾ ಅಂಗೀಕರಿಸಿ, ರಾಷ್ಟ್ರವಿಘಾತಕ ಮತ್ತು ಜ್ಞಾತಿವಿಘಾತಕ ಚಳವಳಿ ನಡೆಸಲು ಕ್ರಿಶ್ಚನ್ನರ ಇಚ್ಛೆಯಿಲ್ಲ. ನಮಗೂ ಸ್ವರಾಜ್ಯ ಸ್ವಾತಂತ್ರ್ಯ ಬೇಕು. ಅಹಿಂಸೆಯ ಯುದ್ಧದಲ್ಲಿ ವ್ಯಥೆ ಹೊಂದಿದಂಥ ಮತ್ತು ಘಾಯವಾದಂಥವರ ಸಹಾಯಕ್ಕಾಗಿ ಒಂದು ರವಿವಾರದ ಪ್ರಾರ್ಥನೆಯಲ್ಲಿ ಕೂಡುವ ದ್ರವ್ಯವನ್ನ ಕಾಂಗ್ರೆಸ ಕಮೀಟಿಗೆ ಕೊಡಬೇಕೆಂಬ ಠರಾವು ಮಾಡಿದ್ದಾರೆ.

ಇಂಗ್ಲಿಷ ಜನರು ಹಿಂದುಸ್ಥಾನ ಬಿಡಲಿಕ್ಕೆ ಸಿದ್ಧರಿಲ್ಲ.

—(೦)—

ಸಾಯಮನ್ನ ರಿಪೋರ್ಟಿನ ಕರ್ಮಕಥೆಯು ಮೊದಲು ಭವಿಷ್ಯ ಮಾಡಿದಂತಾಯಿತು. ರಿಪೋರ್ಟ ಅತ್ಯಂತವಾಗಿ ಅಸಮಾಧಾನಕಾರಕವಾಗಿದ್ದು ಹಿಂದುಸ್ಥಾನದ ಮೇಲಿರುವ ತಮ್ಮ ಸ್ವಾಮಿತ್ವವನ್ನು ಬಿಟ್ಟುಕೊಡಲಿಕ್ಕೆ ಇಂಗ್ಲಿಷ ಜನರು ಸಿದ್ಧರಿರುವದಿಲ್ಲೆಂದು ಇದರಿಂದ ಸಿದ್ಧವಾಗುತ್ತದೆಂದು ಸರ ಸೆಟನಾ ಇವರು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ. ಜೋರಾಪುರದ ಗುರುರಾಯರಿಗೆ ಶಿಕ್ಷೆ.

—(೦)—

ಬದಾಮಿಯಲ್ಲಿ ಶ್ರೀ. ಜೋರಾಪುರದ ಗುರುರಾಯರಿಗೆ ಆರು ತಿಂಗಳ ಶಿಕ್ಷೆ ಮತ್ತು ೫೦ ರೂಪಾಯಿ ದಂಡವಾಯಿತು.

ಹ್ಯಾಲಂಟಿಯರರಿಗೆ ಊಟಕ್ಕೆ ಹಾಕಿದ್ದಕ್ಕಾಗಿ ಕೌನ್ಸಿಲ ಮೆಂಬರನಿಗೆ ಶಿಕ್ಷೆ.

—(೦)—

ಮದ್ರಾಸ ಇಲಾಖೆಯಲ್ಲಿ ಕಾಕನಾಡ ಜಿಲ್ಲೆಗೆ ಸೇರಿದ ರಾಮಚಂದ್ರಪುರದಲ್ಲಿ ಕೌನ್ಸಿಲ ಮೆಂಬರರಾಗಿದ್ದ ವೆಂಕಟರಮಣ ನಾರಾಯಣ ರಡ್ಡಿಯವರು ಹ್ಯಾಲಂಟಿಯರರಿಗೆ ಊಟಕ್ಕೆ ಹಾಕಿದರೆಂದೂ ಇದೇ ಹ್ಯಾಲಂಟಿಯರರಿಗೆ ಇಳಿದುಕೊಳ್ಳಲು ಛತ್ರದಲ್ಲಿ ಸ್ಥಳ ಕೊಟ್ಟರೆಂದೂ ಶ್ರೀ. ಸತ್ಯನಾರಾಯಣ ರಡ್ಡಿಯವರಿಗೆ ಆರಾರು ತಿಂಗಳ ಸಖ್ತ ಶಿಕ್ಷೆ ಮತ್ತು ಸಾವಿರ ರೂಪಾಯಿ ದಂಡ ಮಾಡಿದ್ದಾರೆ.

ಪಠಾಣ ಸರದಾರರ ತಂದಿ ಮಗನಿಗೆ ಹದ್ದುಪಾರು

—(೦)—

ಮುಂಬಯಿಯಲ್ಲಿ ಪ್ರಸಿದ್ಧ ಪಠಾಣ ಸರದಾರರಾದ ಅಬ್ದುಲಗಫಾರಖಾನರು ಕಾಂಗ್ರೆಸದಲ್ಲಿ ಸೇರಿದರು. ಅನೇಕ ಪಠಾಣರು ಮೊದಲಾದವರು ಸತ್ಯಾಗ್ರಹದಲ್ಲಿ ಸೇರಿದರು. ಇವರಿಂದ ಕಾಂಗ್ರೆಸ ಮತ್ತು ಅಸಹಕಾರಕ್ಕೆ ಒಳ್ಳೇ ಬಲಬರುವದೆಂದು ತಿಳಿದು, ಸರಕಾರದವರು ಫ್ರಂಟಿಯರ ಕಾಯದೆ ಪಟ್ಟಿ, ಇವರನ್ನು ಪೇಶಾವರಕ್ಕೆ ಹದ್ದುಪಾರ ಮಾಡಿದರು. ಮಹಾಯುದ್ಧದ ವೇಳೆಯಲ್ಲಿ ಇವರು ಸರಕಾರಕ್ಕೆ ಬಹಳ ಸಹಾಯ ಮಾಡಿದ್ದರು. ಆ ಉಪಕಾರವನ್ನು ಈಗ ತೀರಿಸಿದರೆಂದೂ ಸರಕಾರಕ್ಕೆ ಉಪಕಾರ ಮಾಡುವಂಥವರು ಎಚ್ಚರಾಗಬೇಕೆಂದೂ ಇವರು ಮುಂಬಯಿ ಬಿಡುವಾಗ ಜನರಿಗೆ ಸಂದೇಶ ಹೇಳಿದ್ದಾರೆ.

ಹುಬ್ಬಳ್ಳಿಯ ಹಿಂದುಸ್ಥಾನಿ ಸೇವಾದಲದ ವೀರತರುಣ ಉತ್ಸಾಹಿಗಳಾದ ಶ್ರೀ ಮಹಾಶಟ್ಟಿಯವರನ್ನು ಮಂಗಳೂರಿನಲ್ಲಿ ಹಿಡಿದಿರುವರು.

ಅಲೀಬಾಗದಲ್ಲಿ ಸರಕಾರೀ ಅಡವಿಯೊಳಗಿನ ಹುಲ್ಲು ಕಟ್ಟಿಗೆ ಕಡಿಯುವ ಜನಗಳಿಂದ ಕಾಯದೆ ಭಂಗ ಮಾಡುವ ಸಿದ್ಧತೆ ನಡೆದಿದೆ.

ಸರ ಪುರುಷೋತ್ತಮದಾಸ ಮತ್ತು ಮಿ. ಹುಶೇನಭಾಯಿ ಲಾಲಜಿಯವರು ಅಸೆಂಬ್ಲಿ ಮತ್ತು ಕೌನ್ಸಿಲಕ್ಕೆ ರಾಜೀನಾಮೆ ಕೊಟ್ಟದ್ದರಿಂದ ತೆರವಾದ ಸ್ಥಳಗಳನ್ನು ತುಂಬುವಂತೆ ಯಾರನ್ನೂ ಆರಿಸಬಾರದೆಂದು ಮುಂಬಯಿ ವರ್ತಕ ಸಂಘವು ಠರಾವು ಮಾಡಿದ್ದಾರೆ.

...ಡುಗನ ಹೆಸರೇ ಹೊರಡಲಿಲ್ಲ ನಾನು ಹ್ಯಾಗೆ ಕೊಡ ...) ಅಂದರು !!

ಇಲ್ಲಿ ಹೆಡ್ಡಮಾಸ್ತರ ಎನ್. ಬಿ. ಕೌಲಗಿಯಂ...ಪರು ಇದ್ದರು ಅವರ ಕಡಿಗೆ ೪ ನೇ ಯತ್ತೆ ಇತ್ತು ...ನ್ನ ಹುಡುಗನ ಹಜರಿ ತಕ್ಕೊಂಡಿದ್ದರು. ದರ ...ತಿಂಗಳ ಫೀ ಕೊಡತಾ ಒಂದದೆ ಕ್ಲಾಸಿನ ಹುಡುಗರು ...ನೇ ಎತ್ತೆ ಕ್ಲಾಸ ಮಾಸ್ತರ ಮನಿಯ ಹುಡುಗ ಬರ ...ದ್ದಾ ಅಂತಾ ಹೇಳತಾರೆ ಹೀಗಿದ್ದು ಹೆಸರೇ ಇ...ಲ್ಲಾಯಂಬ ಸಂಗತಿಯು ಆಶ್ಚರ್ಯವಾಗಿರತದೆ ನ...ನ್ನ ಹುಡುಗನ್ನ ಎರಡನೆ ಸಾಲಿಗೆ ಕಳಿಸಬೇಕಾದರೆ ...ಯಾವ ಕ್ಲಾಸಿಗೆ ಹೆಸರು ಹಚ್ಚಬೇಕು

ಇನ್ನೊಂದು ಸಂಗತಿ ಏನಂದರೆ ಜಿ. ಆರ ...ಕೋಟಿ ನವಲಗುಂದ ಅಂತ ರಜಿಸ್ಟರದಲ್ಲಿ ಹೆಸರು ಇದ್ದು ...ವನ್ನು ...ನೇ ಯತ್ತಾದಲ್ಲಿ ಇದ್ದಾ ೧ನೇ ಯತ್ತೆ ... ಕೂತೇ ಇಲ್ಲಾ ...ನೇ ಎತ್ತೆ ಪರೀಕ್ಷೆಯ ...ಪಾಸ ಆದನು. ಆ ಸರ್ಟಿಫಿಕೇಟ ಕೊಡೋ...ಕ್ಕೆ ಜಿ. ಆರ ಕೋಟಿ ೧ನೇ ಯತ್ತಾ ಪಾಸ ಅಂ...ಸರ್ಟಿಫಿಕೇಟ ಕೊಟ್ಟಾರೆ.

ಈ ಬಗ್ಗೆ ನಾನು ಮುನಸಿಪಾಲಿಟಿ ಪ್ರೆ॥ ...॥ ಕಡಿಗೆ ಮತ್ತು ಮೆ॥ ಎ॥ ಈ॥ ಸಾ॥ ಸದರ ...॥ ಧಾರವಾಡ ಇವರ ಕಡಿಗೆ ಅರ್ಜಿ ಮಾಡಿರತೇನೆ ...ನೂ ಜವಾಬ ಹತ್ತಲಿಲ್ಲಾ ಸಾಲಿ ಸುರುವಾಗೋ ದಿ...ವಸ ಸಮೀಪ ಬಂದ ಕಾರಣ ತಮ್ಮ ಪತ್ರದಲ್ಲಿ ಮು...ದ್ರಿಸಿದರೆ ಜವಾಬ ಹತ್ತಿ ಸರ್ಟಿಫಿಕೇಟ ಸಿಕ್ಕೀತೆಂದು ...ನಂಬಿ ಕಳಿಸಿದ್ದೇನೆ.

ಆ. ವೆ. ಕುಸುಗಲ್ಲ.

ನೋಟೀಸು.

ಮಲ್ಲಾ ತಂದಿ ರಾಮಪ್ಪಾ ನರಗುಂದ ಸಾ...ನೆ ಮುತ್ತಿಕಟ್ಟಿ ತಾಲೂಕ ಶಿಗ್ಗಾವಿ ಈತನಿಗೆ—

ಕಳಗೆ ಹಚ್ಚಿಬ್ಬನ ಗುತರ್ಾ ಮಾಡುವ ಯಲ್ಲ...ವ್ವಾ ಕೋಂ ಮಲ್ಲಾ ನರಗುಂದ ಈಕೆಯು ನಿನಗೆ ...ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ...ಗಂಡನಿದ್ದು, ನಾನು ಪ್ರಬುದ್ಧಳಾದ ಒಳ...ಗೆ ಬಹಳ ತುಸು ದಿವಸ ನನ್ನ ಕೂಡ ಚಲೋ ರೀತಿ...ಯಿಂದ ಬಾಳಿವೆ ಮಾಡಿದಿ. ನಿನ್ನ ಹೊಟ್ಟೆಯಿಂದ ...ಒಂದು ಕೂಸು ಹುಟ್ಟಿತ್ತು. ಅದು ಸತ್ತು ಹೋಗಿದೆ ...ನಾನೂ ನೀನೂ ಒಂದೇ ಊರು ಮತ್ತು ಒಂದೇ ಓ...ಣಿಯವರು ಇರುತ್ತೇವೆ ಆದರೂ ನೀನು ನನ್ನನ್ನು ...ಬಿಟ್ಟಿ, ಎರಡನೇ ಹೆಂಗಸನ್ನು ಇಟ್ಟುಕೊಂಡು ನನ್ನ...ನ್ನ ಬಿಟ್ಟು ಐದು ವರ್ಷವಾಯಿತು. ಈ ದರ...ಮ್ಯಾನ ಬೇಕಾದಷ್ಟು ಜನರು ಹೇಳಿದರೂ ನೀನು ನ... ಕೂಡ ಬಾಳಿವೆ ಮಾಡಲಿಕ್ಕೆ ಕಬೂಲ ಮಾಡಲಿ...ಲ್ಲ ಐದು ವರ್ಷ ... ನೋಡಿ, ಈ ನೋಟೀ... ಕೊಟ್ಟಿರುತ್ತೇನೆ. ... ಈ ನೋಟೀಸು ಮು...ಟ್ಟಿದ ಎಂಟು ದಿವಸಗಳಲ್ಲಿ ನನಗೆ ಈ ವರೆಗೆ ಹೊಟ್ಟಿ ಮತ್ತು ಬಟ್ಟೆ ಖರ್ಚಗಾಗಿ ಶಿದ್ದಪ್ಪಾ ಶಿವಪ್ಪಾ ಭಗ ವಂತನವರ ಇವರಲ್ಲಿ ಮಾಡಿದ ಸಾಲದ ರಕಮು ನಾಲ್ಕನೂರು ರೂಪಾಯಿ ಕೊಟ್ಟು, ನನ್ನನ್ನು ಕರ ಕೊಂಡು ಹೋಗಿ ಸುರಳಿತ ರೀತಿಯಿಂದ ಪ್ರಪಂಚ ಮಾಡಬೇಕು. ಮತ್ತು ಈಗಿಟ್ಟುಕೊಂಡ ಹೆಂಗಸ ನ್ನು ಬಿಡಬೇಕು ಮತ್ತು ನನ್ನ ಮೈಲಿದ್ದ ಎಲ್ಲ ದಾ ಗೀನೆ ನೀನು ಕಸಕೊಂಡಿರುವಿ ಅವನ್ನೂ ಕೊಡ ಬೇಕು ಇದಕ್ಕೆ ತಪ್ಪಿದರೆ- ನೀನು ಬಾಳಿವೆ ಮಾಡು ವದಿಲ್ಲೆಂದು ತಿಳಿದು ನಾನು ಎರಡನೇಯವನ್ನು ಉ ಡಿಕೆಮಾಡಿಕೊಂಡು ಪ್ರಪಂಚ ನಡಸುವೆನು ಮತ್ತು ಈಗಾದ ಸಾಲದ ಬಗ್ಗೆ ನಿನ್ನ ಮೇಲೆ ಕಾಯದೆ ಪ್ರ ಕಾರ ಇಲಾಜ ಮಾಡುವೆನು. ಆ ಸಂಬಂಧಿ ಯಾ ವತ್ತು ಖರ್ಚಿನ ಬೋಜಾ ನಿನ್ನ ಮೇಲೆ ಆದೆ. ನಾ ನು ಉಡಕಿಯಾದ ಬಳಿಕ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿಯ ಗಂಡನ ಮೇಲೆ ಬಿಲಕೂ ಲ ನಡೆಯಲಾರದು ಅಂತಾ ಕೊಟ್ಟ ನೋಡ ಪತ್ರದ ನೋಟೀಸು ಮತ್ತು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲದೆ ತಿಳಿಯುವದು ತಾ. ೧೨ ಜೂನ ೧೯೩೦ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುತರ್ಾ ಯಲ್ಲವ್ವಾ ಕೋಂ ಮಲ್ಲಾ ನರಗುಂದ ಈಕಿ ಕೈದು ಆದೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದ ಪ್ರತಿಯೊಂದು ವಳಿಗೆ ಒಂದೂ ವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋ ರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂ ದ ಅವಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾ ರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾ ಗುವ ನಿತ್ಯ ಮತ್ತು ವಾರ ಪತದ ಚಂದಾದಾರರ ಹೆಸರಿನಿಂದ ಹಿ. ಪಿ ಯನ್ನು ಕಳಿಸುವೆವು. ಚಂದಾದಾ ರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾ ಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಕೆಲಸಗಾರರು ಬೇಕು

—(೦)—

ವಿಜಯ ಮುದ್ರಾಲಯದಲ್ಲಿ ಟ್ರೆಡಲ, ಪ್ರೂ ಫಿಂಗ ಮತ್ತು ಹ್ಯಾಂಡ ಪ್ರೆಸ ಮುದ್ರಣ ಬಲ್ಲಂ ಥ ಕಲಸಗಾರರು ಬೇಕಾಗಿದ್ದಾರೆ. ಉಮೇದವಾ ರರಿಗೆ ಕೆಲಸ ಕಲಿಸಲ್ಪಡುವದು. ಕೆಲಸ ಮಾಡ ಲಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಸಂ ಬಳ ಯೋಗ್ಯತೆಯ ಪ್ರಕಾರ.

ಮ್ಯಾನೇಜರ ವಿಜಯ
ಧಾರವಾಡ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿ ನಿಮ್ಮ

—(೦)—



ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸಳವು

ಮೋಟಾರ ಡ್ರಾಯವ್ಹರ ವಿದ್ಯಾರ್ಥಿಗಳು ಜನರತ್ತ ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾ ಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರುದ ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯ್ ವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು , ಈಗಾಗಲೇ ಅನೇ ಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ನಿಯಮಿತ ಸಂಖ್ಯೆಯ ಜನರನು ತಕ್ಕೊಳ್ಳಬೇಕಾದ್ದರಿಂದ ಬರ ಬಯಸುವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರಿ ದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದ ರಿಂದ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊ ಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅ ಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮಾನಸಪೂರ್ತಿನಹಳ್ಳಿರ, ಧಾರವಾಡ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾ ರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿ ಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಶನಿವಾರ ತಾರೀಖು ೧೪ನೇ ಜೂನ ೧೯೩೦ (ಸಂಚಿಕೆ ೧೬೩

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

AGENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸುಗಳು	ಸ್ಥಿರವಾದ ಅಸಮರ್ಥತೆಯಲ್ಲಿಯೂ	ಖಂಡಿತವಾದ ಬೋನಸಗಳ
ಧಾರಾಳವಾದ ಕರಾರುಗಳ ಮೇಲೆ	[illegible]ರದ್ದಾಗದ ಪಾಲಿಸಿಯ ಯೋಜನ	ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ
ಏಜಂಟರು ಬೇಕಾಗಿದ್ದಾರೆ	ಬಂಡವಲವು	ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೆ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ. [illegible]. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರದುಕೊಳ್ಳಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಿಟೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂ. ೧೦ ಲಕ್ಷದ ಮೇಲೆ ಉಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲಾಗುವದು. ಕಾರ್ಡಿನ ಮುಖಾಂತರ ಸದ ಸ್ಯರುಗಳಿಗೆ ಚಿನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳ ಬೇಕು.

ಮಧ್ವರಾವ ಬಿ. ಜಹಾಗಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳ ಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪಕ್ಕಾ ಇಟ್ಟುಕೊಳ್ಳುವ ೭ ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	
೩ ,,	

ವಾರ ಪತ್ರಕ್ಕೆ ೧ ವರ್ಷಕ್ಕೆ

ವಿಶೇಷ ಮಾಹಿತಿ ಕೇಳಿಗಸ ಕೊಳ್ಳಿರಿ.

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ವದ್ಯ ೨

ವೆಲ್ಸಸಾಹೇಬರ ವಿಲಾಯತಿಗೆ ಪ್ರಯಾಣ.

—()—(೪)—()—

ಇಂಥ ಸಾಹೇಬರಿದ್ದರೇ ಸ್ವರಾಜ್ಯ ದೊರೆಯುವದು.

—(೦)—

ಬೆಳಗಾವ ಜಿಲ್ಹೆಯ ದಕ್ಷಿಣ ಭಾಗದಲ್ಲಿ ಕಳೆದೆರಡು ತಿಂಗಳಿಂದ ಹೋಳೀ ಹಾಕಿದ ಮಿ. ವೆಲ್ಸಸಾಹೇಬರು ಎಂಟು ತಿಂಗಳ ರಜೆಯಿಂದ ವಿಲಾಯತಿಗೆ ಪ್ರಯಾಣ ಮಾಡಿದರು. ವೆಲ್ಸಸಾಹೇಬರಂಥ ಅಮಲದಾರರು ಪ್ರತಿಯೊಂದು ಜಿಲ್ಹೆಯಲ್ಲಿರಲಿಲ್ಲವೆಂಬದೇ ದುಃಖ. ಇಂಥವರಿಂದ ಅಸಹ್ಯವಾಗಿ ಪ್ರಜಾಪೀಡೆಯಾಗಿ, ಕೆಲಕಾಲ ಪ್ರಜರು ಕಷ್ಟನಷ್ಟಗಳಿಗೆ ಗುರಿಯಾದರೂ, ಸ್ವರಾಜ್ಯ ಸ್ವಾತಂತ್ರ್ಯಕ್ಕೆ ಒಳ್ಳೇ ಸಹಾಯಕರಾಗುವರು. ಸಾಹೇಬರು ಮಹಾತ್ಮರ ಭಾವಪಟವನ್ನು ತುಳಿದು, ತೀರ ಅತ್ಯಂತವಾದ ನೀಚತನದಿಂದ ವರ್ತಿಸಿದ ಸಂಗತಿಯು ಸುಧಾರಿಸಿದ ಜಗತ್ತೇ ಛಳಿಯುವಂತಾಗಿರುತ್ತದೆ. ಬೆಳಗಾವಿಯ ಕಾಂಗ್ರೆಸ ಕಮಿಟಿಯವರು ಇದು ಸರಿಯೋ? ದಿಟವೋ? ಎಂದು ಪತ್ರ ಬರೆದು, ಇವರನ್ನು ಕೇಳಲು—ಇವರು ಹಾರಿಸಿಕೊಂಡ ಉತ್ತರ ಕೊಟ್ಟರು. ಆವರೆ ಸ್ವತಂತ್ರವಾಗಿ ಕೆಲ ಮುಖಂಡರು ವಿಚಾರ ಮಾಡಲಾಗಿ, ಸಾಹೇಬರ ಮಂಗಾಟಿಕೆಯು ನಿಜವೆಂದು ತಿಳಿದು ಬಂತು. ಇಂಗ್ರೇಜಿ ಸರಕಾರದವರು ಈ ಕಾರ ಉದ್ಧಾಮತನದಿಂದ ನಡೆದವರನ್ನು ರಜೆಯ ನೆವದಿಂದ ವಿಲಾಯತಿಗೆ ಕಳಿಸದೆ, ಅವರಿಗೆ ತಕ್ಕ ಶಿಕ್ಷೆ ಮಾಡತಕ್ಕದ್ದೇ ವಿಹಿತ. ಕಾಯದೆ ಮತ್ತು ವ್ಯವಸ್ಥೆಯು ಉಚ್ಚನೀಚವೆಂಬ ಭೇದ ಮಾಡುವದಿಲ್ಲ. ಸರಕಾರದವರು ಕೂಡದು ಮಹಾತ್ಮರೇ ಮೊದಲು ಅನೇಕ ಭಾರತೀಯ ಶ್ರೇಷ್ಠ ಪುರುಷರನ್ನು ಹಾಕಿದ್ದಾರೆ. ಆ ಉಚ್ಚ ನೀಚ ಭೇದ ಮಸ್ಕರಾದ ಮಿ. ವೆಲ್ಸಸಾಹೇ

ಹಿರೇಬಾಗೇವಾಡಿಯಲ್ಲಿ ದಂಗೆ.

ಶಿಂದಿಯ ಹೀಪು ಸುರುವಿದರು.

ಮುತ್ತೇದಾರನ ಮನೆ ಕೆಡವಿದರು.

—(೦)—

ಇಲ್ಲಿ ಸಿಂದೀ ಗಿಡ ಕಡಿಯುವದು ನಡದೇ ಇತ್ತು. ಈ ವರೆಗೆ ೧೦೦೦ ಗಿಡಗಳನ್ನು ಊರ ಜನರು ಪೋಲೀಸ ಅಮಲದಾರ ಮುಂದೆಯೇ ರಣಹಲಿಗೆ ಹಚ್ಚಿಕೊಂಡು ಹೋಗಿ ಕಡಿದಿರುವರು. ಕಳೆದ ವಾರದಲ್ಲಿ ಫೌಜದಾರರು ದಿನಾಲು ಬೆಳಗಾವಿಯಿಂದ ಸ್ವತಃ ಬಂದು ಹೋಗುತ್ತಿದ್ದರು. ತಾ|| ೪ನೇ ದಿನ ೬ ಘಂಟೆಯ ಸುಮಾರಕ್ಕೆ ಫೌಜದಾರರು ೪೦ ಜನ ಸಶಸ್ತ್ರ ಪೋಲೀಸರೊಡನೆ ದ. ಭಾ. ಪ್ರಾಂತ ಪೋ. ಸು. ಮತ್ತು ಅ. ಪೋ. ಸು. ರೊಡನೆ ಇಲ್ಲಿಗೆ ಬಂದರು. ಇವರು ಬಂದ ಕೂಡಲೆ ೨-೩ ಸಾವಿರ ಜನರು ನೆರೆದಾಗ ಪೋಲೀಸರು ೩೬ ಜನರನ್ನು ಮೋಟಾರಿನಲ್ಲಿ ಹತ್ತಿಸಿಕೊಂಡುಹೋದರು. ಈ ಜನರನ್ನು ಒಯ್ದು ಕೆಲ ಹೊತ್ತಿನ ಮೇಲೆ ಜನರು ರೊಚ್ಚಿಗೆದ್ದು ಊರೊಳಗಿನ ಸಿಂದಿಯ ಅಂಗಡಿಯನ್ನು ಕೆಡವಿ ಸೆರೆಯನ್ನು ಉರುಳಿಸಿಬಿಟ್ಟರು. ಆ ಮೇಲೆ ಸಿಂದಿಯ ಗುತ್ತೇದಾರನ ಮನೆ ಕೆಡವಿದರು. ಪೋಲೀಸರು ಹೋದ ಒಂದು ತಾಸಿನಲ್ಲಿ ಇಷ್ಟೆಲ್ಲ ಗೊಂದಲವಾಯಿತು. ಇಷ್ಟರಲ್ಲಿ ಕಿತ್ತೂರಿನ ಒಬ್ಬ ಮುಖಂಡರು ಒಂದು ಸಭೆಮಾಡಿ ಜನರನ್ನು ಶಾಂತಗೊಳಿಸಿದರು. ತಾ|| ೫ನೇ ದಿನ ನಿಶ್ಚಯದಂತೆ ಜನರು ಸಿಂದಿಯ ಗಿಡ ಕಡಿಯಲು ಹೊರಡುವಷ್ಟರಲ್ಲಿ ಕಲೆಕ್ಟರರು ೬೦ ಸಶಸ್ತ್ರ ಪೋಲೀಸರೊಡನೆ ಗಡಂಗದ ಗುತ್ತೇದಾರನ ಮನೆ ತಾಂಕಂಬಗಳು ಹರಿಯಲ್ಪಟ್ಟ ಸ್ಥಳ ನೋಡಿಕೊಂಡು ಜನರು ನೆರೆದಲ್ಲಿಗೆ ಬಂದು ಹೀಗೇಕೆ ಮಾಡಿದಿರೆಂದು ಕೇಳಲು ೩೬ ಜನರನ್ನು ಹಿಡಿದ ಕಾರಣ ಗುತ್ತೇದಾರನ ಸೊಕ್ಕು ಮುರಿಯಲಿಕ್ಕೆ ಮಾಡಿದೆವೆಂದು ಹೇಳಿದರು. ಇಷ್ಟು ಕೇಳಿಕೊಂಡು ಕಲೆಕ್ಟರರು ಬಂದ ದಾರಿಯಿಂದ ತಿರಿಗಿ ಹೋದರು. ಅಂದೇ ಸಂಜೆಗೆ ಮತ್ತೆ ೮೦ ಜನ ಸಶಸ್ತ್ರ ಪೋಲೀಸರು ಬಂದರು. ಊರಲ್ಲಿಯ ಮುಖ್ಯ ಜನರು ಕೂಡಿ ಇನ್ನು ಮೇಲೆ ಹೀಗೆ ಅತ್ಯಾಚಾರ ಮಾಡಬಾರದೆಂದು ಊರ ಜನರಿಂದ ವಚನ ತೆಗೊಂಡರು.

—

ಗಾಮನಗಟ್ಟಿಯಲ್ಲಿ ವಿಕ್ರಮ ಪಥಕದ ಪರಾಕ್ರಮ

—(೦)—

ಹುಬ್ಬಳ್ಳಿ ತಾಲೂಕ ಗಾಮನಗಟ್ಟಿಯು ಒಂದು ಇನಾಮ ಗ್ರಾಮವಾಗಿದೆ. ಇಲ್ಲಿ ನಾಲ್ಕು ಸಾವಿರ ಶಿಂದಿಯ ಗಿಡಗಳುಂಟು. ಇವನ್ನು ಕಡೆಯಲು ಧಾರವಾಡದಿಂದ ವಿಕ್ರಮ ಪಥಕದವರು ಹೋಗಿ, ಅಲ್ಲಿ ಮೂರು ದಿವಸ ಕ್ಯಾಂಪು ಹಾಕಿದರು. ಊರ ಜನರು ಇವರ ಆತಿಥ್ಯಸತ್ಕಾರವನ್ನು ಬಹು ಸಂಭ್ರಮದಿಂದ ಮಾಡಿದರು. ಹಾಲು ತುಪ್ಪದ ಕೋಡಿ ಹರಿಯಿತು. ಸಾಯಂಕಾಲದಲ್ಲಿ ಶ್ರೀ. ಮುದವೇಡಕರ, ಧೋಂಡ್ರೆ, ಭಿಸೆ ರಾಮರಾವ ಬೆಳಗಾವಕರ ಇವರ ವ್ಯಾಖ್ಯಾನವಾಯಿತು. ಶ್ರೀ. ಶಿವಯ್ಯಾ ಹಿರೇಮಠರೆಂಬವರು ಒಂದೇ ತಾಸಿನಲ್ಲಿ ಇಪ್ಪತ್ತು ಗಿಡಗಳನ್ನು ಉರುಳಿಸಿದರು. ಇವರ ಬಹಾದ್ದೂರಿಯನ್ನು ನೋಡಿ, ಇವರಿಗೆ ಭಂಗಾರದ ಪದಕ ಹಾಕಬೇಕೆಂದು ಶ್ರೀ ಮುದವೇಡಕರರು ಸಭೆಯಲ್ಲಿ ಇವರ ಶ್ಲಾಘನೆ ಮಾಡಿದರು. ಧಾರವಾಡದವರ ವ್ಯಾಖ್ಯಾನವು ಹತ್ತಿರಲೇ ಇದ್ದ ಅಮರಗೋಳದಲ್ಲಿಯೂ ಜರುಗಿತು. ತಾಲೂಕಿನ ಅಭಿಮಾನದಿಂದ ಹುಬ್ಬಳ್ಳಿಯಿಂದ ಕೆಲ ಸ್ವಯಂಸೇವಕರೂ ಶ್ರೀ ಕೆಂಪಣ್ಣನವರ, ಕರಿಗುದರಿ, ಗೋಳಿಕೇರಿಯವರು ಬಂದು, ಕೆಲ ಗಿಡಗಳನ್ನು ಕಡಿದರು. ಗುರುವಾರ ದಿವಸ ಗಾಮನಗಟ್ಟಿಯ ರೈತರೇ ಮುಂದಾಗಿ ಕಹಳೆ, ಹಲಗಿಯ ಮೆರವಣಿಗೆಯಿಂದ ಗಿಡಗಳನ್ನು ಕಡಿಯಲಿಕ್ಕೆ ಹೋದರು. ಒಟ್ಟು ೧೫೦೦ ಗಿಡಗಳು ಬಿದ್ದಿವೆ. ಉಳಿದ ಗಿಡಗಳನ್ನು ಸೋಮವಾರ ದಿವಸ ಉರುಳಿಸುವರು. ಒಂದೇ ವಾರದಲ್ಲಿ ನಾಲ್ಕು ಸಾವಿರ ಗಿಡಗಳು ಭೂಮಿಗೆರಗುವ ಸಾಹಸವು ಇನ್ನಾವ ಗ್ರಾಮದಲ್ಲಿಯೂ ಆಗಿರಲಿಕ್ಕಿಲ್ಲ. ಬೇರೆ ಊರವರೂ ಇದೇ ಹುರುಪಿನಿಂದ ಸುರಾರಾಕ್ಷಸನ ವಧ ಕಾರ್ಯವನ್ನು ಕೈಕೊಳ್ಳಬೇಕೆಂದು ಸೂಚಿಸುತ್ತೇವೆ.

—

ಸೋಜಿಗ—

೩ನೇ ತಾರೀಖಿನ ದಿವಸ ಶ್ರೀ ಗುರುರಾಯರು ಭಾಷಣ ಮಾಡಿದರೆಂದು ಪೋಲಿಸ ಪುರಾವೆಯು ಆದರೆ ಅಂದು ಶ್ರೀ. ಗುರುರಾಯರು ಭಾಷಣ ಮಾಡಲೇ ಇಲ್ಲ: ಭಾಷಣ ಮಾಡಲಿಲ್ಲೆಂದು ಹೇಳಿರಿ. ಹಾಗೆ ಬರಕೊಳ್ಳುತ್ತೇವೆಂದು ಮ್ಯಾಜಿಸ್ಟ್ರೇಟರು ಇವರಿಗೆ ಹೇಳಿದರು. ಹಾಗೆ ಹೇಳಿದ್ದರೆ ಒಂದು ವೇಳೆ ಬಿಡಬಹುದಾಗಿತ್ತು. ಆದರೆ ಇವರು ವಿಚಾರಣೆಯಲ್ಲಿ ಯಾವದೇ ಭಾಗ ತಕ್ಕೊಳ್ಳುವದಿಲ್ಲೆಂದು ಹೇಳಿದ್ದರಿಂದ ಪೋಲಿಸ ಪುರಾವೆಯಿಂದ ಶಿಕ್ಷೆಗೆ ಗುರಿಯಾದರು.

ಉಗಿಬಂಡಿಯಲ್ಲಿಯೇ
ವಿಚಾರಣೆ ಮತ್ತು ಶಿಕ್ಷೆ.

—(೦)—

ಸರದಾರ ಖರಗ ಬಹಾದ್ದೂರರು ೧೩ ಜನ ಗೂರಖಾ ಸ್ವಯಂಸೇವಕರೊಂದಿಗೆ ಧಾರಾಸಾನದ ಸತ್ಯಾಗ್ರಹಕ್ಕಾಗಿ ಬರುವಾಗ ದಾರಿಯಲ್ಲಿ ಪೋಲಿಸರು ಇವರನ್ನು ಗೋಧ್ರಾದಲ್ಲಿ ತರುಬಿ, ಕೆಳಗಿಳಿಯಲಿಕ್ಕೆ ಹೇಳಿದರು. ಇವರು ಇಳಿಯದಾಗಲು- ಇವರು ಕೂತ ಡಬ್ಬಿಯನ್ನು ಬೇರೆ ಮಾಡಿ, ಸ್ಟೇಶನದ ಒಂದು ಪಕ್ಕದಲ್ಲೊಯ್ದರು. ಅಲ್ಲೇ ಮ್ಯಾಜಿಸ್ಟ್ರೇಟರು ಬಂದು, ಎಲ್ಲ ಆರೋಪಿಗಳು ದೋಷಿಗಳೆಂದು ನಿರ್ಣಯಿಸಿ, ಮೂರು ಮೂರು ತಿಂಗಳ ಸಖ್ತ ಶಿಕ್ಷೆ ವಿಧಿಸಿ ಎಲ್ಲರನ್ನು ಸಾಬರಮತಿಯ ತುರಂಗಕ್ಕೆ ಕಳಿಸಿದರು.

ಕರ್ನಾಟಕ ಟಾಯಿಮ್ಸದ ಪ್ರಲಾಪ

—(೦)—

ಕುಮಾರಿ ಡಿಕಿನಸನ್‌ರವರು ಕೌನ್ಸಿಲಕ್ಕೆ ರಾಜೀನಾಮೆ ಕೊಟ್ಟು, ಕೇಸರ ಈ ಹಿಂದ ಪದವಿಯನ್ನೂ ನಿರಾಕರಿಸಿದ್ದನ್ನು ಕುರಿತು ಬರೆಯುವಾಗ ಕರ್ನಾಟಕ ಟಾಯಿಮ್ಸ್ಪತ್ರ-

ಹೀಗೆ ತಮ್ಮವರೆನಿಸಿಕೊಳ್ಳುವವರು ಸಹ ಸರಕಾರದ ಕೃತ್ಯವನ್ನು ಕಂಡು ಮೂಗು ಮುರಿಯುತ್ತಿರುವಾಗ, ಸರಕಾರಕ್ಕೆ ತನ್ನ ತಪ್ಪು ಕಾಣಿಸಲೊಲ್ಲದೋ ದೇವರೇ ಬಲ್ಲ.

ಎಂಬದಾಗಿ ಉಸುರು ಹಾಕಿದೆ. ಯುರೋಪಿಯನ್ನ ಹೆಣ್ಣು ಮಗಳು ತೋರಿಸಿದಂಥ ಮನೋಧೈರ್ಯವನ್ನು ದೇಶೀ ಗಂಡಸರಾದ ಕರ್ನಾಟಕದ ಕೌನ್ಸಿಲ ಮೆಂಬರರು ತೋರಿಸಿ ರಾಜೀನಾಮೆ ಕೊಟ್ಟು, ಸ್ವದೇಶಿಯರ ಅಭಿಮಾನ ಕಾಯಬೇಕೆಂದು ಈ ಪತ್ರ ಏಕೆ ಬರೆಯುವದಿಲ್ಲ! ಹೀಗೆ ಸ್ಪಷ್ಟವಾದ ಉಪದೇಶವನ್ನು ಹಳೇ, ನಡುವಿನ ಹೊಸ ಹಳೆ, ಮತ್ತು ತೀರ ಹೊಸಬರಾದಂಥ ಮೆಂಬರರಿಗೇಕೆ ಮಾಡಬಾರದು?

ಬಿರುಗಾಳಿಯಿಂದ ಉಗಿಬಂಡಿಯು
ಹೊಡಮಳ್ಳಿತು.

—:(೦):—

ಗುಜರಾಥದಲ್ಲಿ ಹಿಮತನಗರದ ಹತ್ತರ ಉಗಿಬಂಡಿಯು ಸುಟ್ಟರ ಗಾಳಿಯಲ್ಲಿ ಸಿಕ್ಕು ಹೊಡಮಳ್ಳಿ ಬಿದ್ದು, ಎಂಟು ಪ್ರಯಾಣಿಕರ ಹಾಗು ಎರಡು ಗೂಡ್ಸಿನ ವ್ಯಾಗನಗಳು ಡಬ್ಬು ಬಿದ್ದವು. ಅಬಕಾರೀ ಖಾತೆಯ ಒಬ್ಬ ಸಿಪಾಯಿ ಸತ್ತನು; ಆರೇಕರು ಘಾಯವಾಗಿದ್ದಾರೆ.

ವಕೀಲರ ಕ್ಲಬ್ಬಿನಿಂದ ವಕೀಲನನ್ನು
ಹೊರಗೆ ಹಾಕುವ ವಿಚಾರ.

—(೦)—

ಧಾರಾಸಾನದ ಪ್ರಕರಣದಲ್ಲಿ ಅಂತಿಯಾ ಎಂಬ ವಕೀಲರು ಸರಕಾರ ಪಕ್ಷದಿಂದ ಬಹಳ ಹೋರಾಡಿದರು. ಇವರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕಾದರೆ- ವಕೀಲರ ಕ್ಲಬ್ಬಿನಿಂದ ಹೊರಗೆ ಹಾಕುವದೇ ಒಂದು ಮಾರ್ಗವೆಂದು ಬಗೆದು ಆ ಪ್ರಕಾರ ವಿಚಾರ ಮಾಡಲು ಅಹಮದಾಬಾದಿನ ಬಾರ ಅಸೋಸಿಯೇಶನದವರು ಜನರಲ ಕಮೀಟಿ ಕೂಡಿಸುವರು. ಮತ್ತು ಕ್ಲಬ್ಬಿನ ಮೇಲೆ ರಾಷ್ಟ್ರೀಯ ನಿಶಾನೆ ಏರಿಸುವರು.

ಒಂದೇ ಮಾವಿನಹಣ್ಣಿಗೆ ೫೫ ರೂಪಾಯಿ.

—(೦)—

ಬಾಗಲಕೋಟೆಯಲ್ಲಿ ಶ್ರೀ. ಜೋರಾಪೂರದ ಗುರುರಾಯರಿಗೆ ಮುಷ್ಟಿ ಕೊಟ್ಟಂಥ ಒಂದೇ ಮಾವಿನಹಣ್ಣಿನ ಲಿಲಾವಾಯಿತು. ಅದಕ್ಕೆ ೫೫ ರೂಪಾಯಿ ಬಂದವು.

ಎಂಥಲ್ಲಿ ಶಿಕ್ಷೆ ಯಾಯಿತು-

ಬಾದಾಮಿಯು ಒಂದು ಕಾಲದಲ್ಲಿ ಕನ್ನಡಿಗರ ರಾಜಧಾನಿಯು. ಕನೋಜದ ಶ್ರೀ ಹರ್ಷವರ್ಧನನ್ನು ಜಯಿಸಿ, ಉತ್ತರ ಹಿಂದುಸ್ಥಾನದಲ್ಲಿಯೂ ಕರ್ನಾಟಕದ ಕೀರ್ತಿಧ್ವಜವನ್ನು ಮೆರೆಸಿದ ಪುಲಕೇಶಿ ಮತ್ತು ತ್ರಿಭುವನಮಲ್ಲ ವಿಕ್ರಮಾದಿತ್ಯರು ಸಾರ್ವಭೌಮರಾಗಿ ಆಳಿದಂಥ ಊರು. ಇಂಥಲ್ಲಿ ದೇಶಾಭಿಮಾನಕ್ಕಾಗಿ ಶಿಕ್ಷೆಯೇ!

ರಾಷ್ಟ್ರೀಯ ನಿಶಾನೆ ಕಿತ್ತಬೇಕೆಂದು
ಸೋಲ್ಜರರ ಉಲಕೋಚಿತನ.

—(೦)—

ಲಖನೌದಲ್ಲಿ ಕಾಂಗ್ರೆಸ ಕಚೇರಿ ಮೇಲಿರುವ ರಾಷ್ಟ್ರೀಯ ನಿಶಾನೆಯನ್ನು ಕಿತ್ತಬೇಕೆಂದು ಇಬ್ಬರು ಸೋಲ್ಜರರು ನೆರೆಮನೆಯ ಚಪ್ಪರ ಹತ್ತಿದರು. ಜನರು ಗುಲ್ಲು ಮಾಡಲು- ಇವರು ಇಳಿಯಲಿಕ್ಕೆ ಹೋಗುವಾಗ, ಒಬ್ಬನು ಹೊತ್ತುಕೊಂಡು ಬಿದ್ದು, ಪೆಟ್ಟು ತಿಂದನು. ಕರ್ಮಕ್ಕೆ ತಕ್ಕ ಫಲ.

ಆರು ನೂರು ಮನೆಗಳು ಸುಟ್ಟವು.

—(೦)—

ಕೋಕನಾಡಿನ ಹತ್ತರ ಒಂದು ಹಳ್ಳಿಯಲ್ಲಿ ಆರು ನೂರು ಮನೆಗಳು ಸುಟ್ಟು, ಬೂದಿಯಾದವು. ಮನೆಗಳ ಕೂಡ ಧಾನ್ಯವೂ ಸುಟ್ಟು ಹೋಯಿತು.

ಸೋಲಾಪೂರದ ಕೊಲೆಯ ಪ್ರಕರಣದಲ್ಲಿ
ಸಾಕ್ಷೀ ಒಡೆಸಲು ಪ್ರಯತ್ನಿಸಿದರೆಂದು ಶಿಕ್ಷೆ.

—(೦)—

ಪೋಲಿಸರನ್ನು ಕೊಂದರೆಂಬ ಆರೋಪಿಗಳಿಗಾದ ಗಲ್ಲಿನ ವಿಚಾರಣೆಯಲ್ಲಿ ಸಾಕ್ಷೀ ಒಡಿಸಲಿಕ್ಕೆ ಪ್ರಯತ್ನಿಸಿದರೆಂದು ಈ ಕೆಳಗಿನವರಿಗೆ ಶಿಕ್ಷೆಯಾಗಿದೆ.

೧ ಪುರುಷೋತ್ತಮ ಉಮೇದಭಾಯಿ ಗುಜರ ಎರಡು ವರ್ಷ ಶಿಕ್ಷೆ ೩೦೦ ದಂಡ.

೨ ಲಾಲಚಂದ ಶ್ರೀ ಕಿಶನ ಮಾರವಾಡಿ ಎರಡು ವರ್ಷ ಶಿಕ್ಷೆ ೩೦೦ ದಂಡ.

೧೪೪ನೇ ಕಲಮಿನ ಪ್ರಕಾರ ಐದಾರು ಜನರಿಂದ ಜಾಸ್ತಿ ಜನರು ಗುಂಪುಗೂಡಿ ನಿಲ್ಲುವಂತಿಲ್ಲವೆಂದು ಪೋಲೀಸರು [illegible] ತಕ್ಕೊಂಡು ಬಿಟ್ಟಿರುತ್ತಾರೆ.

ಸುರತದಲ್ಲಿ
ಸಾಯಮನ್ನ ರಿಪೋರ್ಟ ಸುಟ್ಟರು.

——:-:*:-:——

ಸುರತದಲ್ಲಿ ಜನರು ಬೊಕ್ಕತಲೆಯಿಂದ ಮತ್ತು ಕೈಯಲ್ಲಿ ಕರೆ ನಿಶಾನೆಯಿಂದ ಸಾಯಮನ ರಿಪೋರ್ಟ ಹಾಗು ಸಾಯಮನ್ನ ಗೊಂಬೆಯ ಮೆರವಣಿಗೆ ತೆಗೆದು, ತಾಪೀ ತಟಾಕಕ್ಕೆ ಹೋಗಿ, ಅಲ್ಲಿ ಅವನ್ನು ಸುಟ್ಟು, ಸ್ನಾನ ಮಾಡಿ, ಸೂತಕ ಕಳಕೊಂಡು ಮನೆಗೆ ಬಂದರು.

ಅಸೆಂಬ್ಲಿ ಮತ್ತು ಕೌನ್ಸಿಲ ಚುನಾವಣೆ.

—(೦)—

ರಾವುಂಡ ಟೇಬಲಕ್ಕೆ ಹೋಗುವಂಥವರ ಹಿಂದೆ ಚುನಾವಣೆಯ ಚಿಂತೆಯುಳಿಯಬಾರದೆಂದು ಅಸೆಂಬ್ಲಿ ಮತ್ತು ಕೌನ್ಸಿಲ ಚುನಾವಣೆಯನ್ನು ಸಪ್ಟಂಬರದಲ್ಲಿ ತೀರಿಸಿಬಿಡುವಂತೆ ಸರಕಾರದವರು ಏರ್ಪಾಡು ಮಾಡಿದ್ದಾರೆ.

ಸವದತ್ತಿಯಲ್ಲಿ
ಇಂಗ್ರೇಜಿ ಶಾಲೆಯ ಗೊಂದಲ.

—(೦)—

ವಿದ್ಯಾರ್ಥಿಗಳ ಗೋಳಾಟ.

—()(೦)()—

ಇಲ್ಲಿಯ ಇಂಗ್ರೇಜಿ ಶಾಲೆ ಬಂದ ಮಾಡಿದ್ದರಿಂದ ವಿದ್ಯಾರ್ಥಿಗಳಿಗೆ ಲಿವ್ಹಿಂಗ ಸರಟಿಫಿಕೇಟ ಕೊಡೋ ಕೆಲಸ ಮುನಿಸಿಪಾಲಿಟಿಯ ಶಿಕ್ರೆಟರಿಯ ಕಡೆಗೆ ಬಂದದೆ. ವೆಂಕಟೇಶಯಂಬವನು ೧ ರಿಂದ ೪ ಎತ್ತೆಗಳ ವರೆಗೆ ಇದೇ ಸಾಲಿಗೆ ಹೋಗುತ್ತಿದ್ದನು. ಆತನ ಲಿ. ಸರಟಿಫಿಕೇಟ ಕೊಡಿರೆಂದು ಶಿಕ್ರೆಟರಿಯವರಿಗೆ ಬೇಡಿದೆ ಆವರು ೩-೪ [illegible]ಗಳ ಕಾಗದ ಪತ್ರಗಳನ್ನು ನನ್ನ ಸಮಕ್ಷಮ ನೋಡಿದರು. ನಮ್ಮ ಹು

ದೇಶಿ... ಈ ವರ್ಗವನ್ನು ತೆರೆಯಲು ನಮಗೆ ಶಿಕ್ಷಣ ಖಾತೆಯಿಂದ ಅಪ್ಪಣೆ ದೊರೆತಿರುವದು.

೨೮-೫-೩೦ ಪ್ರಿನ್ಸಿಪಾಲ

ಹಾನಗಲ್ಲ ತಾಲೂಕ

ಆಲೂರಲ್ಲಿ ಅಪೂರ್ವ ಉತ್ಸಾಹ.

ಈ ದಿನ ಸಂಜೆ ೭ ಘಂಟೆ ಸಮಾರಂಭಕ್ಕೆ ಜಾಹೀರ ಸಭೆ ಕೂಡಿತ್ತು. ಜನ ಸಮುದಾಯವು ಪ್ರಚಂಡವಾಗಿತ್ತು. ಸ್ವಯಂಸ್ಫೂರ್ತಿಯಿಂದ ಆದ ಯಾವ ಕಾರ್ಯವಾದರೂ ಹೀಗೆ ಅಪೂರ್ವ ಆಗದೆ ಇರಲಾರದು. ಇಲ್ಲಿಯ ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ|| ಮಲ್ಲಪ್ಪಣ್ಣಾ ಅಕ್ಕಿಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು.

ಸಭೆಯಲ್ಲಿ ಡಿಸ್ಟ್ರಿಕ್ಟಲೋಕಲ್ಲ ಬೋರ್ಡ ಮೆಂಬರರಾದ ಶ್ರೀ|| ಸಿದ್ದಪ್ಪ ಹೋತನಹಳ್ಳಿ ಬಿ. ಎಸ್. ಶೆಟ್ಟಿ, ಜಿ ಎಸ್. ಶೆಟ್ಟಿ, ಈ ಮೊದಲಾದವರ ಸಮಯೋಚಿತ ಭಾಷಣಗಳಾದವು. ಶ್ರೀ|| ಹೋತನಹಳ್ಳಿಯವರು ಪರದೇಶಿ ಬಹಿಷ್ಕಾರದ ಬಗ್ಗೆ ಪರಿಣಾಮಕಾರಕ ಭಾಷಣ ಮಾಡಿದರು. ಶ್ರೀ|| ಬಿ. ಎಸ್. ಶೆಟ್ಟಿ ಇವರು ಇದನ್ನು ಪುಷ್ಟೀಕರಿಸಿದರು. ನಂತರ ಇಲ್ಲಿಯ ವ್ಯಾಪಾರಸ್ಥರು ಇನ್ನು ಒಂದುವರ್ಷ ಪರದೇಶಿ ಮಾಲು ವಿಶೇಷತಃ ಬಟ್ಟೆಗಳನ್ನು ತರಿಸುವದಿಲ್ಲವೆಂದು ಒಂದು ಮನಃಪೂರ್ವಕ ಠರಾವ ಮಾಡಿ ಹೇಳಿದರು. ಪರದೇಶೀ ಬಟ್ಟೆಯು ಪ್ರಚಂಡ ಹೋಳಿಯೂ ಆಯಿತು.

ಶ್ರೀಯುತ ಪುಟ್ಟಪ್ಪ ಸಮುಸಗಿ ಇವರು ಇಲ್ಲಿ ಒಂದು ಖಾದೀ ಭಾಂಡಾರವನ್ನು ಸ್ಥಾಪಿಸಿ ಆಲೂರನ್ನು ಹಾನಗಲ್ಲ ತಾಲೂಕಿನ ಖಾದೀ ಕೇಂದ್ರವನ್ನೇ ಮಾಡಬೇಕೆಂದು ಠರಾವು ತಂದರು. ಶ್ರೀ ಹೋತನಹಳ್ಳಿ ಇವರು ಇದಕ್ಕೆ ಅನುಮೋದಿಸಿ ಠರಾವಿಗೆ ಪುಷ್ಟಿಕೊಟ್ಟರು.

ಶ್ರೀ|| ಲಿಂಗಪ್ಪಣ್ಣಾ ಕ.ಬಿಹಾಳ ಇವರು ಈ ಕಾರ್ಯಕ್ಕೆ ತಾವು ನೂರು ರೂಪಾಯಿ ಕೊಡತಕ್ಕವೆಂದೂ ಮತ್ತು ಇದೇ ತಾಲೂಕಿನ ಬಮ್ಮನಹಳ್ಳಿ ವ್ಯಾಪಾರಸ್ಥರು ಇದೇ ಕಾರ್ಯಕ್ಕೆ ೬೦೦ ರೂಪಾಯಿಗಳ ವಚನವನ್ನು ತಮಗೆ ಕೊಟ್ಟಿದ್ದಾರೆಂದೂ ಹೇಳಿಸಿದರು,

ಶ್ರೀಯುತ ಪುಟ್ಟಪ್ಪ ಸಮಸಗಿ ಇವರು ಸದರಿ ಕಾರ್ಯಕ್ಕೆ ತಾವು ಸ್ವತಃ ೨೫ ರೂಪಾಯಿ ಕೊಡುವೆವೆಂದು ಹೇಳಿದರು. ಈ ರೀತಿಯಾಗಿ ಮೇಲೆ ಕಂಡ ಠರಾವು ಸರ್ವಾನುಮತದಿಂದ ಪಾಸಾಯಿತು

ಧಾರವಾಡ.

... ಮಿ ಜಿ. ಎ ಹಿರೇಮಠ ಇವರು ಇಲ್ಲಿಯ ... ಬಟ್ಟೆ ಕಲೆಕ್ಟರ ... ನೇಮಿಸಲ್ಪಟ್ಟಿದ್ದಾರೆ.

ಸಚಿತ್ರ ಕರ್ನಾಟಕ ಬಾಲಬೋಧೆ. ಭಾಗ!

—(೦)—

ಪ್ರಕಾಶಕರು ಹೆ. ಜಿ ಜಿ ಲಿಂಗಣ್ಣಾ ಅಂಡ ಸನ್ ಬೆಂಗಳೂರು. ಕ್ರಯ ೦-೨-೦

ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ನಮ್ಮ ಅಭಿಪ್ರಾಯಕ್ಕಾಗಿ ಬಂದಿರುತ್ತದೆ. ಚಿಕ್ಕ ಮಕ್ಕಳ ಅಭ್ಯಾಸಕ್ಕಾಗಿ ಬರೆಯಲ್ಪಟ್ಟ ಈ ಪುಸ್ತಕವು ಸಂಭವಿಸಿದ ಪಾಠಗಳಿಂದಲೂ, ಸುಂದರವಾದ ಚಿತ್ರಗಳಿಂದಲೂ ಶುಭ್ರವಾದ ... ವಸ್ತುಗಳ ... ಪಾಠಗಳಲ್ಲಿರುವ ಶಬ್ದಗಳಿಂದ ಸಂಕೇತಗಳನ್ನು ಕಲಿಸುವದು ಬಹಳ ಸುಲಭ. ಈ ಪಾಠಗಳಲ್ಲಿನ ಅಕ್ಷರಗಳು ಮಕ್ಕಳ ... ನ್ನು ... ವುದಕ್ಕೆ ಚಿತ್ರಗಳು ... ಕಾರಣವಾಗಿವೆ ... ಈ ಕ್ರಮವನ್ನು ಹಿಡಿ ... ಸಮಯೋಚಿತ ಅಕ್ಷರಗಳನ್ನು ಬೇರೆ ಬೇರೆ ... ಗುಂಪಿಗನ್ನಾಗಿ ... ಗಿಸಿ ಬರೆಯಿಸುವ ಕ್ರಮವು ಈ ಪುಸ್ತಕದಲ್ಲಿ ... ತ್ತದೆ. ಇದರಿಂದ ಮಕ್ಕಳಿಗೆ ಅಕ್ಷರಜ್ಞಾನವು ಅತಿ ಸುಲಭವಾಗಿ ಆಗುವದು. ಅಲ್ಲದೆ ವರ್ಣಶಲೆಯ ಕ್ರಮವನ್ನು ಹಿಡಿದು ಹ್ರಸ್ವ, ದೀರ್ಘಸ್ವರಗಳ ಅಲ್ಪ ಮಹಾಪ್ರಾಣಗಳ ಉಚ್ಚಾರಗಳನ್ನು ಕಲಿಸಲು ಈ ಪುಸ್ತಕದಲ್ಲಿ ಅನುಕೂಲವಿರುತ್ತದೆ ಮೂಲಾಕ್ಷರಗಳ ಅಭ್ಯಾಸವಾದನಂತರ ಗುಣಿತಾಕ್ಷರಗಳ ಅಭ್ಯಾಸಪಾಠಗಳು ವರ್ಣಮಾಲೆಯ ಕ್ರಮ ಹಿಡಿದು ಕೊಡಲ್ಪಟ್ಟಿವೆ. ಒಟ್ಟಿನಲ್ಲಿ ಅಕ್ಷರಾಭ್ಯಾಸವನ್ನು ಮಾಡಿಸಲು ಈ ಪುಸ್ತಕದಲ್ಲಿ ಎಲ್ಲಾ ಸೌಭ್ಯಗಳೂ ಇರುತ್ತವೆ. ಇಷ್ಟು ಅತ್ಯುತ್ತಮವಾದ ಪುಸ್ತಕವನ್ನು ಬೊಂಬಾಯಿ ಪ್ರಾಂತ್ಯ ಕನ್ನಡ ಜಿಲ್ಲಾಗಳ ಶಾಲೆಗಳಲ್ಲಿ ಪಠ್ಯಪುಸ್ತಕವಾಗಿ ಉಪಯೋಗಿಸುವದರಿಂದ ಚಿಕ್ಕಮಕ್ಕಳಿಗೆ ಇದರಿಂದ ಬಹಳ ಉಪಯೋಗವಾಗುವದು.

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನದ ಅವಾಟಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಅವುಗಳ ವಿಷಯಕ್ಕೆ ಪತ್ರವ್ಯವಹಾರ ಮಾಡಬಹುದು.

ವ್ಯಾನೇಜರ ವಿಜಯ ಧಾರವಾಡ.

ಕೆಲಸಗಾರರು ಬೇಕು

—(೦)—

ವಿಜಯ ... ಲ್ಲಿ ಬಿಡಲು, ಜಾಯಿಂಟ ... ಪ್ರೆಸ ಮುದ್ರಣ ಒಳ್ಳೆ ... ಉಮೇದವಾ... ಕೆಲಸ ಮಾಡ... ಬೇಕು. ಸಂ...

ವ್ಯಾನೇಜರ ವಿಜಯ

ಧಾರವಾಡ

ಧಾರವಾಡದಲ್ಲಿ

ಮೋಟಾರ ನಡಿಸುವದನ್ನು

ಕಲಿಯುವ ಸೌಲಭ್ಯ

—(೦)—



ಧಾರವಾಡ ಜಿಲ್ಲೆಯಲ್ಲಿ

ಮೋಟಾರ ಶಿಕ್ಷಣದ ಸಗವು

ಮೋಟಾರ ಡ್ರ್ಯಾಯವ್ಹರ ವಿದ್ಯಾರ್ಥಿಯಾಗು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ಪಟ್ಟಣ ಉತ್ತಾಯ ಮಾಡಿಕೊಟ್ಟು, ಡ್ರಾಯ... ದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗೆದಿದು. ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳ ... ಯೂ ... ಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ... ವಾರ ... ಬಾರದೆಂದು ಮುಂದಾಗಿಕ ... ಕೊಟ್ಟಿದ್ದೇನೆ. ಮೇ ಅಖೈರ ... ಜನರನು ತಕೊಳ್ಳುವೆನು. ಆದ ... ಕೂಡಲೆ ... ಸ್ಥಳ ಕಾಯ್ದುಕೊ... ಬೇಕು. ... ಸಮಕ್ಷಮ ಅ... ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.

... ಧಾರವಾಡ

ಈ ಪತ್ರವನ್ನು ... ಆಚಾರ್ಯ ಬಾಳಾಚಾರ್ಯ ... ಇವರು ಧಾರವಾಡದಲ್ಲಿ ನಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೧೧ ಧಾರವಾಡ ರವಿವಾರ ತಾರೀಖು ೧೯ನೇ ಜೂನ ೧೯೩೦ (ಸಂಖ್ಯೆ ೧೩೬)

(Incorporated in S. S.) (Registered in England

The Great Eastern Life

Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

ACENTS WANTED ON LIBERAL TERMS

For further particulars apply to:-

Chief representative for Karnatak and South Kanara.

N. T. Khona. P. B. 34. *Hubli.*

ಇಂಗ್ಲೆಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ

ಅಶ್ಯೂರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಕಾಯಮಾಗಿ ರದ್ದಾಗದ ವಿಮಾದ [illegible] ಪಾಲಿಸಿಯ ಯೋಜನೆ ಒಂದಕ್ಕೆ ಹಲವು	ಖಂಡಿತವಾದ ಬೋನಸಗಳ ಯೋಜನೆಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ಥಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ—

ಶ್ರೀ. ಎನ್. ಟಿ. ಖೋನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ್ಕೂ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಿರಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. [illegible] ಮತ್ತು ಬೇರೆ ತರದ [illegible] ಬಡ್ಡಿ ಕೊಡಲಾಗುವದು

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ [illegible] ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮
೬ ,,	
೩ ,,	

ವಾರ ಪತ್ರಕ್ಕೆ ೧ ವರ್ಷಕ್ಕೆ

ವಿಶೇಷ ಮಾಹಿತಿಗಳಿಗೆ [illegible]

ವಿಜಯ.

ಚಾಲುಕ್ಯ ವಿಕ್ರಮ ವರ್ಷ ೮೫೫ ಜ್ಯೇಷ್ಠ ವದ್ಯ ೪

ಕೌನ್ಸಿಲ ಮತ್ತು ಅಸೆಂಬ್ಲಿಯ ಹೊಸ ಚುನಾವಣೆಗಳು.

ಶಿವರಾತ್ರಿಗೆ ಹೆದರಿ, ಏಕಾದಶಿಯ ಪಾರಣೆಯು.

—(೦)—

ರೌವುಂಡ ಟೇಬಲ ಪರಿಷತ್ತಿಗೆ ಹೋಗುವಂತೆ ಹಿಂದೂ ಮುಸಲಮಾನ ಮುಖಂಡರಿಗೆ ಚುನಾವಣೆಯು ದೆಸೆಯಿಂದ ಚಿಂತೆಯುಳಿಯಬಾರದೆಂದು ಸಪ್ಟಂಬರ ತಿಂಗಳಲ್ಲಿಯೇ ಚುನಾವಣೆಯು ಪರ್ವಣೆಯನ್ನು ಸಾಧಿಸಿಕೊಳ್ಳಬೆಕೆಂದು ಹಿಂದುಸ್ಥಾನ ಮತ್ತು ಇಂಗ್ಲಂಡ ಸರಕಾರದವರು ಮಾಡಿದ ಯುಕ್ತಿಯು ಮೂವರ ಮುಸಲತ್ತಿನಂತಿರುತ್ತದೆ. ರೌಂಡ ಟೇಬಲ ಸೇರಿ, ಅದರಲ್ಲಿ ಹಿಂದೀ ಜನರು ಕೆಲಮಟ್ಟಿಗೆ ತೃಪ್ತಪಡುವಂಥ ಕೃತ್ಯಗಳಾದರೆ– ಅಥವಾ ಕಾಂಗ್ರೆಸದವರು ಸತ್ಯಾಗ್ರಹವನ್ನು ನಿಲ್ಲಿಸಿ ಚುನಾವಣೆಗಾಗಿ ಉಮೇದವಾರರಾಗಿ ನಿಲ್ಲಬೇಕೆಂದು ಗೊತ್ತು ಮಾಡಿದರೆ–ಕಾಂಗ್ರೆಸದವರೇ ಆರಿಸಲ್ಪಡುವರು, ಆಗ ಸರಕಾರವು ತಾನಾಗಿ ಎದೆಯ ಮೇಲೆ ದೊಡ್ಡ ಭಾರ ಹೇರಿಕೊಂಡಂತಾಗುವದುಂಟು. ಕಾಂಗ್ರೆಸದವರು ಹೇಗೋ ಹೊರಬಿದ್ದು ಹೋಗಿದ್ದಾರೆ. ಕಾಂಗ್ರೆಸ ದೆವ್ವವನ್ನು ಪುನಃ ಮನೆಯಲ್ಲೇಕೆ ಸೇರಿಸಿಕೊಳ್ಳಬೇಕೆಂಬ ಮುಸಲತ್ತಿನಿಂದಲೇ ಚುನಾವಣೆಯನ್ನು ತೀರಿಸಿಕೊಳ್ಳಬೇಕೆಂದು ಗೊತ್ತು ಮಾಡಿರಬೇಕೆಂದು ಸಹಜವಾಗಿ ತರ್ಕವಾಗುತ್ತದೆ. ಕಾಂಗ್ರೆಸದವರು ರೌವುಂಡ ಟೇಬಲದ ಬೆನ್ನು ಹತ್ತಲಾರರು. ಚುನಾವಣೆಯಲ್ಲಿ ವ್ಯರ್ಥವಾಗಿ ಆಯಾಸವನ್ನು ಪಡಲಾರರು. ಹೊರಗೆ ನಿಂತು ಜೋರು ಮಾಡಿದನ್ನು ದೇಶದ ಹಿತವೆಂದು ತಿಳಿದಿದ್ದು, ಆ ಪ್ರಕಾರ ಸತತ ವಾದ ಪ್ರಯತ್ನ ಮಾಡುವರು. ಅವರ ಸದಿಚ್ಛೆ ...ರಿತು, ಚಳವಳಿಯ ಉರಿಯಲ್ಲಿ ನಿಂತು ಕೌನ್ಸಿ... ...ಗೋಗುವ ಮೆಂಬರರು ಅಧಮತನದಿಂದ ಸ... ...ಬಡಿದು ಯಾವದೊಂದು ದಬ್ಬಾ... ...ತಿ ಕೊಟ್ಟರೂ, ಅದು ...ವರ ಮಾನಭಂ... ...ಗದ

ವರು ಅನ್ಯಾಯದ ಯಾವದೊಂದು ಕಾಯಿದೆಯನ್ನು ಮುರಿಯಲು ಸಿದ್ಧರಾಗಿದ್ದು, ಕೌನ್ಸಿಲ ಅಥವಾ ಅಸೆಂಬ್ಲಿಯಲ್ಲಿ ಅಂಥ ಕಾಯಿದೆಯಾದರೇನು ? ಲಷ್ಕರೀ ಕಾಯಿದೆಯಿಂದ ಅದನ್ನು ಅನುಲಕ್ಷಿ ತಂದರೇನು ? ಎಲ್ಲವೂ ನಿಷ್ಪ್ರಯೋಜಕವೇ ?

ಕೌನ್ಸಿಲ ಮತ್ತು ಅಸೆಂಬ್ಲಿಗೆ ಉಮೇದವಾರರಾಗಿ ನಿಲ್ಲುವ ಬಂಟರ ಭವಣೆಯೂ ಸಾಧಾರಣವಾಗಲಾರದು. ಹೋಟು ಕೊಡಿರೆಂದು ಉಮೇದವಾರರನ್ನು ಕೂಡಿಕೊಂಡು ಹಳ್ಳಿಗೆ ಹೋಗುವದೆಂದರೆ– ಗಲ್ಲಿಗೆ ಹಾಕುವಂಥವರನ್ನು ಕರಕೊಂಡು ಹೋಗುವಂತಾಗುತ್ತದೆ. ಮರು ಮನೆಯ ಹಳ್ಳಿಯಲ್ಲಿಯೂ ಗಾಂಧೀ ತತ್ವವು ಬೇರೂರಿದ್ದು, ನೀವು ಗಾಂಧೀ ಕಡೆಯವರೇ ಎಂದು ಕೇಳಿದರೆ– ಸಾಕು ಇವರ ಬಾಯಿ ಮುಚ್ಚಿ ಹೋಗುವದು. ಮೆಂಬರ ಕರ್ತೃಗಳಾಗುವರು ಹೋಟರರಿಗೆ ಇವರೇನು ಹೇಳುವರು ? ನೀವು ಈ ವರೆಗೆ ಮಾಡಿದ ಕರ್ತೃತ್ವವೇನು ? ಸ್ವರಾಜ್ಯ ಸ್ವಾತಂತ್ರ್ಯ ಸಂಗ್ರಾಮದಲ್ಲೇಕೆ ಸೇರಲಿಲ್ಲ ? ಕಾರಾಗೃಹಕ್ಕೇಕೆ ಹೋಗಲಿಲ್ಲ. ನಿಮಗೆ ದೇಶಾಭಿಮಾನವಿಲ್ಲವೇ ? ಗಾಂಧಿ, ಸರದಾರ ಪಟೇಲ, ಪಂಡಿತ ಮಾಲವಿಯಾಯಂವರಂಥ ಮಹತ್ಕಾರ್ಯವನ್ನೇಕೆ ಕೈಕೊಳ್ಳಲಿಲ್ಲವೆಂದು ಪ್ರಶ್ನ ಮಾಡಿದರೆ– ಇವರಾವ ಉತ್ತರ ಕೊಡುವರು ? ಒಳೆ ಪೈಕಿಯವರ ಮಾನ ಹಳ್ಳಿಯಲ್ಲಿ ಹೋಯಿತೆನ್ನುವಂತೆ ಇವರು ಫಜೀತಿ ಪಟ್ಟೇ, ಬಂದ ಹಾದಿಗೆ ಸುಂಕವಿಲ್ಲೆಂದು ಹಿಂದಿರಿಗಿ ಮನೆಗೆ ಬರುವರೆಂಬದೇ ನಿಶ್ಚಯ. ಈ ರೀತಿಯಿಂದಲೂ ಕೌನ್ಸಿಲ ಚುನಾವಣೆಯು ನಗುವವರ ಮುಂದೆ ಎಡವಿ ಬಿದ್ದಂತಾಗುವದು.

ಸರಕಾರಕ್ಕೆ ರೈತರ ಖಂಡತುಂಡಿನ ಹೇಳಿಕೆ.

——(೦)——

ಲಾಹೋರದ ಹತ್ತಿರಿರುವ ಜಖಾನ ಮತ್ತು ಗಿಂಗವೆಂಬೆರಡು ಗ್ರಾಮಗಳ ಮೇಲೆ ಸರಕಾರದವರು ಶಿಕ್ಷಾ ಪೋಲಿಸರನ್ನು ಕೂಡಿಸಿದ್ದಾರೆ. ಈ ಪೋಲಿಸರನ್ನು ತೆಗೆಯಬೇಕು. ನಮಗೆ ಇವರ ವೆಚ್ಚ ದಂಡ ತೆರಲಾರದು. ಸರಕಾರವು ಹೀಗೆ ಮಾಡಿದ್ದರೆ. ನಾವು ಕರಕಂದಾಯ ಕೊಡತಕ್ಕವರಲ್ಲೆಂದು ರೈತರು ಸರಕಾರಕ್ಕೆ ಖಂಡತುಂಡಾಗಿ ತಿಳಿಸಿದ್ದಾರೆ. ಸರಕಾರದವರು ರೈತರನ್ನು ಹೆದರಿಸುವದಕ್ಕಾಗಿ ಊರುಗಳ ಮೇಲೆ ವಿಮಾನವನ್ನು ಓಡಾಡಿಸಿದರು ಮತ್ತು ಊರಲ್ಲಿ ಸೋಲ್ಜರರ ದಂಡನ್ನೂ ತಿರುಗಾಡಿಸಿದರು. ರೈತರು ಈ ಹೆದರಿಕೆಗೆ ಸೊಪ್ಪು ಹಾಕಿಲ್ಲ.

ಉತ್ತರ ಕರ್ನಾಟಕ ಪ್ರಾಂತದ ವೀರಶೈವ ರಾಜಕೀಯ ಪರಿಷತ್ತು.

—(೦)—

ಬೆಳಗಾವಿಯಲ್ಲಿ ಬ್ರಾಹ್ಮಣೇತರ ಪರಿಷತ್ತು ಸೇರಿ, ಬ್ರಾಹ್ಮಣೇತರರು ಕಾಂಗ್ರೆಸ ಸೇರಬೇಕೆಂಬ ಠರಾವಾಯಿತು. ಅದರಲ್ಲಿ ಲಿಂಗಾಯತ, ಮರಾಠಾ ಕ್ಷತ್ರಿಯ, ವೈಶ್ಯ ರಡ್ಡಿ, ಭಾವಸಾರ ಮೊದಲಾದವರೆಲ್ಲರೂ ಸೇರಿದ್ದರು. ಈಗ ವೀರಶೈವರದೇ ಒಂದು ಸ್ವತಂತ್ರ ಪರಿಷತ್ತನ್ನು ಸೇರಿಸಿ, ವೀರಶೈವರು ಜಾಹೀರಾಗಿ ಕಾಂಗ್ರೆಸದ ದೀಕ್ಷೆ ತಕ್ಕೊಳ್ಳಬೇಕೆಂಬ ಚಳವಳಿ ನಡೆದಿದೆ. ಅದರದೊಂದು ಸೂಚಕ ಪತ್ರವು ನಮ್ಮ ಕಡೆಗೆ ಬಂದಿದ್ದು, ಅದರ ಮುಖ್ಯ ಭಾಗವು ಮುಂದೆ ಕೊಟ್ಟಂತಿರುತ್ತದೆ.

ವೀರಶೈವ ಸಮಾಜವು ರಾಷ್ಟ್ರಕಾರ್ಯದಲ್ಲಿ ಹಿಂದುಳಿದಿಲ್ಲವೆಂದು ತೋರಿಸುವದಕ್ಕೂ, ವೈಯಕ್ತಿಕ ಪ್ರತಿಷ್ಠೆಯು ಜನರ ಸ್ವೈರವೃತ್ತಿಗೆ ಮುಳ್ಳು ಬಡಿಯುವದಕ್ಕೂ ಮತ್ತು ರಾಷ್ಟ್ರದಲ್ಲಿ ನಡೆದ ರಾಜಕೀಯ ಆಂದೋಲನದಲ್ಲಿ ವೀರಶೈವ ಸಮಾಜದ ನಿಶ್ಚಿತ ಧೋರಣವನ್ನು ವ್ಯಕ್ತಮಾಡುವದಕ್ಕೂ ವೀರಶೈವ ಪರಿಷತ್ತೊಂದನ್ನು ಜುಲೈ ತಿಂಗಳ ಆರಂಭದಲ್ಲಿ ಒಂದು ಮಧ್ಯವರ್ತಿ ಸ್ಥಳದಲ್ಲಿ ಕರೆಯುವದು ಅತ್ಯಗತ್ಯವಾಗಿದೆ, ಮೊದಲು ಯಾರಾದರೂ ಒಂದು ಊರಿನವರು ತಮ್ಮಲ್ಲಿ ಪರಿಷತ್ತು ಕೂಡಿಸಬೇಕೆಂದು ನಿರ್ಧರಿಸಿ ಪ್ರಕಟಿಸಬೇಕು. ಅದಕ್ಕೆ ಉಳಿದವರು ಸಲಹೆ ಸೂಚನೆಗಳನ್ನು ಅವಶ್ಯವಾಗಿ ತಿಳಿಸಬೇಕು. ಈ ತಿಂಗಳಾಂತ್ಯದಲ್ಲಿಯೇ, ಸ್ಥಳ, ಕಾಲ, ಅಧ್ಯಕ್ಷರ ಹೆಸರುಗಳು ನಿಶ್ಚಿತವಾದರೆ, ಜುಲೈ ತಿಂಗಳ ೧-೩ನೆಯ ವಾರದಲ್ಲಿ ಪರಿಷತ್ತು ಕೂಡಿಸಲು ಸಾಧ್ಯವಾಗುವದು ಯಾರಾದರೂ ರಾಷ್ಟ್ರಾಭಿಮಾನಿಗಳು ಅವಶ್ಯವಾಗಿ ಮುಂದೆ ಬರಬೇಕೆಂದು ಆಗ್ರಹದಿಂದ ಬೇಡುವ ಓರ್ವ ವೀರಶೈವ

ಹುಬ್ಬಳ್ಳಿ, ಗದಗ ಮತ್ತು ಬಾಗಲಕೋಟೆಯು ಈ ಪರಿಷತ್ತು ನೆರೆಯಿಸಲಿಕ್ಕೆ ಯೋಗ್ಯ ಸ್ಥಳಗಳಾಗಿದ್ದು, ಈ ಮೂರರಲ್ಲಿ ಎಲ್ಲಿ ಸಭೆಯಾದರೂ ಸಂತೋಷವೇ ? ಎಂದು ವಿಜಯದ ಮತವು.

ಕುದುರೆಯ ಶರ್ಯತಿಗೆ ಬಹಿಷ್ಕಾರ,

—(೦)—

ಪುಣೆಯಲ್ಲಾಗುವ ಕುದುರೆಯ ಶರ್ಯತಿಗೆ ಹಿಂದೂ ಜನರು ಬಹಿಷ್ಕಾರ ಹಾಕಿ, ಅದನ್ನು ನೋಡಲು ಯಾರೂ ಹೋಗಬಾರದೆಂಬ ಚಳವಳಿ ಹುಟ್ಟಿದೆ. ಕ್ರಿಕೆಟಕ್ಕೂ ಆಟಕ್ಕೆ ಬಹಿಷ್ಕಾರ ಹಾಕುವದರ ಎರಡನೆಯ ಆವೃತ್ತಿಯು.

ಡಾಕ್ಟರ ಹರ್ಡೀಕರರ ಕಪ್ತಾನನಿಗೆ ಒಂದು ವರ್ಷ ಶಿಕ್ಷೆ.

—: :*: :—

ಡಾಕ್ಟರ ಹರ್ಡೀಕರರ ಸೇವಾದಲದಲ್ಲಿ ಓರ್ವ ಪ್ರಮುಖ ಗೃಹಸ್ಥರಾದ ಶ್ರೀ. ಮಹಾಶಬ್ದೆಯವರು ಮಂಗಳೂರ ಜಿಲ್ಹೆಯಲ್ಲಿ ಸತ್ಯಾಗ್ರಹ ಕಾರ್ಯಮಾಡಲು ಹೋದರು. ಅಲ್ಲಿಯ ಸ್ವಯಂಸೇವಕರ ಸಹಾಯದಿಂದ ಆ ಜಿಲ್ಹೆಯ ತುಂಬ ಅದ್ಭುತ ಚಳವಳಿ ಎಬ್ಬಿಸಿದರು. ಸ್ವದೇಶಿಗೆ ಸಂಪೂರ್ಣ ಉತ್ತೇಜನ ಬಂತು. ರಾಟೀ ಪ್ರಸಾರವಾಗಿ, ಜನರು ಮನೆ ಮನೆಗೆ ನೂಲ ಹತ್ತಿದರು. ವಿಲಾಯತಿಯ ಅರಿವೆಯ ಹೊಗೆಯ ಹೋಳಿಯ ಆಕಾಶಕ್ಕೇರಿತು. ನಾಡವರ ಬಂಟರು ತೆಂಗಿನ ಗಿಡಗಳನ್ನು ಕರೆಗಾಗಿ ಮಾರಲಿಕ್ಕೆ ಕೊಡುವದಿಲ್ಲೆಂದು ಪ್ರತಿಜ್ಞೆ ಮಾಡಿದರು. ಉಪ್ಪಿನ ಕಾಯಿದೆಭಂಗವಂತೂ ಭೀಮಿಗಂಟ ನಡೆಯಿತು. ಸರಕಾರದ ದೃಷ್ಟಿಯಿಂದ ಈ ಪ್ರಕಾರ ಅನರ್ಥದ ಮೇಲೆ ಅನರ್ಥ ಮಾಡಿದವರು ನಿರಂಕುಶರಾಗಿರುವದೆಂತು? ಕೂಡಲೆ ಇವರನ್ನು ತುರಂಗಕ್ಕೆ ಕಳಿಸುವ ಸಿದ್ಧತೆಯಾಯಿತು. ಆರೋಪವಂತೂ ಸಿದ್ಧವೇ ಆಗಿತ್ತು. ಪೋಲಿಸ ಸಬ್ ಇನ್ಸಪೇಕ್ಟರರು ವಾರಂಟು ತಕ್ಕೊಂಡು ಇವರ ಶಿಬಿರಕ್ಕೆ ಹೋದರು. ವಾರಂಟು ತೋರಿಸದೆ, ಒಳಗೆ ಬರಲಿಕ್ಕೆ ಅಪ್ಪಣೆ ಪಡಕೊಂಡು, ಹೋಗಿ, ಅವರ ಕೂಡ ಮಿತ್ರರಂತೆ ಮಾತಾಡಿ, ಮುಂದೆ ಶತ್ರುರೂಪ ಧಾರಣಮಾಡಿ, ವಾರಂಟು ತೋರಿಸಿದರು. ಕೂಡಲೆ ಮಹಾಶಬ್ದೆಯವರು ಅವರ ಕೂಡ ಹೊರಟರು. ಈ ವರ್ತಮಾನವು ಕ್ಷಣಾವಕಾಶದಲ್ಲಿ ಊರಲ್ಲಿ ಹಬ್ಬಿತು. ಸಾವಿರಾರು ಜನರು ನೆರೆದರು. ರಾಷ್ಟ್ರೀಯ ನಿಶಾನೆ ಮತ್ತು ರಾಷ್ಟ್ರಗೀತದೊಂದಿಗೆ ಮೆರವಣಿಗೆ ಹೊರಡಿಸಿ, ಇವರನ್ನು ಮ್ಯಾಜಿಸ್ಟ್ರೇಟ ಕೋರ್ಟಿಗೆ ಕರಕೊಂಡು ಹೋದರು. ಕಚೇರಿಯಲ್ಲಿ ಆರೋಪಿಯ ಹೊರತು ಯಾರನ್ನೂ ಒಳಗೆ ಬಿಡಲಿಲ್ಲ. ಆರೋಪಿಯ ಆಪ್ತರ ಹೊರತು ಯಾರನ್ನೂ ಬಿಡಲಿಕ್ಕಾಗುವದಿಲ್ಲೆಂದು ಮ್ಯಾಜಿಸ್ಟ್ರೇಟರು ಹುಕುಮು ಮಾಡಿದರು. ಶ್ರೀ. ಮಹಾಶಬ್ದೆಯವರು ಹುಬ್ಬಳ್ಳಿಯವರು. ಒಂಟಿಗರಾಗಿ ಹಣಮಂತನಂತೆ ಹೋದವರು. ಆಪ್ತರಾರು ಇರಬೇಕು? ಹಿತಚಿಂತಕರು ಮಾತ್ರ ಇರುವಂಥ ಸ್ಥಳ. ಇವರನ್ನೂ ಕಚೇರಿಯಲ್ಲಿ ಬಿಡದಂಥ ಮ್ಯಾಜಿಸ್ಟ್ರೇಟರ ಸಾರಾಸಾರ ವಿಚಾರದ ಜ್ಞಾನವು ಗುಡ್ಡದಷ್ಟು ದೊಡ್ಡದೇ ಸರಿ. ಕೊನೆಯಲ್ಲಿ ಇವರಿಗೆ ಒಂದು ವರ್ಷದ ಸಖ್ತ ಶಿಕ್ಷೆ ಹೇಳಿದರು. ಶಸ್ತ್ರಧಾರಿ ಪೋಲಿಸರು ಇವರನ್ನು ಮೋಟಾರದಲ್ಲಿ ಕೂಡ್ರಿಸಿಕೊಂಡು ತುರಂಗಕ್ಕೆ ಕರಕೊಂಡು ಹೋದರು.

ಯುರೋಪಿಯನ್ನ ಲೇಡಿಗಳ ಕ್ಲಬ್ಬಿನ ಮೇಲೆ ಬಾಂಬು.

—(೦)—

ಪಂಜಾಬಕ್ಕೆ ಸೇರಿದ ಲಿಯಾಲಪೂರದಲ್ಲಿನ ಯುರೋಪಿಯನ್ನರ ಕ್ಲಬ್ಬಿನ ಒಂದು ಭಾಗವಾದ ಸ್ತ್ರೀಯರ ಕ್ಲಬ್ಬಿನ ಮೇಲೆ ದಾರಿಯ ಮೇಲೆ ನಿಂತು ಒಬ್ಬನು ಬಾಂಬು ಚಲ್ಲಿದನೇ ಬಾಯಿಸಿಕಲ್ಲಿನ ಮೇಲೆ ಕೂತು ಪಲಾಯನ ಹೇಳಿಸಿದನು. ಬಾಂಬು ನೀಟಾಗಿ ಹೋಗದೆ, ತಂತಿಗೆ ಬಡಿದು, ನೀರೊಳಗೆ ಬಿದ್ದದ್ದರಿಂದ, ಹಾನಿಲ್ಲ. ಅದನ್ನು ತಪಾಸ ಮಾಡಲಾಗಿ ಅದು ಭಯಂಕರವಾದದ್ದೆಂದು ಕಂಡುಬಂತು. ಲೇಡಿಗಳು ಒಳ್ಳೇ ಸಂಕಟದಿಂದ ಪಾರಾದರು.

ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಓರ್ವ ಲೇಡಿಯ ಸತ್ಯಾಗ್ರಹ

—(೦)—

ಆಯರ್ಲಂಡದಿಂದ ಬ್ರಿಟನನೆಂಬೋರ್ವ ಸ್ತ್ರೀಯಳು ಲಂಡನಕ್ಕೆ ಬಂದು, ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡಬೇಕೆಂಬ ದೊಡ್ಡ ಗೊಂದಲವೆಬ್ಬಿಸಿದಳು. ಪೋಲಿಸರು ಇವಳನ್ನು ಹಿಡಿದೊಯ್ದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ನೀನು ಮಂಗಾಟ ಮಾಡಬೇಡ ಒಳ್ಳೇ ನಡತೆಯ ಜಾಮೀನು ಕೊಡೆಂದು ಮ್ಯಾಜಿಸ್ಟ್ರೇಟರು ಇವಳಿಗೆ ಹೇಳಿದರು. ಆದರೆ ಈಕೆಯು ಬಂಟತನದಿಂದ ಐದು ನಿಮಿಷದ ಮಟ್ಟಿಗೆ ಸಹ ಜಾಮೀನು ಕೊಡುವದಿಲ್ಲೆಂದಳು. ಆಗ ಮ್ಯಾಜಿಸ್ಟ್ರೇಟರು ಇವಳನ್ನು ಪೋಲಿಸರ ಕಚ್ಚಾ ತುರಂಗಕ್ಕೆ ಕಳಿಸಿದರು. ನಾವು ಇಂಗ್ಲಿಷ ಜನರು ಆಯರ್ಲಂಡಕ್ಕಿಂತ ಹೆಚ್ಚಾಗಿ ಹಿಂದುಸ್ಥಾನವನ್ನು ಹಿಂಸಿಸುತ್ತೇವೆಂದು ಇವಳು ಸಾರುತ್ತಿದ್ದಾಳೆ.

ಇಡೀ ತಾಲೂಕಿನ ಶೇಂದಿ ಸವಾಲು ರದ್ದು ಹೋಯಿತು.

—()(೦)()—

ಮುಂಬಯಿ ಹತ್ತರಿರುವ ಪಾಲಘರ ತಾಲೂಕಿನಲ್ಲಿ ಒಟ್ಟು ೧೩೪ ಶೇಂದಿ ಅಂಗಡಿಗಳ ಲಿಲಾವು ಬುಧವಾರ ದಿವಸ ಮಾಮಲೇದಾರರ ಮುಂದಾಗತಕ್ಕದ್ದಿತ್ತು. ಕಾಂಗ್ರೆಸದವರ ಪ್ರಯತ್ನದಿಂದ ಒಬ್ಬ ಕಲಾಲನೂ ಸವಾಲಿಗೆ ಬರಲಿಲ್ಲ. ಮುಂದಿನ ತಿಂಗಳಲ್ಲಿ ಧಾರವಾಡ ಜಿಲ್ಹೆಯವರೂ ಇದೇ ಬಹಾದ್ದುರಿ ತೋರಿಸಲು ಈಗಿನಿಂದ ಕರ್ತವ್ಯ ಜಾಗೃತರಾಗುವರೆಂದು ತಿಳಿಯುತ್ತೇವೆ.

ಸರಕಾರೀ ಕಾಮದಾರರೂ, ವಿಶೇಷವಾಗಿ ಪೋಲಿಸರೂ ರಾಜೀನಾಮೆ ಕೊಡಬೇಕು.

—(೦)—

ಮುಂಬಯಿಯ ಕಾಂಗ್ರೆಸ ಕಮೀಟಿಯವರು ಒಂದು ಜಾಹೀರ ಸಂದೇಶ ತೆಗೆದು ಸರಕಾರೀ ಕಾಮದಾರರೂ, ವಿಶೇಷವಾಗಿ ಪೋಲಿಸರು ರಾಜೀನಾಮೆ ಕೊಟ್ಟು, ಈಗಿನ ಚಳವಳಿಯಲ್ಲಿ ಸೇರಬೇಕೆಂದು ಸೂಚಿಸಿದ್ದಾರೆ. ಇದೇ ವೇಳೆಯಲ್ಲಿ ಸರಕಾರದವರು ಒಂದು ಸರಕ್ಯೂಲರ ತೆಗೆದು ಸರಕಾರೀ ಕಾಮದಾರರು ಕಾಂಗ್ರೆಸದ ಸಭೆಗಳಿಗೆ ಹೋಗಬಾರದೆಂದು ಹುಕುಮು ಮಾಡಿದ್ದಾರೆ. ಮನೆಯಲ್ಲಿ ವರ್ತಮಾನಪತ್ರಗಳನ್ನೂ ಓದಬಾರದೆಂದು ಕಟ್ಟು ಮಾಡಬೇಕು!!

ಬಲೂಚಿಸ್ಥಾನದ ಸರಹದ್ದಿನಲ್ಲಿ ಪುಂಡಾಟಿಕೆ.

—()—()—()—

ಯುರೋಪಿಯನ್ನರ ಪ್ರವಾಸಕ್ಕೆ ಪ್ರತಿಬಂಧ.

—(೦)—

ಬಲೂಚಿಸ್ಥಾನದ ಸರಹದ್ದಿನಲ್ಲಿರುವ ಆಫ್ರಿದಿ ಮೊದಲಾದ ಕುಲದವರು ಇಂಗ್ಲಿಷ ಜನರ ಕೂಡ ಯುದ್ಧವೆನಿಸುವಂಥ ಪುಂಡಾಟಿಕೆ ನಡೆಸಿದ್ದು, ಚಮನ ಮತ್ತು ಜಿಲೆವಿನಲ್ಲಿ ಯುರೋಪಿಯನ್ನರು ಮೋಟಾರದಲ್ಲಿ ಕೂತು ಹೋಗಬಾರದೆಂದು ಬ್ರಿಟಿಶ ಸರಕಾರದವರು ಹುಕುಮು ಮಾಡಿದ್ದಾರೆ.

ಕರ್ನಾಟಕ ಹೈಸ್ಕೂಲ್, ಧಾರವಾಡ ಪ್ರಕಟನೆ.

—(೦)—

ಬೇಸಗೆಯ ಬಿಸುವಿನ ತರುವಾಯದಲ್ಲಿ ಕರ್ನಾಟಕ ಹೈಸ್ಕೂಲು ತಾ|| ೯-೬-೧೯೩೦ ನೆಯ ದಿವಸ ೧೧|| ಗಂಟೆಗೆ ಪ್ರಾರಂಭವಾಗುವುದು. ಹೊಸದಾಗಿ ನಮ್ಮ ಶಾಲೆಗೆ ಬರಲಿಚ್ಛಿಸುವವರು ತಾ|| ೭-೬-೩೦ ರೊಳಗೆ ತಮ್ಮ ಹಿಂದಿನ ಶಾಲೆಯ ಲೀವ್ಹಿಂಗ ಸರ್ಟಿಫಿಕೇಟಿನೊಂದಿಗೆ ಪ್ರಿನ್ಸಿಪಾಲರಿಗೆ ಅರ್ಜಿಯನ್ನು ಕಳುಹಬೇಕು.

ಮುಲಕೀಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಒಂದು ವರ್ಷದಲ್ಲಿ ಮೊದಲಿನ ಮೂರು ಇಯತ್ತೆಗಳ ಅಭ್ಯಾಸವನ್ನು ಮುಗಿಸಲು ಬರುವಂತೆ ಕಲಿಸುವುದಕ್ಕೆ ಒಂದು ಪ್ರತ್ಯೇಕ ವರ್ಗವನ್ನು ಬರುವ ಜೂನ ತಿಂಗಳಿನಿಂದ ಪ್ರಾರಂಭಿಸುವೆವು. ಈ ವರ್ಗಕ್ಕೆ ಬರಲಿಚ್ಛಿಸುವವರು ಪ್ರಿನ್ಸಿಪಾಲರನ್ನು ಪ್ರತ್ಯಕ್ಷವಾಗಿ ತಾ|| ೨೫-೬-೩೦ ರೊಳಗೆ ಕಾಣ

ಗಳನ್ನು ಕೊಟ್ಟಿದ್ದಕ್ಕಾಗಿ ನಾನು ಕಂಪನಿಯ ಅಭಿನಂದನ ಮಾಡುತ್ತೇನೆ.

ಬಿಲ್ಡಿಂಗ ಸಿಂಕಿಂಗ ಫಂಡು- ಸದ್ಯಕ್ಕೆ ೪೭೩೭-೧೨-೦ ಆಗುತ್ತದೆ. ಇದು ಚಕ್ರ ಬಡ್ಡಿಯಿಂದ ಶೀಘ್ರವಾಗಿ ನಮ್ಮ ಭವ್ಯ ಕಟ್ಟಡದ ಕ್ರಮವನ್ನು ಪೂರೈಸಿಕೊಡುವದು

ಸಭ್ಯ ಗೃಹಸ್ಥರೇ- ಅನ್ನತುಳಿದನ್ನ ಕಂಪನಿಯು ಬಲಿಕವೆಂದರೆ- ಡಾಯರೆಕ್ಟರರು ಮಾಡತಕ್ಕ ಕಾರ್ಯವೇನಂದರೆ- ಕಂಪನಿಯ ಬಂಡವಲವನ್ನು ಲಾಭದಾಯಕವಾದ ಹಾಗು ಸುರಕ್ಷಿತವಾದ ರೀತಿಯಿಂದ ವಿನಿಯೋಗಿಸುವದಾಗುತ್ತದೆ. ಬ್ಯಾಲನ್ಸ ಶೀಟನ್ನು ಅವಲೋಕನ ಮಾಡುವದರಿಂದ, ಡಾಯರೆಕ್ಟರರು ಎಷ್ಟು ಆಸಕ್ತಿಯಿಂದ ಕೆಲಸ ಮಾಡಿರುತ್ತಾರೆಂಬದು ನಿಮಗೆ ಕಂಡುಬರುವದು.

ಸತ್ಯಾಗ್ರಹದಲ್ಲಿ ಶಿಕ್ಷೆ ಹೊಂದಿದಂಥ ನೌಕರರಿಗೆ ಒಂದು ವರುಷದ ವರೆಗೆ ಅವರ ಪಾಲಿಸಿಗಳು ರದ್ದಾಗದಂತೆ ಸ್ಪೇಶಲ ಸವಲತ್ತುಗಳನ್ನು ಕೊಟ್ಟಿರುತ್ತೇವೆ. ಇದಕ್ಕೆ ನೀವು ಅನುಮೋದಿಸುವಿರೆಂದು ನಾನು ಆಶಿಸುತ್ತೇನೆ.

ಕೊನೆಗೆ ಹೇಳಬೇಕೆಂದರೆ- ತಮ್ಮ ವಿಮೇದಾರರ, ಏಜಂಟರ ಮತ್ತು ಕಂಪನಿಯ ಸೇವಕರ ಸಹಕಾರದಿಂದ ದಿನೇ ದಿನೇ ಕಂಪನಿಯು ಹೆಚ್ಚೆಚ್ಚು ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇನೆ.

ಕೆಲಸಗಾರರು ಬೇಕು

— (೦) —

ವಿಜಯ ಮುದ್ರಾಲಯದಲ್ಲಿ ಟ್ರೆಡಲ, ಬಾಯಿಂಡಿಂಗ ಮತ್ತು ಹ್ಯಾಂಡ ಪ್ರೆಸ ಮುದ್ರಣ ಬಲ್ಲಂಥ ಕೆಲಸಗಾರರು ಬೇಕಾಗಿದ್ದಾರೆ. ಉಮೇದವಾರರಿಗೆ ಕೆಲಸ ಕಲಿಸಲ್ಪಡುವದು. ಕೆಲಸ ಮಾಡಬಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಬೇಕು. ಸಂಬಳ, ಯೋಗ್ಯತೆಯ ಪ್ರಕಾರ.

ಮ್ಯಾನೇಜರ ವಿಜಯ
ಧಾರವಾಡ

ಮೈಸೂರ ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿದಿವಸ ಮನೆಯಲ್ಲಿ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ತೊಲೆ ಕೋಲೆಯ ಸೇರು ೧ಕ್ಕೆ ೩—೦—೦
ಕೃಷ್ಣ ಪಾರಿಜಾತ ಅಸ್ತರು ತೊಲೆ ೧ಕ್ಕೆ ೪—೦—೦

ಮೈಸೂರಸ್ಟೋರ,
ಬೆಳಗಾವಿಯವರ ಗಲ್ಲಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೊಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿ ... ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆ ವೆಚ್ಚ ಬೇರೆ. ೩ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ವ್ಹೀ. ಪಿ. ಚಿಕಿತ್ಸೆಯ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಚಾವತೀಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

ಬೇರೆ ನಿವು ಔಷಧ ತರಿಸುವಾಗ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ತರಿಸುತ್ತೀರೆಂಬದನ್ನು ಬರೆಯಬೇಕು.

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿ

ಧಾರವಾಡ ಜಿಲ್ಹೆಯಲ್ಲಿ
ಇದೊಂದೇ ಶಿಕ್ಷಣದ ಸಳವು

ಮೋಟಾರ ಡ್ರಾಯವ್ಹರ ವಿದ್ಯೆ ಕಲಿಯಲು ಜನರು ಈವರೆಗೆ ಪುಣೆ, ಬೆಳಗಾವಿಗೆ ಹೋಗಿ, ಒಂದಕ್ಕೆ ನಾಲ್ಕು ರೂಪಾಯಿ ವೆಚ್ಚ ಮಾಡಿಕೊಂಡು ಬರುವರು. ಈ ವೆಚ್ಚದ ಉಳಿತಾಯ ಮಾಡಿಕೊಟ್ಟು, ಡ್ರಾಯವ್ಹಿಂಗದ ಉತ್ತಮ ಶಿಕ್ಷಣ ಕೊಡುವ ವರ್ಗವನ್ನು ನಾವು ಧಾರವಾಡದಲ್ಲಿ ತೆಗದಿದ್ದು, ಈಗಾಗಲೇ ಅನೇಕರು ಶಿಕ್ಷಣ ಪಡೆಯುತ್ತಲಿದ್ದಾರೆ. ಪ್ರತಿ ತಿಂಗಳಲ್ಲಿಯೂ ನಿಯಮಿತ ಜನರನು ತಕ್ಕೊಳ್ಳಬೇಕಾದ್ದರಿಂದ ಬರುವವರ ನಿರಾಶೆಯಾಗಬಾರದೆಂದು ಮುಂದಾಗಿಕ ಈ ಜಾಹೀರಾತು ಕೊಟ್ಟಿದ್ದೇವೆ. ಮೇ ಅಖೈರದೊಳಗಾಗಿ ಹತ್ತು ಜನರನು ತಕ್ಕೊಳ್ಳುವೆವು. ಆದಕಾರಣ ಕೂಡಲೆ ಅರ್ಜಿಮಾಡಿ, ಸ್ಥಳ ಕಾಯ್ದುಕೊಳ್ಳಬೇಕು. ವಿಶೇಷ ಮಾಹಿತಿಯನ್ನು ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಪ್ರೊ. ವ್ಹಿ. ಎಸ. ಇಟಗಿ.
ಮುನಸಿಪಲ್ ಕೋರ್ಟಿನ ಹತ್ತರ, ಧಾರವಾಡ

ನೋಟೀಸಿನ ದರಗಳು

— (೦) —

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಸಾಲಿಗೆ ಒಂದೂವರಿ ಆಣೆ ಇಂಗ್ಲಿಷ ಟೈಪಿನ ಒಂದು ಸಾಲಿಗೆ ಎರಡು ಆಣೆ ಸರಕಾರಿ ಮ್ಯುನಿಸಿಪಾಲಿಟಿ, ಲೋಕಲಬೋರ್ಡ ಕೋರ್ಟು ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಸಾಲುಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು, ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ರಘುನಾಥಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧] ಧಾರವಾಡ ಸೋಮವಾರ ತಾರೀಖು ೧೬ನೇ ಜೂನ ೧೯೩೦ (ಸಂಚಿಕೆ ೧೩೩

(Incorporated in S. S.) (Registered in England

The Great Eastern Life Assurance Co., Ltd.

An ideal policy with Automatic non-forfeiture and permanent disability clauses

FUNDS INVESTED IN INDIA.

TRIENNIAL BONUSES. GUARANTEED BONUS PLA

ACENTS WANTED ON LIBERAL TERMS

For further particulars apply to:-

Chief representative for Karnatak and South Kanra.

N. T. Khona. P. B. 34. *Hubli.*

ಇಂಗ್ಲಂಡದಲ್ಲಿ ರಜಿಸ್ಟರಾದದ್ದು

ದಿ ಗ್ರೇಟ ಈಸ್ಟರ್ನ ಲಾಯಿಫ ಅಶ್ಯುರನ್ಸ ಕಂ. ಲಿ.

ತ್ರೈವಾರ್ಷಿಕ ಬೋನಸಗಳು ಧಾರಾಳವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ	ಸ್ಥಿರವಾದ ಅಸಮರ್ಥತೆಯಲ್ಲಿಯೂ ಖಾಸಾಗಿ ರದ್ದಾಗದ ಮಾಜರಿಯ ... ಯೋಜನೆ ಬಂಡವಲವು	ಖಂಡಿತವಾದ ಬೋನಸಗಳ ಯೋಜನೆಗಳು ಉದಾರವಾದ ಕರಾರುಗಳ ಮೇಲೆ ಏಜಂಟರು ಬೇಕಾಗಿದ್ದಾರೆ

ಹಿಂದುಸ್ತಾನದಲ್ಲಿಯೇ ವಿನಿಯೋಗಿಸಲ್ಪಡುತ್ತದೆ.

ಹೆಚ್ಚಿನ ವಿಚಾರಗಳಿಗೆ-

ಶ್ರೀ ಎನ್. ಟಿ. ಖೋನ್ನಾ. (ಮುಖ್ಯ ಪ್ರತಿನಿಧಿ ಉತ್ತರಕರ್ನಾಟಕ ಹಾಗೂ ಮಂಗಳೂರ)

ಪೋ. ಬಾ. ೩೪ ಹುಬ್ಬಳ್ಳಿ

ಇವರಿಗೆ ಬರೆಯಬೇಕು

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—(೦)—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂಡಿಗೆ ಒಟ್ಟು ಲಕ್ಷದ ಮೇಲಿಂಟು, ಚಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—(೦)—

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಕ್ಕಿ ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ ರೂ. ೧೨ ...

೬ ,,

೩ ,,

ವಾರ ಪತ್ರಕ್ಕೆ

ವಿಶೇಷ ಮಾಹಿ

ಕೊಡ್ಡಿ-

ವಿಜಯ.

ಚಾಳುಕ್ಯ ವಿಕ್ರಮ ವರ್ಷ ೫೫ ಜ್ಯೇಷ್ಠ ವದ್ಯ ೫

ರಾವುಂಡ ಟೇಬಲಕ್ಕೆ ಔತಣದ ಪ್ರಾರಂಭ.

ಸಾಯಮನ್ನ ಕಮೀಶನದ ಎರಡನೆಯ ಭಾಗ ಹೊರಬೀಳುವ ಮುಂಚೆಯಾಗಿ ದುಂಡು ಮೇಜಿನ ಆಮಂತ್ರಣಗಳು ಹೊರಬೀಳಹತ್ತಿವೆ. ನಾಮದಾರ ಶ್ರೀನಿವಾಸ ಶಾಸ್ತ್ರೀ, ಎಮ್ ಎನ್ ಜೋಶಿಯವರು ಮತ್ತು ಆನಿಬಿಝಾಂಟಮ್ಮನವರು ಇಂಗ್ಲಂಡದಲ್ಲಿದ್ದು, ಇವರ ಕೊರಳಿಗೆ ಅಲ್ಲಿಂದಲ್ಲೇ ಆಮಂತ್ರಣದ ಚೀಟಿಗಳನ್ನು ಕಟ್ಟಿದ್ದಾರೆ. ನಾಮದಾರ ಶಾಸ್ತ್ರೀಯವರಿಗಂತೂ ಈ ಕಲಸದಲ್ಲಿ ತಮ್ಮ ನೆರವಾಗುವಂತೆ ಮಿ. ಬೆನ್ನ ಸಾಹೇಬರು ಮುಂದಾಗಿ ಸೂಚನೆ ಮಾಡಿದ್ದಾರೆ. ಆನಿಬಿಝಾಂಟಮ್ಮನವರು ಆಮಂತ್ರಣವನ್ನು ಸ್ವೀಕರಿಸುವಾಗ ಒಂದು ಕರಾರು ಹಾಕಿದರು. "ನೀವು ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯವನ್ನು ಕೂಡಲೆ ಕೊಡುತ್ತೀರೆಂದೂ, ಬಹು ಜನ ಸಮಾಜದ ಮತವನ್ನು ವ್ಯಕ್ತಪಡಿಸುವ ನೆಹರು ರಿಪೋರ್ಟನ್ನು ರಾವುಂಡ ಟೇಬಲಿನ ಮುಂದಿಡುತ್ತೇವೆಂದೂ ವಚನ ಕೊಟ್ಟರೆ ನಾವು ಆಮಂತ್ರಣ ಅಂಗೀಕಾರ ಮಾಡತಕ್ಕವರೆಂದು ಕರಾರು ಇದ್ದು" ಅದಕ್ಕೆ ಮಿ. ಬೆನ್ನ ಸಾಹೇಬರು ಒಪ್ಪಿದ್ದಾರೆಂದು ಲಂಡನದಿಂದ ಸ್ಪೇಶಲ ತಾರು ಬಂದಿರುತ್ತದೆ. ಹಿಂದುಸ್ಥಾನದಲ್ಲಿಯೂ ಕೆಲವರು ಗುಪ್ತವಾಗಿ ಮತ್ತೆ ಕೆಲವರು ಬಹಿರಂಗವಾಗಿ, ವಿಲಾಯತಿಗೆ ಹೊರಡುವ ಸಿದ್ಧತೆ ನಡಿಸಿದ್ದಾರೆ. ಬಂಗಾಲದ ಮುಸಲಮಾನರು ಸಭೆಮಾಡಿ, ತಮ್ಮ ಪತಿಯಿಂದ ಇಬ್ಬರನ್ನು ಆರಿಸಿದ್ದಾರೆ. ಈಗಿನ ಪ್ರಕ್ಷುಬ್ಧವಾದ ವಾತಾವರಣ ನೋಡಲಾಗಿ ರಾವುಂಡಟೇಬಲಕ್ಕೆ ಹೋಗತಕ್ಕವರು ಉಡಿಯಲ್ಲಿ ಬೆಂಕಿ ಕಟ್ಟಿಕೊಂಡೇ ಹೋಗುವರೆಂದು ಸ್ಪಷ್ಟವಾಗುತ್ತದೆ. ಸಾಯಮನ್ನ ರಿಪೋರ್ಟನ್ನು ಓದಬೇಕೆಂ... ...ಗವಶ್ಯಕಣೆಯಾಗುವಲ್ಲೆಂದು ಕಾಂಗ್ರೆ... ಕೇಳುತ್ತಿದ್ದು, ಅದರ ಸಿಕೇ... ...ಡೆದಿದೆ. ಕಾಂಗ್ರೆ... ...ಯತಿಗೆ ಹೋ... ಮದಿನಗೆ

ಹೋಗುವಂತಾಗುತ್ತದೆ. ಮರಾಠರೂ, ಮುಸಲಮಾನರೂ ಬಹುವಾಗಿ ಆತುರಗೊಂಡಿದ್ದು, ಆ ಆತುರತೆಯು ತಮಗೆ ಅಪಕೀರ್ತಿ ತರುವಂಥಾದ್ದೇ ಆಗುವದೆಂದು ಇವರು ಖಂಡಿತವಾಗಿ ತಿಳಿಯತಕ್ಕದ್ದು.

ಮುಂಬಯಿಯಲ್ಲಿ ಸತ್ಯಾಗ್ರಹ.

—(೦)—

ಮುಂಬಯಿ ಕಾಂಗ್ರೆಸ ಕಮೀಟಿಯವರು ಸೊಲ್ಲಾಪೂರದ ನೆನಪಿಗಾಗಿ ದೊಡ್ಡ ಮೆರವಣಿಗೆ ತೆಗೆಯಬೇಕೆಂದು ಏರ್ಪಾಡು ಮಾಡಿದರು. ಪೋಲೀಸರು ಹಿಂದಿನ ಮೆರವಣಿಗೆಯನ್ನು ಬೋರೀಬಂದರದ ವರೆಗೆ ಬರಗೊಟ್ಟು, ಅಲ್ಲಿ ಅದನ್ನು ಯುರೋಪಿಯನ್ನರ ವಸತಿಯಲ್ಲಿ ಹೋಗದಂತೆ ತಡೆದರು. ಕಾಂಗ್ರೆಸದವರು ಸತ್ಯಾಗ್ರಹ ಮಾಡಿ ಜಿದ್ದು ಗೆದ್ದರು. ಈ ಸಾರೆ ಪೋಲೀಸರು ಮೆರವಣಿಗೆಯವರನ್ನು ಕಾಂಗ್ರೆಸ ಆಫೀಸಿನ ಹೆಬ್ಬಾಗಿಲದ ಹೊರಗೇ ಹುಗಿದು, ಪುತ್ತಿಗೆ ಹಾಕಿದಂತೆ ಮಾಡಿ, ತಡೆದರು. ಇದಕ್ಕೆ ಕಾಂಗ್ರೆಸದವರೆಷ್ಟು ಸೊಪ್ಪು ಹಾಕದೆ, ಅಲ್ಲೇ ಸತ್ಯಾಗ್ರಹ ಮಾಡಿ, ನೆ ಹಿಡಿದು ಕೂತರು. ಮೋಟಾರ, ಟ್ರಾಮು, ಬಂಡಿಗಳ ವ್ಯವಹಾರವೆಲ್ಲ ಕಟ್ಟಾಯಿತು. ನೆರೆದ ಜನರು ಸ್ವಬುದ್ಧಿಯಿಂದ ಬೇರೆ ಮೆರವಣಿಗೆಯ ಪದ್ಧತೆ ನಡಿಸಿದರು. ಪೋಲೀಸರು ಲಾಠೀ ಪ್ರಹಾರ ಮಾಡಿ, ಅನೇಕರನ್ನು ಘಾಯಪಡಿಸಿದರು. ಹೊರಗೂ ಒಳಗೂ ಈ ಪ್ರಕಾರ ಜಿದ್ದು ಮತ್ತು ಗೊಂದಲವೇಳಲು ರಾತ್ರಿ ಹತ್ತರ ಸಮಯದಲ್ಲಿ ಪೋಲೀಸರು ತಾವಾಗಿ ಪುತ್ತಿಗೆ ಎಬ್ಬಿಸಿಕೊಂಡು ಮನೆಯ ದಾರೀ ಹಿಡಿದರು. ಬಳಿಕ ಮೆರವಣಿಗೆ ಹೊರಟು ಬೋರೀಬಂದರದ ಬೈಲಿಗೆ ಬಂತು ಅಲ್ಲಿ ಬೆಳಗಿನ ನಾಲ್ಕರ ವರೆಗೆ ಭಾಷಣಗಳಾಗಿ ಜಿದ್ದು ಗೆದ್ದ ಬಗ್ಗೆ ಪ್ರಚಂಡ ಜಯಜಯಕಾರವಾಗಿ ಸಭೆಯ ವಿಸರ್ಜನೆಯಾಯಿತು.

ಹುಬ್ಬಳ್ಳಿ ಮುನಸಫ ಕೋರ್ಟಿಗೆ ಪೋಲೀಸ ಬಂದೋಬಸ್ತು.

—(೦)—

ಹುಬ್ಬಳ್ಳಿಯವರು ಸತ್ಯಾಗ್ರಹದಿಂದಲೇ ಮ್ಯುನಿಸಿಪಾಲಿಟಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವದೇ ಹೆಚ್ಚು ಸಂಭವವಾಗಿ ತೋರುತ್ತಿರುವದರಿಂದ ಮತ್ತು ಮ್ಯುನಿಸಿಪಾಲಿಟಿಗೆ ಹತ್ತೇ ಕೋರ್ಟು ಇರುವದರಿಂದ, ಸೊಲ್ಲಾಪೂರದಂತೆ ತಮ್ಮ ಕೋರ್ಟಿಗೆ ಕೇಡು ಸಂಭವಿಸಬಾರದೆಂಬ ಒಣ ಅಂಜಿಕೆಯಿಂದ ಮುನಸಫರು ನಿಶಾನೆ ಹಚ್ಚುವ ದಿವಸ ಪೋಲೀಸ ಬಂದೋಬಸ್ತಿಡಬೇಕೆಂದು ಸಿಟಿ ಸಬ್ ಇನ್ಸಪೇಕ್ಟರರಿಗೆ ತಿಳಿಸಿರುತ್ತಾರೆ.

ಬ್ಯಾಡಗಿಯ ಮಹಾದೇವ ಪಥಕದ ಕರ್ತೃತ್ವ.

—:(೦):—

ಬ್ಯಾಡಗಿಯ ಮ್ಯುನಿಸಿಪಾಲಿಟಿಯವರು ಶ್ರೀ ಕ್ಯಾತಾರಿಯವರಿಗೆ ರಾಷ್ಟ್ರೀಯ ಚಳವಳಿಯ ದೆಸೆಯಿಂದ ಮನೆಗೆ ಹೋಗಿರೆಂದು ಹೇಳಿದ್ದು, ಬ್ಯಾಡಗಿ ಮತ್ತು ಅದರ ಸುತ್ತಲಿನ ಗ್ರಾಮಗಳಲ್ಲಿರುವ ಶೇಂದಿ ಕುಡುಕರ ಮೇಲೆ ಪರಿಣಾಮಕಾರಿ ಮಾಡಿದಂತಾಗಿರುತ್ತದೆ. ಶ್ರೀ. ಕ್ಯಾತಾರಿಯವರು ಸೇವಾವೃತ್ತಿ ತಪ್ಪಿದ ಕೂಡಲೆ, ಮಹಾದೇವರ ಹೆಸರಿನಿಂದ ಸ್ವಯಂಸೇವಕರ ಪಥಕ ಕಟ್ಟಿ, ಈಚಲ ಗಿಡಗಳ ಧ್ವಂಸ ಮಾಡುವಂಥ ಸತ್ಕಾರ್ಯ ಕೈಕೊಂಡರು. ಇವರು ನಂದೀಹಳ್ಳಿ ಗ್ರಾಮದಲ್ಲಿರುವ ಗಿಡಗಳನ್ನು ಕಡಿಯಲೋಸುಗ ಕೊಡ್ಲಿಗಳ ಪೂಜೆ ಮಾಡಿ, ಪರಶುರಾಮನಿಂದ ದಿವ್ಯ ವರವು ಪಡೆದಂತೆ ೬೦—೭೦ ಸ್ವಯಂಸೇವಕರೊಡನೆ ಪ್ರಯಾಣ ಬೆಳೆಸಿದರು. ಗ್ರಾಮದ ದಿಡುವ ತನಕ ಪುರದ ನರನಾರಿಯರು ಇವರನ್ನು ಉತ್ಸವದಿಂದ ಸಾಗಗಳಿಸಿದರು. ನಂದೀಹಳ್ಳಿಯವರೂ ಬಹುವಾಗಿ ಆದರಾತಿಥ್ಯ ಮಾಡಿ, ವಾದ್ಯದೊಂದಿಗೆ ಈಚಲಬನಕ್ಕೆ ಕರಕೊಂಡು ಹೋದರು. ಅಲ್ಲಿ ಅಂಗೀಕೃತಕಾರ್ಯ ನೆರವೇರಿದ ಬಳಿಕ, ಇವರು ತಿರಿಗಿ ಬ್ಯಾಡಗಿಗೆ ಬಂದರು. ಆಗಂತೂ ಇವರ ತೆಗೆದ ಮೆರವಣಿಗೆಯು ಬಹು ದಿವಸ ನೆನಪಿನಲ್ಲಿಡುವಂತಾಯಿತು. ಹೆಣ್ಣುಮಕ್ಕಳು ಆರುತಿ ಬೆಳಗಿದರು. ಅನೇಕರು ಪುಷ್ಪವೃಷ್ಟಿ ಮಾಡಿದರು. ಎಲ್ಲಕ್ಕೂ ಮಹತ್ವದ ಸಂಗತಿಯೆಂದರೆ ಅದು ತಾಬೂತಗಳು ಹೊಳೆಗೆ ಹೋಗುವ ಕಾಲವಾಗಿತ್ತು. ಮುಸಲಮಾನರು ಹಿಂದೂ ಮುಸಲಮಾನಕ್ಕೆ ಜಯವೆಂದರು ಮತ್ತು ಶ್ರೀ. ಕ್ಯಾತಾರಿಯವರ ಪ್ರೇರಣೆಯಿಂದ ತಾಬೂತಗಳ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚಿದರು. ಈ ನೋಟವು ಅದ್ವಿತೀಯ ಮತ್ತು ಅಭೂತಪೂರ್ವವಾಯಿತು. ಮ್ಯುನಿಸಿಪಾಲಿಟಿಯ ಮೇಲೆ ನಾಡಗುಡಿಯನ್ನು ಹಚ್ಚಬೇಕೆಂದು ಊರವರು ಪಂಥತೊಟ್ಟಿದ್ದು, ಅದನ್ನು ಅವರು ಕೊನೆಗಾಣಿಸದೆ ಬಿಡರೆಂದು, ಅವರ ಪ್ರಕೃತದ ಉತ್ಸಾಹಾಸಕ್ತಿಯಿಂದ ಸ್ಪಷ್ಟವಾಗುತ್ತದೆ.

ಗಡವಾಲಿ ಸೈನಿಕರಿಗೆ ಸೊಲ್ಲಾಪೂರದಂತೆ ಭಯಂಕರ ಶಿಕ್ಷೆ.

—(೦)—

ಪೇಶಾವರದಲ್ಲಿ ಗುಂಡು ಹಾಕಲಿಲ್ಲೆಂದು ಆಕ್ಷೇಪ ಹೊರೆಸಿದ ಗಡವಾಲಿ ಸೈನಿಕರಿಗೆ ಸೊಲ್ಲಾಪೂರದಂತೆ ಭಯಂಕರ ಶಿಕ್ಷೆ ವಿಧಿಸಿದರು. ಒಬ್ಬನಿಗೆ ೧೫ ವರ್ಷ ಮತ್ತು ಉಳಿದವರಿಗೆ ಮೂರರಿಂದ ಹತ್ತು ವರ್ಷ ಈ ಪ್ರಕಾರ ೧೬ ಜನರಿಗೆ ಶಿಕ್ಷೆ ಮಾಡಿದ್ದಾರೆ.

ಮವಾಳರಿಗೂ ಸ್ವಾತಂತ್ರ್ಯ ಬೇಕಾಯಿತು.

—(೦)—

ಸರ ಚಿಮಣಲಾಲ ಸೆತಲವಾಡ ಮತ್ತು ಸರ ಶಾಪೂರಜಿ ಜಹಾಂಗೀರರು ಸದ್ಯಃಸ್ಥಿತಿಯನ್ನು ಕುರಿತು ಒಂದು ಉದ್ದೇಶಪತ್ರಿಕೆಯನ್ನು ಪ್ರಸಿದ್ಧ ಮಾಡಿ, ರಾಷ್ಟ್ರೀಯ ಚಳವಳಿಯು ಒಳ್ಳೇ ಕಾವಿನಲ್ಲಿ ದ್ವಿಭಾವದಿಂದ ಬೆಳೆಯುತ್ತಲಿದೆ ವ್ಯಾಪಾರಸ್ಥರು ಉತ್ಸಾಹದಿಂದ ಇದರಲ್ಲಿ ಸೇರಿದ್ದಾರೆ. ಹಿಂದೀ ರಾಷ್ಟ್ರದ ಮಹತ್ವಾಕಾಂಕ್ಷೆಯನ್ನು ಸರಕಾರವು ಬೇಗನೆ ತೃಪ್ತಪಡಿಸುವಂತೆ ವ್ಯಾಪಾರಸ್ಥರಿಗೆ ಕಂಡುಬರದ್ದರಿಂದ, ಇವರ ನಿರಾಶೆಯಾಗಿ ಇವರು ಹೆಚ್ಚು ನಿಷ್ಠೆಯಿಂದ ಈ ಕೆಲಸದಲ್ಲಿ ಮನಸ್ಸು ಹಾಕಿದ್ದಾರೆ. ಸರಕಾರವು ವಸಾಹತಿಕ ಸ್ವರಾಜ್ಯದ ಸಂಪೂರ್ಣ ಹಕ್ಕು ಕೊಟ್ಟ ಹೊರತು ಹಿಂದೀ ರಾಷ್ಟ್ರದ ಸಮಾಧಾನವಾಗಲಾರದೆಂದು ತಮ್ಮ ಸ್ಪಷ್ಟವಾದ ಮತವನ್ನು ಜಾಹೀರ ಮಾಡಿದ್ದಾರೆ.

ಅಸಹಕಾರದ ಶುಭದಲ್ಲಿ ಸಾಯಮನ್ನರ ಅಶುಭ

—(೦)—

ಅಸಹಕಾರ, ಸತ್ಯಾಗ್ರಹ ಮತ್ತು ಕಾಯದೆಭಂಗದಂಥ ಮಂಗಲ ಮಹೋತ್ಸವದ ಕಾಲದಲ್ಲಿ ಸಾಯಮನ್ನ ಕಮಿಶನದ ಅಶುಭ ರಿಪೋರ್ಟು ಪ್ರಸಿದ್ಧವಾಗಿದ್ದು, ಅದರ ನಿಷೇಧಕ್ಕೆಂದು ಬೆಳಗಾವಿಯು ಈ ವಾರದ (ತಾ|| ೧೯-೬-೩೦) ಸಂಯುಕ್ತ ಕರ್ನಾಟಕ ಪತ್ರವನ್ನು ಒಂದಿಡುವಂತೆ ನಿಶ್ಚಯಮಾಡಿದ್ದು, ಅಪ್ರಕಾರ ಜಾಹೀರ ಮಾಡಲು ನಮಗೆ ತಿಳಿಸಿರುತ್ತಾರೆ.

ಬರ್ಫದ ಹೆಂಟೆ ಒಗೆದು ಮಳೆತರಿಸುವದು.

—(೦)—

ಹಾಲಂಡದ ರಾಜಧಾನಿಯಾದ ಅಮ್ಸ್ಟರಡಮದಲ್ಲಿ ಒಬ್ಬ ವೈಮಾನಿಕನು ತನ್ನ ವಿಮಾನದಲ್ಲಿ ನೂರು ಸಾವಿರ ಪೌಂಡು ತೂಕದಷ್ಟು ಬರ್ಫದ ಇಟ್ಟಂಗಿಗಳನ್ನು ಹಾಕಿಕೊಂಡು, ಮೋಡಗಳ ಮೇಲೆ ಅಂದರೆ ೮೫೦೦ ಫೂಟು ಎತ್ತರವಾಗಿ ಹಾರಿ, ಅಲ್ಲಿಂದ ಮೋಡಗಳ ಮೇಲೆ ಆ ಬರ್ಫದ ಹೆಂಟೆಗಳನ್ನೊಗೆಯಲಾರಂಭಿಸಿದನು. ಇವುಗಳ ಪೆಟ್ಟಿನಿಂದ ಮಳೆಯಾಗಹತ್ತಿತು. ಮುಂದೆ ಈ ಹೊಡತದಿಂದ ದೊಡ್ಡ ಮಳೆಯೇ ಬಿತ್ತು.

ಹಿಂದಕ್ಕೆ ಹಿಂದುಸ್ಥಾನದಲ್ಲಿ ಗುಡ್ಡದ ಮೇಲಿಂದ ಮೋಡಗಳಿಗೆ ತೋಪು ಹೊಡೆದು, ಮಳೆ ಬೀಳಿಸುವ ಸಾಹಸವನ್ನು ಮಾಡಿದ್ದರು. ಆದರೆ ಅವರಿಗೆ ಯಶ ಬರಲಿಲ್ಲ. ವೈಮಾನಿಕನಂತೆ ಬೇರೆ ಕಡೆಯಲ್ಲಿಯೂ ಪ್ರಯತ್ನವಾಗಿ ಯಶ ಬರುವದಾದರೆ ಮಳೆಯಾಗಲಿಲ್ಲೆಂಬ ಚಿಂತೆಯೇ ದೂರಾಗುವದು.

ಕಚೇರಿ ಕೆಡವಿದರು.

ಕಾಗದ ಪತ್ರ ಸುಟ್ಟರು.

ಫೌಜದಾರ ಮತ್ತು ಇನ್ಸ್ಪೇಕ್ಟರರನ್ನು ಸಾಯುವಂತೆ ಹೊಡೆದರು.

—(೦)—

ಕಡಲೂರ ಜಿಲ್ಹೆಗೆ ಸೇರಿದ ತಿಂಡಿವನದಲ್ಲಿ ಮ್ಯಾಜಿಸ್ಟ್ರೇಟರು ನಾರಂಗವಾಣಿ ಮತ್ತು ಗೋವಿಂದರಾಜರೆಂಬವರಿಗೆ ಉಪ್ಪಿನ ಕಾಯದೆಭಂಗದ ಸಲುವಾಗಿ ಶಿಕ್ಷೆ ಕೊಟ್ಟರು. ಈ ಶಿಕ್ಷೆಯ ತ್ವೇಷದಿಂದ ನೆರೆದ ಎರಡು ಸಾವಿರ ಜನರು ಪೋಲೀಸರ ಬೆನ್ನಟ್ಟಿದರು. ಫೌಜದಾರ ಸುಬ್ರಹ್ಮಣ್ಯ ಐ., ಇನ್ಸ್ಪೇಕ್ಟರ ವೆಂಕಟರಾಮಯ್ಯರ ಮತ್ತು ಹವಾಲದಾರ ವೆಂಕಟರಾವ ಇವರು ಒಂದು ಮನೆಯಲ್ಲಿ ಅಡಗಿಕೊಂಡರು. ಅಲ್ಲಿಂದಲೇ ಇವರನ್ನು ಜೊತೆಗೆ ತೆಗೆದು, ಸಾಬೀಳ ಹೊಡೆದು ಹತ್ತರವೇ ಇದ್ದ ಒಕ್ಕಲಿ ಕಚೇರಿಯನ್ನು ಕೆಡವಿ ಕಾಗದಪತ್ರಗಳನ್ನು ಸುಟ್ಟರು. ಡಿ|| ಪೋಲೀಸ ಸುಪ|| ಮಿ. ರಾಮಚಂದ್ರಯ್ಯರು ಸಶಸ್ತ್ರ ಪೋಲೀಸರನ್ನು ಕರಕೊಂಡು ಹೋಗಿ, ಶಾಂತತೆಯನ್ನುಂಟುಮಾಡಿದರು.

ಮುಂಬಯಿಗೆ ದಂಡಿನ ಪ್ರಯಾಣ.

—()—(·)—()—

ಮುಂಬಯಿಯಲ್ಲಿ ವಿಲಾಯತಿಯ ಅರಿವೆ ಮತ್ತು ಶರೆಯ ಗಡಂಗಗಳ ಮುಂದಾಗುವ ಪಿಕೆಟಿಂಗದಲ್ಲಿ ಶಾಂತತೆಯನ್ನು ಕಾಯುವದಕ್ಕಾಗಿ ಸರಕಾರದವರು ಪುಣೆಯಿಂದ ಮರಾಟರ ದಂಡು ಕಳಿಸಿರುತ್ತಾರೆ.

ತುರಂಗದಲ್ಲಿ ಕುದುರೆಗೆ ಹಾಕುವಂಥ ಅನ್ನ.

—(೦)—

ಸಾಬರಮತಿಯ ತುರಂಗದಲ್ಲಿ ಕೊಡುವ ರೊಟ್ಟಿಯಲ್ಲಿ ಧೂಳ ಕೂಡಿರುತ್ತದೆ. ರೊಟ್ಟಿಯ ಕೂಡ ಕೊಡುವ ಜೋಳೆಯು ಕುದುರೆಗೆ ಹಾಕುವಂತಿರುತ್ತದೆ. ಸಾಯಂಕಾಲದಲ್ಲಿ ಕೊಡುವ ಪದಾರ್ಥವು (ವಲ್ಯ) ಹುಲ್ಲಿನಂತಿರುತ್ತದೆಂದು ಅಲ್ಲಿಂದ ಬಿಟ್ಟುಬಂದ ಒಬ್ಬ ಕೈದಿಯು ಅಲ್ಲಿಯ ಊಟದ ವರ್ಣನೆ ಮಾಡಿರುತ್ತಾನೆ.

ಸಿಟಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ.

—(೦)—

೧೯೩೦ನೆಯ ಇಸವಿಯ ಜೂನ ೭ನೇ ತಾರೀಖು ದಿವಸ ಜರುಗಿದ ಶೇರ ಹೋಲ್ಡರರ ಮೀಟಿಂಗಿನಲ್ಲಿ ಆದ ಕಂಪನಿಯ ಚೇರಮನ್ನರ ಭಾಷಣವು.

—(೦)—

ತಾವು ಕಂಪನಿಯ ವಾರ್ಷಿಕ ಅಹವಾಲಿನ ಪತ್ರಿಕೆಯನ್ನು ಮಂಜೂರ ಮಾಡುವ ಮೊದಲು ನಾನು ತಮಗೆ ಕೆಲವು ಸಂಗತಿಗಳನ್ನು ತಿಳಿಸಬಯಸುತ್ತೇನೆ. ನಮ್ಮ ವ್ಯವಸ್ಥಾಪಕ ಬಂಧುಗಳಾದ ಶ್ರೀ ಜಮುನಾದಾಸ ಮೆಹ್ತಾ ಮತ್ತು ಜಬಲಪೂರದ ಶ್ರೀ. ಗೋವಿಂದದಾಸ ಶೇಟರವರು ದೇಶಸೇವೆಗಾಗಿ ಕಾರಾಗ್ರಹವಾಸಿಯಾಗಿದ್ದಾರೆ ಈ ಹೊತ್ತು ಅವರು ಇಲ್ಲಿರದ್ದಕ್ಕಾಗಿ ನನಗೆ ಬಹುವಾಗಿ ವಿಷಾದವಾಗುತ್ತದೆ. ಶ್ರೀ. ಜಮುನಾದಾಸರು ಮೋಥಾಜಿಸುವರು ಬಹು ದಿವಸದಿಂದ ಈ ಕಂಪನಿಯ ಜೀವನವನ್ನು ಕೆಲಸ ಮಾಡಿದ್ದಾರೆ. ಅವರು ದೇಶಹಿತಕ್ಕಾಗಿ ಮಾಡಿದ ಸ್ವಾರ್ಥತ್ಯಾಗಕ್ಕಾಗಿ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಕಾಲಾಂತರದಲ್ಲಿ ರಾಜಕೀಯ ವಾತಾವರಣವು ಶಾಂತವಾಗಿ, ಅವರು ಬೇಗನೆ ಬಂಧಮುಕ್ತರಾಗಲೆಂದು ಆಶಿಸುತ್ತೇನೆ.

ಈ ವರ್ಷದಲ್ಲಿ (೧೯೨೯) ೩೭೪೩ ವಿಮೆಗಳು ಇಳಿಸಲ್ಪಟ್ಟವು ಇವುಗಳಲ್ಲಿ ೨೦೭೮ ಅರ್ಜಿಗಳು ಮಂಜೂರಾದವು ಇವುಗಳ ವಿಮೆಯ ರಕಮು ೩೧,೭೦,೫೦೦ ರೂಪಾಯಿಯಾಗಿರುತ್ತದೆ. ಈ ಸಂಗತಿಯು ಬ್ಯಾಲನ್ಸಶೀಟಿನಲ್ಲಿ ಬರೆದಿರುವದು. ಈ ಪ್ರಗತಿಯು ಸಮಾಧಾನಕರವಾಗಿರುತ್ತದೆಂದು ನಾನು ತಿಳಿಯುತ್ತೇನೆ. ಇದುವರೆಗೆ ೧೭೧೩೦೦ ರೂಪಾಯಿಗಳ ವಿಮೆಯಾಗಿದ್ದು, ಹೋದ ವರ್ಷಕ್ಕಿಂತ ಹೆಚ್ಚಾಗಿ ಕೆಲಸವಾಗಲೆಂದು ಆಶಿಸುತ್ತೇನೆ.

ವೆಚ್ಚವು- ಅಲ್ಲಲ್ಲಿ ಹೊಸ ಶಾಖೆಗಳನ್ನೂ ಏಜನ್ಸಿಗಳನ್ನೂ ಸ್ಥಾಪಿಸುವ ಬಗ್ಗೆ ಹೊಸ ಖರ್ಚುಗಳಾಗಿದ್ದರೂ, ಈ ಖರ್ಚ ನೂರಕ್ಕೆ ೧೩ಕ್ಕಿಂತ ಕಡಿಮೆಯಾಗಿರುತ್ತದೆ ಹಾಗು ಮುಂದೆ ಇದಕ್ಕೂ ಕಡಿಮೆಯಾಗುವ ಸಂಭವವಿದೆ.

ಹೋದ ವರ್ಷಕ್ಕಿಂತ ಈ ವರ್ಷದ ಲಾಯಿಫ ಫಂಡು ೨,೬೦೦೦ ರೂಪಾಯಿಯಾಗಿರುತ್ತದೆಂದು ಹೇಳಲು ಸಂತೋಷಪಡುತ್ತೇನೆ.

ಕ್ಲೇಮು- ಮರಣಹೊಂದಿದ ವಾರಸದಾರರಿಗೆ ಬೋನಸ ಸಹಿತವಾಗಿ ೧,೨೬,೩೮೪ ರೂಪಾಯಿ ಕೊಟ್ಟಿರುತ್ತೇವೆ. ಇದು ಸಮಾಧಾನಕರವಾದದ್ದು. ಕಂಪನಿಯು ತಾತ್ಕಾಲ ಜನರ ಕ್ಲೇಮು

ಸಾಪ್ತಾಹಿಕ **ವಿಜಯ** ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೧। ಧಾರವಾಡ ಮಂಗಳವಾರ ತಾರೀಖು ೧೭ ನೇ ಜೂನ ೧೯೩೦ (ಸಂಖ್ಯೆ ೨೨

ವಿಜಯ.

ಶಾಲಿಶಕ್ಯ ವಿಕ್ರಮ ವರ್ಷ ೧೮೫೨ ಜ್ಯೇಷ್ಠ ವದ್ಯ ೬

ಸಾಯಮನ ರಿಪೋರ್ಟು

ವಸಾಹಾತಿನ ಸ್ವರಾಜ್ಯ ಕೂಡ ಬಹು ದಿನದ ಕನಸು.

ಬುದ್ಧೀ ಮೆಲ್ಲಕೆ,! ಮೆಲ್ಲಕೆ!!

ಸ್ವಾಮಿಗಳು ನಡೆಯುವಾಗ ಅಂಗರಕ್ಷಕರಾದ ಶಿಷ್ಯರು ಮೆಲ್ಲಕೆ, ಮೆಲ್ಲಕೆ ಎಂದು ಕೂಗುವರು. ಅದೇ ಪ್ರಕಾರ ಸಾಯಮನ್ನ ಕಮಿಟಿಯವರು ಹಿಂದುಸ್ಥಾನದ ಸ್ವರಾಜ್ಯ ವಿಷಯವಾಗಿ ಇಂಗ್ರೇಜ ಸರಕಾರಕ್ಕೆ ಸಾವಕಾಶ, ಸಾವಕಾಶವೆಂದು ಶಿಫಾರಸು ಮಾಡಿದ್ದಾರೆ. ಅವರ ಶಿಫಾರಸ್ಸಿನಿಂದ ಪೂರ್ಣ ಸ್ವರಾಜ್ಯವಂತಿರಲಿ; ವಸಾಹಾತಿನ ಕನಿಷ್ಠ ದರ್ಜೆಯ ಸ್ವರಾಜ್ಯ ಕೂಡ ಬಹು ದಿನದ ಕನಸಾಗಿ, ರಾವುಂಡ ಟೇಬಲಿನಲ್ಲಿ ಏನೂ ಸ್ವಾತಂತ್ರ್ಯ ವಿಷಯ ಹೇಳುವಂತಾಯಿತು. ಈ ರಿಪೋರ್ಟಿನ ಕರುವಾಯ ೧೫ ದಿವಸಗಳ ಮೇಲೆ ಅಂದರೆ ೨೪ ನೆಯ ತಾರೀಖಿನ ದಿವಸ ಇನ್ನೊಂದು ರಿಪೋರ್ಟು ಹೊರಬೀಳತಕ್ಕದ್ದಿದ್ದು, ಅದರಲ್ಲಿ ರಾಜ್ಯಕಾರಭಾರದ ಕೆಲವು ಸೂತ್ರಗಳನ್ನು ಹೇಳುವರು. ಆ ಸೂತ್ರಗಳು ಏನಾಗಬಹುದೆಂದು ಇಂದಿನ ಲಕ್ಷಣಗಳಿಂದಲೇ ತರ್ಕಿಸಬಹುದು.

ಹಿಂದುಸ್ಥಾನಕ್ಕೆ ಕಂಠದಿಂದಲ್ಲದೆ ಕೂಡಲೆ ವಸಾಹಾತಿನ ಸ್ವರಾಜ್ಯ ದೊರೆಯಬೇಕೆಂಬ ಪ್ರಜರು ಆತುರಗೊಂಡಿದ್ದಾರೆಂದು ಕಮೀಶನರವರು ಒಪ್ಪಿಕೊಂಡರೂ, ಇದು ವ್ಯವಹಾರದೃಷ್ಟಿಯಿಂದ ಶಕ್ಯವಲ್ಲೆಂದು ಹೇಳಿದ್ದಾರೆ. ಶಿಕ್ಷಣದಲ್ಲಿ ಹಿಂದುಸ್ಥಾನವು ಬಹಳ ಹಿಂದಿದ್ದು, ಹಾಯಸ್ಕೂಲ ಮತ್ತು ಕಾಲೇಜ ಶಿಕ್ಷಣದಲ್ಲಿ ಮಹತ್ವದ ಬದಲಾವಣೆಯಾಗಬೇಕೆಂದು ಸೂಚಿಸಿದ್ದಾರೆ. ಹಿಂದೂ ಮುಸಲಮಾನ ಕಲಹವು ರಾಜಕೀಯ ಹಕ್ಕುಗಳ ದೆಸೆಯಿಂದಿರುತ್ತದೆಂದಿದ್ದಾರೆಂದು ಏಕದ್ದೇಶೀಯರದೇ ಆಗಲು ಸದ್ಯದಲ್ಲಿ ಶಕ್ಯವಿಲ್ಲ. ಮತ್ತು ಸಂದೇಶಗಳ ಸಂಬಂಧದ ವಿಚಾರ ದೃಷ್ಟಿಯಿಂದ ಈ ದೇಶದಲ್ಲಿ ಸೋಲ್ಜರ ಸೈನ್ಯವಿರಬೇಕೆಂಬ ಅಭಿಪ್ರಾಯ ಪಟ್ಟಿದ್ದಾರೆ ಒಟ್ಟಿನಿಂದ ಹಿಂದೂ ಮುಸಲಮಾನರೆಲ್ಲರೂ ನಿರಾಶೆಯಾಗುವಂತೆ ಪೂರ್ವ ಪೀಠಿಕೆ ಮಾಡಿದ್ದಾರೆ.

ಇಡೀ ತಾಲೂಕಿನ ಶೇಂದಿ ಸವಾಲು ಬಂದ್ಯಾಹ ಯಿತು.

ಮುಂಬಯಿ ಹತ್ತರಿರುವ ಪಾಲಘರ ತಾಲೂಕಿನಲ್ಲಿ ಒಟ್ಟು ೧೩೪ ಶೇಂದಿ ಅಂಗಡಿಗಳ ಲಿಲಾವು ಬುಧವಾರ ದಿವಸ ಮಾಮಲೇದಾರರ ಮುಂದಾಗತಕ್ಕದ್ದಿತ್ತು. ಕಾಂಗ್ರೆಸದವರ ಪ್ರಯತ್ನದಿಂದ ಒಬ್ಬ ಕಲಾಲನೂ ಸವಾಲಿಗೆ ಬರಲಿಲ್ಲ. ಮುಂದಿನ ತಿಂಗಳಲ್ಲಿ ಧಾರವಾಡ ಜಿಲ್ಲೆಯವರೂ ಇದೇ ಬಹಾದ್ದುರಿ ತೋರಿಸಲು ಈಗಿನಿಂದ ಕರ್ತವ್ಯ ಜಾಗೃತರಾಗುವರೆಂದು ತಿಳಿಯುತ್ತೇವೆ.

ಪಂಡಿತ ಮಾಲವಿಯಾಯವರ ಚಿರಂಜೀವನಿಗೆ ಶಿಕ್ಷೆ.

ಮುಂಬಯಿಯಲ್ಲಿ ಪಂಡಿತ ಮಾಲವಿಯಾಯವರ ಚಿ॥ ಮುಕುಂದರಿಗೆ ಆರು ತಿಂಗಳ ಸಶ್ರಮ ಶಿಕ್ಷೆಯಾಯಿತು.

ಸಾಯಮನ್ನ ಕಮೀಶನವು

ಸತ್ಯಾಗ್ರಹ ಮತ್ತು ಕಾಯದೆಭಂಗಕ್ಕೆ ಹುರುಪುಗೊಟ್ಟಿತು.

ಸರ ಸಾಯಮನ್ನ ಸಾಹೇಬರು ಪ್ರಸಿದ್ಧ ಮಾಡಿದ ರಿಪೋರ್ಟಿನಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯುವ ಆಶಯು ಬಹು ದೂರ ವಾಯಿತು. ಇವರ ರಿಪೋರ್ಟಿನಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವದೆಂದರೆ- ಬಿಲ್ಲದುರಿಯ ಬೆನ್ನ ಹತ್ತಿದಂತಾಗುತ್ತದೆ. ಇವರು ಸ್ವರಾಜ್ಯದ ಹಾದಿ ಹೇಳಿದ್ದಾರೆ. ೧೯೧೭ನೇ ಜಾಹೀರನಾಮೆಯನ್ನು ಸ್ವರಾಜ್ಯದ ತಳಹದಿ ಎಂದು ಪ್ರಮಾಣ ತೋರಿಸಿದ್ದಾರೆ. ಇವೆಲ್ಲ ನೋಡುವ ಭಾವಿಯನ್ನು ಕಂಡು ನಾಯಿ ಸಂತೋಷಪಡುವಂತಿದೆ. ಸಾಯಮನ್ನಸಾಹೇಬರು ಹಿಂದೀ ಲೋಕಮತಕ್ಕೆ ಯಾವ ಪ್ರಕಾರದಿಂದಲೂ ಮಹತ್ವ ಕೊಟ್ಟಿರುವದಿಲ್ಲ. ವಿಲಾಯತಿಯ ಪಾರ್ಲಮೆಂಟ ಸಭೆಯೇ ಹಿಂದುಸ್ಥಾನದ ಭವಿತವ್ಯವನ್ನು ಕಾಲಕಾಲಕ್ಕೆ ಹೇಳತಕ್ಕದ್ದು. ಮತ್ತು ಹಿಂದೂ, ಮುಸಲಮಾನ, ಪಾರ್ಸಿ, ಕ್ರಿಶ್ಚನ್ನ ಮೊದಲಾದವರೆಲ್ಲರೂ, ನಾಯಿಯಂತೆ ಪಾರ್ಲಮೆಂಟದವನ್ನು ಪತ್ತಬೇಕೆಂಬುದೇ ಇವರ ಮುಖ್ಯವಾದ ಉದ್ದೇಶವಾಗಿದೆ. ಇಷ್ಟು ಹೇಳಲಿಕ್ಕೆ ಸಾಯಮನ್ನಸಾಹೇಬರು ವರ್ಷಾನುವರ್ಷ ಹಿಂದುಸ್ಥಾನದ ತುಂಬ ಸಂಚಾರ ಮಾಡುವದೂ ಬೇಕಾಗಿದ್ದಿಲ್ಲ. ಲಾಲಾ ಲಜಪತರಾಯರು ಹೊಡಿಸಿಕೊಂಡು ಸಾಯುವದೂ ಬೇಕಾಗಿದ್ದಿಲ್ಲ. ೧೮೫೮ರ ಬಂಡಾಯದಲ್ಲಿಯೇ ಹಿಂದೂ ಮತ್ತು ಯುರೋಪಿಯನ್ನರಲ್ಲಿ ವರ್ಣಭೇದ ಮಾಡುವದಿಲ್ಲೆಂದು ಇಂಗ್ರೇಜ ಸರಕಾರದವರೇ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಅದನ್ನೇ ಬಾದಶಹರ ಜನ್ಮೋತ್ಸವದ ದಿವಸ ಪ್ರತಿವರ್ಷ ಓದುತ್ತ ಬಂದರೂ ಸಾಕು. ವ್ಯರ್ಥವಾಗಿ ಸಾಯಮನ್ನಸಾಹೇಬರು ಶ್ರಮ ಪಟ್ಟರು. ಇವರ ಈಗ ಪ್ರಸಿದ್ಧವಾದ ರಿಪೋರ್ಟಿನಿಂದ ಹಿಂದುಸ್ಥಾನದ ರಾಜಕೀಯ ಪ್ರಗತಿಯು ಒಂದು ಇಂಚು ಕೂಡ ಮುಂದೆ ಹೋಗಲಾರದು. ಇವರು ಎಲ್ಲ ವಿಚಾರಗಳನ್ನು ವಿಶದವಾಗಿ ಬರೆದು ಆದರ ಉಪಸಂಹಾರವನ್ನು ಬಹಳೇ ಸಂದಿಗ್ಧವಾಗಿ ಬರೆದು, ಯಾರಿಗೂ ಏನೂ ತಿಳಿಯದಂತೆ ಮಾಡಿದ್ದಾರೆ. ಹಿಂದುಸ್ಥಾನದ ಇಂಗ್ರೇಜ ಸೈನ್ಯ ಕಡಿಮೆಯಾದ ವಿನಹ ಉದ್ಯೋಗ ವ್ಯವಸಾಯಗಳಿಗಾಗಿ ದ್ರವ್ಯ ಸಂಚಯವಾಗಲಾರದೆಂದು ಹಿಂದೀ ಜನರ ಖಚಿತವಾದ ಮತವು. ಈ ಮತವನ್ನು ಇವರು ತಚ್ಛ ಮಾಡಿ, ಸೋಲ್ಜರ ಸೈನ್ಯವಿರಬೇಕು. ಅದರ ಮೇಲೆ ಹಿಂದೀ ಅಧಿಕಾರಿಗಳ ಹುಕುಮತ್ತು ನಡೆಯಬಾರದು. ಹಿಂದುಸ್ಥಾನದ ರಕ್ಷಣೆಯ ಹೊರೆಯನ್ನು ಹಿಂದೀ ಸೈನ್ಯವೇ ಹೊರಬೇಕು ಇಂಗ್ರೇಜ ಸೈನ್ಯವು ಪರರಾಷ್ಟ್ರಗಳ ಸಂಬಂಧದಲ್ಲಿ ಮಾತ್ರ ಜವಾಬದಾರವಾಗಿರತಕ್ಕದ್ದು. ಆದರೆ ವೆಚ್ಚವನ್ನು ಹಿಂದುಸ್ಥಾನವೇ ಹೊರಬೇಕೆಂಬ ಅನುಚಿತ ವಿಚಾರವನ್ನು ಜಾಹೀರ ಮಾಡಿದ್ದಾರೆ. ನಿಜಾಮಸಾಹೇಬರು ತಮ್ಮ ರಾಜ್ಯದಲ್ಲಿರುವ ಇಂಗ್ರೇಜ ಸೈನ್ಯದ ವೆಚ್ಚ ಕೊಡಬೇಕು. ಆದರೆ ನಿಜಾಮರು ಹೇಳಿದಂತೆ ನಡೆಯಲಾರದೆಂದು ಹಿಂದಿನ ಕರಾರಿನಲ್ಲಿ ಮಾಡಿಕೊಂಡಂಥ ಒಡಂಬಡಿಕೆಯ ಮಾದರಿಯೇ ಸೈ. ಯಾವ ರೀತಿಯಿಂದ ನೋಡಿದರೂ ಈ ರಿಪೋರ್ಟು ಅತ್ಯಂತವಾಗಿ ನಿರಾಶಜನಕವಾಗಿದ್ದು, ಹಿಂದುಸ್ಥಾನದ ತುಂಬ ನಿಷೇಧವೇ ನಡೆದಿದೆ. ಭಾವೀ ಗವ್ಹರ್ನರರಾದ ಸರ ಚಿಮಣಲಾಲ ಸೆಟಲವಾಡರಂಥವರೂ ನಿರಾಶೆಯ ಉದ್ಗಾರ ತೆಗೆದಿದ್ದಾರೆ. ಪುಣೆಯಲ್ಲಿ ಪ್ರಚಂಡ ಮೆರವಣಿಗೆ ಹೊರಟು, ಜಾಹೀರ ನಿಷೇಧ ಮಾಡಲ್ಪಟ್ಟಿತು ಸಾಯಮನ್ನ ಕಮೀಶನಕ್ಕೆ ಬಹಿಷ್ಕಾರ ಹಾಕಿದಂತೆ ರಾವುಂಡ ಟೇಬಲಕ್ಕೂ ಬಹಿಷ್ಕಾರ ಹಾಕಬೇಕೆಂದು ಸೂಚನೆಗಳಾಗಲಾರಂಭಿಸಿವೆ ಹಿಂದುಸ್ಥಾನದ ವಾತಾವರಣವು ಇಷ್ಟು ಕ್ಷೋಭೆಗೊಂಡಿದ್ದರೂ, ಸಾಯಮನ್ನಸಾಹೇಬರ ಸಾರಾಂಶದ ರಿಪೋರ್ಟನ್ನು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣರೂಪವಾಗಿ ಕಲಿಸಬೇಕೆಂದು ಡೆಲಿ ಮೇಲ ಪತ್ರವು ವಿದ್ಯಾಖಾತೆಯ ಅಧಿಕಾರಿಗಳಿಗೆ ಒತ್ತಾಯದ ಸೂಚನೆ ಮಾಡಿರುತ್ತದೆ.

ರಾವುಂಡ ಟೇಬಲಕ್ಕೆ ಬಹಿಷ್ಕಾರದ ಪ್ರಾರಂಭ.

ಸಾಯಮನ್ನ ಕಮೀಶನದ ಎರಡನೆಯ ಭಾಗ ಹೊರಬೀಳುವ ಮುಂಚೆಯಾಗಿ ದುಂಡು ಮೇಜಿನ ಆಮಂತ್ರಣಗಳು ಹೊರಬೀಳಹತ್ತಿವೆ. ನಾಮದಾರ ಶ್ರೀನಿವಾಸ ಶಾಸ್ತ್ರೀ, ಎಮ್ ಎಮ್ ಜೋಶಿಯವರು ಮತ್ತು ಆನಿಬೆಝಾಂಟಮ್ಮನವರು ಇಂಗ್ಲಂಡದಲ್ಲಿದ್ದು, ಇವರ ಕೊರಳಿಗೆ ಅಲ್ಲಿಯೇ ಆಮಂತ್ರಣದ ಚೀಟಿಗಳನ್ನು ಕಟ್ಟಿದ್ದಾರೆ. ನಾಮದಾರ ಶಾಸ್ತ್ರೀಯವರಿಗಂತೂ ಈ ಕೆಲಸದಲ್ಲಿ ತಮಗೆ ನೆರವಾಗುವಂತೆ ಮಿ. ಬೆನ್ನಸಾಹೇಬರು ಮುಂದಾಗಿ ಸೂಚನೆ ಮಾಡಿದ್ದಾರೆ. ಆನಿಬೆಝಾಂಟಮ್ಮನವರು ಆಮಂತ್ರಣವನ್ನು ಸ್ವೀಕರಿಸುವಾಗ ಒಂದು ಕರಾರು ಹಾಕಿದರು. "ನೀವು ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯವನ್ನು ಕೂಡಲೆ ಕೊಡುತ್ತೇವೆಂದೂ, ಬಹು ಜನ ಸಮಾಜದ ಮತವನ್ನು ವ್ಯಕ್ತಪಡಿಸುವ ನೆಹರು ರಿಪೋರ್ಟನ್ನು ರಾವುಂಡ ಟೇಬಲಿನ ಮುಂದಿಡುತ್ತೇವೆಂದೂ ವಚನ ಕೊಟ್ಟರೆ- ತಾವು ಆಮಂತ್ರಣ ಅಂಗೀಕಾರ ಮಾಡತಕ್ಕವರೆಂದು ಕರಾರು ಇದ್ದು" ಅದಕ್ಕೆ ಮಿ. ಬೆನ್ನಸಾಹೇಬರು ಒಪ್ಪಿದ್ದಾರೆಂದು ಲಂಡನದಿಂದ ಸ್ಪೇಶಲ ತಾರು ಬಂದಿರುತ್ತದೆ ಹಿಂದುಸ್ಥಾನದಲ್ಲಿಯೂ ಕೆಲವರು ಗುಪ್ತವಾಗಿ ಮತ್ತೆ ಕೆಲವರು ಬಹಿರಂಗವಾಗಿ ವಿಲಾಯತಿಗೆ ಹೋಗುವ ಸನ್ನಾಹ ನಡಿಸಿದ್ದಾರೆ. ಬಂಗಾಲದ ಮುಸಲಮಾನರು ಸಭೆಮಾಡಿ, ತಮ್ಮ ಪಕ್ಷದಿಂದ ಇಬ್ಬರನ್ನು ಆರಿಸಿದ್ದಾರೆ. ಈಗಿನ ಪ್ರಕ್ಷುಬ್ಧವಾದ ವಾತಾವರಣ ನೋಡಲಾಗಿ ರಾವುಂಡಟೇಬಲಕ್ಕೆ ಹೋಗತಕ್ಕವರು ಉಡಿಯಲ್ಲಿ ಬೆಂಕಿ ಕಟ್ಟಿಕೊಂಡೇ ಹೋಗುವರೆಂದು ಸ್ಪಷ್ಟವಾಗುತ್ತದೆ. ಸಾಯಮನ್ನ ರಿಪೋರ್ಟನ್ನು ಓದಬೇಕೆಂದು ಸಹ ಭಗವತ್ಪ್ರೇರಣೆಯಾಗುವದಿಲ್ಲೆಂದು ಕಾಂಗ್ರೆಸ ಕಮೀಟಿಯವರು ಹೇಳುತ್ತಿದ್ದು, ಅದರ ನಿಷೇಧವು ಹಿಂದುಸ್ಥಾನದ ತುಂಬ ನಡೆದಿದೆ. ಕಾಂಗ್ರೆಸದ ಪ್ರತಿನಿಧಿಗಳನ್ನು ಬಿಟ್ಟು, ವಿಲಾಯತಿಗೆ ಹೋಗುವದೆಂದರೆ- ಮದುಮಗನನ್ನು ಬಿಟ್ಟು ಮದಿವೆಗೆ ಹೋಗುವಂತಾಗುತ್ತದೆ. ಮವಾಳರೂ, ಮುಸಲಮಾನರೂ ಬಹುವಾಗಿ ಆತುರಗೊಂಡಿದ್ದು, ಆ ಆತುರತೆಯು ತಮಗೆ ಅಪಕೀರ್ತಿ ತರುವಂಥಾದ್ದೇ ಆಗುವದೆಂದು ಇವರು ಮುಂದೆಯಾಗಿ ತಿಳಿಯತಕ್ಕದ್ದು.

ಸ್ವರಾಜ್ಯ ಸ್ವಾತಂತ್ರ್ಯಕ್ಕಾಗಿ ಓರ್ವ ಲೇಡಿಯ ಸತ್ಯಾಗ್ರಹ.

ಆಯರ್ಲಂಡದಿಂದ ಬ್ರಿಟನನೆಂಬೋರ್ವ ಸ್ತ್ರೀಯಳು ಲಂಡನಕ್ಕೆ ಬಂದು, ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ಕೊಡಬೇಕೆಂಬ ದೊಡ್ಡ ಗೊಂದಲವೆಬ್ಬಿಸಿದಳು. ಪೋಲಿಸರು ಇವಳನ್ನು ಹಿಡಿದೊಯ್ದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ನೀನು ಗುಂಗಾಟ ಮಾಡಬೇಡ ಒಳ್ಳೇ ನಡತೆಯ ಜಾಮೀನು ಕೊಡೆಂದು ಮ್ಯಾಜಿಸ್ಟ್ರೇಟರು ಇವಳಿಗೆ ಹೇಳಿದರು. ಆದರೆ ಈಕೆಯು ಬಂಟತನದಿಂದ ಐದು ನಿಮಿಷದ ಮಟ್ಟಿಗೆ ಸಹ ಜಾಮೀನು ಕೊಡುವದಿಲ್ಲೆಂದಳು. ಆಗ ಮ್ಯಾಜಿಸ್ಟ್ರೇಟರು ಇವಳನ್ನು ಪೋಲಿಸರ ಕಚ್ಚಾ ತುರಂಗಕ್ಕೆ ಕಳಿಸಿದರು. ನಾವು ಇಂಗ್ಲಿಷ ಜನರು ಆಯರ್ಲಂಡಕ್ಕಿಂತ ಹೆಚ್ಚಾಗಿ ಹಿಂದುಸ್ಥಾನವನ್ನು ಹಿಂಸಿಸುತ್ತೇವೆಂದು ಇವಳು ಸಾರುತ್ತಿದ್ದಾಳೆ.

ಉತ್ತರ ಕರ್ನಾಟಕ ಪ್ರಾಂತದ ವೀರಶೈವ ರಾಜಕೀಯ ಪರಿಷತ್ತು.

[illegible] ತಾಲೂಕ ಅಲಾರ,

—(೦)—

ತಾರೀಖು ೧೭-೬-೩೦ ರ ಮೊ. ಅಸಿಸ್ಟಂಟ [illegible] ಕಲೆಕ್ಟರರ, [illegible] ಒಂಗ್ಸದ ಜೈಲಿನಲ್ಲಿ ಇರುಯ ಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ ಅಪ್ಪಾಜಿ [illegible] ಪ್ಪನವರು ಮತ್ತು ಅವರ ಜೊತೆಯಲ್ಲಿ ಕೆಲ [illegible] ಸ್ವಯಂಸೇವಕರನ್ನು [illegible] ರಿಸಿಕೊಂಡು ಸವಿನಯವಾಗಿ ನೀವು [illegible] ನ್ನು ಕಡಿಯುತ್ತೀರಿ ಎಂದು ಕೇಳತ್ತೇನೆ [illegible] ದರಲ್ಲಿ ಕಲವು ಸರಕಾರೀ ಗಿಡಗಳನ್ನು ಕಡಿದಿರು[illegible] ರೆಂದು ನಮಗೆ ಗ್ರಾಮಸ್ಥರ ರಿಪೋರ್ಟು ಬಂದಿ[illegible] ನೀವು ಇನ್ನು ಮುಂದೆ ಸರಕಾರೀ ಗಿಡಗಳನ್ನು [illegible] ಡಿಯಬೇಡಿರಿ ಎಂದು ಸೂಚಿಸಿದರು. ಇವರು [illegible] ಕ್ಕೆ ಕಾಂಗ್ರೆಸಿನ ಅಪ್ಪಣೆ ಇಲ್ಲದ್ದರಿಂದ ಸರಕಾರಿ ಗಿಡಗಳಿಗೆ ಕೈಹಾಕಿಲ್ಲ ನಮಗೆ ನೀವು ಹೇಳುವಿಷಯವು ಗೊತ್ತಿಲ್ಲ ಎಂದು ಹೇಳಿ[illegible] [illegible] ಕ್ಕೀದು ಎಷ್ಟು [illegible] ಹೀಗೆ ಮಾಡಬೇಕಿದ[illegible] ದು ಪು[illegible] ಹೇಳಿ [illegible] ಇಲ್ಲಿಯವರೆಗೆ ಕರಿಕೊಂಡ. ತಮದಿ [illegible] ಕ್ಷಮೆ [illegible] ದು ವಿನಯಪೂರ್ವಕವಾಗಿ ಹೇಳಿ ಸಾಹೇಬರು ಹೊರಟು ಹೋದರು. ಅಂತು [illegible] ಪ್ಪನವರು [illegible] ಕೊಂಡ ನೆಂದಿ ಗಿಡಗಳ ಸ[illegible] ಕೆಲಸದಲ್ಲಿ [illegible] ರೆಗೂ ಯಶಸ್ಸು ಬಂದಿದೆ. ಈ ವರೆಗೂ ನೂರು [illegible] ನೆಂದಿ ಗಿಡಗಳ ಸಂಹಾರವಾಗಿದೆ.

ಕರ್ನಾಟಕ ಕುರುಬರ ಸಂಘ ಗದಗ

—(೦)—

ಈ ಸಂಘದಿಂದ ತಿಳಿಸುವದೇನಂದರೆ- ಮುಂಬಯಿ ಕರ್ನಾಟಕದೊಳಗಿನ ಇಂಗ್ರೇಜಿ ಕಲಿಯುತ್ತಿರುವ ಕುರುಬರ ಬಡ ವಿದ್ಯಾರ್ಥಿಗಳಿಗೆ ಅಂದರೆ ಸಾಧಾರಣ ೬ನೇ ಈಯತ್ತೆಯಿಂದ ಕಾಲೇಜದಲ್ಲಿ ಶಿಕ್ಷಣ ಹೊಂದುವ ವಿದ್ಯಾರ್ಥಿಗಳವರೆಗೆ ಈ ಸಂ[illegible] [illegible] (ಫಂಡನ್ನು) ನ್ನು ಕೊಡುವದಾಗ್ಗೆ ಬರುವದು. ಕಾರಣ ಫಂಡನ್ನು ಬಯಸುವ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಪೂರ್ಣ ಪತ್ರದೊಂದಿಗೆ ಸನ್ ೧೯೩೦ನೇ ಜುಲೈ [illegible] ೫ನೇ ತಾರೀಖಿನೊಳಗಾಗಿ ತಮ್ಮ ಪ್ರಿನ್ಸಿಪಾಲ, ಕ[illegible] ನ ಹಾಗು ಹೆಡ್ಮಾಸ್ತರರ ಶಿಫಾರಸಿನೊಡನೆ [illegible] ಕೆಳಗೆ ಸಹಿ ಮಾಡಿದವರ ಕಡೆಗೆ ಅರ್ಜಿ ಮಾಡಬೇಕು. ಇದರ ಸಂಗಡ ತಮ್ಮ ಗ್ರಾಮಸ್ಥರಿಂದ ಬಡವನಿದ್ದ ದಾಖಲೆ ಇರಬೇಕು.

ಗದಗ   ಬಿ ಎಫ್ ಕಣ್ಣೂರ

೧೧-೬-೧೯೩೦   ಜನರಲ್ ಸೆಕ್ರೆಟರಿ ಕರ್ನಾಟಕ ಕುರುಬ ಸಂಘ ಗದಗ

B. N. B 1443

ಸಾಪ್ತಾಹಿಕ **ವಿಜಯ** ಬೆಲೆ ೧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೨೧) ಧಾರವಾಡ ಮಂಗಳವಾರ ತಾರೀಖು ೨೪ ನೇ ಜೂನ ೧೯೩೦ (ಸಂಖ್ಯೆ ೨೩

ವಿಜಯ.

ಶಾಲಿವಾಹನ ಶಕ ವಿಕ್ರಮ ವರ್ಷ ೧೮೫೨ ಜ್ಯೇಷ್ಠ ವದ್ಯ ೧೩

ನಿಜವಾಗಿ ಇವನೇ ಗಂಡಸು!!

ಶ್ರೀ. ಕೇಳಕರರ ಪಾಪೋಶ್ಲೋಕ ಮತ್ತು ಗಂಡುಗಲಿಯಂಥ ಉತ್ತರ.

ಲಾರ್ಡ ಆಯರ್ವಿನಸಾಹೇಬರು ವರ್ತಮಾನ ಪತ್ರಗಳ ಮೇಲೆ ಜರಾಸಂಧನ ಗದೆ ಹಿಡಿದ ಬಗ್ಗೆ, ಅವರ ಕೂಡ ಮಾತಾಡಲು ಮದ್ರಾಸದ ಹಿಂದೂ ಪತ್ರದ ಸಂಪಾದಕರಾದ ಶ್ರೀ ರಂಗಸ್ವಾಮಿಯವರು ತಾಲ್ಪರದೊಂದು ಶಿಷ್ಟಮಂಡಳವನ್ನು ಸಿಮಲಾಕ್ಕೆ ಕರೆದೊಂಡು ಹೋಗಬೇಕೆಂದು ಆಲೋಚನೆ ಮಾಡಿ, ಇದರಲ್ಲಿ ಪುಣೆಯ ಶ್ರೀ ನರಸಿಂಹ ಚಿಂತಾಮಣಿ ಕೇಳಕರರನ್ನೂ ಸೇರಿಸಿದರು. ಶ್ರೀ ಕೇಳಕರರು ಬಾದಶಹರ ಪ್ರತ್ಯಕ್ಷ ಪ್ರತಿನಿಧಿಯ ಪ್ರತ್ಯಕ್ಷ ದರ್ಶನವಾಗಿ, ಅವರ ಕೂಡ ಮಾತಾಡುವ ಮತ್ತು ಶೇಕಹ್ಯಾಂಡ ಮಾಡುವ ಮಹಾ ಪರ್ವಣಿಯು ದೊರೆಯುತ್ತದೆಂದು ಹರ್ಷವಾಯುವಾಗಿ, ಸಿಮಲಾಕ್ಕೆ ಹೊರಡ ಉತ್ಸುಕರಾಗಲಿಲ್ಲ. ಡೆಪ್ಯುಟೇಶನದ ಉಳಿದ ಮೂವರೆಂದರೆ ಹಿಂದೂ, ಲೀಡರ ಮತ್ತು ಅಮೃತಬಜಾರ ಪತ್ರಗಳ ಪ್ರತಿನಿಧಿಗಳಿಗೂ ಬುದ್ಧಿ ಬರುವಂಥ ಜೋರ ಉತ್ತರ ಕೊಟ್ಟು, ಅವರನ್ನು ತಣ್ಣಗೆ ಮಾಡಿದ್ದಾರೆ. ವರ್ತಮಾನಪತ್ರಗಳ ದಬ್ಬಾಳಿಕೆಯಲ್ಲಿ ಕೇಸರೀ ಮತ್ತು ಮರಾಠಾ ಪತ್ರಗಳೆರಡೂ ಸಿಕ್ಕಿ ಆಗಿರುವ ರೂಪಾಯಿಗಳ ನಗದು ಜಾಮೀನು ಕೊಟ್ಟಿರುತ್ತವೆ. ಶ್ರೀ ಕೇಳಕರರು ಸೊಲ್ಲಾಪೂರದ ಲಷ್ಕರೀ ಕಾಯದೆಯ ಜುಲುಮೆ ಮತ್ತು ಹಿಂಸೆಯ ದಿನದಿಂದ ಒದೆದ ಲೇಖಗಳಿಗಾಗಿ ಲಾರ್ಡ ಆಯರ್ವಿನ ಸಾಹೇಬರ ದಬ್ಬಾಳಿಕೆಯ ಸುಲ್ತಾನೀ ಹುಕುಮು ಜಾಮೀನು ತಕ್ಕೊಂಡಿತು ಜಾಮೀನು ತಕ್ಕೊಂಡರೇನಾಯಿತು? ನನ್ನ ಬರಹವೇ ನಿಜವಿದ್ದು ಸರಕಾರದ ಸ್ವಪಕ್ಷಸಮರ್ಥನವು ಸುಳ್ಳಿರುತ್ತದೆಂದು ಇವರು ಹೇಳಿದ್ದಾರೆ. ಇಂಥ ಸುಳ್ಳು ಸರಕಾರದ ಮುಂದ ವರ್ತಮಾನ ಪತ್ರಗಳ ದಬ್ಬಾಳಿಕೆಯ ದೀನರಂತೆ ಬಾಯಿ ತೆಗೆದು ಬೇಡಿಕೊಳ್ಳುವದುಂಟೇ? ಎಂಬುದಾಗಿ ಶ್ರೀ ಕೇಳಕರರ ಸವಾಲು ಇದ್ದು, ಶಿಷ್ಟ ಮಂಡಳದ ಮುಖಂಡರಾದ ಶ್ರೀ ರಂಗಸ್ವಾಮಿಯವರು ಇದಕ್ಕೇನು ಉತ್ತರ ಕೊಡುವರು?

ಶ್ರೀ ರಂಗಸ್ವಾಮಿಯವರಿಗಿಂತ ಹೆಚ್ಚಿಗೆ ಮರ್ಮಭೇದಕವಾದ ಅಪಮಾನವನ್ನು ಲಾರ್ಡ ಆಯರ್ವಿನಸಾಹೇಬರಿಗೇ ಮಾಡಿದ್ದಾರೆ. ಲಾರ್ಡಸಾಹೇಬರು ಕಯ್ಯಲ್ಲಿ ದಬ್ಬಾಳಿಕೆಯ ದೊಣ್ಣೆ ನನ್ನು ಹಿಡಕೊಂಡು, ಅನೇಕರ ತಲೆಯೊಡೆಸುತ್ತಿದ್ದಾರೆ ಇಂಥವರನ್ನು ಕಂಡು, ಅವರಿಂದ ಸಕ್ಕರೆಗಿಂತ ಸವಿಯಾದ ಮಾತುಗಳನ್ನು ಕೇಳಿ, ಮಿಟಿ-ಮಿಟಿ ಸ್ವರ್ಗದಂಥ ಸಂತೋಷಪಟ್ಟು, ಅವರ ಕೈಹಿಡಿದು ಶೇಕಹ್ಯಾಂಡ ಮಾಡಬೇಕೇ ಎಂದು ಇವರನ್ನುವದು ಯಥಾರ್ಥವಾಗಿದ್ದು, ಈ ಮಾತು ಲಾರ್ಡರ ಹೊಟ್ಟೆಯಲ್ಲಿ ಹೊಕ್ಕು, ಬೆನ್ನೊಳಗೆ ಬರುವಂಥ ಧನುಷ್ಟಂಕಾರದಂತಿರುತ್ತದೆ. ಲಾರ್ಡ ಆಯರ್ವಿನರೇ ಅಲ್ಲ; ಇಂಗ್ಲಂಡದ ಪ್ರಧಾನರು ಕೂಡ ಈ ಬ್ರಹ್ಮಾಸ್ತ್ರ ಪ್ರಯೋಗದಿಂದ ಪಾರಾಗುವದು ಕಠಿಣವಾಗುವದು. ಅನೇಕ ಜನರು ಕಣ್ಣಿನಿಂದ ಹಿಂಸೆ ನೋಡುವರು. ಹಿಂಸೆಯು ಸಾಹೇಬರ ಪ್ರೇರಣೆ ಮತ್ತು ಹುಕುಮಿನಿಂದ ನಡೆಯುತ್ತಿರುವದನ್ನೂ ನೋಡುವರು. ಆದರೂ ಸಾಹೇಬರ ಹಸ್ತಸ್ಪರ್ಶವಾದರೆ ಜನ್ಮಸಾರ್ಥಕವಾಗುವದೆಂದು ಆನಂದಪಡುತ್ತಾರೆ. ಶ್ರೀ ಕೋಲಂಬಿಯವರು ಹೇಳುವಂತೆ ಇವರು ಗಂಡಸರೇ ಅಲ್ಲ ಗಂಡಸರಾದಂಥವರೇ ಈ ಚಳವಳಿಯಲ್ಲಿ ಮುಂದೆ ಬರುತ್ತಾರೆ. ಅವರಲ್ಲಿ ಶ್ರೀ. ಕೇಳಕರರೊಬ್ಬರಾಗಿದ್ದಾರೆಂದು ಸಂತೋಷದ ಸಂಗತಿಯು.

ನಾಮದಾರ ಗವ್ಹರ್ನರಸಾಹೇಬರು ಸೊಲ್ಲಾಪುರಕ್ಕೆ ಹೋಗಿ ಬಂದರು

ಪ್ರಜಾಪಾಲನ ದಕ್ಷ ಮತ್ತು ಮಾಬಾಪ ಸರಕಾರವೆನಿಸುವಂಥ ಇಂಗ್ರೇಜಿ ಅಮಲದಾರರ ಪ್ರಜಾರಕ್ಷಣೆಯ ಬಗೆಯೇ ಬೇರೆ ಇವರು ಪ್ರಜರ ದುಃಖಗಳನ್ನು ಕೇಳಿಕೊಳ್ಳುವದೊಂದು ಸಾಟಿದೊರೆಯದ ಘಾಸಿನಂತಾಗುತ್ತದ. ಅದ್ದರಿಂದಲೇ ಸರಕಾರ ವಿಷಯವಾಗಿ ಪ್ರಜರಲ್ಲಿ ಅಸಂತೋಷ ಹುಟ್ಟಿರುತ್ತದೆ ಕ್ರೌ.. ಮತ್ತು ಅಸೆಂಬ್ಲಿಗಳಲ್ಲಿ ಪ್ರಜಾಪ್ರತಿನಿಧಿ ... ಸರಕಾರ ... ಬಹುಮತ ಮಾಡಿಕೊಳ್ಳುತ್ತದೆ ಅಕಸ್ಮಾತ್ತವಾಗಿ ತನ್ನಂತೆ ಬಹುಮತವಾಗದಿದ್ದರೆ ಸರ್ಟಿಫಿಕೇಟಿನಿಂದ ತನ್ನ ಹಟವನ್ನೇ ಸಾಧಿಸುತ್ತದೆ. ಉಪ್ಪಿನ ಕಾಯದೆಭಂಗದ ಹೋಳಿ ಹಬ್ಬವಾಗಿ ಈ ಕಾಯದೆ ಭಂಗವೇ ಕಾರಣವಾಯಿತು.

ಇಂಗ್ರೇಜಿ ಸರಕಾರದ ಪದ್ಧತಿಯು ಒಂಟೆಯ ಮೇಲೆ ಕೂತು ಕುರೀ ಹಿಂಡು ಹೊಡಕೊಂಡು ಹೋಗುವಂತಿರುತ್ತದೆ. ಕಳಗಿನ ಅಮಲದಾರರಿಂದ ಗವ್ಹರ್ನರ ಜನರಲರ ತನಕ ಪ್ರಜರ ದುಃಖಗಳು ತಿಳಿಯುವದರೊಳಗಾಗಿ, ಪ್ರಜರ ಭೋಗವೆಲ್ಲ ತೀರಿ ಹೋಗುತ್ತದೆ ಆದರೂ ಮೇಲಧಿಕಾರಿಗಳಿಂದ ಸಮಾಧಾನದ ಎರಡು ಶಬ್ದಗಳು ಹೊರಡುವದು ದುಸ್ತರವಾಗುತ್ತದೆ. ಸೊಲ್ಲಾಪುರದ ವರ್ತಮಾನ ಪರಿಸ್ಥಿತಿಯು ಪ್ರತ್ಯಕ್ಷ ದೃಷ್ಟಾಂತವಾಗಿದೆ.

ಸೊಲ್ಲಾಪುರದಲ್ಲಿ ಭಯಂಕರವಾಗಿ ಗುಂಡ ಹಾರಿದವು ಪೋಲೀಸರು ಸುಡಿಸಿಕೊಂಡು ಸತ್ತರು. ಇದರ ವಿಹಿತಾವಿಹಿತವನ್ನು ಕೇಳುವವರಾರು? ಎಲ್ಲವನ್ನೂ ಸರಕಾರ ದೃಷ್ಟಿಯಿಂದಲೇ ನೋಡುತ್ತಾ ಒದಿದ್ದಾರೆ. ದಂಗೆಯು ವರ್ತಮಾನ ಕೇಳಿದ ಕೂಡಲೇ, ಸ್ವತಃ ಗವ್ಹರ್ನರ ಸಾಹೇಬರು ಸೊಲ್ಲಾಪುರಕ್ಕೆ ಹೋಗಿ ಪ್ರಜರನ್ನು ಶಾಂತಪಡಿಸಿ, ಅಧಿಕಾರಿಗಳ ಸ್ವೈರ ವೃತ್ತಿಗೆ ಬಿರಿ ಹಾಕಲುದ್ಯುಕ್ತರಾಗಿದ್ದರೆ ಆ ಊರು ಇಂದು ಹಾಳು ಸುರಿಯುತ್ತಲೇ ಇದ್ದಿಲ್ಲ. ನಾಗರಿಕರು ಗಾಬರಿಯಾಗಿ ... ವ್ಯಾಪಾರ ಉದ್ದಿಮೆಯು ಕಟ್ಟಾಗಿ ಜನರು ಅನ್ನಾನ್ನಗೇಡಿಯಾಗುತ್ತಿದ್ದಿಲ್ಲ. ಲಷ್ಕರೀ ಕಾಯದೆಯಿಂದ ಜನರ ಹಿತ ನೋಡುವದಕ್ಕಿಂತ ಅವರನ್ನು ಬೊಗ್ಗಿ ಒಡಿಯುವದನ್ನೇ ನೋಡಿದರೆಂದು ಯಾರಾದರೂ ಹೇಳಬಹುದು.

ಆ ಊರಲ್ಲಿ ಲಷ್ಕರೀ ಕಾಯದೆ ಪ್ರಾರಂಭವಾಗಿ ಒಂದೂ ವರೀ ತಿಂಗಳಯಿತು ಅಪರಾಧಿಗಳೆಂದು ಜನರನ್ನು ಹಿಡಿದು, ಗಲ್ಲು, ಕರೇ ನೀರು ಮತ್ತು ಉಳಿದ ಪ್ರಕಾರದ ಶಿಕ್ಷೆಗಳನ್ನು ವಿಧಿಸಿ, ತಿಂಗಳ ಮೇಲಾಯಿತು. ಆದರೂ ಊರಲ್ಲಿ ಲಷ್ಕರೀ ಕಾಯದೆಯ ಅಮಲು ಇರುವದು. ಸ್ವತಃ ಗವ್ಹರ್ನರಸಾಹೇಬರು ಹೋಗಿ ಬಂದರೂ, ಈ ಅಮಲು ತೀರುವ ಲಕ್ಷಣವ ಇಲ್ಲವೇ ಇಲ್ಲ. ಸಾಹೇಬರು ತಮ್ಮ ಕೈಕೆಳಗಿನವರ ಕಣ್ಣಿನಿಂದಲೇ ನೋಡಿದ್ದರಿಂದ ಅವರಿಗೆ ಈ ಅಮಲನ್ನು ಎಬ್ಬಿಸುವ ಬುದ್ಧಿ ಹುಟ್ಟಲೇ ಇಲ್ಲ. ಸಾಹೇಬರು ಊರೊಳಗಿನ ಪ್ರತಿಷ್ಠಿತರನ್ನು ಕರಸಿ, ಅವರ ಕೂಡ ಮಾತಾಡಿದ್ದೇನೋ ನಿಜ. ಅದು ಮೃದು ಮಂದಹಾಸ್ಯಕ್ಕಿಂತ ಹೆಚ್ಚಿನ ಪರಿಣಾಮವನ್ನೇನೂ ಉಂಟು ಮಾಡಲಿಲ್ಲ.

ದಬ್ಬಾಳಿಕೆಯು ಕಾಲದಲ್ಲಿ ಇದೇ ಪ್ರಕಾರವಾಗಿ ನಡೆಯಿರೆಂದು ಅಳರಸರಿಗೆ ಬೇಡಿಕೊಳ್ಳುವದೇ ತಪ್ಪು! ಅವರು ತಮ್ಮ ಹಿಡಿತ ಬಿಡರು. ಪೋಲೀಸರ ಲಾರೀ ರಾಜ್ಯವ ಒಪ್ಪಿಟ್ಟುಕೊಳ್ಳುವಾಗ ಪೋಲೀಸರನ್ನು ಕೊಂದದ್ದರಿಂದ ಜಾಹೀರ ಮಾಡಿದ ಲಷ್ಕರೀ ಹುಕುಮವನ್ನು ರಹಿತಪಡಿಸುವರೇ? ಯುದ್ಧದಲ್ಲಿ ಇಂಥ ಅನೇಕ ಅನಾಹುತಗಳಾಗುವವು. ಅವೆಲ್ಲಕ್ಕೂ ದೇಶಗಳೂ ಪ್ರಜರೂ ಸಿದ್ಧವಾಗಿರಲೇ ಬೇಕು. ಇವಕ್ಕೆ ಧೈರ್ಯದಿಂದ ತಲೆಗೊಟ್ಟಷ್ಟು ಸ್ವರಾಜ್ಯ ಸ್ವಾತಂತ್ರ್ಯದ ಸುದಿನಗಳು ಸನಿಯವಾಗುವವು.

ರಾಣಿಬೆನ್ನೂರ ಕಂಬಳಿಯವರು ಪೇಚಿನಲ್ಲಿ ಬಿದ್ದಿದ್ದಾರೆ.

ಇತ್ತ ಬಿದ್ದರೆ ಭಾವಿ, ಅತ್ತ ಸರಿದರೆ ಕೆರೆ,
ಧ್ವಜ ಏರಿಸದಿದ್ದರೆ ಜನರ ಕೋಪ, ಏರಿಸಿದರೆ
ತಮ್ಮ ಮನಸ್ಸಿಗೆ ತಾಪ.
ರಾ|| ಬ|| ಕಂಬಳಿಯವರು ಕಲೆಕ್ಟರ ಕಡೆಗೆ ಯಾಕೆ
ಹೋಗಿದ್ದರು!

ರಾ|| ಬ|| ಕಂಬಳಿಯವರು ದೊಡ್ಡ ಮುಖಂಡರೆಂದೂ; ಧಾರವಾಡ ಜಿಲ್ಹೆಯಲ್ಲಿ ಹಿರಿಯರೆಂದೂ ಹೇಳಿಕೊಳ್ಳುವರು. ಇಂಥ ಹಿರಿಯರು ಈಗ ಒಳ್ಳೇ ಪೇಚಿನಲ್ಲಿ ಬಿದ್ದಿದ್ದಾರೆ. ಹುಬ್ಬಳ್ಳಿ, ಊರತುಂಬ ಜನರು ರಾಷ್ಟ್ರಧ್ವಜವನ್ನು ಮ್ಯುನಿಸಿಪಾಲಿಟಿ ಮೇಲೆ ಏರಿಸಿರೆಂದು, ಈಗೆರಡು ತಿಂಗಳಿಂದ ದುಂಬಾಲ ಬಿದ್ದಿದ್ದಾರೆ. ಆದರೆ ರಾ|| ಬ|| ಕಂಬಳಿಯವರಿಗೆ ಧ್ವಜ ಬೇಕಾಗಿಲ್ಲ. ಅದಕ್ಕೆ ಇಂದು ಒಂದು ನೆವ ಹೇಳಿದರೆ ನಾಳೆ ಮತ್ತೊಂದು ನೆವ ಮುಂದೆ ಮಾಡುತ್ತಾರೆ ಪಾಪ! ಇವರೇನು ಮಾಡ್ಯಾರು! ಇತ್ತ ಬಿದ್ದರೆ ಭಾವಿ, ಅತ್ತ ಸರಿದರೆ ಕೆರೆ ಎಂಬಂತಾಗಿದೆ. ಧ್ವಜ ಏರಿಸದಿದ್ದರೆ, ಜನರು ಸುಮ್ಮನೆ ಒಡುವದಿಲ್ಲ. ಏರಿಸಿದರೆ ಮುಂದೆ ಮಂತ್ರಿಪದ ಸಿಗುವದಿದ್ದರೆ, ಪಕ್ಕನೆ ಹಾರೀತಲ್ಲಾ ಎಂಬ ತಾಪ!! ಈ ಇಕ್ಕಟ್ಟಿನಲ್ಲಿ ಸಿಕ್ಕ ರಾ|| ಬ|| ರವರಿಗೆ ಸಾಕು ಬೇಕಾಗಿದೆ ಮಾಡುವದೇನ! ಅದೇ ಅಲ್ಲ. ತಮ್ಮ ಚಹುಂದರೆ ಮುಂದ ಬಿಡುವದು. ಬ್ರಾಹ್ಮಣರಿದ್ದರೆ ಜಾತಿ ದ್ವೇಷ; ತಮ್ಮವರಿದ್ದರೆ ವ್ಯಕ್ತಿ ದ್ವೇಷ. ಹೀಗಾಗಿ ತಮಗೆ ಬೇಡಾದವರ ಮೇಲೆ ಅಲ್ಲದ ಸಲ್ಲದ ಆರೋಪಗಳನ್ನು ಹೊರಿಸುತ್ತಾ, ಸಂದಿಯೊಳಗೆ ಸಮರ ನಡೆಸಿದ್ದಾರೆ ಈ ಸಂಕಟದಿಂದ ಪಾರ ಮಾಡಿರಿ ಮಾರಾಯಾ ಎಂದು ಕಲೆಕ್ಟರ ಕಡೆಗೆ ಹೋಗಿದ್ದರಂತೆ. ಆಸತ್ತು ಬೇಸತ್ತು, ಅಕ್ಕನ ಮನೆಗೆ ಹೋದರೆ, ಅಕ್ಕನ ಗಂಡ ಅವ್ವ ಅಂದನಂತೆ ಕಲೆಕ್ಟರಸಾಹೇಬರು. ನೀವ್ಯಾಕೆ ಗಾಬರಿಯಾಗೀರಿ ಧ್ವಜ ಏರಿಸಿದರೇನಾದೀತು! ಇಲ್ಲದ ಗದ್ದಲ ಮಾಡಬೇಡಿರಿ ಸುಮ್ಮನೆ ಕೂಡಿರಿ ಎಂದು ಹೇಳಿದರಂತೆ

ಈಗ ರಾ|| ಬ|| ಕಂಬಳಿಯವರ ಪೇಚಾಟ ದೇವರೇ ಬಲ್ಲ. ಇದೆಲ್ಲ ಒಮ್ಮೆ ಎದಿಗೆಟ್ಟಿ ಮಾಡಿಕೊಂಡು, ರಾಷ್ಟ್ರಧ್ವಜ ಏರಿಸಿದರೆ, ಜನರಿಗೆ ಸಮಾಧಾನವಾಗುವದು. ತಮಗೂ ಕೀರ್ತಿ ಬರುವದು. ಇನ್ನಾದರೂ ಕಂಬಳಿಯವರು ಕಣ್ಣು ತೆರೆಯುವರೋ?

ಒಬ್ಬ ಹಿತಚಿಂತಕ.

ಸತ್ಯಾಗ್ರಹದ ಚಳವಳಿಯನ್ನೆಬ್ಬಿಸಿದರೆ ಅಂದರೆ ಅದನ್ನು ನಿಲ್ಲಿಸಿದರೆ ರಾಮುಂಡ ಟೇಬಲದ ದಾರಿಯು ಸುಸೂತ್ರವಾಗುವದೆಂದು ಸಿಮಲಾದ ಅಧಿಕಾರಿಗಳು ಭಾಷಣಮಾಡಹತ್ತಿದ್ದಾರೆ ಸ್ವರಾಜ್ಯ ಸ್ವಾತಂತ್ರ್ಯ ಕೊಡುತ್ತೇವೆಂದರೇ ಕಾಂಗ್ರೆಸದವರು ಚಳವಳಿ ನಿಲ್ಲಿಸುವರು.

ಸಿಂಧೂರ ಲಕ್ಷ್ಮಣನಿಗಿಂತ ಪುಂಡ ದರೋಡೆಗಾರನು.

ವನಗಾವಲದ ರಾಜನು ಗಾಂಧೀ ಭಕ್ತನು ಮಾರವಾಡಿಗಳ ವೈರಿಯು.

ನಾಸಿಕ ಜಿಲ್ಹೆಯಲ್ಲಿ ನಾನಾ ಮುಕದ್ದಮೆ ಫರ್ಫ ನಾನಾ ಫರಾರೀ ಎಂಬೋರ್ವ ಪುಂಡನು ಪ್ರಬಲನಾಗಿದ್ದಾನೆ ಈತನು ಗಾಂಧೀ ತತ್ವ ಸ್ವೀಕಾರ ಮಾಡಿ, ಗಾಂಧೀ ಟೊಪ್ಪಿಗೆ ಹಾಕುವನು. ಮುಖಂಡರು ತನ್ನನ್ನು ವನಗಾವಲದ ರಾಜನಾಗಿ ನೇಮಿಸಿದ್ದಾರೆಂದು ಹೇಳುವನು. ವಿನಹಕಾರಣ ಜನರಿಗೆ ತೊಂದರೆ ಕೊಡುವದಿಲ್ಲ ಮಾರವಾಡಿಗಳ ಮೇಲೆ ಮಾತ್ರ ಬಹಳ ಸಿಟ್ಟು. ಇವರು ತನ್ನ ಕೋಳಿ ಜಾತಿಯ ಜನರನ್ನು ಬಹಳವಾಗಿ ಪೀಡಿಸುವದನ್ನು ಸಹನ ಮಾಡದೆ, ಇವರ ಸಮಾಚಾರ ತಕ್ಕೊಳ್ಳುವನು ಹಗಲು ರಾತ್ರಿ ಎಂಬ ಭೇದ ಮಾಡದೆ ಅಡವೆಯಿಂದ ಊರೊಳಗೆ ಬರುವನು. ಇಗತಪುರಿಯಲ್ಲಿ ಒಬ್ಬ ಮಾರವಾಡಿಯ ಮನೆಯಲ್ಲಿ ಮದುವೆ ನಡೆದಿತ್ತು. ಅನೇಕ ಜನರು ಕೂಡಿದಾಗ ಈತನು ಆ ಮನೆಯಲ್ಲಿ ಹೊಕ್ಕು, ದರೋಡೆ ಹಾಕಿ ವಸ್ತ ಒಡವೆ ತಕ್ಕೊಂಡು, ಖಾತೆ-ಕೀರ್ದಿ ಮುಂತಾದ ಲೆಕ್ಕಪತ್ರದ ಪುಸ್ತಕಗಳನ್ನು ಸುಟ್ಟು, ಇಬ್ಬರು ನೌಕರರ ಮೂಗು ಕೊಯ್ದು, ನಿರ್ಭಯದಿಂದ ತನ್ನ ದಾರೀ ಹಿಡಿದನು. ತಾನು ವನರಾಜನೆಂದು ಹೇಳಿಕೊಳ್ಳುತ್ತಿದ್ದದರಿಂದ ಆತನಿಗೆ ಖಾತೆಯವರನ್ನು ಕಂಡರೆ ಸಿಟ್ಟು ಬಹಳ. ಒಬ್ಬ ಅಮಲದಾರನು ತನ್ನ ದೃಷ್ಟಿಗೆ ಬಿದ್ದ ಕೂಡಲೆ, ಆತನಿಗೆ ರಿವಾಲ್ವರ, ಬಂದೂಕ, ಕತ್ತಿ ಬರ್ಚಿ ಮುಂತಾದ ಭಯೋತ್ಪಾದಕವಾದ ಅನೇಕ ಆಯುಧಗಳನ್ನು ತೋರಿಸಿ, ಆತನ ವೈರಿವೆ. ಲಿನ ವನಗಾವಲ ಖಾತೆಯ ಎಲ್ಲ ಅರಿವೆ ವಸ್ತು ಬೂಟು ತಕ್ಕೊಂಡು ತನ್ನ ಹಳೇ ಬೂಟು ಕೊಟ್ಟು, ಅವನನ್ನು ಹಿಂದಿರುಗಿ ಕಳಿಸಿದನು. ಒಮ್ಮೆ ಈತನನ್ನು ಪೋಲೀಸರು ಹಿಡಿದು ಹೋದರು. ತನ್ನ ಗುಂಡಿನ ಆಟೋಪಿನಲ್ಲಿ ಒಬ್ಬ ಸಿಪಾಯಿ ಬಂದ ಕೂಡಲೆ ಈತನನ್ನು ಗುಂಡಿನಿಂದ ನಿಗಚಿ, ದಟ್ಟವಾದ ಹುಲ್ಲಿನಲ್ಲಿ ಸೇರಿಕೊಂಡು ಮಾಯವಾದನು. ಇದೇ ಪ್ರಕಾರ ಇವನ ಪುಂಡಾಟಿಕೆಯ ಹಲವು ಸಂಗತಿಗಳನ್ನು ಹೇಳುವರು ಪೋಲೀಸರು ಈತನನ್ನು ಹುಡುಕಲು ಈಗ ಹೊರಟಿದ್ದು, ಹಿಡಿದು ಕೊಟ್ಟವರಿಗೆ ಐನೂರು ರೂಪಾಯಿ ಇನಾಮು ಕೊಡುತ್ತೇವೆಂದು ಜಾಹೀರನಾಮೆ ಹಚ್ಚಿದ್ದಾರೆ.

ಭಿಕ್ಷಾಧಿಪತಿಯು ಲಕ್ಷಾಧಿಪತಿಯೇ?

ಇಲ್ಲಿಯ ಪ್ರಸಿದ್ಧ ಪುರಾಣಿಕರಾದ ಮತ್ತು ರಾಷ್ಟ್ರಪುರೋಹಿತನೆಂಬ ಬಿರುದಾಂಕಿತರಾದ ಶ್ರೀ ಆಗಳಗಟ್ಟಿಯ ಮುಚ್ಚಾಚಾರ್ಯರವರು ಕಾಂಗ್ರೆಸದ ಸ್ವಯಂಸೇವಕರ ಭೋಜನದ ಸಹಾಯವೆಂದು ದಿನಾಲು ಸ್ವಾತ್ರಕಾಲದಲ್ಲ ಎರಡು ತಾಸು ಊರೊಳಗೆ ಶುಕ್ಲವೃತ್ತಿಗೆ ಹೋಗುವರು. ಎರಡೇ ತಾಸುಗಳಲ್ಲಿ ಎರಡು ನೂರು ರೂಪಾಯಿಯಷ್ಟು ಅಕ್ಕಿ ರೊಕ್ಕ ಬರುವದು. ಅಂದರೆ ತಿಂಗಳಿಗೆ ನೂರರ ತನಕ ಸಹಾಯವಾಗುವದು. ತೆರೆತೆರೆ ಕೂಡಿದರೆ ರಾಶಿ ಎಂದಂತಾಗುತ್ತದೆ. ಈ ಸಹಾಯವು ಸಾಮಾನ್ಯವಲ್ಲ; ಯಾರಿಗೂ ಭಾರವಾಗುವದಲ್ಲ; ಹೆಚ್ಚು ಮುಷ್ಟಿಯಿಂದಲೇ ಈ ದೇಶಕಾರ್ಯವಾಗುತ್ತಿರುವದು ಭಿಕ್ಷಾಧಿಪತಿಯು ಹೇಗೆ ಲಕ್ಷಾಧಿಪತಿಯಂತೆ ದಾನ ಮಾಡಬಹುದೆಂಬುದು ಆಚಾರ್ಯರ ಪ್ರತ್ಯಕ್ಷ ಕೃತಿಯಿಂದ ಸ್ಪಷ್ಟವಾಗುತ್ತದೆ. ಬೇರೆ ಊರುಗಳ ಆಚಾರ್ಯ, ಭಟ್ಟ ಮತ್ತು ಅಯ್ಯನವರು ಶ್ರೀ ಮುಚ್ಚಾಚಾರ್ಯರ ಅನುಕರಣ ಮಾಡಿ, ದೇಶಕಾರ್ಯದಲ್ಲಿ ಕರ್ತಾಂಶರೆಂದೆನಿಸಿಕೊಳ್ಳುವರೆಂದು ಅತಿಶ ತ್ರೇಷೆ

ಪುಣೆ ಮತ್ತು ನಾಸಿಕದಲ್ಲಿ ಶಿಂದಿಯ ಗುತ್ತಿಯು ಲಿಲಾವಾಯಿತು.

ಇಂದೇ ಧಾರವಾಡ ಜಿಲ್ಲೆಯ ಪರೀಕ್ಷೆಯು.

"ಹೋದ-ಸೋಮವಾರ ೧೬ ನೆಯ ತಾರೀಖು ದಿವಸ ಪುಣೆ ಮತ್ತು ನಾಸಿಕದಲ್ಲಿ ಶಿಂದಿಯ ಗುತ್ತಿಗಳ ಜಾಹೀರ ಲಿಲಾವಾಯಿತು. ಪುಣೆ ಜಿಲ್ಲೆಯಲ್ಲಿ ಹೋದ ವರ್ಷ ಈ ಸವಾಲು ೫ ಲಕ್ಷ ೩೭ ಸಾವಿರ ರೂಪಾಯಕ್ಕಾಗಿತ್ತು. ಈ ವರ್ಷ ಅದು ಕೇಳಲಿಕ್ಕೆ ಕೂಡ ಬಂದಷ್ಟು ದರಿದ್ರತನದಿಂದಾಯಿತು. ನಾಲ್ಕೇ ಅಂಗಡಿಗಳ ಸವಾಲಾಯಿತು. ಇಕ್ಕೆ ಬಂದ-ಹಣವು.

ತಿಳಿಸಿ ರೂಪಾಯಿ!!!

ಯಿತು. ಸವಾಲಿನ ಮುನ್ನಿನ ದಿವಸ ಪುಣೆ ಮ್ಯುನಿಸಿಪಾಲಿಟಿ ಹಾಗು ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿರುವ ಶ್ರೀ ತುಳಶೀಬಾಗವಾಲೆಯವರು ಒಂದು ಜಾಹೀರ ಪತ್ರಿಕೆ ತೆಗೆದು ಯಾರೂ ಸವಾಲು ಮಾಡಬಾರದೆಂದು ವಿನಂತಿ ಮಾಡಿಕೊಂಡಿದ್ದರು. ಹಿಂದೂ ಜನರಾರೂ ಸವಾಲು ಮಾಡಲಿಲ್ಲ. ಪಾರ್ಸಿ ಯೇ ಮುಂದಾಗಿದ್ದರು. ಅವರೂ ಅವರಿಗೆ ಹೆದರುತ್ತಿದ್ದೇ ಇತ್ತು. ಅದ್ದರಿಂದ ಸವಾಲು ನಡೆದ ಸ್ಥಳದಲ್ಲಿ ಆರೀ ಹಿಡಿದ ಪೋಲೀಸರ ಬಂದೋಬಸ್ತು ಇಟ್ಟಿದ್ದರು. ಸವಾಲಿಗೆ ಹೋದವರೇನಾಯಿತು? "ಗುತ್ತಿದಾರರಾದ ನಮ್ಮನ್ನು ಜನರು ಅಣಗಿಸುತ್ತಾರೆ. ಹುಯಿಲ ಮಾಡುತ್ತಾರೆ. ಹೀಹೀ ಅನ್ನುತ್ತಾರೆ. ಅಣಗಿಸುತ್ತಾರೆ. ಹೊಡತ ಬೀಳುವ ಹೆದರಿಕೆಯೂ ಉಂಟು ಪಿಕೆಟಿಂಗ ಮಾತ್ರವೇ ಅಲ್ಲ; ಜನರು ಸ್ವೇಚ್ಛೆಯಿಂದ ಕುಡಿಯುವದನ್ನು ಬಿಟ್ಟಿದ್ದಾರೆ. ಅದ್ದರಿಂದ ಲಿಲಾವು ಹಾಡುವದರಲ್ಲಿ ಅರ್ಥವಿಲ್ಲ."

ಎಂದು ಗುತ್ತಿದಾರರು ಹೇಳಿದರು.

ಇದು ಪುಣೆಯ ಹಾಡಾಯಿತು. ನಾಸಿಕದಲ್ಲಿ ಗುತ್ತೇದಾರರು ಸ್ವಯಂಸೇವಕರ ಪಿಕೆಟಿಂಗಕ್ಕೆ ಭಯಗ್ರಸ್ತರಾದುದಲ್ಲದೆ, ಅವರಿಂದ ಥೀ, ಥೀ ಅನಿಸಿಕೊಳ್ಳಬಾರದೆಂದು, ಸವಾಲಿಗೆ ಬರದೆ, ಸವಾಲಿನಿಂದ ಅರ್ಜಿ ಕಳಿಸಿದ್ದರು ಹಾಗೂ ಹೀಗೂ ಆಗಿ ನೂರಕ್ಕೆ ೩೫ ರಂತೆ ಸವಾಲಾದವು. ಈ ಸಾರೆಕ್ಕೆ ಬಂದ ರಕಮು ಹಿಂದಿನ ಸವಾಲಿನ ದೃಷ್ಟಿಯಿಂದ

ದೊಡ್ಡ ಬಾಡಿಗಾರರಿಗೇ ಆಯಿತು ಇದರಂತೆ ಬೆಳಗಾವಿಯ ಧಮಕಿ

ಯಾಯಿತು. ನೂರರಲ್ಲಿ ೩೫ ಜನರು ಗುತ್ತಿದಾರರು ಸವಾಲಿಗೆ ಬರಲಿಲ್ಲ. ಪ್ರತಿ ವರ್ಷದ ಮೊತ್ತೆಯು ಲೆಕ್ಕದಿಂದ ರೂಪಾಯಕ್ಕೆ ನಾಲ್ಕಾಣೆಯಷ್ಟು ಸಹ ಬಂದಾಯವಾಗಲಿಲ್ಲ. ಅದ್ದರಿಂದ ಧಾರವಾಡದಲ್ಲಿ ನಾಳೆಯಾಗುವ ಸವಾಲಿನಲ್ಲಿ ಅಂಗಡಿ ಹಿಡಿಯಬೇಕೆನ್ನುವಂಥವರು ಲಾಭನಷ್ಟದ ವಿಚಾರ ಮಾಡಿಯೇ ಸವಾಲು ಮಾಡಬೇಕೆಂದು ಅಗತ್ಯವಾಗಿ ಸೂಚಿಸುತ್ತೇವೆ

ಮಾಡಿದವನು ಉಣ್ಣುವನು ಮಣಿಯಂಥ ಕಡಬು

ಕಳೆದ ನಾಲ್ಕು ತಿಂಗಳಲ್ಲಿ ವಿಲಾಯತಿಯ ಹಿಂದುಸ್ತಾನದ ವ್ಯಾಪಾರವು ಅರ್ಧದಷ್ಟು ಕಡಿಮೆಯಾಗಿದೆ. ಇಂಗ್ಲಂಡದ ವ್ಯಾಪಾರಿಗಳು ಬೇಡೆಂದರೂ ಹಿಂದಿನ ಕರಾರವೆಂದು ಆಲತ್ತಿಗೆ ಸನಗು ಕಳಿಸಿದರು. ಅವುಗಳ ಗಂಟುಗಳನ್ನು ಪೋಲಿಸರ ಬಂದೋಬಸ್ತಿನಿಂದ ಅಂಗಡಿಗಳಿಗೆ ಕಳಿಸುವದೂ ಸಹ ಶಕ್ಯವಾಗಿಲ್ಲ. ಪೋಲೀಸ ಬಂದೋಬಸ್ತಿನಲ್ಲಿ ಕಳಿಸಬೇಕಾಗುತ್ತಿದ್ದು, ದಾರಿಗುಂಟ ಹರತಾಳವಾಗುತ್ತದೆ. ಕಲಕತ್ತೆಯಂತೆ ಮದ್ರಾಸದ ಜನರು ಜೋಡಲು ಖಾದೀ ಕೊಳ್ಳುವರು. ಇದು ದೊರೆಯದಿದ್ದರೆ- ಸ್ವದೇಶೀ ಗಿರಣಿಗಳ ಬಟ್ಟೆ ಕೊಳ್ಳುವರು. ವಿಲಾಯತಿಯ ಅರಿವೆಗೆ ಕೈ ಹಚ್ಚುವದಿಲ್ಲ. ಮುಂಬಯಿಯಲ್ಲಂತೂ ಪಿಕೆಟಿಂಗದ ಸಪ್ಪಳ ಗದ್ದಲವೆದ್ದು ಹಿಡಿ ಹೊಡೆಯುವರೇ ದೊಡ್ಡ ದೊಡ್ಡ ಯುರೋಪಿಯನ್ನ ಅಂಗಡಿಗಳ ಮುಂದಿನ ವ್ಯವಹಾರವಾಗಿರುತ್ತದೆ. ಸರಕಾರದವರು ದಬ್ಬಾಳಿಕೆಯನ್ನು ಹೆಚ್ಚು ಮಾಡಿದಂತೆ, ಅವರ ಜನಾಂಗದವರೆ ವ್ಯಾಪಾರಕ್ಕೆ ಕಡಕರೂಗುತ್ತಿರುವದು. ಮಾಡಿದವನು ಉಣ್ಣುವನು ಮಣಿಯಂಥ ಕಡಬು.

ಅನೆಂಬ್ಲಿಯೊಳಗು ಒಂದು ಫಾರ್ಮ ಆಗಿರುತ್ತದೆಂದು ಹೇಳಿ, ಪಂಡಿತ ವಿದ್ಯಾಸಾಗರ ಪಾಂಡೆ (ಮದ್ರಾಸ) ಯವರು ಅದಕ್ಕೆ ರಾಜೀನಾಮೆ ಕೊಟ್ಟರು.

ಶಿಂದಿ ಸವಾಲಿನ ಪಿಕೆಟಿಂಗಕ್ಕೆ ಮೊದಲನೆಯ ಜಯ.

ಸವಾಲು ೧೫ ದಿವಸ ಮುಂದೆ ಬಿತ್ತು.

ಧಾರವಾಡದಲ್ಲಾದ ಶಿಂದಿಯ ಲಿಲಾವಿನ ನೋಟ.!

ನಿನ್ನಿನ ದಿವಸ ಈ ಊರಲ್ಲಿ ದರಬಾರ ಹಾಲಿನಲ್ಲಿ ವಾರ್ಷಿಕ ಪದ್ಧತಿಯ ಪ್ರಕಾರ ಶಿಂದೀ ಅಂಗಡಿಗಳ ಲಿಲಾವು ನಡೆಯಿತು ಪ್ರತಿವರ್ಷ ಲಿಲಾವಿಗಾಗಿ ಬರತಕ್ಕ ಗುತ್ತೇದಾರರು ನಿಬ್ಬಣಕ್ಕೆ ಹೋಗುವಂತೆ ಹೊಸ ಅರಿವೆ ಹಾಕಿಕೊಂಡು ಸಂಭ್ರಮದಿಂದ ಬರುವರು ಆ ಸಂಭ್ರಮ ಸಡಗರ ಈ ಸಾರೆ ಇರಲಿಲ್ಲ. ಲಿಲಾವಿಗೆ ಹೋಗತಕ್ಕವರು ೫೦ ರೂಪಾಯಿ ಮುಂಗಡ ಕಾರಣವಿಟ್ಟು, ಪಾಸು ಪಡಕೊಂಡು ಹಾಲಿನಲ್ಲಿ ಹೋಗತಕ್ಕದ್ದು. ಆದರದೊಂದು ದೊಡ್ಡ ಗೊಂದಲವೇ ಏಳುತ್ತಿತ್ತು. ಅಂಥ ಗೊಂದಲ, ಗದಬಿ ಈ ಸಾರೆ ಕಾಣಲಿಲ್ಲ. ಜನರು ಸದ್ದಿಲ್ಲದೆ ಪಾಸುಗಳನ್ನು ಪಡಕೊಂಡರು. ಅವರ ಸಂಖ್ಯೆಯು ತಿಳಿಯಲಿಕ್ಕೆ ಮಾರ್ಗವಿಲ್ಲ. ಪರವಿಟ್ಟು ಪಡಕೊಂಡು ದರಬಾರ ಹಾಲಿಗೆ ಹೋಗುವದೂ, ಹೊರಗೆ ನಿಂತು, ಯಾವ ಅಂಗಡಿಯ ಸವಾಲು ಎಷ್ಟಕ್ಕಾಯಿತೆಂದು ಅವರೊಂದು ಬಳಗದವರು ಹೊರಗೆ ನಿಂತು ಕೇಳುವದೂ ಪ್ರತಿವರ್ಷದ ವಾಡಿಕೆಯು. ಈಗಿನಗಿಂತ ಹೊರಗಿನ ಜಾತ್ರೆಯೇ ದೊಡ್ಡದಾಗಿತ್ತು. ಆ ಜಾತ್ರೆಯು ಈ ಲಕವನ್ನು ಪೋಲೀಸರೂ, ಯಾತ್ರೆಯು ಕೇಳಸವನ್ನ ಕಾಂಗ್ರೆಸದ ಸ್ವಯಂಸೇವಕರೂ ನಿರ್ಮಿಸಿದ್ದರು ಸಾವಿರ ಮಾನದ ಪೆಟ್ಟಿಯನ್ನು ಹೊರಲಿಕ್ಕೆ ಬಂದಿರುವ ಗುತ್ತೇದಾರರಿಗೆ ಸ್ವಯಂಸೇವಕರಿಂದ ಯಾವ ಪ್ರಕಾರದ ತೊಂದರೆಯಾಗಬಾರದೆಂದು ಪೋಲೀಸರಲ್ಲಿ ಎರಡು ಡಜನಕ್ಕಿಂತ ಹೆಚ್ಚು ಜನರು ಬಂದೂಕಿನವರಿದ್ದರು. ಮತ್ತು ನಾಲ್ವತ್ತು ಐವತ್ತು ಜನರು ಲಾಠೀ ಹಿಡಕೊಂಡು ಹಾಲಿನ ಹಿಂಭಾಗ ಮುಂಭಾಗದಲ್ಲಿ ಕಾವಲಾಗಿದ್ದರು. ಇದಕ್ಕೆ ತೀರ ವಿರುದ್ಧವಾಗಿ ಸ್ವಯಂಸೇವಕರಾಗಿದ್ದರು (೩೫ ನ ಸ್ತ್ರೀಯರೂ ೮೦ ಜನ ಪುರುಷರೂ ಆಗಿದ್ದರು) ಅವರ ಕೈಯ್ಯಲ್ಲಿ ಬೆರಳುಗಳ ಹೊರ್ತು ಮತ್ತೇನೂ ಇದ್ದಿಲ್ಲ. ಅವನ್ನೂ ಕೂಡ ಜೋಡಿಸಿಕೊಂಡು ಒಳಗೆ ಹೋಗುವ ಗುತ್ತೇದಾರರಿಗೆ ದಯಮಾಡಿ, ಗುತ್ತಿಯ ಸವಾಲು ಹಿಡಿಯಬೇಡಿರೆಂದು ಬೇಡಿಕೊಳ್ಳುತ್ತಿದ್ದರು. ಒಳಗೆ ಹೋಗುವ ಕಲಾಲರ ಮೋರೆಯನ್ನು ನೋಡುವಂತಾಗಿತ್ತು. ಚಪಟರೂ ರಕ್ತ ಬರದಷ್ಟು ಅವರ ರಕ್ತದಿಂದ ನಿಂತು ಹೋಗುತ್ತಿತ್ತು ಸವಾಲು ವ್ಯವಸ್ಥೆಯಲ್ಲಿ ನಡೆಯುವದು ಸ್ವಯಂಸೇವಕರ ಅರೀ ಬರುವರು. ಅವರು ಬರುವದರೊಳಗಾಗಿ ತಾವು ದರಬಾರ ಹಾಲಿನಲ್ಲಿ ಹೋಗಿ ಕೂಡ್ರಬೇಕೆಂದು ಅವಸರ ಮಾಡಿದರು. ಕಾಂಗ್ರೆಸದವರು ಇಷ್ಟು ಬೇಗ ಬರುವದಷ್ಟು ಸಹ್ಯಲ್ಲ. ಬೆಳಗಾಗುವದರೊಳಗೆ ಬಂದು ನೂರು ಜನ ಸ್ವಯಂಸೇವಕರು ಕಾಂಗ್ರೆಸ ಕಚೇರಿಯಿಂದ ಮೆರವಣಿಗೆಯಿಂದ ಹೊರಟು, ಅಲ್ಲಿಗೆ ಬೇಗನೆ ನಿಂತುಕೊಂಡರು. ಬಿಸಿಲಿನಲ್ಲಿ ಸೈನಿಕರ ಹಾಗೆ ಎರಡು ಮೂರು ದಿವಸ ಅನ್ನ ನೀರು ಬಿಟ್ಟು ಕಳಿಸಿದವರು. ಅನೇಕ ಪ್ರಕಾರ ಕಾಂಗ್ರೆಸ ಕಮಿಟಿಯವರು ಸ್ವಯಂಸೇವಕರಿಗಾಗಿ ಸ್ಥಳದಲ್ಲಿಯೇ ಬತ್ತಿಯ ವ್ಯವಸ್ಥೆ ಮಾಡಿದ್ದರು. ಪೋಲಿ ಮತ್ತು ಸ್ವಯಂಸೇವಕರ ತಮ್ಮ ತಮ್ಮ ಸತ್ವಗುಣಗಳ ದರ್ಶನ ನೋಡಲು ಸಾವಿರಾರು ಜನರು ನೆರೆದಿದ್ದರು. ಈ ಹೊರಗಿನ ನೋಟ. ಪ್ರೇಕ್ಷಣೀಯವಾಗಿತ್ತು.

ಒಳಗಿನ ನೋಟ—

ದರಬಾರ ಹಾಲಿನಲ್ಲಿ ನಾವಿಕ್ಕಿಂತ ಹೆಚ್ಚು ಜನ ಹಿಡಿಯುತ್ತದೆ. ಪೋಲೀಸರ ಹೊರಗಿನ ಬಂದೋಬಸ್ತಿನಿಂದ ಹೊರಗಿನ ನೋಟವು ವಿಮಾನದ ಹಾಗಿದ್ದಂತೆ ಒಳಗಿನ ನೋಟವು ಕಾಣುತ್ತಿತ್ತು. ನಡೆದಕ್ಕಿಂತ ಹೆಚ್ಚು ಜನರಿರದ್ದರಿಂದ. ಹಾಲು ಭಣಗುಡುತ್ತಿತ್ತು. ಸವಾಲು ಮಾಡುವ ಸರಕಾರೀ ಕಾರ್ಯದ ಕಳೆ ಹಾಗು ಸವಾಲಿನಲ್ಲಿ ಜೀವದ ಕಲಾಲರ ಮೋರೆಯ ಮೇಲೆ ತುಸುವಾದರೂ ಉತ್ಸಾಹವಿದ್ದಿಲ್ಲ. ಕಲಾಲರು ಬಹಳ ಕಡಿಮೆ ರಕಮಿಗೆ ಕೇಳುವಂತೆ ತೋರಿತು. ಕೆಲವರು ದಡದ ಮೇಲಿನ ಮೀನುಗಳಂತೆ ಪುರಪುರನೆ ಸಾಗಿ ಬಂದು ಗಿರ ಜೋಡಿಸಿಕೊಂಡು ಬರುವ ಕುಹುಕದ ಕೆಲವರು ಹವಣಿಕೆಯುಳ್ಳವರಾಗಿದ್ದರು. ಮುಂದೆ ಗಿಡ ಕಡಿಯುವಂತೆ ಒಂದೊಂದಿಷ್ಟು ಮಾತಿನಿಂದ, ಅಂತೂ ಸವಾಲು ಮಾಡುವೆವೆಂದು ಹೇಳುವದೊಂದು ಮಾರ್ಗವಿತ್ತು. ಈಗ ಸವಾಲು ಮಾಡೋಣ, ಜನರು ಗಿರಕಿಯಿಂದ; ತಮ್ಮ ಹೊಟ್ಟೆಯ ಮೇಲೆ ಕಾಲಿಟ್ಟು, ಸರಕಾರದ ತಿಜೋರಿಯನ್ನು ತಾವೆಲ್ಲಿಂದ ತುಂಬಬೇಕೆಂದು ಇವರು ಹೇಳುವರು. ಕೆಲವರು ಈಗಾದ ಹಾನಿ ತುಂಬಿಕೊಡಬೇಕೆಂದಿದ್ದರು. ಇವೆಲ್ಲ ಸಂಗತಿಗಳು ವಾಸ್ತವೀಕವಾಗಿದ್ದವು. ಈ ವೇಳೆಗೆ ನಾಲ್ಕು ತಾಸುವಾಗಿ ಒಳಹೊಕ್ಕ ನವೆಂಬ ಮಾತುಗಳನ್ನಾಡುವವರನ್ನು ಕಂಡು, ಯಾವಡೆಯಿಂದು ಸೂಕ್ತವಾದ ವಿಚಾರದಿಂದ ಸವಾಲು ಮಾಡಬೇಕೆಂದ, ಅಧಿಕಾರಿಗಳು ಮಾತಾಡಿಕೊಂಡು ಸವಾಲನ್ನು ಹದಿನೈದು ದಿವಸ ಮುಂದೆ ಹಾಕಿದರು ಈ ಪ್ರಕಾರ ಪಿಕೆಟಿಂಗಕ್ಕೆ ಮೊದಲನೆಯ ಜಯವಾಯಿತು.

ಹದಿನೈದು ದಿವಸಗಳಲ್ಲಿ ಶಿಂದೀಶತ್ರುವಿನ ಸಂಹಾರವಾಗಲೇ ಬೇಕು.

ಧಾರವಾಡ ಜಿಲ್ಲೆಯ ಶಿಂದಿಯ ಲಿಲಾವು ೧೫ ದಿವಸ ಮುಂದೆ ಬಿತ್ತು ಮುಂದೆ ಬೀಳಲಿಕ್ಕೆ ಕೂಡದ ಕಾರಣಗಳಲ್ಲಿ ಸರಕಾರದವರು ಈ ಗಿರಕಿಯ ... ಜವಾಬದಾರಿಯನ್ನು ಹೊರದೆ ... ನಾವು ಸವಾಲಿನಲ್ಲಿ ಹಿಡಿದು, ಜನರು ಗಿರಕಿಗಳನ್ನು ಕಡಿದರೆ- ಯಾರು ಹಾನಿ ತುಂಬಿಕೊಡುವರು? ಯಾರು ಹೇಗೆ ಅಂಗಡಿಗಳ ಸಂರಕ್ಷಣೆ, ಜಾಮೀನು ಹೊಣೆಯವೆಂದು ಕಲಾಲರ ಸವಾಲು ಹಾಕಿದ್ದು ಗಮನಿಸತಕ್ಕದ್ದಿದೆ ಅಂತವರು ಇವರ ಒಂದೇ ಇಷ್ಟು ಬಾಧಕವೆಂದರೆ ಸವಾಲನ್ನು ೧೫ ದಿವಸ ಮುಂದೆ ಹಾಕಿದ್ದರೆ ಈ ಹದಿನೈದು ದಿವಸಗಳಲ್ಲಿ ಇಡೀ ಜಿಲ್ಲೆಯ ಸ್ವಯಂಸೇವಕರು, ತಯಾರು ಇದ್ದರೆ ಕೆಟ್ಟ ಚಟ ಬಿಡಿಸುವ ಕೆಲಸ ಮಾಡುವದೇ ಮುಖ್ಯವಾಗಿ ಮಾಡಿ ಎಲ್ಲರಿಗೆ ಅರಿಕೆಯ ಕಾರ್ಯವಾಗುತ್ತದೆ ಗಿರಕಿ ಶಿಂದಿಯ ನಿರ್ಬಂಧವನ್ನುದರೆ- ಸರಕಾರೀ ಗಿರಕಿಗಳನ್ನು ಕಡಿಯಬೇಕೆಂದು ತಪ್ಪು ತಿಳುವಳಿಕೆ ಮಾಡಿಕೊಳ್ಳಬಾರದು. ಸರಕಾರೀ ಗಿರಕಿಗಳನ್ನು ಕಡಿಯಬೇಕೆಂದು ಕಾಂಗ್ರೆಸದ ಅಪ್ಪಣೆಯೇ ಇರುವದಿಲ್ಲ ಮತ್ತು ೧೫ ಅಷ್ಟು ಮಾಲೀಕರಿಂದ ಪರವಾನಗಿ ಪಡೆದುಕೊಂಡು ಕಡಿಯುತಕ್ಕದ್ದು ವೊಂದು ದೊಡ್ಡದಾಗಿ, ಎಲ್ಲರಿಗೂ ತಿಳಿಸಿಕೊಳ್ಳದ್ದು ಮಾಲಕರಿಯ ಗಿರಕಿಗಳನ್ನಷ್ಟೇ ಕಡಿದರಿ, ಎಲ್ಲರಿಗೆ ಕೊಡುವ ಕಡಿದಂತಾಗುವುದು. ಇಂಥ ಯೋಗ್ಯ ತಿಳುವಳಿಕೆಯನ್ನು ಕೊಡುವ ಸುದ್ದಿ ಪತ್ರವನ್ನು ಪ್ರಸಿದ್ಧ ಮಾಡಿದ್ದೇವೆ ಜನರೆಲ್ಲ ನಮ್ಮಂತೆ ಆಚರಿಸಿ ನಮ್ಮ ಉದ್ದೇಶವನ್ನು ಪೂರೈಸುವರೆಂದು ಇಚ್ಛಿಸುತ್ತೇವೆ

ಮತ್ತು ಜನರು ಲಿಲಾವಿನಲ್ಲಿ ಮಾಡುವದಿಲ್ಲೆಂದು ಪ್ರತಿಜ್ಞೆ ಮಾಡಿದರು.

ಧಾರವಾಡಕ್ಕೆ ಲಿಲಾವಿಗಾಗಿ ಬಂದವರಲ್ಲಿ ಮತ್ತು ಜನ ಮತ್ತು ಗುತ್ತೇದಾರರು, ೧೫ ದಿವಸಗಳ ನಂತರ ಆಗುವ ಸವಾಲಿನಲ್ಲಿ ಸವಾಲು ಮಾಡುವದಿಲ್ಲೆಂದು ಕಾಂಗ್ರೆಸ ಕಮಿಟಿಯಲ್ಲಿ ಪ್ರತಿಜ್ಞೆ ಬರೆದುಕೊಟ್ಟಿದ್ದಾರೆ ಉಳಿದ ನೂರಾರು ಜನಗಳಿಗೆ ಇವನ್ನು ಸವಾಲು ಮಾಡಬೇಕು; ಹಿಡಿಯತಕ್ಕ, ಬಡ ಜನರ ಹೊಟ್ಟೆ ಮತ್ತು ಗೋಣು ಕಟ್ಟಿಕೊಳ್ಳಬೇಕೆಂಬ ಉತ್ಸಾಹವುಂಟು. ಇವರಿಗೆ ಪಾಪದ ಸ್ಪರ್ಶವಾದ ಅಂತಃಕರಣ ಮಾಡಬೇಕಾದದ್ದೆ. ಗಿರಕಿಗಳ ಸಂಹಾರವಾದದ್ದರಿಂದ ಬೇರೆ ದಾರಿ ಉಪಾಯವು. ಒಬ್ಬೇ ಸರಕಾರೀ ಗಿರಕಿಗಳು ನಾಶವಾಗುವದಿಲ್ಲ ಈ ಮಾತಿನನ್ನೇ ಬಿಡಬೇಕೆಂಬ ಬುದ್ಧಿ ಹುಟ್ಟುವಂತೆ ಶಿಂದಿಯ ತಿಳುವಳಿಕೆ ಮಾಡಿಕೊಡಬೇಕು. ಅಂದರೆ ಸರಕಾರೀ ಗಿರಕಿಗಳು ತಾವೇ ಸ್ವಾಭಾವಿಕವಾಗಿ ಪಾಳುಬಿದ್ದು ಒಣಗಿ ನಿಂತುಕೊಳ್ಳುವವು. ಕಾಂಗ್ರೆಸದ ಅಪ್ಪಣೆಯ ವಿರುದ್ಧ ಸಂಪ್ರದಾಯದ ವಿಚಾರ, ಗ್ರಾಮದಲ್ಲಿರುವ ಸೆಕೆಂಡರಿಯವರ ಮನಸ್ಸಿನ ವಿರುದ್ಧ ಗಿರಕಿ ಹಿಡಿಯುವ ಧನಿಗಳು ಗಿರಕಿಕಟ್ಟೆಗಳಿಗೆ ಧನಿಗೆ ಸಾಮಾಜಿಕ ಬಹಿಷ್ಕಾರ ಹಾಕಿ; ಅಂದರೆ ಬೆಂಗಳೂರ ಪಡೆಯಬೇಕೆನ್ನುವನಕ್ಕಿಂತ ಇವರ ಪಾಲಿಗೆ ಹತ್ತಿಕೊಂಡಿರುವವನ್ನು ಗಿರಕಿಗಳೇ ಬನ್ನಿಗೆ ಬೀಳದಂತೆ ವ್ಯವಸ್ಥೆ ಮಾಡುವದು ಮೇಲಾದ ಉಪಾಯವಾಗುತ್ತದೆ.

ಸಾಕ್ಷೀ ನುಡಿಯುವದಿಲ್ಲೆಂದು ಸ್ತ್ರೀಯರ ಸತ್ಯಾಗ್ರಹ

ಕಲಕತ್ತೆಯಲ್ಲಿ ನಾರೀವಾದಿ ಮಹಿಳಾ ಸಮಿತಿಯ ಸೇಕ್ರೆಟರಿಯಾಗಿರುವ ಶ್ರೀ॥ ಸೌ॥ ಇಂದುಮತಿಯವರು ಪೋಲಿಸರಿಗೆ ಸರಕಾರೀ ಕೆಲಸ ಬಿಡಿರೆಂದು ಉಪದೇಶ ಮಾಡಿದರೆಂದೂ, ಮುದ್ರಾಲಯದ ಹೆಸರು ಹಾಕದೆ ಹಸ್ತಪತ್ರಿಕೆ ಮುದ್ರಿಸಿದರೆಂದೂ ಆರೋಪ ಹೊರಿಸಿ, ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದಾರೆ. ಈ ವಿಚಾರಣೆಯಲ್ಲಿ ಶ್ರೀ ಸೌ॥ ಇಂದುಮತಿಯವರು ಭಾಗ ತಕ್ಕೊಳ್ಳಲಿಲ್ಲವಾದರೂ ಸಭೆಯೇ ವಿಚಾರಣೆಯನ್ನು ನೋಡಲಿಕ್ಕೆ ಬಂದಿದ್ದ ಅನೇಕ ಸ್ತ್ರೀಯರಲ್ಲಿ ಪೋಲಿಸರು ಸ್ವರ್ಗವಾಸಿ ದೇಶಬಂಧು ದಾಸರ ತಂಗಿ ಶ್ರೀ. ಊರ್ಮಿಳಾದೇವಿಯನ್ನು ಸಾಕ್ಷಿಗೆ ಕರೆದರು. ಭಗಿನಿಯರ ವಿರುದ್ಧ ಮತ್ತು ಸ್ವದೇಶದ ವಿರುದ್ಧ ಸಾಕ್ಷೀ ನುಡಿಯುವದಿಲ್ಲೆಂದು ದೇವಿಯವರು ಸ್ಪಷ್ಟವಾಗಿ ಹೇಳಿದರು. ಸಾಕ್ಷೀ ನುಡಿಯದ್ದಕ್ಕೆ ಆರು ತಿಂಗಳ ಶಿಕ್ಷೆಯಿದ್ದು, ಹಿಂದಕ್ಕೆ ಬಾಬು ಬಿಪಿನಚಂದ್ರಪಾಲರು, ಶ್ರೀ ಅರವಿಂದ ಘೋಷರ ವಿರುದ್ಧ ಸಾಕ್ಷೀ ನುಡಿಯುವದಿಲ್ಲೆಂದು ಆರು ತಿಂಗಳ ಶಿಕ್ಷೆ ಅನುಭವಿಸಿದ್ದಾರೆ.

ಹೆಂಬೇಳ ಹೊಡಿಸಿಕೊಂಡ ಹವಾಲದಾರನ ಹೀನತನವು

ಮುಂಬಯಿಯಲ್ಲಿ ಯುರೋಪಿಯನ್ನರ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿರುವದನ್ನು ನೋಡಲಿಕ್ಕೆ ನಿಂತ ಜನರ ಗುಂಪಿನಲ್ಲಿ ಬಿಳೇ ಅಂಗಿ ತೊಟ್ಟ ಒಬ್ಬ ಪೋಲೀಸ ಹವಾಲದಾರನಿದ್ದನು. ಆತನು ಅಲ್ಲಿಂದ ಪ್ಯಾಕೆಟವೇ ಲೇಡಿಯಾ ಕಂಪನಿಯ ಕೆಲಕೆಯ ಕನ್ನಡಿಗೆ ಕಲ್ಲೊಗೆದು, ಜನರ ಮೇಲೆ ಸಂಶಯ ತಂದು, ಅವರನ್ನು ಸಾರ್ಜಂಟರಿಂದ ಹೊಡಿಸಬೇಕೆಂಬ ಹೀನ ಯುಕ್ತಿ ಮಾಡಿದ್ದನು. ಜನರ ಕಣ್ಣಿಗೆ ಈ ಹೀನ ಕೃತ್ಯ ಬಿದ್ದ ಕೂಡಲೆ, ಅವನನ್ನು ಪೈವರಿ ಥಳಿಸಿದರು. ಹೇಗತದಿಂದ ಆತನು ಎದ್ದರಪ್ಪಿ ಬಿದ್ದನು. ಧಾರವಾಡದಲ್ಲಾದ ಗೋಕೆಜಾರದ ೧೦ ದಿವಸ ಒಬ್ಬ ಪೋಲೀಸನೂ ಜನರಲ್ಲಿಯೇ ಗಂಟು ಬಿಡಿಸಿಕೊಂಡು ಘಾಯವಾದನು. ಪೋಲೀಸರು ಇಂಥ ಆಟವಾಡಲಿಕ್ಕಿಲ್ಲೆಂದು ಯಾರು ಹೇಳುವರು?

ರಾಷ್ಟ್ರೀಯ ಸಭೆಯ ಆಮಂತ್ರಣವಲ್ಲ! ಸೆರೆಮನೆಯ ಆಮಂತ್ರಣವು.

ನನಗೆ ಇಂಗ್ರೇಜಿ ಸರಕಾರದಿಂದ ರಾಷ್ಟ್ರೀಯ ಸಭೆಯ ಆಮಂತ್ರಣ ಒಂದೂ ಬರುವದಿಲ್ಲ. ನನಗೆ ಬರುವ ಆಮಂತ್ರಣವು ಯಾವದಾದರೊಂದು ಸೆರೆಮನೆಗೆ ಬಾದಶಹರ ಅತಿಥಿಯಾಗಿ ಹೋಗೆಂದು ಬರುವದೆಂದು ಪಂಡಿತ ಮೋತಿಲಾಲರು ಮುಂಬಯಿಯಲ್ಲಿ ಭಾಷಣ ಮಾಡುವಾಗ ಹೇಳಿದ್ದಾರೆ.

ಪಂಡಿತ ಜವಾಹಿರಲಾಲರ ಸ್ವಾರ್ಥತ್ಯಾಗ.

ಸರಕಾರದವರು ಪಂಡಿತ ಜವಾಹಿರಲಾಲರನ್ನು ಎ ಕ್ಲಾಸಿನಲ್ಲಿಟ್ಟಿದ್ದರೂ, ಅವರ ಕೂಡ ಕೆಲಸದಲ್ಲಿರುವ ಸ್ವಯಂಸೇವಕರನ್ನು ಸಿ ಕ್ಲಾಸಿನಲ್ಲಿಟ್ಟಿದ್ದಾರೆ. ಆದ್ದರಿಂದ ತಾವು ಸಾಮಾನ್ಯ ಭೋಜನ ಮಾಡುವದು. ಅರ್ಧರೊಟ್ಟಿ ಮತ್ತು ಪಪ್ಪು ಭೋಜನವಾಗುತ್ತದೆಂದು ತಿಳಿದು, ಜವಾಹಿರಲಾಲರು ಸಿ ಕ್ಲಾಸಿನವರು ಉಣ್ಣುವದನ್ನೇ ತಕ್ಕೊಳ್ಳುತ್ತಿದ್ದು, ಮನೆಯವರಿಗೆ ಹಣ್ಣು ಹಂಪಲವನ್ನೇನೂ ಕಳಿಸಕೂಡದೆಂದು ತಿಳಿಸಿದ್ದಾರೆ. ಅವರಿಗೆ ಮಂಚ, ಕುರ್ಚಿ ಮತ್ತು ಹಂಡೆಯ ಮೆಜ ಇತ್ಯಾದಿಗಳೂ ಸೆರೆಮನೆಯಲ್ಲಿ ಭೆಟ್ಟಿಯಾಗಿರುವದಿಲ್ಲ.

ಪ್ಯಾರಿಸದಲ್ಲಿನ ನಿಜಾಮ ಸಾಹೇಬರವರು ಕನ್ನ ಹಾಕಿದ ಸರ ಆಕಬರ ಹೈದರಿ, ಮೌಲಾನ ನನ್ನ ... ನವಾಬ ಮೇಹದಿಯಾರ ಜಂಗ ಮುಂತಾದವರನ್ನು ರಾಷ್ಟ್ರೀಯ ಟೇಬಲಕ್ಕೆ ಕಳಿಸುವರು. ಅಲ್ಲಿ ಯಾವ ಹಿಂದೂ ಗೃಹಸ್ಥನು ವಿಲಾಯತಿಗೆ ಹೋಗಲು ಸಮರ್ಥನಿರುವದಿಲ್ಲವೆ?

ಡಾ. ಬಿ. ಕಂಬಳಿಯವರೇ,

ಸ್ವದೇಶಿಯರ ಕಣ್ಣಿನಿಂದ ನೋಡಿರಿ.

ಹುಬ್ಬಳ್ಳಿಯಲ್ಲಿ ಮ್ಯುನಿಸಿಪಾಲಿಟಿಯು ಕಟ್ಟಡದ ಮೇಲೆ ರಾಷ್ಟ್ರೀಯ ನಿಶಾನೆಯನ್ನೇರಿಸುವ ವಿಷಯವು ಬಿಸ್ಸಿಗೆ ಬಿದ್ದಿರುತ್ತದೆ. ಬಿಸ್ಸಿಗೆ ಹಾಕಿದವರು ಮ್ಯುನಿಸಿಪಾಲಿಟಿಯವರೇ ಅಲ್ಲದೆ, ದೇಶಾಭಿಮಾನಿಗಳಾದ ನಾಗರಿಕರಲ್ಲ; ಅಧ್ಯಕ್ಷರಾದ ಡಾ. ಬಿ. ಕಂಬಳಿಯವರು ಇದಕ್ಕೆ ಸಂಪೂರ್ಣ ಹೊಣೆಗಾರರಾಗಿದ್ದಾರೆಂದು, ಹೇಳಲು ಯಾವ ಆತಂಕವೂ ಇಲ್ಲ. ರಾಷ್ಟ್ರೀಯ ನಿಶಾನೆಯನ್ನು ಏರಿಸುವದು ಕೂಡಲೇ ಡಾ. ಬಿ. ಕಂಬಳಿಯವರ ಕರ್ತವ್ಯವು. ಅವರು ವಿಲಾಯತಿಯ ಕಣ್ಣಿನಿಂದ ಈ ವಿಷಯ ನೋಡುತ್ತಿರುವದರಿಂದ, ಅವರಿಗೆ ಇದು ವಿಷಮವಾಗಿರುತ್ತದೆ. ತಪ್ಪೊಂದಾಗದಿದ್ದರೂ, ಹೆದರು, ಮಾಡುವದಕ್ಕಾದರೂ ಕಟಸ್ಥ ವ್ಯಕ್ತಿಯಿಲ್ಲದ್ದರೂ ಸಾಕು. ಹಾಗೆ ಮಾಡಲಿಕ್ಕೂ ಅವರ ಮನಸ್ಸಿಗೆ ಬಂದಿಲ್ಲ. ಏಕೆಂದರೆ- ಈ ವಿಷಯವು ಅವರಿಗೆ ವಿಷದಂತಾಗಿರುವದು. ಹೊರಗಿನ ದೆವ್ವವು ಹೊರಗೇ ಹೋಗಲೆಂದು, ಮ್ಯುನಿಸಿಪಾಲಿಟಿಯು ಮುಂದೆ ಈ ವಿಷಯವಿಟ್ಟು, ಬಹುಮತದಂತೆ ನಡೆದು, ತಾವು ಪರಂಬಳರಾಗಬಹುದಾಗಿತ್ತು. ಅಥವಾ ಬಹುಮತವು ತಮಗೆ ಅನುಕೂಲವಾಗಿರುವಾಗ ಅನ್ಯರಿಗೆ ಹೆದರುವದೇಕೆ? ಮ್ಯುನಿಸಿಪಾಲಿಟಿಯಲ್ಲಿ [illegible] ನಾವೇನು ಮಾಡುವದೆಂದು ಹೇಳಿಕೊಳ್ಳಲಿಕ್ಕೂ ದಾರಿ ಕೊಳ್ಳಲಿಕ್ಕೂ ಬರುವದು. ಒಂದುವೇಳೆ ಅಲಂಸದ ವಿಧಿಘಟನೆಯಿಂದ ಹಾನಾದರೆ-ತಾವು ಸ್ವತಃ ಈ ಮಂಗಳ ಮಹೋತ್ಸವದ ಕಾರ್ಯವನ್ನು ಮಾಡಿ, ಶ್ರೇಯಸ್ಸು ಪಡೆದು, ಜನರಿಂದ ಮರ್ಯಾದೆ ಹೊಂದಿ, ಹಿಂದಿನಂತೆ ಇನ್ನು ಮೇಲೆ ಕೂಡ ಡಾ. ಬಿ. ಕಂಬಳಿಯವರೆಂದು ಹೊಗಳಿಸಿಕೊಳ್ಳಬಹುದು. ವಿಲಾಯತಿಯ ಉಪದೇಶದಿಂದ ಈ ಕಾರ್ಯದಲ್ಲಿ ಮನಸ್ಸು ಹಾಕಬೇಕೆನಿಸದಿದ್ದರೆ- ಯಾರಿಗಾದರೂ ಹೇಳಿ ತಾವು ಊರು ಸುತ್ತಲೂ ಹಣವನ್ನು ಹೊರಗೆಂದು ನಿಲ್ಲಬಹುದು. ತಿರಪೂರದಲ್ಲಿ ಸಂಭವಿಸಿದ ಸಂಗತಿಯನ್ನು ಬೇರೆ ಕಡೆಯಲ್ಲಿ ಬರೆದಿರುತ್ತೇವೆ. ಮುಖ್ಯ ಮಂತ್ರಿಯು ಮಹಾತ್ಮರ ಹೆಸರಿನ ಫಲಕವನ್ನು ತೆರೆಯಲು ನಿರಾಕರಿಸಿದಂತೆ ತಾವೂ ನಿರಾಕರಿಸಬಹುದು. ಅಕ್ಷ ಸ ತ್ತ ದೆ ಆ ಮಾವಾಸ್ಯ ನಿಲ್ಲುವದಿಲ್ಲ. ಯಾರಾದರೂ ಈ ಕಾರ್ಯ ಮಾಡಿ, ತಮ್ಮ ಹೆಸರು ಬಹುಕಾಲ ಉಳಿಯುವಂತೆ ಮಾಡಿಕೊಳ್ಳುವರು. ಒಂದು ವೇಳೆ ಇಂಥವರು ನಿಶಾನೆ ನಿಲಿಸಿದರೆಂದು ನಿಶಾನೆಯ ಕೆಳಗೆ ಒಂದು ಶಿಲಾಲೇಖವನ್ನೂ ನಿಲ್ಲಿಸಬಹುದು.

ಮ್ಯುನಿಸಿಪಾಲಿಟಿಯಲ್ಲಿ ವಿಷಯವು ಹಾಸಾದರಂತೂ ಸರಿಯೇ. ನಾವಾಸಾದರೆ- ಊರವರು ಸತ್ಯಾಗ್ರಹದಿಂದ ತಮ್ಮ [illegible] ಮಾಡಿಕೊಳ್ಳುವರು. ನಿಶಾನೆ ಹಚ್ಚದಿದ್ದರಿಂದ ಲಂ ಸಾವಿರ ವರ್ಷಾಸನ ಮುಣುಗಿ ಹೋದು ಡಾ. ಬಿ. ರವರು ಹೆದರಿದ್ದಾರೆಂದು ಲೋಕವಾರ್ತೆಯು. ಪ್ರಶ್ನೆಯು ಗ್ರಾಂಟಿನದಲ್ಲ; ತತ್ವದ್ದಿರುತ್ತದೆ. ಜನರು ತತ್ವಕ್ಕಾಗಿ ಹೋರಾಡುತ್ತಿದ್ದಾರೆ. ತತ್ವದ ಜಯವೇ ಜಯವು. ಸಾಂಪಾಬದ ಅಷ್ಟರೇ ಕಾಯಿದೆಯ ವೇಳೆಯಲ್ಲಿ ಇಂಗ್ರೇಜಿ ಸರಕಾರದವರು ಅನೇಕರಿಗೆ ತಮ್ಮ ಯುನಿಯನ್‌ಜಾಕ ಗಿ ಧೆಗ್ಗಿಸಿ-ಸಲಾಮು ಮಾಡಲಿಕ್ಕೆ ಹಚ್ಚಿದರು. ಏಕೆಂದರೆ- ಅವರಲ್ಲಿ ತಮ್ಮ ನಿಶಾನೆಯ ದಿಸೆಯಿಂದ ಅಂಥ ಅಭಿಮಾನವುಂಟು. ಅಂಥ ಅಭಿಮಾನವನ್ನು ಪ್ರತಿಯೊಬ್ಬನು ತಳೆಯುವದೇ ಧರ್ಮ. ಡಾ. ಬಿ. ರವರಲ್ಲಿಯೂ ಅಭಿಮಾನವುಂಟು. ಅದು ಒಣ ಹೆದರಿಕೆಯಿಂದ ಬೂದಿ ಮುಚ್ಚಿದ ಕೆಂಡವಾಗಿದೆ. ಅನೇಕ ಮ್ಯುನಿಸಿಪಾಲಿಟಿಗಳು ರಾಷ್ಟ್ರೀಯ ನಿಶಾನೆ ಹಚ್ಚಿವೆ. ಅವುಗಳ ಗ್ರಾಂಟು ಹೋಗಿಲ್ಲ. ಅಂದ ಬಳಿಕ ಹುಬ್ಬಳ್ಳಿಯೊಂದರದೇ ಏಕೆ ಹೋಗುವದು? ನಾಗರಿಕರು ಇಂಥ ಅನವಶ್ಯಕ ವಿಚಾರಗಳಿಗೆ ಎಷ್ಟೂ ಬೆಲೆಗೊಡಬಾರದು. ನಿಶಾನೆ ಹಚ್ಚುವ ಪಂಥದ ಸಿದ್ಧಿ-ಸಾಧ್ಯತೆಗಾಗಿ ಸತ್ಯಾಗ್ರಹದ ಮಂತ್ರವನ್ನೇ ಜಪಿಸುವರು. ಜನರು ಸತ್ಯಾಗ್ರಹ ಮಾಡುವಾಗ ತಾವು ಪೋಲಿಸ ಬಂದೋಬಸ್ತು ಇರಿಸಿ, ತಾವು ನಿಶ್ಚಿಂತೆ ನೋಡುವಂಥ ತಮ್ಮವರನ್ನು ಜುರಂಗಕ್ಕೆ ಕಳಿಸುವ ಅಪಕೀರ್ತಿ ಹೊರುವ ಹೋರಿಯನ್ನೇಕೆ ಮಾಡಬೇಕು? ಕಾಲು ಮೂರು ದಿವಸ; ಕಳೆಯು ಸಾಯುವವನಿಗೆ ತಲೆಕಲಂಕವನ್ನೇಕೆ ತಂದುಕೊಳ್ಳಬೇಕು? ಮನಸ್ಸಿನ್ನಾಗಿನ ಮದಿವೆ ಮನಗಳ ಸಮಯದಲ್ಲಿ ತಮ್ಮವರು ಉಪಯೋಗ [illegible] ಬೀಳುತ್ತಿಲ್ಲದೆ, ಏಳು ಸಾವಿರ ವೈರಿಗಳಿರುವಂಥವರು ಹಣಕಿ ಸಹ ನೋಡಲಾರರೆಂದು ಖಚಿತವಾಗಿ ತಿಳಕೊಂಡು, ಡಾ. ಬಿ. ರವರು ಪ್ರತಿಯೊಂದು ದೇಶಾಭಿಮಾನದ ವಿಷಯವನ್ನು ಸ್ವದೇಶಿಯರ ನೇತ್ರಗಳಿಂದಲೇ ನೋಡಬೇಕೆಂದು ಸೂಚಿಸುತ್ತೇವೆ.

ಹುಬ್ಬಳ್ಳಿಯಲ್ಲಿ ಕಾಂಗ್ರೆಸ ಕಾರ್ಯೋದ್ಯೋಗಿಗಳರಿಗೆ

ಯೋಗ್ಯ ಸಂಭಾವನೆಯು.

ಡಾ. ಬಿ. ಕಂಬಳಿಯವರ ಪಕ್ಷದ

ದೊಡ್ಡ ಪರಾಜಯ.

ತಾರೀಖು ೧೬-೬-೩೦ನೆಯ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿ ಕೆಲವರು ಮಾಡಿದ ಭಾಷಣದಲ್ಲಿ "ಹುಬ್ಬಳ್ಳಿಗೆ ಸ್ವರಾಜ್ಯ ಕಾಯಿದೆ ಬರಬೇಕು," ಎಂದು ನಿಷ್ಕಾರಣವಾಗಿಯೂ ಅಸಧಿಕಾರವಾಗಿಯೂ ಹೇಳಿದ್ದರಿಂದ ಅದನ್ನು ನಿಷೇಧಿಸಬೇಕೆಂದೂ ಮತ್ತು ಸಾರ್ವಜನಿಕ ಸಭೆಯಲ್ಲಿ ಬೇಜವಾಬದಾರಿಯಿಂದ ಕೆಲವರು ರಾವಬಹಾದ್ದೂರ ಕಂಬಳಿಯವರ ಮೇಲೆ ಅನ್ಯಾಯದ ಮತ್ತು ಅನರ್ಹವಾದ ಟೀಕೆಯನ್ನು ಮಾಡಿದ್ದನ್ನು ನಿಷೇಧಿಸಬೇಕೆಂದೂ ಈ ದಿವಸ (೧೭-೬-೩೦) ಶ್ರೀ. ಸಿದ್ದರಾಮಪ್ಪ ಅಣ್ಣಾ ಪಾವಟೆ ಇವರ ಅಧ್ಯಕ್ಷತೆಯ ಕೆಳಗೆ ಸಂಜೆಯ ೫|| ಗಂಟೆಗೆ ಹುಬ್ಬಳ್ಳಿಯ ಕಾಟನ್ ಮಾರ್ಕೆಟಿನಲ್ಲಿ ಲಮಯ್ಬರಿಯ ಮುಂಭಾಗದಲ್ಲಿ ಸಭೆಯು ಕೂಡಿತು. ಸಭೆಗೆ ಸುಮಾರು ಎರಡು ಸಾವಿರ ಜನರು ಕೂಡಿದ್ದರು. ಶ್ರೀ. ಪಾವಟೆಯವರು ಈ ದಿವಸದ ಸಭೆಗೆ ಅಧ್ಯಕ್ಷರಾಗಬೇಕೆಂದು ಶ್ರೀ. ವಿಜಾಪುರವರು ಸೂಚಿಸಿದನಂತರ ಶ್ರೀ ಭ[illegible]ರು ಇವರು ಅದಕ್ಕೆ [illegible] ಸ್ಥಳದಲ್ಲಿ ಶ್ರೀ. ಪಾವಟೆಯವರು ವಿರಾಜಮಾನರಾದ ಬಳಿಕ ಶ್ರೀ. ವಿಜಾಪುರ ವಕೀಲರು ಈ ದಿವಸ ಕೂಡಿದ ಸಭೆಯ ಉದ್ದೇಶ [illegible] ಅವನ್ನು ತಿಳಿಸಿ ಸಹಿ ಮಾಡಿದವರ ಹೆಸರುಗಳನ್ನು ಹೇಳುವಾಗ, ಸಹಿ ಮಾಡಿದವರಲ್ಲೊಬ್ಬರಾದ ಮತ್ತು ಹುಬ್ಬಳ್ಳಿಯ ಪ್ರಸಿದ್ಧ ವ್ಯಾಪಾರಸ್ಥರಾದ ಶೇಟ ನರಸಾಲವಸ್ತ್ಯವರು ತಾವು ಸಹಿ ಮಾಡಿದ್ದೇನೋ ನಿಜವೆಂದೂ ಆದರೆ ತಮಗೆ ಸಹಿ ತೆಗೆದುಕೊಳ್ಳಲಿಕ್ಕೆ ಬಂದ ಶ್ರೀ. ವಿಜಾಪುರ ವಕೀಲರು ಸಭೆಯ ಉದ್ದೇಶವನ್ನು ಸಂಪೂರ್ಣವಾಗಿ ತಿಳಿಸಿ ಹೇಳಲಿಲ್ಲವೆಂದೂ ಹೇಳಿದರು. ಅಷ್ಟರಲ್ಲಿ ಶ್ರೀ. ವಿಜಾಪುರವರು "ಶೇಟಜಿಯವರಿಗೆ ಸಭೆಯ ಉದ್ದೇಶವನ್ನು ನಾಲ್ಕು ಸಾರೆ ಓದಿ ಹೇಳಿದ್ದೇನೆ; ಆ ಬಳಿಕ ಅವರು ತಮ್ಮ ಕಾರಕೂನನ ಕೈಯಿಂದ ಮಸಿ ಲೆಕ್ಕಣಿಕೆಯನ್ನು ತರಿಸಿ ಸಹಿ ಮಾಡಿದರೆ"ಂದು ಹೇಳಿದರು. [illegible] ಶ್ರೀ ನರಸಾಲಶೆಟ್ಟರು "ಇದೆಲ್ಲವೂ ಸುಳ್ಳು. [illegible] ಪೆನ್ಸಿಲಿನಿಂದಲೇ ಸಹಿ ಮಾಡಿದ್ದೇನೆ ಬೇಕಾದರೆ ಸಭಿಕರು ನೋಡಬಹುದು." ಎಂದು ಹೇಳಿದರು. ಅದಕ್ಕೆ ಶ್ರೀ. ವಿಜಾಪುರ ವಕೀಲರು ನಿರುತ್ತರರಾದರು. ಶ್ರೀ. ನರಸಾಲಶೇಟರ ಸಹಿಯನ್ನು ತೆಗೆದು ಹಾಕಬೇಕೆಂದು ಶ್ರೀ ವಿಜಾಪುರವರು ಹೇಳಿದ ನಂತರ ಈ ಪ್ರಶ್ನೆಯು ಮುಗಿಯಿತು. ಆ ಬಳಿಕ ಶ್ರೀ ವಿಜಾಪುರ ವಕೀಲರು ಕರ್ನಾಟಕ ಪ್ರೆಸ್ಸಿನಲ್ಲಿ ೧೬-೬-೩೦ನೆಯ ದಿವಸ ಕಾಂಗ್ರೆಸಿನ ಪರವಾಗಿ ಕೂಡಿದ ಸಭೆಯಲ್ಲಿ ಮಾಡಿದ ಭಾಷಣವನ್ನು ನಿಷೇಧಿಸುವ ಗೊತ್ತುವಳಿಯನ್ನು ಸಭೆಯ ಮುಂದೆ ಇಟ್ಟು ಅದರ ಬಗ್ಗೆ ಮಾತಾಡಿದರು. ಆ ಗೊತ್ತುವಳಿಗೆ ಶ್ರೀ ಭದ್ರಾಪುರ ಇವರೇ ಅನುಮೋದನೆ [illegible] ಶ್ರೀ ಕರಗುದರಿಯವರು "ನಾನೇ ೧೬-೬-೩೦ನೆಯ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿ ಭಾಷಣ ಮಾಡಿದ್ದೇನೆ. ನನ್ನ ಭಾಷಣದ ವಿಷಯವಾಗಿಯೇ ಈ ಗೊತ್ತುವಳಿಯು ಇದೆ. ಆದ್ದರಿಂದ ನನ್ನ ಭಾಷಣದಲ್ಲಿ ನಾನು ಏನೇನು ಹೇಳಿದ್ದೇನೆಂಬುದನ್ನೂ ಅದರಲ್ಲಿ ನಿಷೇಧ ಮಾಡಲಿಕ್ಕೆ ಸಂಗತಿಗಳೇನಾದರೂ ಇವೆಯೋ ಹೇಗೆ ಎಂಬುವದನ್ನು ಜನರಿಗೆ ಹೇಳುವದು ಅವಶ್ಯವಿದೆ. ಗೊತ್ತುವಳಿಗಾಗಿ ಮತಗಳನ್ನು ತೆಗೆದುಕೊಳ್ಳುವ ಮೊದಲು ನನಗೆ ಸ್ವಲ್ಪ ಮಾತಾಡಲಿಕ್ಕೆ ಅಪ್ಪಣೆಯನ್ನು ಕೊಡಬೇಕೆಂದು ಅಧ್ಯಕ್ಷರಿಗೆ ಕೇಳಿಕೊಂಡರು. ಅಪ್ಪಣೆಯು ದೊರೆತ ಬಳಿಕ ಶ್ರೀ. ಕರಿಗುದರಿಯವರು "ನಾನು, ಸ್ವರಾಜ್ಯ ಕಾಯಿದೆ (ಮಾರ್ಶಲ್ ಲಾ) ಯು ಹುಬ್ಬಳ್ಳಿಗೆ ಬಂದರೂ ಅಡ್ಡಿಯಿಲ್ಲ. ಎಂದು ಹೇಳಿದ್ದೇನೋ [illegible] ಆದರೆ, ಬರೀ ಇಷ್ಟೊಂದೇ ವಾಕ್ಯವನ್ನು ಜನರಿಗೆ ಹೇಳಿದರೆ ವಿಪರೀತ ಕಲ್ಪನೆಯಾಗುವ ಸಂಭವವಿದೆ. ಈ ವಾಕ್ಯವನ್ನು ಹೇಳುವ ಮೊದಲು ನಾನು ಏನೇನು ಅಂದಿದ್ದೇನೆ ಎಂಬುವದನ್ನು ತಿಳಿದುಕೊಳ್ಳುವದು ಅವಶ್ಯವಿದೆ. ನಾನು ಅಂದದ್ದೇನಂದರೆ- ನಮ್ಮದು ಅಹಿಂಸಾವ್ರತವು. ಕೊನೆಯವರೆಗೆ ನಾವು ಅಹಿಂಸಾವ್ರತದಿಂದಲೇ ಕಾರ್ಯಮಾಡತಕ್ಕವರು. ಆದರೆ ವಿರಸನೇಯುವವಾರಾದರೂ ಹೊಣೆಗಾರಿಕೆಯನ್ನು ಅರಿಯದೆ ಸ್ವಸ್ವವನ್ನು ಹುಬ್ಬಳ್ಳಿಗೆ ತರುವಂಥ ಕಾರ್ಯವನ್ನು ಮಾಡಿದರೆ ಅಥವಾ ಸಂಕಾರದವರು ಅನ್ಯಾಯದಿಂದ ಹಾಗೆ ಮಾಡಿದರೆ ಸ್ವೈಸ್ಥ ಬರಲಿ; ಅಡ್ಡಿಯಿಲ್ಲ. ಅದಕ್ಕೆ ನಾವು ಅಂಜಿದರೆ ನಡೆಯಲಾರದು. ಅದಕ್ಕಾಗಿ ನಾವು ಸಿದ್ಧರಾಗಬೇಕು. ಎಂದು ನಾನು ಅಂದಿದ್ದೇನೆ. ಇದು ನಿಷೇಧಾರ್ಹವಿದೆಯೋ ಇಲ್ಲವೋ ಎಂಬುದನ್ನು ಸಭಿಕರು ನಿರ್ಣಯ ಮಾಡತಕ್ಕದ್ದು." ಎಂದು ಹೇಳಿದರು. ಆ ಬಳಿಕ ಶ್ರೀ. ವಿಜಾಪುರವರು "೧೬-೬-೩೦ನೇ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿನ ಭಾಷಣದಿಂದಲೇ ಹುಬ್ಬಳ್ಳಿಯಲ್ಲಿ ಭಯವು ಉತ್ಪನ್ನವಾಗಿದೆ" ಎಂಬ ಅರ್ಥದ ಭಾಷಣ ಮಾಡಿದರು. ಕೊನೆಗೆ ಈ ಗೊತ್ತುವಳಿಯು ಮತಕ್ಕೆ ಬಿದ್ದು ಅದಕ್ಕೆ ಅನುಕೂಲವಾಗಿ ಸುಮಾರು ೩೦ ಮತಗಳು ದೊರೆತವು. ಅಧ್ಯಕ್ಷರು ಆ ಕೈಗಳನ್ನು ಇಳಿಸಿ (ಆಗಿನ ಕಾಲದಲ್ಲಿ ಮಳೆ ಸುರಿಯುತ್ತಿತ್ತು) ಕೈಯೆತ್ತಿಸಿ ನೋಡಿದರೂ ಅಷ್ಟೇ ಇದ್ದವು. ೩೦೦ ಮೇಲೆ ಹೋಗಲೇ ಇಲ್ಲ. ಅವರ ಅದಕ್ಕೆ ವಿರುದ್ಧವಾಗಿ ಸಾವಿರಾರು ಮತಗಳು ಬಿದ್ದು ರಾಷ್ಟ್ರೀಯ ಜಯಘೋಷಗಳಲ್ಲಿ ಗೊತ್ತುವಳಿಯು ಬಿದ್ದು ಹೋಯಿತು.

ಮುಂದಕ್ಕೆ ಎರಡನೆಯ ಗೊತ್ತುವಳಿಯು ಸಭೆಯ ಮುಂದೆ ಬರುವ ಮುಂಚೆಯೇ ಸಭೆಯನ್ನು ಕೂಡಿಸಿದವರ ಪಕ್ಷದವರಲ್ಲೊಬ್ಬರಾದ ಶ್ರೀ. ಎ[illegible] ಜನರು [illegible] ಸಿಟ್ಟಿಗೆದ್ದು ಹೂಲಿಯು ಸ್ಥಳ ಬಿಟ್ಟಿದ್ದರಿಂದ ಅವರನ್ನು ಆವರ ಪಕ್ಷದ ಜನರೇ ಒಂದು ಕಡೆ [illegible]. ಇಷ್ಟರಲ್ಲಿ ಅಧ್ಯಕ್ಷರು ಈ ಗದ್ದಲದಲ್ಲಿಯೇ ರಾಜೀನಾಮೆ ಕೊಟ್ಟು ಬಾಗಿಲದಿಂದ ಹೊರಟು ಹೋದರು.

ಸಭೆಯು ಕಾಲದಲ್ಲಿ ನೆರೆದಲ್ಲಿನಿಂದ ಕೊನೆಯವರೆಗೆ ಏಕಪ್ರಕಾರವಾಗಿ ಮಳೆಯು ಸುರಿಯುತ್ತಿದ್ದರೂ ಎಲ್ಲರೂ ಕಡೆ ತನಕ ಉತ್ಸಾಹದಿಂದಲೇ ಸ್ವಲ್ಪ ಬೇಸರಪಡದೆ ಕುಳಿತುಕೊಂಡಿದ್ದರು. ಅಲ್ಲಿ ರಾಷ್ಟ್ರಪ್ರೇಮಿಗಳ ಉದ್ಗಾರಗಳೂ ಜಯಘೋಷಗಳೂ ಕೇಳಬರುತ್ತಿದ್ದವು.

ಹುಬ್ಬಳ್ಳಿಯಲ್ಲಿ ರಾಷ್ಟ್ರದ ಕೆಲಸಕ್ಕೆ ಎಷ್ಟು ಬೆಂಬಲವಿದೆಯೆಂಬುದು ಬೇಜವಾಬದಾರ ಕಾರ್ಯೋದ್ಯೋಗಿಗಳ ಅಟಕ್ಕೆ ಹುಬ್ಬಳ್ಳಿಯ ನಾಗರಿಕರು ಅಷ್ಟು ದವನ್ನು ಎಂದೆಂದಿಗೂ ಕೊಡುವದಿಲ್ಲವೆಂಬುದು ಈ ಸಭೆಯಿಂದ ಸಂಪೂರ್ಣ ನಿರ್ಣಯವಾದಂತಾಯಿತು. ಈ ಸಭೆಯು ಡಾ. ಬಿ. ಕಂಬಳೀ ಪಕ್ಷದವರ ದೊಡ್ಡ ಪರಾಜಯ ಸೂಚಕವೇ ಆಯಿತು.

ಮಂಗಳೂರಲ್ಲಿ ವಕೀಲರ ವಿರುದ್ಧ ಮೆರವಣಿಗೆ

ಮಂಗಳೂರಲ್ಲಿ ವಕೀಲರೇ ಮುಂದಾಗಿ ಆಗಿನ ಚಳವಳಿಗೆ ಪೂರ್ಣ ಸಹಾನುಭೂತಿಯುಂಟೆಂದು ತೋರಿಸಲು ವೈಭವದಿಂದ ಪ್ರಚಂಡ ಮೆರವಣಿಗೆ ತೆಗೆದರು. ಪ್ರಸಿದ್ಧ ನಾಯಕರಾದ ಶ್ರೀ. ಗಣೇಶ ಶ್ರೀನಿವಾಸ ಪೈಯವರು ಮೆರವಣಿಗೆಯ ವ್ಯವಸ್ಥೆ ಮಾಡಿದ್ದರು. ಸಭೆಯ ದಿನದಿಂದ ಅಂದು ಕೆಲಕಾಲದಲ್ಲಿ ವಕೀಲರು ಎಲ್ಲ ವ್ಯವಹಾರ ಬಿಟ್ಟಿದ್ದರು. ಮೆರವಣಿಗೆಯಲ್ಲಿ ರಾಷ್ಟ್ರೀಯ ನಿಶಾನೆಗಳು ನಾನಾ ಸಂಖ್ಯೆಯಿಂದಿದ್ದವು. ಸಭಿಕರ ಉದ್ದೇಶವು:

೧ ವಿಲಾಯತಿಯ ಅರಿವೆಗೆ ಬಹಿಷ್ಕಾರ ಹಾಕಿರಿ.
೨ ಮಹಾತ್ಮರ ಕೂಡ ಒಡಂಬಡಿಕೆ ಮಾಡಿಕೊಳ್ಳಿರಿ.
೩ ದಬ್ಬಾಳಿಕೆ ನಿಲ್ಲಿಸಿರಿ.
೪ ರಾಜಕೀಯ ಕೈದಿಗಳನ್ನು ಬಿಡಿರಿ.
೫ ನಾವು ಕಾಂಗ್ರೆಸದಲ್ಲಿ ಸೇರಿದ್ದೇವೆ.
೬ ಖಾದೀ ಧಾರಣ ಮಾಡಿರಿ.

ಎಂದಿತ್ತು.

ಮಂಗಳೂರು ಕಲೆಕ್ಟರ ಕಚೇರಿಯ ಸುತ್ತಲು

ಏಳು ಮೈಲು ಪಿಕೆಟಿಂಗ ಮಾಡಬಾರದು.

ಮಂಗಳೂರಿನ ಕಲೆಕ್ಟರರು ೧೪೪ ನೇ ಕಲಮಿನ ಪ್ರಕಾರ ಒಂದು ಜಾಹೀರನಾಮೆ ತೆಗೆದು ತಮ್ಮ ಕಚೇರಿಯ ಸುತ್ತಲು ಏಳು ಮೈಲಿನೊಳಗೆ ಕಳ್ಳು ಸೆರೆ ಅಂಗಡಿ ಗಡಂಗ ಮತ್ತು ವಿಲಾಯತಿ ಅರಿವೆಯ ಅಂಗಡಿಗಳ ಮುಂದೆ ಎರಡು ತಿಂಗಳ ತನಕ ಪಿಕೆಟಿಂಗ ಮಾಡಬಾರದೆಂದು ತಿಳಿಸಿದ್ದಾರೆ.

ರಾಷ್ಟ್ರೀಯ ನಿಶಾನೆ ಕಿತ್ತು ಹಾಕಲಿಕ್ಕೆ

ಕಾಯಿದೆಯೇ ಇಲ್ಲ.

ರಾಜಮಹೇಂದ್ರಿಯಲ್ಲಿ ಪೋಲೀಸರನ್ನು ಸಾರ್ಜಂಟರೂ ೩|| ಪೋ|| ಸಾಹೇಬರೂ ಸೇರಿ ೫೦-೬೦ ಜನ ಸಶಸ್ತ್ರ ಪೋಲೀಸರೊಡನೆ ಪೇಟೆಗೆ ಹೋಗಿ, ಅಂಗಡಿಕಾರರು ಹಚ್ಚಿದ ರಾಷ್ಟ್ರೀಯ ನಿಶಾನೆಗಳನ್ನು ಭಂಗೀಭೂತ ಕಿತ್ತು ಹಾಕುತ್ತಾ ನಡೆದಿರಲು ಶ್ರೀ ವೈಶ್ಯ ವರ್ಣದವರಾಗಿ ಪ್ರತಿಷ್ಠಿತ ವಕೀಲರೂ, ಕಾಂಗ್ರೆಸದ ಅಧಿಕಾರಿಗಳೂ ಆದಂಥ ಶ್ರೀ. ಕ್ರೀ ನಿವಾಸಮೂರ್ತಿಯವರ ಮನೆಗೆ ಹೋಗಿ ಅವರ ರಾಷ್ಟ್ರೀಯ ನಿಶಾನೆ ಗಿಯುವಿಕ್ಕೆ ಹೇಳಿದರು. ಕೆಗಿಯುವ ಬೇಕೆಂದುದಾಗಿ ಎಲ್ಲಿ ಕಾಯಿದೆಯೆಂಬುದನ್ನು ತೋರಿಸಿರೆಂದು ವಕೀಲರು ಪ್ರಶ್ನೆ ಮಾಡಲು-ಇನ್ಸ್ಪೆಕ್ಟರು ವಿಸ್ಮಿತರಲ್ಲಿ ತೆಗೆಯಬಿದ್ದರು. ನಾವೇ ಬಂದು ಕಿತ್ತು ಹಾಕುತ್ತೇವೆಂದು ಹೇಳಿ ಹೋಗಿ ಹೋದವರು ತಿರುಗಿ ಬರಲೇ ಇಲ್ಲ. ಕಮಿಟಿಯ ಗಟ್ಟಳ್ಳವನ್ನು ಕಂಡ ಕೂಡಲೆ ಬೆಂಡಾಗಿ ಹೋದ ಪೋಲೀಸರು ಬೀದಿಗಳಲ್ಲಿ ಜನರ ತಲೆಯ ಮೇಲಿನ ಗಾಂಧೀ ಟೊಪ್ಪಿಗೆಗಳನ್ನು ಹಾರಿಸಿ, ಜನರ ಅಪಮಾನ ಮಾಡುತ್ತಿದ್ದಾರೆ.

ಕಾಶಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಮೇಲೆ

ರಾಷ್ಟ್ರೀಯ ನಿಶಾನೆ.

ಕಾಶಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಕಚೇರಿಯ ಮೇಲೆ ರಾಷ್ಟ್ರೀಯ ನಿಶಾನೆ ಹಚ್ಚುವ ಸಮಾರಂಭವಾಯಿತು. ಪುಣ್ಯಕ್ಷೇತ್ರವಾದ ಕಾಶಿಯು ಹಾಕಿಕೊಟ್ಟಂಥ ಮೇಲ್ಪಂಕ್ತಿಯನ್ನು ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿ, ವಿಜಾಪೂರ ಮತ್ತು ಕಾರವಾರ ಜಿಲ್ಲೆಗಳೂ ಅನುಸರಿಸುವವೆಂದು ಆಶಿಸುತ್ತೇವೆ.

ಶ್ರೀ ಹರೀಮಹಾಶಾಹೇಬರ ಅದ್ಭುತ ಶೋಧ.

ತಿಂದಿಗಿಡ ಕಡಿ [illegible] ಮಳೆಯಾಗುವದಿಲ್ಲವಂತೆ!!

ಡಿ|| ಡಿ|| ಆಫೀಸರರಾದ ಮಿ. ಹರೀಮಹಾಸಾಹೇಬರು ಬಾಗಲಕೋಟೆ ತಾಲೂಕ ಗ್ರಾಮಗಳಿಗೆ ಹೋಗಿ ಅವರ ಸಭೆಯ ವ್ಯಾಖ್ಯಾನ ಕೊಟ್ಟರು. ಮಳೆಗಾಲದಲ್ಲಿ ಗಿಡ ಇರದಿದ್ದರೂ ಇದೊಂದು ಕರ್ತವ್ಯವೆಂದು ತಿಳಿದಿದ್ದಾರೆ, ನೀವು ತಿಂದೀ ಗಿಡ ಕಡಿದರೆ- ಮಳೆಯೇ ಆಗುವದಿಲ್ಲೆಂದು ಪ್ರೌಢ ಉಪದೇಶ ಮಾಡಿದರು. ಗಿಡಗಳಿದ್ದಾಗ ವಿಜಾಪೂರ ಜಿಲ್ಲೆಯಲ್ಲಿ ಮಳೆಯೇಕೆ ಆಗಲಿಲ್ಲೆಂಬುದೂ ಮಲ್ನಾಡದಲ್ಲಿ ಗಿಡವಿಲ್ಲದಿದ್ದರೂ ಏಕೆ ಮಳೆಯು ಸುರಿಯುತ್ತದೆಂಬುದನ್ನು ಸಾಹೇಬರು ಧ್ಯಾನಕ್ಕೆ ತಂದುಕೊಂಡರೆ ಗಿಡ ಕಡಿದರೇ ಜಾಸ್ತಿ ಮಳೆಯಾಗುತ್ತದೆಂದು ತಿಳಿಯುವದು. ಅದ್ದರಿಂದ ತಿಂದೀ ಗಿಡಗಳನ್ನು ಕಡಿದರೇ ಮಳೆಯಾಗಿ, ಆ ಜಿಲ್ಲೆಯ ಬರದ ಭಯವು ತಪ್ಪುವದೆಂದು ವ್ಯಾಖ್ಯಾನ ಕೊಡುತ್ತಾ ಹೋಗಬೇಕೆಂದು ಸಾಹೇಬರಿಗೆ ಸೂಚಿಸುತ್ತೇವೆ.

ಬತ್ತಿದರೆ ಸರಿಯೆ!!

ಹುಟ್ಟ ಗಾಂಧಿಯ ಹೆಸರೇ ಬೇಡವಾಯಿತು.

ತಿರುಪೂರದಲ್ಲಿ ಹರಿಯುವ ಜಲದ ನದಿಯ ಮೇಲೆ ಮ್ಯುನಿಸಿಪಾಲಿಟಿಯವರು ಸೇತುವೆ ಕಟ್ಟಿ ಅದಕ್ಕೆ ಮಹಾತ್ಮರ ಹೆಸರಿಡಬೇಕೆಂದು ಗೊತ್ತು ಮಾಡಿ, ಇದನ್ನು ತೆರೆಯುವದಕ್ಕೆ ಅಲ್ಲಿಯ ಕಲೆಕ್ಟರರನ್ನು ಕರೆದರು. ಸ್ವಾಭಿಮಾನಿ, ಸ್ವದೇಶಾಭಿಮಾನಿಯಾದ ಇಂಗ್ರೇಜ ಕಲೆಕ್ಟರರು ಒಲ್ಲೆಂದರು. ಆಗ ಅವರು ಮದ್ರಾಸ ಇಲಾಖೆಯ ಮುಖ್ಯ ಮಂತ್ರಿಯಾದ ಸುಬ್ಬರಾಯನ್ನವರಿಗೆ ಆಮಂತ್ರಣ ಕೊಟ್ಟರು. ಇವರು ಹಿಂದೂ ಗೃಹಸ್ಥರಾದರೂ, ಸರಕಾರೀ ಕೆಲಸದ ಹುದ್ದೆಯನ್ನು ಸುತ್ತಿಕೊಂಡಿದ್ದರಿಂದ, ತಮಗೂ ಆಗುವದಿಲ್ಲೆಂದರು. ಆಗ ಮ್ಯುನಿಸಿಪಾಲಿಟಿಯವರು ತಮುಸ್ಕಾರ ಸತ್ಯಾಗ್ರಹ ಕಮಿಟಿಯ ಅಧ್ಯಕ್ಷರಾದ ಶ್ರೀ. ರಾಮಸ್ವಾಮಿಗೌಡರಿಂದ ಈ ಕಾರ್ಯ ನೆರವೇರಿಸಿದರು. ಹೀಗೆ ಗಾಂಧಿ ಹೆಸರಿನ ಜಯವಾಯಿತು.

ಸತ್ಯಾಗ್ರಹಕ್ಕಾಗಿ ಬ್ರಾಹ್ಮಣೇತರ

ಮಂತ್ರಿಯು ರಾಜೀನಾಮೆ!!

ನಾಗಪೂರದ ಮಂತ್ರಿಯಾದ ಬ್ಯಾರಿಸ್ಟರ ರಾಘವರಾವ ದೇಶಮುಖರು ಸತ್ಯಾಗ್ರಹದ ಸಲುವಾಗಿ ದಿವಾನಗಿರಿಗೆ ರಾಜೀನಾಮೆ ಕೊಟ್ಟರು. ಬ್ಯಾರಿಸ್ಟರ ರಾಘವರಾಯರು ಬ್ರಾಹ್ಮಣೇತರರಿದ್ದು, ಒಳ್ಳೇ ದೇಶಾಭಿಮಾನಿಯಾಗಿದ್ದಾರೆ. ಇವರ ರಾಜೀನಾಮೆಯು ಕಾಂಗ್ರೆಸ ಪಕ್ಷದ ಜಯವೇ ಸರಿ.

ಜಾಹೀರ ವಿನಂತಿ.

॥ ಸಂಘೇ ಶಕ್ತಿಃ ಕಲೌಯುಗೇ ॥

ಪ್ರಿಯ ಒಕ್ಕಲಿಗ ಬಾಂಧವರೇ!

ತಮ್ಮಲ್ಲಿ ವ್ಯಾಪಾರ, ಉದ್ಯೋಗಗಳ ಪ್ರಗತಿಯನ್ನುಂಟು ಮಾಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ, ಆಂಧ್ರ ದೇಶದ ಸುಪ್ರಸಿದ್ಧ ಕವಿಯೂ, ಮಹಾಸಾಧುವರ್ಯರೂ ಆದಂಥ, ನಮ್ಮ ಒಕ್ಕಲಿಗರ ಸಮಾಜದಲ್ಲಿ ಅವತರಿಸಿದಂಥ "ಮಹಾತ್ಮಾ ವೇಮಣ್ಣ" ನೆಂಬ ಮಹಾಯೋಗಿ ಗುರುವರ್ಯರ ಹೆಸರಿನಿಂದ,

"ದಿ ವೇಮಣ್ಣ ಕಂಪನಿ ಲಿಮಿಟೆಡ್"

ಎಂಬ ಸಾಮೀನ ದಲಾಲಿ ಅಂಗಡಿಯನ್ನು ಗದಗ ಶಹರದಲ್ಲಿ ಇದೇ ವರ್ಷ ಕಂಪನಿಯ ಕಾಯ್ದೆ ಪ್ರಕಾರ ರಜಿಸ್ಟರ ಮಾಡಿಸಿ ಸ್ಥಾಪಿಸಿರುವದು ತಮ್ಮೆಲ್ಲರಿಗೂ ಗೊತ್ತಿರಬಹುದು. ಹಾಗೂ ಕಂಪನಿಯು ವ್ಯಾಪ್ತಿಯ ದೊಡ್ಡ ದೊಡ್ಡ ಜಮೀನದಾರ ಮತ್ತು ವ್ಯಾಪಾರಸ್ಥರಾದ ಸುಶಿಕ್ಷಿತ ಜನರಿಂದಲೇ ನಡೆಯುವದು.

ಆದರೆ ಈ ಕಂಪನಿಯು ಕೇವಲ ಲಾಭದ ಉದ್ದೇಶದಿಂದಲೇ ಸ್ಥಾಪಿಸಲ್ಪಟ್ಟಿರುವದಿಲ್ಲ. ಒಕ್ಕಲಿಗರಲ್ಲಿ ವ್ಯಾಪಾರ, ವೈಗಾರಿಕೆ ಮೊದಲಾದ ಉದ್ಯೋಗಗಳ ಅಭಿರುಚಿಯನ್ನು ಹುಟ್ಟಿಸಿ ಮತ್ತು ನೈತಿಕ ಉನ್ನತಿಯನ್ನು ಬೆಳೆಯಿಸಿ ಒಕ್ಕಲಿಗರ ನಿಜವಾದ ಹಿತವನ್ನುಂಟು ಮಾಡುವದೇ ಈ ಕಂಪನಿಯ ಧ್ಯೇಯವು.

ಕಾರಣ ತಾವೆಲ್ಲರೂ ತಮಗೆ ಬೇಕಾಗುವ ಬಾರದಾನ, ಜಾಳಿಗೆ, ಹತ್ತಿಕಾಳು, ಬಿನುಗಿ ಮುಂತಾದ ಸಾಮಾನುಗಳನ್ನು ನಮ್ಮ ಮುಖಾಂತರವಾಗಿ ಖರೀದಿಸಿ ಕೊಂಡುಕೊಳ್ಳಬೇಕಾಗಿ ವಿನಂತಿಯು. ಸುಗ್ಗಿಯ ಕಾಲದಲ್ಲಿಯೇ ಒಕ್ಕಲಿಗರು ಹತ್ತಿ, ಕಾಳು, ಹುರುಳಿ ವಗೈರೆ ಮಾಲನ್ನು ಸ್ವಾಧೀನ ಮಾಡುವದು ಹೆಚ್ಚು ಲಾಭಕಾರಿಯಾಗಿದೆ. ಕಾರಣ ತಮಗೆ ಬೇಕಾದ ಮಾಲಿನ ಬದಲು ೧/೪ ರಕಮು ಮುಂಗಡವಾಗಿ ಕಳುಹಿಸಿಕೊಟ್ಟರೆ ಆಗಿನಿಂದ ಖರೀದಿ ಮಾಡಲಿಕ್ಕೆ ಕಳಿಸುವಲ್ಲಿ ಯೋಗ್ಯವಾದ ದರದಿಂದ ಇರುವದರಲ್ಲಿ ಬರುವದು. ಈ ಸುಸಂಧಿಯನ್ನು ವ್ಯರ್ಥ ಕಳೆದುಕೊಳ್ಳಬಾರದಾಗಿ ವಿನಂತಿ. ಮತ್ತು ತಾವೆಲ್ಲರೂ ತಮ್ಮ ಹಾಗೂ ತಮ್ಮ ಮಿತ್ರಮಂಡಳಿಯ ಹತ್ತಿ, ಅರಳೆ, ಗೋದಿ, ಜೋಳ, ಶೇಂಗಾ ವಗೈರೆ ಮುಂತಾದ ತರತರದ ಮಾಲನ್ನು ಕಳುಹಿಸಿ, ತಮಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಈ ಕಂಪನಿ ಅಂಗಡಿಗೆ ಉದಾರಾಶ್ರಯ ಕೊಡಬೇಕೆಂತಲೂ ಮತ್ತು ತಾವೂ ಲಾಭಹೊಂದಬೇಕೆಂತಲೂ ಇಚ್ಛಿಸುತ್ತೇವೆ.

ಗದಗ.	ತಮ್ಮ,
ಅಂಗಡಿ ನಂ ೧೭೨೨	ರಾ॥ ಸಾ॥ ಲಿಂಗನಗೌಡಾ ಪಾಟೀಲ, ಚೇರಮನ್ನ
ಕಾಟನ್ ಮಾರ್ಕೆಟ ರೋಡ	ಲಕ್ಷ್ಮಪ್ಪ ಗೋಣೆಪ್ಪ ಸಾಹುಕಾರ ಮೈದೂರ ಡೈರೆಕ್ಟರ
ವೆಂಕರಡ್ಡಿ ಕೃಷ್ಣರಡ್ಡಿ ಇನಾಮತಿ ಅಸುಂಡಿ, ಗದಗ	ದ್ಯಾವನಗೌಡಾ ಪಾಟೀಲ, ಪಾಮುಕೋರ್ಟಿ ಮ್ಯಾನೇ
ಹನಮಂತರಡ್ಡಿ ತಿಮ್ಮರಡ್ಡಿ ಕಾಲವಾಡ ವ್ಯಾಪಾರಸ್ಥ, ರಡ್ಡಿ ಬ್ಯಾಂಕ ಧಾರವಾಡ	ಧಾರವಾಡ

ಸೂಚನೆ:— ಮಾಲು ಕಳಿಸಿದಲ್ಲಿ ಮಾಲಿನ ಮೇಲೆ ಶೇಕಡಾ ೭೫ ರಷ್ಟು ರಕಮು ಆಗ ಕೊಡುವದರಲ್ಲಿ ಬರುವದು. ಹೀಗೆ ಒಪ್ಪು ಹಣಕ್ಕೆ ೧೦೦ಕ್ಕೆ ೧ ತಿಂಗಳಿಗೆ ೧ ರೂಪಾಯಿಯಂತೆ ಬಡ್ಡಿ ಕೊಡಬೇಕಾಗುವದು. ಕಂಪನಿಯವರು ಆಸಾಮಿಗಳ ಇಚ್ಛೆಯ ಪ್ರಕಾರ, ಒಳ್ಳೆ ದರದಲ್ಲಿ ಮಾರಿ ಇಲ್ಲವೆ ಗದಗ ಕಾಟನ್ ಮಾರ್ಕೆಟ ಅಸೋಸಿಯೇಶನ್ನದ ಮುಖಾಂತರವಾಗಿ ಲಿಲಾವಿನಿಂದ ಮಾರುವ ವ್ಯವಸ್ಥೆಯನ್ನು ಮಾಡುವರು. ವಿಶೇಷ ಮಾಹಿತಿಯನ್ನು ಕಂಪನಿ ಆಫೀಸಿನಲ್ಲಿ ಕೇಳಬಹುದು.

ಕರ್ನಾಟಕದ ಹಿಂದುಳಿದ ಸಮಾಜೋನ್ನತಿ ಸಂಘ ಧಾರವಾಡ

ಉದ್ದೇಶ

ಕರ್ನಾಟಕದೊಳಗಿನ ಹಿಂದುಳಿದ ಸಮಾಜಗಳ ಅಂದರೆ ವಿದ್ಯಾಭ್ಯಾಸ, ಸಂಘಟನೆ ಮೊದಲಾದವುಗಳಲ್ಲಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾಕ, ಕುರುಬ, ಸೋಮವಂಶೀಯ ಕ್ಷತ್ರಿಯ, ಬಡಸಾಲಿ ಕ್ಷತ್ರಿಯ, ನಾಮದೇವ ಶಿಂಪಿ, ವೈಶ್ಯ, ಪಂಚಾಳ, ದೇವಾಂಗ, ಮರಾಠಾ, ರಡ್ಡಿ, ವಾಲ್ಮೀಕಿ, ಸಾಳಿ, ಉಪ್ಪಾರ, ಕಬ್ಬೇರ, ಒಡ್ಡರ, ಗೊಲ್ಲ, ಈಳಿಗೇರ, ಮೊದಲಾದ ಸಮಾಜಗಳ ಮತ್ತು ಅಸ್ಪೃಶ್ಯ, ಶಿಕ್ಕಲಿಗಾರ ಲಮಾಣಿ ಮೊದಲಾದ ನಿಕೃಷ್ಟ ವರ್ಗಗಳ ಸಾರ್ವತ್ರಿಕ ಉನ್ನತಿಯು ಮುಖ್ಯವಾಗಿ ಈ ಎಲ್ಲ ಹಿಂದುಳಿದ ಸಮಾಜಗಳ ಸಾಂಪತ್ತಿಕ, ಸಾಮಾಜಿಕ, ನೈತಿಕ, ರಾಜಕೀಯ ಏಳ್ಗೆಯು ಈ ಸಂಘದ ಉದ್ದೇಶವು. ಸರ್ವ ಸುಧಾರಣೆಗೆ ಮೂಲಾಧಾರವಾದ ಶಿಕ್ಷಣ ಪ್ರಸಾರ ಮಾಡಿ, ಹಿಂದುಳಿದ ಸಮಾಜಗಳನ್ನು ಮುಂದಕ್ಕೆ ತರಬೇಕೆನ್ನುವದು ಈ ಸಂಘದ ಧ್ಯೇಯವು. ಸರಕಾರದ ಮತ್ತು ಮುಂದೆ ಹೋದ ಹಾಗೂ ಬಹು ಸಂಖ್ಯಾಕ ಸಮಾಜಗಳ ಸಹಾನುಭೂತಿ ಸಹಕಾರ ಸಹಾಯಗಳಿಂದ ಹಿಂದುಳಿದ ಸಮಾಜಗಳ ದುರವಸ್ಥೆ, ಅಡಚಣೆ, ಅನಾನುಕೂಲತೆ, ಕುಂದುಕೊರತೆಗಳನ್ನು ಹೋಗಲಾಡಿಸುವದು ಈ ಸಂಘದ ಧೋರಣವು.

ಕರ್ನಾಟಕದಲ್ಲಿಯ ಅಂದರೆ ಮುಂಬಯಿ ಪ್ರಾಂತದ ಕನ್ನಡ ಭಾಷೆ ನಡೆಯುವ ಧಾರವಾಡ, ವಿಜಾಪೂರ, ಬೆಳಗಾವಿ, ಕಾರವಾರ ಹಾಗೂ ಸೊಲ್ಲಾಪೂರ ಜಿಲ್ಲೆಯ ಬ್ರಿಟಿಶ ಜಿಲ್ಲೆಗಳಲ್ಲಿಯ ಹಾಗೂ ದೇಶೀಯ ಸಂಸ್ಥಾನಗಳಲ್ಲಿಯ ಅಲ್ಪ ಸಂಖ್ಯಾಕ ಹಿಂದುಳಿದ ಸಮಾಜಗಳ ೧೮ ವರ್ಷಕ್ಕೆ ಕಡಿಮೆಯಿಲ್ಲದ ಸ್ತ್ರೀ ಪುರುಷರು ಕೆಳಗೆ ಹೇಳಿದಂತೆ ಯಾವ ತರಗತಿಯ ದೇಣಿಗೆ ಅಥವಾ ವರ್ಗಣಿ ಕೊಟ್ಟು ಯಾವ ತರಗತಿಯ ಸಭಾಸದರಾಗಬಹುದು.

- **ಆಶ್ರಯದಾತರು:—** ಸಂಘದ ಫಂಡಿಗೆ ೧೦೦೦ ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ದೇಣಿಗೆಯನ್ನು ಕೊಡತಕ್ಕವರು.
- **ದಾತೃಗಳು.** ಸಂಘದ ಫಂಡಿಗೆ ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವರು.
- **ಆಜೀವ ಸಭಾಸದರು:—** ಸಂಘದ ಫಂಡಿಗೆ ೨೫ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ರಕಮನ್ನು ಒಮ್ಮೆಲೆ ಕೊಡುವವರು.
- **ಸಾಧಾರಣ ಸಭಾಸದರು:—** ಮೂರು ತರಗತಿ. ೧ ನೇ ತರಗತಿ:— ಕನಿಷ್ಠ ೫ ರೂ. ವಾರ್ಷಿಕ ವರ್ಗಣಿ
  - ೨ ನೇ ತರಗತಿ:— ಕನಿಷ್ಠ ೨ ರೂ. ವಾರ್ಷಿಕ ವರ್ಗಣಿ ಕೊಡುವವರು.
  - ೩ ನೇ ತರಗತಿ:— ಕನಿಷ್ಠ ೧ ರೂ. ವಾರ್ಷಿಕ ವರ್ಗಣಿ ಕೊಡುವವರು.
  - ೪ ನೇ ತರಗತಿ:— ಕನಿಷ್ಠ ೪ ಆಣೆ ವಾರ್ಷಿಕ ವರ್ಗಣಿ ಕೊಡುವವರು.

ಹಿತೈಷಿಗಳು, ಬಂಧುಭಗಿನಿಯರು ಆದಷ್ಟು ಶೀಘ್ರ ಸಂಘದ ಸೆಂಬರರಾಗಬೇಕೆಂದು ಒಕ್ಕೊರಲ ವಿನಂತಿಯು.

ದೇವನಗೌಡ ಲಿಂಗನಗೌಡ ಪಾಟೀಲ,
ಬಿ. ಎ. ಎಲ್ ಎಲ್. ಬಿ ಹಾಯಕೋರ್ಟ ವಕೀಲ, ಧಾರವಾಡ
ಸೆಕ್ರೆಟರಿ.

ಘಡಿಯಾಳಗಳು ಈ ಪತ್ರದ ವರ್ಗಣಿದಾರರಿಗೆ

ಅರ್ಧ ಕಿಮ್ಮತ್ತು

ಕತ್ತಲಲ್ಲಿ ಕಾಣುವ ರೇಡಿಯಂ ಲಿವ್ಹರ ವಾಚ

ಅಗ

ಮೊದಲಿನ ಕಿಮ್ಮತ್ತು. ರೂ. ೧೫



ಸದ್ಯದ ಕಿಮ್ಮತ್ತು. ರೂ. ೭॥

ಅವುಗಳ ಕಿಮ್ಮತ್ತಿನ ವಿನಾ ವ್ಹಿ. ಪಿ. ಖರ್ಚ

ಒಮ್ಮೆಲೇ ೩ ವಾಚ ತರಿಸಿದರೆ, ವ್ಹಿ. ಪಿ. ಮಾಫ ಒಮ್ಮೆಲೇ ೬ ವಾಚ ತರಿಸಿದರೆ ೧ ವಾಚ ಬಕ್ಷೀಸು. ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು. ಈ ವಾಚುಗಳು ಹಿಲಿಂಡರ ಅಥವಾ ಲಿವ್ಹರ ಇರುವವು.

ವಿಳಾಸ— ಸುಪೀರಿಯರ್ ವಾಚ ಕಂಪನಿ
ಪೋಸ್ಟ, ಬನವಾಸಿ (ಉ. ಕ.)

THE UNITED KARNATAK INSURANCE COMPANY LTD. DHARWAR

ಸುರಕ್ಷಿತ ಸ್ವದೇಶೀ ಕಡಿಮೆ ಕಿಮ್ಮತ್ತಿನ

ದಿ ಯುನಾಯಿಟೆಡ್ ಕರ್ನಾಟಕ ಇನ್‌ಶ್ಯೂರನ್ಸ ಕಂಪನಿ ಲಿಮಿಟೆಡ್ ಧಾರವಾಡ

(೧೯೧೩ನೇ ಇಸ್ವಿಯ ಹಿಂದುಸ್ಥಾನದ ಕಂಪನಿಯ ಏಳನೇ ಕಾಯ್ದೆ ಪ್ರಕಾರ ರಜಿಸ್ಟರಾಗಿದೆ)

ಡಾಯರೆಕ್ಟರರು

೧ ಚೋಳಗೇರಿ ವಾಸುದೇವ ರಾವ ಬಿ. ಎ. ಎಲ್ ಎಲ್. ಬಿ. ಸರಕಾರಿ ವಕೀಲ ಮತ್ತು ಶಬ್ಲಿಕ ಪ್ರಾಸಿಕ್ಯೂಟರ ಧಾರವಾಡ ಚೇರಮನ
೨ ಡಾ॥ ವಾಸುದೇವರಾವ ಶ್ರೀನಿವಾಸರಾವ ಭೂಮನಗಿ ಎಲ್. ಎಮ್. ಆ್ಯಂಡ ಎಸ್ ಗದಗ
೩ ಮಿ॥ ಶ್ರೀನಿವಾಸರಾವ ಕೆ. ಪ್ರಾಣೇಶರಾವ ಮುತಾಲಿಕದೇಸಾಯಿ ಬಿ. ಎ. ಅಣ್ಣಿಗೇರಿ
೪ ಮಿ॥ ರಾಮಚಂದ್ರ ವಾಸುದೇವ ಸಾವಕಾರ ನವಲಗುಂದ ಹಳೆ ಹುಬ್ಬಳ್ಳಿ
೫ ಮಿ॥ ಕೃಷ್ಣರಾವ ಲಕ್ಷ್ಮಣರಾವ ಕುಲಕರ್ಣಿ ಬಿ. ಎ. ಎಲ್ ಎಲ್. ಬಿ. ವಕೀಲ ಗದಗ
೬ ಮಿ॥ ರಾಘವೇಂದ್ರರಾವ ಬಾಳಕೃಷ್ಣರಾವ ಗಿಡಮಡ ಬೈಲಹೊಂಗಲ
೭ ಮಿ॥ ಅನಂತರಾವ ವೆಂಕಟೇಶ ... ಬಿ. ಎ. ಎಲ್ ಎಲ್. ಬಿ. ವಕೀಲ ಹುಬ್ಬಳ್ಳಿ
೮ ಮಿ॥ ರಾಮರಾವ ... ಬಿ. ಎ. ಎಲ್. ಎಲ್. ಬಿ. ವಕೀಲ ಧಾರವಾಡ
೯ ಮಿ॥ ಅಬ್ದುಲ ಕರೀಮ ಅಮೀನಸಾಬ ಹಣಗಿ ವ್ಯಾಪಾರಿ ಗದಗ

ಕರ್ನಾಟಕದಲ್ಲಿ ಹುಟ್ಟಿದ ಇನ್‌ಶ್ಯೂರನ್ಸ ಕಂಪನಿಯೆಂದರೆ ಇದೇ ಮೊದಲನೇದು. ಈ ಕಂಪನಿಯ ಡಾಯರೆಕ್ಟರರೂ ಮತ್ತು ಕೆಲಸ ನಡಿಸುವವರೂ ಕನ್ನಡಿಗರೇ ಆಗಿರುತ್ತಾರೆ. ಪರದೇಶೀ ಕಂಪನಿಗಳಿಗೆ ಸಾವಿರಾರು ರೂಪಾಯಿ ಪ್ರೀಮಿಯಮ್ಮಗಳ ರೂಪದಿಂದ ಹಣವನ್ನು ಹೊರಗೆ ಕಳಿಸದೆ ಕರ್ನಾಟಕದಲ್ಲಿಯೇ ಹುಟ್ಟಿ ಹೆಸರು ಪಡೆಯಬೇಕೆಂಬ ಈ ಕಂಪನಿಗೆ ಸಹಾನುಭೂತಿ ಮತ್ತು ತೋರಿಸುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು.

ಕಂಪನಿಯ ಕಾಗದಪತ್ರಗಳು ಕನ್ನಡದಲ್ಲಿ ಇರುತ್ತವೆ ಮತ್ತು ವಿಮೆ ಇಳಿಸುವ ಕೆಲಸವು ಎಪ್ರಿಲ ತಿಂಗಳ ೧ನೇ ತಾರೀಖಿನಿಂದ ಪ್ರಾರಂಭವಾಗಿರುವದು. ಕೆಳಗಿನ ನಮ್ಮ ಮಾದರಿಯನ್ನು ನತ್ತು ವಿಮೆಯ ಕೆಲಸವನ್ನು ತಂದು ಕೊಡುವ ಏಜಂಟರು ದೊಡ್ಡದೊಡ್ಡ ಸ್ಥಳಗಳಲ್ಲಿ ಏಜಂಟರು ಬೇಕಾಗಿರುವರು. ಏಜನ್ಸಿ ಫಾರಮ್ಮಗಳು ಮತ್ತು ಪ್ರಸ್ಪೆಕ್ಟಸ್ ವಿಪುಲ ಕಮಿಶನದ ದರಗಳು ಲಾಭಕಾರವಾಗಿರುವವು. ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

K. L. Huilgolkar.
ಸೆಕ್ರೆಟರಿ
ಯು. ಕ. ಇ. ಕ. ಲಿ. ಧಾರವಾಡ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

- **ವ್ಯವಹಾರದ ವೇಳೆ:—** ಸೋಮವಾರದಿಂದ ಶುಕ್ರವಾರದ ವರೆಗೆ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೧ ರಿಂದ ೧ ರ ವರೆಗೆ
- **ಚಾಲೂ ಖಾತೆಗಳು:—** ಶುಕ್ರವಾರ ಬಡ್ಡಿ ಕೊಡಲ್ಪಡುವದು
- **ಸೇವಿಂಗ್ಸ ಬ್ಯಾಂಕ:—** ಒಂದು ರೂಪಾಯಿಯಿಂದ ತೆಗೆಯಲ್ಪಡುವದು ಬಡ್ಡಿ ದರ ೩ ರೂ.
- **ಮುದತಿ ಠೇವುಗಳು.—** ಒಂದು ವರ್ಷದ ಮುದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡಿ ...
- **ಸಾಲ.—** ಸರಕಾರಿ ಪ್ರಾಮಿಸರಿ ನೋಟುಗಳ ಮೇಲೆ ಸಾಲವನ್ನು ಕೊಡಲ್ಪಡುವದು. ಅಡ್ಡೇದಾರ ಉ. ಹ. ಹತ್ತಿ ಮತ್ತು ಧಾನ್ಯಗಳ ಆಧಾರದ ಮೇಲೆ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮತ್ತು ... ಶೇರುಗಳ ಖರೀದಿ ವಿಕ್ರಿ ... ಅಥವಾ ಕಳಿಸಿಕೊಡುವದರಲ್ಲಿಯೂ ... ಕೆಲಸಕ್ಕಾಗಿ ... ಅವುಗಳ ಬಡ್ಡಿ ವಸೂಲಿ ಮಾಡಿಕೊಡುವದು. ವ್ಯಾಪಾರೀ ಹುಂಡಿಗಳನ್ನು ಕೊಂಡುಕೊಳ್ಳುವದರಲ್ಲಿಯೂ ಮತ್ತು ಅವುಗಳನ್ನು ವಸೂಲು ಮಾಡುವದಕ್ಕೂ ಬರುವದು.

ಬ್ಯಾಂಕಿಗೆ ಹಿಂದುಸ್ಥಾನದ ಮುಖ್ಯ ಸ್ಥಳಗಳಲ್ಲಿ ಏರ್ಪಾಟು ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು. ವಿಶೇಷ ಮಾಹಿತಿಯನ್ನು ಪತ್ರದ್ವಾರಾ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಡ.
ಏಜಂಟರು.

ತಿಳಿಯದೇ ಧಾತುಕ್ಷಯವಾಗಿ ಸ್ತ್ರೀ ಪುರುಷರಲ್ಲಿ ಆದ ದೌರ್ಬಲ್ಯದಿಂದ ಮನ್ಯಾದಲ್ಲಿಯೇ ನಿರಾಶರಾಗಿ ಸಂಸಾರ ಸುಖದ ಬಗ್ಗೆ ನಿರಾಶರಾಗಿ ಹುಟ್ಟುತ್ತಾರೆ. ಇಂಥ ಮನುಷ್ಯರ ಧಾತುಕ್ಷಯವನ್ನು ಹೋಗಿಸಿ, ಪೂರ್ಣ ಪುರುಷತ್ವವನ್ನು ತಂದು ಕೊಡತಕ್ಕದ್ದು. ವೈದ್ಯರಾಜ ಪಂ. ಕೇಶವ ಶಾಸ್ತ್ರೀ ನಿಂಬಜಕರ ಇವರ,

ಶಕ್ತಿಶಾಂತಿ ವರ್ಧಕ ಆರೋಗ್ಯ ಕೊಡುವ

ಅಮೃತಸಿಂಧು.

ಆಯುರ್ವೇದದಲ್ಲಿ ಹೇಳಿದ ವನಸ್ಪತಿಗಳಿಂದಲೇ ಈ ಪವಿತ್ರ ಹಾಗೂ ಶೀಘ್ರಗುಣಕಾರಕ ಔಷಧವು ಮಾಡಲಾಗಿದೆ. ಇದರ ಉಪಯೋಗದಿಂದ ಶರೀರದ ಜರ್ಜರತೆ, ನಿರ್ಬಲ ಶರೀರ, ನಿರುತ್ಸಾಹ ಮನಸ್ಸು, ಪುರುಷತ್ವಹೀನ ದೇಹ, ಅನಿಶ್ಚಿತ ಸ್ವಭಾವ, ನಿಸ್ತೇಜಸ್ಸು, ಹೇಡಿತನವನ್ನೂ ಅಂಜುಬುರುಕತನ, ಅಕಾಲದ ವೃದ್ಧಾವಸ್ಥೆ, ನಿಯಮಿತ ಸ್ವಪ್ನದೋಷ, ಆಲಸ್ಯ, ಕಣ್ಣು ಕೈಕಾಲುಗಳು ಉರಿಯೋದು, ಉರಿಮೂತ್ರ, ಇಂದ್ರಿಯದ ಉತ್ತೇಜನ, ಅಗ್ನಿಮಾಂದ್ಯ, ನಿದ್ರಾನಾಶ, ಮಲಾವರೋಧ, ನೆನಪು, ನೋವು ಸೆಳೆತ, ಟೊಂಕದನೋವು, ಎದೆ ನೋವು, ಮೂತ್ರರೋಗ, ಮೊದಲಾದ ಎಲ್ಲ ಬೇನೆಗಳು ನಾಶಹೊಂದಿ, ರಸ, ರಕ್ತ, ಅಸ್ಥಿ, ಮಜ್ಜಾ, ವೀರ್ಯ ಮೊದಲಾದ ಸಪ್ತ ಧಾತುಗಳು ವೃದ್ಧಿಯಾಗಿ ಇಂದ್ರಿಯದ ಶಕ್ತಿಯು ಸಜೀವವಾಗಿ ದೇಹದಲ್ಲಿ ಶಕ್ತಿಯು ಹುಟ್ಟುತ್ತದೆ. ಇದರಿಂದ ನಿಜವಾದ ಸಂಸಾರಸುಖವು ಸಿಗುತ್ತದೆ. ಹೆಂಗಸರ ಮುಟ್ಟಿನ ಸೆರಗು, ಕೆಂಪು, ಬಿಳಿಪು ಮೊದಲಾದ ಸಂತತಿಗೆ ಬಾಧಕವಾದ ಗರ್ಭಾಶಯದ ಎಲ್ಲ ವಿಕಾರಗಳು ಹೋಗಿ ಪ್ರತ್ಯಕ್ಷ ಸಂತತಿಯು ಸಿದ್ಧಿಸುತ್ತದೆ. ಈ ಅಮೃತಸಿಂಧುವನ್ನು ನಸಿಕಸಲ್ಲಿ ಅರ್ಧತೋಲೆ ಮತ್ತು ಸಂಜೆಗೆ ಅರ್ಧ ತೊಲೆ ತೆಗೆದುಕೊಂಡು ಮೇಲೆ ಆಕಳ ಅಥವಾ ಎಮ್ಮೆಯ ಹಾಲನ್ನು ೧೦ ರಿಂದ ೨೦ ತೊಲೆ ಕುಡಿಯುವದಕ್ಕೆ ತೆಗೆದುಕೊಳ್ಳಬೇಕು. ಹತ್ತು ದಿವಸಗಳವರೆಗೆ ಸಾಕಾಗುವ ೧ ಬಾಟಲಿಗೆ ೧-೪-೦ ರೂ. ೪ ಬಾಟಲಿಗಳಿಗೆ ೪ ರೂ. ೧೨ ಬಾಟಲಿಗಳಿಗೆ ೧೧ ರೂ. ಹಾಗು ಒಂದು ಬಾಟಲಿ ಪ್ರತ್ಯೇಕ. ಅಂಚೆ ಹಾಗು ಪ್ಯಾಕಿಂಗ ವೆಚ್ಚಗಳು ಬೇರೆ.

ಅಮೃತಸಿಂಧು ಡಿಪೋ
(ನಿಪ್ಪಾಣಿ ಜಿ.

ವಿವಿಧ ವಿಷಯಗಳು

ಮದ್ರಾಸದಲ್ಲಿ ಬ್ರಾಹ್ಮಣೇತರರ ಒಂದು ಕ ಮಿಟಿ ಕೂಡಿತ್ತು. ಬ್ರಾಹ್ಮಣರನ್ನು ತಮ್ಮ ವ ರ್ಗದಲ್ಲಿ ಸೇರಿಸಿಕೊಳ್ಳಬೇಕು, ಬ್ರಾಹ್ಮಣ-ಬ್ರಾಹ್ಮ ಣೇತರರೆಂಬ ಭೇದ ಸಾಕೆಂಬ ಠರಾವು ಮಾಡಿದ್ದಾರೆ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಒಬ್ಬನು ಹಿರಿಯ ನಾಗಲಾರನು. ಗುಣಕರ್ಮದ ಯೋಗ್ಯತೆಯ ಪ್ರ ಕಾರ ಆತನ ಜ್ಞಾನದ ಉಪಯೋಗ ಮಾಡಿಕೊಳ್ಳ ಬೇಕೆಂದು ಬ್ರಾಹ್ಮಣೇತರರ ಮತದಲ್ಲಿ ಈಗ ಬದ ಲಾಗಿರುತ್ತದೆ.

ಮದ್ರಾಸ ಇಲಾಖೆಗೆ ಸೇರಿದ ವೆಲ್ಲೂರ ಮದಲ್ಲಿ ಶ್ರೀ. ಹರಿಶಾಸ್ತ್ರಿ ಎಂಬ ಸತ್ಯಾಗ್ರಹಿಗಳು [illegible] ರಿನ ಕೇಟ ಕಿತ್ತಬೇಕೆಂದು ಜನರಿಗೆ ಉತ್ತೇಜನ ಕೊಟ್ಟರೆಂಬ ಆರೋಪ ಹೊರಿಸಿ, ಮ್ಯಾಜಿಸ್ಟ್ರೇಟರು ಇವರಿಗೆ ಎರಡು ವರ್ಷಗಳ ಶಿಕ್ಷೆ ವಿಧಿಸಿದರು.

ಮುಂಬಯಿಯಲ್ಲಿ ಇಂಗ್ಲಿಷರ ವಿಲಾಯತಿಯ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡು ವ ಸ್ವಯಂಸೇವಕರ ಬಂದೋಬಸ್ತು ಮಾಡಲು ಕ ಪ್ಪು ಮತ್ತು ಕೆಂಪು ಶಿಪಾಯರು ನಿಲ್ಲುವರು. ದೇ ಶೀ ಶಿಪಾಯರು ತಮ್ಮವರ ಮೇಲೆ ಅನ್ಯಾಯ [illegible] ದರಿಂದು ಇಂಗ್ರೇಜಿ ಶಿಪಾಯರೇ ಹೊಡೆಯುವ ಬ ಡೆಯುವ ಕೆಲಸ ಮಾಡುವರು. ದೇಶೀ ಶಿಪಾಯ ರು ನಿರುದ್ಯೋಗಿಗಳಿಂತ ಬ್ರಾಹ್ಮಣರ [illegible] ಕೊಡುತ್ತಾ ಕೂಡ್ರುವರು. ಇದೊಂದು ಸೇವೆ ಗದ ನೋಟವೇ ಸೈ !!

ಬಂಗಾಲಕ್ಕೆ ಸೇರಿದ ದಿನಾಜಪೂರದಲ್ಲಿ ಒಬ್ಬ ನು ಒಂದು ಸಭೆಯಲ್ಲಿ ಕಷ್ಟಮಾಡಿಸಿಕೊಳ್ಳಲಿಕ್ಕೆ ಹೋದನು. ಅರ್ಧಗಣ್ಟೆ ಬೋಳಿಸಿದ ಬಳಿಕ, ನ ಪಿಲಿಸ ಲಕ್ಷ್ಯವು ಆತನ ಅರಿವೆಯ ಮೇಲೆ ಬಿ ದ್ದಿತು. ಕೂಡಲೆ ನಾವಲಿಗನು ನಿನ್ನ ಅರಿವೆ ಪರ ದೇಶಿಯದಾಗಿದೆ ಮುಂದೆ ಬೋಳಿಸುವದಿಲ್ಲೆಂದು ಹೇಳಿ ಅರ್ಧ ಹಜಾಮತಿಯಿಂದಲೇ ಆ ಮನುಷ್ಯನ ಹೊ ರಗೆ ಕಳಿಸಿದನು.

ನಾಶಿಕದಲ್ಲಿ ಶ್ರೀ ಭಗವಾನ್ [illegible] ಬೋರ್ಡ [illegible] ಮಾಡುತ್ತಿದ್ದ [illegible] ಪಿಕೆಟಿಂಗ ಮಾಡುತ್ತಿದ್ದ [illegible] ದ್ದಾನೆ ಈತನ ನೇತೃತ್ವದಲ್ಲಿ [illegible] ಸ್ವ ಯಂಸೇವಕರ ಮೆರವಣಿಗೆ [illegible] ಮತ್ತು ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರಾದ ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ [illegible] ಪಿಕೆಟಿಂಗ ಪ್ರಾರಂಭಿಸುವ ಠರಾವು [illegible]

ನಾ ಪೂರದ ಪ್ರತ್ಯೇಕ ಗೃಹಸ್ಥರಾದ [illegible] [illegible] ಶ್ರೀ [illegible] [illegible]

ನಾಗಪೂರದ ಕ್ರಿಶ್ಚನರ ಕೌನ್ಸಿಲ [illegible] ಶ್ರೀ [illegible] [illegible]

ಕಲ್ಕತ್ತೆಯಲ್ಲಿ [illegible] ಪೊಲೀಸರು ಸ್ವಯಂಸೇವಕರ ಮೇಲೆ ನಡೆಸಿದ ಹಿಂಸೆ [illegible] ಸನ್ನ ನೋಡಿ, ಸಕಲ ಮಾರವಾಡಿ, ಜವಾ ಹಾರ ಕೆಲಸಕ್ಕೆ ರಾಜೀನಾಮೆ ಕೊಟ್ಟನು.

ಪುಣೆ ಮ್ಯುನಿಸಿಪಾಲಿಟಿಯವರು ಗಡಂಗಗಳ ಮುಂದಿನ ಪಿಕೆಟಿಂಗಕ್ಕೆ ಸಹಾಯ ಮಾಡಬೇಕೆಂಬ ಠರಾವು ಪಾಸ ಮಾಡಿದ್ದಲ್ಲದೆ, ಈ ಬಗ್ಗೆ ದಿವಾನರ ಕಡೆಗೆ ಒಂದು ಶಿಷ್ಟಮಂಡಳವನ್ನೂ ಕಳಿಸಬೇಕೆಂದು ಗೊತ್ತುಮಾಡಿದ್ದಾರೆ. ಪ್ರತಿಯೊಂದು ವಿಷಯ [illegible] ಆದಕ್ಕೆ ಪುಣೆ [illegible]

[illegible]

[illegible]

ಇಂಗ್ಲಂಡದಲ್ಲಿ ಇದೀಗ ಕೂಡಿರುವ ಪಂಕ್ತಿ ನ [illegible] "[illegible] ಹಿಂದುಸ್ಥಾನಕ್ಕೆ ಹೋಗಬೇಕಿಲ್ಲೆಂದೂ, [illegible] " ಎಂದು [illegible]

[illegible]

[illegible]

ಮುಂಬಯಿಯಲ್ಲಿ ಯುರೋಪಿಯನ್ನರ ಅಂಗ ಡಿಗಳ ಮುಂದಿನ ಪಿಕೆಟಿಂಗದ ಗೊಂದಲದಲ್ಲಿ ಗುಪ್ತ ಪೊಲೀಸರಾತನು ಒಬ್ಬ ಸ್ವಯಂಸೇವಕನನ್ನು ಹೊಡೆ ಸಿಕೊಂಡು ಎಚ್ಚರತಪ್ಪಿ ಬಿದ್ದನು.

ಮದ್ರಾಸದಲ್ಲಿ [illegible] ಕೆರೆಗೆ ಬೆಂಕಿ ಹತ್ತಿ ಭಯಂಕರವಾಗಿ ಉರಿಯುತ್ತಿ ದ್ದಿತೆಂದೂ [illegible] ಲ್ಲ ದಹಿಸುವದೆಂದು ಜಂತಾಕ್ರಾಂತರಾಗಿದ್ದಾರೆ.

[illegible] ಒಂದು ಕೆ ಯ್ಯಲ್ಲಿ [illegible] ಹಿಡಿದಿರುವ ತಹಶೀಲ ಆಪಲ [illegible] ಶ್ರೀ ಕೇಳ ಕರರು ಜಾಹೀರಮಾಡಿದ್ದಾರೆ.

[illegible]

ಚಿಕ್ಕೋಡಿ [illegible] ತಾಲೂಕ ಚಿಕ್ಕೋಡಿ [illegible] [illegible]

ದೇವಗಿರಿಯಲ್ಲಿ [illegible]

[illegible]

THE ANKLAGI BANK LTD

Head Office

Kamanlatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT.

Dharwar 3-1-1937 } K. B. ANKALGI Managing Director.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿ [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible]

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible]

ಈ ಬ್ಯಾಂಕಿನಲ್ಲಿ [illegible]

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಧಾರವಾಡದಲ್ಲಿ ಮೋಟಾರ ನಡಿಸುವದನ್ನು ಕಲಿಯುವ ಸೋಯಿಯು



ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಶಿಕ್ಷಣ ಸಂಸ್ಥೆ!

[illegible]

ವೈಸರಾಯ ಊದುಬತ್ತಿ

[illegible]

ಮಾಮಲೇದಾರರಿಗೂ ರೈತರಿಗೂ ಸಂಭಾಷಣೆ. ಮಾಮಲೇದಾರರ ಬಾಯಿ ಬಂದಾಯಿತು.

ಪುಣೆ ಜಿಲ್ಹೆಗೆ ಸೇರಿದ ಸಂಗಮನೇರ ತಾಲೂಕಿನ ರೈತರು ವನಗಾವಲದ ಕಾಯದೆಭಂಗವಮಾಡುವ ಪೂರ್ವ ಸಿದ್ಧತೆ ಮಾಡಿದ್ದಾರೆ ಇವರು ಹೀಗೆ ಮಾಡಬಾರದೆಂದು ಉಪದೇಶ ಮಾಡಲು ಮಾಮಲೆದಾರರು ರೈತರ ಸಭೆ ಕೂಡಿಸಿದರು. ಸರಕಾರದ ಜಂಗಲ ನಿಯಮಗಳು ಬಹಳ ದುಷ್ಟ ಇವೆ. ಅಡವಿಯಲ್ಲಿ ಬಿದ್ದ ಒಣ ಕಟ್ಟಿಗೆ ತಂದರೂ ನಮಗೆ ಹಸಿ ಗಿಡ ಕಡಿದರೆಂದು ೫೦ ರೂಪಾಯಿ ತನಕ ದಂಡ ಶಿಕ್ಷೆಯಾಗುತ್ತದೆಂದು ರೈತರು ಹೇಳಲು, ಮಾಮಲೇದಾರರು "ಅಡವಿಯಲ್ಲಿ ಒಣ ಕಟ್ಟಿಗೆಯೇ ಇಲ್ಲ; ಎಲ್ಲವೂ ಹಸೀ ಇರುತ್ತವೆಂದು" ಉತ್ತರ ಕೊಡಲು- ಒಬ್ಬ ರೈತನು ಎದ್ದುನಿಂತು, "ನೀವು ಅಡವಿಯನ್ನು ನೋಡೇ ಇಲ್ಲ. ನನಗೆ ಈಗ ಹೇಳಿರಿ. ಒಣ ಕಟ್ಟಿಗೆಯ ೫೦ ಹೊರೆಗಳನ್ನು ತಂದು ನಿಮ್ಮ ಮುಂದೆ ಹಚ್ಚುವ" ವೆನ್ನಲು ರಾವಸಾಹೇಬರ ಬಾಯಿ ಬಂದಾಯಿತು. ಮತ್ತು ಇವರು ರೈತರನ್ನು ಬೆದರಿಸಿಕೊಳ್ಳುವ ಕಾಲ ಹಿಂದಾಯಿತು.

---

೨೧ ವರ್ಷಗಳ ನಂತರ ಕುಂಭಕರ್ಣನು ಎಚ್ಚತ್ತನು.

ವರ್ಹಾಡ ಪ್ರಾಂತಕ್ಕೆ ಸೇರಿದ ಯವತಮಾಳದಲ್ಲಿ ಜಗದೇವವೆಂಬ ಹೆಸರಿನ ಮುದ್ರಾಲಯವೊಂದು. ಇದರ ಒಡೆಯನು ೧೯-೯ರಲ್ಲಿ ಮಡಿದನು ಆಗಿನಿಂದ ಅವರ ಮಗನು ಹೊಸ ಡಿಕ್ಲೇರೇಶನ ಮಾಡದೆ, ಮುದ್ರಾಲಯವನ್ನು ನಡಿಸುತ್ತಾ ಬಂದನು ಹೊಸ ಆರ್ಡಿನನ್ಸದ ಪ್ರಕಾರ ಜಿಲ್ಹಾ ಅಧಿಕಾರಿಯು ಈತನಿಗೆ ಡಿಕ್ಲೇರೇಶನ ಮಾಡಲಿಕ್ಕೆ ಹೇಳಿದರು ಮ್ಯಾಜಿಸ್ಟ್ರೇಟರ ಮುಂದೆ ನಿಂತ ಕೂಡಲೆ ಈತನಿಗೆ ೬೦೦ ರೂಪಾಯಿಗಳ ಜಾಮೀನು ಕೊಡಲಿಕ್ಕೆ ಹುಕುಮು ಮಾಡಿದರು, ಅಂತೂ ೨೧ ವರ್ಷಗಳ ನಂತರ ಆರ್ಡಿನನ್ಸ ಜಿಲ್ಹಾಧಿಕಾರಿಗಳ ಕಣ್ಣು ತೆರೆಸಿ, ಮುದ್ರಾಲಯವನ್ನು ತನ್ನ ಭಕ್ಷ್ಯಸ್ಥಾನದಲ್ಲಿ ಹಾಕಿಕೊಂಡಿತು.

ಜೋಕೈಸಂಥ ಮ್ಯಾಜಿಸ್ಟ್ರೇಟ !!!

೭೦ ವರ್ಷದ ಕುರುಡನಿಗೆ ಎರಡು ವರ್ಷದ ಶಿಕ್ಷೆ

ಬಿಜವಾಡದಲ್ಲಿ ೭೦ ವರ್ಷ, ಕಣ್ಣು ಕುರುಡ, ಟೊಂಕ ಬಾಗಿದ್ದು, ಕೈಯಲ್ಲಿ ಬಡಿಗೆ ಹಿಡಕೊಂಡು ಧಫೇದಾರನ ಆಶ್ರಯದಿಂದ ಕೋರ್ಟಿನಲ್ಲಿ ತತ್ತರಿಸುತ್ತ ಬಂದ ಮುದಕನಿಗೆ ದಯಾಂತಃಕರಣದ ದ್ರವ ಹುಟ್ಟುತ್ತಿರುವ ಮ್ಯಾಜಿಸ್ಟ್ರೇಟರು ಎರಡು ವರ್ಷದ ಶಿಕ್ಷೆ ವಿಧಿಸಿದರು, ಶಿಕ್ಷೆಯ ಕಾರಣವು ಕಳವು, ದರೋಡೆಯಲ್ಲ. ಉಪ್ಪಿನ ಕಾಯದೆ ಮುರಿಯಿರೆಂದು ಸಭೆಯಲ್ಲಿ ಮಾತಾಡಿದನೆಂದು !!

ಖಾದೀ ಬಟ್ಟೆಗಾಗಿ ಸಾಹೇಬನೂ ಹೊಡೆತ ತಿಂದನು

ಮುಂಬಯಿಯಲ್ಲಿ ಯುರೋಪಿಯನ್ನ ಸಾರ್ಜಂಟರು ಪಿಕೆಟಿಂಗ ನೋಡುತ್ತಾ ನಿಂತ ಜನರನ್ನು ಹೊಡೆಯುವಾಗ ಅಮೇರಿಕೆಯ ರಸೆಲನೆಂಬ ಸಾಹೇಬನೂ ಇದ್ದನು. ಈತನು ಖಾದಿಯಂತೆ ತೋರುವ ಗಿರಣಿಯ ಬಿಳೀ ಗಿಂಟಿನ ಅರಿವೆ ತೊಟ್ಟಿದ್ದನು ಸಾಹೇಬನು ಖಾದಿಗೆ ಉತ್ತೇಜನ ಕೊಟ್ಟನೆಂಬ ದ್ವೇಷದಿಂದ ಸಾರ್ಜಂಟರು ಈತನ ಪೂಜಾ ಸಮಾಚಾರ ತಕ್ಕೊಂಡರು.

ವಕೀಲರಿಗೆ ಜಡ್ಜ ವಿ. ಹುಲಕೋಟಿಯವರ ನೋಟೀಸು.

ಸೊಲ್ಲಾಪೂರದಲ್ಲಿ ಕೋರ್ಟ ಸುಟ್ಟು ಅದರ ಕೂಡ ಕಾಗದ ಪತ್ರಗಳೂ ಬೂದಿಯಾದವಷ್ಟೇ, ವಕೀಲರು ಕೂಡದೆ ತಂವ್ವ ಅಪೀ ಮಾಡದಂಥ ಪಕ್ಷಕಾರರು, ಕೋರ್ಟಿನಲ್ಲಿ ಹಣ ತುಂಬಿ ಪಾವತಿ ಪಡಕೊಂಡವರು ಹುಕುಮುನಾಮೆ ಪಡಕೊಂಡವರು ಇವರೇ ಮುಂತಾದವರು ಕೋರ್ಟಿನಲ್ಲಿ ತಮ್ಮ ತಮ್ಮ ಕಾಗದ ಪತ್ರಗಳ ಪುರಾವೆ ತೋರಿಸಿ, ಕೆಲಸಗಳ ಸಾಬೀತು ಮಾಡಬೇಕೆಂದು ಪಕ್ಷಕಾರರನ್ನುದ್ದೇಶಿಸಿ, ಜಡ್ಜ ವಿ ಹುಲಕೋಟಿಯವರು ನೋಟೀಸು ಪ್ರಸಿದ್ಧ ಮಾಡಿದ್ದಾರೆ

ಡಿಪುಟಿ ಪೋಲಿಸಸಾಹೇಬರಿಗೆ ಕರೇ ನಿಶಾನೆಯ ಬಹುಮಾನ.

ಧಾರಾಸಾನದಲ್ಲಿ ಸತ್ಯಾಗ್ರಹಿಗಳ ಮೇಲೆ ಕ್ರೂರ ಕೃತ್ಯಗಳು ಹೆಸರಾಗಿದ್ದ ಅಂತಿಯಾ ನಾಮದ ಪಾರ್ಸಿ ಪೋಲಿಸ ಡಿಪುಟಿಸಾಹೇಬರು ೮ ನೇ ಜಿಲ್ಹೆಗೆ ಸೇರಿದ ಬೋರ್ಡಿ ಗ್ರಾಮದಲ್ಲಿರುವ ತಮ್ಮ ಮಾವ ಡಾಕ್ಟರ ಪರ ಬೇಹರಾಮಜಿ ನಾನಾವಟಿಯವರ ಮನೆಗೆ ಹೋದರು ಇವರು ಬಂದ ವರ್ತಮಾನ ಕೇಳಿದ ಕೂಡಲೆ, ಊರ ಜನರು ಕರೇ ನಿಶಾನಗಳ ಮೆರವಣಿಗೆ ತೆಗೆದು, ಅವರ ಮನೆಯ ಮುಂದೆ ದುತ್ತೆಂದು ನಿಂತರು. ಮಾವನಿಗೆ ಅಳಿಯನ ಸತ್ಕಾರಕ್ಕಾಗಿ ಬೇಕಾಗುವ ಹಾಲು ಬೆಣ್ಣೆ ಮೊದಲು ಮಾಡಿಕೊಂಡು, ಯಾವ ಪದಾರ್ಥವೂ ದೊರೆಯದಂತೆ ಕಟ್ಟು ಮಾಡಿರು. ಸಾಯಂಕಾಲದಲ್ಲಿ ಮತ್ತೊಂದು ಮೆರವಣಿಗೆ ತೆಗೆದು, ಸಭೆ ಮಾಡಿ ಅಂತಿಯಾಸಾಹೇಬರ ಸಮಾಚಾರ ತಕ್ಕೊಂಡರು. ಆಗೋರ್ವ ಪಾರ್ಸಿಗೃಹಸ್ಥನು ನಾವು ಪಾರ್ಸಿ ಜನರು ಸತ್ಯಾಗ್ರಹ ಚಳವಳಿಗೆ ಪೂರ್ಣ ಅನುಕೂಲರಾಗಿದ್ದೇವೆಂದು ಭಾಷಣ ಮಾಡಿದನು.

ಸ್ತ್ರೀಯರು ಯಾವ ಯಾವ ಅರಿವೆ ಕೊಳ್ಳಬಾರದು.

ಸ್ತ್ರೀಯರು ಬಣ್ಣ ಮತ್ತು ಹೊಳಪಿಗೆ ಮೆಚ್ಚಿ ಅರಿವೆ ಕೊಳ್ಳುವರು ಅವು ಪರದೇಶಿಯಾಗಿರುತ್ತವೆ ಅವಾವವೆಂದರೆ-

೧ ಬಿಳೀ ಮತ್ತು ತರತರದ ಬಣ್ಣದ ಕಣ್ಣುಳ್ಳ ಚೀಟು

೨ ಬಣ್ಣದ ಸಾದಾ ಅಂಚು, ರೇಶಿಮೆ ಮತ್ತು ನೂಲಿನವು

೩ ರೇಶಿಮೆ ... ಅಂದರೆ ಒಳಗ ಗೆರೆ ಇದ್ದಂಥವು

೪ ಬಣ್ಣದ ತರತರದ ಪಪಲಿನ್ನ

೫ ರೇಶಿಮೆಯ ನಕಲಿನ ಅರಿವೆ

೬ ೧೫೦೦ ನಂಬರಿನ ಹಾರಕ

೭ ಮಖಮಲ

ಹಂದಿಗಿಡಗಳ ಸಂಹಾರ.

ಬ್ಯಾಡಗಿಯಿಂದ ಕ್ಯಾತರಿಯವರು ಮಹಾದೇವ ಪಥಕದೊಂದಿಗೆ ಶಿಡೇನೂರ ... ರೂರಿಗೆ ಮೆರವಣಿಗೆಯಿಂದ ಹೋಗಿ, ಅಲ್ಲಿಯ ಜನರ ಸಹಾಯದಿಂದ ಶಿಡೇನೂರಲ್ಲಿ ೩೫೦ ಮತ್ತು ಚಿಕ್ಕಣಜಿಯಲ್ಲಿ ೩೦೦ ಗಿಡಗಳನ್ನು ಕಡಿದರು ... ಡೇಸೂರಿಗೆ ಎಂಟು ಜನ ಸ್ತ್ರೀ ಸ್ವಯಂಸೇವಿಕೆಯರು ಹೋಗಿದ್ದರು. ಆ ಊರವರು ಸಭೆಮಾಡಿ, ಸ್ವಯಂಸೇವಿಕೆಯರಿಗೆ ಖಣ ಕೊಟ್ಟು ಅವರನ್ನು ಗೌರವಿಸಿದರು.

ಕಾಂಗ್ರೆಸದ ವಿರುದ್ಧ ಬರೆಯುವ ವರ್ತಮಾನಪತ್ರಿಕೆ

ಕರಾಚಿ ಮ್ಯುನಿಸಿಪಾಲಿಟಿಯ ಬಹಿಷ್ಕಾರ

ಕರಾಚಿಯಲ್ಲಿ ಡೇಲಿ ಗ್ಯಾಝೆಟವೆಂಬ ವರ್ತಮಾನಪತ್ರವುಂಟು. ಇದು ಕಾಂಗ್ರೆಸದ ಹಿತದ ವಿರುದ್ಧವಾತ್ರವಲ್ಲದೆ, ಕಾಂಗ್ರೆಸವನ್ನು ಬಿಕಾಯದೆ ಶೀರ ಮಾಡಬೇಕೆಂದು ಸರಕಾರಕ್ಕೆ ಸೂಚಿಸಿದ್ದರಿಂದ, ಇದರ ಮುದ್ರಾಲಯಕ್ಕೆ ಯಾವ ಕೆಲಸ ಕೊಡಬಾರದೆಂದು ಮ್ಯುನಿಸಿಪಾಲಿಟಿಯ ಜನರಲ ಕಮೀಟಿಯಲ್ಲಿ ಠರಾವು ಮಾಡಲ್ಪಟ್ಟಿತು.

ಹ್ವಾಲಂಟಿಯರರು ಕವಾಯಿತು ಮಾಡಿದ್ದಕ್ಕೆ ಪೋಲೀಸರಿಂದ ಹೊಡತ

ಕಾಂಗ್ರೆಸದ ಹ್ವಾಲಂಟಿಯರರಾಗಲಿ, ಬೇರೆ ಜನರಾಗಲಿ, ಎಸ್ಪ್ಲೆನೇಡದ ಬೈಲಿನಲ್ಲಿ ಎರಡು ತಿಂಗಳತನಕ ಕವಾಯತ ಮಾಡಬಾರದೆಂದು ಮುಂಬಯಿಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ನೋಟೀಸು ಹಚ್ಚಿದರು. ಇದನ್ನು ಮುರಿಯಲು ಲಕ್ಷಾವಧಿ ಜನರು ಅಲ್ಲಿ ಸೇರಿದರು ೬೦೦ ಪೋಲಿಸರು ಬಂದು, ಇವರನ್ನು ಬೆತ್ತದಿಂದ ಹೊಡೆದು ೧೫೦ ಜನರನ್ನು ಘಾಯಪಡಿಸಿದರು ೫೦ ಜನರು ದವಾಖಾನೆ ಸೇರಿದ್ದಾರೆ

ವಿದ್ಯಾರ್ಥಿಗಳು ಶಾಲೆಗೆ ಹೋಗಲಿಲ್ಲ

ಮುಂಬಯಿಯಲ್ಲಿ ಕೆಲ್ಲೆಯಲ್ಲಿರುವ ಹಾಯಸ್ಕೂಲುಗಳ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಕೂಡಿ, ದೊಡ್ಡ ಮೆರವಣಿಗೆ ತೆಗೆದು, ಬೋರಿಬಂದರದ ಬೈಲಿಗೆ ಬಂದು, ಸಭೆ ಮಾಡಿ, ವಿದ್ಯಾರ್ಥಿಗಳು ವಿಲಾಯತಿಯ ಬಟ್ಟೆ ಹಾಕಬಾರದೆಂಬ ಠರಾವು ಪಾಸ ಮಾಡಿದರು.

THE MADRAS AND SOUTHERN MAHRATTA RAILWAY COMPANY, LIMITED.

(INCORPORATED IN ENGLAND)

NOTICE.

1st and 2nd class Week-end Return Tickets.

1) With effect from 1st July 1930 First and Second Class Week-end return tickets will be issued between the stations named below at the fares shown against them—

	1st class.			2nd class.		
	Rs	As	Ps.	Rs	As.	Ps
Between Poona and Karad	19	0.	0	9	8	0
„ „ Belgaum	37	0	0	18.	8.	0
„ „ Hubli	48	0	0	24.	0.	0

2) These return tickets will be issued on Thursdays. Fridays and Saturdays, available for the return Journey by a train timed to arrive at the original starting station before 3 o' clock on the following Tuesday afternoon.

3) Children above three and under twelve years of age are charged at half these fares

4) No refund will be made on these tickets.

ಔದ್ಯೋಗಿಕ ಶಿಕ್ಷಣ

ದಿ ಸಾಯಂಟಿಫಿಕ ಟೇಲರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ.

ನಾವು ಬೆಳಗಾವ ಜಿಲ್ಹಾ ಸವದತ್ತಿ ತಾಲೂಕ ಮುನವಳ್ಳಿಯಲ್ಲಿ ಇಂಡಿಯನ್ ಮತ್ತು ಇಂಗ್ಲಿಷ ಪದ್ಧತಿಯ ಶಾಸ್ತ್ರ ಕಟಿಂಗ ಮತ್ತು ಟೇಲರಿಂಗ ಶಿಕ್ಷಣಕೊಡುವ ಮಾರ್ಗ ತೆಗೆದಿರುತ್ತೇವೆ ಎರಡು ತಿಂಗಳಲ್ಲಿ ಕಟಿಂಗ ಅಂಗರೆ ಅರಿವೆ ಕತ್ತರಿಸುವದನ್ನು ಕಲಿಸುವೆವು ಕಟಿಂಗ ಮತ್ತು ಟೇಲರಿಂಗ ಸಹಿತ ನಾಲ್ಕು ತಿಂಗಳಲ್ಲಿ ಕಲಿಸುವೆವು. ಕಟಿಂಗಕ್ಕೆ ೩೫ ಟೇಲರಿಂಗಕ್ಕೆ ೧ ... ರೂಪಾಯಿ ಫೀ ಬೀಳುವದು ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲಿಷ ... ಬೇಕಾದ ಭಾಷೆಯಲ್ಲಿ ಕೊಡುವೆವು ನಮ್ಮಲ್ಲಿಯ ಈ ಶಿಕ್ಷಣದಿಂದ ವಿದ್ಯಾರ್ಥಿಯು ಸ್ವಂತಬಲದಿಂದ ತಿಂಗಳಿಗೆ ಕನಿಷ್ಠ ೬೦ ರೂಪಾಯಿ ಗಳಿಸಬಲ್ಲನು ವಿಶೇಷ ಮಾಹಿತಿ ಬೇಕಾದರೆ ಸಮಕ್ಷಮ ಅಥವಾ ಒಂದಾಣೆಯ ಟಿಕೇಟು ಇಟ್ಟು, ಪತ್ರವ್ಯವಹಾರದಿಂದ ತಿಳಕೊಳ್ಳಬೇಕು

ಸಣ್ಣ ದೊಡ್ಡ ರಕಮು ಬಡ್ಡಿಗೆ ಕೊಡುವದಿದೆ.

ಸ್ಥಾವರ ಆಸ್ತಿಯ ಮೇಲೆ ಮತ್ತು ಮಾರ್ಗೇಜಿನ ಮೇಲೆ

... (ಶೇರ್ಸ) ಸಿಗುವವು ಪ್ರತ್ಯೇಕ ... ಕೊಡ್ರಿ. ದೊಡ್ಡ ದೊಡ್ಡ ಶಹರುಗಳಲ್ಲಿ ಪಗಾರ ...

ಟೆಲಿಫೊ. ... ನಂಬರ

ಹಿ. ದಿ. ಫಾಟಕಸಾಹೇ (ಬೆ)ಕರ

ಕೇಸರ ಬಾಗ ಗೋಲ್ಡ ಮೋಹರ ಮಾರ್ಕೆ

ಪೊಸ್ಟ ಬೊಕ್ಸ ನಂಬರ ೫೫೪,

ದಾದರ, ಬೊಂಬೈ

(೧) ರಾಣಿಬೆನ್ನೂರ (೨) ಹಿರೇಕೇರೂರ (೩) ಹಾವೇರಿ (೪) ಹಾನಗಲ್ಲ ಈ ನಾಲ್ಕು ತಾಲೂಕಿನ ಬಗ್ಗೆ ... ನೇಮಿಸಿದ್ದೇವೆ. ಈ ನಾಲ್ಕು ತಾಲೂಕಿನ ವಸ್ತು ವ್ಯವಹಾರ ವನ್ನು ಇವರ ಹತ್ತಿರ ಮಾಡುವದಕ್ಕೆ ಹರಕತ್ತ ಇಲ್ಲಾ

ಧ್ವಂಸವು

ಹಾನಗಲ್ಲದಲ್ಲಿ ತಾ| ೧೭ ನೇ ಜೂನ ರವಿವಾರ ದಿವಸ ಸಂಜೆಯಿದ್ದದಂದ ಸತ್ಯಾಗ್ರಹ ಶಿಬಿರದವರು ಕೊಡ್ಲಿಗಳ ಮೆರವಣಿಗೆಯನ್ನು ಹೊರಡಿಸಿದ್ದರು. ಮೆರವಣಿಗೆಯಲ್ಲಿ ೨೦೦ ಜನರು ಭಾಗ ತೆಗೆದುಕೊಂಡಿದ್ದರು ಊರ ಸಮೀಪದಲ್ಲಿ ... ಹಂದಿಯ ವನಕ್ಕೆ ಹೋಗಿ ... ೧೦೦ ಗಿಡಗಳನ್ನು ಕಡಿದು ... ಮನೆಗೆ ... ಬಂದರು

ತಾ|| ೧೮ ನೇ ಸೋಮವಾರ ದಿವಸ ಪ್ರಾತಃಕಾಲ ... ೫೦ ಕೊಡ್ಲಿಗಳ ಮೇಲೆ ... ಸತ್ಯಾಗ್ರಹ ಶಿಬಿರದಿಂದ ಹೊರಟು ಹಂದಿಯ ವನಕ್ಕೆ ಹೋಗಿ ಅಲ್ಲಿ ... ೧೫೦ ಹಂದಿಯ ಗಿಡಗಳನ್ನು ಕಡಿದು ಮೆರವಣಿಗೆಯಿಂದ ... ಬಂದರು

ಹಾನಗಲ್ಲ ... ೨೦

... ಗಿಡಗಳು ...

... ಧ್ವಂಸವಾಗುತ್ತಿವೆ

...

... ಬೇಡಿದ್ದರಿಂದ ... ಒಂದು ಮಾಡಿದರೆಂದು ತಿಳಿಸುವದಕ್ಕೆ ಹರ್ಷಿಸುತ್ತೇವೆ.

ಸೊಲ್ಲಾಪೂರದ ... ಶಿಕ್ಷೆಗೆ ಗುರಿಯಾಗಿರುವ ನಾಲ್ವರಲ್ಲಿ ಧನಶೆಟ್ಟಿ, ಕುರ್ಬಾನ ಮತ್ತು ಶಿಂದೆ ಈ ಮೂವರು ಶಾಂತವೃತ್ತಿಯಲ್ಲಿದ್ದು ಧೈರ್ಯಗೆಟ್ಟಿಲ್ಲ ... ನವರು ಮಾತ್ರ ಕೈಕಾಲು ಕಳಕೊಂಡಿದ್ದಾರೆ

ಧಾರವಾಡ

ಆದಿತ್ಯವಾರ ದಿವಸ ಈ ಊರ ಮೇಲೆ ವಿಮಾನ ಒಂದು ಹೋಯಿತು ಧಾರವಾಡಕ್ಕೆ ವಿಮಾನ ಬಂದದ್ದು ಇದೇ ಮೊದಲು

ಶ್ರೀ ... ಕುಲಕರ್ಣಿಯವರು ... ಪರೀಕ್ಷೆಯಲ್ಲಿ ಸೆಕಂಡ ಕ್ಲಾಸ ಆನರ್ಸದಲ್ಲಿ ಪಾಸಾದರೆಂಬ ವರ್ತಮಾನ ಬಂದಿರುತ್ತದೆ.

ಮೃಗನಕ್ಷತ್ರ ಪ್ರಾರಂಭವಾದಾಗ ಎರಡು ದಿವಸ ಮಳೆಯಾಯಿತು ಆನಂತರ ಆರ್ದ್ರಾಪ್ರವೇಶವಾದರೂ ಮಳೆಯಿಲ್ಲ

... ಸ್ವತ್ತಲ!! ...!!

ಶ್ರೀ ದತ್ತ ವ್ಹೀವಿಂಗ್ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದು ಮೊದಲನೆಯ

ಶೀರೆಯ ಮಿಲ್ಲು

... ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾ... ಯೋಗ್ಯ ದರದಿಂದ ಸಿಗತಕ್ಕವು ... ನಿಮಗ ಬೇಕಾದ ಮಾಲು ಕೊಡುತ್ತೇವೆ ...

ಒಮ್ಮೆ ಪರೀಕ್ಷಿಸಿ, ಒಮ್ಮೆ ಹೋದರೆ- ನಾಲ್ಕು ತರಿಸಿಕೊಳ್ಳುವಿರಿ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೂಸಕೇರಿ ಇವರು ಧಾರವಾಡದಲ್ಲಿ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.